ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

(ಸಂಯುಕ್ತ ಸಂಚಿಕೆ) ಸಂಪುಟ ೩೧ : ಸಂಚಿಕೆ ೧, ೨, ೩ ಮತ್ತು ೪
ಜನವರಿ – ಡಿಸೆಂಬರ್ ೨೦೦೨

ಸಾಧನೆ

ಸಂಪುಟ - 31, ಸಂಚಿಕೆ 1, 2, 3 ಮತ್ತು 4 : ಸಂಯುಕ್ತ ಸಂಚಿಕೆ

ಜನವರಿ - ಡಿಸೆಂಬರ್ 2002

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

SAADHANE : Kannada Quarterly (January - December 2002) of the Bangalore University, Bangalore. Pp 270 + iv

ಚಂದಾ ವಿವರ

ಸಾಂಸ್ಥಿಕ ಆಜೀವ ಸದಸ್ಯತ್ವ	ರೂ. ೫೦೦-೦೦
ಆಜೀವ ಸದಸ್ಯತ್ವ	ರೂ. ೩೦೦-೦೦
ವಾರ್ಷಿಕ ಚಂದಾ	ರೂ. ೫೦-೦೦

ಪ್ರಕಾಶಕರು ಮತ್ತು ಮುದ್ರಕರು
ಡಾ॥ ಬಸವರಾಜ ಕಲ್ಗುಡಿ
ನಿರ್ದೇಶಕರು
ಪ್ರಸಾರಾಂಗ ಮತ್ತು ಮುದ್ರಣಾಲಯ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೫೬೦ ೦೫೬

ಪರಿವಿಡಿ

ಸಾಹಿತ್ಯ

ಸಂಸ್ಕೃತಿ ಚಿಂತನೆ

ಚರಿತ್ರೆ

- ಸಾಹಿತ್ಯ -

ಬಸವಣ್ಣ : ಹಾಡು

ಶ್ರೀ ನಾಗಭೂಷಣ ಸ್ವಾಮಿ

ಹಾಡನ್ನು ಕುರಿತ, ಹಾಡುವುದನ್ನು ಕುರಿತ ೧೫ ವಚನಗಳನ್ನು ಒಟ್ಟಿಗೆ ಓದಿದಾಗ ಹೊಳೆಯುವ ವಿಚಾರಗಳನ್ನು ಹೀಗೆ ಸಂಗ್ರಹಿಸಬಹುದು. ಹಾಡುವುದು, ಹೊಗಳಿಕೆ, ತಾನು ವಾದ್ಯ, ಕೂಡಲಸಂಗಮನ ಹಾಡಿಗೆ ತಕ್ಕ ವಾದ್ಯವಾಗಬೇಕು ಎಂಬ ಅರ್ಥಗಳನ್ನು ಮಾತ್ರವಲ್ಲದೆ ತನ್ನ ಮತ್ತು ಇತರರ ವರ್ತನೆಯ ರೂಪಕವಾಗಿಯೂ ಹಾಡು ಎಂಬ ಕುರುಹು ಬಳಕೆಯಾಗಿದೆ.

ಕೆಲವು ವಚನಗಳಲ್ಲಿ ಹಾಡು ಎಂಬ ಪದ ಹಾಡನ್ನೆ ಸೂಚಿಸುತ್ತದೆ. ಈ ವಚನಗಳನ್ನೆಲ್ಲ ಒಟ್ಟಾಗಿ ಓದಿಕೊಂಡಾಗ ಕಲೆ–ಭಕ್ತಿ–ಅನುಭವ–ವ್ಯಕ್ತಿತ್ವ ಇವುಗಳ ಅಖಂಡತೆಯ ಮೀಮಾಂಸೆಯೊಂದರ ಹೊಳಹು ಕಾಣತೊಡಗುತ್ತದೆ. ಬಸವಣ್ಣನ ಹಿರಿಮೆ ಇರುವುದೇ ವೈಯಕ್ತಿಕ ದರ್ಶನವನ್ನು ಸಾಮಾಜಿಕಗೊಳಿಸಿದ್ದರಲ್ಲಿ ಮತ್ತು ಸಾಮಾಜಿಕವಾದದ್ದನ್ನು ತೀರ ವೈಯಕ್ತಿಕ ಎಂದು ಅನುಭವಿಸಿ, ಅಭಿವ್ಯಕ್ತಿಸಿದ್ದರಲ್ಲಿ ವಚನಕಾರರ ಕಾವ್ಯ/ಕಲಾ ಮೀಮಾಂಸೆಗಳನ್ನು ಗುರುತಿಸಿಕೊಳ್ಳುವ ಪ್ರಯತ್ನದ ಒಂದು ಭಾಗ ಈ ಕಿರು ಟಿಪ್ಪಣಿ.

ಏನೋ ಆಗುವುದಕ್ಕಿಂತ ಇರುವುದು ಮುಖ್ಯ ಎಂಬುದು ವಚನಗಳಲ್ಲಿ ವ್ಯಕ್ತವಾಗುವ ಅನೇಕ ಧೋರಣೆಗಳಲ್ಲಿ ಒಂದು. ಆಗುವ ಬಯಕೆ ಅಂತರಂಗದ ಹಲವಾರು ಸಂಘರ್ಷಗಳಿಗೆ, ಗೊಂದಲಗಳಿಗೆ ಕಾರಣವಾಗುತ್ತದೆ. ಆಗುವ ಬಯಕೆಯಲ್ಲಿ ವೈರುಧ್ಯಗಳಿರಬಹುದು, ಇರುವುದರಲ್ಲಿ ವೈರುಧ್ಯಗಳಿರುವುದಿಲ್ಲ. ಲಿಂಗಾಂಗ ಸಾಮರಸ್ಯ ಎಂಬ ಮಾತಿದೆಯಲ್ಲ, ಅದು ಏನೋ ಆಗುವ ಬಯಕೆಗಳನ್ನೆಲ್ಲ ನೀಗಿಕೊಂಡು ಇರುವ ಸ್ಥಿತಿಯನ್ನು ಸೂಚಿಸುವ ಮಾತು ಎಂದು ತೋರುತ್ತದೆ. ಕಲೆ ಎಂಬುವ ಮಾತಿಗೆ ಹಲವಾರು ಅರ್ಥಗಳಿವೆ. ಅವುಗಳಲ್ಲಿ ಗಾಯ, ಗುರುತು, ಬೆಳಕು, ಅಪೂರ್ಣ, ಕಲ್ಮಷ ಎಂಬ ಅರ್ಥಗಳೂ ಸೇರಿವೆ. ಸಕಲ ಮತ್ತು ನಿಷ್ಕಲ ಎಂಬ ಮಾತುಗಳಿಗೆ ಅಪೂರ್ಣ, ಸಂಪೂರ್ಣ ಎಂಬ ಅರ್ಥಗಳಿವೆ. ಕಲಾವಿದ ಎಂದರೆ ತನ್ನ ಅಪೂರ್ಣತೆಯ ಅರಿವು ಇರುವವನು, ತನ್ನ ಮನೋಲೋಕದ ಗಾಯಗಳ ಗುರುತು ಬಲ್ಲವನು, ಪೂರ್ಣತೆಯ

ಅಭಾವದಲ್ಲಿ ಮಲಿನಗೊಂಡವನು, ತನ್ನ ಕಲೆಯ ಕ್ರಿಯೆಯ ಮೂಲಕ ಬೆಳಕನ್ನು ಆಶಿಸುವವನು ಎಂದೆಲ್ಲ ವಿವರಿಸಿಕೊಳ್ಳಲು ಸಾಧ್ಯವಿದೆ.

ವಚನಗಳನ್ನು ಇಟ್ಟುಕೊಂಡು ಕಲಾಮೀಮಾಂಸೆಯನ್ನೋ ಕಾವ್ಯ ಮೀಮಾಂಸೆಯನ್ನೋ ರೂಪಿಸಿಕೊಳ್ಳುವುದು ವ್ಯರ್ಥವೆಂದು ಕೆಲವೊಮ್ಮೆ ಅನ್ನಿಸಿದರೆ ಅದಕ್ಕೆ ಕಾರಣವಿದೆ. ಕಲೆ ಎಂಬ ಮಾತನ್ನು ನಾವು ಇಂದು ಬಳಸುತ್ತಿರುವ ಅರ್ಥದಲ್ಲಿ ವಚನಕಾರರು ಬಳಸುವುದಿಲ್ಲ. ಯಾವು ಯಾವುದನ್ನು ನಾವು ಕಲಾತ್ಮಕ ಚಟುವಟಿಕೆಗಳು ಎಂದು ಇಂದು ತಿಳಿದಿದ್ದೇವೆಯೋ ಅವೆಲ್ಲ ಅಷ್ಟೇನೂ ಪ್ರಮುಖವಲ್ಲದ ಕ್ರಿಯೆಗಳು ಎಂದು ವಚನಕಾರರು ಅನೇಕರು ಭಾವಿಸಿದ್ದರೆಂದು ಅನ್ನಿಸುತ್ತದೆ. ಆದರೆ ಹಾಗೆಂದು ಭಾಷೆ, ಹಾಡು, ಇತ್ಯಾದಿಗಳ ಬಗ್ಗೆ ಅನೇಕ ವಚನಕಾರರು ತಮ್ಮದೇ ಸಿದ್ಧಾಂತಗಳನ್ನು ಮಂಡಿಸುತ್ತಿರುವಂತೆ ತೋರುವುದೂ ನಿಜ. ಆದರೆ ಈಗ ಹಾಡನ್ನು ಕುರಿತ ಬಸವ ವಚನಗಳನ್ನು ಒಟ್ಟಾಗಿ ಓದಿದಾದ ಇಂದು ನಾವು ಯಾವುದನ್ನು ಕಲೆ ಎಂದು ಪರಿಗಣಿಸುತ್ತೇವೆಯೋ ಅದು ಸುಳ್ಳಲ್ಲದಿದ್ದರೂ ಅಪ್ರಮುಖ, ವ್ಯಕ್ತಿ ಮೀರಬೇಕಾದ ಒಂದು ಸ್ಥಿತಿ ಎಂಬ ಧೋರಣೆ ಇರುವಂತೆ ಕಾಣುತ್ತದೆ.

ಶಿವಜನ್ಮದಲ್ಲಿ ಹುಟ್ಟಿ, ಲಿಂಗೈಕ್ಯರಾಗಿ,
ತಮ್ಮಂಗದ ಮೇಲೆ ಲಿಂಗವಿರುತಿರಲು –
ಅನ್ಯರನೆ ಹಾಡಿ, ಅನ್ಯರನೆ ಹೊಗಳಿ
ಅನ್ಯರ ವಚನವ ಕೊಂಡಾಡಲು ಕರ್ಮ ಬಿಡದು; ಭವಬಂಧನ!
ಶ್ವಾನಯೋನಿಯಲ್ಲಿ ಬಪ್ಪುದು ತಪ್ಪದು!
ಇದು ಕಾರಣ, ಕೂಡಲಸಂಗಮದೇವಾ
ನಿಮ್ಮ ನಂಬಿಯೂ ನಂಬದ ಡಂಬಕರಿಗೆ
ಮಳಲ ಗೋಡೆಯನಿಕ್ಕಿ ನೀರಲ್ಲಿ ತೊಳೆದಂತಾಯಿತಯ್ಯಾ! (೧೦೭)

ಈ ವಚನಗಳನ್ನು ಅನೇಕ ದೃಷ್ಟಿಗಳಿಂದ ಅರ್ಥೈಸಲು ಸಾಧ್ಯವಿದೆ. ನಮ್ಮ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಇದನ್ನು ಕಲೆ ಮತ್ತು ಬದ್ಧತೆಯ ಚರ್ಚೆ ಎಂದು ವಿವರಿಸಿಕೊಳ್ಳಬಹುದು. ಈ ವಚನದಲ್ಲಿ ಹಾಡು ಎಂಬುದನ್ನು ಸ್ತೋತ್ರ ಅಥವಾ ಹೊಗಳಿಕೆ ಎಂಬ ಅರ್ಥದಲ್ಲಿ ಬಳಸಿದೆ, ಆದರೂ ಹಾಡಿನ ಕಲೆ ಎಂದೂ ನೋಡುವುದು ಸಾಧ್ಯವಿದೆ. ಶಿವಜನ್ಮವೆಂಬುದು ಹುಟ್ಟಿನ ಕಾರಣದಿಂದ ಬಂದ ನಂಬಿಕೆ. ಲಿಂಗೈಕ್ಯವೆನ್ನುವುದು ಅನುಭವದ ಕಾರಣದಿಂದ ಮೂಡುವ ನಂಬಿಕೆ. ಲಿಂಗವೆಂಬುದು ಅನುಭವ ಮತ್ತು ಹುಟ್ಟಿನ ಸೂಚಕಗಳಾದ ಬಾಹ್ಯ ಕುರುಹುಗಳು. ಈ ಕುರುಹುಗಳಾದರೋ ವ್ಯಕ್ತಿ ಒಪ್ಪಿದ ಅಥವಾ ಅಂಗೀಕರಿಸಿದ ನಂಬಿಕೆಯ ಸೂಚಕಗಳು. ಇಂಥ ನಂಬಿಕೆ ಕೇವಲ ತೋರಿಕೆಯದಾದರೆ, ಲೌಕಿಕ

ಲಾಭದ ಉದ್ದೇಶದಿಂದ ಅನ್ಯರನ್ನು ಹಾಡಿ, ಹೊಗಳಿ, ಅನ್ಯರ ವಚನಗಳನ್ನು ಕೊಂಡಾಡಿದರೆ ಮರಳ ಗೋಡೆಯನ್ನು ಕಟ್ಟಿ ನೀರಲ್ಲಿ ತೊಳೆದಂತೆ ಆಗುತ್ತದೆ.

ಅನುಭವದಿಂದ ಮೂಡಿದ್ದಾಗಲೀ ಅಥವಾ ಹುಟ್ಟಿನ ಕಾರಣದಿಂದ ದೊರೆ ಕೊಂಡದ್ದಾಗಲೀ, ವ್ಯಕ್ತಿಗೆ ನಿರ್ದಿಷ್ಟ ಲೋಕ ದೃಷ್ಟಿಯ, ತಾತ್ವಿಕತೆಯ ಬದ್ಧತೆ ಇರಬೇಕು. ಹಾಗಿಲ್ಲದಿದ್ದರೆ ಅವನ ಕಲೆ ಮರಳಗೋಡೆಯಷ್ಟೆ. ಇಂದೂ ಕೆಲವು ಸಂಗೀತಗಾರರು ಕೆಲವು ನಿರ್ದಿಷ್ಟ ರಚನೆಗಳನ್ನು ಮಾತ್ರ ಹಾಡುವುದರ ಹಿಂದೆ ಇಂಥ ಧೋರಣೆ ಕೆಲಸ ಮಾಡುತ್ತಿರುವುದು ಕಾಣುತ್ತದೆ. ಈ ವಚನವು ತನ್ನ ರಚನೆಯ ಕಾಲದಲ್ಲಿದ್ದ ಕಲೆಯೂ ಧಾರ್ಮಿಕತೆಗೆ ಬದ್ಧವಾಗಿರಬೇಕು ಎಂಬ ಪ್ರಣಾಳಿಯನ್ನೇ ಹೇಳುತ್ತಿದೆ. ಗಮನಾರ್ಹವಾದ ಸಂಗತಿಯೆಂದರೆ ಈ ವಚನವು ಕಲೆಯನ್ನು ವ್ಯಕ್ತಿಯ ಅನುಭವ, ತಾತ್ವಿಕ ಬದ್ಧತೆ ಮತ್ತು ಆ ಬದ್ಧತೆಯ ಮೂಲಕವೇ ದೊರೆಯುವ ಬಿಡುಗಡೆಗಳನ್ನು ಒಟ್ಟಾಗಿ ಪರಿಶೀಲಿಸುತ್ತಿದೆ. ಕಲೆಯು ಎಲ್ಲ ಅನುಭವಗಳನ್ನೂ ಸ್ವೀಕರಿಸುವ, ಐಡಿಯಾಲಜಿ ಮುಕ್ತವಾದ ವಲಯ ಎಂಬುದು ಕೇವಲ ಸುಂದರ ಭ್ರಮೆಯೂ ಇರಬಹುದು. ಈ ವಚನದಲ್ಲಿ ಕಲೆಯನ್ನು ಸ್ವ ಮತ್ತು ಅನ್ಯದ ವಿಚಾರಧಾರೆಗಳ ಹಿನ್ನೆಲೆಯಲ್ಲೇ ನೋಡಿರುವು ದನ್ನು ಗಮನಿಸಿ. ರಶಿಯಾದ ಲೇಖಕರ ಸಂಘ, ಕನ್ನಾದ ಬಂಡಾಯ ಸಂಘಟನೆ, ಇತ್ಯಾದಿ ಉದಾಹರಣೆಗಳನ್ನು ಗಮನಿಸಿದರೆ ಸ್ವೀಕೃತ ತತ್ವಕ್ಕೆ ಬದ್ಧರಾಗಿ ಅನ್ಯವನ್ನು ನಿರಾಕರಿಸುವ, ಪ್ರಜ್ಞಾಪೂರ್ವಕವಾಗಿ ದೂರವಿಡುವ ಅಗತ್ಯ ಕಲೆಯ ವಲಯಕ್ಕೂ ಇರುವುದನ್ನು ಪ್ರತಿಪಾದಿಸುವ ವಚನವಾಗಿ ಕಾಣುತ್ತದೆ ಇದು. ಇದೇ ಧೋರಣೆ ಮುಂದಿನ ವಚನದಲ್ಲೂ ವ್ಯಕ್ತವಾಗಿದೆ.

> ಅಷ್ಟವಿಧಾರ್ಚನೆ, ಷೋಡಶೋಪಚಾರವ ಮಾಡುವುದು;
> ಮಾಡಿದ ಪೂಜೆಯ ನೋಡುವುದಯ್ಯಾ.
> ಶಿವತತ್ವಗೀತವ ಹಾಡುವುದು;
> ಶಿವನ ಮುಂದೆ ನಲಿದಾಡುವುದಯ್ಯಾ.
> ಭಕ್ತಿ ಸಂಭಾಷಣೆಯ ಮಾಡುವುದು;
> ನಮ್ಮ ಕೂಡಲಸಂಗಮದೇವನ ಕೂಡುವುದು (೧೭೫)

ಮಾಡುವುದಿದ್ದರೆ ನಿರ್ದಿಷ್ಟ ಬಗೆಯ ಪೂಜೆಯನ್ನು ಮಾಡಬೇಕು, ನೋಡುವುದಿದ್ದರೆ ನಿರ್ದಿಷ್ಟ ಬಗೆಯ ಪೂಜೆಯನ್ನು ನೋಡಬೇಕು, ಹಾಡುವುದಿದ್ದರೆ ನಿರ್ದಿಷ್ಟ ತತ್ವ ಗೀತೆಯನ್ನು ಹಾಡಬೇಕು. ಸಂಭಾಷಿಸುವುದಿದ್ದರೆ ನಿರ್ದಿಷ್ಟ ಬಗೆಯ ಸಂಭಾಷಣೆ ಯನ್ನು ನಡೆಸಬೇಕು ಎಂಬ ವಿಧಿಗಳನ್ನು ಈ ವಚನ ಹೇಳುತ್ತಿದೆ.

ಅಧ್ಯಾತ್ಮವೇ ಆಗಲಿ, ರಾಜಕೀಯವೇ ಆಗಲಿ ನಿರ್ದಿಷ್ಟ ತತ್ವಕ್ಕೆ ಬದ್ಧತೆ ಇರಬೇಕು ಎಂಬುದನ್ನು ಕನ್ನಡದ ಕವಿಗಳು ಹಲವಾರು ಬಗೆಗಳಲ್ಲಿ ಹೇಳಿ

ಕೊಳ್ಳುತ್ತಲೇ ಬಂದಿದ್ದಾರೆ. ಹರಿಹರ ರಾಘವಾಂಕರ ಉದಾಹರಣೆ ತಟ್ಟನೆ ಮನಸ್ಸಿಗೆ ಬಂದೀತು. ಧರ್ಮನಿರಪೇಕ್ಷವಾದ, ರಾಜಕೀಯ ಮುಕ್ತವಾದ ಮನರಂಜನೆ, ಕಲೆ ಇವೆಲ್ಲ ಇದ್ದಾವು, ಇರುತ್ತವೆ, ಇರಬೇಕು ಎಂಬುದು ಬಹುಶಃ ಇಂದಿನ ಮಧ್ಯಮ ವರ್ಗದ ಜನರ ಸುಂದರ ಸ್ವಪ್ನಗಳು. ಶರಣತ್ವವನ್ನು ಒಂದು ಕುರುಹಾಗಿ, ಚಹರೆಯಾಗಿ ಬೆಳೆಸಿಕೊಂಡ ಜನವರ್ಗ ಹಾಡುವುದಿದ್ದರೆ ಶಿವತತ್ವವನ್ನೇ ಹಾಡಬೇಕು ಎಂಬ ಕಟ್ಟುಪಾಡನ್ನು ವಿಧಿಸಿಕೊಂಡದ್ದು ಸಹಜ ತಾರ್ಕಿಕ ಬೆಳವಣಿಗೆಯೇ ಆಗಿದೆ. ಶರಣ ತತ್ವ ಸಮಾಜದ ಸ್ವರೂಪವನ್ನು ನಿರ್ಧರಿಸುವ ಶಕ್ತಿಯಾಗಿ ಬೆಳೆದಾಗ ಕಲೆಯೂ ಆ ವರ್ಗದ ಧೋರಣೆಯ ಸಮರ್ಥನೆಗೇ ದುಡಿಯುವುದನ್ನು ಕಾಣಬಹುದು. ಈ ವಚನ ಹಾಡಿನ ವಿಷಯವನ್ನು ಕುರಿತದ್ದು ಎಂಬುದನ್ನು ಗಮನಿಸಿ. ಎಲ್ಲ ಕಲೆಯೂ ಯಾವಾಗಲೂ ಇರುವ ಅಧಿಕಾರ ವಿನ್ಯಾಸದ ಸಮರ್ಥನೆಯಾಗಿರುತ್ತದೆ ಅಥವಾ ಅಧಿಕಾರ ಪಡೆಯಬಯಸುವ ವರ್ಗದ ಆಶೋತ್ತರಗಳ ಪ್ರತಿಬಿಂಬಿತವಾಗಿರುತ್ತದೆ ಎಂಬುದರ ಸಾಕ್ಷಿಯಾಗಿ ಈ ವಚನವನ್ನು ಓದಿಕೊಳ್ಳಬಹುದು.

> ಗೀತವ ಹಾಡಿದರೇನು, ಶಾಸ್ತ್ರ – ಪುರಾಣವ ಕೇಳಿದಡೇನು
> ವೇದವೇದಾಂತವನೋದಿದಡೇನು?
> ಮನವೊಲಿದು ಲಿಂಗಜಂಗಮವ ಪೂಜಿಸಲರಿಯದವರು
> ಎಲ್ಲರು ಅನುಭಾವಿಯಾದಡೇನು?
> ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ (೧೮೮)

ಕೇವಲ ವೈಚಾರಿಕತೆ, ತಾರ್ಕಿಕತೆ, ಬೌದ್ಧಿಕ ಬದ್ಧತೆಗಳು ಮಾತ್ರವಲ್ಲ, ಭಾವದ ಪ್ರಾಮಾಣಿಕತೆಯ ಅಗತ್ಯವನ್ನೂ ಈ ವಚನ ಹೇಳುತ್ತಿದೆ. ಹಾಡು ಕೇವಲ ಕಲಿಕೆಯದು ಮಾತ್ರವಾದರೆ ಆಗ ಅದು ಕೇವಲ ಓದಿನ ಸಂಗತಿಗಳಾದ ಶಾಸ್ತ್ರ, ಪುರಾಣ, ವೇದ, ವೇದಾಂತಗಳಿಗಿಂತ ಭಿನ್ನವೇನೂ ಆಗುವುದಿಲ್ಲ. ಈ ಗುಂಪಿನಲ್ಲಿ ಹೇಳಿರುವ ಎಲ್ಲ ಸಂಗತಿಗಳೂ ಪೊಲಿಟಿಕಲಿ ಕರೆಕ್ಟ್ ಆದ ಭಾಷಿಕ ನಿಲುವುಗಳಷ್ಟೇ ಆಗಿಬಿಡುವ ಅಪಾಯವಿದೆ. ಈ ವಚನದಲ್ಲಿ ಬರುವ ಮನವೊಲಿದು ಮತ್ತು ಭಕ್ತಿ ಎಂಬ ಮಾತುಗಳು ಕೇವಲ ಬೌದ್ಧಿಕ ಮತ್ತು ಭಾಷಿಕವಾಗಿಬಿಡಬಹುದಾದ ತಾತ್ವಿಕತೆ ಭಾವದ ಸ್ಪರ್ಶವಿಲ್ಲದೆ ಜಡ, ಕಪಟ, ಮೋಸ ಆಗಿಬಿಡಬಹುದು ಎಂಬ ಎಚ್ಚರಿಕೆಯನ್ನು ನೀಡುವಂತಿವೆ. ಕ್ರಾಂತಿ ಎಂಬುದು ಕೇವಲ ಬಾಹ್ಯಕ್ಕೆ, ಬಹಿರಂಗಕ್ಕೆ ಸೀಮಿತವಾಗದೆ ಅಂತರಂಗವನ್ನೂ ಒಳಗೊಂಡಾಗ ಮಾತ್ರ ಪೂರ್ಣವಾಗುತ್ತದೆ. ಅಂಗೀಕೃತ ತತ್ವದ ಸಮರ್ಥನೆಯಾಗಿ ಬಳಕೆಯಾಗುವ ಕಲೆ ಆ ತತ್ವದ ಆಂತರಂಗಿಕತೆಯನ್ನೂ ಒಳಗೊಂಡಿರಬೇಕು ಎಂಬುದನ್ನು ಈ ವಚನ ಹೇಳುವಂತಿದೆ.

ಆಡುತ್ತ ಹಾಡುತ್ತ ಭಕ್ತಿಯ ಮಾಡಬಹುದು ಲಿಂಗಕ್ಕೆ
ಅದು ಬೇಡದು, ಬೆಸಗೊಳ್ಳದು
ತಂದೊಮ್ಮೆ ನೀಡಬಹುದು
ಕಾಡುವ ಬೇಡುವ ಜಂಗಮ ಬಂದಡೆ
ನೀಡಲುಬಾರದು ಕೂಡಲಸಂಗಮದೇವ (೧೯೩)

ಕಲೆ ಮತ್ತು ಕ್ರಿಯೆಗಳ ಅನ್ಯೋನ್ಯ ಸಂಬಂಧವನ್ನು ಈ ವಚನ ಹೇಳುತ್ತಿದೆ. ಹಾಡು ಭಕ್ತಿಯ ವ್ಯಕ್ತರೂಪವಾಗಿರಬಹುದು. ಅದನ್ನು ಸಾಧಿಸುವುದು ಸುಲಭ. ಭಕ್ತಿ ಕೇವಲ ಲಿಂಗವನ್ನು ಕುರಿತದ್ದಾದರೆ ಅಂಥ ಭಕ್ತಿಯೂ ಸುಲಭಸಾಧ್ಯ. ಆದರೆ ಕಾಡುವ ಬೇಡುವ ಜಂಗಮ ಬಂದರೆ ಅವನನ್ನು ಕುರಿತ ಸಂಬಂಧದಲ್ಲಿ ಹಾಡಿನಲ್ಲಿ ವ್ಯಕ್ತವಾದ ಭಕ್ತಿ ಮಾಯವಾಗಿಬಿಡಬಹುದು.

ಹಾಡು ಭಕ್ತಿಗೆ ಅಧೀನ, ಭಕ್ತಿ ಎಂಬುದು ಶರಣ ವರ್ಗ ಒಪ್ಪಿದ ತತ್ವ. ಕಲೆ ಏನಿದ್ದರೂ ಆ ತತ್ವಕ್ಕೆ ಬದ್ಧವಾಗಿರಬೇಕು. ಆದರೆ ಹಾಗೆ ಬದ್ಧವಾದಂತೆ ಕಂಡರೆ ಸಾಲದು, ನಿತ್ಯದ ವರ್ತನೆಯಲ್ಲಿ ಸಂಬಂಧದಲ್ಲಿ ನಿಜವಾಗಬೇಕು. ಕಲೆ–ತತ್ವ–ದಿನನಿತ್ಯದ ಸಂಬಂಧ ಇವುಗಳ ಹದವನ್ನು ಕಂಡುಕೊಳ್ಳುವತ್ತ ಈ ವಚನ ಸಾಗಿದೆ.

ಆಡಿದಡೇನು, ಹಾಡಿದಡೇನು, ಓದಿದಡೇನು, ತ್ರಿವಿಧ ದಾಸೋಹವಿಲ್ಲದನ್ನಕ್ಕ?
ಆಡದೆ ನವಿಲು, ಹಾಡದೆ ತಂತಿ, ಓದದೆ ಗಿಳಿ?
ಭಕ್ತಿ ಇಲ್ಲದವರನೊಲ್ಲ ಕೂಡಲಸಂಗಮದೇವ (೨೦೭)

ನರ್ತನ, ಗಾಯನ, ಓದು ಎಲ್ಲವನ್ನೂ ಒಂದೆಡೆಯಲ್ಲಿ, ಭಕ್ತಿಯನ್ನು ಇನ್ನೊಂದೆಡೆಯಲ್ಲಿ ಇಟ್ಟು ನೋಡುತ್ತಿದೆ ಈ ವಚನ. ನರ್ತನ, ಗಾಯನ, ಓದು ಇವೆಲ್ಲ ಕೇವಲ ಟಕ್ನಿನ ಸಂಗತಿಗಳಾದರೆ ಯಾರು ಬೇಕಾದರೂ ಸಾಧಿಸಬಹುದಾದ ಸಂಗತಿಗಳು. ಕುತೂಹಲದ ಮಾತೆಂದರೆ ಈ ಚಟುವಟಿಕೆಗಳನ್ನು ಸಹಜವೆಂದು ಸಾಮಾನ್ಯವಾಗಿ ಭಾವಿಸುವ ನವಿಲ ನರ್ತನ, ಗಿಳಿಯ ನುಡಿ ಮತ್ತು ತಂತಿಯ ಸ್ವರಗಳೊಂದಿಗೆ ಸಮೀಕರಿಸಿರುವುದು. ರೋಮಾಂಟಿಕ್ಕಾದ ಧೋರಣೆಯು ಅನ್ ಪ್ರಿ ಮೆಡಿಟೇಟೆಡ್ ಆದ ಕಲೆಯನ್ನು ಶ್ರೇಷ್ಠವೆಂದು ಭಾವಿಸುತ್ತದೆಯಷ್ಟೆ. ಆದರೆ ಈ ವಚನವು ಅಂಥ ಸಹಜ, ನೈಸರ್ಗಿಕ ಕಲೆಗಿಂತ ಸೋದ್ದಿಶ್ಯವಾದ, ಇಲ್ಲಿ ಸೋದ್ದಿಶ್ಯವೆಂದರೆ ದಾಸೋಹ/ಭಕ್ತಿ ಪ್ರೇರಿತವಾದ ಕಲೆಯನ್ನಷ್ಟೇ ಶ್ರೇಷ್ಠವೆಂದು ಪ್ರತಿಪಾದಿಸುತ್ತಿದೆ. ಉದ್ದೇಶ ರಹಿತವಾದ ಮಾನುಷ ಕಲೆಗೆ ಬೆಲೆಯಿಲ್ಲ ಎಂದೇ ಹೇಳುತ್ತಿದೆ.

ಕೋಟ್ಯನುಕೋಟಿ ಜಪವ ಮಾಡಿ ಕೋಟಲೆಗೊಳ್ಳಲೇಕೆ ಮನವೆ?
ಕಿಂಚಿತು ಗೀತವೊಂದು ಕೋಟಿ ಜಪ.
ಜಪವೆಂಬುದೇಕೆ ಮನವೆ?

ಕೂಡಲಸಂಗನ ಶರಣರ ಕಂಡು
ಆಡಿ ಹಾಡು ಬದುಕು ಮನವೆ (೨೭೫)

ಯಾಂತ್ರಿಕವಾದ ಜಪ ಮತ್ತು ಭಾವಯುಕ್ತ ಕಲೆಗಳ ವೈರುಧ್ಯ ಈ ವಚನದ ವಸ್ತು. ಜಪವೆಂಬುದು ಆಧ್ಯಾತ್ಮ ಸಾಧಕರಿಗೆ ಎಷ್ಟೇ ಮುಖ್ಯವಾದುದಾದರೂ ಅದು ಕೇವಲ ಯಾಂತ್ರಿಕ ಚಟುವಟಿಕೆಯಷ್ಟೇ. ಅದರಿಂದ ದೊರೆಯಬಹುದಾದ ಫಲ ಕಿರಿದಾದ ಹಾಡಿನಿಂದಲೂ ದೊರೆಯಲು ಸಾಧ್ಯ. ಆದರೆ, ಆ ಕಿರು ಗೀತವು ಶರಣರನ್ನು ಕಂಡು ಆಡಿದ, ಹಾಡಿದ ಗೀತವಾಗಿರಬೇಕು. ಈ ವಚನವು ಕೂಡಲಸಂಗನ ಶರಣರನ್ನು ಗೀತದ ವಸ್ತುವನ್ನಾಗಿಯೂ ಶ್ರೋತೃಗಳನ್ನಾಗಿಯೂ ಕಲ್ಪಿಸಿಕೊಂಡಿದೆ. ಅಂಥ ಗೀತ ಮನಸ್ಸನ್ನು ಬದುಕಿಸುವಂಥದು ಎಂದು ಹೇಳುತ್ತದೆ ಈ ವಚನ.

ಹೃದಯ ಕತ್ತರಿ ತುದಿನಾಲಗೆ ಬೆಲ್ಲಂ ಬೋ
ಆಡಿಹೆನು ಎಂಬೋ, ಹಾಡಿಹೆನು ಎಂಬೋ
ನಿಚ್ಚ ನಿಚ್ಚ ಶಿವರಾತ್ರಿಯ ಮಾಡಿಹೆನು ಎಂಬೋ
ಆನು ಎನ್ನಂತೆ, ಮನ ಮನದಂತೆ
ಕೂಡಲಸಂಗಮ ತಾನು ತನ್ನಂತೆ (೨೭೮)

ಹಾಡಾಗಲೀ ನರ್ತನವಾಗಲೀ ಜಾಗರಣೆಯಂಥ ಆಚರಣೆಗಳೇ ಆಗಲಿ ಎಲ್ಲದರ ಗುರಿ ವ್ಯಕ್ತಿತ್ವದ ಅಖಂಡತೆಯನ್ನು ಸಾಧಿಸುವುದು ಮತ್ತು ಇನ್ನೂ ಮುಂದುವರೆದು ವ್ಯಕ್ತಿತ್ವವನ್ನೇ ಇಲ್ಲವಾಗಿಸಿಕೊಳ್ಳುವುದು. ಈ ವಚನದಲ್ಲಿ ಕಲೆ ಮತ್ತು ಆಚರಣೆಗಳ ಟೆಕ್ನಿಕ್ಕಿನ ಸಿದ್ಧಿಯಾದರೂ ವ್ಯಕ್ತಿತ್ವದಲ್ಲಿ ಉಳಿದಿರುವ ಸೀಳುಗಳನ್ನು, ಛಿದ್ರಗಳನ್ನು ಕುರಿತ ವಿವೇಚನೆ ಇದೆ. ಸಿದ್ಧಿ ಹೊರಗೆ ಕಾಣುವಂಥದ್ದು ಮಾತ್ರವಾಗಿದೆ, ಒಳಗಿರುವುದು ಅ-ನಿಷ್ಟವಾಗಿದೆ. ಮನಸ್ಸನ್ನು ಹದಕ್ಕೆ ತಾರದ ಹಾಡು ನರ್ತನಗಳ ಬೆಲೆಯಾದರೂ ಎಷ್ಟಿದ್ದೀತು? ಆನು ಎನ್ನಂತೆ ಮನ ಮನದಂತೆ ಎನ್ನುವ ನುಡಿಗಟ್ಟು ಇನ್ನೂ ನಾನೆಂಬ ಪ್ರತ್ಯೇಕ ಕಲ್ಪನೆ ಉಳಿದಿರುವುದನ್ನೂ ತನ್ನ ಮನಸ್ಸು ತನಗಿಂತ ಬೇರೆಯಾಗಿ ವರ್ತಿಸುತ್ತಿರುವುದರ ಅರಿವನ್ನೂ ಸೂಚಿಸು ತ್ತದೆ. ಈ ಸಂಗತಿಯನ್ನೇ ಮೊದಲ ಸಾಲಿನ ರೂಪಕವೂ ಹೇಳುತ್ತಿದೆ. ಮನಸ್ಸು/ ಹೃದಯ ಕತ್ತರಿ, ತುದಿನಾಲಗೆ ಬೆಲ್ಲ.

ಅಂತರಂಗ ಮತ್ತು ಬಹಿರಂಗಗಳ ಸಾಮರಸ್ಯ ಮತ್ತು ಹದ ಬಸವನ ಆದರ್ಶಗಳಲ್ಲಿ ಒಂದು. ಇಲ್ಲಿರುವ ವೇದನೆ ಕಲೆ ಮತ್ತು ಆಚರಣೆಗಳು ತಮ್ಮಷ್ಟಕ್ಕೆ ತಾವು ಪಕ್ವವಾಗುತ್ತಾ ತಾನು ಮಾತ್ರ ಅಖಂಡನಾಗಿಲ್ಲವೆಂಬ ಸಂಗತಿಯನ್ನು ಕುರಿತದ್ದು. ಬಹುಶಃ ಅಸಂಖ್ಯಾತ ಕಲಾವಿದರ ಸ್ಥಿತಿಯನ್ನು ಕುರಿತ ವ್ಯಾಖ್ಯಾನದಂತಿದೆ ಇದು. ಹಲವು ಹತ್ತು ಗಾಯಕರ, ಕಲಾವಿದರ ಕುರಿತು ಪ್ರಚಾರದಲ್ಲಿರುವ ವದಂತಿಗಳು ಕತೆಗಳು ಇವಕ್ಕೆ ಪುರಾವೆಯಾಗುವಂತಿವೆ.

ಬಸವ ಬಯಸುವ ಅಖಂಡತೆ ತನಗೆ ತಾನೇ ಆಗಬೇಕಾದದ್ದು, ಬಹುಶಃ ದೈವೀ ಕರುಣೆಯನ್ನು ಬೇಡುವಂಥದ್ದು. ಕಲೆ, ಅನ್ಯರು ಮತ್ತು ತನ್ನ ದೈವ ಇವುಗಳ ಸಂಬಂಧವನ್ನು ಮುಂದಿನ ವಚನ ಚರ್ಚಿಸುತ್ತದೆ.

ಲೌಕಿಕರ ಕಂಡು ಆಡುವೆ, ಹಾಡುವೆ;
ತಾರ್ಕಿಕರ ಕಂಡು ಆಡುವೆ, ಹಾಡುವೆ;
ಸಹಜಗುಣವೆನ್ನಲಿಲ್ಲಯ್ಯಾ;
ನಿಜಭಕ್ತಿಯೆನಗಿಲ್ಲ, ತಂದೆ.

ಏಕೋಭಾವ ಎನಗುಳ್ಳಡೆ, ಏಕೆ ನೀ ಕರುಣಿಸೆ
ಕೂಡಲಸಂಗಮದೇವಾ (೨೮೬)

ಇಲ್ಲಿ ಹಾಡು ಎಂಬುದು ಶ್ಲಾಘನೆ, ಹೊಗಳಿಕೆ ಎಂಬರ್ಥಗಳಲ್ಲಿ ಬಳಕೆಯಾಗಿದೆ. ತನ್ನ ಹಾಡು, ತನ್ನ ಗುಣದ, ಸ್ವಭಾವದ ಸೂಚನೆಯಾಗಿರುವುದು ನಿಜವಾದರೆ ಅದು ತನ್ನಲ್ಲಿ ಸಹಜತೆ ಇಲ್ಲ, ಏಕೋಭಾವವಿಲ್ಲ, ಭಕ್ತಿಯಿಲ್ಲ ಎಂಬುದರ ಸೂಚನೆಯಾಗಿದೆ ಎಂದು ಅನ್ನಿಸುತ್ತಿದೆ. ಲೌಕಿಕರನ್ನೂ, ತಾರ್ಕಿಕರನ್ನೂ ಮೆಚ್ಚಿಸುವಂತೆ, ಅವರು ಒಲಿಯುವಂತೆ ಆಡುವ (ವರ್ತಿಸುವ) ಹಾಡುವ (ಹೊಗಳುವ) ಅಪೇಕ್ಷೆ ಅಸಹನೀಯ ಎನ್ನಿಸುತ್ತಿದೆ.

ಹಾಡಿನ ಉದ್ದೇಶ ಕೇವಲ ಬಾಹ್ಯವಾದದ್ದೋ ಅಂತರಂಗಿಕವಾದದ್ದೋ ಎಂಬ ಪ್ರಶ್ನೆ ಇಲ್ಲಿ ಚರ್ಚಿತವಾದಂತಿದೆ. ಹಾಡು ಸ್ತೋತ್ರವಾಗುವುದು ಅಥವ ಸ್ತೋತ್ರವೇ ಹಾಡಾಗುವುದು ಸಂಗೀತ ಸಾಹಿತ್ಯಗಳಲ್ಲಿ ಸಾಮಾನ್ಯವಷ್ಟೇ? ಈ ಹಾಡಿನ ಸ್ತೋತ್ರದ ಉದ್ದೇಶ ಲೋಕ ಪ್ರೇರಿತವಾಗಿರಬಹುದೇ? ಅಥವಾ ತನ್ನೊಳಗಿನ ಒಂದು ಭಾವದಿಂದಷ್ಟೆ ಮೂಡಬೇಕೆ? ತನ್ನೊಳಗಿನ ಒಂದು/ಅಖಂಡ ಭಾವದಿಂದ ಮೂಡದ ಹಾಡಿಗೆ ಬೆಲೆ ಇಲ್ಲ, ಆದರೂ ಅಂಥ ಹಾಡನ್ನೇಕೆ ಮಾಡುತ್ತಿದ್ದೇನೆ ಎಂಬ ವಿಷಾದ ಇಲ್ಲಿ ಕಾಣುತ್ತದೆ.

ಆಡುವುದಳವಟ್ಟಿತ್ತು, ಹಾಡುವುದಳವಟ್ಟಿತ್ತು;
ಅರ್ಚನೆಯುಳವಟ್ಟಿತ್ತು, ಪೂಜನೆಯುಳವಟ್ಟಿತ್ತು;
ನಿತ್ಯ ಲಿಂಗಾರ್ಚನೆ ಮುನ್ನವೆಯುಳವಟ್ಟಿತ್ತು.
ಕೂಡಲಸಂಗನ ಶರಣರು (ಮನೆಗೆ) ಬಂದಡೆ
ಪರಿಣಾಮ, ಎ [illegible] ಒಪ್ಪಚ್ಚ(ಗೆಯೂ) ಅಲವಡದು! (೩೦೨)

ಅಭ್ಯಾಸಗತವಾದ ವರ್ತನೆಗಳಿಗೂ ಸಂಬಂಧಗಳ ವಾಸ್ತವಕ್ಕೂ ಇರುವ ಅಂತರ ಮತ್ತು ಸಮಸ್ಯೆಯನ್ನು ಈ ವಚನ ಹೇಳುವಂತಿದೆ. ಕೆಲಸ, ಹಾಡು, ಅರ್ಚನೆ, ಲಿಂಗಾರ್ಚನೆ ಇವೆಲ್ಲ ಕೇವಲ ಅಭ್ಯಾಸಗಳಾದರೆ ಅವುಗಳೊಂದಿಗೆ ಹೊಂದಾಣಿಕೆ ಸುಲಭ. ಸಲೀಸು. ಇವೆಲ್ಲವೂ ಅಭ್ಯಾಸಗಳಾಗಿ ಅಳವಟ್ಟು

ಬಿಟ್ಟಿವೆ. ಆದರೆ ಶರಣರು ಮನೆಗೆ ಬಂದರೆ ಅವರೊಡನೆ ಏಗುವುದು, ಅವರಿಗೆ ಏನು ಅಗತ್ಯವೆಂದು ಕೇಳಿ ಅದರಂತೆ ನಡೆಯುವುದು ಕೊಂಚವೂ ಅಳವಡದು.

ಹಾಡು ಅಥವಾ ಯಾವುದೇ ಕಲೆ ಕೇವಲ ಅಭ್ಯಾಸಗತವಾಗಿ ಅದರ ಸಮರ್ಪಕ ನಿರ್ವಹಣೆ ಸಲೀಸು ಎನ್ನಿಸುವ ಹಂತವನ್ನು ಯಾರು ಬೇಕಾದರೂ ಸುಲಭವಾಗಿಯೇ ತಲುಪಬಹುದು. ಆದರೆ ಅಂಥ ಹಾಡು, ಅಂಥ ಕಲೆಯಲ್ಲಿ ವ್ಯಕ್ತವಾದದ್ದನ್ನು ನಿಜದ ಮನುಷ್ಯರೊಡನೆ, ನಿಜ ಸಂದರ್ಭಗಳಲ್ಲಿ ಸಾಕ್ಷಾತ್ಕರಿಸಿ ಕೊಳ್ಳುವುದು ಅಸಾಧ್ಯವಾಗಿದೆ. ಇಲ್ಲಿ ಅಳವಡು ಅಥವಾ ಹೊಂದಾಣಿಕೆ ಸಾಮರಸ್ಯ ಎಂಬ ಅರ್ಥ ವ್ಯಾಪಕವಾಗಿದೆ. ಹಾಡು ಅಥವ ಅಂಥ ಕಲೆ ವಾಸ್ತವ ದೂರವಾಗಿ ಕಾಲ್ಪನಿಕವಾಗಿ ಅಳವಟ್ಟುಕೊಳ್ಳುವುದಕ್ಕಿಂತ ನನ್ನದು ಎಂದು ಕೊಂಡಿರುವ ನನ್ನ ಮನೆಗೆ ಬಂದ ತಮ್ಮ ತಮ್ಮದೇ ಆದ ವ್ಯಕ್ತಿ ವೈಚಿತ್ರ್ಯ ಗಳನ್ನೊಳಗೊಂಡ ಶರಣರೊಡನೆ ಏಗುವುದು, ಅವರೊಡನೆ ಹೊಂದಿಕೊಳ್ಳುವುದು ಮುಖ್ಯ, ಆದರೆ ಸಾಧಿಸಲು ಕಷ್ಟ. ಕಲೆ ಮತ್ತು ಕಲಾವಿದ ವ್ಯಕ್ತಿತ್ವಗಳ ನಡುವೆ ಇರುವ ಬಿರುಕು ಸಹಜ ಎಂಬ ಪರಿಚಿತ ಕಲ್ಪನೆಗಿಂತ ಭಿನ್ನವಾಗಿ ಒಪ್ಪಿತವಾದ ಕಲೆಯ ಆದರ್ಶ ನಿಜದಲ್ಲಿ ಬಿರುಕಿಲ್ಲದೆ ಸಾಕ್ಷಾತ್ಕಾರವಾಗಬೇಕೆನ್ನುವುದು ಗಮನಾರ್ಹ.

ಅಯ್ಯಾ ನಿಮ್ಮ ಶರಣರ ದಾಸೋಹಕ್ಕೆ
ಎನ್ನ ತನುಮನಧನವಲಸದಂತೆ ಮಾಡಯ್ಯಾ
ತನು ದಾಸೋಹಕ್ಕೆ ಉಬ್ಬುವಂತೆ ಮಾಡು
ಮನ ದಾಸೋಹಕ್ಕೆ ಲೀಯವಹಂತೆ ಮಾಡು
ಧನ ದಾಸೋಹಕ್ಕೆ ಸವೆದು, ನಿಮ್ಮ ಶರಣರ ಪ್ರಸಾದದಲ್ಲಿ
ನಿರಂತರ ಆಡಿ, ಹಾಡಿ, ನೋಡಿ, ಕೂಡಿ, ಭಾವಿಸಿ, ಸುಖಿಸಿ,
ಪರಿಣಮಿಸುವಂತೆ ಮಾಡು, ಕೂಡಲಸಂಗಮದೇವ (೪೫೮)

ಈ ವಚನ ಪರಿಣಾಮವನ್ನು ಕುರಿತದ್ದು. ಹಾಡು ಅಥವಾ ಅಂಥ ಕಲೆ ಯಾವುದರ ಪರಿಣಾಮವಾಗಿ ಮೂಡಬೇಕೆನ್ನುವುದನ್ನು ಸೂಚಿಸುವಂಥದ್ದು. ಕಾಶ್ಮೀರ ಶೈವದ ಪಠ್ಯಗಳಲ್ಲಿ ಪರಿಣಾಮ ಎಂಬ ಮಾತನ್ನು "ಮತ್ತೆ ಹಿಂದಿನ ಸ್ಥಿತಿಗೆ ಹಿಂದಿರುಗುವುದು ಸಾಧ್ಯವೇ ಇಲ್ಲದಂಥ ಸಂಪೂರ್ಣ ಬದಲಾವಣೆ" ಎಂಬರ್ಥದಲ್ಲಿ ಬಳಸಿರುವುದನ್ನು ಕಾಣಬಹುದು. ವಚನಗಳಲ್ಲಿ ಬರುವ ಪರಿಣಾಮ, ಪರಿಣಾಮಿ ಎಂಬ ಮಾತುಗಳನ್ನು ಇದೇ ರೀತಿಯಲ್ಲಿ ಅರ್ಥಮಾಡಿ ಕೊಳ್ಳಬೇಕೆಂದು ತೋರುತ್ತದೆ. ದೇಹ, ಮನಸ್ಸು ಮತ್ತು ಹಣ ನನ್ನದು ಎಂದುಕೊಂಡಿರುವ ಭಾವವನ್ನು ಇಲ್ಲವಾಗಿಸಿಕೊಂಡು ನಾನು ದಾಸ ಎಂಬ ಭಾವ ಹುಟ್ಟಬೇಕು. ಆ ಭಾವದಲ್ಲಿ ದೇಹ ಸಂತೋಷವನ್ನು ಕಾಣಬೇಕು, ಮನಸ್ಸು

ಲೀನವಾಗಬೇಕು/ಲಯವಾಗಬೇಕು, ಧನ ದಾಸೋಹದ ಕ್ರಿಯೆಗೇ ವ್ಯಯವಾಗಬೇಕು. ಹೀಗೆ ನನ್ನದು ಎಂಬುದೆಲ್ಲವನ್ನೂ ಕಳಕೊಂಡು, ಶರಣರ ದಾಸ ಆಗುವುದರಲ್ಲಿಯೇ ಆನಂದವನ್ನು ಕಂಡಾಗ ಆಗುವ ಬದಲಾವಣೆಯೇ ಪರಿಣಾಮ. ಅದು ತನ್ನನ್ನು ಇಲ್ಲವಾಗಿಸಿಕೊಂಡು ಇತರವನ್ನು ನೋಡುವುದರಿಂದ, ಇತರದೊಡನೆ ಕೂಡುವುದರಿಂದ, ಇತರವನ್ನು ಭಾವಿಸುವುದರಿಂದ ಬರುವ ಸುಖ. ಹೀಗೆ ನೋಡಿ, ಕೂಡಿ, ಭಾವಿಸಿ, ಸುಖಿಸುವುದಕ್ಕೆ ಆಡುವುದು ಮತ್ತು ಹಾಡುವುದು ಕಾರಣವಾಗುತ್ತವೆ. ಹಾಡಿಗೆ ಅಥವಾ ಕಲೆಗೆ ಏನಾದರೂ ಮಹತ್ವ ಇದ್ದರೆ ಅದು ನನ್ನಿಂದ ಬೇರೆಯಾದ ಇತರವನ್ನು ನೋಡುವುದಕ್ಕೆ, ಕೂಡುವುದಕ್ಕೆ, ಭಾವಿಸುವುದಕ್ಕೆ, ಆ ಮೂಲಕ ಸುಖಿಸುವುದಕ್ಕೆ ಸಹಾಯಕ ಎಂದಷ್ಟೆ. ಹಾಗೆ ಆಗುವುದಕ್ಕೆ ಮುಖ್ಯ ಉಪಕರಣ ದಾಸೋಹ. ದಾಸೋಹದ ಫಲವಾಗಿ ಹಾಡು, ಆಟಗಳು ಹುಟ್ಟುತ್ತವೆ. ಆದರಿಂದ ಪರಿಣಾಮ, ಪರಿವರ್ತನೆಗಳು ಆಗುತ್ತವೆ. ಹಾಡು ಹುಟ್ಟಲು ನಾನು ಪೂರ್ತಿಯಾಗಿ ಇಲ್ಲವಾಗುವ ಸ್ಥಿತಿ ಬೇಕು. ಆ ಸ್ಥಿತಿಗೆ ದಾಸೋಹ ಬೇಕು ಎಂದು ಹೇಳುತ್ತಿರುವಂತಿದೆ.

ಆಡಿ ಕಾಲು ದಣಿಯವು, ನೋಡಿ ಕಣ್ಣು ದಣಿಯವು,
ಹಾಡಿ ನಾಲಗೆ ದಣಿಯದು, ಇನ್ನೇವೆ, ಇನ್ನೇವೆ?
ನಾ ನಿಮ್ಮ ಕೈಯಾರೆ ಪೂಜಿಸಿ ಮನದಣಿಯಲೊಲ್ಲದಿನ್ನೇವೆನಿನ್ನೇವೆ?
ಕೂಡಲಸಂಗಮದೇವ ಕೇಳಯ್ಯಾ
ನಿಮ್ಮುದರವ ಬಗಿದಾನು ಹೋಗುವ ಭರವೆನಗೆ (೪೮೬)

ಹಾಡು, ಆಟ, ಪೂಜೆ ಇವೆಲ್ಲ ತನಗೂ ತನ್ನ ದೈವಕ್ಕೂ ನಡುವೆ ಇರುವ ಸಂಪರ್ಕ ಮಾಧ್ಯಮಗಳು, ಆದರೆ ಅವು ಕೇವಲ ಮಧ್ಯಮಗಳಾಗದೆ ತಾನು ದೈವ ದೊಡನೆ ಪೂರ್ತಿಯಾಗಿ ಸೇರಿಹೋಗುವ ಸಾಧ್ಯತೆಯ ಸೂಚನೆಗಳೂ ಆಗಿ ಇಲ್ಲಿ ಕಾಣುತ್ತಿವೆ. ಕೂಡಲಸಂಗಮದೇವನ ಉದರವನ್ನು ಬಗೆದು, ಹೊಕ್ಕು, ಅವನೊಡನೆ ಒಂದಾಗುವ ಭಾವ-ರಭಸ ಎಲ್ಲ ಬಗೆಯ ದಣಿವನ್ನೂ ಇಲ್ಲವಾಗಿಸಿಬಿಟ್ಟಿದೆ. ತನ್ನ ದೈಹಿಕ ಪ್ರತ್ಯೇಕತೆಯನ್ನೂ ಕಳಕೊಳ್ಳುವ ರಭಸ ಇದು. ಆಡುವ, ಹಾಡುವ, ಪೂಜಿಸುವ ಕ್ರಿಯೆಗಳ ಮೂಲಕವೇ, ಅವನ್ನೆಲ್ಲ ಮೀರುತ್ತಾ ಅವ್ಯಕ್ತದೊಳಗೆ ಒಂದಾಗುವ ಸಾಧ್ಯತೆ ಇಲ್ಲಿ ಹೊಳೆದಿದೆ. ಕಲಾವಿದರಿಗೆ, ಲೇಖಕರಿಗೆ, ಸೃಜನ ಶೀಲರಿಗೆ ತಮ್ಮ ತಮ್ಮ ಕ್ರಿಯೆಗಳಲ್ಲಿ ತೊಡಗಿರುವಾಗಲೇ ತಮ್ಮ ಅರಿವಿನಾಚೆಗೆ ಇರುವುದರ ಒಳಹೋಗುವ ಸಾಧ್ಯತೆ ಆಗಾಗ ಮಿಂಚಿದಂತಾಗುತ್ತವಲ್ಲ ಅದೇ ಸ್ಥಿತಿಯಲ್ಲಿ ಬಸವ ಮಾತನಾಡುತ್ತಿರುವಂತಿದೆ. ಎರಡಳಿದು ಒಂದಾಗುವ ಈ ರಭಸ ಸೂಕ್ಷ್ಮವಾಗಿ ದೈಹಿಕ ಮಿಲನದ ಅಸಹನೀಯ ತುಡಿತವನ್ನೂ ಸೂಚಿಸುವಂತಿದೆ. ಒಂದಿಷ್ಟು ನಮ್ಮ ದಿನನಿತ್ಯದ ಅನುಭವಗಳನ್ನು ನೆನಪಿಸಿಕೊಂಡರೆ ಈ ಮಾತು

ಅರ್ಥವಾದೀತು. ಕಲೆಯ ಚಟುವಟಿಕೆಗಳನ್ನು ಮುಖ್ಯವೆಂದು ಪರಿಗಣಿಸಿ ನೋಡಿದರೆ ಆಗ ಸೃಜನಶೀಲ ಕ್ಷಣಗಳಲ್ಲಿರುವ ದೈಹಿಕವೂ ಆಗಿರುವ ತೀವ್ರ ಸಂವೇದನೆಗಳನ್ನು ಕುರಿತು ಹೇಳುವ ವಚನವಾಗಿ ಇದು ಕಾಣುತ್ತದೆ.

> ತಾಳಮಾನಸರಿಸವನರಿಯೆ,
> ಓಜೆಬಜಾವಣೆಯ ಲೆಕ್ಕವನರಿಯೆ, ಅಮೃತಗಣ ದೇವಗಣವನರಿಯೆ
> ಕೂಡಲಸಂಗಮದೇವಾ ನಿನಗೆ ಕೇಡಿಲ್ಲವಾಗಿ
> ಆನು ಒಲಿದಂತೆ ಹಾಡುವೆ (೪೯೩)

ಇದು ಅತಿ ಚರ್ಚಿತವಾಗಿರುವ ಬಸವವಚನಗಳಲ್ಲೊಂದು. ಕೂಡಲಸಂಗಮನನ್ನು ಶಾಶ್ವತ ಸತ್ಯದ ಸಂಕೇತ. ಶಾಶ್ವತವೆಂದರೆ ಕಾಲಾತೀತ. ಅಂಥದೊಂದು ಸತ್ಯವನ್ನು [illegible] ಅವನ್ನು ಅರಿಯಲು, ಪಡೆಯಲು, ಯಾವುದೇ ವಿಧಾನ ವ್ಯವಸ್ಥೆ [illegible] ಬಾರದು. ಓಜೆ, ಬಜಾವನೆ, ಅಮೃತಗಣ, ದೇವಗಣ ಇವೆಲ್ಲವೂ ಕಾವ್ಯ ಅಥವಾ ಗಾಯನದ ಕಾಲದ ಲೆಕ್ಕಾಚಾರಗಳು. ಕಾಲಾತೀತವನ್ನು ಕಾಲದ ಚೌಕಟ್ಟಿಗೆ ಒಳಪಡಿಸಲು ಸಾಧ್ಯವೇ ಇಲ್ಲ. ಕೂಡಲಸಂಗಮ ಕಾಲಾತೀತನಾದುದರಿಂದಲೇ ಅವನು ಕೇಡಿಲ್ಲದವನು. ಅಂದರೆ ಅವನ ಸ್ವರೂಪ ಎಂದೂ ಹೆಚ್ಚಾಗದೆ, ಕೆಡದೆ, ಹಾಗೇ ಉಳಿದಿರುತ್ತದೆ. ಒಲುಮೆ ಕೂಡ ಕಾಲಾತೀತವೇ. ಹೀಗೆ ವಿವರಿಸಿಕೊಳ್ಳುವಾಗ ಕಾಲವೆಂಬುದನ್ನು ಭೌತಿಕ ಕಾಲವೆಂದಲ್ಲ, ಮಾನಸಿಕ ಕಾಲವೆಂದೇ ನೋಡಬೇಕು. ಗತಕಾಲದ ನೆನಪು, ಭವಿಷ್ಯದ ಆಸೆ ಇವೆರಡೂ ಒಲುಮೆಗೆ ಅಡ್ಡಿ ಆತಂಕಗಳನ್ನು ಒಡ್ಡುತ್ತವೆ. ಮನಸ್ಸಿನೊಳಗಿನ ಕಾಲದ ಕಲ್ಪನೆಯ ತೊಡಕನ್ನು ನಿವಾರಿಸಿಕೊಂಡಾಗಲಷ್ಟೇ ಒಲುಮೆಯ ಕ್ರಿಯೆ ಸಾಧ್ಯವಾಗುತ್ತದೆ. ಆನು ಒಲಿದಂತೆ ಹಾಡುವೆ ಎಂಬ ಮಾತು ಹಾಗೆ ಮನಸ್ಸಿನ ಕಾಲದ ಬಂಧದಿಂದ ಮತ್ತು ಕಲೆಯ ವ್ಯವಸ್ಥೆ ಸೃಷ್ಟಿಸಿರುವ ಕಾಲದ ಬಂಧದಿಂದ ಮುಕ್ತವಾಗುವ ಅಪೇಕ್ಷೆಯನ್ನೂ, ಸಾಮರ್ಥ್ಯವನ್ನೂ ತೋರುತ್ತಿದೆ. ಇಂಥದು ದೊರೆಯಬೇಕು, ದೊರೆತೀತು ಎಂದು ಮೊದಲೇ ಕಲ್ಪಿಸಿಕೊಂಡದ್ದನ್ನಲ್ಲ, ಒಲುಮೆಯ ಮೂಲಕ ಏನು ಸಿಗುತ್ತದೆಯೋ ಅವ್ಯಕ್ತವಾಗಿದೆಯೋ ಅದನ್ನು ಅನ್ವೇಷಿಸಲು ಯಾವುದೇ ಪೂರ್ವನಿರ್ಧಾರಿತ ವಿಧಿವಿಧಾನಗಳಿಲ್ಲ. ಒಲುಮೆ ಕೊಂಡೊಯ್ದಲ್ಲಿಗೆ ಸಾಗುವ ಧೈರ್ಯವೂ ಇಲ್ಲಿದೆ. ಈ ವಚನ ನಮ್ಮ ಕಲ್ಪಿತವಾಗಿ ಬೆಳೆದಿರುವ ಕಲೆಯ ವ್ಯಾಖ್ಯಾನವನ್ನೇ ಪ್ರಶ್ನಿಸುತ್ತದೆ, ಪೂರ್ವಸಿದ್ಧವಾಗಿರುವ ಯಾವುದೇ ಚೌಕಟ್ಟಿಗೆ ಹೊಂದಿಕೊಳ್ಳುವುದೆಂದರೆ ಹೊಸತನ್ನು, ನಿಜವಾಗಿ ಕಾಲಾತೀತವಾದದ್ದನ್ನು ನೋಡಲು ನಿರಾಕರಿಸುವುದೆಂದೇ ಅರ್ಥ. ಬಸವ ಬಯಸುವ ಹಾಡು ಪೂರ್ವನಿರ್ಧಾರಿತ ಹಾಡಿನ ಚೌಕಟ್ಟಿಗೆ ಹೊಂದಿಕೊಳ್ಳುವಂಥವಲ್ಲ.

ಕಾವ್ಯವನ್ನು ಕಡಲಂತೆ ಸದಾ ಹೊಸತು ಎಂದಾಗಲೂ, ಹಾಡು ಹಳೆಯದು ಭಾವ ಮಾತ್ರ ನವನವೀನ ಎಂದಾಗಲೂ ಇಂಥದೇ ಸಂಗತಿಯನ್ನು, ಕಲೆಯ ವಿರೋಧಾಭಾಸವನ್ನು ಹೇಳುವ ಪ್ರಯತ್ನಗಳು ಅನ್ನಿಸುತ್ತದೆ. [illegible], ಆದರೆ ಅದನ್ನು ಕಂಡದ್ದು ಹೊಸತು ಎಂದು ತಿಳಿಯುವುದೇಕೆ? [illegible], ಅನುಭವಿಸುವ ಭಾವ ಮುಖ್ಯ. ಒಲುಮೆ ಅನುಭವಕ್ಕೆ [illegible] ಅಲ್ಲವೇ? ಹಾಗಲ್ಲದಿದ್ದರೆ ಒಲುಮೆ ಎಂಬ ಮಾತಿಗೆ ಅರ್ಥವಾದರೂ [illegible] ಒಲುಮೆಗೂ ಕೇಡಿಲ್ಲದೆ, ಒಲುಮೆಯ ವಸ್ತುವಿಗೂ ಕೇಡಿಲ್ಲದೆ ಇರುವಾಗ ಮಾತ್ರ ಕೇಡಿಲ್ಲದ ಹಾಡು ಹುಟ್ಟೀತು. ವಚನಗಳಲ್ಲಿ ಬರುವ ನೆನಪುಗಳ ನಿರಾಕರಣೆ ಇಲ್ಲಿ ಹಳೆಯ ಭಾವಗಳ ನಿರಾಕರಣೆಯಾಗಿದೆ. ಪ್ರತಿಭಾವವನ್ನೂ ಹೊಸತಾಗಿ ಅನುಭವಿಸುವುದೇ ಒಲುಮೆ. ಆದರಿಂದ ಹುಟ್ಟುವುದೇ ಹೊಸ ಹಾಡು. ಕಲೆಯ ಮೀಮಾಂಸೆ ವ್ಯಕ್ತಿತ್ವದ ಮೀಮಾಂಸೆಯೊಡನೆ ಒಂದಾಗುವುದೇ ಇಲ್ಲಿ. ಕೂಡಲ ಸಂಗಮನ ಒಲುಮೆಯನ್ನು ಕ್ಷಣಕ್ಷಣವೂ ಹೊಸತಾಗಿ ಅನುಭವಿಸುತ್ತಾ ಅದನ್ನು ಒಲುಮೆ ತೋರಿದ ದಾರಿಯಲ್ಲಿ, ಯಾವುದೇ ಪೂರ್ವನಿಶ್ಚಿತ ರೂಪಕ್ಕೆ ಹೊಂದಿಸದೆ ಹಾಡುತ್ತಾ ಹೋಗುವುದೇ ಸರಿಯಾದ ದಾರಿ. ಕಲೆಯ ಅಭಿವ್ಯಕ್ತಿ ಮತ್ತು ಬದುಕಿನ ಭಾವಾನುಭವ ಎರಡೂ ಬೇರೆಬೇರೆಯಲ್ಲ ಎಂದು ಈ ವಚನ ಹೇಳುತ್ತಿರುವಂತಿದೆ.

ಎನ್ನ ಕಾಯವ ದಂಡಿಗೆಯ ಮಾಡಯ್ಯಾ
ಎನ್ನ ಶಿರವ ಸೋರೆಯ ಮಾಡಯ್ಯಾ
ಎನ್ನ ನರವ ತಂತಿಯ ಮಾಡಯ್ಯ
ಎನ್ನ ಬೆರಳ ಕಡ್ಡಿಯ ಮಾಡಯ್ಯ
ಬತ್ತೀಸ ರಾಗವ ಹಾಡಯ್ಯಾ, ಉರದಲೊತ್ತಿ ಬಾರಿಸು
ಕೂಡಲಸಂಗದೇವಾ (೪೯೮)

ತನ್ನತನವನು ನೀಗಿಕೊಳ್ಳುವ ಹಂಬಲ ಈ ವಚನದಲ್ಲಿ ಕಾಣುತ್ತದೆ. ಕಾಲಾತೀತನಾದ ಕೂಡಲಸಂಗಮನ ಸಂಗೀತದ ಉಪಕರಣವಾಗಬೇಕೆಂದರೆ "ನಾನು" ಎಂದು ಏನೇನನ್ನು ಕಲ್ಪಿಸಿಕೊಂಡಿದ್ದೇನೆಯೋ ಅವೆಲ್ಲ ಕೇವಲ ಕಲ್ಪನೆಗಳು ಎಂಬ ಅರಿವು ಮೂಡಿ ಅಂಥ ಕಲ್ಪನೆಗಳೆಲ್ಲ ನೀಗಿಬಿಡಬೇಕು. ತಾನು ಅವನ ಹಾಡು ಆಗಬೇಕಾದರೆ ದೈಹಿಕವಾಗಿ, ಮಾನಸಿಕವಾಗಿ ಆಗಬೇಕಾದ ಕ್ರಾಂತಿಕಾರಿ ಪರಿವರ್ತನೆಗಳನ್ನು ಈ ವಚನ ಹೇಳುತ್ತದೆ. ಕಲೆಯಾಗಲೀ ಆಧ್ಯಾತ್ಮವಾಗಲೀ, "ಅದು" ಮಾತ್ರ ಮುಖ್ಯ, ಮನಸ್ಸಿನ ಕಲ್ಪಿತವಾದ "ನಾನು" ಎಂಬುದಲ್ಲ ಎಂಬ ಧೋರಣೆ ವ್ಯಕ್ತವಾಗುತ್ತಿದೆ.

ಪೂಜೆಯುಳ್ಳನ್ನಬರ ಲಿಂಗವ ಹಾಡಿದೆ
ಮಾಟವುಳ್ಳನ್ನಬರ ಜಂಗಮವ ಹಾಡಿದೆ
ಜಿಹ್ವೆಯುಳ್ಳನ್ನಬರ ಪ್ರಸಾದವ ಹಾಡಿದೆ

ಈ ತ್ರಿವಿಧ ನಾಸ್ತಿಯಾದ ಬಳಿಕ
ಎನ್ನ ನಾ ಹಾಡಿಕೊಂಡೆ ಕಾಣಾ
ಕೂಡಲಸಂಗಮದೇವಾ. (೯೧೫)

ಕ್ರಿಯೆ ಮತ್ತು ಉದ್ದೇಶಗಳ ಸಂಬಂಧವನ್ನು ಮೀರಿದ ನಂತರ ಏನಾಗುತ್ತದೆಂಬುದನ್ನು ಈ ವಚನ ಹೇಳುತ್ತಿದೆ. ಲಿಂಗದ ಸಾಧನೆಯ ಉದ್ದೇಶ ಇರುವವರೆಗೆ ಪೂಜೆ ಇರುತ್ತದೆ. ಪೂಜೆ ಇರುವವರೆಗೆ ಲಿಂಗದ ಅಗತ್ಯವೂ ಇರುತ್ತದೆ. ಇದೇ ರೀತಿಯ ಸಂಬಂಧ ಮಾಡುವುದು (ಮಾಟ) ಮತ್ತು ಜಂಗಮ, ಜಿಹ್ವೆ ಮತ್ತು ಪ್ರಸಾದಗಳ ನಡುವೆ ಕೂಡ ಇದೆ. ಪೂಜೆ, ಮಾಟ, ಜಿಹ್ವೆ/ಲಿಂಗ, ಜಂಗಮ, ಪ್ರಸಾದ ಎಂಬ ತ್ರಿವಿಧಗಳು ಇಲ್ಲವಾದ ಬಳಿಕ ಉಳಿಯುವುದು ನಾನು ಮಾತ್ರ. ಆಗ ನಾನೇ ನನ್ನ ಹಾಡಿನ ವಸ್ತು. ಅನುಭಾವವು ಯಾವುದೇ ಕ್ರಮಕ್ಕೆ ಅನುಗುಣವಾಗಿರುವುದಂಥದಲ್ಲ. ತ್ರಿವಿಧ ಎಂಬ ಮಾತನ್ನು ಪಾರಿಭಾಷಿಕ ಪದವನ್ನಾಗಿ ಮಾತ್ರವಲ್ಲದೆ "ವಿಧ", "ವಿಧಾನ" ಎಂದೂ ಅರ್ಥಮಾಡಿಕೊಳ್ಳುವುದು ಸಾಧ್ಯ. ಕಲೆ, ಇಂದು ನಾವು ತಿಳಿದಿರುವಂತೆ, ಸದಾ ಉದ್ದೇಶಪೂರ್ವಕವಾದದ್ದು. ನಿರುದ್ದಿಶ್ಯವಾದ ಅನುಭವದ ಅನ್ವೇಷಣೆ ಮತ್ತು ಕಲೆ ಇವನ್ನು ಹೊಂದಿಸಿಕೊಳ್ಳುವುದು ಹೇಗೆ? ನಾನೇ ನನ್ನ ಹಾಡಿನ ವಸ್ತು, ನಾನು ಒಲಿದಂತೆ ಹಾಡುವುದೇ ಕ್ರಮ ಎಂಬ ನಿಲುವುಗಳು ಅಸಾಮಾನ್ಯವಾದ ರೀತಿಯಲ್ಲಿ ಕಲೆಗೆ ವಿರುದ್ಧವಾದ ನಿಲುವುಗಳು. ನಿರುದ್ದಿಶ್ಯವಾದ ಹಾಡಿಗೆ ಅಥವಾ ನಾನೇ ಗುರಿಯೂ, ಗಮನವೂ ಆಗಿರುವ ಹಾಡಿಗೆ ಅರ್ಥದ ಹಂಗಾಗಲೀ, ಅರ್ಥದ ನಿಯಮಗಳಾಗಲೀ ಅನ್ವಯವಾಗುವುದು ಸಾಧ್ಯವಿಲ್ಲ.

ಅರಿವನ್ನಕ್ಕರ ಅರ್ಚಿಸಿದೆ, ಅರಿವನ್ನಕ್ಕರ ಪೂಜಿಸಿದೆ,
ಅರಿವನ್ನಕ್ಕರ ಹಾಡಿದೆ ಹೊಗಳಿದೆ.
ಅರಿವುಗೆಟ್ಟು ಮರಹು ನಷ್ಟವಾಗಿ ನಿಜವೊಳಕೊಂಡಿತ್ತಾಗಿ
ಕೂಡಲಸಂಗಯ್ಯನಲ್ಲಿ ಸರ್ವನಿವಾಸಿಯಾದೆನು (೧೩೮೩)

ಅರಿವು ಪಡೆಯುವವರೆಗೆ ಅರ್ಚನೆ, ಪೂಜೆ, ಹಾಡು, ಹೊಗಳಿಕೆ ಎಲ್ಲವೂ. ಅರಿವು ಸಂಗ್ರಹಿಸಿಟ್ಟುಕೊಳ್ಳಬಹುದಾದದ್ದಲ್ಲ. ಅರಿವು ಪ್ರತಿಕ್ಷಣವೂ ಆಗುತ್ತಿರಬೇಕು. ಅರಿವು ಆಯಿತು ಎಂಬ ಭಾವ ಮನಸ್ಸಿನಲ್ಲಿ ಮೂಡಿದ ಕೂಡಲೇ ಅರಿವು ಆಗುತ್ತಿರುವ ನಾನು ಅರಿವು ಎಂಬುದಕ್ಕಿಂತ ಪ್ರತ್ಯೇಕವೆಂಬ ಸ್ಥಿತಿ ಏರ್ಪಡುತ್ತದೆ. ಅರಿವು ಇಲ್ಲವಾಗುತ್ತದೆ. ಹಾಗೆ ನಾನು ಮತ್ತು ನನ್ನ ಅರಿವು ಎರಡೂ ಬೇರೆ ಬೇರೆ ಎಂಬುದೇ ಮರಹು. ಅಂಥ ಮರಹು ಇಲ್ಲದೆ ಅರಿವೇ ನಾನು ಆಗಿರುವಾಗ ಸರ್ವನಿವಾಸಿ ಆಗಿರುತ್ತೇನೆ. ಇರುವುದು ನಿಜಮಾತ್ರವೇ ಹೊರತು ನಾನು ಮತ್ತು ನಿಜ ಎಂಬುದಲ್ಲ. ಅಥವ ಇರುವುದು ಕೂಡಲಸಂಗಮ ಮಾತ್ರ. ನಾನು ಮತ್ತು ಕೂಡಲಸಂಗಮ ಎಂದಲ್ಲ. ನಿಜವೊಳಕೊಂಡಿತ್ತು ಎಂಬ ಮಾತನ್ನು ನಿಜವ

ವ್ಯಾಪ್ತಿಗೆ ಕೊನೆಯೇ ಇಲ್ಲ, ಎಲ್ಲೆಲ್ಲೂ ಇರುವುದು ನಿಜವೇ. "ನಾನು" ನಿಜವಲ್ಲ, ಇರುವುದು ನಿಜ ಮಾತ್ರ ಎಂಬ ಸ್ಥಿತಿಯೇ ಸರ್ವ ನಿವಾಸಿಯಾಗಿರುವ ಸ್ಥಿತಿ. ಇಂಥ ಸ್ಥಿತಿಯಲ್ಲಿ ಕಲೆ, ಹಾಡು, ಅಭಿವ್ಯಕ್ತಿ ಯಾವುದೂ ಅಗತ್ಯವಿಲ್ಲ. ಅವೆಲ್ಲ ಏನಾದರು ಆಗುವುದರ ಕುರುಹುಗಳು. ಏನೂ ಆಗದೆ ಸುಮ್ಮನೆ ಅದೇ ಆಗಿ ಇರುವ ಸ್ಥಿತಿ, ಬಹುಶಃ ಅಂತಿಮ ಮತ್ತು ಪ್ರಥಮ ಸ್ಥಿತಿ ಅದು. ಕಲೆ ಹುಟ್ಟಿದರೂ ಅಲ್ಲೇ ಹುಟ್ಟಬೇಕು, ಲಯಗೊಂಡರೂ ಅಲ್ಲೇ ಲಯಗೊಳ್ಳಬೇಕು.

ಹೊಳೆದ ಅರ್ಥ

ವಚನಗಳಿಗೆ ಒಂದೇ ಅರ್ಥ ಎಂಬುದಿಲ್ಲ. ಓದುಗರ ಮನಸ್ಥಿತಿಗೆ, ಹಿನ್ನೆಲೆಗೆ ತಕ್ಕಂತೆ ಅರ್ಥಗಳು ಅನಾವರಣಗೊಳ್ಳುತ್ತವೆ. ಬಸವವಚನಗಳನ್ನು ಓದಿದಾಗ ಹೊಳೆದ ಅರ್ಥಗಳನ್ನು ಓದುಗರೊಡನೆ ಹಂಚಿಕೊಳ್ಳುವುದು ಈ ಟಿಪ್ಪಣಿಗಳ ಉದ್ದೇಶ. ಹಂಚಿಕೊಳ್ಳುವುದು ಮಾತ್ರವೇ ಉದ್ದೇಶವೇ ಹೊರತು ವಚನಗಳ ಅರ್ಥ ಇದೇ ಎಂಬ ಹಟ ಇಲ್ಲಿಲ್ಲ. ಹೀಗೂ ಅರ್ಥಮಾಡಿಕೊಳ್ಳಬಹುದಲ್ಲವೇ ಎಂಬ ಕುತೂಹಲ, ಅಚ್ಚರಿಗಳು ಮಾತ್ರವೇ ಈ ಬರಹದ ಪ್ರೇರಣೆ.

ಪಾತ್ರೆ ಮತ್ತು ಕನ್ನಡಿ

ದರ್ಪಣವು ಬೇರೆ ಕಂಚಲ್ಲ, ಬಟ್ಟಲು ಬೇರೆ ಕಂಚಲ್ಲ
ಧಾತ ಒಂದೇ ಭಾಜನ ಬೇರೆ, ಬೆಳಗೆ ಕನ್ನಡಿ ಎನ್ನಿಸಿತಯ್ಯಾ
ಅಂದಡೆ ಶರಣನು, ಮರೆದಡೆ ಮಾನವ
ಮರೆಯದೆ ಪೂಜಿಸು ಕೂಡಲ ಸಂಗಮದೇವನ (೧೩೬೯)

ಸಾಮಾನ್ಯ ಮನುಷ್ಯನಿಗೂ ಶರಣನಿಗೂ ಇರುವ ವ್ಯತ್ಯಾಸವನ್ನು ಈ ವಚನ ವಿವರಿಸುತ್ತದೆ. ಶರಣ ಕನ್ನಡಿ, ಮಾನವ ಬಟ್ಟಲು. ಇಬ್ಬರಿಗೂ ಮೂಲಭೂತ ವ್ಯತ್ಯಾಸವೇನೂ ಇಲ್ಲ, ಒಂದೇ ದ್ರವ್ಯದಿಂದ ಆದವರು. ಆದರೆ ಗುಣದಲ್ಲಿ ವ್ಯತ್ಯಾಸವಿದೆ. ಕನ್ನಡಿಗೆ ತನ್ನದೇ ಆದ ಇಂಥದೇ ಎಂಬ ವ್ಯಕ್ತಿತ್ವವಿಲ್ಲ. ತನ್ನೆದುರಿಗೆ ಇರುವುದನ್ನು ಸುಮ್ಮನೆ ಪ್ರತಿಫಲಿಸುತ್ತದೆ. ಬಟ್ಟಲಿಗೆ ಸಂಗ್ರಹದ ಗುಣ, ಹಿಡಿದಿಟ್ಟುಕೊಳ್ಳುವ ಗುಣ ಇದೆ. ಶರಣ ಇರುವ ವಾಸ್ತವವನ್ನು ಅದು ಇರುವಂತೆಯೇ ತೋರುವಾತ, ತನಗೆಂದು ಏನನ್ನೂ ಇಟ್ಟುಕೊಳ್ಳದಾತ. ಮಾನವ ಇರುವುದನ್ನು ತನ್ನೊಳಗೆ ಕೂಡಿಟ್ಟುಕೊಳ್ಳುವಾತ. ಬೆಳಗುವುದನ್ನು ಮರೆತರೆ ದರ್ಪಣವಾಗಬಲ್ಲ ಕಂಚು ಬಟ್ಟಲಷ್ಟೇ ಆದೀತು. ಮರೆಯದೆ ಇರಬೇಕಾದರೆ ಕೂಡಲಸಂಗಮನನ್ನು ಪೂಜಿಸು.

ಈ ವಚನವನ್ನು ಕವಿಯ ವ್ಯಕ್ತಿತ್ವ ನಿರೂಪಣೆ ಎಂದೂ ಓದಿಕೊಳ್ಳಬಹುದು. ಕವಿ ನಾನು ಎಂಬುದಿಲ್ಲದ ಕನ್ನಡಿ. ಇರುವ ಭಾವ ವ್ಯಕ್ತಪಡಿಸಬೇಕಾದರೆ ಅದು

ಇದರ ಜೊತೆಯೇ ಅರಿಯಬೇಕಾದರೆ ತನ್ನದೆಂಬ ಭಾವ ಇರಲೇಬಾರದು. ತನ್ನನ್ನೇ ತಿಕ್ಕಿ ತಿಕ್ಕಿ ಇಲ್ಲವಾಗಿಸಿಕೊಂಡು ವಾಸ್ತವವನ್ನು ಪ್ರತಿಫಲಿಸುವ ಕನ್ನಡಿ ಆಗಬೇಕು.

ಮರೆಯಲಾಗದು ಹರಿಯ, ಮರೆಯಲಾಗದು ಬ್ರಹ್ಮನ,
ಮರೆಯಲಾಗದು ತೆತ್ತೀಸ ಕೋಟಿ ದೇವರ್ಕಳ.
ನಮ್ಮ ಕೂಡಲ ಸಂಗಮದೇವರ ಮರೆಯಲಹುದು (೫೫೧)
[(ಅ) ಕೂಡಲ ಸಂಗಮದೇವರ ಮರೆಯಲಹುದು]

ಕಾಣುವ ಅರ್ಥ

ಹರಿಯನ್ನು ಮರೆಯಲಾಗದು, ಬ್ರಹ್ಮನನ್ನು ಮರೆಯಲಾಗದು, ಮೂವತ್ತು ಮೂರು ಕೋಟಿ ದೇವತೆಗಳನ್ನು ಮರೆಯಲಾಗದು, ನಮ್ಮ ಕೂಡಲಸಂಗಮ ದೇವರನ್ನು ಮರೆಯಲಾಗುತ್ತದೆ.

ಪ್ರಶ್ನೆ : ಈ ಮಾತುಗಳನ್ನು ಅರ್ಥ ಮಾಡಿಕೊಳ್ಳುವುದು ಹೇಗೆ?

ಹರಿ, ಬ್ರಹ್ಮ, ಮೂವತ್ತು ಮೂರು ಕೋಟಿ ದೇವತೆಗಳನ್ನು ಮರೆಯಲು ಸಾಧ್ಯವಿಲ್ಲ. ಏಕೆಂದರೆ ಅವರೆಲ್ಲರೂ ಕಥೆಗಳಾಗಿ, ಪುರಾಣಗಳಾಗಿ, ನಮ್ಮ ಮನಸ್ಸಿನಲ್ಲಿ ಉಳಿದುಬಿಟ್ಟಿದ್ದಾರೆ. ಕೂಡಲಸಂಗಮ ಹಾಗೆ ಕಥೆಯಲ್ಲ. ನಿರೂಪಿಸಿ, ನೆನಪಿಟ್ಟುಕೊಳ್ಳಬಹುದಾದ ಸಂಗತಿಯೋ, ವ್ಯಕ್ತಿಯೋ, ಘಟನೆಯೋ ಅಲ್ಲ. ಕೂಡಲಸಂಗಮ ಕ್ಷಣಕ್ಷಣವೂ ಆಗಬೇಕಾದ ಅನುಭವದ ಹೆಸರು. ಕೂಡಲ ಸಂಗಮನನ್ನೂ ಹರಿ. ಬ್ರಹ್ಮ, ಮೂವತ್ತು ಮೂರು ಕೋಟಿ ದೇವತೆಗಳಲ್ಲಿ ಒಬ್ಬ ನೆಂದುಕೊಂಡರೆ ಸಹಜವಾಗಿ ಅವನು ಮರೆತೇಹೋಗುತ್ತಾನೆ. ಇಷ್ಟದೈವದ ಕಲ್ಪನೆಯ ಮುಖ್ಯಾಂಶವೇ ಇದು – ದೈವ ನೆನಪಿನ ವಸ್ತುವಲ್ಲ, ಅನುಭವದ ಎಚ್ಚರ. ಎಚ್ಚರ ಇಲ್ಲವಾದ ಕ್ಷಣವೇ ಆ ಇಷ್ಟದೈವವೂ ಇಲ್ಲವಾಗುತ್ತದೆ.

ವಚನಗಳು ಕಥನದ ಹಂಗು ಹರಿದ ರಚನೆಗಳು ಎಂಬ ಮಾತಿದೆ ಅಲ್ಲವೇ? ಹಾಗೆ ಕಥನವನ್ನು ತೊರೆದದ್ದರಿಂದಲೇ ಇಂಥ ಮಾತು ಹೇಳಲು ಸಾಧ್ಯವಾಗಿದೆ. ಕಥನಗಳೆಲ್ಲ ನಿರ್ದಿಷ್ಟ ರೂಪಗಳನ್ನೂ ಕ್ರಿಯೆಗಳನ್ನೂ ಆಧರಿಸಿಯೇ ಹುಟ್ಟಿಕೊಳ್ಳುತ್ತವೆ. ಆದರೆ ಕೂಡಲಸಂಗಮನೆಂಬ ಇಷ್ಟದೈವ ರೂಪವಲ್ಲ. ಕೇವಲ ನಿ–ರೂಪ. ಅವನು ಜಗದಗಲ, ಮುಗಿಲಗಲ, ಇತ್ಯಾದಿ. ಮನದ ಕೊನೆಯ ಮೊನೆಯ ಮೇಲೆ ಇರುವವನು. ಅಂಥವನನ್ನು ಕಥಿಸುವುದಾದರೂ ಹೇಗೆ, ನೆನಪಿಟ್ಟು ಕೊಳ್ಳುವುದಾದರೂ ಹೇಗೆ? ಬಹುಶಃ ಅದಕ್ಕೆಂದೇ ಕನ್ನಡ ಸಂಸ್ಕೃತಿಯು ತನ್ನ ಸ್ಮರಣೆಗಾಗಿ ಇಷ್ಟದೈವವನ್ನು ಮಾತ್ರ ಒಪ್ಪಿದ ಬಸವನನ್ನೇ ಕಥನ ಮಾಡಿಕೊಂಡು ಬಿಟ್ಟಿತು. ಕೇವಲ ನೆನಪಿನ ಸಂಗತಿಯನ್ನಾಗಿ ಮಾಡಿಕೊಂಡುಬಿಟ್ಟಿತು.

ಪಾಠಾಂತರದಲ್ಲಿ ಬರುವ "ತಾ ಕೂಡಲ ಸಂಗಮದೇವ ಮರೆಯ ಲಹುದು" ಎಂಬ ಮಾತು ಪ್ರತಿಯೊಬ್ಬರೂ ತಮ್ಮ ತಮ್ಮ ಇಷ್ಟದೈವದ ಬಗ್ಗೆ ಎಚ್ಚರವನ್ನು ಕಳೆದುಕೊಂಡು ಆ ದೈವವನ್ನು ಮರೆತುಬಿಡಬಹುದು ಎಂಬುದನ್ನು ಸೂಚಿಸುವಂತಿದೆ. "ಮರೆಯ ಲಹುದು"ಎಂಬ ಮಾತನ್ನು ಉಳಿದ ದೈವಗಳೆಲ್ಲ ನನ್ನ ಇಷ್ಟದೈವದ "ಮರೆಯಲ್ಲಿ – ಅಹುದು" "ಮರೆಯಲ್ಲಿ ಸಂಭವಿಸುತ್ತವೆ, ಆಗುತ್ತವೆ" ಎಂದು ಓದಿಕೊಳ್ಳ ಬಹುದೇ? ಆಗ ರೂಪರಹಿತ ಇಷ್ಟದೈವ ಉಳಿದೆಲ್ಲ ದೇವರುಗಳ ಸ್ಮರಣೆಯನ್ನೂ ಮರೆಮಾಡುವ, ಆವರಿಸಿಕೊಳ್ಳುವ ಕಲ್ಪನೆಯಾದೀತಲ್ಲವೇ?

ತಪ್ಪು

ಆನು ಮಾಡಿದ ತಪ್ಪನೆಣಿಸಿನೆಂದಡೆ ಗಣನೆಯಿಲ್ಲ
ನಡೆದು ತಪ್ಪುವೆ, ನುಡಿದು ತಪ್ಪುವೆ.
ಮಾಡಿ ತಪ್ಪುವೆ, ನೀಡಿ ತಪ್ಪುವೆ.
ಅರಿದು ತಪ್ಪುವೆ, ಮರೆದು ತಪ್ಪುವೆ.
ಎನ್ನ ತಪ್ಪನೊಪ್ಪವ ಮಾಡಿಕೊಂಬುದಲ್ಲದೆ ಚಿತ್ತಕ್ಕೆ ತರಲಾಗದು.
ಕೂಡಲ ಸಂಗಯ್ಯನೆಂಬ ಗಂಡನ ಬೆರಸಬೇಕೆಂದು ಕರೆಯಲಟ್ಟಿದೆನು.
ಶಿವಶರಣರೆಲ್ಲರಿಗೆ ಶರಣೆಂದು ಬೀಳ್ಕೊಂಬ ತವಕದಲಿದ್ದೆನು (೧೧೮೧)

ಈ ವಚನವು ನಾನು ಎಂಬ ಕಲ್ಪಿತ ಕೇಂದ್ರದಿಂದ ವ್ಯವಹರಿಸುವಾಗ ಆಗುವ ತಪ್ಪುಗಳನ್ನು ಕುರಿತು ಹೇಳುತ್ತದೆ. ನಾನು ಎಂದರೇನು ಎಂದು ನನ್ನೊಳಗೇ ಕೆಲವು ಕಲ್ಪನೆಗಳನ್ನು ರೂಪಿಸಿ, ಪೋಷಿಸಿಕೊಂಡಿರುತ್ತೇನೆ. ಈ ಕಲ್ಪನೆಗಳು ರೂಪುಗೊಳ್ಳಲು ಸುತ್ತಲಿನ ಜನ ಸಮುದಾಯವೂ, ಅಥವಾ ಜನ ಸಮುದಾಯವೇ ಕಾರಣವಾಗಿರುತ್ತದೆ. ಹಾಗೆ ನೋಡಿದರೆ ವ್ಯಕ್ತಿತ್ವವೆಂಬುದೇ ಕಲ್ಪನೆ ಅದನ್ನೇ ಆಧಾರವಾಗಿಟ್ಟುಕೊಂಡು ಮಾಡುವ ಕೆಲಸ, ಆಡುವ ನುಡಿ, ವರ್ತನೆ, ಅರಿವು, ಮರೆವು ಎಲ್ಲವೂ ತಪ್ಪುಗಳೇ ಆಗುತ್ತವೆ. ವಾಸ್ತವಕ್ಕೂ ನನ್ನ ಕಲ್ಪಿತ ವ್ಯಕ್ತಿತ್ವಕ್ಕೂ ಇರುವ ಅಂತರ, ವೈರುಧ್ಯಗಳು ತಪ್ಪಿನ ಭಾವವನ್ನು ಮೂಡಿಸುತ್ತವೆ ಇದನ್ನು ಒಪ್ಪ ಮಾಡಿಕೊಳ್ಳುವುದೆಂದರೆ ಕಲ್ಪಿತ ವ್ಯಕ್ತಿತ್ವವು [illegible] ಏಕಾಂತ ಸ್ಥಿತಿಯ ಕ್ರಿಯೆ. ಅದಕ್ಕೆ ನನ್ನ ಸುತ್ತಲ ಸಮುದಾಯ, ಅದು ಶಿವಶರಣರ ಸಮುದಾಯವೇ ಆಗಿದ್ದರೂ, ಆತಂಕವನ್ನೇ ತರುತ್ತದೆ. ಅವರಿಗೂ ಶರಣು ಹೇಳಿ, ಗುಡ್ ಬೈ ಹೇಳಿ, ನಾನು ಮತ್ತು ಕೂಡಲಸಂಗಯ್ಯ ಮಾತ್ರ ಇರುವ ಸ್ಥಿತಿಗೆ ಬೀಳ್ಕೊಂಡು ಹೊರಡುವುದು ಒಂದೇ ಗತಿ.

ಬಸವಣ್ಣನನ್ನು ಎಷ್ಟೇ ಸಾಮಾಜಿಕನೆಂದರೂ ಅವನು ಬಯಸುವ ಏಕಾಂತ ಈ ವಚನದ ಆಕರ್ಷಣೆಗೆ ಕಾರಣ.

ಬೀದಿ ರಂಗಭೂಮಿ : ಒಂದು ಸಾಮಾಜಿಕ ಚಳುವಳಿ

ಡಾ|| ವಿ. ನಾಗೇಶ್

ಸಾಮಾಜಿಕ ಅನಿವಾರ್ಯತೆಯಲ್ಲಿ ಹುಟ್ಟಿಕೊಂಡಿದ್ದು ಬೀದಿ ರಂಗಭೂಮಿ. ಜನರ ಸಮಸ್ಯೆಗಳನ್ನು ಅಭಿವ್ಯಕ್ತಿಗೊಳಿಸಿದ ಜನಪ್ರಿಯ ಮಾಧ್ಯಮವಾಗಿ ಜನ್ಮತಾಳಿದ ಬೀದಿ ರಂಗಭೂಮಿ ಕೆಳವರ್ಗದ, ರೈತರ, ಕೂಲಿ ಕಾರ್ಮಿಕರ, ಮಹಿಳೆಯರ, ವಿದ್ಯಾರ್ಥಿಗಳ ಮತ್ತು ಇತರೆ ಶೋಷಿತ ವರ್ಗದ ದನಿಯಾಗಿ ಪರಿಣಮಿಸಿದೆ. ದನಿ ಕಳಕೊಂಡವರ ದನಿಯಾಗಿ ಅವರ ಬದುಕಿನಲ್ಲಿ ಬೆಳಕನ್ನು ತರುವಲ್ಲಿ ಯಶಸ್ವಿಯಾಗಿದೆ.

ರಂಗಭೂಮಿಯ ಇತಿಹಾಸವು ಮಾನವನ ನಾಗರೀಕತೆಯ ಹುಟ್ಟಿನೊಂದಿಗೇ ಆರಂಭವಾಗುತ್ತದೆ. ಮಾನವನು ಮೂಲಭೂತವಾಗಿ ಅನುಕರಣಾ ಜೀವಿ. ಈ ಅನುಕರಣೆಯೇ ನಾಟಕದ ಮೂಲ. ಮಾನವನು ಮಾತುಬಾರದ ದಿನಗಳಲ್ಲಿ ತನ್ನ ಸಹೋದ್ಯೋಗಿಗಳೊಂದಿಗೆ ಸಂವಹನ ಕ್ರಿಯೆ ನಡೆಸಲು 'ಆಂಗಿಕ ಚಲನೆ'ಗಳನ್ನೇ ಸಂವಹನ ಮಾಧ್ಯಮವನ್ನಾಗಿ ಬಳಸಿಕೊಳ್ಳುತ್ತಿದ್ದ. ನಂತರದ ದಿನಗಳಲ್ಲಿ ಈ 'ಆಂಗಿಕ ಚಲನೆ' 'ಸಂಜ್ಞೆ'ಗಳು ಅನುಕರಣೆಗೊಂಡು ನಾಟಕದ ಅನುಭವದಿಂದ ದೂರ ಉಳಿದಿಲ್ಲ. ವಸ್ತು, ವ್ಯಾಪ್ತಿ, ತಂತ್ರಗಳಲ್ಲಿ ಭಿನ್ನತೆಯಿತ್ತಾದರೂ ರಂಗಭೂಮಿ ಅಸ್ತಿತ್ವದಲ್ಲಿತ್ತು. ರಂಗಭೂಮಿಯು ಜೀವಂತ ಕಲಾ ಪ್ರಕಾರವಾಗಿದ್ದು ಸಮಯ ಮತ್ತು ಸಮಾಜದ ಅನುಗುಣವಾಗಿ, ಜೀವನದ ಶೈಲಿ ಬದಲಾದಂತೆ ರಂಗಭೂಮಿಯ ವಸ್ತು, ತಂತ್ರಗಳೂ ಬದಲಾಗುತ್ತವೆ.

ಮೊದಲು ಪ್ರೊಸಿನಿಯಂ ರಂಗಭೂಮಿಯು ಚಾಲ್ತಿಯಲ್ಲಿತ್ತಾದರೂ ಜನರ ದನಿಯಾಗುವಲ್ಲಿ ವಿಫಲವಾಗಿತ್ತು. ಈ ರಂಗಭೂಮಿಯು ರಂಗಮಂದಿರದ ಅಭಾವದಿಂದ ಅಥವಾ ವೆಚ್ಚದ ಕಾರಣದಿಂದ ಸಮಾಜದ ಕೆಲವೇ ಸ್ತರಗಳನ್ನು ಮಾತ್ರ ಆಕರ್ಷಿಸುವಲ್ಲಿ ಯಶಸ್ವಿಯಾಗಿತ್ತು. ಮೇಲ್ವರ್ಗದ ಜನರು ಈ ವೆಚ್ಚವನ್ನು ಭರಿಸುವ ಸಾಮರ್ಥ್ಯವುಳ್ಳವರಾಗಿದ್ದು, ತಮ್ಮನ್ನು ರಂಗಭೂಮಿಯಲ್ಲಿ ತೊಡಗಿಸಿ ಕೊಳ್ಳುತ್ತಿದ್ದರು. ಬೆಳಕು, ಪ್ರಸಾದನ ವಸ್ತ್ರಾಲಂಕಾತ, ರಂಗಸಜ್ಜಿಕೆ ಇತ್ಯಾದಿ ತಾಂತ್ರಿಕ ಅಂಶಗಳ ಕಡೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತಿದ್ದು ಪ್ರಸ್ತುತ ಸಮಾಜದಲ್ಲಿ ನಡೆಯುವ ಘಟನಾವಳಿಗಳಿಗೆ ಪ್ರತಿಕ್ರಿಯಿಸುತ್ತಿರಲಿಲ್ಲ. ಬದಲಾಗಿ ಕೇವಲ ಒಂದು ಸ್ತರದ ಜನರನ್ನು ಮನರಂಜಿಸಲು ಮಾತ್ರ ಸೀಮಿತಗೊಂಡಿದ್ದು ಈ ರಂಗಭೂಮಿ

ನಾಲ್ಕು ಗೋಡೆಗಳ ಮಧ್ಯೆ ಪ್ರದರ್ಶನಗೊಂಡು ಸಾರ್ವಜನಿಕ ವಲಯದಲ್ಲಿ ಇದರ ಅರಿವೇ ಇರುತ್ತಿರಲಿಲ್ಲ.

ಅದೊಂದು ಕಾಲವಿತ್ತು. ಮಧ್ಯಮ ವರ್ಗದ ಜನರು ಸಾಮಾನ್ಯ [illegible] ಜನರ ಕಥೆಗಳಿಂದ ದೂರ ಉಳಿದಿದ್ದ ಕೃತಿಗಳನ್ನು ಅತ್ಯುತ್ತಮ ಕೃತಿಗಳೆಂದು ಆಸ್ವಾದಿಸುತ್ತಿದ್ದರು. ಈ ರಂಗಭೂಮಿ ಪ್ರೇಕ್ಷಕರು ಸಮಾಜದ ಉನ್ನತ ಸ್ತರದಲ್ಲಿದ್ದು ಮತ್ತು ಬುದ್ಧಿಜೀವಿಗಳಾಗಿದ್ದು ನಾಟಕ ನೋಡಲು ನಿಗದಿಪಡಿಸಿದ ಪ್ರವೇಶ ದರವನ್ನು ಭರಿಸುವ ಸಾಮರ್ಥ್ಯವುಳ್ಳವರಾಗಿದ್ದರು.

ಇಂತಹ ಸಂದರ್ಭದಲ್ಲಿ ನಾಟಕ ಮಾಧ್ಯಮದ ಮೂಲಕ ಸಾಮಾನ್ಯ ಜನರ ಸಮಸ್ಯೆಗಳನ್ನು ಅವರ ಮುಂದಕ್ಕೇ ಕೊಂಡೊಯ್ಯುವ ಮತ್ತು ಅವರದೇ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಬಹುದೆಂದು ಮೊದಲು ಕಂಡುಕೊಂಡವರು ಎಡಪಂಥೀಯರು. ಈ ಹುಡುಕಾಟದ ಫಲವಾಗಿಯೇ ಭಾರತದಲ್ಲಿ ಬೀದಿ ರಂಗಭೂಮಿಯು ಹುಟ್ಟಿಕೊಂಡಿತು. ತನ್ನದೇ ಸಿದ್ಧಾಂತಗಳ ಜೊತೆಯಲ್ಲಿ ಹುಟ್ಟಿಕೊಂಡ ಬೀದಿ ರಂಗಭೂಮಿ ಸಾಮಾನ್ಯ ಜನರ ದನಿಯಾಗಲು ಹವಣಿಸುತ್ತಿತ್ತು. ಸಂಕೇತ, ಚಿಹ್ನೆ, ಬೆಳಕು ಇತ್ಯಾದಿ ಅಂಶಗಳಿಗೆ ಒತ್ತುಕೊಡುವ ಬೌದ್ಧಿಕ ರಂಗಭೂಮಿಯಾಗಿರದೆ ಬೀದಿ ರಂಗಭೂಮಿಯು ಅತಿ ಸರಳವಾಗಿದ್ದು ಅಜ್ಜಿಯು ತನ್ನ ಮೊಮ್ಮಕ್ಕಳಿಗೆ ಕಥೆ ಹೇಳುವ ಹಾಗಿತ್ತು. ಪ್ರೊಸೀನಿಯಂ ರಂಗಭೂಮಿ ಇತ್ತಾದರೂ ಅದಕ್ಕೆ ಯಾವ ಸಿದ್ಧಾಂತ, ಧೋರಣೆ, ಗುರಿಗಳಾಗಲಿ ಇರಲಿಲ್ಲ. ಬದಲಾಗಿ ಮೇಲ್ವರ್ಗದ ಜನರನ್ನು ರಂಜಿಸುವುದೇ ಆಗಿತ್ತು. ಆದರೆ ಬೀದಿ ರಂಗಭೂಮಿಯು ತನ್ನದೇ ಆದ ಸಿದ್ಧಾಂತ, ಧೋರಣೆ, ಗುರಿಗಳನ್ನು ಹೊಂದಿತ್ತು.

ಬೀದಿ ರಂಗಭೂಮಿಯು ಎಡಪಂಥೀಯ ಸಂದೇಶಗಳನ್ನು ಸಾರುವುದರ ಜೊತೆಗೆ ಉತ್ತಮ ಕಲೆಯನ್ನು ಉಳಿಸುವ, ಬೆಳೆಸುವ, ಹರಡುವ ಮಹತ್ವದ ಜವಾಬ್ದಾರಿಯನ್ನು ಕೂಡ ಹೊತ್ತಿತ್ತು. ಈ ರಂಗಭೂಮಿಯು ಸಾಮಾನ್ಯ ವರ್ಗದ ಎಲ್ಲ ಜನರನ್ನು ತಲುಪಿ ಅವರಿಗೆ ಅವರದೇ ಸಮಯವನ್ನು ಬಿತ್ತರಿಸುವ ಮತ್ತು ಎಡಪಂಥೀಯ ರಾಜಕೀಯ ಧೋರಣೆಗಳನ್ನು ಕೂಡ ಅವರಿಗೆ ಅರಿವು ಮೂಡಿಸುವ ಗುರಿ ಹೊಂದಿತ್ತು. ರವಿಂಧ್ರ ಭಟ್ಟಾಚಾರ್ಯರು ಹೇಳುವಂತೆ 'ರಾಜಕೀಯ ಪ್ರಜ್ಞೆ' ಇಲ್ಲದೆ ಬೀದಿ ರಂಗಭೂಮಿ ಇರುವುದಿಲ್ಲ. ಬೀದಿ ರಂಗ ಭೂಮಿಯು ಪ್ರಸ್ತುತ ಸಮಾಜದ ಘಟನೆಗಳಿಗೆ ಒತ್ತುಕೊಡಬೇಕು. ಹಾಗಾದಾಗ ಮಾತ್ರ ಜನರು ಬೀದಿಯಲ್ಲಿ ನಡೆಯುತ್ತಿರುವ ನಾಟಕವು ತಮಗೆ ಸಂಬಂಧಿಸಿದ್ದೆಂದು ತಿಳಿದು

ನಾಟಕ ವೀಕ್ಷಿಸುತ್ತಾರೆ. ಇದು ನಾಟಕದ ಕರ್ತವ್ಯವಾಗಿದ್ದು ಅದು ನೋಡುವ ಜನರಿಗೆ ಯೋಚನೆ ಮಾಡುವ ಮತ್ತು ಅದಕ್ಕೆ ಪರಿಹಾರ ಕಂಡುಕೊಳ್ಳುವಂತೆ ಮಾಡುವುದು". ಪ್ರೊ. ಸತ್ಯಜಿತ್ ಚೌದರಿ ಕೂಡ ಹಾಗೆಯೇ ಹೇಳುತ್ತಾರೆ, "ರಾಜಕೀಯ ಬದ್ಧತೆಯಿಲ್ಲದೆ ಬೀದಿ ರಂಗಭೂಮಿ ಸಾಧ್ಯವಿಲ್ಲ. ಬೀದಿ ರಂಗಭೂಮಿಯಲ್ಲಿ ಒಂದು ನಿರ್ದಿಷ್ಟ ವಸ್ತುವನ್ನು ಪ್ರದರ್ಶಿಸುವುದರ ಮೇಲೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು. ಬೀದಿ ನಾಟಕದಲ್ಲಿನ ವಸ್ತುವು ಜನರ ಸಮಸ್ಯೆಗಳಿಗೆ ಪ್ರತಿಕ್ರಿಯಿಸಿದರೆ ಮಾತ್ರ ಆ ನಾಟಕವು ಯಶಸ್ವಿಯಾಗುತ್ತದೆ".

ಮೇಲಿನ ಇಬ್ಬರ ಹೇಳಿಕೆಗಳು ಸಾಮಾನ್ಯ ಜನರ ಮತ್ತು ರಾಜಕೀಯ ಪ್ರಶ್ನೆಗಳಿಗೆ ಸಂಬಂಧಿಸಿದ್ದಾಗಿದ್ದು ಬೀದಿ ರಂಗಭೂಮಿಯ ಧೋರಣೆಯನ್ನು ತೋರಿಸುತ್ತದೆ. ರಂಗಭೂಮಿಗೆ ಸಾವಿರಾರು ವರ್ಷಗಳ ಇತಿಹಾಸವೇ ಇದ್ದರೂ, ಸಫ್ದರ್ ಹಶ್ಮಿಯವರ ಪ್ರಕಾರ, ಬೀದಿ ರಂಗಭೂಮಿಯ ಇತಿಹಾಸವು ನೂರ ಐವತ್ತು ವರ್ಷಗಳಿಗಿಂತ ಹಿಂದಕ್ಕೆ ಹೋಗುವುದಿಲ್ಲ. ಭಾರತದಲ್ಲಿ ಮೊದಲು ಅನೇಕ ಕಲಾಪ್ರಕಾರಗಳಿದ್ದರೂ ಕೂಡ ಅವುಗಳಿಗಿಂತ ನಿರ್ದಿಷ್ಟ ಗುರಿ ಎಂಬುದಿರಲಿಲ್ಲ. ಬದಲಾಗಿ ಅವು ಜನರನ್ನು ರಂಜಿಸುವಷ್ಟಕ್ಕೆ ಮಾತ್ರ ಸೀಮಿತವಾಗಿದ್ದವು. ಯಾವುದೇ ಗೊತ್ತು ಗುರಿಗಳಿಲ್ಲದೆ ನಡೆಯುತ್ತಿದ್ದ ಈ ಕಲಾಪ್ರಕಾರಗಳು ತಮ್ಮ ವಸ್ತುಗಳನ್ನು ಪುರಾಣಗಳಿಂದ ಆರಿಸಿಕೊಂಡಿದ್ದವು. ಆದರೆ ಬೀದಿ ರಂಗಭೂಮಿ ಇದಕ್ಕೆ ವ್ಯತಿರಿಕ್ತವಾಗಿದೆ.

ಇಪ್ಪತ್ತನೆಯ ಶತಮಾನದ ಮೂವತ್ತರ ದಶಕವು ಎಲ್ಲ ಕ್ಷೇತ್ರ–ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅತಿ ಪ್ರಮುಖವಾಗಿ ನಿಲ್ಲುತ್ತದೆ. ಭಾರತವು ಈ ಸಂದರ್ಭದಲ್ಲಿ ಸಮೂಹ ಸಂಘರ್ಷದಲ್ಲಿ ಮುಳುಗಿತ್ತು. ರಷ್ಯಾದಲ್ಲಿ ನಡೆದ ಬೋಲ್‌ಶೇವಿಕ್ (Bolshevik) ಕ್ರಾಂತಿಯಲ್ಲಿನ ಅನೇಕ ಹೃದಯಗಳನ್ನು ಕದಡಿತು. ಸ್ವಾತಂತ್ರ್ಯದ ಉದ್ದೇಶಗಳ ಜೊತೆಯಲ್ಲಿ ಸಮತಾವಾದದ ಸಿದ್ಧಾಂತಗಳು ಒಂದು ಸಣ್ಣ ಎಳೆಯಾಗಿ ಹರಿಯಲು ಪ್ರಾರಂಭಿಸಿತು. ಮತ್ತೊಂದೆಡೆ, ಸಂಪೂರ್ಣ ವಿಶ್ವವು ಮಹಾಯುದ್ಧಗಳ ಭೀತಿಯಲ್ಲಿ ನಡುಗುತ್ತಿತ್ತು. ಮೊದಲನೆ ಮಹಾಯುದ್ಧದ ಫಲಿತಾಂಶಗಳನ್ನು ಕಂಡಿದ್ದ ಪ್ರಪಂಚವು ಮತ್ತೊಂದು ಯುದ್ಧದ ಆತಂಕದಲ್ಲಿ ತತ್ತರಿಸಿತ್ತು. ೧೯೩೩ರಲ್ಲಿ ಹಿಟ್ಲರನು ಜರ್ಮನಿಯ ಅಧಿಕಾರವನ್ನು ವಹಿಸಿಕೊಂಡನು. ಅಲ್ಲಿಂದ ಪ್ರಾರಂಭವಾಯಿತು ಕೋಮುವಾದದ ಯುದ್ಧ. ಆರ್ಯರೇ ಶ್ರೇಷ್ಠರೆಂದು ಎಲ್ಲರನ್ನು ನಂಬಿಸಿ ಇತರೇ ಜನಾಂಗದವರನ್ನು ದೇಶದಿಂದ ಹೊರಹಾಕಿದನು. ನಾಜಿ ಸಿದ್ಧಾಂತವನ್ನು ಪ್ರಾಯೋಗಿಕ್ಕೆ ತಂ ಹಿಟ್ಲರನು ಅನಾರ್ಯರನ್ನು ಬರ್ಬರವಾಗಿ ಕೊಂದುಹಾಕಿದನು. ಕಾನ್ಸಂಟ್ರೇಷ

ಕ್ಯಾಂಪ್ (Concentration Camp) ನಲ್ಲಿ ಅನಾರ್ಯರನ್ನು ಕೂಡಿ ಹಾಕಿ ಅವರಿಂದ ಗುಂಡಿಗಳನ್ನು ತೋಡಿಸಿ ಆ ಗುಂಡಿಗಳಲ್ಲಿ ಅವರನ್ನೇ ಹೂತು ಹಾಕಿದನು. ವಿದ್ಯುತ್ ಬಳಸಿ ಅನೇಕರನ್ನು ಹತ್ಯೆಗೈದನು. ಇದೆಲ್ಲ ಒಂದೆಡೆಯಾದರೆ ಮತ್ತೊಂದೆಡೆ ಅದೇ ವರ್ಷದ ಮೇ ಹತ್ತರಂದು ಬರ್ಲಿನ್ ಪಟ್ಟಣವು ಜನಪ್ರಿಯ ಬೆಂಕಿಯ ನಾಜಿ಼ ಹಬ್ಬವನ್ನು ಕಂಡಿತು. ಈ ಆಚರಣೆಯಲ್ಲಿ ಪ್ರಪಂಚದ ಅತ್ಯಂತ ಜನಪ್ರಿಯ ಲೇಖಕರ ಮತ್ತು ಚಿಂತಕರ ಪುಸ್ತಕಗಳನ್ನು ಸುಟ್ಟಹಾಕಲಾಯಿತು. ಇದೇ ಸಮಯದಲ್ಲಿ ಸಂಪೂರ್ಣ ಯೂರೋಪ್ ಖಂಡವು ಹಿಟ್ಲರ್ ಮತ್ತು ಮುಸ್ಸೋಲಿನಿಯರ ಅನಿರ್ಬಂಧಿತ ಸಾಮ್ರಾಜ್ಯದಲ್ಲಿ ಸೇರಿಕೊಂಡಿತು.

ಇಂತಹ ಕ್ಲಿಷ್ಟಕರ ಸಂದರ್ಭದಲ್ಲಿ ರೋಮ್ಯೆನ್ ರೋಲಾಂಡ್ (Romain Rolland), ಮ್ಯಾಕ್ಸಿಮ್ ಗೋರ್ಕಿ ಮತ್ತು ಹೆನ್ರಿ ಬರ್ಬಸ್ಸೆಯುವರು ಕೂಡಿ ಸಮಾಲೋಚಿಸಿ ಎಲ್ಲ ಪುರೋಗಾಮಿ ಲೇಖಕರು ಮತ್ತು ಕಲಾಕಾರರಿಗೆ ಕ್ರಿಯಾಶೀಲವಾಗಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಕರೆ ನೀಡಿದರು. ಇದರ ಫಲಿತಾಂಶವಾಗಿ ಪ್ಯಾರಿಸ್‌ನಲ್ಲಿ ೧೯೩೫ರ ಜೂನ್ ೨೧ರಂದು ಮೊದಲ 'ಫ್ಯಾಸಿಸ್ಟ್-ವಿರೋಧಿ' ಸಮ್ಮೇಳನವನ್ನು ನಡೆಸಲಾಯಿತು. ಈ ಸಮ್ಮೇಳನವು ಭಾರತದಲ್ಲಿ ಎಡಪಂಥೀಯ ಸಾಂಸ್ಕೃತಿಕ ಚಳುವಳಿಯ ಮೇಲೆ ಅಪಾರ ಪ್ರಭಾವವನ್ನು ಬೀರಿತು. ಈ ಸಮ್ಮೇಳನದ ಸ್ಫೂರ್ತಿಯ ಮೇಲೆ ೧೯೩೬ರ ಏಪ್ರಿಲ್ ೧೧ರಂದು 'ಅಖಿಲ ಭಾರತ ಪ್ರಗತಿ ಶೀಲ ಬರಹಗಾರ ಸಂಘ' (All India Progressive Writers' Association) ವು ಅಸ್ತಿತ್ವಕ್ಕೆ ಬಂದಿತು. ೧೯೩೨-೩೫ರ ನಡುವೆ ಬುದ್ಧಿಜೀವಿ ಯುವಕರಾದ ಮುಲ್ಕರಾಜ್ ಆನಂದ್, ಸಜ್ಜದ್ ಜ಼ಹೀರ್, ಹಿರೇಂದ್ರನಾಥ್ ಮುಖರ್ಜಿ, ಭವಾನಿ ಭಟ್ಟಾಚಾರ್ಯ, ಇಕ್ಬಾಲ್ ಸಿಂಗ್, ರಾಜರಾವ್, ಮೊಹಮ್ಮದ್ ಅಶ್ರಫ್ ಮತ್ತು ಇತರರು ಮಾರ್ಕ್ಸ್‌ನ ಸಿದ್ಧಾಂತದಿಂದ ಪ್ರಭಾವಿತಗೊಂಡರು ಮತ್ತು ಪ್ರಗತಿಶೀಲ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಳುವಳಿಯ ಬಗ್ಗೆ ಕನಸು ಕಾಣತೊಡಗಿದರು.

ಈ ರೀತಿಯ ಕನಸಿನ ಫಲಶೃತಿಯಾಗಿಯೇ 'ಪ್ರಗತಿ ಶೀಲ ಬರಹಗಾರರ ಸಂಘ'ದ ಅಸ್ತಿತ್ವಕ್ಕೆ ಕಾರಣವಾಯಿತು. ಈ ಸಂಘವು ಅಂತರ್ರಾಷ್ಟ್ರೀಯ ಸಿದ್ಧಾಂತಗಳನ್ನು ಅಥವಾ ಆದರ್ಶಗಳನ್ನು ಈ ಮಣ್ಣಿನ ವಾಸ್ತವತೆಯ ಜೊತೆಯಲ್ಲಿ ಮೇಳೈಸುವುದರಲ್ಲಿ ಯಶಸ್ವಿಯಾದರು ಮತ್ತು ಅನೇಕ ಯುವಕರು ಜನರನ್ನು ಕ್ರಾಂತಿಯ ಮೂಲಕ ಸ್ವತಂತ್ರಗೊಳಿಸಲು ಪ್ರೇರಿತರಾದರು. ಈ ರೀತಿಯ ಕನಸುಗಳನ್ನು ಹೊತ್ತಿದ್ದ ಯುವಕರ ಗುಂಪು 'ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಷನ್'(ಇಪ್ಟಾ IPTA) ಸ್ಥಾಪಿಸಿದರು.

ಭಾರತದಲ್ಲಿ ಬೀದಿ ರಂಗಭೂಮಿ ಇಪ್ಟಾದ ಆಂದೋಲನ
ವಾಯಿತು. ಈ ಸಂಘವು ಸಾಮ್ರಾಜ್ಯಶಾಹಿ ವಿರುದ್ಧ ಹೋರಾಡುವ
ಹೊಂದಿದ್ದು ಇದರಲ್ಲಿ ಜನರನ್ನು ಒಗ್ಗೂಡಿಸುವ ಪ್ರಯತ್ನ ಮಾಡತೊಡ
ಭಾರತ ಸ್ವಾತಂತ್ರ್ಯ ಪಡೆದ ನಂತರ ತನ್ನ ಹೋರಾಟವನ್ನು ಮುಂದುವರಿ
'ಇಪ್ಟಾ' ಸಾಮಾನ್ಯ ಜನರ ದನಿಯಾಗುವಲ್ಲಿ ಯಶಸ್ವಿಯಾಯಿತು. ಹಾಗಾಗಿ ಅ
ಸಾಮ್ರಾಜ್ಯಶಾಹಿಗಳಂತೆ ವರ್ತಿಸುತ್ತಿದ್ದ ಜಮೀನ್ದಾರರ ಮತ್ತು ರಾಜಕಾರ
ವಿರುದ್ಧ ಹೋರಾಡುವುದು ಅನಿವಾರ್ಯವಾಯಿತು. ಏತತ್ಸಂಬಂಧೀ
ಧೋರಣೆಗಳೊಂದಿಗೆ ಹುಟ್ಟಿದ ಬೀದಿ ರಂಗಭೂಮಿ ನಂತರದ ದಶಕಗಳ
ಉತ್ತಮ ಕಾರ್ಯಗಳನ್ನು ನಿರ್ವಹಿಸುವಲ್ಲಿ ಕಾರ್ಯೋನ್ಮುಖವಾಯಿತು.

ಎಪ್ಪತ್ತರ ದಶಕದಲ್ಲಿ ಕೆಲವು ಆದರ್ಶಗಳ ಕಾರಣದಿಂದ ಮತ್ತು ಕೆ
ಇತರೆ ಕಾರಣಗಳಿಂದ 'ಇಪ್ಟಾ'ದಲ್ಲಿ ಒಡಕುಂಟಾಯಿತು. 'ಇಪ್ಟಾ' ಬಿಡು
ಕಂಡರೂ ಕೂಡ ಕೆಲವು ಉತ್ಸಾಹಿ ಯುವಕರು ಮತ್ತು ಯುವತಿಯರು ಕ
ದೆಹಲಿಯಲ್ಲಿ ೧೯೭೩ರಲ್ಲಿ 'ಜನ ನಾಟ್ಯ ಮಂಚ್' (ಜನಂ) ಸ್ಥಾಪಿಸಿದರು ಮ
ತಮ್ಮ ಹಿಂದಿನ ಕಾರ್ಯಕ್ರಮಗಳನ್ನು ಮುಂದುವರೆಸಿದರು. ಜನರ ಒಳಿತಿ
ತಮ್ಮನ್ನೇ ಮೀಸಲಾಗಿಸಿಕೊಂಡಿದ್ದ ಸಫ್ದರ್ ಹಶ್ಮಿಯಂತಹ ಅನೇಕ ಯುವ
ಇಲ್ಲಿನ ಶೋಷಿತ ವರ್ಗದ ಜನರನ್ನು ತಮ್ಮತ್ತ ಸೆಳೆದು ಅವರ ಶೋಷ
ಕಾರಣ ಮತ್ತು ಪರಿಹಾರಗಳನ್ನು ಸೂಚಿಸುವ ಮಹತ್ವದ ಕೆಲಸ
ಮಾಡತೊಡಗಿದರು. ಪ್ರಸ್ತುತ ಸಮಾಜದಲ್ಲಿ ನಡೆಯುತ್ತಿರುವ ಘಟನೆಗಳನ್ನ
ಅವುಗಳನ್ನೇ ನಾಟಕದ ವಸ್ತುಗಳನ್ನಾಗಿ ಬಳಸಿಕೊಂಡು ತುರ್ತಾಗಿ ಪ್ರದರ್ಶನ
ನೀಡುತ್ತಿದ್ದರು. ಸತ್ಯವನ್ನು ತೆರೆಯುವ ಘಟನೆ. ಸಮಸ್ಯೆಗಳಿಗೆ
ಸ್ಪಂದಿಸುವುದೇ ಬೀದಿ ರಂಗಭೂಮಿಯ ಮುಖ್ಯ ಉದ್ದೇಶವಾಗಿತ್ತು.
ಹಶ್ಮಿ. ಈ ಉದ್ದೇಶವನ್ನು ಬೀದಿ ರಂಗಭೂಮಿಯು ಇನ್ನೂ
ಮುಂದುವರೆಸಿಕೊಂಡು ಬಂದಿದೆ. ಇದಕ್ಕೆ ಹಲವಾರು ಉದಾಹರಣೆ
ಕೊಡಬಹುದು.

ದೆಹಲಿಯ ಮಹಾನಗರ ಸಾರಿಗೆ ಬಸ್ಸಿನ ದರವನ್ನು ಹೆಚ್ಚಿ
ಅಲ್ಲಿನ ಜನರು ಆಕ್ರೋಶಗೊಂಡರು. ತಮ್ಮ ಅಭಿಪ್ರಾಯಗಳನ್ನು ಅಭಿ
ಗೊಳಿಸಲು ಒಂದು ಮಾಧ್ಯಮದ ಅವಶ್ಯಕತೆ ಕಂಡುಬಂದಿತು. ಈ ಅವಕಾ
ಉಪಯೋಗಿಸಿಕೊಂಡ 'ಜನಂ' ಸದಸ್ಯರು ಹತ್ತು ನಿಮಿಷಗಳ ಒಂದು
ನಾಟಕ 'ಡಿ.ಟಿ.ಸಿ. ಕಿ ಧಾಂಧ್ಲಿ'ಯನ್ನು ರಚಿಸಿ ಎಲ್ಲಾ ಬಸ್ ನಿಲ್ದಾಣಗಳ
ಪ್ರದರ್ಶಿಸಿದರು. ಹಾಗಾಗಿ ಸಾವಿರಾರು ಜನರು ಈ ನಾಟಕವನ್ನು ಪ್ರಸಂಶಿ

ಜನರು ದೆಹಲಿ ಮಹಾನಗರ ಸಾರಿಗೆ ಸಂಸ್ಥೆಯ ವಿರುದ್ಧ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿದಾಗ ಪೋಲೀಸಿನವರು ಅವರನ್ನು ಥಳಿಸಿ ಮೆರವಣಿಗೆಯನ್ನು ಚದುರಿಸುವ ಪ್ರಯತ್ನ ಮಾಡಿದರು. ಶಾಂತಿಯುತ ಪ್ರತಿಭಟನಾಕಾರರ ಮೇಲೆ ಪೋಲೀಸಿನವರು ಲಾಟಿ ಪ್ರಹಾರ ಮಾಡಿದರು. ಹೆಣ್ಣುಮಕ್ಕಳನ್ನು ಕೂದಲಿಡಿದು ಎಳೆದಾಡಿದರು. ಇಂತಹ ಸಂದರ್ಭದಲ್ಲಿ ಪ್ರದರ್ಶನಗೊಂಡ ನಾಟಕವು ಸಂಪೂರ್ಣವಾಗಿ ಯಶಸ್ವಿಯಾಯಿತು. ಮಹಾನಗರ ಸಾರಿಗೆ ಸಂಸ್ಥೆಯು ದರವನ್ನು ಹಿಂದಿಸುವುದರ ಜೊತೆಗೆ ನಾಟಕದಲ್ಲಿ, ಪೋಲಿಸರ ದೌರ್ಜನ್ಯವನ್ನು ವಿರೋಧಿಸಲಾಗಿತ್ತು.'

ಇದಾದ ತಿಂಗಳ ನಂತರ ಮಹಿಳಾ ಸಮಸ್ಯೆಗಳನ್ನೊಳಗೊಂಡ 'ಔರತ್' ನಾಟಕವು ಪ್ರದರ್ಶನಗೊಂಡಿತು. 'ಜನಂ' ಅತ್ಯಂತ ಜನಪ್ರಿಯ ನಾಟಕವಾಗಿರುವ 'ಔರತ್' ಈಗಲೂ ಪ್ರದರ್ಶನಗೊಳ್ಳುತ್ತಿರುವುದು ಈ ನಾಟಕದ ಪ್ರಸ್ತುತತೆಯನ್ನು ತೋರಿಸುತ್ತದೆ. 'ಜನಂ'ನ ಇತರೆ ಜನಪ್ರಿಯ ನಾಟಕಗಳೆಂದರೆ 'ತೀನ್ ಕ್ರೋರ್', 'ರಾಜಾ ಕಾ ಬಾಜಾ', 'ಅಯಾ ಚುನಾವ್', 'ಮಶೀನ್', 'ಹತ್ಯಾರೆ', 'ಗಾವೋಂ ಸೆ ಶಹರ್ ತಕ್' ಇತ್ಯಾದಿಗಳು.

'ಜನಂ'ನ ಸ್ಥಾಪನೆಯಲ್ಲಿ ಪ್ರಮುಖ ಪಾತ್ರವಹಿಸಿದ ಸಫ್ದರ್ ಹಶ್ಮಿ ಬೀದಿ ರಂಗಭೂಮಿಯ ಕಾರ್ಯಕರ್ತರಲ್ಲಿ ಅತಿ ಪ್ರಮುಖರು. 'ಜನಂ' ಅತ್ಯಂತ ಕ್ರಿಯಾಶೀಲ ಕಾರ್ಯಕರ್ತರಾಗಿದ್ದ ಸಫ್ದರ್ ಹಶ್ಮಿಯವರು ಬೀದಿ ರಂಗಭೂಮಿಗೆ ನೀಡಿದ ಕೊಡುಗೆಯಿಂದಾಗಿ ಕಲ್ಕತ್ತ ವಿಶ್ವವಿದ್ಯಾಲಯವು ಇವರಿಗೆ ಡಿ.ಲಿಟ್. ಪದವಿಯನ್ನು ನೀಡಿ ಗೌರವಿಸಿತು. ಸಫ್ದರ್ ಹಶ್ಮಿಯವರ ಪ್ರಕಾರ ಬೀದಿ ರಂಗಭೂಮಿಯ ಮೊದಲ ಗುರಿ ಪ್ರತಿಭಟಿಸುವುದು ಮತ್ತು ಜನರನ್ನು ಒಗ್ಗೂಡಿಸಿ ಅವರನ್ನು ಕ್ರಾಂತಿಗೆ ಸಜ್ಜುಗೊಳಿಸುವುದು.

ಹಶ್ಮಿಯವರು ಬೀದಿ ರಂಗಭೂಮಿಯ ಬಗೆಗೆ ಹೊಂದಿದ್ದ ಧೋರಣೆಗಳನ್ನು ಹೀಗೆ ಪಟ್ಟಿ ಮಾಡಬಹುದು :

* ಬೀದಿ ರಂಗಭೂಮಿಯು ಯಾವುದೇ ಸಾಂಪ್ರದಾಯಿಕ ಕಲಾಪ್ರಕಾರಗಳನ್ನು ಹೋಲುವುದಿಲ್ಲ.
* ಚಾರಿತ್ರಿಕ ಅನಿವಾರ್ಯತೆಯಲ್ಲಿ ಹುಟ್ಟಿಕೊಂಡ ಬೀದಿ ರಂಗಭೂಮಿ ಇಪ್ಪತ್ತನೇ ಶತಮಾನದ ಬೆಳವಣಿಗೆ.
* ಬೀದಿ ರಂಗಭೂಮಿಯ ಇತಿಹಾಸವು ನೂರೈವತ್ತು ವರ್ಷಗಳಿಗಿಂತ ಹಿಂದಕ್ಕೆ ಹೋಗಲಾರದು.

* ಬೀದಿ ರಂಗಭೂಮಿಯು ಶೋಷಣೆ ಮಾಡುವ ರಾಜ್ಯಗಳನ್ನು ಸಂಪೂರ್ಣವಾಗಿ ವಿರೋಧಿಸುತ್ತದೆ. ಹಾಗೆಯೇ ಸಾಮಾನ್ಯ ಜನರ ಒಳಿತಿಗೆ ವಿರುದ್ಧವಾದ ರಾಜ್ಯವನ್ನು ಕೂಡ.

* ಬೀದಿ ರಂಗಭೂಮಿಯು ಬಡ ಕಾರ್ಮಿಕರ, ರೈತರ, ವಿದ್ಯಾರ್ಥಿಗಳು ಮತ್ತು ಇತರೆ ಶೋಷಿತ ವರ್ಗದ ಜನರ ದನಿಯಾಗಿದೆ.

* ಬೀದಿ ರಂಗಭೂಮಿಯ ಅತಿಮುಖ್ಯವಾದ ಗುರಿಯೆಂದರೆ ಜನರನ್ನು ಒಗ್ಗೂಡಿಸುವುದು ಮತ್ತು ಅವರನ್ನು ಕ್ರಾಂತಿಗೆ ಸಜ್ಜುಗೊಳಿಸುವುದು.

ಅನೇಕ ಬೀದಿ ನಾಟಕಕಾರರು ಬೀದಿ ರಂಗಭೂಮಿಯ ಬಗೆಗೆ ಇವೇ ಅಂಶಗಳನ್ನು ತಿಳಿಸುತ್ತಾರೆ. ಆಂಧ್ರಪ್ರದೇಶದ ಕ್ರಾಂತಿಕಾರಿ ಕವಿ, ಹಾಡುಗಾರ, ನಟರಾದ ಗದ್ದರ್ ಕೂಡ ಅದೇ ಮಾತನ್ನು ಹೇಳುತ್ತಾರೆ. "ಬೀದಿ ರಂಗಭೂಮಿಯು ವ್ಯವಸ್ಥೆಯನ್ನು ಪ್ರಶ್ನಿಸಬೇಕು (It should question the state)" ಎಂದು ಹೇಳುತ್ತಾರೆ. ಜಮೀನ್ದಾರೀ ಪದ್ಧತಿಯಿಂದ ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವ ಮಟ್ಟಕ್ಕೆ ಬಂದಿದ್ದ ಅನೇಕ ಕೂಲಿ ಕಾರ್ಮಿಕರಿಗೆ ಬೀದಿ ರಂಗಭೂಮಿಯು ಪ್ರತಿಭಟಿಸುವ ಪ್ರಭಲ ಅಸ್ತ್ರವಾಗಿ ಮೂಡಿಬಂದಿತು. ಜಮೀನ್ದಾರರು ಒಂದು ಕಡೆ ಶೋಷಣೆ ಮಾಡಿದರೆ ಮತ್ತೊಂದೆಡೆ ಭಾರತ ಸ್ವತಂತ್ರಗೊಂಡರೂ ಕೂಡ ಹೈದರಾಬಾದ್‌ನ ನಿಜಾಂ ಭಾರತದಲ್ಲಿ ವಿಲೀನಗೊಳ್ಳದೆ ಜನರನ್ನು ಹಿಂಸಿಸತೊಡಗಿದನು. ಇವನನ್ನು ಹತ್ತಿಕ್ಕಲು ನೆಹರೂ ಕಳುಹಿಸಿದ ಸೈನ್ಯ ನಡೆಸಿದ ಯುದ್ಧದಲ್ಲಿ ಅಲ್ಲಿನ ಜನರು ಮತ್ತಷ್ಟು ನೊಂದರು. ಜೀತ ಪದ್ಧತಿಯಿಂದ ರೋಸಿಹೋಗಿದ್ದ ಸಮೂಹ ಎರಡು ಸೈನ್ಯಗಳ ಯುದ್ಧದಿಂದ ಮತ್ತಷ್ಟು ಸಮಸ್ಯೆಗಳನ್ನು ಎದುರಿಸುವಂತಾಯಿತು.

ಆಂಧ್ರದಾದ್ಯಂತ ನಡೆದ ಈ ದಬ್ಬಾಳಿಕೆಗಳು ಕ್ರಾಂತಿಕಾರಿ ಕವಿಗಳನ್ನು ಹುಟ್ಟಿಹಾಕಿತು. ಈ ಕ್ರಾಂತಿಕಾರಿ ಕವಿಗಳು ಮೊದಲ ಬಾರಿಗೆ ಈ ವ್ಯವಸ್ಥೆಯನ್ನು ಎದುರಿಸುವ ಪ್ರಯತ್ನ ಮಾಡಿದರು. ಇವರಿಗೆ ಈ ಸಂದರ್ಭದಲ್ಲಿ ಜನರಲ್ಲಿ ಅರಿವನ್ನು ಮೂಡಿಸುವ ಮತ್ತು ಜನರನ್ನು ಒಗ್ಗೂಡಿಸಿ ಈ ವ್ಯವಸ್ಥೆಯ ವಿರುದ್ಧ ಹೋರಾಡುವ ಒಂದು ಹೊಸ ಮಾಧ್ಯಮದ ಅವಶ್ಯಕತೆ ತಲೆದೋರಿದೆ. ಹಾಗಾಗಿ ಮುಂಬಯಿಯ ಇಪ್ಟಾದ ಪ್ರಭಾವದಿಂದ ಇಲ್ಲಿಯೂ ಕೂಡ 'ಇಪ್ಟಾ' ಪ್ರಾರಂಭವಾಯಿತು. ಎಡಪಂಥೀಯ ಆದರ್ಶಗಳನ್ನು ಹರಡುವುದರ ಜೊತೆಗೆ ಅವರದೇ ಸಮಸ್ಯೆಗಳ ಅರಿವನ್ನು ಮೂಡಿಸುವುದು ಮೊದಲ ಗುರಿಯಾಗಿತ್ತು. ಇಪ್ಟಾದ ನೇರ ಪ್ರೇರಣೆಯಿಂದ ೧೯೪೩ರಲ್ಲಿ 'ಪ್ರಜಾ ನಾಟ್ಯ ಮಂಡಳಿ ಅಸ್ತಿತ್ವಕ್ಕೆ

ಬಂತು. 'ಮುಂದಡುಗು' (ಮೊದಲ ಹೆಜ್ಜೆ) ಪ್ರಜನಾಟ್ಯಮಂಡಲಿಯ ಮೊದಲ ನಾಟಕವಾಗಿದ್ದು ಇದರ ನಿರ್ದೇಶಕರಾದ ಕೊಡೂರಿ ಅಚ್ಚಯ್ಯ ಜನರ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ನಾಟಕದಲ್ಲಿ ಪ್ರತಿಬಿಂಬಿಸಿದ್ದರು.

ಜಮೀನ್ದಾರೀ ಪದ್ಧತಿಯಿಂದ ನೊಂದು ಈ ವ್ಯವಸ್ಥೆಯನ್ನು ಹತ್ತಿಕಲು 'ತೆಲಂಗಾಣ ಸಶಸ್ತ್ರ ಹೋರಾಟ'ವು ಪ್ರಾರಂಭವಾಯಿತು. ಜಮೀನ್ದಾರರ ವಿರುದ್ಧ ಜನರನ್ನು ಎತ್ತಿ ಕಟ್ಟುವ, ಜಮೀನ್ದಾರರ ಶೋಷಣೆಯನ್ನು ಪ್ರಚುರಪಡಿಸುವ ಪ್ರಮುಖ ಗುರಿಯನ್ನು ಹೊಂದಿತ್ತು. ೧೯೬೯ರಲ್ಲಿ ಡಾ. ಎಂ. ಚೆನ್ನಾರೆಡ್ಡಿಯವರ ನಾಯಕತ್ವದಲ್ಲಿ ಗದ್ದರ್‌ರವರು 'ತೆಲಂಗಾಣ ಸಶಸ್ತ್ರ ಹೋರಾಟ'ವನ್ನು ಸೇರಿಕೊಂಡರು. ಇಂದಿಗೂ ಸಾಮಾನ್ಯ ಜನರ ದನಿಯಾಗಿ ಜನಪ್ರಿಯವಾಗಿ ಉಳಿದಿರುವ ಗದ್ದರ್ ತನ್ನ ಹಾಡಿನ ಮೂಲಕ ರಾಜ್ಯವನ್ನೇ ನಡುಗಿಸುವ ದನಿ ಹೊಂದಿದ್ದಾರೆ.

ಆಂಧ್ರದಂತೆ ಕರ್ನಾಟಕದಲ್ಲಿಯೂ ಕೂಡ ಬೀದಿ ರಂಗಭೂಮಿ ಹುಟ್ಟಿಕೊಂಡಿತು. ಆದರೆ ವಿಭಿನ್ನ ಕಾಲಘಟ್ಟದಲ್ಲಿ. ಆಂಧ್ರ ಪ್ರದೇಶಕ್ಕಿಂತ ಸ್ವಲ್ಪ ಸುಧಾರಿತ ಸಾಮಾಜಿಕ ವ್ಯವಸ್ಥೆಯಿರುವ ಕರ್ನಾಟಕದಲ್ಲಿ ಬೀದಿ ರಂಗಭೂಮಿಯು ತಡವಾಗಿ ಹುಟ್ಟಿಕೊಂಡಿತು. ಎಪ್ಪತ್ತರ ದಶಕದಲ್ಲಿ ಕರ್ನಾಟಕ ಎಲ್ಲ ಕ್ಷೇತ್ರಗಳಲ್ಲಿಯೂ ಹೊಸ ವಾತಾವರಣವನ್ನು ಕಂಡಿತು. ೧೯೭೫–೭೭ರ ನಡುವಿನ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ರಾಜ್ಯದ ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳ ನೈಜ ಸ್ವರೂಪಗಳು ಬೆಳಕಿಗೆ ಬಂದವು. ಈ ಹಂತದಲ್ಲಿ ನಡೆದ ಕ್ರಾಂತಿಯು ಹೊಸ ಚಿತ್ರಣವನ್ನು ನಮ್ಮ ಮುಂದಿಟ್ಟಿತು. ದಲಿತ-ಬಂಡಾಯ ಸಾಹಿತ್ಯವು ಉತ್ತುಂಗ ಸ್ಥಿತಿಯಲ್ಲಿತ್ತು. ಕ್ರಾಂತಿಕಾರಿ ಚಳುವಳಿಗಳು ಹುಟ್ಟಿಕೊಂಡವು. ಸಾಂಸ್ಕೃತಿಕ ರಂಗದಲ್ಲಿಯೂ ಕೂಡ ಹೊಸ ಅಲೆ ಎದ್ದಿತು. 'ರಾಷ್ಟ್ರೀಯ ನಾಟಕ ಶಾಲೆ'ಯಿಂದ ಹಿಂದಿರುಗಿ ಬಂದಿದ್ದ ಬಿ.ವಿ. ಕಾರಂತ್, ಕರ್ನಾಟಕ ರಂಗಭೂಮಿಗೆ ಹೊಸ ತಿರುವನ್ನು ನೀಡಿದರು. ಹಾಗೆಯೇ ಕಾರ್ನಾಡ್, ಶ್ರೀರಂಗ, ಚಂಪಾ, ಲಂಕೇಶ್, ಕಂಬಾರ ಮುಂತಾದವರು ಕೂಡ ಕರ್ನಾಟಕದಲ್ಲಿ ಹೊಸ ರಂಗಭೂಮಿಯನ್ನು ಕಟ್ಟುವಲ್ಲಿ ಯಶಸ್ವಿಯಾದರು.

ಮೊದಲು 'ಕಲೆಗಾಗಿ ಕಲೆ' ಎಂಬ ಧೋರಣೆಯಿದ್ದು ಈ ಸಂದರ್ಭದಲ್ಲಿ 'ಜನರಿಗಾಗಿ ಕಲೆ' ಎಂಬ ಹೊಸ ಧೋರಣೆ ಮುಖ್ಯವಾಹಿನಿಗೆ ಬಂದಿತು. 'ಖಡ್ಗವಾಗಲಿ ಕಾವ್ಯ' ಎಂಬ ಡಿ.ಆರ್. ನಾಗರಾಜ್‌ರ ನುಡಿಯು ಕನ್ನಡ ಕಾವ್ಯಲೋಕದಲ್ಲಿ ಹೊಸ ಶಕೆಯನ್ನು ಪ್ರಾರಂಭಿಸಿತು. ಸಾಮಾಜಿಕ ಬದಲಾವಣೆಯನ್ನು ಮುಖ್ಯ ಗುರಿಯಾಗಿಟ್ಟುಕೊಂಡಿದ್ದ ಬೆಂಗಳೂರು

'ಸಮುದಾಯವು' ಒಂದು ತಂಡ. ಶೀಘ್ರವಾಗಿ 'ಸಮುದಾಯ' ಒಂದು ಚಳುವಳಿಯಾಗಿ ಪರಿವರ್ತಿತವಾಯಿತು. ಸಮುದಾಯದ ಮೊದಲ ನಾಟಕವಾಗಿ ಕೆ.ವಿ. ನಾರಾಯಣರ 'ಹುತ್ತವ ಬಡಿದರೆ' ಪ್ರದರ್ಶನಗೊಂಡಿತು. ಈ ನಾಟಕವನ್ನು ಪ್ರಸನ್ನ ನಿರ್ದೇಶಿಸಿದ್ದು ಬಿ.ವಿ. ಕಾರಂತರು ಈ ನಾಟಕಕ್ಕೆ ಸಂಗೀತ ಒದಗಿಸಿದ್ದರು

ಸಮುದಾಯದ ಮೊದಲ ಬೀದಿ ನಾಟಕ 'ಬೆಲ್ಚಿ' ೧೯೭೭ರ ಮೇ ತಿಂಗಳಲ್ಲಿ ಬಿಹಾರದಲ್ಲಿ ನಡೆದ ದಲಿತರ ನರಮೇಧವನ್ನು ಆಧರಿಸಿದ್ದು ಕರ್ನಾಟಕದಾದ್ಯಂತ ಜನಪ್ರಿಯತೆಯನ್ನು ಗಳಿಸಿತು. ಈ ನಾಟಕವನ್ನು ಸಿ.ಜಿ. ಕೃಷ್ಣಸ್ವಾಮಿ ಬರೆದಿದ್ದು, ಈ ನಾಟಕಕ್ಕೆ ದಲಿತ ಕವಿ ಸಿದ್ದಲಿಂಗಯ್ಯನವರ ಹಾಡುಗಳನ್ನು ಅಳವಡಿಸಿಕೊಳ್ಳಲಾಗಿತ್ತು. ಅನೇಕ ಕೊಳಗೇರಿಗಳಲ್ಲಿ ಪ್ರದರ್ಶಿಸಲ್ಪಟ್ಟ ಈ ನಾಟಕಕ್ಕೆ ನಟರನ್ನು ಕೂಡ ಕೊಳಗೇರಿಗಳಿಂದ ಆರಿಸಿಕೊಳ್ಳಲಾಗಿತ್ತು. 'ಪತ್ರೆಸಂಗಪ್ಪ', 'ಭಾರತ ದರ್ಶನ', 'ಜೀತದ ಹುಟ್ಟುರಂಗ' ಮುಂತಾದ ನಾಟಕಗಳು ಸಮುದಾಯದ ಜನಪ್ರಿಯ ನಾಟಕಗಳಾಗಿದ್ದು. ಈ ಎಲ್ಲಾ ನಾಟಕಗಳೂ ಪ್ರಸ್ತುತ ಪ್ರಚಲಿತವಿದ್ದ ಸಾಮಾಜಿಕ ಘಟನೆಗಳನ್ನೇ ವಸ್ತುಗಳನ್ನಾಗಿ ಆರಿಸಿಕೊಳ್ಳಲಾಗಿತ್ತು.

ಸಮುದಾಯವು ನಾಟಕಗಳ ಜೊತೆಗೆ ಅನೇಕ ಸಾಂಸ್ಕೃತಿಕ ಜಾಥಾಗಳನ್ನು ನಡೆಸಿದೆ. ಉದಾ: 'ಜನರ ಮೌಲ್ಯಗಳತ್ತ ಸಾಂಸ್ಕೃತಿಕ ಜಾಥಾ' (೧೯೭೯) 'ರೈತರೆಡೆಗೆ ಸಾಂಸ್ಕೃತಿಕ ಜಾಥಾ' (೧೯೮೦). ಸ್ವಾತಂತ್ರ್ಯದೆಡೆಗೆ ಸಾಂಸ್ಕೃತಿಕ ಜಾಥಾ ಮತ್ತು 'ವಿಶ್ವಶಾಂತಿಯೆಡೆಗೆ ಸಾಂಸ್ಕೃತಿಕ ಜಾಥಾ' (೧೯೮...). ಇತ್ಯಾದಿ ಜಾಥಾಗಳ ಶೀರ್ಷಿಕೆಗಳೇ ಸಮುದಾಯದ ಹಿಡಿದಿರುವ ಸಿದ್ಧಾಂತಗಳನ್ನು ತೋರಿಸುತ್ತವೆ.

ಸಾಮಾಜಿಕ ಕಳಕಳಿಯನ್ನು ಹೊತ್ತು ಬಂದ ಬೀದಿ ರಂಗಭೂಮಿಯು ಮೊದಲಿನಿಂದಲೂ ಸಮಸ್ಯೆಗಳನ್ನು ಎದುರಿಸಬೇಕಾಯಿತು. ರಾಜಕೀಯ ಬದ್ಧತೆಯೊಂದಿಗೆ ಎಡಪಂಥೀಯ ಧೋರಣೆಗಳಿಂದ ಹುಟ್ಟಿಬಂದ ಈ ರಂಗಭೂಮಿ ತನ್ನ ಅಸ್ತಿತ್ವವನ್ನು ಪ್ರಯಾಸದಿಂದ ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ರಾಜಕೀಯ ಪಕ್ಷಗಳನ್ನು ಟೀಕಿಸುವ ರಂಗಭೂಮಿ ರಾಜಕಾರಣಿಗಳ, ಸರ್ಕಾರದ ವಿರೋಧವನ್ನು ಎದುರಿಸಬೇಕಾಯಿತು. ಕೆಲವೊಮ್ಮೆ ರಾಜಕೀಯ ಪ್ರೇರಿತ ಗೂಂಡಾಗಳಿಂದ ಹಲ್ಲೆಗೊಳಗಾಗಬೇಕಾಯಿತು. ಇದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು.

ದೆಹಲಿಯಿಂದ ಸ್ವಲ್ಪ ದೂರದಲ್ಲಿ ಒಂದು ಕಾರ್ಖಾನೆಯ ಎದುರಿನ ಬೀದಿ ನಾಟಕವನ್ನು ಪ್ರದರ್ಶಿಸುತ್ತಿದ್ದ ಸಫ್ದರ್ ಹಶ್ಮಿ ತಂಡವು ಹಲ್ಲೆಗೆ

[illegible]. ತೀವ್ರ ಗಾಯಗೊಂಡ ಹಶ್ಮಿಯವರನ್ನು ಆಸ್ಪತ್ರೆಗೆ ದಾಖಲಿಸಿದರೂ ಪ್ರಯೋಜನವಾಗಲಿಲ್ಲ. ಮಾರಣಾಂತಿಕ ಹಲ್ಲೆ ನಡೆಸಿದ ಗೂಂಡಾಗಳು ರಾಜಕೀಯ ಪ್ರೇರಿತವಾದುದೆಂದು ಮಾರನೆಯ ದಿನವೇ ಪತ್ರಿಕೆಗಳು ಬರೆದವು. ದೇಶದಾದ್ಯಂತ ಪ್ರತಿರೋಧ ವ್ಯಕ್ತವಾಯಿತು. ತನ್ನ ಛಲವನ್ನು ಬಿಡದ ತಂಡ ಸಫ್ದರ್ ಹಶ್ಮಿಯವರ ಪತ್ನಿ ಮೊಲಯಶ್ರೀ ಹಶ್ಮಿಯವರ ನೇತೃತ್ವದಲ್ಲಿ ಮಾರನೆಯ ದಿನವೇ ಅದೇ ಸ್ಥಳದಲ್ಲಿ ಅದೇ ನಾಟಕವನ್ನು ಪ್ರದರ್ಶಿಸಿದರು.

ಹಾಗೆಯೇ ಗದ್ದರ್‌ರವರ ಮೇಲೆ ನಡೆದ ಹಲ್ಲೆ ಕೂಡ. ಮನೆಯಲ್ಲಿದ್ದ ಗದ್ದರ್‌ರವರನ್ನು ಮೂವರು ಬಂದೂಕುದಾರಿಗಳು ಬಂದು ಗುಂಡುಗಳ ಸುರಿಮಳೆಗೈದರು. ಆದರೆ ಅದೃಷ್ಟವಶಾತ್ ಗದ್ದರ್ ಆಸ್ಪತ್ರೆಯಲ್ಲಿ ಬದುಕುಳಿದರು. ಆಂಧ್ರದಾದ್ಯಂತ, ಕವಿಗಳು, ನಟರು, ಬರಹಗಾರರು ಈ ಘಟನೆಯನ್ನು ಖಂಡಿಸಿದರು. ಇದಕ್ಕೂ ಮುನ್ನ ಸರ್ಕಾರವು ಇವರನ್ನು ಬಂಧಿಸುವಲ್ಲಿಯೂ ಕಾರ್ಯೋನ್ಮುಖವಾಗಿತ್ತು. ಅನೇಕ ವರ್ಷಗಳು ತಲೆಮರೆಸಿಕೊಳ್ಳಬೇಕಾದ ಪರಿಸ್ಥಿತಿಯೂ ಎದುರಾಗಿದ್ದನ್ನು ನಾವು ನೋಡಬಹುದು. ಇಂತಹ ಘಟನೆಗಳು ಕೇವಲ ಒಂದು ರಾಜ್ಯಕ್ಕೆ ಸೀಮಿತಗೊಳ್ಳದೆ ಎಲ್ಲ ರಾಜ್ಯಗಳಲ್ಲೂ ನಡೆಯುತ್ತಿವೆ. ಬಿಹಾರ, ಕರ್ನಾಟಕ, ಮಹಾರಾಷ್ಟ್ರ ಮುಂತಾದ ರಾಜ್ಯಗಳು ಈ ಪಟ್ಟಿಯಲ್ಲಿ ಪ್ರಮುಖವಾಗಿ ಸೇರಿಕೊಳ್ಳುತ್ತವೆ.

ಎಂದೆಂದಿಗಿಂತಲೂ ಇಂದು ಪರಿಸ್ಥಿತಿ ಹದಗೆಟ್ಟಿದ್ದು ಈಗ ಜನರನ್ನು ಜಾಗೃತಗೊಳಿಸಬೇಕಾದ ಅಗತ್ಯವಿದೆ. ಅದು ಸಾಂಸ್ಕೃತಿಕ ಲೋಕದ ಮೂಲಕ. ಅದರಲ್ಲಿಯೂ ಬೀದಿ ರಂಗಭೂಮಿ ಮೂಲಕ. ಕೋಮುಗಲಭೆ, ಉಗ್ರವಾದ, ಉದಾರೀಕರಣ, ಶೋಷಣೆ, ರಾಜಕೀಯ ಅಸ್ಥಿರತೆ ಮುಂತಾದವುಗಳು ನಮ್ಮ ಸಮಾಜವನ್ನು ತಲ್ಲಣಗೊಳಿಸಿದ್ದು, ಈಗ ಮತ್ತೊಮ್ಮೆ ಬೀದಿ ರಂಗಭೂಮಿಯ ಯುಗ ಮರುಕಳಿಸಬೇಕಾದ ಅನಿವಾರ್ಯತೆಯಿದ್ದು, ಹಾಗಾಗಲೆಂದು ಆಶಿಸೋಣ.

***

ಬಸವಣ್ಣನವರ ವಚನಗಳ ಮೇಲೆ ಅಕ್ಕಮಹಾದೇವಿಯವರ ವಚನಗಳ ಪ್ರಭಾವ

ಡಾ।। ವಿಜಯಕುಮಾರ ಮಹಾನುಭಾವಿಗಳು

ಈ ಶೀರ್ಷಿಕೆ ಕೆಲವರಿಗೆ ಆಶ್ಚರ್ಯವಾಗಿ ಕಾಣಬಹುದು. ಶ್ರೇಷ್ಠ ವಚನಕಾರರಾಗಿ, ನಾಯಕರಾಗಿ, ಸಾಹಿತ್ಯ ನಿರ್ಮಾಪಕರಾಗಿ ಏನೆಲ್ಲ ಗೌರವಕ್ಕೆ ಭಾಜನರಾಗಿರುವ ಬಸವಣ್ಣನವರು ಅಕ್ಕಮಹಾದೇವಿಯವರ ವಚನಗಳ ಪ್ರಭಾವಲಯದಲ್ಲಿದ್ದಾರೆಯೆ? ಈಗ ವಿವರಗಳಲ್ಲಿ ಪರಿಚಯಿಸುತ್ತೇವೆ.

೧. ಹಿಂಡನಗಲಿ ಹಿಡಿವಡೆದ ಕುಂಜರ
ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯ
ಬಂಧನಕ್ಕೆ ಬಂದ ಗಿಳಿಯು ತನ್ನ
ಬಂಧುವ ನೆನೆವಂತೆ ನೆನೆವೆನಯ್ಯಾ
ಕಂದ ನೀನಿತ್ತಬಾರೆಂದು ನೀವು
ನಿಮ್ಮಂದವ ತೋರಯ್ಯ ಚೆನ್ನಮಲ್ಲಿಕಾರ್ಜುನಾ ಅ.ಮ.ವ. - ೨೧೪

೨. ವನದ ಕೋಗಿಲೆ ಮನೆಗೆ ಬಂದರೆ
ತನ್ನ ವನವನೆನೆವುದ ಮಾಣ್ಬುದೆ?
ಮಲೆಯಾಗಜ ಮನೆಗೆ ಬಂದರೆ
ತನ್ನ ಮಲೆಯ ನೆನೆವುದ ಮಾಣ್ಬುದೆ?
ನಮ್ಮ ಕೂಡಲಸಂಗನ ಶರಣರು ಮರೆದು
ಮರ್ತ್ಯಕ್ಕೆ ಬಂದರೆ ತಮ್ಮ ಆದಿ ಮಧ್ಯಾಂತರಂಗದ
ಲಿಂಗವ ನೆನೆವುದ ಮಾಣ್ಬರೆ? ಬ.ವ. - ೨೮೧

ಪರಮಾತ್ಮನಿಗಾಗಿ ಅಪಾರ ಹಂಬಲದಲ್ಲಿ ಪರಿತಪಿಸಿದ ಅಕ್ಕಮಹಾದೇವಿಯವರು, ಭಕ್ತಿಯ ಪರಾಕಾಷ್ಠೆಯಲ್ಲಿ ನೀನು ದರ್ಶನವಿತ್ತು ನಿನ್ನತ್ತ ಕರೆದುಕೊ, ಕಂದನಾದ ನನ್ನನ್ನು ಎತ್ತಿಕೋ ಎಂದು ಮೊರೆಯಿಡುತ್ತಿದ್ದಾರೆ. ಈ ಭಕ್ತಿಯ ಹಂಬಲವನ್ನು ವಿವರಿಸಲು ಎರಡು ಉಪಮೆಗಳನ್ನು, ದೃಷ್ಟಾಂತ ಕಥೆಗಳನ್ನು ಹೇಳಿದ್ದಾರೆ. ೧. ಹಿಂಡಿನಲ್ಲಿದ್ದ ಆನೆಯನ್ನು ಹಿಡಿದು, ಕಾಡಿನಿಂದ ದೂರ ತರಲಾಗಿದೆ. ಹಿಂಡಿನಿಂದ ಹಿಡಿಯಲಾದ ಆನೆ ಹುಲ್ಲು, ನೀರು ಮುಟ್ಟದೆ, ಕಣ್ಣೀರು ಹಾಕುತ್ತ ತನ್ನ ಕಾಡು, ಬಂಧುಗಳಿಗಾಗಿ ಕಣ್ಣೀರು ಹಾಕುತ್ತಿದೆ. ೨. ತನ್ನ ಹಿಂಡಿನಲ್ಲಿ ಆನಂದವಾಗಿ ಹಾರಾಡಿಕೊಂಡಿದ್ದ ಗಿಳಿಯನ್ನು, ಬಂಧನಕ್ಕೆ ಬೀಳುವಂತೆ ಮಾಡಲಾಗಿದೆ. ಪಂಜರದಲ್ಲಿ ಸಿಕ್ಕಿಬಿದ್ದ ಗಿಳಿ, ಪಂಜರದಲ್ಲಿ ಕಾಲ ಬಳಿಗೆ ಬಂದು

ಬಿದ್ದಿರುವ ಹಣ್ಣು ಹಂಪಲನ್ನು ಮುಟ್ಟದೆ, ಕಂಬನಿ ಮಿಡಿಯುತ್ತ ತನ್ನ ಬಂಧುಗಳನ್ನು ನೆನೆಯುತ್ತಿದೆ. ತಂದೆ-ತಾಯಿಗಳೊಂದಿಗೆ ಸುಖ, ಸಂತೋಷ, ಆನಂದದಲ್ಲಿ ವಿಹರಿಸಿಕೊಂಡಿದ್ದ ಮಹಾದೇವಿಯಕ್ಕನನ್ನು ರಾಜ ಕಷ್ಟಪಟ್ಟು ತನ್ನ ಅರಮನೆಗೆ ಕರೆತರಿಸಿ ಅರಮನೆಯ ನಿರ್ಬಂಧದಲ್ಲಿ ಇಟ್ಟಿದ್ದಾನೆ. ಆನೆ, ಗಿಳಿಗಳಿಗೊದಗಿದ ನಿರ್ಬಂಧದ ಸ್ಥಿತಿಯೇ ಈಗ ಅಕ್ಕಮಹಾದೇವಿಯವರಿಗೂ ಒದಗಿದೆ. ಆನೆ, ಗಿಳಿಗಳು ಬಂಧುಗಳನ್ನು ನೆನೆಯುವಂತೆ ಈಗ ಅಕ್ಕಮಹಾದೇವಿಯವರು ತನ್ನ ಬಂಧು ಚೆನ್ನ ಮಲ್ಲಿಕಾರ್ಜುನ ದೇವನನ್ನು ನೆನೆಯುತ್ತಿದ್ದಾರೆ. ತನ್ನ ತಂದೆ, ತಾಯಿಗಳು ರಾಜನ ಅಂಕುಶಕ್ಕೆ ಹೆದರಿ ಅಸಹಾಯಕರಾಗಿದ್ದಾರೆ. ಈ ಹೊತ್ತಿನಲ್ಲಿ ಮಹಾದೇವಿಯಕ್ಕನನ್ನು ಕಾಯಬೇಕಾದವನು ಪರಮಾತ್ಮನೊಬ್ಬನೆ ಉಳಿದವರಿಗೆ ಮಹಾದೇವಿಯವರನ್ನು ರಕ್ಷಿಸುವ ಶಕ್ತಿಯಿಲ್ಲ. ಇಡೀ ವಚನ ಅಕ್ಕಮಹಾದೇವಿಯವರ ಬದುಕಿನಾಳದಿಂದ ಅಭಿವ್ಯಕ್ತಿಯಾದ ವಚನವಾಗಿದೆ. ಅರಮನೆಗೆ ಕರೆತರಲಾದ ಕಾಲಕ್ಕೆ ಅಕ್ಕಮಹಾದೇವಿಯರು, ಅರಮನೆಯ ಜನರ ಮೋಜಿಗಾಗಿ ಗಿಳಿ, ಆನೆಗಳನ್ನು ಬಂಧನಕ್ಕೆ ಒಳಪಡಿಸಿರುವ ದೃಶ್ಯ ಕಣ್ಣೆದುರಾಯಿತು. ಆನೆ, ಗಿಳಿಗಳೂ ತಮ್ಮ ಬಂಧುಗಳನ್ನು ನೆನೆಯುತ್ತಿವೆ. ಸ್ವಾತಂತ್ರ್ಯಕ್ಕಾಗಿ ಮಿಡಿಯುತ್ತಿವೆ. ಸ್ವಾತಂತ್ರ್ಯ, ಸಂತೋಷಗಳನ್ನು ಕಸಿಯಲಾಗಿದೆ. ನಿರ್ಬಂಧದಲ್ಲಿ ಇರಿಸಲಾಗಿದೆ. ವಿಷಯಾತುರನಾದ ರಾಜನಿಗೆ ಅಕ್ಕಮಹಾದೇವಿಯವರೂ, ಗಿಳಿ-ಆನೆಗಳಂತೆ ಮೋಜಿನ ವಸ್ತು.

ಬಸವಣ್ಣನವರ ವಚನದಲ್ಲೂ ಕೋಗಿಲೆ ಮತ್ತು ಆನೆಗಳು ಬಂಧುಗಳನ್ನು ನೆನೆಯುತ್ತಿರುವ ದೃಷ್ಟಾಂತ ಕಥೆ ಇದೆ. ವನದ ಕೋಗಿಲೆ ಮನೆಗೆ ಬಂದಿದೆ. ಆದರೆ ಅದು ತನ್ನ ವನವನ್ನು ನೆನೆಯುವುದನ್ನು ಬಿಡುತ್ತದೆಯೆ? ಎನ್ನುತ್ತಾರೆ. ಬೆಟ್ಟದ ಆನೆ ಮನೆಗೆ ಬಂದಿದೆ. ಅದು ಕೂಡ ತನ್ನ ಬೆಟ್ಟವನ್ನು ನೆನೆಯದೆ ಬಿಡುತ್ತದೆಯೆ? ಎಂದಿದ್ದಾರೆ. ಕೋಗಿಲೆ ಮತ್ತು ಆನೆಗಳನ್ನು ಹಿಡಿದು ತಂದ ವಿವರ ವಚನದಲ್ಲಿಲ್ಲ. ಆದರೆ ಅಕ್ಕಮಹಾದೇವಿಯರ ವಚನದಲ್ಲಿ ಹಿಡಿಯಲಾದ ವಿವರ ಇದೆ. "ಹಿಂಡನಗಲಿ ಹಿಡಿವಡೆದ ಕುಂಜರ, ಬಂಧನಕ್ಕೆ ಬಂದ ಗಿಳಿ" ಎನ್ನುವಲ್ಲಿ ಆನೆಯನ್ನು ಹಿಡಿಯಲಾದ ವಿವರ, ಗಿಳಿಯನ್ನು ಬಂಧನಕ್ಕೆ ಬರುವಂತೆ ಮಾಡಿದ ವಿವರ ಇದೆ. ಬಸವಣ್ಣನವರ ವಚನದಲ್ಲಿ ಅದಿಲ್ಲ. ಕೋಗಿಲೆ, ಆನೆಗಳು ಮನೆಗೆ ಬಂದರೆ ತನ್ನ ಬಂಧುಗಳ ನೆನೆಯದೆ ಇರುತ್ತವೆಯೇ? ಇದನ್ನು ಕಲ್ಪಿಸಿಕೊಂಡು ಊಹೆಯ ಮೇಲೆ ಹೇಳಿದ್ದಾರೆ. ಬಂದರೆ ಎನ್ನುವಲ್ಲಿ ಬಂದ ಕಾಲಕ್ಕೆ ಎನ್ನುವ ಭವಿಷ್ಯತ್ಕಾಲದ ಊಹೆ ಇದೆ. ಆದರೆ ಅಕ್ಕಮಹಾದೇವಿಯರಲ್ಲಿ ಅದು ವರ್ತಮಾನದಲ್ಲಿ ನಡೆದಿರುವ ಕಥೆ. ಸ್ವತಃ ಅಕ್ಕಮಹಾದೇವಿಯೇ ಬಂಧನಕ್ಕೆ ಒಳಗಾದ ಕಥೆ. ಕೋಗಿಲೆಯನ್ನು ಹಿಡಿಯುವ ಕಥೆ ಯಾರೂ ಎಲ್ಲೂ,

ಗಿಲ್ಲ. ಹೊರಗಿನವರನ್ನು ಒಳಬಿಡುವುದೂ ಇಲ್ಲ. ಅದು ಮನೆಗೆ ಬರುವುದೂ ಇಲ್ಲ. ಅದು ಬೆಳದಿಂಗಳು, ಚಕ್ರವಾಕ ಪಕ್ಷಿಯ ಹಕ್ಕಿ. ಮನುಷ್ಯನಿಂದ ದೂರವೇ ಬದುಕು. ಮಾಗಿಯ, ತಳಿರಿನ ಮರದಲ್ಲಿ ಅವಿತಿರುವ ಪಕ್ಷಿ ಮತ್ತು ಕೋಗಿಲೆಗಳು ಒಟ್ಟಿಗೆ ವಾಸವಾಗುವುದೂ ಇಲ್ಲ. ಇತರೆಲ್ಲ ಪಕ್ಷಿಗಳಂತೆ ಕೋಗಿಲೆಗಳು ಬಿಡಿ ಹುಲ್ಲಾಗಿ ಹಾರುವ ದೃಶ್ಯ ಎಲ್ಲೂ ಕಾಣಸಿಗುವುದಿಲ್ಲ. ಕೋಗಿಲೆಗಳಲ್ಲಿ ಕುಟುಂಬ ವ್ಯವಸ್ಥೆಯೇ ಇಲ್ಲದಿರುವುದರಿಂದ ಕೋಗಿಲೆ ಪಕ್ಷಿ ಸಂತಾನವೇ ಕಡಿಮೆ. ಕೋಗಿಲೆಯು ಗೂಡು ಕಟ್ಟಿ, ಮರಿ ಹಾಕಿ, ಮರಿ ಬೆಳೆಸುವ, ಸಾಕಿ ಸಲಹುವ ತನ್ನ ಮರಿಗಳ ಜೊತೆ ಬೆಳೆಯುವ ಮಾಲಕಿ. ಪ್ರೋತ್ಸಾಹದ ತಾಯ್ತನದ ಸುಖವೇ ಕೋಗಿಲೆಗೆ ತಿಳಿಯದು. ಒಂಟಿಯಾಗಿ ಕೋಗಿಲೆಯ ಸಂತಾನ, ಹಿಂಡು ಹಿಂಡಾಗಿ ಇಲ್ಲ. ಇಂತಹ ಕೋಗಿಲೆ ಒಂಟಿಯಾಗಿ, ಅನಾಥವಾಗಿ ಬೆಳೆಯುವುದೇ ಹೆಚ್ಚು. ಬಂಧುಗಳು, ತಂದೆ, ತಾಯಿಗಳನ್ನೇ ಅರಿಯದ ಕೋಗಿಲೆ ಹಿಂಡಿನಿಂದ ದೂರಾಗುವ ದಾಗಲಿ, ಬಂಧುಗಳನ್ನು ನೆನೆಯುವುದಾಗಲೀ ಇಲ್ಲವೇ ಇಲ್ಲ. ಕೋಗಿಲೆಯು ತಾನು ಮೊಟ್ಟೆಯಿಡುವ ಕಾಲಕ್ಕೆ ಕಾಗೆಯ ಗೂಡನ್ನು ಹುಡುಕಿ, ಕಾಗೆಯ ಮೊಟ್ಟೆಗಳನ್ನು ಕೆಳಕ್ಕೆ ತಳ್ಳಿ, ಕಾಗೆ ಇಲ್ಲದ ವೇಳೆಯಲ್ಲಿ ತನ್ನ ಮೊಟ್ಟೆಯಿಟ್ಟು ಹಾರಿಹೋಗುತ್ತದೆ. ಇಂತಹ ಅನಾಥವಾದ ಜೀವನದ ಕೋಗಿಲೆ ಆ ಅನಾಥ ಭಾವದಿಂದ ಕೂಗುವ ಆಲಿಯೇ ಅದರ ದನಿಗೆ ಸೊಗಸು ತಂದುಕೊಟ್ಟಿರಬೇಕು. ಹುಟ್ಟಿದಂದ ಮನೆಗೆ ಬಂದರೆ ತನ್ನ ಹುಟ್ಟಿದ ನೆನಪಾದ ಬಿಡುವುದೆ" ಇಲ್ಲಿಯೂ ಅನೇಕಾನೇಕ ಒಂಟಿತನದ ಚಿತ್ರಣ ಇಲ್ಲ. ಅಕ್ಕಮಹಾದೇವಿಯವರ ವಚನದಲ್ಲಿ ಅನುಭವದ ಅನುಭವ ಇದೆ. ಆದುದರಿಂದಲೇ ಅಭಿವ್ಯಕ್ತಿಯಲ್ಲಿ ದಿಟ್ಟ ಚಿತ್ರಣ ಇದೆ. ಇದರ ಪ್ರಭಾವದಿಂದ ಹೊಮ್ಮಿದ ವಚನ ಬಸವಣ್ಣನವರ ದಾಗಿರುವುದರಿಂದ ಕೋಗಿಲೆ, ಅನೇಕ ವ್ಯಾಖ್ಯಾನಗಳನ್ನು ನೀಡಿ. ಭರದಿಂದ ಮರೆದು ಮತ್ತೆ ಬಂದರೆ ಅದು, ಮಧ್ಯ, ಅಂತ್ಯದ ನೆಲೆಯನ್ನು ತಿಳಿಯದೆ ಬಿಡುವರೇ ಎನ್ನುತ್ತಾರೆ. ಇಲ್ಲಿ ಕೊನೆ ಬಂದರೆ, ಬೆಳೆಯದೆ ಬಿಡುವರೆ, ಎನ್ನುವ ಭವಿಷ್ಯ ಕಾಲದ ಆಶೆ, ಕಲ್ಪನೆ ಇದೆ. ಆದರೆ ಅಕ್ಕಮಹಾದೇವಿಯ ವಚನ ಊಹೆಯೂ ಅಲ್ಲ, ಕಲ್ಪನೆಯೂ ಅಲ್ಲ, ಅದು ಪ್ರತ್ಯಕ್ಷ ಅನುಭವ. ಸ್ವತಃ ಅಕ್ಕಮಹಾದೇವಿ ತಂದೆಯಿಲ್ಲದ [illegible] ಕಾಲದಲ್ಲಿ ಬೆಳೆಯುತ್ತಿದ್ದರೆ. ಬದುಕಿನ ಅನುಭವದಿಂದ ಮೂಡಿದ ಈ ವಚನದಲ್ಲಿ ಮಹಾದೇವಿಯಕ್ಕ ಬಂದು [illegible] ದವರನ್ನೇ ನೆನೆದಿದ್ದಾರೆ. ಅಲ್ಲಿ ಮನುಷ್ಯ ತನ್ನ ಸಮಾಜದ [illegible] ಇದ್ದಾಗಲೆಲ್ಲ ಎಲ್ಲಿದೆ? ಸ್ವಾತಂತ್ರ್ಯ ಎಲ್ಲಿ? ಪ್ರಶ್ನೆ ಮಾಡುತ್ತಾನೆ? [illegible] ಬೇಡದೇ? ಸ್ವತಂತ್ರ, ಹೇಗಿರಲು ಪ್ರಶ್ನೆ ಸಾಕ ಸಮಾಜದಲ್ಲಿ ಸಮಾನತೆಯ [illegible] ಒಟ್ಟುಗೂಡಿದ [illegible] ಸಮಾಜದ, ಸಮಾನತೆ [illegible] [illegible] ಇಲ್ಲಿ [illegible] ಆದುದರಿಂದಲೇ ಮಹಾತ್ಮರ ಪ್ರಭಾವ

ರಷಿಯಾ, ಚೀನಾದಲ್ಲಿಯೇ ಅರ್ಥ ಕಳೆದುಕೊಳ್ಳುತ್ತಿದೆ. ಮೇಲಿನ ವಚನದಲ್ಲಿ ಅಕ್ಕಮಹಾದೇವಿಯವರು ಮಾರ್ಕ್ಸನಿಗಿಂತ ೭೦೦ ವರ್ಷ ಮುಂಚೆಯೇ ಆನೆಗೇಕೆ ಸ್ವಾತಂತ್ರ್ಯ ಬೇಕೆಂದು ಪ್ರಶ್ನೆ ಹಾಕಿಕೊಂಡಿದ್ದಾರೆ. ಆನೆ ಮತ್ತು ಗಿಳಿಗಳು ಸ್ವಾತಂತ್ರ್ಯ ಪಡೆಯುವುದಕ್ಕಾಗಿ. ಸಮಾನತೆ ಸಾಧಿಸುವುದಕ್ಕಾಗಿ ಅಸಹಕಾರ, ಅಹಿಂಸೆಯ, ಮೌನಕ್ರಾಂತಿಯನ್ನು ಪಕ್ಕಬ್ಬದಲ್ಲಿ ಉಂಟು ಮಾಡುತ್ತಿವೆ. ಪ್ರಕೃತಿಯಲ್ಲಿ ಆನೆ, ಗಿಳಿಗಳ ಮೂಲಕ ಅಸಹಕಾರ, ಅಹಿಂಸೆ, ಮೌನಕ್ರಾಂತಿಯ ಹೋರಾಟದ ದರ್ಶನ ಕಂಡ ಮಹಾದೇವಿಯಕ್ಕ ಅವನ್ನು ಸಾಧಿಸಿಕೊಳ್ಳುವಲ್ಲಿ ಯಶಸ್ಸು ಕಂಡಿದ್ದಾರೆ. ಮೌನಕ್ರಾಂತಿಯ ಅಹಿಂಸಾತ್ಮಕ ಹೋರಾಟವು ಸ್ವಾತಂತ್ರ್ಯ ಮತ್ತು ಸಮಾನತೆಗಾಗಿ ಒಬ್ಬ ಮಹಿಳೆ ನಡೆಸಿದುದಾಗಿದೆ. ಈ ಕ್ರಾಂತಿ ಅಸಹಕಾರದ ಹೋರಾಟದ ಫಲವಾಗಿ ವಿಜಯ ಅಕ್ಕಮಹಾದೇವಿಯರದು. ರಾಜನನ್ನು ಕೊಲ್ಲುವುದಾಗಲಿ, ಹಿಂಸಿಸುವುದಾಗಲಿ ನಡೆಯಲಿಲ್ಲ. ಅವನ ಹೃದಯ ಪರಿವರ್ತನೆಯನ್ನು ತನ್ನ ಹೋರಾಟದಿಂದ ಮಹಿಳೆಯಾದ ಅಕ್ಕಮಹಾದೇವಿ ಸಾಧಿಸಿ ತೋರಿದರು. ಅಕ್ಕಮಹಾದೇವಿ ಕೊಟ್ಟ ಸಮಾಜವಾದದಲ್ಲಿ ಮಹಿಳಾ ಸ್ವಾತಂತ್ರ್ಯ, ಸಮಾನತೆ, ಅರಿವಿನಿಂದ ಹೃದಯ ಪರಿವರ್ತನೆ. ಅಹಿಂಸಾತ್ಮಕವಾದ ಅಸಹಕಾರದ ಹೋರಾಟ ಇದೆ. ಇಪ್ಪತ್ತನೇ ಶತಮಾನದಲ್ಲಿ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿ ನಡೆಸಿದ ಹೋರಾಟವು ಇವೆ. ಗಿಳಿ ಅಕ್ಕಮಹಾದೇವಿಯವರ ಅಸಹಕಾರ ಹೋರಾಟದ ಸಮಗ್ರ ಸ್ವರೂಪವೇ ಆಗಿದೆ.

೨. ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ
ನೆನಹಿಂಗೆ ಮರಹಾಗಿ ಕಾಡಿತ್ತು ಮಯೆ
ಜಗದ ಜಂಗುಳಿಗಳಿಗೆ ಬೆಂಗೋಲನೆತ್ತಿ
ಕಾಡಿತ್ತು ಮಾಯೆ. ಚೆನ್ನಮಲ್ಲಿಕಾರ್ಜುನ
ನೀನೊಡ್ಡಿದ ಮಾಯೆಯ ಮಾಣಿಸ ನಾರಾರು ಅ.ಮ.ವ. ೨೦

ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ
ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ
ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ
ಇದಾವಾವ ಪರಿಯಲ್ಲಿ ಕಾಡಿತ್ತು ಮಾಯೆ
ಈ ಮಾಯೆಯ ಕಳೆವಡೆ ಎನ್ನಳವಲ್ಲ
ನೀವೆ ಬಲ್ಲಿರಿ ಕೂಡಲಸಂಗಮದೇವ ಬ.ವ. ೮

ಮಹಾದೇವಿಯಕ್ಕ ಮತ್ತು ಬಸವಣ್ಣ ಇವರ ಎರಡೂ ವಚನಗಳು ಮಾಯೆಯ ವಿಚಾರವಾಗಿ ಹೇಳುತ್ತಿವೆ. ಅಕ್ಕಮಹಾದೇವಿಯವರ ವಚನದಲ್ಲಿ ಮಾಯೆಯನ್ನು

ಅಂತರಂಗದ ವಿವಿಧ ಸ್ತರಗಳಲ್ಲಿ ಹೇಗೆ ವ್ಯಾಪಿಸಿಕೊಂಡಿದೆ ಎಂದು ವಿವರಿಸಲಾಗಿದೆ. ಬಸವಣ್ಣನವರ ವಚನದಲ್ಲಿ ಮಾಯೆಯನ್ನು ಬಹಿರಂಗದಲ್ಲಿ ಕೇವಲ ಹೆಣ್ಣಿನಲ್ಲಿ ಮಾತ್ರ ಕಾಣಲಾಗಿದೆ. ಅಕ್ಕಮಹಾದೇವಿಯ ವಚನದಲ್ಲಿ ಮಾಯೆಯನ್ನು ಗುರುತಿಸುವಲ್ಲಿ ಅರಿವಿನ ವಿಸ್ತಾರ ಇದೆ. ಬಸವಣ್ಣನವರ ವಚನದಲ್ಲಿ ಅದಿಲ್ಲ. ತಾಯಿಯನ್ನು, ಮಗಳನ್ನು, ಮಡದಿಯನ್ನು ಮಾಯೆ ಎಂದು ಹೇಳಿಬಿಟ್ಟಿದ್ದಾರೆ. ಇಂತಹ ವಿಚಾರಗಳು ಬಸವಣ್ಣನವರಿಂದ ಬಂದಿದೆ ಎಂದರೆ ಆಶ್ಚರ್ಯವಾಗುತ್ತದೆ. ಹಡೆದ ತಾಯಿ ಮಾಯೆ, ಪಡೆದ ಮಗಳು ಮಾಯೆ, ಕೂಡಿದ ಪತ್ನಿ ಮಾಯೆ ಎಂದಿದ್ದಾರೆ. ಈ ಮಾಯೆ ಈ ಪರಿಯಲ್ಲಿ ಕಾಡಿದೆ ಎನ್ನುತ್ತಾರೆ. ಹೆಣ್ಣನ್ನು ಮಾಯೆ ಎಂದು ಸಾಂಪ್ರದಾಯಿಕ ಆಲೋಚನೆಯಲ್ಲಿ ಬಸವಣ್ಣನವರೂ ಹೇಳಿರುವುದು ಆಶ್ಚರ್ಯವಾಗಿದೆ. ಆದರೆ ಅಕ್ಕಮಹಾದೇವಿ ಯವರು ಹೀಗೆ ಮಾಯೆಯನ್ನು ಬಹಿರಂಗದಲ್ಲಿ ಗುರುತಿಸುವುದಕ್ಕೆ ಸೀಮಿತವಾಗದೆ, ಗುಣ - ಸ್ವರೂಪಗಳಲ್ಲಿ, ಅರಿವಿನ ವಿಸ್ತಾರದಲ್ಲಿ ಗುರುತಿಸಿದ್ದಾರೆ. ಅಕ್ಕಮಹಾ ದೇವಿಯವರು ಮಾಯೆಯನ್ನು ಬಹಿರಂಗದಲ್ಲಿ ಗುರುತಿಸುವುದಕ್ಕಿಂತ ಅಂತ ರಂಗದ, ಕಾಯದ ಗುಣಸ್ವಭಾವ, ಸ್ವರೂಪದಲ್ಲಿ ಗುರುತಿಸಿದ್ದಾರೆ. ಈ ಕಾಯಕ್ಕೆ ನೆಳಲು ಬೀಳುತ್ತದೆ. ಈ ನೆಳಲು ಕೇವಲ ನೆರಳಾಗದೆ ಕಾಯದ ಮೂಲ ಗುಣಗಳಾದ ಹಸಿವು, ಕಾಮ, ನಿದ್ರೆ, ಮುಪ್ಪು, ಸಾವು, ರೋಗ, ಅರಿಷಡ್ವರ್ಗ, ವಿಷಯಾಪೇಕ್ಷೆಯ ಹಂಬಲವಾಗಿದೆ. ಇವೆಲ್ಲವೂ ದೇಹ ಮೂಲದಿಂದ ಬಂದವು. ದೇಹ ಹೋದರೆ ಇವೆಲ್ಲವೂ ಹೋಗಿ ಬಿಡುತ್ತದೆ. ಇವೆಲ್ಲವೂ ದೇಹಕ್ಕೆ ಒಡ್ಡಿದ ಮಾಯೆಗಳು. ಮಾಯೆ ಎಂದರೆ ಬೇಕು ಎನ್ನುವ ಆಶೆಯನ್ನು ಹುಟ್ಟಿಸುವುದು. ತೃಪ್ತನಾದಾಗ ಹಿಮ್ಮೆಟ್ಟುವುದು. ಮತ್ತೆ ಬೇಕು ಎನ್ನುವ ಆಶೆ ಮೇಲೇಳುವುದೇ ಆಗಿದೆ. ಈ ಮಾಯೆಯು ಕಾಯದ; ಪ್ರಾಣ, ಮನಗಳಿಗೆ ನೆನಹು-ಮರವಾಗಿ ಕಾಡುತ್ತಲೇ ಇದೆ. ಈ ಜಗತ್ತಿನ ಯಾವ ಜೀವ ಜಾಲವೂ ಈ ಮಾಯೆಯನ್ನು ಗೆಲಲಾರರು. ಇದು ಚೆನ್ನಮಲ್ಲಿಕಾರ್ಜುನ ಮನುಷ್ಯನ ಕಾಯಕಕ್ಕಿಡ್ಡ ತೊಡರು. ಮಾಯೆಯ ವಿರಾಟ ಸ್ವರೂಪವನ್ನು ಅರಿತು ಮನುಷ್ಯನ ಬದುಕಿಗೆ, ದೇಹಕ್ಕೆ ಬರೆದಿಟ್ಟ ಭಾಷ್ಯವಾಗಿದೆ, ಈ ವಚನ. ದೇಹದ ಗುಣ, ಸ್ವರೂಪವನ್ನು ಆಳಗಲದಲ್ಲಿ ಒಳಹೊಕ್ಕು ನೋಡಿದ ಅನುಭವ ಇಲ್ಲಿ ವಿಸ್ತಾರವಾಗಿದೆ. ಮಾಯೆಯ ಈ ವ್ಯಾಪ್ತಿಯ ಅರಿವು ಬಸವಣ್ಣನವರ ವಚನದಲ್ಲಿ ಇಲ್ಲ. ಮಾಯೆಯನ್ನು ಅಕ್ಕ ನೋಡಿದ ದೃಷ್ಟಿಯೇ ಬೇರೆ. ಬಸವಣ್ಣ ಹೇಳಿದ ವಿವರವೇ ಬೇರೆ. ಅಕ್ಕಮಹಾದೇವಿಯವರು ಮಾಯೆಯ ವಿಚಾರವಾಗಿ ಹೇಳಿದ ವಚನದ ಪ್ರಭಾವದಿಂದಲೇ ಬಸವಣ್ಣನವರೂ ಮಾಯೆಯ ವಿಚಾರವಾಗಿ ವಚನದಲ್ಲಿ ಹೇಳಿದರು. ಆದರೆ ಮಾಯೆಯ ಬಗೆಗಿನ ಅಭಿವ್ಯಕ್ತಿ, ಆಲೋಚನೆಯೇ ನಿರಾಕರಣೆಯಾಗಿಬಿಡುತ್ತದೆ. ಆದರೆ ಮಾಯೆಯ ಬಗೆಗೆ ಅಕ್ಕಮಹಾದೇವಿಯಂತೆ

ಅನೇಕ ವಚನಗಳಲ್ಲಿ ಪ್ರಸ್ತಾಪಿಸಿರುವ ಪ್ರಭುದೇವರು ಮಾಯೆಯನ್ನು ಅರಿವಿನ ನೆಲೆಯಲ್ಲಿಯೇ ಗುರುತಿಸಿದ್ದಾರೆ.

ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ
ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲ
ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರಾ.

ಮಾಯೆಯೆಂಬುದು ಹೆಣ್ಣಿನಲ್ಲಿ ಇಲ್ಲ, ಮಣ್ಣಿನಲ್ಲಿ ಇಲ್ಲ, ಹೊನ್ನಿನಲ್ಲಿ ಇಲ್ಲ. ಅದು ಮನದ ಮುಂದೆ ಆಶೆಯಾಗಿ ಇದೆ ಎಂದು ಹೇಳಿದ್ದಾರೆ. ಆಶೆಯನ್ನು ಗೆದ್ದರೆ ಮಾಯೆಯೂ ಹೋಗಿಬಿಡುತ್ತದೆ.

೩. ಅರಿಸಿನವನೆ ಮಿಂದು ಹೊಂದೊಡಿಗೆಯನೆ ತೊಟ್ಟು
ದೇವಂಗವನುಟ್ಟ ಪುರುಷ ಬಾರ ಪುಣ್ಯ ರತ್ನವೆ ಬಾರಾ
ನಿನ್ನ ಬರವೆನ್ನಸುವಿನ ಬರವು ಬಾರಯ್ಯ
ಚೆನ್ನಮಲ್ಲಿಕಾರ್ಜುನಯ್ಯ ಬಂದಾನೆಂದು
ಬಟ್ಟೆಗಳ ನೋಡಿ ಬಾಯಾರುತಿಹೆನು. ಅ.ಮ.ವ. ೨೧೮

ಅರಿಸಿನವನೆ ಮಿಂದು ಹೊಂದೊಡಿಗೆಯನೆ ತೊಟ್ಟು
ಪುರುಷನ ಒಲವಿಲ್ಲದ ಲಲನೆಯಂತಾಗಿದ್ದೆನಯ್ಯ
ವಿಭೂತಿಯನೆ ಪೂಸಿ ರುದ್ರಾಕ್ಷಿಯನೆ ಕಟ್ಟಿ
ಶಿವ ನಿಮ್ಮ ಒಲವಿಲ್ಲದ ಲಲನೆಯಂತೆ ಆಗಿದ್ದೆನಯ್ಯ
ಕೆಟ್ಟು ಬಾಳುವರಿಲ್ಲ ನಿಮ್ಮವರ ಕುಲದಲ್ಲಿ
ನೀನೊಲಿದಂತೆ ಸಲಹೊ ಕೂಡಲಸಂಗಮದೇವಾ ಬ.ವ. ೮೮

ಅನುಮಾನವೇ ಇಲ್ಲ. ಅಕ್ಕಮಹಾದೇವಿಯವರ ನೇರ ವಚನದ ಪ್ರಭಾವ ಈ ವಚನ. ಮೊದಲ ಸಾಲು ಅಕ್ಕಮಹಾದೇವಿಯವರ ವಚನದ ಸಾಲೇ ತದ್ವತ್ತಾಗಿ ಬಂದಿದೆ. ಮುಂದೆ ವಿವರಗಳಲ್ಲಿ ಬೇರೆ ಆದರೂ ಎರಡೂ ವಚನಗಳ ಆಶಯ ಒಂದೆ ಪರಮಾತ್ಮನ ಅನುಗ್ರಹ ಸಂಪಾದನೆ ಮಾಡುವುದೇ ಆಗಿದೆ. ಮೊದಲು ಅಕ್ಕಮಹಾದೇವಿಯವರ ವಚನಗಮನಿಸುವ. ಮಹಾದೇವಿಯಕ್ಕ ಪರಮಾತ್ಮನಿಗಾಗಿ ಎಷ್ಟೆಲ್ಲ ಹಂಬಲಿಸಿದ್ದಾರೆ, ಎನ್ನುವುದನ್ನು ಈ ವಚನ ಹೇಳುತ್ತದೆ. ಅರಿಸಿನದೊಂದಿಗೆ ಮೀಯುವುದು ಭಾರತೀಯ ಮಹಿಳೆಯರಲ್ಲಿ ನಿತ್ಯದ ರೂಢಿಯಾಗಿದೆ. ಹಬ್ಬ, ಮದುವೆ, ಶುಭ ಸಮಾರಂಭದ ಸಂದರ್ಭಗಳಲ್ಲಿಯಂತೂ ಅರಿಸಿನ ಹಚ್ಚಿ ಮಜ್ಜನ ಮಾಡುವುದು ಒಂದು ಆಚರಣೆಯಾಗಿದೆ. ಮಿಂದು ಮಡಿಯುಟ್ಟು ರತ್ನಾಭರಣಗಳನ್ನು ತೊಟ್ಟಿದ್ದಾರೆ. ಉಟ್ಟ ವಸ್ತ್ರ ರೇಷ್ಮೆಯ ಪತ್ತಲ. ಬಹುಶಃ ಈ ವಚನ ತಂದೆ ತಾಯ್ತಳು ಮಹಾದೇವಿಯರಿಗೆ ಲಗ್ನದ

[illegible] ತೆಗೆದ ಸಂದರ್ಭದಲ್ಲಿ ಅಭಿವ್ಯಕ್ತಿಯಲ್ಲಿದ್ದ ಕಾಲಕ್ಕಿರಬೇಕು. ಪುರುಷ [illegible] ಬಾರದ. [illegible] ಲಗ್ನವಾಗದ ಅವಿವಾಹಿತ ಕನ್ಯೆ. [illegible] ಮಾಡಿದ್ದಾರೆ. [illegible] ನಿನ್ನ [illegible] ನನ್ನ [illegible] ದಾರಿಗಳನ್ನು ನೋಡುತ್ತ [illegible] ಪರಮಾತ್ಮನಿಗೆ [illegible] ಬೇಕೆಂಬ [illegible] ಮಹಾದೇವಿಯಕ್ಕ ಇದ್ದಾರೆ.

ಬಸವಣ್ಣನವರು ಸತಿಯರಾದ ಗಂಗಾಂಬಿಕೆ, [illegible] ತನಗೆ ಇಬ್ಬರು ಪತ್ನಿಯರಿದ್ದಾರೆ. ಬಸವಣ್ಣ ಬಿಜ್ಜಳನ ಭಂಡಾರಿಯಾದ ಮೇಲೆ ಅರಮನೆಯ ಕಾಯಕ, ಇತ್ತ ಶರಣರ ಸಂದಣಿ ಇವುಗಳ ಮಧ್ಯದಲ್ಲಿ ಪೂಜೆ, ಭಕ್ತಿಗಾಗಲಿ, ಮನೆಯ ಮಡದಿಯರೊಂದಿಗೆ ವಿರಾಮವಾಗಿ [illegible] ಲಾಗಲಿ ವೇಳೆಯೇ ಇಲ್ಲ. ಬಸವಣ್ಣನವರು ದಿನೇ ದಿನೇ [illegible] ತೊಡಗಿದಂತೆಲ್ಲ ಸ್ವತಃ ಪತ್ನಿಯರೊಂದಿಗೆ ಏಕಾಂತ ಕಳೆಯಲು ವೇಳೆ ಇಲ್ಲದಂತಾಗಿಬಿಟ್ಟಿತು. ಅಪಾರ ಪ್ರೀತಿ, ಪ್ರೇಮದಿಂದ ಪತ್ನಿಯರಿಬ್ಬರು ಈ ದಿನಗಳಲ್ಲಿ ಬಸವಣ್ಣನವರೊಂದಿಗೆ ಏಕಾಂತದಲ್ಲಿರಲು [illegible]ವಾಗಲಿಲ್ಲ. ಪತ್ನಿಯರಿಬ್ಬರೂ ಸತ್ಯ ಅರಿಸಿನ ಮಜ್ಜನ ಮಾಡಿ, ದೇವಾಂಗವಸ್ತ್ರ, [illegible] ತೊಟ್ಟು ಲಿಂಗಪೂಜೆಯಲ್ಲಿ ಕಾಲ ಕಳೆಯುತ್ತಿದ್ದರು. ಅವರ ಈ ಪೂಜೆ, ಭಕ್ತಿ ಪತಿ ಬಸವಣ್ಣನ ಜೊತೆ ಇರಬೇಕೆಂಬ ಹಂಬಲ [illegible]. ಆದರೆ ಬಸವಣ್ಣನವರಿಗೆ [illegible] ಈ ಆತುರ, ಕಾತುರಗಳನ್ನು ಗಮನಿಸಿ ಬಸವಣ್ಣ [illegible] ವಚನದ ಪ್ರೇರಣೆ ಕಾರಣವಾಗಿ ಈ ವಚನ [illegible]. ಈ ವಚನ ಬಸವಣ್ಣನ ಬದುಕಿನ ದಟ್ಟ ಅನುಭವವೇ [illegible] ಅತ್ತ ವಚನದಲ್ಲಿ ಅಕ್ಕಮಹಾದೇವಿಯವರು ಚೆನ್ನಮಲ್ಲಿಕಾರ್ಜುನನಿಗೆ [illegible] ಚಿತ್ರಿಸಿದೆ. ಇಲ್ಲಿ ಪತ್ನಿಯರಿಬ್ಬರು ಪರಮಾತ್ಮನಿಗಾಗಿ ಮತ್ತು ತನಗಾಗಿ [illegible] ಅನುಭವ ಇದೆ. ವಿಭೂತಿಯನೆ ಪೂಸಿ ರುದ್ರಾಕ್ಷಿಯನೆ ಕಟ್ಟಿ ಶಿವ ನಿಮ್ಮ ಒಲವಿಲ್ಲದ ಬಲನೆಯಂತಾಗಿದ್ದೆನಯ್ಯ. ಈ ವಚನದ ಸಾಲುಗಳು ನೇರವಾಗಿ ಅಕ್ಕಮಹಾದೇವಿಯವರಿಗೆ, ನೀಲಾಂಬಿಕೆ, ಗಂಗಾಂಬಿಕೆಯರಿಗೆ ಅನ್ವರ್ಥವಾಗಿದೆ. ಪರಮಾತ್ಮನದ ಹಂಬಲದಲ್ಲಿ ವಿಭೂತಿ ಧರಿಸಿ, ರುದ್ರಾಕ್ಷಿ ಕಟ್ಟಿ ಶಿವನಿಗೆ ಮೀಸಲಾದ ಸತಿಯರಾಗಿ ಉಪಾಸನೆಯಲ್ಲಿದ್ದಾರೆ. ಬಸವಣ್ಣ ಲೋಕಕ್ಕೆ ಗಂಡು. ಆದರೆ ಕಾಯಸತಿ, ಜೀವಪತಿ. ಶರಣಸತಿ, ಲಿಂಗಪತಿ ಭಾವದಲ್ಲಿ ಪರಮಾತ್ಮನಿಗಾಗಿ ಕರೆದಿದ್ದಾರೆ. ಕೆಟ್ಟು ಹೋದವರಿಲ್ಲ ಎಮ್ಮವರ ಕುಲದಲ್ಲಿ. ಭಕ್ತಿ ಮಾಡಿ ಕೆಟ್ಟವರು ಲೋಕದಲ್ಲಿ ಒಂದೂ ಉದಾಹರಣೆ ಇಲ್ಲ. ಭಕ್ತಿ

ಪಥದಲ್ಲಿ ಭಕ್ತಿ ಮಾಡಿ ಪರಮಾತ್ಮನನ್ನು ಪಡೆದ ಪರಂಪರೆಯ ಶರಣರೇ ಇದ್ದಾರೆ. ನೀನೊಲಿದಂತೆ ಸಲಹೊ. ಭಕ್ತಿ ಮಾಡುವುದು ನನ್ನ ಹಂಬಲ. ಒಲಿಯುವುದು ನಿನಗೆ ಬಿಟ್ಟಿದ್ದು. ಪ್ರೀತಿ ಭಕ್ತಿಯಾಗಿದೆ. ಅಕ್ಕಮಹಾದೇವಿಯರಲ್ಲಿ ಪ್ರೀತಿ ಇದೆ. ಪ್ರೇಮ ಇದೆ. ವಿರಹ ಇದೆ. ಹರನ ಹಂಬಲದ ಅನಂತ ಭಕ್ತಿ ಇದೆ. ಹರನೇ ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ಭಕ್ತಿ ಮಾಡಿದ್ದೆದೆ. ಅಕ್ಕಮಹಾದೇವಿಯವರು ಹೆಣ್ಣಾಗಿರುವುದರಿಂದ ಅವಿವಾಹಿತ ನವ ತರುಣಿ ಪರಮಾತ್ಮನನ್ನೇ ಪತಿಯನ್ನಾಗಿ ಪಡೆಯಬೇಕೆಂಬ ಹಂಬಲವಲ್ಲಿ ತಮ್ಮನ್ನೇ ಆ ಜೀವನಕ್ಕೆ ಕೊಟ್ಟುಕೊಂಡುದರಿಂದ ವಚನ ಅಧಿಕೃತವಾಗಿದೆ. ದಟ್ಟ ಅನುಭವ ಇದೆ. ಬಸವಣ್ಣನವರ ವಚನ ಶರಣರ ಅನುಭಾವ ಮಾರ್ಗದ ಸತಿ-ಪತಿ ಭಾವದ ಶರಣಪತಿ-ಲಿಂಗಪತಿ ಭಾವದ ವಚನವಾಗಿದೆ.

***

‘ಕೆಳದಿ ನೃಪ ವಿಜಯ’ ಕೃತಿಯಲ್ಲಿ ಸ್ಥಳನಾಮಗಳು – ಒಂದು ವಿವೇಚನೆ

ಶ್ರೀ ಜಿ. ಎಸ್. ಉಪಾಧ್ಯ

ಲಿಂಗಣ್ಣಕವಿ ವಿರಚಿತ ‘ಕೆಳದಿ ನೃಪ ವಿಜಯ’ ಕೃತಿಗೆ ಒಂದು ಐತಿಹಾಸಿಕ ಮಹತ್ವವಿದೆ. ಪಂಪ, ರನ್ನ, ನಾಗಚಂದ್ರ ಮೊದಲಾದ ಕವಿಗಳ ಕೃತಿಗಳಂತೆ ಕೆಳದಿ ನೃಪ ವಿಜಯವೂ ಚಂಪೂ ಕಾವ್ಯವಾಗಿದೆ. ಆದರೂ ಮೇಲೆ ಹೇಳಿದ ಕವಿಗಳ ಕೃತಿಗಳಿಗಿಂತಲೂ ಪ್ರಸ್ತುತ ಕೃತಿ ತುಸು ಭಿನ್ನವೂ ವೈವಿಧ್ಯಮಯವೂ ಆಗಿದೆ. ಕಾವ್ಯಾಂಶಕ್ಕಿಂತ ಚರಿತ್ರಾಂಶಕ್ಕೇ ಕವಿ ಇಲ್ಲಿ ಹೆಚ್ಚು ಒತ್ತು ಕೊಟ್ಟಿದ್ದಾನೆ. “ಮೊದಲಿನಿಂದ ಕೊನೆಯವರೆಗೆ ಮುಖ್ಯವಾಗಿ ಕೆಳದಿಯ ಅರಸರ ಚರಿತ್ರೆಯೂ ಪ್ರಾಸಂಗಿಕವಾಗಿ ಚಿತ್ರದುರ್ಗದ ನಾಯಕರು, ಬೇಲೂರ ಅರಸರು, ವಿಜಯನಗರದ ಅರಸರು, ಷಾಹಿರಾಜರು, ಮರಾಠೆ ರಾಜರು, ಡಿಲ್ಲಿಯ ಸುಲ್ತಾನರು ಇವರ ವಿಷಯವು ಹೇಳಿದೆ”[1] ಒಟ್ಟಿನಲ್ಲಿ ಐತಿಹಾಸಿಕ ಕಾವ್ಯವಾಗಿಯೇ ಈ ಕೃತಿ ಮೈ ತಾಳಿದೆ. “ಕೆಳದಿ ಅರಸರ ವಂಶ ಪರಂಪರೆಯನ್ನು ಕುರಿತು ರಚಿಸಿದ ‘ಕೆಳದಿನೃಪ ವಿಜಯ’ವು ಕೆಳದಿ ಸಂಸ್ಥಾನದ ಸಮಕಾಲೀನ ಕೃತಿಗಳಲ್ಲಿ ಶ್ರೇಷ್ಠ ಐತಿಹಾಸಿಕ ಆಕರ ಗ್ರಂಥವೆನಿಸಿದೆ”[2] ಎಂಬ ಮಾತಿನಲ್ಲಿ ಉತ್ಪ್ರೇಕ್ಷೆಯೇನಿಲ್ಲ. ಕೆಳದಿ ಅರಸರಿಗೆ ಸಂಬಂಧಿಸಿದ ನೂರಾರು ಶಾಸನಗಳು[3] ಲಭ್ಯವಾಗಿವೆ. ಶಾಸನಗಳ ಒಳಗೊಂಡಿರುವ ವಿಚಾರಕ್ಕೂ; ಕಾವ್ಯದಲ್ಲಿ ನಿರೂಪಣೆಗೊಂಡಿರುವ ಸಂಗತಿಗಳಿಗೂ ಸಾಕಷ್ಟು ಸಾಮ್ಯ ಇದೆ. ಈ ಕಾರಣದಿಂದಲೇ ‘ಕೆಳದಿ ನೃಪ ವಿಜಯ’ ಕೃತಿಯನ್ನು ‘ಐತಿಹಾಸಿಕ ಕಾವ್ಯ’ ಎಂದು ವಿದ್ವಾಂಸರು ಒಪ್ಪಿಕೊಂಡಿದ್ದಾರೆ.

ಹದಿನೆಂಟನೆಯ ಶತಮಾನದಲ್ಲಿ ರಚನೆಯಾದ ಈ ಕೃತಿಯು ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದಲೂ ಮಹತ್ವದ ಸ್ಥಾನಮಾನವನ್ನು ಪಡೆದುಕೊಂಡಿದೆ. ಕೆಳದಿ ಸಂಸ್ಥಾನದ ಅರಸರ ಜೀವನ ಸಾಧನೆಯನ್ನು ಹೇಳುವುದೇ ಈ ಕೃತಿಯ ಮುಖ್ಯ ಉದ್ದೇಶ ಎಂಬುದೇನೋ ನಿಜ. ಇದರ ಜತೆ ಜತೆಗೆ ಆ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹೀಗೆ ಇನ್ನನೇಕ ಕ್ಷೇತ್ರಗಳ ಸಂಬಂಧಪಟ್ಟ ವಿಚಾರಗಳು ಈ ಕೃತಿಯಲ್ಲಿ ದಾಖಲಾಗಿದೆ. ಅಂದಿನ ಜನ ಸಾಮಾನ್ಯರ ಜೀವನ ವಿಧಾನಗಳಿಗೆ, ಅವರ ನಂಬಿಕೆ, ಆಚರಣೆ ಮೊದಲಾದ ಅಂಶಗಳ ಮೇಲೂ ಈ ಕೃತಿ ಹೊಸ ಬೆಳಕು ಚೆಲ್ಲುತ್ತದೆ.

ಸ್ಥಳನಾಮಗಳ ಅಧ್ಯಯನದ ಸಂದರ್ಭದಲ್ಲಿಯೂ ಕೆಳದಿ ನೃಪವಿಜಯ ಕೃತಿಗೆ ವಿಶೇಷ ನೆಲೆಬೆಲೆಯಿದೆ. ಕರ್ನಾಟಕಕ್ಕೆ ಸಂಬಂಧಿಸಿದ ಸುಮಾರು ನಾಲ್ಕು ನೂರರಷ್ಟು ಸ್ಥಳನಾಮಗಳೂ ಈ ಕೃತಿಯಲ್ಲಿ ದಾಖಲಾಗಿವೆ. "ಭಾರತದ ಇತಿಹಾಸದಲ್ಲಿ ಹೆಸರು ಮಾಡಿದ; ಕರ್ನಾಟಕದ ಹೊರಗಿರುವ ನೂರಾರು ಸ್ಥಳ ನಾಮಗಳ ಉಲ್ಲೇಖವೂ ಈ ಕೃತಿಯಲ್ಲಿ ಬಂದಿದೆ. ಇಲ್ಲಿ ದಾಖಲಾದ ಸ್ಥಳನಾಮ ಗಳಿಂದ ಕೆಳದಿ ಸಂಸ್ಥಾನದ ಅರಸರ ಏಳುಬೀಳುಗಳನ್ನು ಕಲ್ಪಿಸಿಕೊಳ್ಳಬಹುದು. ಅವರ ರಾಜ್ಯದ ಗಡಿರೇಖೆಗಳು ಹಿಗ್ಗಿ ಕುಗ್ಗಿದ ಕತೆಯನ್ನು ಈ ಸ್ಥಳನಾಮಗಳು ಹೇಳುತ್ತವೆ. ಇಲ್ಲಿ ಅಧಿಕಾರಕ್ಕೆ ಬಂದ ಅರಸರು ಕೈಗೊಂಡ ದಂಡಯಾತ್ರೆಗಳ ನಕ್ಷೆಯನ್ನು ಈ ಸ್ಥಳನಾಮಗಳ ಮೂಲಕ ಚಿತ್ರಿಸಬಹುದು. ಈ ರಾಜವಂಶದ ಕೈಕೆಳಗಿದ್ದ ಸಾಮಂತ ಅರಸರು, ಅವರ ಕೋಟೆಗಳು, ಅಂದು ಹೆಸರು ಮಾಡಿದ್ದ ಪುಣ್ಯ ಕ್ಷೇತ್ರಗಳು, ಅಂದು ಚಾಲ್ತಿಯಲ್ಲಿದ್ದ ರಾಜಮಾರ್ಗಗಳ ಚಿತ್ರಣವನ್ನು ಈ ಸ್ಥಳನಾಮಗಳು ನಮಗೆ ಕಟ್ಟಿಕೊಡುತ್ತವೆ. ದಕ್ಷಿಣ ಭಾರತದ ಪ್ರಮುಖ ಗ್ರಂಥಸ್ಥ ಭಾಷೆಗಳಲ್ಲೊಂದಾದ ಕನ್ನಡದಲ್ಲಿ ಸಾಕಷ್ಟು ಪ್ರಾಚೀನ ಸಾಹಿತ್ಯ ಉಪಲಬ್ಧವಿದ್ದು, ಇಲ್ಲಿನ ಕಾವ್ಯ, ಪುರಾಣ, ಚರಿತ್ರೆ, ದತ್ತಿ ಶಾಸನ, ರಾಜ ನಿರೂಪ, ವಂಶಾವಳಿ, ಕೈಫಿಯತ್ತು ಹಾಗೂ ಕಾಲಜ್ಞಾನ ವಚನ ಇದೇ ಮುಂತಾದ ಪ್ರಕಾರಗಳಲ್ಲಿ ನಮಗೆ ಸ್ಥಳನಾಮಗಳಿಗೆ ಸಂಬಂಧಿಸಿದಂತೆ ವಿಪುಲ ಸಾಮಗ್ರಿ ದೊರೆಯುತ್ತದೆ"[೪] ಹೇರಳವಾಗಿ ಸ್ಥಳನಾಮಗಳು ದಾಖಲಾದ ಕನ್ನಡ ಕಾವ್ಯ ಕೃತಿಗಳಲ್ಲಿ ಲಿಂಗಣ್ಣ ಕವಿ ವಿರಚಿತ 'ಕೆಳದಿ ನೃಪವಿಜಯ' ಕೃತಿಯೂ ಒಂದು. ಕನ್ನಡ ಕಾವ್ಯ ಕೃತಿಗಳಲ್ಲಿ ಇಷ್ಟು ಪ್ರಮಾಣದಲ್ಲಿ ಸ್ಥಳನಾಮಗಳನ್ನೊಳಗೊಂಡ ಕಾವ್ಯ ಕೃತಿಗಳು ಬಹಳ ಕಡಿಮೆ ಎಂದೇ ಹೇಳಬೇಕು. "ಕ್ರಿ.ಶ. ೧೪೨೪ರಲ್ಲಿ ರಚಿತವಾದ ಲಕ್ಕಣ್ಣ ದಂಡೇಶನ 'ಶಿವತತ್ವ ಚಿಂತಾಮಣಿ'ಯ ಸಂಧಿ ೩೮ರಲ್ಲಿ ತತ್ಕಾಲೀನ ಶಿವಶರಣರ ಸುಮಾರು ೪೦೦ ಸ್ಥಳನಾಮಗಳ ದಾಖಲಾತಿ (Documentation) ದೊರಕುತ್ತಿರುವುದು ಒಂದು ಅಪೂರ್ವ ಸಂಗತಿಯಾಗಿದೆ"[೫] ಎಂದು ವ್ಹಿ. ಶಿವಾನಂದ ಅವರು ಅಭಿಪ್ರಾಯಪಟ್ಟಿದ್ದಾರೆ. ಕನ್ನಡ ಕಾವ್ಯ ಕೃತಿಗಳಲ್ಲಿ ನೂರಾರು ಸ್ಥಳನಾಮಗಳು ದಾಖಲಾಗಿರುವುದು ಸತ್ಯದ ಸಂಗತಿ. ಈ ನಿಟ್ಟಿನಲ್ಲಿ 'ಕೆಳದಿ ನೃಪವಿಜಯ' ಕೃತಿ ಗಮನಾರ್ಹವಾದುದು.

ಸ್ಥಳನಾಮಗಳು; ಮಾನವ ಜನಾಂಗದ, ಅವನು ರೂಪಿಸಿಕೊಂಡ ಜೀವನ ವಿಧಾನದ ಹಾಗೂ ನಾಗರಿಕತೆಯ ವಿವಿಧ ಹಂತದ ಚಿತ್ರಣವನ್ನು ನೀಡುತ್ತವೆ. "ಸ್ಥಳನಾಮಗಳು ಇತಿಹಾಸ, ಪುರಾಣ, ಧರ್ಮ, ಸಂಸ್ಕೃತಿಗಳಷ್ಟೇ ಅಲ್ಲ. ಊರ ಹೆಸರುಗಳಿಂದ ಜನರ ನೆಚ್ಚಿಗೆ ಮೆಚ್ಚುಗೆ ಆಗುಹೋಗುಗಳಂತೆ ನೆಲದ ಪಾಡೂ ತಿಳಿದುಬರುತ್ತದೆ. ಮಳೆ, ಬೆಳೆ, ಭೂಮಿಯ ಗುಣ, ಬಣ್ಣ, ಅಲ್ಲಿಯ ಪ್ರಾಣಿ,

ವನಸ್ಪತಿಗಳು, ಖನಿಜಗಳು, ಕಾಡು ಮೇಡುಗಳು, ಹೊಳೆ ಕೆರೆ ಕಟ್ಟೆ ಕಾಲುವೆ ಮೊದಲಾದವುಗಳ ಇರವನ್ನು ಊರ ಹೆಸರುಗಳಿಂದ ಅರಿತುಕೊಳ್ಳಬಹುದಾಗಿದೆ ಈ ಎಲ್ಲ ದೃಷ್ಟಿಯಿಂದ ಕೆಳದಿ ನೃಪವಿಜಯ ಕೃತಿಯಲ್ಲಿ ದಾಖಲಾದ ಸ್ಥಳನಾಮಗಳನ್ನು ಈ ಲೇಖನದಲ್ಲಿ ಪರಿಶೀಲಿಸುವ ಪ್ರಯತ್ನವನ್ನು ಮಾಡಲಾಗಿದೆ.

ಕೆಳದಿ ನೃಪವಿಜಯ ಕೃತಿಯಲ್ಲಿ ದಾಖಲಾದ ಸ್ಥಳನಾಮಗಳನ್ನು ನಿಸರ್ಗವಾಚಿ, ಜನಾಂಗವಾಚಿ, ವ್ಯಕ್ತಿವಾಚಿ, ನಿರ್ಮಾಣವಾಚಿ ಹಾಗು ಆದರ್ಶವಾಚಿ ಎಂದು ಅಧ್ಯಯನದ ದೃಷ್ಟಿಯಿಂದ ವಿಭಾಗಿಸಿಕೊಳ್ಳಬಹುದು.

ಉದಾ :

ನಿಸರ್ಗವಾಚಿ	: ಬಯಲೂರು (ಬಯಲು + ಊರು)
ಜನಾಂಗವಾಚಿ	: ಕಮಲಶಿಲೆ (ಕಮ್ಮಾರ + ಸಾಲೆ?)
ವ್ಯಕ್ತಿವಾಚಿ	: ಚಿಕ್ಕನಾಯಕನಹಳ್ಳಿ (ಚಿಕ್ಕನಾಯಕನ + ಹಳ್ಳಿ)
ನಿರ್ಮಾಣವಾಚಿ	: ಹಳ್ಳಿಗೆರೆ (ಹಳ್ಳಿ + ಕೆರೆ)
ಆದರ್ಶವಾಚಿ	: ಕಲ್ಯಾಣಪುರ (ಕಲ್ಯಾಣ + ಪುರ)

ಕೆಳದಿ ನೃಪವಿಜಯ ಕೃತಿಯಲ್ಲಿ ಬಂದಿರುವ ಸ್ಥಳನಾಮಗಳಲ್ಲಿ ಊರು, ಹಳ್ಳಿ, ಗಾಂವೆ, ಗ್ರಾಮ, ಪಟ್ಟಣ, ಪುರ, ನಗರ, ಗಡ, ಗಿರಿ, ಕುಂದ, ಕಲ್ಲು, ವಾಡ, ಕೇರಿ, ಏರಿ, ಬಯಲು, ಪಳ್ಳಿ, ನಾಡು, ಕಟ್ಟೆ, ಗುತ್ತಿ, ಶಿಲೆ, ಗ ಗೋಡು, ಕೋಡು, ದೇಶ, ಅಂಗಡಿ, ಗೆ, ರೆ, ಕಾಡು, ಮಲೆ, ಕೆ, ಪೆಟ್ಟು ಬೆಟ್ಟು, ಕುಳಿ, ತೊರೆ, ದುರ್ಗ, ಹಾಳ, ಈಶ್ವರ, ಕೊಂಡ, ಕೊಪ್ಪ, ಬಾದ ಮೊದಲಾದ ವಾರ್ಗಿಕಗಳನ್ನು ಕಾಣಬಹುದು.

ಕೆಳದಿ ಸಂಸ್ಥಾನದ ಆಡಳಿತ ವೈಖರಿಯನ್ನು ತಿಳಿಸುವ ಸ್ಥಳನಾಮಗಳನ್ನು ಹೀಗೆ ಪಟ್ಟಿ ಮಾಡಬಹುದು.

ದೇಶ	: ಮಲೆಯಾಳ ದೇಶ, ಪೈತಣದೇಶ, ಗೋರಾಷ್ಟ್ರದೇಶ
ನಾಡು	: ಕೆಲನಾಡು, ನಲವತ್ತುನಾಡು, ಕೆಲನಾಡು
ಪುರ	: ಬಂಕಾಪುರ, ಕಲ್ಯಾಣಪುರ, ಆನಂದಪುರ, ಕೆಳದಿಪುರ
ನಗರ	: ಆಹಮದನಗರ, ವಿದ್ಯಾನಗರ
ಪಟ್ಟಣ	: ಶ್ರೀರಂಗಪಟ್ಟಣ, ಬಸವಾಪಟ್ಟಣ
ಪಳ್ಳಿ/ಹಳ್ಳಿ	: ಬೆಣ್ಣೆವಳ್ಳಿ, ಹೊನ್ನವಳ್ಳಿ, ಹರಪನಹಳ್ಳಿ
ಬಾಡ/ವಾಡ	: ಕೋಳವಾಡ, ಬಗ್ಗವಾಡಿ, ಗುಳವಾಡಿ

'ಕೋಟೆ'ಗಳಿಗೆ ಅಂದು ವಿಶೇಷ ಮಹತ್ವವಿದ್ದಿತ್ತು. ಆಗಾಗ ಯುದ್ಧಗಳು ಡೆಯುತ್ತಿದ್ದುದರಿಂದ, ಶತ್ರುಗಳ ದಾಳಿಯನ್ನು ಎದುರಿಸಲು ಕೋಟೆಗಳನ್ನು ಕಟ್ಟ ಗುತ್ತಿತ್ತು. ಗಡ ಎಂಬ ವಾಚಕವೂ ಕೋಟೆಯನ್ನೇ ಸೂಚಿಸುತ್ತದೆ. ಕೆಲವು ಕಡೆ ಅದನ್ನು ದುರ್ಗ ಎಂದೂ ಕರೆಯಲಾಗಿದೆ. ಅಂಥ ಕೆಲವು ಸ್ಥಳನಾಮಗಳು ಇಂತಿವೆ.

ಕೌಲಿಯದುರ್ಗ
ಚಿತ್ರದುರ್ಗ (ಚಿಂತನ ಕಲ್ಲುದುರ್ಗ)
ಕಾಮನದುರ್ಗ
ನವಿಲೆಗಡ
ಪನ್ನಾಳಗಡ

ದಕ್ಷಿಣಕನ್ನಡ, ಉತ್ತರಕನ್ನಡ, ಬಳ್ಳಾರಿ, ಶಿವಮೊಗ್ಗ, ಚಿತ್ರದುರ್ಗ ಮೊದಲಾದ ಜಿಲ್ಲೆಗಳಲ್ಲಿ ಅನೇಕ ಕೋಟೆಗಳಿದ್ದ ಉಲ್ಲೇಖ ಪ್ರಸ್ತುತ ಕೃತಿಯಲ್ಲಿ ಬಂದಿದೆ. ಮೇಲೆ ಹೆಸರಿಸಿದ ಅನೇಕ ಎಡೆಗಳಲ್ಲಿ ಇಂದಿಗೂ ಕೋಟೆಗಳಿರುವುದನ್ನು ಕಾಣಬಹುದು. ಬಿಜಾಪುರದಲ್ಲಿ, ಮಹಾರಾಷ್ಟ್ರದ ಪನ್ನಾಳ, ಸತಾರ ಮೊದಲಾದ ಕಡೆ ಪ್ರಬಲವಾದ ಕೋಟೆಗಳಿದ್ದ ಉಲ್ಲೇಖವೂ ಬಂದಿದೆ. ರಕ್ಷಣೆಯ ದೃಷ್ಟಿಯಿಂದ ಕೋಟೆಗಳನ್ನು ಕಟ್ಟುತ್ತಿದ್ದುದು ಎಲ್ಲೆಡೆ ಕಂಡುಬರುತ್ತದೆ.

ಸ್ಥಳನಾಮಗಳನ್ನು ಸೂಚಿಸುವ ರೀತಿ

ಕೆಳದಿ ಸಂಸ್ಥಾನದ ದೊರೆಗಳ ಸಾಧನೆಯನ್ನು ಬಣ್ಣಿಸುವ ಸಂದರ್ಭದಲ್ಲಿ; ಹೆಚ್ಚಾಗಿ ಅವರ ದಂಡಯಾತ್ರೆ ಇಲ್ಲವೇ ಪುಣ್ಯಕ್ಷೇತ್ರಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಎಡೆಗಳ ಹೆಸರುಗಳು ಈ ಕಾವ್ಯದಲ್ಲಿ ದಾಖಲಾಗಿವೆ.

ಉದಾ : ಕೆಳದಿಯ ವರ್ಣನೆ

"ಆ ಕರ್ಣಾಟಕ ದೇಶದ
ಭೂಕಾಂತೆಯ ವಕ್ತ್ರ ಪದ್ಮಮೆನೆ ರಾಜಿಸುಗುಂ
ಶ್ರೀಕರಮೆನಿಸಿಯಜಸ್ರಂ
ನಾಕಮನಿಕ್ಕೈದ ಕೆಳದಿಯೆಂದೆನಿಪ ಪುರಂ" (೧-೩೦)

ಆ ಪಟ್ಟಣದ ಪಕ್ಕದಲ್ಲಿರುವ ಒಂದು ಹಳ್ಳಿಯ ವರ್ಣನೆ ಇಂತಿದೆ.
"ಆ ಪುರದ ಮುಂತಣೆಳೆಯ ಸ
ಮೀಪದೊಳೊತ್ತಾಗಿ ಚಲ್ವ ಪಳ್ಳಿಯ ಬಯಲಿಂ

ಬಾ ಪಕ್ಕೆ ಕೃಷಿಕ ಜನ ಗ
ನ್ನಾವರ ನಿಶಿಂಪವಲ್ಲಿಯಾ ರಾಜಿಸುಗುಂ" (೧-೩೨)

ಒಂದೇ ಪದ್ಯದಲ್ಲಿ ಅನೇಕ ಮಾಗಣೆಗಳ ಉಲ್ಲೇಖವನ್ನು ಕವಿ ಇ
ಕೊಟ್ಟಿದ್ದಾನೆ.

"ಕೆಳದಿಯಿಕ್ಕೇರಿ ಪೆರ್ಬಯ
ಲೆಲಗಳಲೆ..... ಮೊಪ್ಪುವ ಮೋದೂ
ಕಲಿಸೆ ಲಾತವತಿಯೆಂಬೀ
ವಿಲಸನ್ಮಾಗಣೆಗಳೆಂಟುಮಂ ಸಮಾಗೇವೆಂ" (೧-೭೨)

ಕೆಳದಿ, ಇಕ್ಕೇರಿ, ಪೆರ್ಬಯಲು(ಹೆಬ್ಬೈಲು) ಯಲಗಳಲೆ, ಮೋದೂ
ಕಲಿಸೆ ಮತ್ತು ಲಾತವತಿ ಎಂಬ ಎಂಟು ಮಾಗಣೆಗಳ ಹೆಸರು ಒಂ
ಪದ್ಯದಲ್ಲಿ ಬಂದಿದೆ. ದಂಡಯಾತ್ರೆಯ ವಿಚಾರವನ್ನು ಹೇಳುವ ಸಂದರ್ಭದ

"ಇಂತಾ ವೆಂಕಟಪ್ಪ ನಾಯಕಂ ಬಾರಕೂರ ಸಂಸ್ಥಾನ ಮಂ ಸ್ವಾಧೀ
ಗೆಯ್ದು ಬಾರಕೂರು, ಕಲ್ಯಾಣಪುರ, ಮಲ್ಲಿಕಾರ್ಜುನ ಗಿರಿ, ಕಂಡಲೂರ ಕೋ
ಗಳಂ ನಿರ್ಮಾಣಂಗೈಸಿದನಂತು ಮಲ್ಲದೆಯುಂ"

"ಮುರಿದು ಸುರಾಲರ ತೋಳಹರ
ಸಿರಿಯರ ನಾಲ್ವತ್ತು ನಾಡು ಕೆಲನಾಡು ಕಿಂ
ಕರ ನಾರಾಯಣ ಪೈಮೂ
ರ್ವೇರುವ ಹಳ್ಳಿಗೆರೆಯಾವನಿಯುಂ ಸಾಧಿಸಿದಂ" (೫-೩೧)

ಎಂದಿದೆ. ಅನೇಕ ಸಾಮಂತ ದೊರೆಗಳು ಅವರಿದ್ದ ಎಡೆಗಳ ಹೆ
ಇಲ್ಲಿ ಬಂದಿದೆ. "ಇಂತು ಚೌಟ ಬಂಗಾಡಿಲ ಸಾವಂತ ಮೂಲ ಕುಂ
ಕಾಸರ ಗೋಡ ಮನ್ನೆಯರ ಮುರಿದು ತತ್ತದ್ವರಿತ್ರಿಯಂ ವಶಗೈದು ಮಂಗಲ
ಸಂಸ್ಥಾನಮಂ ಸ್ವಾಧೀನಂಗೈದನಂತರಂ ಮೂಲಿಕೆ ಕೊಡೆಯಾಲ ಮೂಡ
ಉಳ್ಳಾಲ, ಕುಂಬಳೆ ಕಾಸರಗೋಡು ಪುಮವೆಟ್ಟು ಬೆಳ್ಳರೆ ಕಾಂತಮಂ
ಬಂದ್ಯಡಕ ಕಂಡಂಕಾಳ, ಕೊಲ್ಲೂರಬಾಚಿ ಶಿಶಿಲ ಚಂದ್ರಗಿರಿ ಶಿದ
ಮೂಡಗೊಡೆಯಾಲ ಫಣಿಯಾ ಮುಂತಾದ ಕೋಟೆಗಳಂ ಬಲಿಯಿಸಿ
ಎಂದಿದೆ. ಈ ಕೃತಿ ರಚನೆ ಯಾಗಿ ಹತ್ತಿರ ಹತ್ತಿರ ಎ
ಶತಮಾನವಾಯಿತು. ಆದರೂ ಮೇಲೆ ಹೆಸರಿಸಿದ ಬಹುತೇಕ ಸ್ಥಳನಾ
ಇಂದಿಗೂ ಹಾಗೇ ಉಳಿದುಕೊಂಡಿವೆ. ಬೆಳ್ಳರೆ ಎಂಬುದು ಬೆಳ್ಳಾರೆಯಾ
ಮಂಗಲೂರು ಮಂಗಳೂರು ಎಂದಾಗಿದೆ. ಮೂಲಿಕೆ ಮುಲ್ಕಿ ಎಂದು

ನ್ಯಾತ್ಯಾಸಗೊಂಡಿದೆ. ಇದು ಸ್ಥಳನಾಮಗಳೂ ಜಗುಟುತನಕ್ಕೆ, ಕಿರು ಬದಲಾವಣೆಗೊಳಗಾಗಿಯೂ ತಮ್ಮತನವನ್ನು ಬಹುಕಾಲ ಉಳಿಸಿಕೊಳ್ಳಬಲ್ಲವು ಎಂಬುದಕ್ಕೆ ಉತ್ತಮ ನಿದರ್ಶನವಾಗಿದೆ.

ಸ್ಥಳನಾಮಗಳ ವರ್ಗೀಕರಣ

ಸ್ಥಳನಾಮದ ಪೂರ್ವ ಪದವನ್ನು ನಿರ್ದಿಷ್ಟ (specific) ಎಂದೂ ಪರಪದವನ್ನು ವಾರ್ಗಿಕ (Generic) ಎಂದೂ ಕರೆಯಲಾಗುತ್ತದೆ. ಸಾಂಸ್ಕೃತಿಕ ಅಧ್ಯಯನದ ಸಂದರ್ಭದಲ್ಲಿ ಎರಡೂ ಘಟಕಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ.

ನಿರ್ದಿಷ್ಟ:	ವಾರ್ಗಿಕ
ಕೆಳದಿ ಶೃಂಗ ಕಲ್ಯಾಣ ಆನಂದ ವಿಜಯ ವೇಣು ಭದ್ರ	ಪುರ/ಪುರಿ

ನಿರ್ದಿಷ್ಟ:	ವಾರ್ಗಿಕ
ಬೆಣ್ಣೆ ಹೊದಿ ಹಳ್ಳಿ ಹೂಲಿ ಕಂದು	ಕೆರೆ/ಗೆರೆ

ಒಂದು ಎಡೆಯ ಭೌಗೋಳಿಕ ಲಕ್ಷಣಗಳನ್ನು ತಿಳಿದುಕೊಳ್ಳುವಲ್ಲಿ, ಅದರ ವ್ಯಾಪ್ತಿಯನ್ನು ಅರ್ಥಮಾಡಿಕೊಳ್ಳುವಲ್ಲಿ 'ವಾರ್ಗಿಕ'ಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಕೆಳದಿ ನೃಪವಿಜಯದಲ್ಲಿ ಹೆಚ್ಚಾಗಿ ಕಂಡುಬರುವ ಕೆಲವು ವಾರ್ಗಿಕಗಳನ್ನು ಇಲ್ಲಿ ಪರಿಶೀಲಿಸಬಹುದು.

ಪಳ್ಳಿ : (ವಸತಿವಾಚಿ) ಅತ್ಯಂತ ಚಿಕ್ಕದಾದ ಘಟಕವಿದು. ಊರಿಗಿಂತ ಕಿರಿದು. ನಾಲ್ಕಾರು ಮನೆ, ಕೆಲವೊಮ್ಮೆ ಒಂದೇ ಮನೆ ಇರುವ ಹಳ್ಳಿಗಳೂ ಕಂಡುಬರುತ್ತವೆ. ಪಳ್ಳಿ = 'A settlement' ಎಂಬರ್ಥ ಕಿಟ್ಟೆಲ್ ಕೋಶದಲ್ಲಿದೆ. ಈ ವಸತಿವಾಚಿ ವಳ್ಳಿ, ವಳಿ, ಹಳ್ಳಿ, ಪಳ್ಳಿ ಎಂದೆಲ್ಲ ಬಳಕೆಯಾಗಿದೆ.

ಸೀಗೆವಳ್ಳಿ	ಎಡೆಯಹಳ್ಳಿ
ಆಲವಳ್ಳಿ	ಮೋಳೊನಹಳ್ಳಿ
ಆವಿನಹಳ್ಳಿ,	ಲಕ್ಕವಳ್ಳಿ
ಬೆಣ್ಣೆವಳ್ಳಿ,	ಬಾಳೇಹಳ್ಳಿ

ಆನವಳ್ಳಿ, ಹೊನ್ನವಳ್ಳಿ
ಚಿಕ್ಕನಾಯಕನಹಳ್ಳಿ, ಹರಪನಹಳ್ಳಿ
ಕುಟರಹಳ್ಳಿ, ಅಮುವಳ್ಳಿ

ಮೊದಲಾದವು. ಇಲ್ಲಿ ದಾಖಲಾದ ಹೆಚ್ಚಿನ ಸ್ಥಳನಾಮಗಳು ಇಂದಿಗೂ ಹಾಗೆ ಉಳಿದುಕೊಂಡು ಬಂದಿವೆ. ಕೆಲವು ಗ್ರಾಮನಾಮಗಳಲ್ಲಿ ಕಿರು ಬದಲಾ ಯಾಗಿದೆಯಾದರೂ ಗುರುತಿಸಲಾರದಷ್ಟು ಬದಲಾಗಿಲ್ಲ. 'ಹೊನ್ನವಳ್ಳಿ' ಹೊ ಯಾಗಿರಬಹುದು. ಆದರೂ ಅದರ ಮೂಲ ರೂಪವನ್ನು ಗುರುತಿಸಬಹು

ಊರು(ವಸತಿವಾಚಿ) : ಇದೊಂದು ಅಚ್ಚ ದ್ರಾವಿಡ ಪದ. ಇದು ಹಳ್ಳಿ ತುಸು ದೊಡ್ಡದು. An inhabited place, a village: a town ಎಂಬ ಅ ಕಿಟ್ಟೆಲ್ ಕೋಶದಲ್ಲಿದೆ. ಕೆಳದಿ ನೃಪವಿಜಯ ಕೃತಿಯಲ್ಲಿ ದಾಖಲಾದ ಕೆ ಊರುಗಳ ಹೆಸರುಗಳು ಇಂತಿವೆ. ವೇದೂರು, ಮಾಸೂರು, ಮಲ್ಲ ತಲವೂರು, ಹೊನ್ನೂರು, ಕರವೂರು, ಬಿದರೂರು, ಕೊಲ್ಲೂರು, ಬಸ ಬಾಳೂರು, ಕಣತೂರು, ಕಡೂರು, ಸಂತೆ ಬೆನ್ನೂರು, ಮಂಗಲೂರು, ಬೈದು ಗಾಜನೂರು, ಹೊಳೆಯಬಯಲೂರು, ಬೋಳೂರು, ಬಾರಕೂರು, ದಾ ಮೊದಲಾದವು.

ಪುರ (ವಸತಿವಾಚಿ) : ಹಳ್ಳಿ, ಊರುಗಳಿಗಿಂತ ಇದು ಗಾತ್ರದಲ್ಲಿ ದೊ ಗ್ರಾಮ ವಿಸ್ತಾರವಾದಂತೆ ಪುರ, ಪಟ್ಟಣ, ನಗರ ಮೊದಲಾದ ವಾರ್ಗಿ ಸೇರಿಕೊಳ್ಳುತ್ತವೆ. 'ಪುರ' ವಾರ್ಗಿಕ ಕೆಲವು ಕಡೆ 'ಪುರಿ' ಎಂದೂ ಬಳಕೆಯಾ ಭಾರತದಾದ್ಯಂತ ಈ ವಾರ್ಗಿಕ ಕಾಣಸಿಗುತ್ತದೆ. ಎಡೆಗಳಿಗೆ ಹೆಸರು ಸಂಸ್ಕೃತದ ವ್ಯಾಮೋಹಕ್ಕೆ ಸಿಕ್ಕಿ 'ಪುರ' ಎಂದು ಹೆಸರಿಡುವುದು ಬಂದಿ ಇಂದೂ ಚಾಲ್ತಿಯಲ್ಲಿದೆ. ಲಿಂಗಣ್ಣ ಕವಿ ದಾಖಲಿಸಿದ ಕೆಲವು ಎಡೆ ಇಲ್ಲಿ ನೋಡಬಹುದು. ಉದಾ : ಕೆಳದಿಪುರ. 'ಕೆಳದಿ' ಎಂದು ಕೆಲವು ಹಲವು ಕಡೆ ಕೆಳದಿಪುರ ಎಂದು ದಾಖಲಾಗಿದೆ. ಅದೇ ರೀತಿ ಶೃಂಗಪುರ ಕಡೆ ಶೃಂಗೇರಿ ಎಂದಾಗಿದೆ. ಕಲ್ಯಾಣಪುರ, ಮಹಾದೇವಪುರ, ಮಾಣಿಕ್ಯ ವಿಜಯಪುರ, ಸುಧಾಪುರ (ಸೋದೆ), ವೇಣುಪುರ: ಬಿದರೂರು ಎಂದು ಕಡೆ ಬಳಕೆಯಾಗಿದೆ. ಬಿದರಿಗೆ ಸಂಸ್ಕೃತ ಹೆಸರು ವೇಣು. ಸಂಸ್ಕೃತ ವ್ಯಾ

---

*'ಕೆಳದಿ ನೃಪವಿಜಯ' ಕೃತಿಯಲ್ಲಿ ದಾಖಲಾದ ಸ್ಥಳನಾಮಗಳು ಇಂದು ಎಷ್ಟರ ಬದಲಾವಣೆಗೆ ಒಳಗಾಗಿವೆ ಎಂಬುದನ್ನು ತಿಳಿದುಕೊಳ್ಳಲು 'ಕರ್ನಾಟಕ ಗ್ರಾಮ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ೧೯೭೫ - ೭೬ ಕೃ ನೋಡಬಹುದು.

ದಿಂದ 'ಬಸರೂರು' ವೇಣುಪುರವೆಂದಾಗಿದೆ. ಇದೇ ರೀತಿ ವಸುಪುರ(ಬಸರೂರು) ತೀರ್ಥರಾಜಪುರ (ತೀರ್ಥಹಳ್ಳಿ) ಮೊದಲಾದವು. ಜನಸಂಖ್ಯೆ ಹೆಚ್ಚಿದಂತೆ ಹಳ್ಳಿ, ಊರುಗಳೆಲ್ಲ ಪುರಗಳಾದವು. ರಾಜಕೀಯ ಕಾರಣಗಳಿಂದಲೂ ಅನೇಕ ಊರುಗಳು 'ಪುರ' ಎಂಬ ವಾರ್ಗಿಕಗಳನ್ನು ಧರಿಸಿಕೊಂಡವು. ಇದಕ್ಕೆ ಬಿದನೂರು, ಬಸರೂರು, ತೀರ್ಥಹಳ್ಳಿ ಮೊದಲಾದ ಸ್ಥಳನಾಮಗಳು ಉತ್ತಮ ಉದಾಹರಣೆಯಾಗಿವೆ.

ಪಾಡ/ವಾಡಿ/ವಡಿ : ಇವು ಸಹ ವಸತಿವಾಚಿಗಳೇ ಆಗಿವೆ. ಇವುಗಳ ಪ್ರಾಚೀನ ರೂಪ 'ಪಾಡ'ವಿರ ಬೇಕು. ಈ ಕೃತಿಯಲ್ಲಿ ಕೋಳವಾಡಿ, ಗುಳವಾಡಿ, ಸಾತವಾಡಿ/ವಡಿ, ಬಗ್ಗವಾಡಿ ಮೊದಲಾದ ಸ್ಥಳನಾಮಗಳು ದಾಖಲಾಗಿವೆ.

ಕೆರೆ : ಇದೊಂದು ನಿರ್ಮಾಣವಾಚಿ. 'ಕೆರೆ' ಕೆಲವು ಕಡೆ ವಾರ್ಗಿಕವಾಗಿ ಮತ್ತೆ ಕೆಲವು ಕಡೆ ನಿರ್ದಿಷ್ಟವಾಗಿಯೂ ಬಳಕೆಯಾದುದಿದೆ. ವಿಶೇಷವಾಗಿ 'ಕೆರೆ' ವಾರ್ಗಿಕವಾಗಿಯೇ ಬರುತ್ತದೆ.

ಉದಾ :

ಬೆಣ್ಣೆಗೆರೆ, ಹೊದಿಗೆರೆ
ಹೂಲಿಕೆರೆ, ತರೀಕೆರೆ
ಕಂದುಕೆರೆ, ಹಳ್ಳಿಗೆರೆ

ಗಿರಿ : ಇದು ನಿಸರ್ಗವಾಚಿ. ಗುಡ್ಡದಿಣ್ಣೆಗಳಿಂದ ಕೂಡಿದ ಪ್ರದೇಶ ಎಂಬ ಒಂದು ಕಾಲದಲ್ಲಿ ಇದ್ದಿರಬಹುದು. ಈಗ ಜನಸಂಖ್ಯೆ ಜಾಸ್ತಿಯಾಗಿ ಇವು ಪಟ್ಟಣಗಳಾಗಿವೆ. ಗಿರಿಗಳಲ್ಲಿ ಕೋಟೆಗಳನ್ನು ಕಟ್ಟಲಾಗುತ್ತಿತ್ತು.

ಉದಾ :

ದೇವಗಿರಿ, ವಾಗಿನಗಿರಿ
ಚಂದ್ರಗಿರಿ, ಮಲ್ಲಿಕಾರ್ಜುನಗಿರಿ
ಚೆನ್ನಗಿರಿ, ಗೋವರ್ಧನಗಿರಿ

ನಗರ : ಇದು ನಿರ್ಮಾಣವಾಚಿ. ಪಟ್ಟಣದಂತೆ ಸಾಕಷ್ಟು ಜನಸಂಖ್ಯೆ, ವ್ಯಾಪಾರವಹಿವಾಟನ್ನು ಹೊಂದಿದ ಪ್ರದೇಶ. ಉದಾ: ಅಹಮ್ಮದ್‌ನಗರ, ವಿದ್ಯಾನಗರಿ (ಇದು ವಿಜಯನಗರದ ಹೆಸರೇ ಇರುವಂತೆ ಕಾಣುತ್ತದೆ), ಕುಶಾವತೀ ನಗರ ಮೊದಲಾದವು. 'ಗೋಲ್ಕೊಂಡೆ'ಯು ಭಾಗಾನಗರವಾದ ಬಗೆಯನ್ನು ಕವಿ ಇಲ್ಲಿ ಹೀಗೆ ಹೇಳಿದ್ದಾನೆ. "ಗೋಲುಕೊಂಡೆಯೆಂಬ

ಭಾಗ್ಯನಗರಿಯ (ಪ್ರತಿನಾಮ ಭಾಗಾ ನಗರದ) ಪಾಳ್ಕ ಪಾತುಶಾಹರ ವಿವರಣಮಂ ಪೇೞ್ವುದೆಂತೆಂದೊಡೆ : ಆದಿಯಾಲಿ ಬಾಂದೀನ ಮಲ್ಲೀಕನ ಮಕ್ಕಳ್ ಮೋದಾಖಂಡ ಮಲ್ಲೀಕವಿಭ್ರಾಮ. ಈತಂ ಕಾಮಿಸಿದ ಬ್ರಾಹ್ಮಣ ಸ್ತ್ರೀಯ ಪೆಸರ್ ಭಾಗೀರಥಿ. ಆಕೆ ತನ್ನ ಪೆಸರಿನಲ್ಲಿ ನಗರವಂ ವಿಸ್ತಾರಂಗೈಸಲದ ಭಾಗಾನಗರಮೆಂದು ಪೆಸರಾಯ್ತು". ಹಳೆಯ ಹೆಸರುಗಳು ಹೋಗಿ ಹೇಗೆ ಹೊಸ ಹೆಸರುಗಳು ಕೂಡಿಕೊಳ್ಳುತ್ತವೆ ಎಂಬುದಕ್ಕೆ ಇದೊಂದು ಉತ್ತಮ ನಿದರ್ಶನ. ರಾಜಕೀಯ ಕಾರಣಗಳಿಂದ ಅಂದು ಎಡೆಗಳ ಹೆಸರುಗಳು ಸಾಕಷ್ಟು ಬದಲಾಗುತ್ತಿದ್ದವು. ವ್ಯಕ್ತಿವಾಚಿ ಸ್ಥಳನಾಮಗಳೆಲ್ಲ ಕೃಷಿ ಸಂಸ್ಕೃತಿಯ ನಂತರದ ಬೆಳವಣಿಗೆಯಾಗಿಯೇ ತೋರುತ್ತದೆ

ಇವಲ್ಲದೇ 'ನಾಡು ...' ವಾಚಕವೂ ಅನೇಕ ಕಡೆಗಳಲ್ಲಿ ಬಳಕೆಯಾಗಿದೆ. ನಾಡು ಎಂಬುದಕ್ಕೆ ಹಿಂದೆ ವಿಶಾಲ ಅರ್ಥವಿತ್ತು. 'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್' ಎಂದಿದ್ದಾನೆ. ಕವಿರಾಜಮಾರ್ಗಕಾರ. ಆರಂಭದಲ್ಲಿ, ಆಡಳಿತ ಘಟಕಗಳಲ್ಲಿ ಒಂದಾದ 'ನಾಡು' ವಿಶಾಲವಾದ ವ್ಯಾಪ್ತಿಯನ್ನು ಹೊಂದಿತ್ತು. ಕೆಳದಿ ಅರಸರ ಕಾಲದಲ್ಲಿ ನಾಡಿಗೆ ಹಿಂದಿದ್ದ ವಿಶೇಷ ವ್ಯಾಪ್ತಿಯ ಅರ್ಥ ಇದ್ದಂತೆ ಕಾಣುವುದಿಲ್ಲ. ಇಲ್ಲಿ ದಾಖಲಾದ ಸಾಲನಾಡು, ಮುಂಗಿನಾಡು, ಅನ್ನಾಡು, ಕಬ್ಬುನಾಡು, ಕೆಲನಾಡು ಮೊದಲಾದ ಎಡೆಗಳು ಚಿಕ್ಕಪುಟ್ಟ ಊರುಗಳೇ ಆಗಿವೆ. ಇಂದಿನ 'ಮಲೆನಾಡು' ನಿರ್ದಿಷ್ಟ ಸೀಮೆಗೆ ಇರುವ ಹೆಸರು. ಹಾಗೆಯೇ ಮೇಲಿನ ನಾಡು ಎಂಬ ವಾಚಕ ದೇಶ, ರಾಷ್ಟ್ರ ಎಂಬ ಅರ್ಥ ಹೊಂದಿರಲಿಲ್ಲ ಎಂಬುದೂ ಮನವಟ್ಟಾಗುತ್ತದೆ.

I. ಭೌಗೋಳಿಕ ಸ್ಥಿತಿಗತಿಯನ್ನು ಹೇಳುವ ಎಡೆಗಳು

೧. ಕಲ್ಲು – ಶಿಲೆ : ಚಿಂತನಕಲ್ಲು, ಭಟಕಳ (ಭಟಕಲ್ಲು?), ಕಲಬುರಗಿ

೨. ಗುಡ್ಡ/ಬೆಟ್ಟ : ಬಂಟಮಲೆ, ಜರಿಮಲೆ, ಚಂದ್ರಗಿರಿ, ಚೆನ್ನಗಿರಿ

೩. ಕೆರೆ–ಜಲಾಶಯ : ಬೆಣ್ಣೆಗೆರೆ, ಹಳ್ಳೀಗೆರೆ, ಹೂಲಿಕೆರೆ, ತರೀಕೆರೆ, ಅಂಬಲಿಗೊಳ್ಳ – ಮದಗದಕೆರೆ

೪ ಗಿಡ – ಮರ – ಸಸ್ಯ : ಬಾಳೆಯ ಕೊಪ್ಪ, ಕಬ್ಬುನಾಡು, ಕಾಸರಗೋಡು, ಸೀಗೆವಳ್ಳಿ, ಗುತ್ತಿ, ಬಿದರೂರು, ಬನವಾಸೆ, ಗೇರುಸೊಪ್ಪೆ, ಹೊನ್ನಾಳಿ(?)

೫. ಗದ್ದೆ/ಬಯಲು : ಮಂಡಗದ್ದೆ, ಪೆರ್ಬಯಲು, ಪಳ್ಳಿಬಯಲು, ಬಯಲೂರು, ಪುದುವೆಟ್ಟು

೬. ಪ್ರಾಣಿ, ಪಕ್ಷಿ : ಆನೆಗೊಂದಿ, ಪುಲಿಯಕರೆ, ನವಿಲಗಡ, ನಂದಿಗಾವೆ, ಆನೆವಳ್ಳಿ, ಗೋಕರ್ಣ, ಗಿಜಗನಹಳ್ಳಿ, ಆಡುವಳ್ಳಿ(?) ಕೋಳಿವಾಡ, ಹೊಲಿಕೆರೆ (ಹುಲಿಕೆರೆ)

೭. ದಿಕ್ಕು, ಸಂಖ್ಯೆ : ನಲವತ್ತು ನಾಡು, ಮೂಡಬಿದರೆ, ಎಡತೊರೆ, ಎಡೆಯಹಳ್ಳಿ, ಮೂಡಗೋಡೆಯಾಲ

೮. ಲೋಹ : ಹೊನ್ನೂರು, ಗುಜ್ಜೂರು, ಮಾಣಿಕ್ಯಪುರ

೯. ಹೊಳೆ-ಹಳ್ಳ : ಹೊಳೆಯ ಬಯಲೂರು, ಹೊಳೆಹೊನ್ನೂರು, ಅಂಬಲಿಕೊಳ್ಳ

II ಸಾಂಸ್ಕೃತಿಕ ಸ್ಥಳನಾಮಗಳು

೧. ಪುಣ್ಯಕ್ಷೇತ್ರಗಳು : ಪಂಪಾಕ್ಷೇತ್ರ, ಸಂಗೇರಿ, ಕಂಚಿ, ಶಿವಗಂಗೆ, ರಾಮೇಶ್ವರ, ಕಾಶಿ, ಶ್ರೀಶೈಲ, ತಿರುಪತಿ, ಉಡುಪಿ, ಕೊಲ್ಲೂರು, ಶಂಕರ ನಾರಾಯಣ, ಕೋಟೇಶ್ವರ ("ಕೊಲ್ಲೂರು, ಕೋಟೇಶ್ವರ, ವಸುಪುರ, ಶಂಕರನಾರಾಯಣ, ಕಮಲ ಶಿಲೆ, ಕೆಳದಿ ಮುಂತಾದ ಪುಣ್ಯಕ್ಷೇತ್ರ ಸ್ಥಳಂಗಳ ನೈದಿ" -ಕೆಳದಿ ನೃಪವಿಜಯ ಪುಟ ೨೯೮), ಗೋಕರ್ಣ ಮೊದಲಾದವು.

೨. ವ್ಯಕ್ತಿನಾಮಗಳು: ಮಾಳೇನಹಳ್ಳಿ, ಬಸವಾಪಟ್ಟಣ, ಮೀರಾಂಬಾಪುರ, ಭದ್ರಪುರ, ವೆಂಕಟಪುರ, ಶಿವರಾಜಪುರ, ಹರಪನಹಳ್ಳಿ ಚೆನ್ನಗಿರಿ, ಬಸವಪೂರು.

೩. ಉದ್ಯೋಗ-ವ್ಯಾಪಾರ : ಸಂತೆ। ಬೆನ್ನೂರು, ಹೊಸಂಗಡಿ, ಮೊಸರೂರು, ಬೆಣ್ಣೆವಳ್ಳಿ, ಜಕ್ಕೆಗೆರೆ

೪. ಶಿಕ್ಷಣ : ವಿದ್ಯಾನಗರಿ

೫. ಪುನರ್‌ನಾಮಕರಣ : ಗೋಲಕೊಂಡೆ - ಭಾಗಾನಗರ (ಭಾಗ್ಯನಗರಿ) '<u>ಡಿಳ್ಳಿ</u>ಯೆಂಬುದಾದಿಯೊಳ್ <u>ಹಸ್ತಿನಾವತಿ</u>' ಪುಟ (೧೯೯) '<u>ಆನೆವ</u>ಳ್ಳಿಯೆಂದು ಪೂರ್ವ ನಾಮಾಂಕಿತ

ಬಂದ ಬಸದಿ ಪಟ್ಟಣ' (ಅದೇ ಪುಟ ೧೮
ಗಂಗರಸರ್ಕಳಿಯು (ಪ್ರತಿಸಾಮ : ಬಿಡಾಪ್ಪ
ಸಂಸ್ಕೃತ ಬೋಳ್ (ಅದೇ ಪುಟ ೨೦೯).

೬. ಬಸಿದಾಸಿ ವೃತ್ತಿಗಳು : ಬಿರಾಂಬಾಪುರ
ಸೋಮಶೇಖರಪುರ
ಚನ್ನಗಿರಿ (ಇವೆಲ್ಲ ಕೆಳದಿ ಅರಸರ ಹೆಸರನ್ನು ಹೊತ್ತ ಸ್ಥಳನಾಮಗಳು
ಕೆಳದಿ ನೃಪ ವಿಜಯ ಕೃತಿಯಲ್ಲಿ ಬರುವ ಕೆಲವು ಉದಾಹರಣೆಗಳು:

'ತರುಣಿಯರ ಕುಲತಿಲಕೋಮವೇ
ವರಚನ್ನಮ್ಮಾಜಿಯಾತ್ಮನಾಥನ ಪೆಸರೊಳ್
ಸ್ಥಿರಮಾದ ಸೋಮಶೇಖರ
ಪುರ ಪೆಂದೊಪ್ಪಗ್ರಹಾರಮಂ ವಿರಚಿಸಿದಳ್' (೯-೬೨)

ಬಸವಾಪಟ್ಟಣದ ಬಿದನೂರ್ವೇಶದೊಳ್ ಹೊಲಿಕೆರೆಯೆಂಬ ಸ್ಥಳದೊ
ವಿರಾಜಿಪ ಕೋಟೆಯಂ ಸ್ವಾಧೀನಂಗೈದುದಕ್ಕೆ ಸ್ವನಾಮಾಂಕಿತಮಾದ ಚೆನ್ನಗಿರಿ
ಕೋಟೆಯೆಂದು ಪೆಸರಿಟ್ಟು" (ಅದೇ, ಪುಟ ೨೪೧) ಹೊಲಿಕೆರೆ ಚೆನ್ನಗಿರಿ ಎ
ಯಿತು.

'ಪರಮ ಶ್ರೋತ್ರಿಯರತ ಧರ
ಸುರರ್ಗಂ ಸತ್ಕ್ಷೇತ್ರ ವೃತ್ತಿಗಳನಿತ್ತತಿಥಿ
ಸುರ ಭದ್ರರಾಜ ಪುರಮೆಂ
ಬುದುರಮಗ್ರಹಾರಮಂ ವಿರಚಿಸಿದಂ' (೮-೧೪)

"ಪುತ್ರಮಾದ್ಭುದಾ ಭದ್ರಪ್ಪನಾಯಕ ಸ್ವಪಿತೃ ಶಿವಪ್ಪ ನಾಯಕನ ಪೆಸರೊಳ್ ಶಿವ
ಪುರಮೆಂಬಗ್ರಹಾರಮುಮಂ ವಿರಚಿಸಿ ವೃತ್ತಿ ಕ್ಷೇತ್ರಂಗಳಂ ಕಲ್ಪಿಸಿ ಭೂಸುರರ್ಗೆ ಶಿವಾ
ದಾನಿ ಧಾರೆಯನೆರೆದು" (ಅದೇ ಪುಟ

ಕೊಟ್ಟ ವಿವರಣೆ ಬಂದಿದೆ. ರಾಜಕುಮಾರರು ತಮ್ಮ ತಂದೆಯ ಹೆಸ
ರಾಣಿಯು ತನ್ನ ಗಂಡನ ಹೆಸರಿಗೆ ಅಗ್ರಹಾರಗಳನ್ನು, ಶಿವ ಪುರಗಳನ್ನು
ಅವುಗಳಿಗೆ ದಾನ ಕೊಡುವ ಕ್ರಮ ಜಾರಿಯಲ್ಲಿತ್ತು, ಎಂಬುದಕ್ಕೆ
ಉದಾಹರಿಸಿದ ಪದ್ಯಗಳೇ ಸಾಕ್ಷಿ. ಈ ರೀತಿ ಮೂಲದಲ್ಲಿದ್ದ ಸ್ಥಳನಾ
ಬರಬರುತ್ತ ಹೊಸ ಹೆಸರು ಬಂದು ಸೇರ್ಪಡೆಯಾಗುತ್ತಿತ್ತು. ಕ್ರಮೇಣ
ಹೆಸರು ಜನರ ಬಾಯಿಯಿಂದಲೂ ಅಳಿಸಿಹೋಗುತ್ತದೆ. ನಮ್ಮ ನಾಡಿನಲ್ಲಿ
ರೀತಿಯ ಪುನರ್ನಾಮಕರಣ ಜೋರಾಗಿ ನಡೆಯುತ್ತಿರುವು
ಕಾಣಬಹುದು.

ನಮ್ಮ ಕವಿಗಳ, ವಿದ್ವಾಂಸರ ಸಂಸ್ಕೃತ ಪ್ರೇಮದಿಂದಾಗಿಯೂ ಕೆಲವೊಮ್ಮೆ ಸ್ಥಳಗಳ ಹೆಸರು ಬದಲಾಗುವುದುಂಟು. ಉದಾ: ಬಿದರೂರು (ಬಿದರು + ಊರು) 'ಊರು' ಎಂಬ ವಾಗ್ನೆಕ 'ಬಿದರು' ಎಂಬ ನಿರ್ದಿಷ್ಟ; ಸಂಸ್ಕೃತೀಕರಣದಿಂದಾಗಿ ವೇಣುಪುರ ಎಂದಾಯಿತು. ಬಿದರೂರನ್ನು ಲಿಂಗಣ್ಣ ಕವಿ ನೂರಾರು ಬಾರಿ 'ವೇಣುಪುರ' ಎಂದೇ ಕರೆದಿದ್ದಾನೆ. ಇದಕ್ಕೆ ಅವನ ಸಂಸ್ಕೃತ ವ್ಯಾಮೋಹವೇ ಕಾರಣ; ಸಂಸ್ಕೃತದಲ್ಲಿ ಕರೆದರೆ ಅದು ಪ್ರತಿಷ್ಠೆಯ ಹೆಸರಾಗುತ್ತಿತ್ತು. ಇದೇ ರೀತಿ :

ಶೃಂಗೇರಿ – ಶೃಂಗಪುರ
ಬಸರೂರು – ವಸುಪುರ
ತೀರ್ಥಹಳ್ಳಿ – ತೀರ್ಥರಾಜಪುರ
ಕುಂದಾಪುರ – ಕ್ರೋಧಪುರ
ಸೋದೆ – ಸುಧಾಪುರ

ಎಂದಾಗಿವೆ. 'ಪುರ' ಎಂಬ ವಾಗ್ನೆಕದಿಂದ ಅಂತ್ಯವಾಗುವ ಎಡೆಗಳ ಹೆಸರು ಕಾಲಾಂತರದಲ್ಲಿ ಬದಲಾವಣೆಗೆ ಒಳಪಟ್ಟವು. ನಿಸರ್ಗವಾಚಿಯಾಗಿದ್ದ ಈ ಸ್ಥಳ ನಾಮಗಳು ಕ್ರಮೇಣ ವಸತಿವಾಚಿಗಳಾಗಿ ರೂಪುಗೊಂಡವು. ಕವಿಗಳ ಸಂಸ್ಕೃತ ಪ್ರೇಮದಿಂದಾಗಿ ಹಳ್ಳಿ, ಊರು, ಕೇರಿ, ಎರಿ ಮೊದಲಾದ ವಾಗ್ನೆಕಗಳು ಮಾಯವಾಗಿ 'ಪುರ' ಎಂಬುದು ಸೇರಿಕೊಂಡಿತು. ಕೆಳದಿ ನೃಪವಿಜಯ ಕೃತಿಯೂ ಇದಕ್ಕೆ ಹೊರತಾಗಿಲ್ಲ.

ಕೆಳದಿ ನೃಪವಿಜಯ ಕೃತಿಯಲ್ಲಿ ಕೆಳದಿ ಸಂಸ್ಥಾನದ ವ್ಯಾಪ್ತಿಗೆ ಸಂಬಂಧಿಸಿದ ಸ್ಥಳನಾಮಗಳಲ್ಲದೇ ಭಾರತದ ಇತಿಹಾಸಕ್ಕೆ ಸಂಬಂಧಿಸಿದ ಹೆಸರುಗಳೂ ಕಾಣಸಿಗುತ್ತವೆ. 'ಡಿಳ್ಳಿಯೆಂಬುದಾದಿಯೊಳ್ ಹಸ್ತಿನಾವತಿ' ಎನ್ನುತ್ತಾ ಅದನ್ನು ಪಾಂಡವ ಕೌರವರಿಂದ ತೊಡಗಿ ದೆಹಲಿ ಸುಲ್ತಾನರು ಅನಂತರ ಅಧಿಕಾರಕ್ಕೆ ಬಂದ ನೂರಾರು ರಾಜರ ಉಲ್ಲೇಖವೂ ಇಲ್ಲಿ ಬಂದಿದೆ. ದೆಹಲಿ ಸುಲ್ತಾನ ರಾಜರು, ಅವರ ಆಡಳಿತಾವಧಿ, ಅವರ ಸಾಧನೆಯನ್ನು ದಾಖಲಿಸಿದ ಪರಿಯೂ ಗಮನಾರ್ಹವಾದುದು. ಚಿತ್ತೋಡದಲ್ಲಿ ಹೆಸರು ಮಾಡಿದ ರಜಪೂತರ ಇತಿಹಾಸವೂ ಇಲ್ಲಿ ದಾಖಲಾಗಿದೆ. ಕವಿ ಚಿತ್ತೋಡದ ದಿಕ್ಕು-ದಿಸೆಯನ್ನು ಹೇಳುವ ರೀತಿಯೂ ಸ್ವಾರಸ್ಯಪೂರ್ಣವಾಗಿದೆ. "ಕುರುಕ್ಷೇತ್ರ ಸಮೀಪದೊಳ್ ಕಾಶಿಯ ದಿಳ್ಳಿಯ ವಾಯುವ್ಯ ದಿಕ್ಕಿನ ತಾಣದೊಳ್ ಕ್ಷತ್ರಿಯರ್ಗೆ ಮೂಲಸಂಸ್ಥಾನವಾದ ಚಿತ್ತೋಡೆಂಬ ಗಡಮೊಪ್ಪುತಿರ್ಪುದು. ಚಿತ್ತಕ್ಕೆ ಭಯಮಂ ಪುಟ್ಟಿಸುತಿದುದರಿಂ ಚಿತ್ತೋಡೆಂಬ ನಾಮಮಾದುದು" ಎಂದು ಹೇಳಿದ್ದಾನೆ. (ಕೆಳದಿ ನೃಪವಿಜಯ ಪುಟ ೧೯೭) "ಅ

ಚಿತೋಡಗಡದ ಸಮೀಪದೊಳಿರುತಿರ್ದ ಉದಯಪುರಮೆಂಬ ಪಟ್ಟಣ" (ಅದೇ ಪುಟ ೧೯೬)ದ ಉಲ್ಲೇಖವೂ ಬಂದಿದೆ. ಮರಾಠ ದೊರೆಗಳಿಗೆ ಸಂಬಂಧಿಸಿದ ಅನೇಕ ಕೋಟೆಗಳ ಉಲ್ಲೇಖ ಹಾಗೂ ಅವರ ವಂಶಾವಳಿಯ ಚಿತ್ರವೂ ಇಲ್ಲಿ ದಾಖಲಾಗಿದೆ. ಇದಲ್ಲದೇ ಮೊಗಲರು, ದಿಲ್ಲಿಯ ಸುಲ್ತಾನರು, ಬಿಜಾಪುರದ ಆದಿಲ್‌ಷಾಹಿಗಳು ಹಾಗೂ ಇನ್ನನೇಕ ಪಾಳೆಯಗಾರರ ಇತಿಹಾಸವಿಲ್ಲಿ ಚಿತ್ರಣಗೊಂಡಿದೆ. ಅವರೆಲ್ಲ ಎಲ್ಲಿಂದ ಆಳಿದರು? ಅವರ ರಾಜಧಾನಿ ಯಾವುದಾಗಿತ್ತು? ಅವರ ಜೀವನ ಸಾಧನೆಯ ಜೊತೆಗೆ ಅನೇಕ ಸ್ಥಳನಾಮಗಳ ಉಲ್ಲೇಖವೂ ಈ ಕೃತಿಯುಲ್ಲಿ ಕಾಣಸಿಗುತ್ತದೆ. ಒಟ್ಟು ಭಾರತದ ಧಾರ್ಮಿಕ ಹಾಗೂ ರಾಜಕೀಯ ಇತಿಹಾಸ, ಯಾವ ಯಾವ ರಾಜವಂಶಗಳು ಎಲ್ಲೆಲ್ಲಿ ಆಳಿಹೋದರೆಂಬ ಸ್ಪಷ್ಟವಾದ ನಕಾಶೆಯ ವಿವರವೂ ಈ ಕೃತಿಯಿಂದ ಚಿತ್ರಿಸಬಹುದು. ಒಂದು ಪ್ರದೇಶ ಎಲ್ಲಿದೆ? ಅದರ ಮೂಲ ಹೆಸರೇನಾಗಿತ್ತು. ಈಗ ಅದಕ್ಕೆ ಇರುವ ಹೆಸರಾವುದು? ಎಂಬೆಲ್ಲ ವಿಚಾರಗಳ ಬಗೆಗೆ ಪ್ರಸ್ತುತ ಕೃತಿಯಲ್ಲಿ ವಿವರಣೆ ಸಿಗುತ್ತದೆ ಎಂಬುದು ಅಚ್ಚರಿಯ ಸಂಗತಿ. ಕೆಳದಿ ಸಂಸ್ಥಾನದ ಸಾಧನೆಯನ್ನು ಹೇಳುವ ನೆಪದಲ್ಲಿ ಇನ್ನೂರು ವರ್ಷಗಳಷ್ಟು ಹಿಂದೆಯೇ ಕೆಳದಿ ನೃಪವಿಜಯ ಕೃತಿಯಲ್ಲಿ ಲಿಂಗಣ್ಣ ಕವಿ ಭಾರತದ ಸಾವಿರಾರು ವರ್ಷಗಳ ಇತಿಹಾಸದ ದರ್ಶನವನ್ನು ಮಾಡಿಕೊಡಲು ಪ್ರಯತ್ನಿಸಿದ್ದಾನೆ. ಅವನು ಹೇಳುವ ಸ್ಥಳನಾಮಗಳಿಂದಾಗಿ ಈ ಕೃತಿಯ ಐತಿಹಾಸಿಕತೆ ಮತ್ತಷ್ಟು ಖಚಿತತೆಯನ್ನು ಪಡೆದುಕೊಳ್ಳುತ್ತದೆ. ಇತಿಹಾಸದ ರಚನೆಯಲ್ಲಿ ಸ್ಥಳನಾಮಗಳು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತವೆ ಎಂಬ ಅಂಶ ಲಿಂಗಣ್ಣ ಕವಿಗೆ ಅಂದೇ ಗೊತ್ತಾಗಿರಬಹುದು. ಅವನ ಕಾಲದಲ್ಲಿಯೂ ಸ್ಥಳನಾಮಗಳು ಸಾಕಷ್ಟು ಪ್ರಮಾಣದಲ್ಲಿ ಬದಲಾಗುತ್ತಿದ್ದಿರಬೇಕು. ಆದ್ದರಿಂದ ಕವಿ ಇಂಥ ಸಂದರ್ಭದಲ್ಲಿ ಆ ಸ್ಥಳಕ್ಕಿರುವ ಪರ್ಯಾಯ ನಾಮ (ಪ್ರತಿನಾಮ)ವನ್ನು ತಪ್ಪದೇ ದಾಖಲಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾನೆ. ಅಂದಿನ ಸಂಚಾರ-ಸಂಪರ್ಕ ವ್ಯವಸ್ಥೆಯ ಬಗೆಗೆ, ರಾಜಮಾರ್ಗಗಳ ಬಗೆಗೂ ಈ ಸ್ಥಳನಾಮಗಳು ಅನೇಕ ಮಾಹಿತಿಗಳನ್ನು ನೀಡುತ್ತಿವೆ. ಸಾಂಸ್ಕೃತಿಕ ಅಧ್ಯಯನದ ಸಂದರ್ಭದಲ್ಲಿ ಕೆಳದಿ ನೃಪವಿಜಯ ಕೃತಿಯಲ್ಲಿ ದಾಖಲಾದ ಸ್ಥಳನಾಮಗಳು ಗಮನಾರ್ಹವಾದ ಪಾತ್ರವನ್ನು ವಹಿಸುತ್ತವೆ.

ಆಕರಗಳು

೧. ಶಾಮಶಾಸ್ತ್ರಿ, ಆರ್. : (ಸಂ) ಕೆಳದಿ ನೃಪವಿಜಯಂ ಈ ಕೃತಿಯ ಉಪೋದ್ಘಾತದಲ್ಲಿ ಕೃಷ್ಣಶಾಸ್ತ್ರಿ ಎ. ಆರ್; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ೧೯೭೩ ಪುಟ xvii

೨. ಕೆಳದಿ ಗುಂಡಾಜೋಯಿಸ್: (ಸಂ) ಲಿಂಗಣ್ಣ ಕವಿಯ ಕೆಳದಿ ನೃಪವಿಜಯ (ಗದ್ಯಾನುವಾದ) ಕನ್ನಡ ಸಾಹಿತ್ಯ ಪರಿಷತ್ತು; ಬೆಂಗಳೂರು ೧೯೭೬. ಪುಟ ೧ .

೩. ಕೆಳದಿ ವೆಂಕಟೇಶ ಜೋಯಿಸ್: (ಸಂ) ಕೆಳದಿ ಅರಸರ ಶಾಸನ ಸಂಪುಟ. ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಡಂಬಳ - ಗದಗ ೧೯೯೧. ಹೆಚ್ಚಿನ ಮಾಹಿತಿಗೆ ಈ ಕೃತಿಯನ್ನು ನೋಡಬಹುದು. ಇದರಲ್ಲಿ ೨೯೦ ಶಾಸನಗಳು ಬೆಳಕುಕಂಡಿವೆ. ಈ ಶಾಸನಗಳನ್ನು ಅಧ್ಯಯನ ಮಾಡಿ ಕೃತಿಯೊಂದನ್ನು ರಚಿಸಿಕೊಟ್ಟ ಕೀರ್ತಿಯೂ ಇದೇ ಲೇಖಕರಿಗೆ ಸಲ್ಲುತ್ತದೆ. ಇದನ್ನು ೧೯೯೫, ಕ. ಸಾ. ಪ. ಪ್ರಕಟಿಸಿದೆ.

೪. ವ್ಹಿ. ಶಿವಾನಂದ : ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿಯಲ್ಲಿ ಸ್ಥಳನಾಮಗಳು. ಪ್ರಬುದ್ಧ ಕರ್ನಾಟಕ, ಮೈಸೂರು ವಿಶ್ವವಿದ್ಯಾಲಯ, ಸಂಪುಟ ೭೪, ಸಂಚಿಕೆ ೨೯೧-೯೪, ಪುಟ ೧

೫. ಅದೇ, ಪುಟ ೧

೬ ಜೋಶಿ, ಶಂಬಾ : ಎಡೆಗಳು ಹೇಳುವ ಕಂನ್ನಾಡ ಕತೆ. ಧಾರವಾಡ ೧೯೪೭, ಪುಟ ೬.

ಈ ಲೇಖನದಲ್ಲಿ 'ಕೆಳದಿ ನೃಪವಿಜಯ'ದ ಪದ್ಯಗಳನ್ನು ಅಲ್ಲಲ್ಲಿ ಸಂದರ್ಭಕ್ಕನುಗುಣವಾಗಿ ನೀಡಲಾಗಿದೆ. ಅಲ್ಲಿ ಪುಟಸಂಖ್ಯೆಯನ್ನು ಕೊಡಲಾಗಿದೆ. ಇದಕ್ಕೆ ಆಕರ ಗ್ರಂಥವನ್ನಾಗಿ 'ಕೆಳದಿ ಗುಂಡಾಜೋಯಿಸ್' ಅವರು ಗದ್ಯಾನುವಾದ ಮಾಡಿಕೊಟ್ಟು ೧೯೭೬ರಲ್ಲಿ ಕ.ಸಾ.ಪ., ಬೆಂಗಳೂರು ಇವರು ಪ್ರಕಟಿಸಿದ ಕೃತಿಯನ್ನು ಇಟ್ಟುಕೊಳ್ಳಲಾಗಿದೆ.

***

ಕನ್ನಡ ಸಣ್ಣಕತೆ ಮತ್ತು ಬಲ್ಲಾಳರ ತ್ರಿಕಾಲ

ಶ್ರೀ ಕೆ. ನಾರಾಯಣ ಮೂರ್ತಿ

ತ್ರಿಕಾಲವು ವ್ಯಾಸರಾಯ ಬಲ್ಲಾಳರ ಐದನೆಯ ಕಥಾ ಸಂಗ್ರಹ. ೧೯೭೫ರಲ್ಲಿ ತನ್ನ ಪ್ರಾತಿನಿಧಿಕ ಕಥಾಸಂಗ್ರಹ 'ಮಂಜರಿ' ಪ್ರಕಟವಾದ ಮೇಲೆ 'ಕಸ್ತೂರಿ', 'ಸುಧಾ', 'ಪ್ರಜಾವಾಣಿ', 'ಉದಯವಾಣಿ' ಪತ್ರಿಕೆಗಳ ವಿಶೇಷ ಸಂಚಿಕೆಗಳಿಗಾಗಿ ಬರೆದ ಕತೆಗಳೂ 'ಮಂಜರಿ'ಯಲ್ಲಿ ಸೇರಿಸಲಾಗದೆ ಉಳಿದಿದ್ದ ಒಂದು ಕತೆಯೂ, ಸಾಹಿತ್ಯ ಅಕಾಡೆಮಿಯ 'ಇಂಡಿಯನ್ ಲಿಟರೇಚರ್' ಪತ್ರಿಕೆಗಾಗಿ ಬರೆದ ದ್ವೈತ ಕತೆಯೂ ಈ ಕಥಾಸಂಗ್ರಹದಲ್ಲಿ ಮುದ್ರಿಸಲ್ಪಟ್ಟಿದೆ.

ತ್ರಿಕಾಲದ ವಿಮರ್ಶೆಗೆ ಮುನ್ನ ಕತೆಯ ಪ್ರಾಚೀನತೆ ವ್ಯಾಖ್ಯೆ ಉಗಮ ವಿಕಾಸದ ಬಗ್ಗೆ ಸ್ವಲ್ಪ ತಿಳಿಯಪಡಿಸುತ್ತೇನೆ.

ಕನ್ನಡದಲ್ಲಿ ಸಣ್ಣಕತೆ ಎಂಬ ಪರಿಭಾಷೆ ಹುಟ್ಟಿಕೊಂಡದ್ದು ಇಂಗ್ಲಿಷ್ ಸಾಹಿತ್ಯ ವಿಮರ್ಶೆಯ ಪರಿಚಯದಿಂದ ಕನ್ನಡದಲ್ಲಿ ಸಮೃದ್ಧಿಯಾಗಿ ಸಣ್ಣಕತೆಗಳು ಸೃಷ್ಟಿಯಾಗತೊಡಗಿದ್ದು ನವೋದಯ ಕಾಲದಲ್ಲಿ ಇಂಗ್ಲಿಷ್‌ನಲ್ಲಾದರೂ ಸಣ್ಣಕತೆ (short story) ಎಂಬ ಹೆಸರು ಆ ಪ್ರಕಾರಕ್ಕೆ ಲಗತ್ತಿಸಲು ತೊಡಗಿದ್ದು ೧೯ನೇ ಶತಮಾನದ ನಂತರವೇ. ಆದರೆ ಈ ಹೆಸರು ಸೃಷ್ಟಿಯಾಗಿ ಬಳಕೆಗೆ ಬರುವುದಕ್ಕೆ ಬಹಳ ಹಿಂದಿನಿಂದಲೇ (ಬಹುಶಃ ಅನೇಕ ಸಾವಿರ ವರ್ಷಗಳಷ್ಟು) ಪ್ರಪಂಚದ ಅನೇಕ ಭಾಷೆಗಳಲ್ಲಿ ಸಣ್ಣಕತೆಗಳಿದ್ದುದನ್ನು ಗುರುತಿಸಬಹುದು. ಪ್ರಕಾರವೆಂದಾಗಲೀ, ದೃಷ್ಟಿಕೋನವೆಂದಾಗಲೀ ಸಣ್ಣಕತೆಯ ಎಲ್ಲ ವೈವಿಧ್ಯಗಳನ್ನೂ ಒಳಗೊಳ್ಳುವ ಸಮರ್ಪಕ ಲಕ್ಷಣವನ್ನು ನಿರೂಪಿಸುವುದು ಬಹುಶಃ ಅಸಾಧ್ಯ.

ನಿರ್ದಿಷ್ಟ ವ್ಯಾಪ್ತಿಯ ಗದ್ಯ ಎಂದು ಸಣ್ಣಕತೆಯನ್ನು ಗಮನಿಸುವುದಾದರೆ ಈ ಬಗೆಯ ರಚನೆಗಳು ಬರವಣಿಗೆಯ ಕಲೆ ಮನುಷ್ಯನಿಗೆ ಪರಿಚಯವಾಗುವುದಕ್ಕಿಂತ ಸಾವಿರಾರು ವರ್ಷಗಳಷ್ಟು ಹಿಂದಿನಿಂದಲೇ ಅಸ್ತಿತ್ವದಲ್ಲಿದ್ದವೆಂದು ಹೇಳಬೇಕಾಗುತ್ತದೆ. ದೇವತೆಗಳ ರಾಕ್ಷಸರ ಕತೆಗಳು; ಮನುಷ್ಯನ ಬೇಟೆಯ ವಿವರಗಳು; ದಿನನಿತ್ಯದ ಹರಟೆ; ಅಜ್ಜಿಕತೆಗಳು ಇವೆಲ್ಲವೂ ನಿರ್ದಿಷ್ಟ ಪ್ರಮಾಣದ ಗದ್ಯ ನಿರೂಪಣೆಗಳೇ ಆಗಿವೆ.

ನಮಗೆ ದೊರೆತಿರುವ ಅತೀ ಪ್ರಾಚೀನ ಸಣ್ಣಕತೆ ಬಹುಶಃ ಕ್ರಿ.ಪೂ.೩೨೦೦ರ ಸುಮಾರಿನದು. ಈಜಿಪ್ಟ್ ಭಾಷೆಯ 'The Two Brothers', 'ಬುದ್ಧನ ಜಾತಕ ಕತೆಗಳು', 'ಪಂಚತಂತ್ರ'. ಈಸೋಪನ 'ನೀತಿ ಕತೆಗಳು', ಹಳೆಯ ಒಡಂಬಡಿಕೆ ಯಲ್ಲಿ ಬರುವ ಡೇನಿಯಲ್ ಜೋನಾಹ್ ಮತ್ತು ರುತ್‌ರ ವೃತ್ತಾಂತ, ಹೊಸ ಒಡಂಬಡಿಕೆಯ ಸಾಮತಿಗಳು, ಅರೇಬಿಯನ್ ನೈಟ್ಸ್, ಡೆಕಮೆರಾನ್ ಹೀಗೆ ಹಳೆಯ ಕತೆಗಳ ಪಟ್ಟಿಯನ್ನೇ ಮಾಡಬಹುದು. ಕೇವಲ ಇವು ಮಾತ್ರವಲ್ಲದೆ fableಗಳು, ಜನಪದ ಕತೆಗಳು, ಕಿನ್ನರ ಕತೆಗಳು, ಸ್ಪೇನಿನ Exemplary Tales ಇವೂ ಸಣ್ಣ ಕತೆಯ ವ್ಯಾಪ್ತಿಗೇ ಒಳಪಡುತ್ತವೆ. ತೀರ ಇತ್ತೀಚಿನವರೆಗೆ ಸಣ್ಣಕತೆಗಳು ಯಾವು ದಾದರೊಂದು ಪ್ರಸಿದ್ಧ ಮೂಲದಿಂದ (ಬುದ್ಧನ ಜಾತಕ ಕತೆ, ಈಸೋಪನ ನೀತಿ ಕತೆ, ಪಂಚತಂತ್ರ ಕತೆ, ಇತ್ಯಾದಿ) ಬಂದವೇ ಆಗಿರುತ್ತಿದ್ದವು.

೧೯ನೇ ಶತಕದ ಆರಂಭದಲ್ಲಿ ವೃತ್ತ ಪತ್ರಿಕೆಗಳು ಕಾಣಿಸಿಕೊಳ್ಳತೊಡಗಿ ಓದುಗರ ಸಂಖ್ಯೆ ಅಪಾರವಾಗಿ ಬೆಳೆದಾಗ ಸ್ವತಂತ್ರ ಸಣ್ಣಕತೆಗಳ ರಚನೆಯತ್ತ ಪ್ರಸಿದ್ಧ ಲೇಖಕರ ಗಮನಹರಿಯಿತು.

"ಗದ್ಯ ಕಾವ್ಯಗಳು ಚಮತ್ಕಾರದಿಂದ ತುಂಬಿ, ಅಂಗಾಂಗಗಳಲ್ಲಿ ಆಭರಣ ಗಳು ನಿಬಿಡವಾಗಿ ತುಂಬಿರುವ ಪ್ರತಿಮೆಯಂತೆ, ಉಗುರು ಊರುವುದಕ್ಕೂ ಸ್ಥಳ ವಿಲ್ಲದ ಹಾಗೆ ಸಣ್ಣ ಕೆತ್ತನೆಯ ಕೆಲಸ ಮಾಡಿದ ಕಟ್ಟಡದ ಹಾಗೆ ಇರಬೇಕೆಂದು ಗದ್ಯ ಲೇಖಕರು ಯೋಚಿಸಿದ್ದಂತೆ ತೋರುತ್ತದೆ" ಎನ್ನುತ್ತಾರೆ ಎ. ಆರ್. ಕೃಷ್ಣ ಶಾಸ್ತ್ರಿ.

ಎಡ್ಗರ್ ಅಲೆನ್ ಪೊ ನ ಪ್ರಕಾರ ಸಣ್ಣಕತೆಯು "ಓದಲು ಅರ್ಧಗಂಟೆ ಯಿಂದ ಒಂದು ಅಥವಾ ಎರಡು ಗಂಟೆಗಳ ಕಾಲ ತೆಗೆದುಕೊಳ್ಳುವ ಸಂಕ್ಷಿಪ್ತವಾದ ಗದ್ಯ ನಿರೂಪಣೆ".

"ಸಣ್ಣಕಥೆಯೆಂದರೆ ಶಕ್ಯವಿದ್ದಷ್ಟು ಕಡಿಮೆ ಪಾತ್ರಗಳ ನೆರವಿನಿಂದ ಒಳ್ಳೇ ಪರಿಣಾಮಕಾರಿಯಾಗುವಂತೆ ತೀರ ಅಲ್ಪ ಪ್ರಸಂಗಗಳಿಂದ ಒಂದು ಸಂಗತಿಯನ್ನು ಹೇಳುವುದು" ಎನ್ನುತ್ತಾರೆ ಮಿರ್ಜಿ ಅಣ್ಣಾರಾಯ.

"ಕೂತ ಮೆಟ್ಟಿನಲ್ಲಿ ಓದಿ ಮುಗಿಸಬಹುದಾದ ಕಲಾ ಪರಿಣಾಮವುಳ್ಳ ಲಲಿತ ಸಾಹಿತ್ಯವೇ ಸಣ್ಣಕಥೆ"ಯು ಎಂದು ಸಾಮರ್‌ಸೆಟ್ ಮಾಮ್ ಹೇಳುತ್ತಾರೆ.

ಸಣ್ಣಕಥೆಯಲ್ಲಿ ಜೀವನದ ಅಥವಾ ವ್ಯಕ್ತಿಯ ಒಂದು ಮಹತ್ವದ ಅಂಶವನ್ನು ಪರಿಣಾಮಕಾರಿ ರೀತಿಯಲ್ಲಿ ಚಿತ್ರಿಸಲಾಗುತ್ತಿದೆ.

"ನಿಜವಾದ ಸಣ್ಣಕಥೆಯು ಕಥೆಯಿಂದ ಬೇರೆಯಷ್ಟೇ ಅಲ್ಲ ಕೇವಲ ಸಣ್ಣ ದಾದ ಕಥೆಗಿಂತ ದೊಡ್ಡದು .... ಸಣ್ಣಕಥೆಯು ಒಂದೇ ಪಾತ್ರ, ಒಂದೇ ಘಟನೆ, ಒಂದೇ ಭಾವನೆ ಅಥವಾ ಒಂದೇ ಪ್ರಸಂಗದಿಂದ ಉದ್ಭೂತವಾದ ಅನೇಕ ಭಾವನೆ ಗಳನ್ನು ಕುರಿತು ಹೇಳಲ್ಪಟ್ಟಿರುತ್ತದೆ" ಎಂದು ಮ್ಯಾಥ್ಯೂಸ್ ಅಭಿಪ್ರಾಯಿಸುತ್ತಾರೆ.

"ವ್ಯಕ್ತಿಗಳ ಜೀವನದಿಂದ ಮಹತ್ವದ ಘಟನೆಗಳನ್ನು ಸಣ್ಣಕಥೆ ಆರಿಸಿಕೊಳ್ಳು ತ್ತದೆ. ಅವುಗಳಿಗೆ ಯೋಗ್ಯವಾದ ವಾತಾವರಣ ಅಥವಾ ಆವರಣ ಸೃಷ್ಟಿ ಮಾಡ ಲಾಗುತ್ತದೆ. ಸಂವೇದನಾತ್ಮಕವಾಗಿ ಆದರೂ ಮಿತವ್ಯಯವನ್ನು ಪಾಲಿಸಿಕೊಂಡು ಕಥೆಯನ್ನು ಹೇಳಲಾಗುತ್ತದೆ" ಎಂದಿದ್ದಾರೆ ಎ.ಎಸ್. ಕೊಲಿನ್ಸ್.

"ಪಾತ್ರ ಸೃಷ್ಟಿ ಮಾಡುವುದೇ ಸಣ್ಣಕಥೆಯ ಕೇಂದ್ರಬಿಂದುವಾಗಿದೆ. ಪಾತ್ರ ಗಳನ್ನು ಶೃಂಗರಿಸಲು ಘಟನೆಗಳು ಹುಡುಕಲ್ಪಡಬೇಕು"ಎಂದು ಕ್ಯಾಥರಿನ್ ಮ್ಯಾನ್ಸ್ ಫೀಲ್ಡ್ ಹೇಳುತ್ತಾಳೆ.

ಕೆಲವು ವಿಮರ್ಶಕರ ಪ್ರಕಾರ ಸಣ್ಣ ಕತೆಯು ಪರಿಮಿತ ಅವಕಾಶದಲ್ಲಿ ಒಂದು ಪ್ರಪಂಚವನ್ನು ಸೃಷ್ಟಿಸಬೇಕು; ನಿತ್ಯದ ಬದುಕಿನ 'ಪ್ರಾತಿನಿಧಿಕ ಮಾದರಿ' ಯಾಗಿರಬೇಕು; ಯಾವುದಾದರೊಂದು ಪಾತ್ರ, ಘಟನೆ ಅಥವಾ ಭಾವನೆಯ ಮೇಲೆ ಗಮನವನ್ನು ಕೇಂದ್ರೀಕರಿಸುವ ಮೂಲಕ ಮತ್ತು ಪುನರುಕ್ತಿ ಹಾಗೂ ಪ್ರಸ್ತುತ ವಿಷಯಗಳನ್ನು ಕೈಬಿಡುವ ಮೂಲಕ 'Unity at impression' ಅನ್ನು ಪರಿ ಪೂರ್ಣತೆಯ ಭಾವನೆಯನ್ನೂ ಸ್ಥಾಪಿಸುತ್ತದೆ; ಸಣ್ಣಕತೆಯಲ್ಲಿ ಪರಿಣಾಮ ಮುಖ್ಯವೇ ಹೊರತು ಸಂಭಾವ್ಯತೆಯಲ್ಲ; ವಿರೋಧಾಭಾಸ, ಶಿಲ್ಪ, ನಾಟಕೀಯ ವಿನ್ಯಾಸ ಮತ್ತು ಮಹತ್ವಪೂರ್ಣ ಅನುಭವಗಳ ಬಗ್ಗೆ ಓದುಗನ ಆಕಾಂಕ್ಷೆಗಳನ್ನು ಪೂರೈಸ ಬೇಕು; ಭ್ರಮೆ (fantasy), ವಾಸ್ತವಿಕತೆ, ಸಹಜತೆ ಈ ಯಾವ ವಿಧದಲ್ಲಿ ಯಾದರೂ ಕತೆಯನ್ನು ರಚಿಸಬಹುದು; ಕಥೆಯ ಭಾಷೆ ಮಿತವಾದದ್ದಾಗಿರಬೇಕು; ಬಾಹ್ಯ ವಾಸ್ತವಿಕತೆಯನ್ನು ನಕಲು ಮಾಡುವುದಕ್ಕಿಂತ ಮಿಗಿಲಾಗಿ ಕತೆಯ ಭಾಷೆಯು ಓದುಗನಿಗೆ 'ಸೂಚನೆಗಳ ಮುಖಾಂತರ ಸಾಮಾನ್ಯ ದರ್ಶನ' ನೀಡು ವಂತಿರಬೇಕು. ಕತೆಯ ಮುಕ್ತಾಯ ಎಂದರೆ ಘಟನೆಗಳ ಫಲಿತಾಂಶ ಏನು ಎಂಬುದೇ ಕತೆಯ ಕೇಂದ್ರವಾಗಿರುತ್ತದೆ.

ಸುಮಾರು ೫೦೦ ರಿಂದ ೧೦೦೦ ಪದಗಳಷ್ಟು ವ್ಯಾಪ್ತಿ ಇರುವ ಕತೆಗಳನ್ನು ಕಿರುಗತೆ ಎಂದೂ ೧೦,೦೦೦ ಪದಗಳಿಗಿಂತಲೂ ಹೆಚ್ಚಿನ ವ್ಯಾಪ್ತಿ ಇರುವ ಸಣ್ಣಕತೆ ಗಳನ್ನು ನೀಳ್ಗತೆ ಅಥವಾ ಕಿರು ಕಾದಂಬರಿ (Novellete) ಎಂದೂ ಕರೆಯುತ್ತಾರೆ.

ಕನ್ನಡದಲ್ಲಿ ಕಾದಂಬರಿಯ ತರುವಾಯ ಸಣ್ಣಕತೆಯೇ ಅತ್ಯಂತ ಲೋಕಪ್ರಿಯವಾದ ಸಾಹಿತ್ಯ ರೂಪವಾಗಿದೆ. ಸಣ್ಣಕತೆಯು ಭಾವಗೀತದೊಡನೆ ಹೊಸದಾಗಿ ಬಂದ ಸಾಹಿತ್ಯ ಪ್ರಕಾರವಾಗಿದೆ. ಬ್ಯಾಕ್ಟೀರಿಯಾದ ಮರಿಗಳಂತೆ ಸಣ್ಣಕತೆಗಳು ಹುಟ್ಟುತ್ತಲೇ ಇರುವುದರಿಂದ ಸಣ್ಣಕತೆಗಳ ನಿಖರವಾದ ಸಂಖ್ಯೆಯನ್ನು ತಿಳಿಯುವುದು ಕಷ್ಟ. ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆಗಳಲ್ಲೆಲ್ಲ ಕತೆ ಹುಟ್ಟುತ್ತಲೇ ಇದೆ.

ಈ ಸಾಹಿತ್ಯ ಪ್ರಕಾರಕ್ಕೆ ಕ್ರಮಬದ್ಧವಾದ ಬೆಳವಣಿಗೆ ಇಲ್ಲವೆನ್ನಬಹುದು. ಭಾವಗೀತ ಹಾಗೂ ಹರಟೆಗಳೊಡನೆ ಪಾಶ್ಚಾತ್ಯರಿಂದ ಬಂದ ಸಣ್ಣಕತೆ ಭಾವಗೀತದಂತೆ ನವೋನವ ಸಂಸ್ಕಾರವನ್ನು ಪಡೆದು ಸಾಹಿತ್ಯದ ಪ್ರಮುಖ ಅಂಗವಾಗಿ ಬೆಳೆದು ಬರಲಿಲ್ಲ.

ಐತಿಹಾಸಿಕವಾಗಿ ದಿ. ಪಂಜೆಮಂಗೇಶರಾಯರು ಸಣ್ಣಕತೆಗೆ ಮೊದಲಿಗರಾಗಿದ್ದಾರೆ. ಸಂಖ್ಯೆಯ ದೃಷ್ಟಿಯಿಂದ ಇವರ ಕತೆಗಳು ಕಡಿಮೆ ಅಲ್ಲದೆ ಅವು ಸಾಹಿತ್ಯ ಲಕ್ಷಣಗಳನ್ನೆಲ್ಲ ಪೂರ್ಣವಾಗಿ ಒಳಗೊಂಡಿಲ್ಲ.

ಕನ್ನಡ – ಸಣ್ಣಕತೆಗಳ ಕ್ಷೇತ್ರದಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರರದು ಬಹಳ ದೊಡ್ಡ ಹೆಸರು. ಅವರ ರಂಗಪ್ಪನ ಕತೆಗಳು ಹೊಸ ಸಾಹಿತ್ಯಲೋಕವೊಂದನ್ನು ತೆರೆದು ತೋರಿಸಿದವು. ಆದ್ದರಿಂದ ಈಗ ನಾವು ಶ್ರೀನಿವಾಸರನ್ನೇ ಸಣ್ಣಕತೆಗಳ ಜನಕ ಎಂದು ಕರೆಯುತ್ತೇವೆ. ಶ್ರೀನಿವಾಸರ ಕತೆಗಳನ್ನು ಕಾಣುವ ತನಕ ಪತ್ರಿಕೆಗಳಲ್ಲಿ ಮಾತ್ರ ನಾವು ಸಣ್ಣಕತೆಗಳನ್ನು ಕಾಣಬಹುದು. ಅವೆಲ್ಲ ಅನುಕರಣದ ಬರಹಗಳಾಗಿವೆ. ಇದಕ್ಕೆ ಅಪವಾದವಾಗಿ ದಿವಂಗತ ಶಿ.ಸೋ. ಕುಲಕರ್ಣಿಯವರ 'ನಾಡನೆಲೆಗಾರ'ವನ್ನು ಕಾಣಬಹುದು – ನಡೆದು ಬಂದ ದಾರಿ.

ಜೀವನದ ಮೂಲಭೂತವಾದ ಹಿರಿತನದ ಅರ್ಥ ಶ್ರೀನಿವಾಸರಿಗಾಗಿರುವುದರಿಂದಲೇ ಅವರು ಯಾವ ಮಾತನ್ನೂ ಮನಗಾಣಿಸುವುದಕ್ಕಾಗಲಿ ಅಲ್ಲಗಳೆಯುವುದಕ್ಕಾಗಲಿ ಹೋಗುವುದಿಲ್ಲ. ಇವರ ಎಲ್ಲ ಕತೆಗಳೂ ಒಂದು ಸಾಮಾನ್ಯ ಸೂತ್ರದಿಂದ ಪೋಣಿಸಿದವುಗಳಾಗಿವೆ. ಕಲೆಯ ದೃಷ್ಟಿಯಿಂದ ಶ್ರೀನಿವಾಸರ ಎಲ್ಲ ಕತೆಗಳೂ ಪರಿಪೂರ್ಣವಾಗಿವೆ.

ವ್ಯಾಸರಾಯ ಬಲ್ಲಾಳರ ಕತೆಗಳು ಮನೋಧರ್ಮದ ದೃಷ್ಟಿಯಿಂದ ಇನ್ನೂ ಶ್ರೀನಿವಾಸರ ಕತೆಗಳ ಪರಂಪರೆಯನ್ನೇ ಅನುಸರಿಸಿವೆ. ಮುಂಬೈಯಂಥ ಹೋರಾಟದಿಂದ ತುಂಬಿದ ನಗರದ ಹಿನ್ನೆಲೆಯಲ್ಲಿಯೂ ಒಂದು ಸುಕುಮಾರವಾದ ಜಗತ್ತನ್ನು ಅವರ ಕತೆಗಳು ಕಟ್ಟಿಕೊಳ್ಳುತ್ತವೆ. ಮುಂಬಯಿಯಲ್ಲಿಯ ಸುಶಿಕ್ಷಿತರ ಹಲವಾರು

ತರದ ಸಮಸ್ಯೆಗಳನ್ನು ಇವರು ಚಿತ್ರಿಸಿದ್ದಾರೆ. ಅವುಗಳ ಸ್ವರೂಪ ಸಾಮಾಜಿಕವಾಗಿದ್ದರೂ ಅವು ವ್ಯಕ್ತಿಯ ಅಂತಃಕರಣದ ಮೇಲೆ ಬೀರುವ ಪರಿಣಾಮದ ಕಡೆಗೆ ಮಾತ್ರ ಇವರ ಗಮನವಿರುತ್ತದೆ. ವಿವಾಹ, ಹೆಚ್ಚಾಗುವ ಮಕ್ಕಳು, ಜೀನೆಗಳು, ರಾಜಕೀಯ ಕ್ಷೋಭೆಗಳು, ಮನೋವಿಕಾರಗಳು ಇವೇ ಮುಂತಾದವು ಈ ಸಮಾಜವನ್ನು ಪೀಡಿಸುವ ಸಮಸ್ಯೆಗಳಾಗಿವೆ. ಹೀಗೆ ಸಮಸ್ಯೆಗಳು ಹೊಸವಾಗಿದ್ದರೂ ಬಲ್ಲಾಳರು ಅವಕ್ಕೆ ಪರಿಹಾರವನ್ನು ಅಂತಃಕರಣ ಪ್ರೀತಿಯಲ್ಲಿಯೇ ಕಾಣುತ್ತಾರೆ. ಮುಂಬಯಿಯಲ್ಲಿಯೇ ನಡೆಯಬಹುದಾದ ಪಷ್ಟೋ ಘಟನೆಗಳು ಇವರ ಕತೆಗಳ ಸಂವಿಧಾನವನ್ನು ರಚಿಸುತ್ತದೆ. 'ತ್ರಿಕಾಲ' ಸಂಗ್ರಹದಲ್ಲಿಯ ಕತೆಗಳು ಈ ಮಾತಿಗೆ ಉತ್ತಮ ಉದಾಹರಣೆ. ತ್ರಿಕಾಲ, ಮಿಣುಕುಹುಳುಗಳು, ಬಂಧ ಈ ಕತೆಗಳು ನಿರ್ವಹಣದ ದೃಷ್ಟಿಯಿಂದ ಬಹಳ ಸುಂದರವಾಗಿ ಮೂಡಿಬಂದಿವೆ.

ಎಲ್ಲ ವಸ್ತುವೂ ಕಲೆಯ ಸಾಮಗ್ರಿಯಾಗಬಹುದು. ಎಲ್ಲ ಬಗೆಯ ವಿವರಗಳೂ ಕಲೆಯಲ್ಲಿ ತಲೆದೋರಬಹುದು. ಆದರೆ ಅವು ಕವಿಪ್ರತಿಭೆಯಲ್ಲಿ ಮೊದಲು ಲೀನವಾಗಿ ಹದವಾದ ಪಾಕಕ್ಕೆ ಬಂದು ರಸಮಯವಾಗಿ ಹೊರಬೀಳಬೇಕು. ಕಂಡಕಂಡ ವಿವರಗಳನ್ನು ವರದಿಯೊಪ್ಪಿಸಿದ ಮಾತ್ರಕ್ಕೆ ಕಥೆಯಾಗುವುದಿಲ್ಲ. ತನಗೆ ಗೋಚರವಾದಷ್ಟನ್ನೂ ಕಥೆಗಾರನು ಚಿತ್ರಿಸಲು ಶಕ್ಯವಿಲ; ಹಾಗೆ ಚಿತ್ರಿಸುವುದೂ ಇಲ್ಲ; ಒಳ್ಳೆಯ ಕಲೆಯಲ್ಲಿ ಹಾಗೆ ಚಿತ್ರಿಸಬೇಕಾಗಿಯೂ ಇಲ್ಲ. ವಾಸ್ತವಿ ಕತೆ ಮಾತ್ರವೇ ಕಲಾ ಮಾರ್ಗವಲ್ಲ. ಕಲೆಗಾರನು ಅತಿ ಸಾಮಾನ್ಯವಾದ ಮೇಲು ನೋಟಕ್ಕೆ ಅಸುಂದರವೆಂದು ತೋರಬಹುದಾದ ವಸ್ತುವನ್ನು ಕೂಡ ಕಳೆಗಟ್ಟುವಂತೆ ಪ್ರತಿಪಾದಿಸಬಹುದು. ಬಲ್ಲಾಳರ 'ತ್ರಿಕಾಲ' ಕಥಾಸಂಕಲನವನ್ನು ಇಲ್ಲಿ ಸ್ಮರಿಸಬಹುದು. ಯಾಕೆಂದರೆ ಇಲ್ಲಿಯ ಕತೆಗಳಲ್ಲೆಲ್ಲ ವಾಸ್ತವಿಕ ಅಂಶಗಳೇ ಪ್ರಮುಖ ಆದರೆ ಅದನ್ನು ಬಲ್ಲಾಳರು ಕಲಾತ್ಮಕವಾಗಿ ಚಿತ್ರಿಸಿ ಸುಂದರ ಕತೆಯನ್ನಾಗಿ ನಿರೂಪಿಸಿದ್ದಾರೆ. ಇಲ್ಲಿ ಮೇಲುನೋಟಕ್ಕೆ ಅಸುಂದರ ಎಂದು ತೋರುವ ವಸ್ತುಗಳೇ ತೋರುತ್ತವೆ. ಆದರೂ ಕಲಾತ್ಮಕವಾಗಿ ಕತೆ ಮೂಡಿದುದು ಬಲ್ಲಾಳರ ಕಲಾ ಕೌಶಲಕ್ಕೆ ಹಿಡಿದ ಕನ್ನಡಿಯಾಗಿದೆ. 'ತ್ರಿಕಾಲ' ಸಂಕಲನವಲ್ಲಿರುವ ಎಲ್ಲ ಕತೆಗಳ ವಸ್ತುವೂ ಮುಂಬಯಿ ನಗರದ ವಿವರವೇ ಆದರೂ ಅದು ವರದಿಯಾಗದೆ ಕಲಾತ್ಮಕ ವಾಗಿ ರೂಪುಗೊಂಡು ಬಲ್ಲಾಳರ ಹಿರಿಮೆಯನ್ನು ಇನ್ನಷ್ಟು ಹೆಚ್ಚಿಸಿದೆ.

ಸಣ್ಣಕತೆಯ ತಂತ್ರ, ವ್ಯಾಪ್ತಿ ಬರವಣಿಗೆಯ ರೀತಿ, ಅದರ ಒಪ್ಪಂದದ ಪರಿಣಾಮ ಹಾಗೂ ಅದು ತೊಡಬಹುದಾದ ಅನೇಕ ರೂಪಗಳು, ಇವುಗಳ ಬಗ್ಗೆ ವಿಮರ್ಶಕರು ಅದರ ಬೆಳವಣಿಗೆ ತಿಳಿದುಕೊಂಡಷ್ಟು ಸುಲಭವಾಗಿಲ್ಲವೆಂದು

ಮನವರಿಕೆ ಮಾಡಿಕೊಟ್ಟಿದ್ದರೂ ಇಂದು ಸಣ್ಣಕತೆಯ ಬರವಣಿಗೆ ತೀರ ಹಗುರಾಗಿ ಬಿಟ್ಟಿದೆ. ಮೊದಮೊದಲು ಈ ಹೊಸ ಸಾಹಿತ್ಯ ಪ್ರಕಾರದ ಬಗ್ಗೆ ನಮ್ಮ ಲೇಖಕರು ಬಹಳ ಉತ್ಸಾಹವನ್ನು ತಳೆದಿದ್ದು, ನೇರವಾಗಿ ಪಾಶ್ಚಾತ್ಯ ಲೇಖಕರಿಂದ ಪ್ರಭಾವಿತರಾಗಿ ಪರಕೀಯ ಪ್ರಭಾವವನ್ನು ಅರಗಿಸಿಕೊಂಡು ನಮ್ಮ ಬದುಕು ಭಾಷೆಗಳ ಅಗ್ನಿ ಪರೀಕ್ಷೆಗೊಡ್ಡಿಕೊಂಡು ಬರೆಯುವ ಕಷ್ಟವನ್ನು ಅವರು ಎದುರಿಸಬೇಕಾಗಿತ್ತು. ಇದರ ಪರಿಣಾಮವಾಗಿ ಸಣ್ಣಕತೆಯಲ್ಲಿ ಉತ್ತಮಿಕೆಯನ್ನು ಕಾಣಬಹುದು. ಸಣ್ಣಕತೆಯ ಬರವಣಿಗೆಯೂ ಸುಲಭವಾಗುತ್ತ ಬಂದಿತು. ಅಲ್ಲಲ್ಲಿ ಒಳ್ಳೆಯ ಕತೆಗಳನ್ನೂ ಕತೆಗಾರರನ್ನೂ ಕಾಣಬಹುದಾದರೂ ಸಣ್ಣಕತೆ ಒಂದು ಮೊತ್ತದಲ್ಲಿ ಸಾಹಿತ್ಯಕವಾಗಿ ಪ್ರಗತಿ ಸಾಧಿಸಿಲ್ಲ. ಶ್ರೀನಿವಾಸರಂತೆ ಸಣ್ಣಕತೆಯನ್ನೇ ತಮ್ಮ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮವನ್ನಾಗಿ ಮಾಡಿಕೊಂಡ ಕತೆಗಾರರು ಹೊಸ ಪೀಳಿಗೆಯಲ್ಲಿ ಕಾಣಬರುವುದಿಲ್ಲ. ಈಗ ಪ್ರಕಟವಾಗುತ್ತಿರುವ ಕತೆಗಳಲ್ಲಿ ಒಳ್ಳೆಯ ಕತೆಗಳ, ಪ್ರಮಾಣಕ್ಕಿಂತ ಅಗ್ಗದ ಕತೆಗಳು ಹೆಚ್ಚಾಗಿರುವುದು ಕಾಣಬರುತ್ತಿದೆ. ಆದರೆ ಬಲ್ಲಾಳರ ಕತೆಗಳಲ್ಲಿ ವಸ್ತು ತಂತ್ರಗಳ ವಿಷಯದಲ್ಲಿ ಪ್ರಬುದ್ಧತೆ ಸಾಧಿಸಿಬಿಟ್ಟಿತು. ಹೀಗೆ ಬಲ್ಲಾಳರ. ಮುಂಬಯಿ ಜನಜೀವನ, ಸಮಸ್ಯೆ ಇತ್ಯಾದಿಗಳ ಬಗ್ಗೆ ಕಥೆ ಬರೆದರು. ಆದರೂ ತಂತ್ರ ವಸ್ತುಗಳಲ್ಲಿ ಹೇಳಿಕೊಳ್ಳುವಂಥ ಹೊಸ ಸಾಧ್ಯತೆಗಳು ಹುಟ್ಟಿಕೊಳ್ಳಲಿಲ್ಲ. ಬಲ್ಲಾಳರ ಕತೆಗಳಲ್ಲಿ ಹಳ್ಳಿ-ನಗರ, ಹಳ್ಳಿಜನ-ನಗರಜನ, ಹಳೆಯಪೀಳಿಗೆ-ಹೊಸಪೀಳಿಗೆ, ಸಂಪ್ರದಾಯ-ಆಧುನಿಕತೆ, ಭೂತಕಾಲ - ವರ್ತಮಾನಕಾಲ ಇಂತಹ ದ್ವಂದ್ವಗಳು ಸಾಮಾನ್ಯವಾಗಿವೆ.

ಬಲ್ಲಾಳರ ಕತೆಗಳು ಮೌಲ್ಯರಹಿತವಾದ ಜಗತ್ತಿನಲ್ಲಿ ಹೊಸದಾಗಿ ಮೌಲ್ಯವನ್ನು ಹುಡುಕಬೇಕಾದ, ವಿದ್ಯೆ - ನಗರವಾಸಿಗಳ ಫಲವಾಗಿ ಹಳೆಯದನ್ನು ಒಪ್ಪಲೊಲ್ಲದ ಮತ್ತು ಹೊಸದನ್ನು ಸುಲಭವಾಗಿ ಸ್ವೀಕರಿಸಲೊಲ್ಲದ, ಪೀಳಿಗೆಗಳ ಅಂತರದಿಂದಾಗಿ ಸಂವಹನ ಸಾಧ್ಯವಾಗದ ಒಂದು ಸಾಮಾಜಿಕ ಸ್ಥಿತಿಯ ಪರಿಣಾಮವಾಗಿದ್ದು ಅಂತರ್ಮುಖತೆ ಬರಬರುತ್ತ ತನ್ನ ಪರಿಸರವನ್ನು ಕಳೆದುಕೊಂಡು ತಾನೇತಾನಾಗಿ ನಿಂತು ಇಡಿಯ ಬರವಣಿಗೆಯನ್ನು ಆವರಿಸಿಕೊಂಡಿತು. ಘಟನೆಗಳು ಕ್ರಮೇಣ ಮಹತ್ವ ಕಳೆದುಕೊಳ್ಳುತ್ತ ಅಂತರ್ಮುಖ ಮನಸ್ಸಿನ ಹೊಯ್ದಾಟವೇ ಕಥಾವಸ್ತುವಾಯಿತು. ಇದರಿಂದಾಗಿ ಸಾಮಾಜಿಕ ಸಮಸ್ಯೆಗಳು ಕಥೆಗಳಿಂದ ದೂರವಾಗುತ್ತ ಬಂದವು. ಹೆಚ್ಚಿನ ಕತೆಗಾರರ ಸಾಮಾಜಿಕ ಪ್ರಜ್ಞೆ ಹಳ್ಳಿಯ ಬದುಕಿಗೆ ಮಾತ್ರ ಸೀಮಿತವಾಗಿವೆ. ನಗರದಲ್ಲಿರುವುದು ಸಮಾಜವೇ ಅಲ್ಲವೇ? ಬಲ್ಲಾಳರು ನಗರಸಮಾಜದ ಸಾಮಾಜಿಕ ಜನಜೀವನದ ಚಿತ್ರಣವನ್ನು ತಮ್ಮ ಕತೆಗಳಲ್ಲಿ ಕಡೆದು ನಿಲ್ಲಿಸಿದ್ದಾರೆ. ಇವರ ಕತೆಗಳಲ್ಲಿ ನಗರ ಪ್ರಜ್ಞೆ ಸ್ಪಷ್ಟವಾಗಿ ಗೋಚರಿಸುತ್ತಿದೆ.

ಗಿರಡ್ಡಿ ಗೋವಿಂದರಾಜು ಅವರು "ಕನ್ನಡ ಸಣ್ಣಕತೆ-ಒಟ್ಟಿನಲ್ಲಿ ಇಡಿಯ ಸಾಹಿತ್ಯ ಸಹ-ಸಾಮಾಜಿಕ ಹರವು ಮತ್ತು ಅಂತರ್ಮುಖತೆಯ ಆಳ ಎರಡನ್ನೂ ಸಮ ನ್ವಯಗೊಳಿಸುವುದು ಹೆಚ್ಚು ಅಗತ್ಯವಾಗಿದೆ. ಈ ಸಮನ್ವಯಕ್ಕೆ ಅಗತ್ಯವಾದ ತಾಂತ್ರಿಕ ಪರಿಕರಗಳನ್ನು ಕನ್ನಡದಲ್ಲಿ ಹೊಸದಾಗಿ ನಿರ್ಮಿಸಿಕೊಳ್ಳುವುದೇ ಇಂದಿನ ಮುಖ್ಯ ಸಮಸ್ಯೆಯಾಗಿದೆ. ಸಾಮಾಜಿಕ ಪ್ರಜ್ಞೆ ಮತ್ತು ಅಂತರ್ಮುಖತೆಗಳೆರಡನ್ನೂ ಒಂದೇ ದೃಷ್ಟಿಕೋನದಲ್ಲಿ ಹಿಡಿಯಬಲ್ಲ ಹೊಸ ತಂತ್ರದಿಂದ ಮಾತ್ರ ಕವಲುದಾರಿಯಲ್ಲಿರುವ ಇಂದಿನ ಕನ್ನಡ ಸಣ್ಣಕತೆಗೆ ಹೊಸ ಆಯಾಮ ಮಾಡಬಲ್ಲದು" ಎಂದಿದ್ದಾರೆ [ಸಣ್ಣಕತೆಯ ಹೊಸ ಒಲವುಗಳು].

ಬಲ್ಲಾಳರ ಕತೆಗಳು ಅಂತರ್ಮುಖತೆಯನ್ನು ಹೊಂದಿದಷ್ಟು, ಸಾಮಾಜಿಕ ಪ್ರಜ್ಞೆಯನ್ನು ಮೈಗೂಡಿಸಿಕೊಂಡಿಲ್ಲ. ತ್ರಿಕಾಲದ ಎಲ್ಲ ಕತೆಗಳೂ ಇದಕ್ಕೆ ನಿದರ್ಶನ. "ಇಲ್ಲಿಯ ಕತೆಗಳಿಗೆ ಮುಂಬಯಿಯೇ ಕೇಂದ್ರ. ಪಾತ್ರಗಳು ಅಲ್ಲಿನ ಬದುಕಿನ ವಿವಿಧ ಮುಖಗಳ ಪ್ರತಿನಿಧಿಗಳು.

'ಅನುಭವ'ದ ಜೋಶಿಮಾ, 'ಗೋಡೆ'ಯ ಮೀನಾ, 'ಬಂಧ'ದ ಶ್ರೀಖಂಡೆ, 'ತಾಮ್ರದ ಬಳೆಯ' ಶಾಸ್ತ್ರೀಜೀ, 'ಮಿಣುಕುಹುಳುಗಳು' ಕಥೆಯ ಮೀನಾಕ್ಷಿದೇಶ ಪಾಂಡೆ, 'ತ್ರಿಕಾಲ'ದ ರುಕ್ಮಾತಾಯಿ, 'ದ್ವೈತ'ದ ನಾನು - ಬದುಕಿನಲ್ಲಿ ಕಳೆದು ಕೊಂಡಿರುವ ಏನನ್ನೋ ಅರಸುತ್ತಾ ಹೊರಟಿರುವ ಪಾತ್ರಗಳು.

ಮಾನವ ಸಂಬಂಧಗಳ ಒಳಸುಳಿಗಳು, ಹೊಸತು ಹಳತುಗಳ ಸಂಘರ್ಷ. ಮನಸ್ಸಿನಾಳದಲ್ಲಿ ಇಣಿಕಿ ನೋಡುತ್ತವೆ- ಇದೇ ಇವರ ಕಥೆಗಳ ವೈಶಿಷ್ಟ್ಯ"- ಹಿನ್ನುಡಿ.

ಬಲ್ಲಾಳರ ಕತೆಗಳನ್ನು ಇತರ ಕತೆಗಳೊಂದಿಗೆ ಹೋಲಿಸಿದರೆ ಇದು ಎದ್ದು ಕಾಣುತ್ತದೆ. 'ತ್ರಿಕಾಲ' ಕಥಾಸಂಕಲನವು ಮುಂಬಯಿ ಜನಜೀವನದ ಬಗ್ಗೆ ವಿವರಣೆ ನೀಡುತ್ತದೆ. ಕನ್ನಡದಲ್ಲಿ ಕೇವಲ ನಗರವಾಸಿಗಳ ಜೀವನ ಸಮಸ್ಯೆ. ನಗರೀಕರಣ, ಕೈಗಾರಿಕತೆ, ಶೋಷಣೆ, ದಬ್ಬಾಳಿಕೆ, ರಾಜಕೀಯ ಕ್ಷೋಭೆಗಳು, ಮನೋವಿಕಾರಗಳು, ಇತ್ಯಾದಿಗಳ ಬಗ್ಗೆ ಬರೆದಂತಹ ಕಥಾಸಂಕಲನವೆಂದರೆ ಬಲ್ಲಾಳರ ಕೃತಿ ಮಾತ್ರ. ಇವರ ಒಂದೇ ಒಂದು ಕತೆಯೂ ಕೂಡ ನಗರವನ್ನು ಬಿಟ್ಟು ಹೊರಹಾಯುವುದಿಲ್ಲ.

ಬಲ್ಲಾಳರ ಈ ಕಥಾಸಂಕಲನದಲ್ಲಿರುವ ಎಲ್ಲ ಕತೆಗಳೂ ಭೂತಕಾಲ, ವರ್ತಮಾನಕಾಲ ಹಾಗೂ ಭವಿಷ್ಯತ್‌ಕಾಲಗಳ ಬಗ್ಗೆ ಚರ್ಚಿಸುತ್ತದೆ. ಅದೇ ರೀತಿ

ಅಜ್ಜ, ಮಗ, ಮೊಮ್ಮಗ ಹೀಗೆ ಮೂರು ತಲೆಮಾರಿನ ಬಗ್ಗೆಯೂ ಹೆಚ್ಚಿನ ಕತೆಗಳು ಹೆಣೆದುಕೊಂಡಿವೆ. ಮೂರು ತಲೆಮಾರಿನ ಜನಜೀವನವನ್ನೂ ಈ ಕಥಾ ಸಂಕಲನವು ವಿವರಣೆ ನೀಡುತ್ತಿದೆ. ಈ ಎಲ್ಲ ಕಾರಣದಿಂದಾಗಿ ಈ ಕಥಾಸಂಕಲನಕ್ಕೆ 'ತ್ರಿಕಾಲ' ಎಂಬ ಶಿರೋನಾಮೆ ಹೆಚ್ಚು ಹೊಂದಿಕೆಯಾಗುತ್ತಿದೆ.

ನಗರೀಕರಣ, ನಗರಜೀವನ, ಆಧುನಿಕ ಆಚಾರವಿಚಾರಗಳು, ನಗರವಾಸಿಗಳ ಸಮಸ್ಯೆ ಮುಂತಾದ ವಿಚಾರಗಳನ್ನು ಚಿತ್ರಿಸಿ ನಗರ ಜೀವನದ ಸ್ವರೂಪವನ್ನು ತೋರಿಸುವುದೇ ಇಲ್ಲಿರುವ ಕತೆಗಳ ಕಾರ್ಯವಾಗಿದೆ. ಆ ಮೂಲಕ ನಗರ ಜೀವನವು ಹಿಂದೆ ಹೇಗಿತ್ತು, ಈಗ ಹೇಗಿದೆ ಹಾಗೂ ಮುಂದೆ ಏನಾಗಬಹುದು? ಎಂದು ತಿಳಿಯಪಡಿಸುವುದೇ 'ತ್ರಿಕಾಲ'ದ ಉದ್ದೇಶ.

ಬಲ್ಲಾಳರ ಕತೆಗಳಲ್ಲಿ ಜೀವನ ಮೌಲ್ಯ ಒಳಗೊಂಡಿದೆ. ಬಲ್ಲಾಳರು ಸಾಹಿತ್ಯ ರಚನೆಗೆ ತೊಡಗಿದ್ದೇ ಕತೆಗಳಿಂದ. ಬಲ್ಲಾಳರ ಕೃತಿಗಳು ಸೃಜನಶೀಲತೆಯಿಂದ ಕೂಡಿದೆ. "ಸಾಹಿತ್ಯಿಕವಾಗಿ ತೃಪ್ತಿ ತಂದಿದೆ ಎನ್ನುವುದನ್ನು ಹೇಳುವುದು ಕಷ್ಟ. ಜೀವನ ಅತೃಪ್ತಿಯೇ ಸೃಜನಶೀಲತೆಯ ಮೂಲ ನೋವಿನಿಂದ ಸಾಹಿತ್ಯ ಸೃಷ್ಟಿ ಆಗುತ್ತದೆ. ಸಾಮಾಜಿಕವಾಗಿ ಅಂತಹ ತೃಪ್ತಿ ನನಗೆ ಸಿಕ್ಕಿದೆ... ಸಿದ್ಧಾಂತಕ್ಕಾಗಿ ಸಾಹಿತ್ಯಸೃಷ್ಟಿ ಮಾಡಿಲ್ಲ ಸಾಮಾಜಿಕವಾಗಿ ತೀಕ್ಷ್ಣ ಪ್ರತಿಕ್ರಿಯೆಯಾಗಿ ಸಾಹಿತ್ಯ ಸೃಷ್ಟಿ ಮಾಡಿದ್ದೇನೆ"ಎನ್ನುತ್ತಾರೆ ಬಲ್ಲಾಳರು [ಶ್ರೀ ಸತ್ಯ, ಅಕ್ಟೋಬರ್ ೧೯೯೫, ಸಂದರ್ಶಕ ವಿ. ಎಸ್. ಶ್ಯಾನ್‌ಭಾಗ್] ಬಲ್ಲಾಳರ ಕೃತಿಗಳೆಲ್ಲವೂ ನೋವಿನಿಂದಲೇ ಹುಟ್ಟಿನವು ಗಳು ಅದರ ಪರಿಮಾಮ ಕೃತಿಯಲ್ಲಿಯೂ ನೋವಿನ ಛಾಯೆ ಗೋಚರಿಸುತ್ತದೆ. ಅವರ ಎಲ್ಲ ಕತೆಗಳೂ ಯಾವುದೋ ಒಂದು ಸಮಸ್ಯೆಯನ್ನು ಮುಂದಿಡುತ್ತವೆ.

ಸಾಹಿತ್ಯದಿಂದ ಬದುಕಿಗೆ ಏನಾದರೂ ಪ್ರಯೋಜನವಿದ್ದರೆ ಅದು ನಮ್ಮ ಬದುಕಿಗೆ ಹೊಸ ಅರ್ಥ ಮೌಲ್ಯಗಳ ಎಚ್ಚರವನ್ನು ಜನರ ಬದುಕಿಗೆ ಹೊಂದಿಕೊಂಡಿದೆ. ಅನುಭವದ ಎಲ್ಲ ಅರ್ಥವನ್ನೂ ಶೋಧಿಸುವುದು ಸಾಧ್ಯವಲ್ಲದಿದ್ದರೂ ಅದರ ಜಟಿಲತೆಯನ್ನಾದರೂ ಮನದಟ್ಟು ಮಾಡಿಕೊಟ್ಟಿದೆ.

ಒಂದು ನದಿ ಹಲವು ಉಪನದಿಗಳನ್ನು ಮೈಗೂಡಿಸಿಕೊಂಡು ಬೆಳೆದು ದೊಡ್ಡದಾಗುತ್ತದೆ. ಅದೇ ರೀತಿ ನವೋದಯ ಪೂರ್ವದಲ್ಲಿಯೇ ಹುಟ್ಟಿ ಬೆಳೆಯಲು ಉದ್ಯುಕ್ತವಾದ ಕಥಾ ಸಾಹಿತ್ಯವು ಬೆಳೆಯುತ್ತಾ ಬಂದಿದೆ ಎನ್ನಬಹುದು. ಆದರೆ ಅದು ಹಿಂದಿನಂತೆ ತನ್ನ ಉತ್ತಮಿಕೆಯನ್ನು ಉಳಿಸಿಕೊಂಡು ಸಾಹಿತ್ಯಿಕವಾಗಿ ಬೆಳವಣಿಗೆ ಸಾಧಿಸುತ್ತಿಲ್ಲ. ಗಂಗಾನದಿಗೆ ಹಲವಾರು ಕಾರ್ಖಾನೆಗಳ ಕಲ್ಮಷಗಳು

ಸೇರಿ ಅದರ ನೀರು ಅಶುದ್ಧವಾದಂತೆ ಕಥಾಸಾಹಿತ್ಯದಲ್ಲಿಯೂ ಪಾಚಾಳ
ನಿಕೃಷ್ಟ ಕತೆಗಳು ಬ್ಯಾಕ್ಟೀರಿಯಾ ಮರಿಗಳು ವೃದ್ಧಿಸುವ
ವೃದ್ಧಿಸುತ್ತಿರುವುದರಿಂದಾಗಿ ಒಳ್ಳೆಯ ಕತೆಗಳನ್ನು ನಾವು ಈ ರಾಶಿಯಿಂದ ಸೋ
ತೆಗೆಯಬೇಕಾಗಿದೆ. ಈ ಸೋಸುವಿಕೆಯಲ್ಲಿ ಬಲ್ಲಾಳರ ಕತೆಗಳೂ ಲಭಿಸುತ್ತ

‘ತ್ರಿಕಾಲ’ ಕಥಾ ಸಂಕಲನದ ಪ್ರತಿಯೊಂದು ಕತೆಯಲ್ಲಿಯೂ ಒಂ
ಘಟನೆಯೂ ಒಂದು ಪಾತ್ರವೂ ಪ್ರಮುಖವಾಗಿ ಗೋಚರಿಸುತ್ತಿದೆ. ‘ಅಭಯ’ ಕ
ಯಲ್ಲಿ ಜೋಶಿ ಮುಖ್ಯ ಪಾತ್ರ. ಜೋಶಿ ನಿವೃತ್ತಿಯ ವಯಸ್ಸನ್ನು ದಾಟ
ಮುದುಕ. ತನ್ನ ಮಗಳ ಪ್ರಾಯದ ಹುಡುಗಿ.... ಏಯರ್ ಹೋಸ್ಟೆಸ್‌ಳನ್ನು ತ
ಸೊಸೆ ಶಮಿಯೆಂದೇ ತಿಳಿದು ಭುಜ ಸವರಿದ್ದಕ್ಕಾಗಿ ಜೋಶಿ ತನ್ನ ಕೆಲಸವ
ಕಳಕೊಳ್ಳುತ್ತಾನೆ. ತನ್ನ ಮಗ ಸತ್ತು ವಿಧವೆಯಾಗಿದ್ದ ಪೂನಾದಲ್ಲಿ ಕೆಲಸದಲ್ಲಿ
ಸೊಸೆ ಶಮೀಯನ್ನು ಬರಮಾಡಿಕೊಂಡಾಗ ಆಕೆ ಬಸುರಿಯಾಗಿದ್ದುದನ್ನು ಕಂ
ಒಮ್ಮಿಂದೊಮ್ಮೆಗೆ ಬತ್ತಿದ ಬಲೂನಿನಂತೆ ಹತಾಶರಾಗುವರು. ಏನೋ ಒಂ
ಅವ್ಯಕ್ತ ನೋವು ಅವರನ್ನಾವರಿಸುವುದು. ಆದರೂ ಶಮೀ ಸಂತಸದಿಂದ
ಇರುವಳು.

‘ಗೋಡೆ’ ಕತೆಯಲ್ಲಿ ಮೀನಾ ಮುಖ್ಯ ಪಾತ್ರ. ಆಕೆಗೆ ಜ್ವರ ಬಂ
ಸಿಂಧೂ ಹಿರಾನಂದಾನಿ ಪರಿಚಯವಾಗಿ ತನ್ನ ಗಂಡನಿಗೂ ಹಿರಾನಂದಾನಿ
ಆರು ವರ್ಷಗಳ ಪರಿಚಯ ಇತ್ತೆಂಬುದು ತಿಳಿಯುವುದು. ತನ್ನ ಗಂಡನ ಮ
ನಲ್ಲಿಯೇ ಆಕೆಯೊಂದಿಗೆ ಸಲಿಗೆಯೂ ಇತ್ತೇ ಎಂಬ ವಿಚಾರದಲ್ಲಿ ಸಂಶ
ಉಂಟಾಗಿ ಒಂದು ರೀತಿಯಲ್ಲಿ ಮೀನಾ ಕೊರಗುತ್ತಾಳೆ. ಆದರೆ ಗಂಡನ ಬಿ
ಪ್ಪುಗೆಯಲ್ಲಿರುವಾಗ ಡಾಕ್ಟರು ಕಣ್ಣುಮಿಟುಕಿಸಿ ಹೇಳಿದ ಮಾತು ನೆನಪಾಗಿ
ಹೊಟ್ಟೆಯನ್ನು ಸವರಿಕೊಂಡು “ಇರಬಹುದೆ”? ಎಂದು ಉಸುರಿದಾಗ ಸದಾ
“ಏನು ಮೀನಾ?” ಎಂದು ಕೇಳಿದ. ಮೀನಾ “ಏನಿಲ್ಲ” ಎಂದಳು. ಆಗ ಆ
ಮನಸ್ಸಿನಲ್ಲಿ ಏನೋ ಒಂದು ಉಲ್ಲಾಸ ಹರಡುತ್ತಿತ್ತು.

ಶ್ರೀಧರ ಶ್ರೀಖಂಡೆ ‘ಬಂಧ’ ಕತೆಯಲ್ಲಿ ಕೇಂದ್ರವ್ಯಕ್ತಿ. ತನ್ನ ೨೨ ವರ್ಷ
ಕಾರ್ಟ್ರೇಕರ್ ಕೆಲಸದಲ್ಲಿ ೨ ಎಂ.ಡಿ.ಗಳನ್ನು ಕಂಡಾತ ನಿಷ್ಠಾವಂತ ಕೆಲಸ
ಆದರೆ ಹೊಸ ಎಂ.ಡಿ. ಬಂದಂದು ನಡೆದ ಅಚಾತುರ್ಯದಿಂದಾಗಿ ತಾನು
ವರೆಗೂ ರಜೆ ಪಡೆಯದಿದ್ದರೂ ಈಗ ಒಂದು ತಿಂಗಳ ರಜೆ ಪಡೆಯಬೇ
ಬರುವುದು. ಎಲ್ಲಕಿಂತ ಹೆಚ್ಚಾಗಿ ಪಾರಿವಾಳಗಳನ್ನು ಗುಂಡಿಟ್ಟು ಕೊಲ್ಲಲು
ಮುದು ಅವರಿಗೆ ಒಂದು ರೀತಿಯ ಭಯವನ್ನು ಉಂಟುಮಾಡುವುದು.

‘ತಾಮ್ರದ ಬಳೆ’ ಕತೆಯಲ್ಲಿ ಶಾಸ್ತ್ರೀಜಿ ಪ್ರಮುಖ ವ್ಯಕ್ತಿ. ಶಾಸ್ತ್ರೀಜಿಯು ಅನಿರೀಕ್ಷಿತವಾಗಿ ಮಿತ್ರತ್ವವುಂಟಾದ ಒಬ್ಬಾತ ಅಪರಿಚಿತನಿಂದ ತಾಮ್ರದ ಬಳೆ ಪಡೆದು ಅದನ್ನು ಧರಿಸಿದರೆ ಸುಖನೆಮ್ಮದಿ ಸಿಗುವುದೆಂದು ಭ್ರಮಿಸುವುದು ಈ ಕತೆಯ ಪ್ರಮುಖ ವಿಷಯವಾಗಿದೆ.

‘ಮಿಣುಕು ಹುಳುಗಳು’ ಕತೆಯಲ್ಲಿ ಮೀನಾಕ್ಷಿ ದೇಶಪಾಂಡೆ ಪ್ರಾಮುಖ್ಯತೆ ಪಡೆಯುತ್ತಾಳೆ. ಈಕೆ ಬಡವರ ಮೇಲೆ ತುಂಬಾ ಅನುಕಂಪವಿರುವಾಕೆ. ತನ್ನ ಸಂಪಾದನೆಯನ್ನೆಲ್ಲ ಜೋಪಡಾಪಟ್ಟಿ ಮನುಷ್ಯರಿಗೆ ಕೊಡುವಂತಹ ವ್ಯಕ್ತಿತ್ವ ಈಕೆಯದು.

‘ತ್ರಿಕಾಲ’ ಕತೆಯ ರುಕ್ಮಾತಾಯಿ ೬೦ ವರ್ಷಕ್ಕೂ ಮಿಗಿಲಾಗಿ ಮುಂಬಯಿಯಲ್ಲಿ ವಾಸಿಸಿದಾಕೆ. ಸಮಾಜದ ಹಲವಾರು ವ್ಯತ್ಯಾಸಗಳನ್ನು ಕಂಡಾಕೆ. ಕಡೆಗೆ ಏನೋ ಒಂದು ಕೊರಗಿನಿಂದಲೇ ಕೊನೆಯುಸಿರೆಳೆಯುತ್ತಾಳೆ.

ದ್ವೈತ ಕತೆಯಲ್ಲಿ ‘ನಾನು’ ಕಥಾನಾಯಕ.

ಕುತೂಹಲ ಆಸಕ್ತಿಗಳಿರುವುದು ಇಡೀ ಮಾನವ ಜೀವನದ ವಿಷಯದಲ್ಲಿ. ಈ ವರ್ಗದವರು ಹತ್ತಿರವಲ್ಲ, ಆ ವರ್ಗದವರು ದೂರವಲ್ಲ, ಪಾತ್ರವೇ ಪ್ರಧಾನವಾದದ್ದಲ್ಲ ಕೆಳವರ್ಗದವರಿಗೆ ಮತ್ತು ಅವರ ಜೀವನಕ್ಕೆ ಪ್ರಾಧಾನ್ಯ; ಮಧ್ಯಮವರ್ಗದ ಪಾತ್ರಗಳು ಬಂದರೂ ಅವು ಗೌಣ. ನಿಜವಾಗಿ ನೋಡಿದರೆ ಮೇಲು ಮತ್ತು ಮಧ್ಯಮ ವರ್ಗದಲ್ಲಿ ಬರುವ ಸಮಸ್ಯೆಗಳೇ ಕೆಳವರ್ಗದ ಸಂಸಾರಗಳಲ್ಲಿಯೂ ಕಂಡುಬರುತ್ತವೆ. ಈ ಮಾತು ಆರ್ಥಿಕ ಸಮಸ್ಯೆಗಳಿಗೆ ಅನ್ವಯವಲ್ಲ. ಉದಾಹರಣೆಗಾಗಿ ‘ಮಿಣುಕು ಹುಳುಗಳು’ ಕತೆಯ ಅಂಜಯ್ಯ ಹಾಗೂ ಮೀನಾಕ್ಷಿ ದೇಶಪಾಂಡೆಯವರನ್ನು ಗಮನಿಸಬಹುದು. ಅಂಜಯ್ಯನಿಗೆ ಸರಿಯಾದ ವಸತಿಯಿಲ್ಲ. ಜೋಪಡಾಪಟ್ಟಿಯಲ್ಲಿ ಆತ ವಾಸಿಸುತ್ತಾನೆ. ಮುನಿಸಿಪಲ್‌ನವರು (ನಗರಪಾಲಿಕೆಯವರು) ಬಂದು ಅವನ ಮನೆಯನ್ನು ಕೆಡವುತ್ತಾರೆ. ತನ್ನ ಮಗುವೂ ಸತ್ತುಹೋಗುತ್ತದೆ. ಮೀನಾಕ್ಷಿ ದೇಶಪಾಂಡೆ ಶ್ರೀಮಂತಳಾದರೂ ಆಕೆಗೆ ಮಕ್ಕಳಿಲ್ಲದ ಕೊರಗು. ಎಷ್ಟು ಡಾಕ್ಟರಿಗೆ ತೋರಿಸಿಯೂ ಪ್ರಯೋಜನವಾಗುವುದಿಲ್ಲ. ಆಕೆಗೆ ಮಂಜಯ್ಯ ನಲ್ಲಿ ಅನುಕಂಪವಿದೆ. ಮೀನಾ ಕುಟುಂಬದವರು ಇನ್ನು ಆರು ತಿಂಗಳಲ್ಲಿ ಮನೆ ತೆರವು ಮಾಡಬೇಕೆಂದಾಗುವುದು. ಆರು ತಿಂಗಳೊಳಗಾಗಿ ಸರಿಯಾದ ಮನೆ ಸಿಗ ಬಹುದೇ ಎಂಬುದು ಪ್ರಶ್ನೆಯಾಗುತ್ತದೆ.

‘ತ್ರಿಕಾಲ’ ಎಂಬ ಕತೆಯು ಪ್ರಾರಂಭವಾಗುವುದೇ ಮನೆಯ ಬೆಲೆ ನಿರ್ಣಯ ಹಾಗೂ ಕಳೆದು ಹೋದ ಚಿಕ್ಕ ಜಪಾನೀ ಗಡಿಯಾರದ ಮುಖಾಂತರ. ಆಮೇಲೆ

ಕತೆಯು ಹಂತಹಂತವಾಗಿ ಭೂತಕಾಲದತ್ತ ವಾಲುತ್ತದೆ. ನಂತರ ನಿಧಾನವಾಗಿ ವರ್ತಮಾನಕಾಲದಲ್ಲಿ ಸಾಗಿ ಭವಿಷ್ಯತ್ತನ್ನೂ ಸೂಚಿಸಿ ಕೊನೆಗೆ ರುಕ್ಮಾತಾಯಿಯ ಅಂತ್ಯದೊಂದಿಗೆ ದೀಪದಾಕಾರದ ಚಿನ್ನದ ಬಣ್ಣದ ಮೋಹಕ ಸಂಗೀತ ಹೊರಡಿಸುವ ಅಲಾರಾಂ ಗಡಿಯಾರ ದೊರೆಯುವುದು. ಅಲಾರಾಂ ಸದ್ದು ನಿಂತಿದ್ದರೂ ಅದರ ಕೆಂಪು ಮುಳ್ಳು ತಿರುಗುತ್ತಲೇ ಇದ್ದು ಕಾಲವು ಎಂದಿನಂತೆ ಸಾಗುತ್ತಲೇ ಇರುವುದನ್ನು ಸೂಚಿಸುತ್ತದೆ. ಏನೇ ಆದರೂ ಯಾರೇ ಸತ್ತರೂ ಯುಗಯುಗ ಕಳೆದರೂ ನಿರಂತರವಾಗಿ ಕಾಲವು ಸಾಗುತ್ತಿರುತ್ತದೆ ಎಂಬುದಕ್ಕೆ ಇದು ಉದಾಹರಣೆ. ಅಲ್ಲದೆ ಅಲಾರಾಂ ಸದ್ದು ನಿಂತುದು ಕಾಲ ಸಾಗುತ್ತಿದ್ದರೂ ಕಾಲವನ್ನು (ಸಮಯ) ಸೂಚಿಸುವ ಯಂತ್ರ ಹಾಳಾಗಲೂಬಹುದು ಎಂಬುದಕ್ಕೆ ಸಂಕೇತವಿದು. ಅಜ್ಜಿಯೊಂದಿಗೇ ಮನೆ ಪ್ರವೇಶಿಸಿದ ಹಳೆಯ ಪೆಂಡ್ಯುಲಂ ಗಡಿಯಾರವು ಎಂದೆಂದೂ ಸಮಯುವನ್ನು ತೋರಿಸುತ್ತಲೇ ಇತ್ತು. ಕಾಲ ನಿಲ್ಲುವುದಿಲ್ಲ. ಅದು ನಿತ್ಯ ಚಲಿಸುತ್ತಿರುತ್ತದೆ ಎಂಬುದಕ್ಕೆ ಇದೂ ಕೂಡ ಒಂದು ಸಂಕೇತವಾಗಿದೆ.

ತ್ರಿಕಾಲ ಕತೆಯಲ್ಲಿ ಮೂರು ತಲೆಮಾರಿನ ಕತೆ ಬರುತ್ತದೆ. ಜಯಂತ, ಆತನ ತಂದೆತಾಯಿ ಹಾಗೂ ಅಜ್ಜಿ. ಜಯಂತನು ತನ್ನ ತಂದೆತಾಯಿಗೆ ಒಬ್ಬನೇ ಮಗ. ಈಗ ಬಿ.ಟೆಕ್ ಓದಿ ಆಮೇಲೆ ಎಂ.ಬಿ.ಎ. ಮುಗಿಸಿದಾತನು. ತಾನು ಎಂ.ಬಿ.ಎ. ಓದುತ್ತಿದ್ದಾಗಲೇ ರೀನಾ ಎಂಬ ಗುಜರಾತೀ ಕನ್ಯೆಯನ್ನು ರಿಜಿಸ್ಟ್ರ ವಿವಾಹವಾದನು. ಆತ ವಿವಾಹವಾದರೂ ತನ್ನ ಪತ್ನಿಯನ್ನು ಮನೆಗೆ ಕರೆತಂದಿರುವುದಿಲ್ಲ. ಕಡೆಗೆ ಮನೆಯವರೆಲ್ಲ ಚರ್ಚಿಸಿ ಆಕೆಯನ್ನು ಮನೆಗೆ ಕರೆತರುವುದೆಂದು ನಿಶ್ಚಯಿಸಿದುದರಿಂದ ಆತ ರೀನಾಳನ್ನು ಕರೆತರುವನು.

ದಾದರ್‌ನಲ್ಲಿರುವ ೮೫೦ ಚದರ ಅಡಿ ಸದ್ಯದ ಪರಿಸ್ಥಿತಿಯಲ್ಲಿ ೧೮ ಲಕ್ಷ ಬೆಲೆ ಬಾಳುವ ಮನೆ. ೬೦ ವರ್ಷಗಳ ಹಿಂದೆ ರುಕ್ಮಾತಾಯಿ ತನ್ನ ಗಂಡನೊಡನೆ ಪ್ರವೇಶಿಸಿದ ಮನೆಯದು, ೬೦ ವರ್ಷಕ್ಕೂ ಮಿಗಿಲಾಗಿ ಈ ಮನೆಯಲ್ಲಿ ಜೀವಿಸಿದ ಹಳೆ ತಲೆ ರುಕ್ಮಾತಾಯಿ. ಪ್ರಾರಂಭದಲ್ಲಿಯೇ ನಾಲ್ಕು ಸಾವಿರಕ್ಕೂ ಮಿಗಿಲಾಗಿ ಸಂಪಾದನೆಯಿರುವ ಕೆಲಸ ಜಯಂತ ಪಡೆದಿದ್ದನು.

ಶಾಂತಬಾಯಿ, "ಇನ್ನು ಮದುವೆಯಾಗಬೇಕು ಜಯಂತ್... ಸೊಸೆ ಮನೆಗೆ ಬರಬೇಕು" ಎಂದಿದ್ದರು. ಆಗ ಜಯಂತನು "ನಿಜ ಆಯೀ.... ಮದುವೆಯಾಗಬೇಕು.. ಆದರೆ ಮದುವೆ, ಸಂಸಾರ ಅಂದಮೇಲೆ ನಿಮ್ಮನ್ನೆಲ್ಲ ಬಿಟ್ಟಿರಬೇಕಾಗತ್ತಲ್ಲ... ನನ್ನ ಕೆಲಸಕ್ಕೆ ಕಂಪೆನಿ ಮನೆ ಸಿಗೋ ಏರ್ಪಾಟಿದೆಯಾದರೂ.." ಎನ್ನುತ್ತಿದ್ದಂತೆಯೇ, "ನಿನಗೆ ಯಾಕೆ ಬೇಕೋ ಕಂಪೆನಿ ಮನೆ? ಇಷ್ಟು ದೊಡ್ಡ

ಮನೆಯಿರುವಾಗ. ಅದೂ ದಾದರ್‌ನಲ್ಲಿ ಇಂತಹ ಮನೆ ಸಿಗೋದೇ ಕಷ್ಟ.. ಹದಿನೆಂಟು ಲಕ್ಷ ಬರುತ್ತೆ. ಈಗ ನಾವು ಬಿಟ್ಟು ಕೊಡೋದಿದ್ರೆ.. ಮದುವೆ ಮಾಡ್ಕೋ ಬೇಕೂಂತ ನೀನು ಆಯೀ, ವಡೀಲ್, ಆಜೀ ಎಲ್ಲರನ್ನೂ ಬಿಟ್ಟು ಕಂಪೆನಿ ಮನೆಯಲ್ಲಿರೋದೇ ... ಯಾರಾದರೂ ಹೀಗಂತಾರಾ?..." ಎಂದಿದ್ದರು ಆನಂದರಾವ್. ಇದನ್ನು ಗಮನಿಸಿದಾಗ ಇಂದಿನ ಯುವ ಪೀಳಿಗೆಯು ಅವಿಭಕ್ತ ಕುಟುಂಬವನ್ನು ಬಯಸುವುದಿಲ್ಲ. ಚಿಕ್ಕ ಸಂಸಾರವನ್ನೇ ಬಯಸುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಹೆಚ್ಚಾಗುತ್ತಿರುವ ಜನಸಂಖ್ಯೆಯ ಬಗ್ಗೆಯೂ ಜನರಿಗೆ ಅರಿವಿದೆ. ಚಿಕ್ಕ ಕುಟುಂಬ ಚೊಕ್ಕ ಸಂಸಾರ ಎಂಬುದೇ ಈಗಿನವರ ಅಂಬೋಣವಾಗಿದೆ ಎಂಬುದು ವ್ಯಕ್ತವಾಗುತ್ತದೆ.

"ತನ್ನ ಮಾವನ ಬೆಡ್‌ರೂಮನ್ನೇ ಪರಿಷ್ಕಾರ ಮಾಡಿ ಎ. ಸಿ. ಹಾಕಿಸಿ, ಕಂಪ್ಯೂಟರ್ ಮತ್ತು ಬೇಕಾದ ಎಲ್ಲ ಸಲಕರಣೆಗಳನ್ನು ಹಾಕಿಕೊಳ್ಳುವ ವ್ಯವಸ್ಥೆ ಮಾಡಿದರೆ ನನಗೆ ಮನೆಯಲ್ಲಿ ಬೇಕಾದ ಕೆಲಸ ಮಾಡಬಹುದು... ಲೇಸರ್ ಪ್ರಿಂಟರ್ ಮತ್ತೇನೇನೆಲ್ಲ ಬೇಕೋ ಅದನ್ನೆಲ್ಲ ವ್ಯವಸ್ಥೆ ಮಾಡಬಹುದು... ಮನೆಯಲ್ಲಿ ಹದಿನೈದು ಸಾವಿರ ಸಂಪಾದನೆ ತಿಂಗಳಿಗೆ... ಏನಂತೀಯ?" ಎನ್ನುವಳು ರೀನಾ.

"ಅಲ್ಲ ರೀನಾ... ಆಯೀ ವಡೀಲ್ ಬೆಡ್‌ರೂಮ್ ಅದು ಎಷ್ಟು ವರ್ಷದಿಂದ ... ಅವರನ್ನ ಅಲ್ಲಿಂದ ಹೊರಡೀಂತನ್ನೋದೇ...!" ಎಂದು ಜಯಂತ ಕೇಳಿದಾಗ "ಮುದುಕರಾಗ್ತಾ ಇರುವ ಅವರಿಗೆಷ್ಟು ಜಾಗ ಬೇಕು... ಜೈ...., ನಾನು ಹಿಂದೆಯೇ ಹೇಳಿದ್ದೆನಲ್ಲಾ ಅಡುಗೆಮನೆಯನ್ನೇ ಸ್ವಲ್ಪ ಸರಿಮಾಡೋಣಾಂತ.. ಅದನ್ನೇ ಸಣ್ಣ ಬೆಡ್‌ರೂಂ ಥರಾ ಮಾಡಿದರೆ ಎಲ್ಲ ಸರಿಹೋಗುತ್ತೆ..." ಎನ್ನುವಳು ರೀನಾ. ಮನೆಯಲ್ಲೆ ಇದ್ದುಕೊಂಡು ಹೇಗೆಲ್ಲಾ ಸಂಪಾದನೆ ಮಾಡಬಹುದು ಎಂಬುದು ಆಕೆಯ ಆಲೋಚನೆ. ಸಂಪಾದನೆಯೇ ಈಗಿನವರ ಮುಖ್ಯ ಗುರಿ. ಬೆಳೆಯುತ್ತಿರುವ ಜನಸಂಖ್ಯೆ ಪರಿಮಿತವಾದ ಸ್ಥಳಾವಕಾಶ ಇದರ ಮಧ್ಯೆಯೂ ಸಂಪಾದನೆಯನ್ನೇ ಗುರಿಯಾಗಿಸಿದಂತಿದೆ ಯುವ ಜನಾಂಗ. ಇದು ಬೃಹತ್ ನಗರದಲ್ಲಿ ಮಾತ್ರ ಗೋಚರಿಸುವ ಅಂಶವಾಗಿದೆ.

'ಕಾಲಕ್ಕೆ ತಕ್ಕ ಕೋಲ' ಎಂಬ ಒಂದು ಮಾತಿಗೆ ಮುಂಬಯಿಯಂತಹ ನಗರ ದಲ್ಲಿ ಕಾಲಕಾಲಕ್ಕೆ ಬದಲಾಗುವ ಜನಜ ವನ, ಸಂಸ್ಕೃತಿ ಇತ್ಯಾದಿಗಳು 'ತ್ರಿಕಾಲ' ಕತೆಯಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ. ಕಾಲಕ್ಕೆ ತಕ್ಕಂತೆ ಹೊಂದಿಕೊಂಡು ಬದುಕಲು ಕಲಿಯುವುದು ಈ ಕತೆಯಲ್ಲಿ ಸುಸ್ಪಷ್ಟವಾಗಿ ಗೋಚರಿಸುತ್ತದೆ.

ತಾಮ್ರದ ಬಳೆ ಎಂಬ ಕತೆಯು ಮೂಢನಂಬಿಕೆಗೆ ಒಂದು ನಿದರ್ಶನ ಮುಂಬಯಿಯಂತಹ ಪಟ್ಟಣದಲ್ಲಿಯೂ ನಂಬಿಕೆ, ಆಚಾರ ವಿಚಾರಗಳಿಗೆ ಕಟ್ಟು ಬಿದ್ದಂತಹ ಜನರಿದ್ದಾರೆ ಎಂಬುದಕ್ಕೆ ಈ ಕತೆಯಲ್ಲಿ ಬರುವ ಶಾಸ್ತ್ರೀಜಿ ಮು[illegible] ಉದಾಹರಣೆಯಾಗಿದ್ದಾರೆ. ದುಃಖಕ್ಕೆ, ನೋವಿಗೆ, ಅನಾರೋಗ್ಯಕ್ಕೆ ಎಲ್ಲದಕ್ಕೂ ಕಾರಣ ಮನಸ್ಸು. ತಾಮ್ರದ ಬಳೆ ತೊಟ್ಟರೆ ಮನಸ್ಸು [illegible] ನಗುತ್ತಿರುತ್ತಾರೆ ಎಂಬುದೆಲ್ಲ ಮೂಢನಂಬಿಕೆಯಲ್ಲದೆ ಮತ್ತೇನು? ಎಲ್ಲಾ ಸುಖ[illegible] ತಾಮ್ರದ ಬಳೆಯಲ್ಲಿದೆ ಎಂದು ನಂಬುವುದೇ ಒಂದು ಮನೋರೋಗದಂತೆ[illegible] ಭಾಸವಾಗುತ್ತದೆ. ಕೆಲವು ಮೂಢನಂಬಿಕೆಗಳನ್ನೇ ಫ್ಯಾಷನ್ ಎಂದು ಈಗಿನವರು ಸ್ವೀಕರಿಸುತ್ತಿರುವುದಕ್ಕೆ ಈ ತಾಮ್ರದ ಬಳೆ ಉತ್ತಮ ಉದಾಹರಣೆಯಾಗಿದೆ.

'ಬಂಧ' ಎಂಬ ಕತೆಯನ್ನು ಗಮನಿಸಿದರೆ ಶ್ರೀಖಂಡೆ ಎಂಬಾತ ಬೇಗ[illegible] ಬಂಧನಕ್ಕೊಳಪಟ್ಟಿದ್ದಾನೆ ಎಂಬುದು ತಿಳಿಯಲ್ಪಡುತ್ತದೆ. ಶ್ರೀಖಂಡೆಯು ತನ್ನ [illegible] ಕರ್ತವ್ಯಗಳನ್ನು ಒಂದು ನಿಯಮಬದ್ಧವಾಗಿ ಮಾಡುತ್ತಾನೆ. ಪಾರಿವಾಳಗಳ[illegible] ಕಾಳು ಹಾಕುವುದು, ಅವುಗಳ ಜಾಗ [illegible] ಆಫೀಸಿನ ಎಲ್ಲರಿ[illegible] ಬೇಕಾದ ಕೆಲಸವನ್ನು ಎಂದರೆ ಅವರ ವೈಯಕ್ತಿಕ ಕೆಲಸಗಳಲ್ಲಿಯೂ ಸಹಾ[illegible] ಮಾಡುವುದು. ೨೨ ವರ್ಷಕ್ಕಿಂತಲೂ ಹೆಚ್ಚು ಕಾಲ ಒಂದೇ ಕಂಪೆನಿಯಲ್ಲಿ[illegible] ಕಾರ್ಟೇಕರ್ ಕೆಲಸ ನಿರ್ವಹಿಸುತ್ತಿದ್ದುದು. ೨ ಜನ ಎಂ.ಡಿ.ಗಳನ್ನು ಕಂಡು[illegible] ಹೀಗೆ ಒಂದು ರೀತಿಯಲ್ಲಿ ಸಂಬಂಧವನ್ನೂ ಬೆಳೆಸಿ ಒಂದು ರೀತಿಯ ಬಂಧವನ್ನೂ ತನಗೆ ತಾನೇ ನಿರ್ಮಿಸಿದಂತಿತ್ತು.

ಮಗಳು ಮರಾಠಿಯವನೊಬ್ಬನೊಂದಿಗೆ ಮದುವೆಯಾದುದು ಶ್ರೀಖಂಡೆ[illegible] ಪತ್ನಿಗೆ [illegible] ಶ್ರೀಖಂಡೆ ಮಾತ್ರ ಮಗಳ ಮನೆಗೆ ಆಗ[illegible] ಹೋಗುತ್ತಿದ್ದು ಮೊಮ್ಮಗನನ್ನೂ ನೋಡುತ್ತಿದ್ದರು. ಮೊಮ್ಮಗ ಮನೆಗೆ ಬಂದಿದ್ದ[illegible] ಅಲ್ಲಿದ್ದ ಒಂದು ಗುಬ್ಬಿ ಮರಿಯನ್ನು ಹಿಸುಕಿ ಕೊಂದುದನ್ನು ಕಂಡಾಗ ಶ್ರೀಖ[illegible]ಗಾದ ದುಃಖ ಅವನ ಕಣ್ಣು ತುಂಬಿಕೊಂಡಿದ್ದುದರಿಂದ ವ್ಯಕ್ತವಾಗುತ್ತದೆ.

[illegible] ನಿಯತ್ತಿನಿಂದ ಒಂದು ಕ್ರಮಬದ್ಧತೆಯಲ್ಲಿ ತನ್ನ ಕೆಲಸ[illegible] ಸ್ವಲ್ಪವೂ ತಪ್ಪಿ ಬರದಂತೆ ಮಾಡುತ್ತಾ, [illegible] ಕಳೆಯುವ ಶ್ರೀಖಂಡೆ ಹೊಸ ಎಂ.ಡಿ. ಬರುವ ದಿನದ[illegible] ತನ್ನ ಮೊಮ್ಮಗನಿಗೆ ಒಂದು ಪಾರಿವಾಳ ಹಿಡಿದು [illegible] ಹೊಸ ಎಂ.ಡಿ. ನೋಡಿದ್ದೂ ಆಗಿತ್ತು. ಎಂ.ಡಿ. ಶ್ರೀ[illegible] ಬಿಳಿ ಪಾರಿವಾಳಗಳನ್ನು ಸಾಕುವುದೂ ನನ್ನ ಪಟ್ಟಿಯಲ್ಲಿ ಸೇರಿದೆ[illegible] ಎಂದು ಬಿಳಿ ಪಾರಿವಾಳಗಳನ್ನು ಇಲ್ಲವಾಗಿಸು. ಅವು ಹೋಗದಿದ್ದರೆ ಗುಂ[illegible]

ಹಿಲ್ಲು ಎಂದೆಲ್ಲ ಹೇಳುವರು. ಕಡೆಗೆ ಒಂದು ತಿಂಗಳ ರಜೆ ತೆಗೆದು ಹೋಗುವಂತೆ ವ್ಯವಸ್ಥೆ ಮಾಡುವರು. ಇದುವರೆಗೂ ರಜೆ ಪಡೆಯದಿದ್ದ ಶ್ರೀಖಂ ಖಂಡೆ ದಂಗಾಗುತ್ತಾರೆ. ಅವರು ಟೆಲಿಫೋನ್ ಆಪರೇಟರ್ ಮೇರಿ ಕಡೆ ಖಿತ್ತವಾಗಿ ಮಾತನಾಡುತ್ತಾರೆ. "ಮೇರಿ... ನನಗೆ ತಿಗಣೆಯನ್ನು ಕೂಡ ಕೊಲ್ಲಲಾಗುವುದಿಲ್ಲ. ಈಗ ಪಾರಿವಾಳಗಳನ್ನು... " ಎಂದು ದುಃಖಿಸುತ್ತಾರೆ ಶ್ರೀಖಂಡೆಯವರು. ಹೀಗೆ ಬಂಧ ಎಂಬ ಕತೆಯಲ್ಲಿ ಶ್ರೀಖಂಡೆಯ ಮನಸ್ಸು ಣ್ಣೆಗಿಂತಲೂ ಮೃದುವಾಗಿ ದ್ದಂತೆ ಗೋಚರಿಸಲ್ಪಡುತ್ತದೆ.

ಶ್ರೀಖಂಡೆ ಒಂದು ರೀತಿಯಲ್ಲಿ ಎಲ್ಲರೊಂದಿಗೂ ಸಂಬಂಧ ಹೊಂದಿದ್ದು ಕ್ಷಿ ಪ್ರಾಣಿಗಳೊಂದಿಗೂ ನಿಕಟ ಸಂಬಂಧ ಹೊಂದಿದ್ದರು. ಇದು ರೇಷ್ಮೆಹುಳುವು ನ್ನ ನೂಲನ್ನು ತನಗೇ ಸುತ್ತಿ ತಾನೇ ಬಂಧಿಯಾದಂತೆ ಶ್ರೀಖಂಡೆಗೂ ಉಂಟಾದ ಂದು ಬಂಧನವಾಗಿದೆ. ಹೀಗೆ 'ಬಂಧ' ಎಂಬ ಈ ಕತೆಯಲ್ಲಿ ಶ್ರೀಖಂಡೆಯು ಂದು ನಿಯಮವನ್ನು ಪಾಲಿಸುತ್ತಾ ಹಿರಿ ಅಧಿಕಾರಿಗಳ ಆಜ್ಞೆಯನ್ನು ಅನುಸರಿ ತ್ತಾ, ಕೆಲವು ನಿರ್ಬಂಧಗಳನ್ನು ತನಗೆ ತಾನೇ ನಿರ್ಮಿಸಿ, ತನಗೆ ತಾನೇ ಎಲ್ಲ ರೊಂದಿಗೂ ಸಂಬಂಧ ಹೊಂದಿದ್ದಲ್ಲದೆ ಒಂದು ರೀತಿಯಲ್ಲಿ ಪಾಶವನ್ನೂ ಹೊಂದಿ ದಂತಿದ್ದರು. ಈ ಎಲ್ಲ ಕಾರಣದಿಂದಾಗಿ ಈ ಕತೆಗೆ 'ಬಂಧ' ಎಂಬ ಹೆಸರು ಸೋನಾಮೆ ಅತ್ಯುತ್ತಮವಾಗಿ ಹೊದಿಕೆಯಾಗುತ್ತಿದೆ. ಈ ಕತೆಯು ಶೈಲಿಯ ಷ್ಟಿಯಿಂದಲೂ ಉತ್ತಮ ಕತೆಯಾಗಿದೆ.

ವ್ಯಾಸರಾಯ ಬಲ್ಲಾಳರು ತನ್ನ ಕೃತಿಯ ಮೂಲಕ ಜೀವನವನ್ನು ಶೋಧಿ ತ್ತಾ ಹೋಗುತ್ತಾರೆ. ಅವರ ಭಾಷೆ ಅನುಭವ ಕಲ್ಪನೆ ಕತೆಗಳ ತಂತ್ರದ ಶೈಲಿನ ಹಿಡಿತ. ಅವರ ಜೀವನದೃಷ್ಟಿ ಅವರಿಗೆ ನೆರವಾಗುತ್ತವೆ. ಒಂದು ಷ್ಟ ಚೌಕಟ್ಟನ್ನು ಇರಿಸಿಕೊಳ್ಳದೆ, ಅಂತ್ಯವನ್ನು ಮೊದಲೇ ಊಹಿಸಿಕೊಳ್ಳದೆ ಅತ್ಯಾ ರ್ಷಕವಾದ ಆರಂಭ ಕತೆಗಳಿಗೆ ಇರಲೇಬೇಕೆಂಬ ಜನಪ್ರಿಯ ನಿಯಮಕ್ಕೆ ಅಂಟಿ ಳ್ಳದೆ ಓದುಗರ ಮೇಲೆ ಇಂಥದ್ದೇ ಪರಿಣಾಮ ಉಂಟುಮಾಡಬೇಕು ಎಂಬ ರ್ವ ಗ್ರಹಕ್ಕೆ ಪೀಡಿತರಾಗದೆ ಹೊಸ ಭೂಪ್ರದೇಶದ ಶೋಧನೆಗೆ ಹೊರಟ ಲಂಬಸನಂತೆ ಅವರು ಹೊರಡುತ್ತಾರೆ. ಜೀವನದ ಎಲ್ಲ ಮಗ್ಗುಲುಗಳ ಲೂ ಬೆಳಕು ಚೆಲ್ಲುತ್ತ, ಎಲ್ಲ ವೈಶಿಷ್ಟ್ಯಗಳನ್ನು ತೋರಿಸುತ್ತಾ ಸಾಗುತ್ತಾರೆ. ಸುವುದರ ಜೊತೆಗೇನೆ ವಿಚಾರ ಮಾಡಲು ಹಚ್ಚುತ್ತವೆ ಬಲ್ಲಾಳರ ಕೃತಿಗಳು.

"ಮೊದಲ ತಲೆಮಾರಿನ ಕತೆಗಾರರು ತಮ್ಮ ಪ್ರತಿಭೆಯನ್ನು ಈ ಪ್ರಕಾರಕ್ಕೆ ರೆಯೆರೆದರು. ಆದರೂ ಶ್ರೀನಿವಾಸರನ್ನೊಬ್ಬರನ್ನೇ ಆ ತಲೆಮಾರಿನ ಪ್ರಮುಖ ಖಕರೆಂದು ಕರೆಯಬಹುದು.

ಹೊಸಬರಲ್ಲಿ ಅನೇಕ ಪ್ರತಿಭಾವಂತ ಲೇಖಕರಿದ್ದಾರೆ. ಆದರೆ ಅಂಥವರ ಬರವಣಿಗೆ ಸಾಮಾನ್ಯವಾಗಿ ಉತ್ಸಾಹಹೀನವಾಗಿದೆ. ಇನ್ನುಳಿದವರ ಬರವಣಿಗೆಯಲ್ಲಿ ಉತ್ಸಾಹವಿದ್ದರೂ ಕತೆಗಳ ತಳಹದಿ ದುರ್ಬಲವಾಗಿದೆ. ಈಗಿನ ಮಟ್ಟಿಗಂತೂ ಸಣ್ಣಕತೆಯ ಪರಿಸ್ಥಿತಿ ಆಶಾದಾಯಕವಾಗಿಲ್ಲ. ಸಾಹಿತ್ಯದ ಈ ಒಂದು ಪ್ರಕಾರ ಲೇಖಕರ ದುರ್ಲಕ್ಷ್ಯಕ್ಕೀಡಾಗಿದೆ. ಸಣ್ಣಕತೆಗೆ ರಕ್ತದಾನ ಮಾಡಬಲ್ಲಂಥ ಸಮರ್ಥ ಲೇಖಕ ಬರಬೇಕಾಗಿದೆ". – ನಡೆದು ಬಂದ ದಾರಿ.

ಪರಾಮರ್ಶನ ಕೃತಿಗಳು

೧. 'ತ್ರಿಕಾಲ' – ವ್ಯಾಸರಾಯ ಬಲ್ಲಾಳ

೨. 'ಸಮಾಲೋಕನ' – ತೀ. ನಂ. ಶ್ರೀಕಂಠಯ್ಯ

೩. 'ವಿಮರ್ಶೆಯ ಪರಿಭಾಷೆ' – ಓ. ಎಲ್. ನಾಗಭೂಷಣಸ್ವಾಮಿ

೪. 'ಬೀದರ್ ಸಾಹಿತ್ಯ ಸಮ್ಮೇಳನ'–ಪ್ರಧಾನ ಸಂಪಾದಕರು, ಹಂಪನಾಗರಾಜಯ್ಯ

೫. 'ಸಾಹಿತ್ಯದ ಪ್ರಕಾರಗಳು' – ವಿ. ವಿ. ಶಾಸ್ತ್ರಿ

೬. 'ನಡೆದು ಬಂದ ದಾರಿ'

೭. 'ಶ್ರೀ ಸತ್ಯ' ಅಕ್ಟೋಬರ್ ೧೯೯೫ ದೀಪಾವಳಿ ವಿಶೇಷ ಪತ್ರಿಕೆ.

***

ಮಹಾದೇವಿ ವರ್ಮಾರವರ ಗೀತೆಗಳ ವೈಶಿಷ್ಟ್ಯ

ಡಾ॥ ಟಿ.ಜಿ. ಪ್ರಭಾಶಂಕರ ಪ್ರೇಮಿ

ಹಿಂದಿಯ ಛಾಯಾವಾದಿ-ರಹಸ್ಯವಾದಿ ಕವಯಿತ್ರಿ ಮಹಾದೇವಿ ವರ್ಮಾರವರು ಹಿಂದಿ ಗೀತ ಪ್ರಪಂಚದಲ್ಲಿ ವಿಶಿಷ್ಟ ಸ್ಥಾನಗಳಿಸಿದ್ದಾರೆ. 'ಪ್ರಸಾದ', ಪಂತ ಮತ್ತು 'ನಿರಾಲಾ' ರಂತೆಯೇ ಅವರ ರಚನೆಗಳಲ್ಲಿಯೂ ಗೀತಿ ಕಾವ್ಯದ ಎಲ್ಲಾ ಲಕ್ಷಣಗಳೂ ಕಂಡುಬರುತ್ತವೆ. ಮಹಾದೇವಿಯವರ ವೇದನೆಯ ಗೀತೆಗಳಂತೂ ಅನುಪಮವಾದವು. ಅವು ಅವರ ಅಜ್ಞಾತ ಪ್ರಿಯತಮನ ವಿರಹಾನುಭೂತಿಯ ಅಭಿವ್ಯಕ್ತಿಗಳು.

ಗೀತಿಕಾವ್ಯದ ಮೊದಲ ಆವಶ್ಯಕ ಲಕ್ಷಣ ಗೇಯತೆ. ಗೇಯ-ಗೀತೆಗಳು ಮನುಷ್ಯನ ಮನಸ್ಸಿಗೆ ಅತ್ಯಂತ ಹತ್ತಿರವಾದವು. ಅವುಗಳಲ್ಲಿ ಆತ್ಮಪರತೆ, ಸಂವೇಗ ಪೂರ್ಣತೆ ಮತ್ತು ಕಲ್ಪನಾಶೀಲತೆಯನ್ನು ಕಾಣುತ್ತೇವೆ. ಸಂಕ್ಷಿಪ್ತತೆಯಿಂದಾಗಿ ಅವುಗಳಲ್ಲಿ ಪ್ರಭಾವಾನ್ವಿತಿ ಹೆಚ್ಚುತ್ತದೆ. ಗೀತಕಾರ ಅತ್ಯಂತ ಭಾವುಕ ಹಾಗೂ ಸಂವೇದನಶೀಲ.

ಗೀತಿಯ ಮೂಲವನ್ನು ಆದಿಮ ಮನುಷ್ಯನಲ್ಲಿ ಗುರುತಿಸಬಹುದು. ಮಹಾದೇವಿಯವರೇ ಹೇಳುವಂತೆ ಪ್ರಭಾತದ ಮೊದಲ ಸುವರ್ಣ ರಶ್ಮಿಯ ಸ್ಪರ್ಶದಿಂದ ಆನಂದದಿಂದ ಹಕ್ಕಿ ಚಹಚಹಿಸುವಂತೆ, ಮೋಡಗರ್ಜನೆಗೆ ನವಿಲು ನರ್ತಿಸುವಂತೆ, ಮನುಷ್ಯನೂ ಮೊಟ್ಟ ಮೊದಲು ಧ್ವನಿ ಮತ್ತು ಗತಿಯ ಮೂಲಕ ತನ್ನ ಭಾವನೆಗಳನ್ನು ಪ್ರಕಟಿಸಿರಬಹುದು. ಗೀತಿಕಾವ್ಯದ ವಿಕಾಸವನ್ನು ಸಮೂಹಗಾನದಲ್ಲಿ ಕಾಣಬಹುದು.

ಭಾರತೀಯ ಗೀತಿಕಾವ್ಯದ ಆರಂಭ ವೈದಿಕದಿಂದ. ವೈದಿಕಗೀತೆಗಳಲ್ಲಿ ತಾಜಾತನ, ಸ್ವಂತಿಕೆ ಮತ್ತು ಸಹಜತೆಯಿದೆ. ಪ್ರಕೃತಿಯ ಬಗ್ಗೆ ಆದಿಮ ಮನುಷ್ಯನ ಜಿಜ್ಞಾಸೆ, ಭಯ, ವಿಸ್ಮಯ, ಸ್ತುತಿ, ಶ್ರದ್ಧೆ, ಶೌರ್ಯ ಸಂಘರ್ಷಗಳು ಆ ಗೀತೆಗಳಲ್ಲಿ ಪ್ರತಿಧ್ವನಿಸಿವೆ. ಗೀತಿಕಾವ್ಯದ ವಿಕಾಸಕ್ಕೆ ಜಯದೇವನ 'ಗೀತಗೋವಿಂದ' ಜನಭಾಷೆಯುಲ್ಲಿ ವಿದ್ಯಾಪತಿ, ಮಧ್ಯಯುಗದಲ್ಲಿ ಸೂರದಾಸ, ಮೀರಾಭಾಯಿ, ಹಾಗೂ ರಾಜರ ಆಸ್ಥಾನ ಕವಿಗಳ ಕೊಡುಗೆ ಅಪಾರವಾದುದು. ಆಧುನಿಕ ಕಾಲದಲ್ಲಿ ಪಾಶ್ಚಾತ್ಯ 'ಲಿರಿಕ್'ನ ಪ್ರಭಾವದಿಂದಾಗಿ ಗೀತಿಕಾವ್ಯ ವಿಶೇಷತಿರುವಯನ್ನು ಪಡೆಯಿತು.

ಆಧುನಿಕ ಕಾಲದ ಗೀತೆಗಳಲ್ಲಿ ಸೌಂದರ್ಯದ ಬಗ್ಗೆ ಆಕರ್ಷಣೆ, ಪ್ರಣಯ – ನಿವೇದನೆ, ಅತೃಪ್ತ ಆಕಾಂಕ್ಷೆ, ಜೀವನದ ವಿಷಾದ, ರಹಸ್ಯಾತ್ಮಕತೆಗಳ ಅನ್ವೇಷಣವನ್ನು ಕಾಣಬಹುದು. ವೈಯಕ್ತಿಕ ಅನುಭೂತಿಯ ಸಂವೇದನಶೀಲ ಸಂಗೀತಾತ್ಮಕ ಅಭಿವ್ಯಕ್ತಿಯೇ ಗೀತಕಾವ್ಯದ ಹೆಜ್ಜೆ ಗುರುತು. ಗೀತಿಕಾವ್ಯದ ಪ್ರಮುಖ ಲಕ್ಷಣಗಳೆಂದರೆ ಸಂಗೀತಾತ್ಮಕತೆ, ಕಾಲ್ಪನಿಕತೆಯ ಸೌಂದರ್ಯ, ಕಲಾತ್ಮಕ ಚಿತ್ರಣ ಮತ್ತು ಲಯಾತ್ಮಕ ಅನುಭೂತಿ.

ಆಧುನಿಕ ಕಾಲದಲ್ಲಿ 'ಗೀತಿಕಾವ್ಯ' ಶಬ್ದವನ್ನು ಹಿಂದಿಯಲ್ಲಿ ಆಂಗ್ಲ 'ಲಿರಿಕಲ್ ಪೊಯಟ್ರಿ (lyrical poetry)'ಯ ಸಮಾನಾಂತರವಾಗಿ ಬಳಸಲಾಗುತ್ತಿದೆ. ಆದರೆ ಇದರ ಮೂಲ ಭಾರತದ ಜಾನಪದ ಗೀತೆಗಳಲ್ಲಿ ಸಿಗುತ್ತದೆ. ಸಂಗೀತ ವಾದ್ಯಗಳ ಮೂಲಕ ಆಸ್ವಾದಿಸಲ್ಪಡುವ ಕವಿತೆಗಳನ್ನು ಗೀತಿ ಕಾವ್ಯವೆಂದೂ ಗುರುತಿಸುತ್ತಾರೆ. ಆದ್ದರಿಂದ ಗೀತಿಕಾವ್ಯಗಳಲ್ಲಿ ಭಾವಾತ್ಮಕತೆ, ಸಂಗೀತಾ ತ್ಮಕತೆ, ವೈಯಕ್ತಿಕತೆ, ಸಂಕ್ಷಿಪ್ತತೆ ಮತ್ತು ಮೃದು ಮಧುರಭಾಷೆ ವಿಶಿಷ್ಟ ಮಹತ್ವ ಪಡೆಯುತ್ತವೆ.

ಸ್ವತಃ ಮಹಾದೇವಿ ವರ್ಮಾರವರು ಗೀತಿ ಕಾವ್ಯವನ್ನು ಪರಿಭಾಷಿಸುತ್ತ ಹೀಗೆ ಹೇಳಿದ್ದಾರೆ – "ಸುಖ-ದುಃಖದ ಭಾವಾವೇಶಮಯಿ ಸ್ಥಿತಿ-ವಿಶೇಷದ ಚಿತ್ರಣವನ್ನು ಆಯ್ದ ಶಬ್ದಗಳಲ್ಲಿ ಸ್ವರ-ಸಾಧನೆಯ ಮೂಲಕ ಮಾಡುವುದೇ ಗೀತೆ" ಗೀತೆ ಗಳಲ್ಲಿನ ವೈಯಕ್ತಿಕತೆಯ ಮಹತ್ವವನ್ನು ಅವರು ಒತ್ತಿ ಹೇಳಿದ್ದಾರೆ.

ಮಹಾದೇವಿ ವರ್ಮಾರವರ ಗೀತೆಗಳಲ್ಲಿ ಕಂಡುಬರುವ ಗೀತಿಕಾವ್ಯದ ವಿಶೇಷ ಲಕ್ಷಣಗಳು ಈ ಕೆಳಕಂಡಂತಿವೆ.

ಭಾವಾತ್ಮಕತೆ

ಭಾವತತ್ತ್ವ ಗೀತಿಕಾವ್ಯದ ಪ್ರಮುಖ ಲಕ್ಷಣ. ಮಹಾದೇವಿಯವರ ಕಾವ್ಯದಲ್ಲಿ ಭಾವತತ್ವ ಎಲ್ಲೆಡೆ ಕಂಡು ಬರುತ್ತದೆ. ಆದರೆ ಆ ಭಾವಾಭಿವ್ಯಕ್ತಿಯ ಆಲಂಬನೆ ಲೌಕಿಕ ವ್ಯಕ್ತಿಯಲ್ಲ, ಅಲೌಕಿಕ ಪ್ರಿಯತಮ. ಕವಯಿತ್ರಿ ತಮ್ಮ ಅಲೌಕಿಕ ಪ್ರಿಯತಮ (ಬ್ರಹ್ಮ)ನ ಮಾನವೀಕರಣ ಮಾಡಿ, ಒಂದು ಮೂರ್ತ ರೂಪ ಕೊಡುತ್ತಾರೆ. ಅವರ ಕಾವ್ಯ ವಿಚಾರ, ಸತ್ಯ ಮತ್ತು ದರ್ಶನದಿಂದ ತೂಡಿದಾಗ್ಯೂ ಅದು ಭಾವಾತ್ಮಕತೆ ಯಿಂದ ಶೂನ್ಯವಾಗಿಲ್ಲ.

ಮಹಾದೇವಿ ಅವರ ಗೀತೆಗಳಲ್ಲಿ ಪ್ರಣಯವನ್ನು ಕುರಿತ ರಹಸ್ಯಾತ್ಮಕ ಅನು ಭೂತಿಯು ವ್ಯಂಜಿತವಾಗಿರುವುದನ್ನು ಈ ಕೆಳಗಿನ ಸಾಲುಗಳಲ್ಲಿ ಕಾಣಬಹುದು

ನಹೀಂ ಅಬ ಗಾಯಾ ಜಾತಾ ದೇವ್ ।
ಥಕೀ ಅಂಗುಲಿ ಹೈ ಢೀಲೆ ತಾರ್,
ವಿಶ್ವವೀಣಾ ಮೇಂ ಅಪನೀ ಆಜ್
ಮಿಲಾಲೋ ಯಹ್ ಅಸ್ಫುಟ ಝಂಕಾರ್!

(ನಾನು ಇನ್ನ ಹಾಡಲಾರೆ ದೇವ
ಬೆರಳುಗಳು ಬಳಲಿವೆ, ಸಡಿಲತಂತಿ
ವಿಶ್ವವೀಣೆಯಲಿ ಇಂದು
ಈ ಅಸ್ಫುಟ ಝಂಕಾರವನ್ನು ಸೇರಿಸಿಕೊ)

ಇಡೀ ಗೀತೆಯಲ್ಲಿ ವಿರಹಿಣಿಯ ಆತ್ಮ ನಿವೇದನೆ ಪ್ರಿಯತಮನನ್ನು ಕುರಿತ ಾಗಿದೆ.

ಅಮರ ಲೋಕವನ್ನು ಗರ್ವದಿಂದ ತಿರಸ್ಕರಿಸುತ್ತಾ ಹೇಳುತ್ತಾರೆ

ಕ್ಯಾ ಅಮರಲೋಕ ಮಿಲೇಗಾ
ತೇರಿ ಕರುಣಾ ಕಾ ಉಪಹಾರ್?
ರಹನೆ ದೊ ಹೇ ದೇವ! ಅರೆ
ಯಹ್ ಮೇರಾ ಮಿಟನೇ ಕಾ ಅಧಿಕಾರ್ !

(ನಿನ್ನ ಕರುಣೆಯ ಕಾಣಿಕೆಯಾಗಿ
ಅಮರಲೋಕ ಸಿಗುವುದೇನು?
ಇರಲಿ ಬಿಡು ದೇವ! ಅರೇ
ಈ ಅಳಿಯುವ ಅಧಿಕಾರ!)

ಅಲೌಕಿಕ ಜೀವನದೊಂದಿಗೆ ತನ್ನ ಜೀವನವನ್ನು ಹೋಲಿಸಿಕೊಳ್ಳುತ್ತ ತನ್ನನ್ನು ಘುವೆಂದು ತಿಳಿಯದೆ ಮಹಾದೇವಿ ಹೇಳುತ್ತಾರೆ

ಮೇರೀ ಲಘುತಾ ಪರ ಆತೀ
ಜಿಸ್ ದಿವ್ಯಲೋಕಕೀ ವ್ರೀಡಾ
ಉನಕೀ ಪ್ರಾಣೋಂಸೇ ಪೂಛೋ
ವೇ ಪಾಲ್ ಸಕೇಂಗೆ ಪೀಡಾ?
ಉನಸೇ ಕೈಸೆ ಛೋಟಾ ಹೈ
ಮೇರಾ ಯಹ್ ಭಿಕ್ಷುಕ ಜೀವನ್?
ಉನಮೇ ಅನಂತ ಕರುಣಾ ಹೈ
ಇಸಮೇ ಅಸೀಮ ಸೂನಾಪನ್?

(ನನ್ನ ಲಘುತ್ವವ ಕಂಡು
ನಾಚುವ ದಿವ್ಯಲೋಕವ

ಕೇಳು ಆದರ ಪ್ರಾಣವ
ಪೋಷಿಸಬಲ್ಲರೇ ವೇದನೆಯ
ನನ್ನ ಈ ಭಿಕ್ಷುಕ ಬಾಳು
ಅವರಿಗಿಂತ ಹೇಗೆ ಲಘು
ಅವರಲ್ಲಿ ಅನಂತ ಕರುಣೆಯಿದ್ದರೆ
ಇಲ್ಲಿಹುದು ಅಸೀಮ ಶೂನ್ಯತೆ!)

ಮಹಾದೇವಿಯವರ ಗೀತೆಗಳಲ್ಲಿ ವೇದನೆಯಸ್ವರ ಮಂದಗತಿ. ಏಕೆಂದರೆ ಅವರ ಪ್ರಣಯ ಎಷ್ಟು ಗಂಭೀರವೋ ಅಷ್ಟೇ ಶಾಂತ ಕೂಡ. ಅವರ ಗೀತೆಗಳಲ್ಲಿ ಭಾವಧಾರೆ ಕೇವಲ ಭಾವನಾತ್ಮಕವಾಗಿರದೆ, ವಿಭಿನ್ನ ದೃಶ್ಯಗಳನ್ನು, ಕ್ರಿಯಾಕಲಾಪ ಗಳನ್ನು, ಸಂವಾದಗಳನ್ನು, ಘಟನೆಗಳನ್ನು ಹೊಂದಿ ಓದುಗರಿಗೆ ಮುದಕೊಡುವುದನ್ನು ಕಾಣಬಹುದು.

ಸಂವಾದ :

ಜಿಸ್ ದಿನ ನೀರವ ತಾರೋಂ ಸೇ
ಬೋಲೀ ಕಿರಣೋಂ ಕೀ ಅಲಕೇ
'ಸೋ ಜಾವೊ ಅಲಸಾಯೀ ಹೈ
ಸುಕುಮಾರ ತುಮ್ಹಾರೀ ಪಲಕೇ!'

(ನೀರವ ತಾರೆಗಳೊಂದಿಗೆ
ಕಿರಣಗಳ ಮುಂಗುರುಳು ಹೇಳಿದಂದು,
'ಮಲಗು, ದಣಿದಿವೆ
ನಿನ್ನ ಸುಕುಮಾರ ಎವೆ ಎಂದು.)

ಕ್ರಿಯಾಕಲಾಪ

ಮೈ ಫೂಲೋಂ ಮೇಂ ರೋತೀ ವೇ
ಬಾಲಾರುಣ ಮೇಂ ಮುಸ್ಕಾತೇ
ಮೈಂ ಪಥಮೇಂ ಬಿಛ ಜಾತೀ ಹೂಂ
ವೈ ಸೌರಭ ಮೇಂ ಉಡ್ ಜಾತೇ!

(ನಾ ಹೂವೊಳು ಅತ್ತರೆ, ಬೀರುವರು
ಅವರು ಬಾಲಾರುಣನಲಿ ಮಂದಹಾಸ
ನಾ ಹಾದಿಯಲಿ ಹರಡಿಕೊಂಡರೆ
ಅವರು ಸೌರಭದಲಿ ಹಾರುವರು!)

ಇಲ್ಲಿ ಹೊರಜಗತ್ತಿನ ಕ್ರಿಯಾಕಲಾಪಕ್ಕಿಂತ ಅಂತರ್ ಜಗತ್ತಿನ ಚಿತ್ರಣವೇ ಹೆಚ್ಚು.

ಕರುಣೆ ಮತ್ತು ಸಹಾನುಭೂತಿಯ ಅಭಿವ್ಯಕ್ತಿ ಕೂಡ ಮಹಾದೇವಿಯವರ ಗೀತೆಗಳಲ್ಲಿ ಅನುಪಮ. ಅವರ 'ಮುರ್ ಝಾಯಾ ಫೂಲ್' (ಬಾಡಿದ ಹೂ) ಗೀತೆ ಎಷ್ಟು ಮಾರ್ಮಿಕವಾಗಿದೆ ನೋಡಿ –

ಥಾ ಕಲೀ ಕೇ ರೂಪ ಶೈಶವ-
ಮೇಂ ಅಹೋ ಸೂಖೆ ಸುಮನ್ ।
ಮುಸ್ಕುರಾತಾ ಥಾ, ಖಿಲಾತೀ
ಅಂಕ ಮೇಂ ತುಝುಕೋ ಪವನ್ ।

(ಮೊಗ್ಗಿನಂಥಾ ಶೈಶವದಲ್ಲಿದ್ದಾಗ
ಹೇ ಬಾಡಿದ ಹೂವೇ, ನಗುತ್ತಿದ್ದೆ
ಗಾಳಿ ತನ್ನಂಕದಲಿ ತಿನ್ನಿಸುತಿತ್ತು ನಿನಗೆ)

'ಪುಷ್ಪ' ಕವಿತೆಯಲ್ಲಿ ಹೂವಿನ ಮಾನವೀಕರಣ ಅತ್ಯಂತ ಆಕರ್ಷಕವಾಗಿದೆ.

ಮಧುರಿಮಾ ಕೇ, ಮಧುಕೇ ಅವತಾರ
ಸುಧಾಸೇ, ಸುಷಮಾಸೇ, ಛವಿಮಾನ್
(ಹೇ ಮಧುರಿಮೆಯ, ಮಧುವಿನವತಾರ
ಸುಧೆಯಂಥಾ, ಸುಷಮಾ ಯುಕ್ತ ಕಾಂತಿಮಾನ್)

*

ಕೌನ್ ವಹ್ ಹೈ ಸಮ್ಮೋಹನ ರಾಗ
ಖೀಂಚ್ ಲಾಯಾ ತುಮಕೋ ಸುಕುಮಾರ್?
ತುಮ್ಹೆ ಭೇಜಾ ಜಿಸನೆ ಇಸ್ ದೇಶ್
ಕೌನ್ ವಹ್ ಹೈ ನಿಷ್ಠುರ ಕರ್ತಾರ?

(ಯಾವ ಸಮ್ಮೋಹನ ರಾಗ
ಹೇ ಸುಕುಮಾರ ಹೂವೆ ನಿನ್ನ ಸೆಳೆದಿತು ಇಲ್ಲಿಗೆ
ಯಾರು ಕಳುಹಿದರೀ ದೇಶಕೆ
ಆ ನಿಷ್ಠುರ ಕರ್ತಾರನಾರು ಹೇಳು ಹೂವೆ?)

ಇಲ್ಲಿ ಹೂವಿನ ಮೂಲಕ ಮನುಷ್ಯ ಅರ್ಥಾತ್ ಬಡ ಸುಂದರ ಸ್ತ್ರೀಯ ಈ ಜಗತ್ತಿಗೆ ಆಗಮನದ ಬಗ್ಗೆ, ಅವಳ ಮುಂದಿನ ಭವಿಷ್ಯದ ಬಗ್ಗೆ ಚಿಂತಿಸುತ್ತ ಸಹಾನುಭೂತಿ ತೋರಿರುವುದು ಮಾರ್ಮಿಕವಾಗಿದೆ.

ಸಂಗೀತಾತ್ಮಕತೆ

ಗೀತಿಕಾವ್ಯದ ಉದ್ದೇಶ್ಯವೇ ವಸ್ತುವನ್ನು ಗೇಯ ರೂಪದಲ್ಲಿ ಪ್ರಸ್ತುತ ಪಡಿಸುವುದು. ಆದ್ದರಿಂದ ಗೇಯತೆಯೇ ಇದರ ಪ್ರಾಣ. ಸಾಮಾನ್ಯ ಮುಕ್ತಕಕ್ಕೂ ಗೀತೆಗೂ ಇದೇ ವ್ಯತ್ಯಾಸ. ಗೇಯತೆಗೆ ಛಂದಸ್ಸು ಮತ್ತು ಲಯಗಾರಿಕೆಯ

ನಿರ್ವಹಣೆ ಆವಶ್ಯಕ. ಮಹಾದೇವಿ ಕಾವ್ಯಕಲೆ, ಚಿತ್ರಕಲೆ ಮತ್ತು ಸಂಗೀತಕಲೆಗಳಲ್ಲಿ ನಿಷ್ಣಾತೆ. ಆದ್ದರಿಂದ ಅವರ ಗೀತೆಗಳಲ್ಲಿ ಗೇಯತೆಯನ್ನು ಸಂಪೂರ್ಣವಾಗಿ ನಿರ್ವಹಿಸಲಾಗಿದೆ. ಗೀತೆ ರಚನೆಯ ಮಹತ್ವಪೂರ್ಣ ಅಂಶ 'ಪಲ್ಲವಿ'. ಅದರ ಆವರ್ತನೆಯಿಂದ ಇಡೀ ಗೀತೆ ಆಕರ್ಷಕವಾಗುತ್ತದೆ.

ಉದಾಹರಣೆಗೆ :

ಜಾಗ ತುಝುಕೋ ದೂರ್ ಜಾನಾ
(ಏಳು ನೀ ಬಹುದೂರ ಹೋಗಬೇಕಾಗಿದೆ)

ಛಂದಸ್ಸು ಮತ್ತು ಲಯಗಾರಿಕೆಗೆ ಈ ಕೆಳಗಿನ ಸಾಲುಗಳೇ ಸಾಕ್ಷಿ !

ಜೋ ತುಮ ಆ ಜಾತೇ ಏಕ್ ಬಾರ್
ಕಿತನೀ ಕರುಣಾ ಕಿತನೇ ಸಂದೇಶ್
ಪಥಮೇ ಬಿಛ ಜಾತೆ ಬನ್ ಪರಾಗ,
ಗಾತಾ ಪ್ರಾಣೋಂಕಾ ತಾರ್ ತಾರ್
ಅನುರಾಗ ಭರಾ ಉನ್ಮಾದ ರಾಗ್
ಆಂಸೂ ಲೇತೆ ಪಾದ್ ಪಖಾರ್!

(ನೀನೊಮ್ಮೆ ಬಂದಿದ್ದರೆ
ಎಷ್ಟು ಕರುಣೆ, ಎಷ್ಟು ಸಂದೇಶಗಳು
ಹಾದಿಯಲಿ ಪರಾಗದಂತೆ ಹರಡಿಕೊಳ್ಳುತ್ತಿದ್ದವು
ಪ್ರಾಣಗಳ ತಂತಿ ಮೀಟುತ್ತಿತ್ತು
ಅನುರಾಗ ತುಂಬಿದ ಉನ್ಮಾದ ರಾಗ
ಕಂಬನಿ ಪಾದವ ತೊಳೆಯುತ್ತಿತ್ತು).

ನಿಜಕ್ಕೂ ಮಹಾದೇವಿಯ ಗೀತೆಗಳ ಸಂಗೀತಾತ್ಮಕತೆ ಗೇಯತೆಯ ಜೊತೆಗೆ ವಸ್ತುವಿಗೆ ಅನುಕೂಲ ವಾತಾವರಣವನ್ನು ಸೃಷ್ಟಿಸಿ ರಾಗಾತ್ಮಕತೆ ಮತ್ತು ಸಂಪ್ರೇಷಣೀಯತೆಯನ್ನು ಹೆಚ್ಚಿಸುತ್ತದೆ.

ವೈಯಕ್ತಿಕತೆ

ಮಹಾದೇವಿಯವರ ಇಡೀ ಕಾವ್ಯ ಅವರ ಸ್ವಂತ ಅನುಭವಗಳ ರಸಾತ್ಮಕ ಅಭಿವ್ಯಕ್ತಿಯಾಗಿದೆ. ಅವರು ಸ್ವತಃ ಹೇಳುತ್ತಾರೆ, 'ನನ್ನ ಗೇಯ ಕವಿತೆಗಳು ಆತ್ಮ ನಿವೇದನೆ ಮಾತ್ರ' ಅವರ ಪ್ರೇಮದ ಆಲಂಬನೆ ಎಷ್ಟು ಸೂಕ್ಷ್ಮ, ಅಜ್ಞಾತ ಮತ್ತು ಅಲೌಕಿಕವೆಂದರೆ ಅದರ ರೂಪರೇಖೆ ಸ್ಪಷ್ಟವಾಗಿ ಕಾಣುವುದೇ ಇಲ್ಲ. ಅವರ ಗೀತೆಗಳು ಜೀವನದ ಭಾವಾತ್ಮಕ ವಿಕಾಸದ ವಿಭಿನ್ನ ಸೋಪಾನಗಳ ರೂಪದಲ್ಲಿ ಕಂಡುಬರುತ್ತವೆ.

ಉದಾಹರಣೆಗೆ ಈ ಕೆಳಗಿನ ಸಾಲುಗಳು –

೧. ಸಿಖಾನೆ ಜೀವನ ಕಾ ಸಂಗೀತ
ತಭೀ ತುಮ ಆಯೇ ಥೆ ಇಸ್ ಪಾರ್ ।
(ಜೀವನದ ಸಂಗೀತವ ಕಲಿಸಲೆಂದೇ
ನೀ ಬಂದಿದ್ದ ಈ ಕಡೆ)

೨. ತುಮಕೋ ಪೀಡಾ ಮೇಂ, ಢೂಂಢಾ
ತುಮ ಮೇಂ ಢೂಂಡೂಂಗೀ ಪೀಡಾ ।
(ನಿನ್ನನ್ನು ವೇದನೆಯಲ್ಲಿ ಹುಡುಕಿದೆ
ಈಗ ನಿನ್ನಲ್ಲಿ ಹುಡುಕುವೆ ವೇದನೆಯ)

೩. ಮೈ ಫೂಲೋಂ ಮೇಂ ರೋತಿ ವೇ
ಬಾಲಾರುಣ ಮೇಂ ಮುಸ್ಕಾತೇ !
(ನಾ ಹೂಗಳಲ್ಲಿ ಅಳುವೆ, ಅವರು
ಬಾಲರುಣನಲಿ ಬೀರುವರು ಮಂದಹಾಸ)

೪. ಪ್ರಿಯ ಸಾಂಧ್ಯಗಗನ ಮೇರಾ ಜೀವನ
(ಪ್ರಿಯ ಸಾಂಧ್ಯಗಗನ ನನ್ನ ಜೀವನ)

೫. ಜೋತುಮ ಆ ಜಾತೆ ಏಕ ಬಾರ್!
(ನೀನೊಮ್ಮೆ ಬಂದಿದ್ದರೆ!)

ಹೀಗೆ ಮಹಾದೇವಿಯವರ ಗೀತೆಗಳು ಅಲೌಕಿಕ ಪ್ರಿಯತಮನ ಪ್ರಥಮ ಪರಿಚಯದಿಂದ ನಿರ್ವಾಣ ಪ್ರಾಪ್ತಿಯವರೆಗಿನ ಸಾಧನೆಯ ವಿಭಿನ್ನ ಸೋಪಾನಗಳ ಕಥೆಯಾಗಿದೆ. ಇದು ಸರ್ವತ್ರ ವೈಯಕ್ತಿಕವಾಗಿದೆ. ಇವುಗಳಲ್ಲಿ ಹಾಸ–ರೋದನ, ಸಂಯೋಗ–ವಿಯೋಗ, ಆಶೆ--ನಿರಾಶೆಗಳ ನಿರೂಪಣೆಯನ್ನು ಕಾಣಬಹುದು. ಮಹಾದೇವಿಯವರ ವ್ಯಕ್ತಿತ್ವದಲ್ಲಿನ ಕರುಣೆ, ಸಂವೇದನಶೀಲತೆ, ಸಹೃದಯತೆ, ಚಿಂತನ ಶೀಲತೆಗಳು ಅವರ ಕೃತಿಗಳಲ್ಲಿ ವಿಶಿಷ್ಟ ರೀತಿಯಲ್ಲಿ ಅಭಿವ್ಯಕ್ತಗೊಂಡಿವೆ.

ಸಂಕ್ಷಿಪ್ತತೆ

ಗೀತ ರಚನಕಾರರು ಒಂದು ದೀರ್ಘಕತೆ ಅಥವಾ ಇತಿವೃತ್ತವನ್ನು ವಸ್ತುವಾಗಿಸಿಕೊಳ್ಳದೆ ಅವರು ತಮ್ಮ ಹೃದಯದ ಒಂದು ಉಚ್ಛ್ವಾಸವನ್ನು ವ್ಯಕ್ತಪಡಿಸುತ್ತಾರೆ. ಆದ್ದರಿಂದ ಅವರ ರಚನೆಗಳು ಸಂಕ್ಷಿಪ್ತವಾಗಿರುತ್ತವೆ.

ಮಹಾದೇವಿಯವರ ಸಂಕ್ಷಿಪ್ತ ರಚನೆಗಳಲ್ಲಿನ ಒಂದು ಉದಾಹರಣೆ :

ಕ್ಯಾ ಪೂಜನ್ ಕ್ಯಾ ಅರ್ಚನ ರೆ !
(ಏನು ಪೂಜೆ ಏನು ಅರ್ಚನೆ!)

ಉಸ್ ಅಸೀಮ್‌ಕಾ ಸುಂದರ ಮಂದಿರ
ಮೇರಾ ಲಘುತಮ ಜೀವನ ರೇ!
(ಆ ಅಸೀಮನ ಸುಂದರ ಮಂದಿರ
ನನ್ನ ಈ ಲಘುತಮ ಜೀವನ)

ಮೇರಿ ಶ್ವಾಸೆ ಕರತೀ ರಹತೀ
ನಿತ ಪ್ರಿಯಕಾ ಅಭಿನಂದನ ರೇ ।
ನನ್ನ ಶ್ವಾಸೋಚ್ಛವಾಸ ನಿತ್ಯ ಮಾಡುತಿಹುದು
ಪ್ರಿಯತಮನ ಅಭಿನಂದನೆ ।

ಮಹಾದೇವಿಯವರ ಸಮಗ್ರ ಕೃತಿಗಳನ್ನು ಅವಲೋಕಿಸಿದಾಗ ಅವರ ಕಾವ್ಯ ಕಲೆಯು ವಿಕಾಸಗೊಂಡಂತೆಲ್ಲ ಅವರ ಗೀತೆಗಳಲ್ಲಿ ಸಂಕ್ಷಿಪ್ತತೆಯ ಗುಣ ಕೂಡ ವಿಕಸಿತಗೊಂಡಿತು ಎಂಬುದು ವೇದ್ಯವಾಗುತ್ತದೆ.

ಭಾವಾನುಕೂಲ ಭಾಷೆ

ಭಾವಕ್ಕೆ ಅನುಗುಣವಾಗಿ ಅಭಿವ್ಯಕ್ತಿಯ ಭಾಷೆ ಕೋಮಲ ಅಥವಾ ಕಠೋರ ವಾಗಿರುತ್ತದೆ. ಮಹಾದೇವಿಯವರ ಭಾಷೆ ಮೃದು ಮಧುರ ಮತ್ತು ಪರಿಷ್ಕೃತ. ಸಂಸ್ಕೃತ ಶಬ್ದ ಬಾಹುಲ್ಯ ಅವರ ಕಾವ್ಯದ ವಿಶೇಷತೆ.

ಮಿಲನ ಸುಖದ ವ್ಯಂಜನೆಯ ಭಾಷೆ ನೋಡಿ –

ನಯನ ಶ್ರವಣಮಯ ಶ್ರವಣ ನಯನಮಯ ಆಜ್ ಹೋ ರಹೀ ಕೈಸೀ ಉಲಝನ್।
ರೋಮ ರೋಮ ಮೇಂ ಹೋತಾ ಹೇ ಸಖೀ ಏಕ ನಯೆ ಉರ್‌ಕಾ–ಸಾ ಸ್ಪಂದನ್॥
(ನಯನ ಶ್ರವಣಮಯ ಶ್ರವಣ ನಯನಮಯ ಇಂದು ಎಂಥಾ ಗೋಜಲು
ನನ್ನ ರೋಮ ರೋಮದಲಿ ಹೇ ಸಖೀ ಒಂದು ನವ ಹೃದಯ ಸ್ಪಂದನ॥)

ಅನಂತತೆ ಎಂಬುದಿಲ್ಲ ಜೀವನ ಅಸ್ಥಿರ ಎಂಬ ಭಾವ ಮಹಾದೇವಿಯವರ ಗೀತೆಗಳಿಗೆ ಶ್ರೇಷ್ಠತೆಯ ಮೆರಗುಕೊಟ್ಟಂತಿದೆ.

ವಿಕಸತೆ ಮುರ ಝಾನೇಕೋ ಫೂಲ್,
ಉದಯ ಹೋತಾ ಛಿಪನೆ ಕೋ ಚಂದ್ರ
ಶೂನ್ಯ ಹೋನೆ ಕೋ ಭರತೇ ಮೇಘ,
ದೀಪ ಜಲತಾ ಹೋನೇ ಕೋ ಮಂದ್
ಯಹಾ ಕಿಸಕಾ ಅನಂತ ಯೌವನ ?
ಅರೆ ಅಸ್ಥಿರ ಛೋಟೆ ಜೀವನ!
(ವಿಕಸಿಸುವುದು ಬಾಡಲೆಂದೇ ಹೂವು
ಉದಯವಾಗುವುದು ಚಂದ್ರ ಮರೆಯಾಗಲೆಂದೇ
ಶೂನ್ಯವಾಗಲೆಂದೇ ಕವಿಯುವುದು ಮೋಡ

ದೀಪ ಉರಿವುದು ಮಂದವಾಗಲೆಂದೇ
ಇಲ್ಲಿ ಅನಂತ ಯೌವನ ಯಾರದು?
ಅರೇ ಅಸ್ಥಿರ ಈ ಲಘು ಜೀವನ ।)

ಹೀಗೆ ಮಹಾದೇವಿ ವರ್ಮಾರವರ ಗೀತೆಗಳಲ್ಲಿ ಗೀತಿಕಾವ್ಯದ ಗೇಯತೆ, ಭಾವಾತ್ಮಕತೆ, ಆತ್ಮ ನಿವೇದನೆ, ಪ್ರಣಯಾನುಭೂತಿ, ವೈಯಕ್ತಿಕ ಭಾವಬೋಧೆ, ಸಂಕ್ಷಿಪ್ತತೆ, ಮೃದುಮಧುರ ಭಾಷೆ ಮೊದಲಾದ ಎಲ್ಲ ವಿಶಿಷ್ಟ ಲಕ್ಷಣಗಳೂ ಕಂಡುಬರುತ್ತದೆ. ಆದ್ದರಿಂದಲೇ ಮಹಾದೇವಿ ಹಿಂದಿ ಕಾವ್ಯ ಜಗತ್ತಿನಲ್ಲಿ ಶ್ರೇಷ್ಠ ಗೀತಕಾರರಾಗಿ ಖ್ಯಾತಿಯನ್ನು ಪಡೆದರು.

***

ಕಾರ್ನಾಡರ ನಾಟಕಗಳ ಹೆಜ್ಜೆ ಹಾದಿ...

ಡಾ|| ಜಿ. ಎನ್. ಉಪಾಧ್ಯ

ಭಾರತದ ಪ್ರಮುಖ ಪ್ರತಿಭಾನ್ವಿತ ನಾಟಕಕಾರರಲ್ಲಿ ಗಿರೀಶ್ ಕಾರ್ನಾಡ ಅವರದು ಎದ್ದು ಕಾಣುವ ಹೆಸರು. ವಿಶ್ವದ ಅತ್ಯುತ್ತಮ ನಾಟಕಗಳಲ್ಲಿ ಒಂದೆಂಬ ಕೀರ್ತಿಗೆ ಭಾಜನವಾದ 'ತುಘಲಕ' ಬರೆದ ಗಿರೀಶರ ಪ್ರತಿಭೆ ಅಪೂರ್ವವಾದುದು. ತಮ್ಮ ಚೊಚ್ಚಲ ನಾಟಕ 'ಯಯಾತಿ'ಯಿಂದ ಹಿಡಿದು ಈಚಿನ 'ಅಗ್ನಿ ಮತ್ತು ಮಳೆ'ಯುವರೆಗೆ ನಾಟಕಕಾರರಾಗಿ ಅವರು ಸಾಧಿಸಿದ ಯಶಸ್ಸು ಅಸಾಮಾನ್ಯವಾದುದು. ತಮ್ಮ ನಾಟಕಗಳ ಮೂಲಕ ದೃಶ್ಯ ಮಾಧ್ಯಮದ ವಿವಿಧ ಸಾಧ್ಯತೆಗಳನ್ನು ಪ್ರಯೋಗಿಸಿ, ಭಾರತೀಯ ರಂಗಭೂಮಿಯಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಅವರು ಗಳಿಸಿಕೊಂಡಿದ್ದಾರೆ. ಕನ್ನಡದ ಆಡು ನುಡಿಯ ಲಯವನ್ನು ಬನಿಯನ್ನು ಸೆರೆ ಹಿಡಿದು ನಾಟಕಗಳನ್ನು ರಚಿಸಿ ಕನ್ನಡದ ಅನನ್ಯ ನಾಟಕಕಾರರಾಗಿ ಅವರು ಹೊರಹೊಮ್ಮಿದ್ದಾರೆ.

ಕನ್ನಡ ರಂಗಭೂಮಿಗೆ ಮಾತ್ರವಲ್ಲ, ಭಾರತೀಯ ರಂಗಭೂಮಿಗೆ ಹೊಸ ಆಯಾಮವನ್ನೊದಗಿಸಿಕೊಡುವಲ್ಲಿ ಗಿರೀಶ್‌ಕಾರ್ನಾಡರದು ಗಮನಾರ್ಹ ಕೊಡುಗೆ. ಇತರ ನಾಟಕಕಾರರಲ್ಲಿ ಅಷ್ಟಾಗಿ ಕಾಣದ ರಂಗಪ್ರಜ್ಞೆ, ಸಂವಹನ ಸಾಧ್ಯತೆ, ಸಮಕಾಲೀನ ಹಾಗೂ ಸಾಮಯಿಕ ಜೀವನದರ್ಶನ ಇವೆಲ್ಲವುಗಳಿಂದ ಅವರು ನಮ್ಮ ನಡುವಿನ ಒಬ್ಬ ಮಹತ್ವಾಕಾಂಕ್ಷೆಯ ನಾಟಕಕಾರರಾಗಿ ರೂಪುಗೊಂಡಿದ್ದಾರೆ.

ಯಯಾತಿ (೧೯೬೧)

'ಯಯಾತಿ' ಗಿರೀಶ್ ಕಾರ್ನಾಡರ ಚೊಚ್ಚಲ ನಾಟಕ. ಇದು ೧೯೬೧ರಲ್ಲಿ ಬೆಳಕು ಕಂಡಿತು. ಇದೊಂದು ಪೌರಾಣಿಕ ನಾಟಕ. ಶ್ರೀರಂಗರನ್ನು ಬಿಟ್ಟರೆ ಪೌರಾಣಿಕ ವಸ್ತುಗಳನ್ನು ಆಯ್ದುಕೊಂಡು ನಾಟಕಗಳನ್ನು ರಚಿಸಿ, ವಿಶಿಷ್ಟತೆಯನ್ನು ಉಳಿಸಿಕೊಂಡ ನಾಟಕಕಾರರಲ್ಲಿ ಗಿರೀಶರದು ದೊಡ್ಡ ಹೆಸರು. ಪುರಾಣದಲ್ಲಿ ಬರುವ ಯಯಾತಿಯ ಕತೆಯನ್ನು ಬಳಸಿಕೊಂಡು ಆ ಮೂಲಕ ಬದುಕಿನ ಮೂ[ಲ]ಭೂತ ಸಮಸ್ಯೆಯೊಂದಕ್ಕೆ ಹೊಸ ಅರ್ಥವನ್ನು ಶೋಧಿಸುವ ಪ್ರಯತ್ನವನ್ನು ಈ ನಾಟಕದಲ್ಲಿ ಅವರು ಮಾಡಿದ್ದಾರೆ. ಯಯಾತಿಯ ಅಮರತ್ವದ ಅಪೇಕ್ಷೆ, ದೇ[ವ]ಯಾನಿಯ ಪ್ರೀತಿಯ ಹಂಬಲ, ಪುರುವಿನ ವ್ಯಕ್ತಿತ್ವದ ಹುಡುಕಾಟ, ಶರ್ಮಿಷ್ಠೆ[ಯ] ಮನುಷ್ಯತ್ವದ ಆಸೆ–ಹೀಗೆ ಈ ನಾಟಕದ ಪಾತ್ರಗಳೆಲ್ಲ ತಂತಮ್ಮ ಬ[ದು]ಕಿ

ಅರ್ಥವನ್ನು ಹುಡುಕಾಡುತ್ತವೆ. ಅತಿಯಾದ ವಂಶಾಭಿಮಾನದಿಂದ ಯಯಾತಿ ಅಮರತ್ವಕಾಗಿ ಹಂಬಲಿಸುತ್ತಾನೆ. ತಂದೆಯ ಮುಪ್ಪನ್ನು ತನ್ನ ಮೇಲೆ ತೆಗೆದು ಕೊಳ್ಳುವ ಪುರು ಒಂದರ್ಥದಲ್ಲಿ ದುರಂತ ನಾಯಕನೇ ಸರಿ. ಬದುಕಿನಲ್ಲಿ ಬಂದದ್ದೆಲ್ಲವನ್ನು ಎದುರಿಸುವ ಪುರು ಅಸ್ತಿತ್ವವಾದೀ ನಿಲುವನ್ನು ನಾಟಕದುದ್ದಕ್ಕೂ ಪ್ರತಿಪಾದಿಸುತ್ತಾನೆ. ಈ ನಾಟಕ ಎತ್ತುವ ಇನ್ನೊಂದು ಮುಖ್ಯ ಪ್ರಶ್ನೆ ಹೊಣೆ ಗಾರಿಕೆಗೆ ಸಂಬಂಧಿಸಿದ್ದು. ಸಾಮಾಜಿಕ ರಚನೆಯಲ್ಲಿ ನಾವು ತೆಗೆದುಕೊಳ್ಳುವ ನಿರ್ಧಾರಗಳು ಬೇರೆಯವರ ಬದುಕಿನ ಮೇಲೂ ಪರಿಣಾಮ ಬೀರುತ್ತದೆ ಎಂಬು ದನ್ನು ಈ ನಾಟಕ ಎತ್ತಿತೋರಿದೆ. ಯಯಾತಿಯ ಮುಪ್ಪನ್ನು ಸ್ವೀಕರಿಸಿ ಪುರು ತನ್ನ ಯೌವನವನ್ನು ಅವನಿಗೆ ನೀಡುತ್ತಾನೆ. ಇಡೀ ನಾಟಕಕ್ಕೆ ತಿರುವು ಬರುವುದೇ ಈ ಹಂತದಲ್ಲಿ. ಪುರುವಿನ ಪತ್ನಿ ಚಿತ್ರಲೇಖೆ ಗಂಡನ ಯೌವನದೊಂದಿಗೆ ತನ್ನನ್ನು ಸ್ವೀಕರಿಸುವಂತೆ ಮಾವ ಯಯಾತಿಯಲ್ಲಿ ಕೇಳುತ್ತಾಳೆ. ಇದು ಸಾಧ್ಯವಾಗದೇ ಹೋದಾಗ ಆಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇದಕ್ಕೆ ಗಂಡ ಹಾಗೂ ಮಾವ ಇವರಿಬ್ಬರೂ ಜವಾಬ್ದಾರರಾಗುತ್ತಾರೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಅನುಭವಿಸುವ ಕಷ್ಟ ನಷ್ಟಗಳ ಕುರಿತೂ ಈ ನಾಟಕದಲ್ಲಿ ಸೂಕ್ಷ್ಮ ವಿವರಗಳು ದಾಖಲಾಗಿವೆ. ಸ್ವಾತಂತ್ರ್ಯಾನಂತರ ನಮ್ಮಲ್ಲಾದ ಕೌಟುಂಬಿಕ ವಿಘಟನೆಯ ಕುರಿತು ಈ ನಾಟಕ ಮಾತನಾಡುತ್ತದೆ. 'ಯಯಾತಿ' ಒಂದು ರೀತಿಯಲ್ಲಿ ಪುರಾಣದ ಮರು ಸೃಷ್ಟಿಯೂ ಹೌದು. ಅಸ್ತಿತ್ವವಾದಿ ವಿಚಾರಧಾರೆಯಿಂದ ಪ್ರಭಾವಿತರಾಗಿರುವ ಕಾರ್ನಾಡರು ಇಲ್ಲಿ ಭೂತ ವರ್ತಮಾನಗಳ ಸಂಘರ್ಷವನ್ನು ಅಸ್ತಿತ್ವದ ಉಳಿವಿಗಾಗಿ ಹೋರಾಡುವ ಪಾತ್ರಗಳಿಗೆ ತಳುಕು ಹಾಕಿ ನಾಟಕವನ್ನು ಹೆಚ್ಚು ಪ್ರಸ್ತುತಗೊಳಿಸಿದ್ದಾರೆ.

ತುಘಲಕ (೧೯೬೪)

'ತುಘಲಕ' ಗಿರೀಶ್ ಕಾರ್ನಾಡರ ಉತ್ಕೃಷ್ಟ ಕೃತಿ. ಇದೊಂದು ಸಂಕೀರ್ಣ ನಾಟಕ. ಇಲ್ಲಿ ಭಾರತದ ಇತಿಹಾಸದಲ್ಲೇ ವಿಕ್ಷಿಪ್ತ ವ್ಯಕ್ತಿಯೆಂದು ಹೆಸರಾದ ತುಘಲಕನೇ ಕೇಂದ್ರ ಪಾತ್ರದಲ್ಲಿದ್ದಾನೆ. ಇತಿಹಾಸದ ಪದರಗಳನ್ನು ಕೆದಕುತ್ತಲೇ ವರ್ತಮಾನದ ಬದುಕಿನ ಪ್ರತೀಕಗಳನ್ನು ಈ ನಾಟಕದಲ್ಲಿ ಸಮರ್ಥವಾಗಿ ಬಿಂಬಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಅಡಿಗಡಿಗೆ ಆದರ್ಶವನ್ನು ಉಸಿರಾಗಿಸಿ ಕೊಂಡು ಬೆಳೆದ ತುಘಲಕ ಬಹಳ ದೊಡ್ಡ ಕನಸುಗಾರ. ವಾಸ್ತವವನ್ನು ಬೆನ್ನಿಗಿಟ್ಟುಕೊಂಡು ಕನಸುಗಳನ್ನು ಹಿಡಿಯಲು ಮುಂದಾದ ಆತ ಆ ನಡುವಿನ ಕಂದರದಲ್ಲಿ ಬಿದ್ದು ದುರಂತ ನಾಯಕನಾಗಿ ಕಂಗೊಳಿಸುತ್ತಾನೆ. ತನ್ನ ಆದರ್ಶಗಳನ್ನು ಸಾಧಿಸಲು ಆತ ಕೈಗೊಂಡ ಮಾರ್ಗದಲ್ಲಿ ಮುಗ್ಗರಿಸಿ ಹಿನ್ನಡೆ ಸಾಧಿಸುತ್ತಾನೆ. ಇದು ತುಘಲಕನ ವೈಯಕ್ತಿಕ ಸೋಲೂ ಹೌದು, ಸಾರ್ವಜನಿಕರ

ಸೋಲೂ ಹೌದು. ತುಘಲಕನ ವ್ಯಕ್ತಿತ್ವದ ವಿವಿಧ ಮುಖಗಳನ್ನು ಬಿಂಬಿಸುವ ಅಝೀಝು, ಬರನಿ, ಶಿಹಾಬುದ್ದೀನ, ಶೇಖಶಮಸುದ್ದೀನ ಮೊದಲಾದವರು ಸಾವಿಗೆ ತುತ್ತಾಗುವುದು ತುಘಲಕನ ವ್ಯಕ್ತಿ ವಿಶೇಷ ಸಪಾಟಾದುದಕ್ಕೆ ಸಾಕ್ಷಿಯಾಗಿದೆ. ಸಮಾಜ ಕಲ್ಯಾಣಕ್ಕಾಗಿ, ಜನತೆಯ ಶ್ರೇಯೋಭಿವೃದ್ಧಿಗಾಗಿ, ಧರ್ಮಗಳ ನಡುವೆ ಐಕ್ಯ ಸಾಧಿಸಬಯಸಿ ಧರ್ಮದ ಬುನಾದಿಯ ಮೇಲೆ ಆಡಳಿತ ವ್ಯವಸ್ಥೆಯನ್ನು ಕಟ್ಟಲು ಶ್ರಮಿಸಿ ಹೊರಟ ತುಘಲಕ ಗೆದ್ದು ಸೋತವನು. ಇತಿಹಾಸದಲ್ಲಿ ಹುಚ್ಚು ದೊರೆ ಎಂದೇ ಖ್ಯಾತನಾದ ತುಘಲಕ್ ಪ್ರಸ್ತುತ ನಾಟಕದಲ್ಲಿ ಅಸ್ತಿತ್ವವಾದಿ ಧೋರಣೆಯನ್ನು ಮೈಗೂಡಿಸಿಕೊಂಡ ಸಂವೇದನಾಶೀಲ ಚಿಂತಕನಾಗಿಯೇ ಕಂಡುಬರುತ್ತಾನೆ. ಹಿಂಸೆ, ಕುಟಿಲತನ, ಅನ್ಯಾಯಗಳನ್ನು ಕೈಗೊಂಡರೂ ಅದಕ್ಕೆ ಅಂಟಿಕೊಂಡವನಲ್ಲ. ಪ್ರತಿಯೊಂದು ಕಾರ್ಯವೂ ಪವಿತ್ರ ಪ್ರಾರ್ಥನೆಯಾಗಬೇಕೆಂದು ಸಾರಿದ ಈತನೇ ಮುಂದೆ ಪ್ರಾರ್ಥನೆಯನ್ನು ದೇಶಭ್ರಷ್ಟಗೊಳಿಸುತ್ತಾನೆ. ಹೀಗೆ ಎಲ್ಲವನ್ನು ಸ್ಥಿತಪ್ರಜ್ಞನಂತೆ ನೋಡುವ ಅವನ ಅಸಂಗತ ವ್ಯಕ್ತಿತ್ವವೇ ದುರಂತಕ್ಕೆ ದುರ್ಗತಿಗೆ ಕಾರಣವಾಗುತ್ತದೆ. ಈ ಮೂಲಕ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳು ತ್ತಾನೆ. ಆದ್ದರಿಂದ "ಈ ನಾಟಕ ಬರೀ ತುಘಲಕನದಾಗಿರದೆ ಕನಸು ಮತ್ತು ವಾಸ್ತವಗಳ ಜಾಲದಲ್ಲಿ ಹೋರಾಡುವ ಎಲ್ಲ ಮಾನವರ ಕಥೆಯೂ ಆಗಿ ಬಿಡುತ್ತದೆ" ಎಂಬ ಎಸ್. ದಿವಾಕರ ಅವರ ಮಾತಿನಲ್ಲಿ ಸತ್ಯಾಂಶವಿದೆ.

ಹಯವದನ (೧೯೭೧)

ಕಾರ್ನಾಡರ ಗಮನಾರ್ಹ ನಾಟಕಗಳಲ್ಲಿ 'ಹಯವದನ'ವೂ ಒಂದು. ವೇತಾಲ ಪಂಚವಿಂಶತಿಯಲ್ಲಿನ ಆರನೆಯ ಕತೆ ಹಾಗೂ ಇವನ್ನೇ ಮೂಲವಾಗಿಟ್ಟು ಬರೆದ ಟಾಮಸ್‌ಮಾನ್ನದ ಒಂದು ಜರ್ಮನ್ ನೀಳ್ಗತೆಯಿಂದ ಸೃಜನಶೀಲ ಪ್ರೇರಣೆ ಪಡೆದು ಈ ನಾಟಕವನ್ನು ರಚಿಸಿದ್ದಾರೆ. ಪರಿಪೂರ್ಣತೆಯ ಹಂಬಲ ಮತ್ತು ಹತಾಶೆ ಈ ನಾಟಕದ ಪ್ರಧಾನ ಆಶಯವಾಗಿವೆ. ಕಾಮವನ್ನೇ ಪ್ರಧಾನವಸ್ತುವ ನ್ನಾಗಿ ಸ್ವಿಕರಿಸಿರುವ ಈ ನಾಟಕ ಮೈ-ಮನಸ್ಸುಗಳ ನಡುವಿನ ದ್ವಂದ್ವವನ್ನೂ ತನ್ನ ತೆಕ್ಕೆಯಲ್ಲಿ ತೆಗೆದುಕೊಂಡಿದೆ.

ಪರಿಪೂರ್ಣತೆಗಾಗಿ ಹಂಬಲಿಸುವ ಪದ್ಮಿನಿ ಈ ನಾಟಕದ ಕಥಾನಾಯಕಿ. ದೇವದತ್ತನ ಬುದ್ಧಿಶಕ್ತಿ ಹಾಗೂ ಕಪಿಲನ ದೇಹಶಕ್ತಿಗಳೆರಡನ್ನೂ ಆಕೆ ಬಯಸು ತ್ತಾಳೆ. ದೇಹ ಮನಸ್ಸುಗಳೆರಡನ್ನೂ ಪರಿಪೂರ್ಣಗೊಳಿಸಬಲ್ಲ ಗಂಡಸಿಗಾಗಿ ಪದ್ಮಿನಿ ಹಾತೊರೆಯುತ್ತಾಳೆ. ಈ ಆಯ್ಕೆಯ ಗೊಂದಲದಲ್ಲಿಯೇ ವಿದ್ವಾಂಸನಾದ ದೇವದತ್ತನ ಕೈ ಹಿಡಿಯುತ್ತಾಳೆ. ಕಪಿಲ ದೇವದತ್ತನ ಆಪ್ತ ಗೆಳೆಯ. ಈ ನಡುವೆ ದೇವದತ್ತನಲ್ಲಿಲ್ಲದ ದೇಹಶಕ್ತಿಯನ್ನು ಬಯಸಿ ಪದ್ಮಿನಿ ಕಪಿಲನಿಗಾಗಿ

ಪರಿತಪಿಸುತ್ತಾಳೆ. ಕಪಿಲನ ಮುಗ್ಧತೆ ಚುರುಕುತನಕ್ಕೆ ಆಕೆ ಮಾರುಹೋಗುತ್ತಾಳೆ. ಇದಕ್ಕನು ಗುಣವಾಗಿಯೇ ಕಾಳಿಯ ಸಮ್ಮುಖದಲ್ಲಿ ಇವರಿಬ್ಬರು ಬಲಿಯಾಗುತ್ತಾರೆ. ದೇವದತ್ತ -ಕಪಿಲರಿಗೆ ಪುನರ್ಜನ್ಮವನ್ನು ದೇವಿ ಕೊಡಲು ಮುಂದಾದಾಗ ಪದ್ಮಿನಿ ತನಗರಿ ವಿಲ್ಲದಂತೆ ಅವರಿಬ್ಬರ ರುಂಡ ಮುಂಡಗಳನ್ನು ಅದಲುಬದಲು ಮಾಡಿ ಮುಂದಿನ ಅನರ್ಥಕ್ಕೆ ಕಾರಣಳಾಗುತ್ತಾಳೆ. ದೇವದತ್ತನ ತಲೆ ಕಪಿಲನ ಮೈಸೇರಿ ಪರಿಪೂರ್ಣ ಗಂಡಸನ್ನು ಪಡೆದರೂ ತೃಪ್ತಳಾಗದೇ ಕಪಿಲನನ್ನು ಅನುಸರಿಸಿಕೊಂಡು ಹೋಗುತ್ತಾಳೆ. ಪದ್ಮಿನಿಯನ್ನು ಹಿಂಬಾಲಿಸಿ ಬಂದ ದೇವದತ್ತನಿಗೂ ಕಪಿಲನಿಗೂ ಹ್ಯೊಕೈ ನಡೆದು ಇಬ್ಬರೂ ಸಾವನ್ನಪ್ಪುತ್ತಾರೆ. ಇವರ ಚಿತೆಯೇರಿ ಪದ್ಮಿನಿ 'ಮಹಾಸತಿ' ಯಾಗುತ್ತಾಳೆ!

ದೇವದತ್ತ-ಪದ್ಮಿನಿ-ಕಪಿಲರ ಕತೆಗೆ ಸಮಾನಾಂತರವಾಗಿ ಮತ್ತೊಂದು ಕತೆ ಈ ನಾಟಕದ ಆದಿಯಲ್ಲಿಯೇ ಬಂದಿದೆ. ಕುದುರೆಯ ಮುಖ ಹಾಗೂ ಮನುಷ್ಯನ ದೇಹವುಳ್ಳ ಪ್ರಾಣಿಯೊಂದು ಪೂರ್ಣಾಂಶನಾಗಲು ನಡೆಸಿದ ಹೋರಾಟವಿದಾಗಿದೆ. ನಾಟಕದ ಆರಂಭದಲ್ಲಿ ಬರುವ ಗಣಪತಿ ವಂದನೆ ಅನೇಕ ರೀತಿಯಲ್ಲಿ ನಾಟಕದ ಆಶಯವನ್ನು ಹಿಡಿದಿಟ್ಟಿದೆ. ಪರಿಪೂರ್ಣ ಮನುಷ್ಯ ಅಥವಾ ದೇವ ಎಂಬುದು ಕನಸಿನ ಮಾತು ಎಂಬುದು ನಾಟಕದ ಉದ್ದಕ್ಕೂ ತೋರಿಬರುತ್ತದೆ. ಜನಪದ ರಂಗಭೂಮಿಯ ಎಲ್ಲ ಸಾಧ್ಯತೆಗಳನ್ನು ಬಳಸಿಕೊಂಡ ಈ ನಾಟಕ ತಾಂತ್ರಿಕ ದೃಷ್ಟಿಯಿಂದಲೂ ಸಾಕಷ್ಟು ಗಟ್ಟಿಯಾಗಿದೆ. ಆಧುನಿಕ ಜಾನಪದ ನಾಟಕಗಳ ಪರಂಪರೆಗೆ ಹೊಸ ದೀಕ್ಷೆಯನ್ನು ಕೊಟ್ಟ ನಾಟಕವೆಂಬ ಕೀರ್ತಿಗೂ 'ಹಯವದನ' ಪಾತ್ರವಾಗಿದೆ. ಯಕ್ಷಗಾನದ ಪ್ರೇರಣೆ ಪ್ರಭಾವ ಈ ನಾಟಕದ ಮೇಲೆ ಗಾಢವಾಗಿ ಆಗಿದೆ.

ಅಂಜುಮಲ್ಲಿಗೆ (೧೯೭೭)

ಇದೊಂದು ಪರಿಣಾಮಕಾರಿ ಸಾಮಾಜಿಕ ನಾಟಕ. ಗಿರೀಶರ ಸಾಮಾಜಿಕ ಪ್ರಜ್ಞೆ ತೀರ ಸೂಕ್ಷ್ಮ ಹಾಗೂ ವಿಚಾರಪೂರಿತವಾದುದು. ರಂಗದ ಮೇಲೆ ಅಷ್ಟು ಯಶಸ್ವಿಯಾಗದಿದ್ದರೂ ಇದೊಂದು ವಿಶಿಷ್ಟಬಗೆಯ ನಾಟಕವಾಗಿ ಓದುಗರ ಗಮನಸೆಳೆದಿದೆ. ಯಮ-ಯಮಿಯರ ಪುರಾಣದ ಕತೆಯನ್ನು ನೆನಪಿಗೆ ತರುವ, ಅಕ್ಕ ತಮ್ಮರ ಮಧ್ಯೆ ಬೆಳೆಯುವ ಸಹಜವಲ್ಲದ ಕಾಮವೇ ಇಲ್ಲಿಯ ಮೂಲ ವಸ್ತು. ಇಂಗ್ಲೆಂಡಿನಲ್ಲಿ ನಡೆಯುವ ಈ ನಾಟಕ ವರ್ಗ ಕಲಹ, ಇಂಗ್ಲೆಂಡಿನ ಏಷ್ಯನ್ ವಲಸೆಗಾರರ ಸಮಸ್ಯೆಗಳು, ಮನುಷ್ಯನ ಕಾಮ-ಪ್ರೇಮದ ಅಂಶಗಳು ಈ ನಾಟಕದಲ್ಲಿ ಚರ್ಚೆಗೆ ಒಳಗಾಗಿವೆ. ಈ ನಾಟಕದ ನಾಯಕಿ ಯಾಮಿನಿಯದು ದುರಂತ ಪಾತ್ರ. ಆಕೆಯ ತಮ್ಮ ಸತೀಶ ಇಂಗ್ಲೆಂಡಿನಲ್ಲಿ ಓದುತ್ತಿದ್ದಾನೆ. ಶಿಷ್ಯ

ವೇತನ ಪಡೆದ ಯಾಮಿನಿ ಇಂಗ್ಲೆಂಡಿನಲ್ಲಿ ತಮ್ಮನ ಮನೆಯಲ್ಲಿಯೇ ಉಳಿದುಕೊಳ್ಳು ತ್ತಾಳೆ. ಚಿಕ್ಕಂದಿನಲ್ಲಿ ಆಕೆ ತಮ್ಮನೊಂದಿಗೆ ಇಟ್ಟುಕೊಂಡ ಲೈಂಗಿಕ ಸಂಬಂಧ ಇಲ್ಲಿ ಮತ್ತಷ್ಟು ಬಲವಾಗುತ್ತದೆ. ಆದರೆ ಸತೀಶ ಜ್ಯೂಲಿಯಾಳನ್ನು ಪ್ರೀತಿಸುತ್ತಿರು ತ್ತಾನೆ. ತಮ್ಮನನ್ನು ಕೂಡುವ ಬಯಕೆ ಈಡೇರದೇ ಹೋದಾಗ ಆಕೆ ಹಿಂಸಾ ಮಾರ್ಗವನ್ನು ಹಿಡಿಯುತ್ತಾಳೆ. ತಮ್ಮನನ್ನೇ ಮಾನಸಿಕ ಹಿಂಸೆಗೆ ಗುರಿಮಾಡುವ ಆಕೆ ಕೊನೆಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಹೀಗೆ ದುರಂತದಲ್ಲಿ ಮುಕ್ತಾಯವಾಗುವ ಈ ನಾಟಕ ಗಂಡು-ಹೆಣ್ಣುಗಳ ನಡುವಿನ ಸಂಬಂಧದ ವಿಶ್ಲೇಷಣೆಗೆ ಹೆಚ್ಚು ಆದ್ಯತೆ ನೀಡಿದೆ.

ಹಿಟ್ಟಿನ ಹುಂಜ (೧೯೮೦)

ಕಾರ್ನಾಡರ ಯಯಾತಿ, ಹಯವದನ, ನಾಗಮಂಡಲ ನಾಟಕಗಳಂತೆ ಹಿಟ್ಟಿನ ಹುಂಜವೂ ಕಾಮವನ್ನು ಪ್ರಧಾನ ವಸ್ತುವನ್ನಾಗಿಟ್ಟುಕೊಂಡು ರಚನೆಯಾದ ನಾಟಕ. ಕನ್ನಡ ಕವಿ ಜನ್ನನ ಯಶೋಧರ ಚರಿತ್ರೆಯಿಂದ ಈ ನಾಟಕದ ವಸ್ತುವನ್ನು ಎತ್ತಿಕೊಳ್ಳಲಾಗಿದೆ. ಆದರೆ ಕಾರ್ನಾಡರು ಇಲ್ಲಿ ಕೆಲವು ಕಿರು ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ. ರಾಣಿ ಅಮೃತಮತಿ ಕುರೂಪಿಯಾದ ಮಾವುತನಿಗೆ ಮಾರು ಹೋಗುವುದು ಕೇವಲ ದೈಹಿಕ ಆಕರ್ಷಣೆಯಿಂದಲ್ಲ. ಆಕೆ ಮೋಹಿಸಿದ್ದು ಅವನ ಸಂಗೀತವನ್ನು. ಈ ಅನೈತಿಕ ಸಂಬಂಧ ರಾಜ ಯಶೋಧರನ ನೆಮ್ಮದಿಯನ್ನು ಕೆಡಿಸುತ್ತದೆ. ತನ್ನನ್ನು ಸಮಾಧಾನಗೊಳಿಸಲು ಬಂದ ರಾಜಮಾತೆಗೆ ಯಶೋಧರ, ಸಾಂಕೇತಿಕವಾಗಿ ತನ್ನ ದುಃಸ್ವಪ್ನವನ್ನು ತಿಳಿಸುತ್ತಾನೆ. ಇದರ ಪರಿಹಾರಕ್ಕೆ ನೂರು ಕುರಿಗಳನ್ನು ಚಂಡಮಾರಿಗೆ ಬಲಿಕೊಡಬೇಕು. ಆದರೆ ರಾಜ ಅಹಿಂಸಾವಾದಿ. ರಾಣಿಯ ಮೇಲಿನ ಮೋಹದಿಂದ ಜೈನಧರ್ಮವನ್ನು ಸ್ವೀಕಾರ ಮಾಡಿದ್ದಾನೆ. ಬಲಿ ಕೊಡದಿದ್ದರೆ ತಾಯಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಹಾಕುತ್ತಾಳೆ. ಕೊನೆಗೆ ಹಿಂಸೆಯನ್ನು ಬದಿಗೊತ್ತಿ ಬದಲಾಗಿ ಹಿಟ್ಟಿನ ಹುಂಜವನ್ನು ಬಲಿಕೊಡಲು ಮುಂದಾಗುತ್ತಾನೆ. ರಾಜ ಹಿಟ್ಟಿನ ಹುಂಜವನ್ನು ಬಲಿಕೊಡಲು ಮುಂದಾದಾಗ ಅದು 'ಕೊಕ್ಕೊ' ಎಂದು ಕೂಗಿಕೊಳ್ಳುತ್ತದೆ. ತಕ್ಷಣ ರಾಣಿ ಅಮೃತಮತಿ ಹುಂಜಕ್ಕೆ ಅಕ್ಕಿಕಾಳನ್ನು ಹಾಕತೊಡಗಿದಾಗ ರಾಜನ ಮನಸ್ಥಿತಿ ಹದಗೆಟ್ಟು ಕೂಗಿಕೊಳ್ಳುತ್ತಾನೆ. ವಿಧಿಯ ಎದುರು ರಾಜನೇ ದುರಂತಕ್ಕೊಳಗಾಗುತ್ತಾನೆ. ಈ ನಾಟಕದಲ್ಲಿ ಬರುವ ಹುಂಜ, ಹಂಸ, ಕನಸು, ಕೊಳ, ಪುರುಷ, ಶಕ್ತಿ, ಸಂಕಲ್ಪ ಮೊದಲಾದ ಪ್ರತೀಕಗಳು ಈ ನಾಟಕದ ಅರ್ಥ ಸಾಧ್ಯತೆಗಳನ್ನು ಹಿಗ್ಗಿಸುತ್ತಾ ಹೋಗುತ್ತವೆ. ಜನ್ನನ ಆಶಯವನ್ನೆ ಈ ನಾಟಕದಲ್ಲಿ ಕಾರ್ನಾಡರು ಎತ್ತಿಹಿಡಿದಿದ್ದಾರೆ. ಅನುಭವ ತಿಳುವಳಿಕೆಯಾಗಿ ಬಿಚ್ಚಿಕೊಳ್ಳದೇ ಇರುವುದರಿಂದ ಈ ನಾಟಕ ಸಂವಹನದ ಸಂದರ್ಭದಲ್ಲಿ ಸೋತು ಹೋಗುತ್ತದೆ.

ನಾಗಮಂಡಲ (೧೯೮೮)

ಸ್ತ್ರೀಪರವಾದ ಕಾಳಜಿಯನ್ನು ಹೊಂದಿರುವ ಈ ನಾಟಕವನ್ನು ಜಾನಪದ ಕತೆಯಿಂದ ಕಟ್ಟಲಾಗಿದೆ. ನಮ್ಮ ಸಮಾಜ ಪಾಲಿಸಿಕೊಂಡು ಬಂದ ಪಾತಿವ್ರತ್ಯದ ಈ ನಾಟಕ ಬುಡಮೇಲು ಮಾಡಿದೆ. ನಿಜವಾಗಿ ಜಾನಪದದ ತಿರುಳು ಬಂಡಾಯ ಮನೋವೃತ್ತಿಯಲ್ಲಿದೆ ಎಂದು ಎ. ಕೆ. ರಾಮಾನುಜನ್ ಒಂದು ಕಡೆ ಹೇಳಿದ್ದುಂಟು. ಈ ನಾಟಕ ಮೇಲಿನ ಮಾತನ್ನು ಚೆನ್ನಾಗಿ ಪ್ರತಿನಿಧಿಸುತ್ತದೆ. ಇದೊಂದು ಸ್ತ್ರೀ ಕೇಂದ್ರಿತ ಚಿಂತನೆಯಿಂದ ಒಳಗೊಂಡಿರುವ ಉತ್ತಮ ನಾಟಕ. ರಾತ್ರಿ ಪ್ರೀತಿಸುವ, ಹಗಲು ಶೋಷಿಸುವ ಗಂಡನನ್ನು ಕಟ್ಟಿಕೊಂಡು ಕಥಾ ನಾಯಕಿ ರಾಣಿ ಜೀವನ ನಡೆಸುತ್ತಾಳೆ. ಮದುವೆಯಾದ ರಾಣಿ ಒರಟನಾದ ಗಂಡ ಅಪ್ಪಣ್ಣನ ನಡವಳಿಕೆಗಳಿಗೆ ಮರುಗುತ್ತಾಳೆ. ಯಾವುದೇ ರೀತಿಯ ಪ್ರೀತಿ, ಪ್ರೇಮ, ಸುಖ, ಸಾಂತ್ವನದ ಅನುಭವ ಪಡೆಯದ ಆಕೆ ದುಃಖದಲ್ಲಿರುತ್ತಾಳೆ. ಇದನ್ನು ತಿಳಿದ ಕುರುಡವ್ವ ಮದ್ದಿನ ಬೇರನ್ನು ಕೊಡುತ್ತಾಳೆ. ರಾಣಿ ಮದ್ದಿನ ಬೇರಿನ ಪರಿಣಾಮಕ್ಕೆ ಅಂಜಿ ಅದನ್ನು ಪಕ್ಕದ ಹುತ್ತದ ಮೇಲೆ ಸುರಿಯುತ್ತಾಳೆ. ಹುತ್ತದಲ್ಲಿನ ಹಾವು (ನಾಗಪ್ಪ)ಅಪ್ಪಣ್ಣನ ವೇಷದಲ್ಲಿ ಬಂದು ಎಲ್ಲ ರೀತಿಯ ಸುಖವನ್ನು ರಾಣಿಗೆ ನೀಡುತ್ತಾನೆ. ಆಕೆ ಗರ್ಭಿಣಿಯಾಗುತ್ತಾಳೆ. ಅಪ್ಪಣ್ಣ ಕುಪಿತನಾಗುತ್ತಾನೆ. ನಾಗದಿವ್ಯ ನಡೆದು ರಾಣಿ ಅದರಲ್ಲಿ ಗೆಲ್ಲುತ್ತಾಳೆ. ನಾಗಪ್ಪ ರಾಣಿಯ ಕೂದಲಲ್ಲಿ ಸೇರಿ ಸಾವನ್ನಪ್ಪುತ್ತಾನೆ. ರಾಣಿ ತನ್ನ ಮಗನ ಮೂಲಕ ಸಂಸ್ಕಾರ ಮಾಡಿಸುತ್ತಾಳೆ. ಈ ಮೂಲಕ ಜಾನಪದ ಕತೆಯನ್ನು ಆಧುನಿಕ ಅರಿವಿನ ನಡುವೆ ತಂದು ಮುಖಾಮುಖಿಗೊಳಿಸಲಾಗಿದೆ. ಯಾವುದೇ ಕಾಲದ ವಸ್ತುವನ್ನು ಎತ್ತಿಕೊಂಡರೂ ಸಮಕಾಲೀನ ಚಿಂತನೆಗಳಿಗೆ ಹೊಂದಿಕೊಳ್ಳುವಂತೆ ಮಾಡುವಲ್ಲಿ ಗಿರೀಶಕಾರ್ನಾಡರು ತಮ್ಮ ನಾಟಕಗಳಲ್ಲಿ ಯಶಸ್ವಿಯಾಗಿದ್ದಾರೆ.

ತಲೆದಂಡ (೧೯೯೦)

ಇದೊಂದು ಐತಿಹಾಸಿಕ ನಾಟಕ. ತುಘಲಕ ನಾಟಕವನ್ನು ಈ ನಾಟಕ ಸ್ವಲ್ಪ ಮಟ್ಟಿಗೆ ನೆನಪಿಸುತ್ತದೆ. ತುಘಲಕ ನಾಟಕದಲ್ಲಿ ಇತಿಹಾಸ ಮೌನ ತಾಳಿರುವ ವಿವರಣೆಗಳ ಕಡೆಗೆ ಗಿರೀಶರು ನಮ್ಮ ಗಮನವನ್ನು ಸೆಳೆಯುತ್ತಾರೆ. ಆದರೆ ತಲೆದಂಡದಲ್ಲಿ ಅವರು ಇತಿಹಾಸವನ್ನು ಗಟ್ಟಿಯಾಗಿ ನೆಚ್ಚಿಕೊಂಡಿದ್ದಾರೆ. ಭಕ್ತಿ ಭಂಡಾರಿ, ಮಹಾಮಾನವತಾವಾದಿ, ಅರ್ಥಜ್ಞ, ಕ್ರಾಂತಿ ಪುರುಷ, ವಿಚಾರವಾದಿ ಮೊದಲಾದ ಮುಖಗಳನ್ನು ಹೊಂದಿದ ಬಸವಣ್ಣನನ್ನು ಕೇಂದ್ರವ್ಯಕ್ತಿಯನ್ನಾಗಿಟ್ಟು ಕೊಂಡು ಈ ನಾಟಕ ರಚನೆಯಾಗಿದೆ. ಹನ್ನೆರಡನೆಯ ಶತಮಾನ ಕನ್ನಡ ನಾಡಿನ ಇತಿಹಾಸದಲ್ಲಿ ಒಂದು ಸಂಕೀರ್ಣಯುಗ. ಸಾಹಿತ್ಯಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಈ ಕಾಲಘಟ್ಟದಲ್ಲಿ ನಡೆದ ಪಲ್ಲಟಗಳು ಬಹು ಪರಿಮಾಮಕಾರಿ

ಯಾದವು. ಆ ಯುಗದತಸಕ ತಲ್ಲಣಗಳಿಗೆ ಸ್ಪಂದಿಸುವ ಪ್ರಯತ್ನವನ್ನು ಕಾರ್ನಾಡರು ತಲೆದಂಡ ನಾಟಕದಲ್ಲಿ ಅತ್ಯಂತ ಯಶಸ್ವಿಯಾಗಿ ಮಾಡಿದ್ದಾರೆ. ಹನ್ನೆರಡನೆಯ ಶತಮಾನದ ಬೆರಗುಗೊಳಿಸುವ ಪ್ರತಿಭೆಗೆ, ಆ ಉತ್ಸಾಹಕ್ಕೆ ಮೌಲಿಕ ಪ್ರಶ್ನೆಗಳನ್ನು ಕೇಳುವ ಎದೆಗಾರಿಕೆಗೆ, ಗೆಲುವಿಗೆ, ಸೋವಿಗೆ ಮರಳುವುದು, ಅದನ್ನು ಹೊಸ ಸಂದರ್ಭದಲ್ಲಿ ಅರ್ಥೈಸುವ ಪ್ರಯತ್ನವನ್ನು ಅವರಿಲ್ಲಿ ಮಾಡಿದ್ದಾರೆ. ಬಿಜ್ಜಳನ ಭಂಡಾರಿಯಾಗಿ ಬಸವಣ್ಣ ಎದುರಿಸುವ ಆರೋಪ, ಅಂತರ ಜಾತಿ ವಿವಾಹದ ಗೊಂದಲಗಳು, ತಂದೆಯನ್ನು ಬಂಧಿಸಿ ಸೋವಿದೇವ ತಾನೇ ರಾಜನಾಗುವುದಕ್ಕೆ ನಡೆಸಿದ ತಯಾರಿ, ವರ್ಗ ಸಂಘರ್ಷಗಳೆಲ್ಲ ಸೇರಿ ಕಲ್ಯಾಣಕ್ರಾಂತಿ ನಡೆದುಹೋಗುತ್ತದೆ. ಈ ಹಿನ್ನೆಲೆಯಲ್ಲಿ ಯುಗಮಾನವೊಂದರ ದ್ವಂದ್ವವನ್ನು ಸಮ ಕಾಲೀನವಾಗುವಂತೆ ಈ ನಾಟಕವನ್ನು ಕಟ್ಟಲಾಗಿದೆ. ಬಸವಣ್ಣ, ಬಿಜ್ಜಳ ಮೊದಲಾದ ಪಾತ್ರಗಳ ಮೂಲಕ ಕಾರ್ನಾಡರು ಇಲ್ಲಿ ಸಾಮಾಜಿಕ ಚೌಕಟ್ಟಿನಲ್ಲಿ ವ್ಯಕ್ತಿಯ ಸೋವನ್ನು ಪರಸ್ಪರ ಸಂಬಂಧಗಳನ್ನು ಮಾನವೀಯ ನೆಲೆಯಲ್ಲಿ ನೋಡುವ ಪ್ರಯತ್ನ ಮಾಡಿದ್ದಾರೆ.

ಅಗ್ನಿ ಮತ್ತು ಮಳೆ (೧೯೯೪)

ಇದೊಂದು ಪೌರಾಣಿಕ ನಾಟಕ. ಅವರ ಯಯಾತಿ ಹಾಗೂ ಹಯವದನ ನಾಟಕಗಳಿಗೆ ಇದು ತುಸು ಹತ್ತಿರವಾಗಿರುವಂತೆ ಕಂಡುಬಂದರೂ ಪುರಾಣವನ್ನು ಆಧುನಿಕತೆಯೊಂದಿಗೆ ಬೆಸೆಯುವಲ್ಲಿ ಎಲ್ಲೋ ಸಾತತ್ಯ ಕಡಿದುಕೊಂಡಂತೆ ಕಾಣುತ್ತಿದೆ. ಮಹಾಭಾರತದ ವನಪರ್ವದಲ್ಲಿ ಬರುವ ಯವಕ್ರೀತನ ಉಪಾಖ್ಯಾನವೇ ಈ ನಾಟಕದ ಮೂಲವಸ್ತು. ಹಿಂಸೆ, ಪ್ರತೀಕಾರ, ಬಲಾತ್ಕಾರ, ತಪಸ್ಸು, ಯಜ್ಞ, ಮಾಟ, ಪ್ರೀತಿ, ಯುದ್ಧ ಇವೆಲ್ಲವುಗಳ ಪರಸ್ಪರ ಸಂಬಂಧ ಜಾಲದಲ್ಲೇ ಕತೆಯ ನಿಜವಾದ ಅರ್ಥಸಂಪತ್ತಿ ಅಡಗಿದೆ. ಈ ನಾಟಕದೊಳಗೇ ಮತ್ತೊಂದು ನಾಟಕ ಸೇರಿಕೊಂಡಿದೆ. ಅದು ಅರವಸುವಿನ ನೇತೃತ್ವದಲ್ಲಿ ನಡೆಯುವ 'ಇಂದ್ರವಿಜಯ' ನಾಟಕ. ಇಲ್ಲಿನ ಪುರಾಣದ ಪಾತ್ರಗಳೆಲ್ಲ ಮಾನವೀಯ ಸಂವೇದನೆಯನ್ನು ಪಡೆದುಕೊಂಡಿವೆ. ಕೋಪ, ಮತ್ಸರ, ಮೋಹ, ಸುಖ, ದುಃಖಗಳನ್ನು ಇಲ್ಲಿನ ಪಾತ್ರಗಳೂ ಅನುಭವಿಸುತ್ತವೆ. ತಪಸ್ಸಿನಿಂದ ಹತಾಶನಾದ ಯವಕ್ರೀತ. ತನ್ನ ಚಿಕ್ಕಪ್ಪನ ಸೊಸೆ ಆಶ್ರಮದಲ್ಲಿ ಏಕಾಕಿಯಾಗಿರುವುದನ್ನು ನೋಡಿ ಅತ್ಯಾಚಾರ ಮಾಡುತ್ತಾನೆ. ಇದರಿಂದ ಕುಪಿತನಾದ ರೈಭ್ಯ ಬ್ರಹ್ಮರಾಕ್ಷಸನನ್ನು ಸೃಷ್ಟಿಸಿ ಅವನ್ನು ಮುಗಿಸಿಬಿಡುತ್ತಾನೆ. ಪರಾವಸು, ಅರವಸುಗಳ ಅಹಂಕಾರ, ಮಳೆಗಾಗಿ ಪ್ರಾರ್ಥಿಸಿ ನಡೆಯುವ ಯಜ್ಞದಲ್ಲಿ ಪರಾವಸು ಅಧ್ವರ್ಯುವಾಗಿದ್ದರೂ ಅವನ ಗಮನವೆಲ್ಲ ಯವಕ್ರೀತನ ಮೇಲೆ ಸೇಡು ತೀರಿಸಿಕೊಳ್ಳುವ ಆಗಿದೆ. ಹೀಗೆ ಪ್ರತಿಯೊಂದು ಕಾರ್ಯವೂ ಅದರ ಉದ್ದೇಶ ಫಲ

ಗಳನ್ನು ಹುಡುಕುತ್ತಾ ಮನುಷ್ಯನಿಂದಲೇ ಮನುಷ್ಯನನ್ನು ಬೇಟೆಯಾಡಿಸುತ್ತದೆ. ನಿತ್ತಿಲೆ ಬದುಕಬೇಕು, ಬ್ರಹ್ಮ ರಾಕ್ಷಸನಿಗೆ ಮುಕ್ತಿ ದೊರೆಯಬೇಕು ಎಂಬು ಅರವಸು ಇಂದ್ರನಲ್ಲಿ ಕೇಳುವಲ್ಲಿ ಈ ನಾಟಕದ ದ್ವಂದ್ವ ಧ್ವನಿ ಸಶಕ್ತವಾಗಿ ಹೊರ ಹೊಮ್ಮಿದೆ. ಆದರೂ ಕೊನೆಯಲ್ಲಿ ಪವಾಡಕ್ಕೇ ಹೆಚ್ಚು ಪ್ರಾಶಸ್ತ್ಯ ಸಂದು ಆಧುನಿಕ ಸಂವೇದನೆ ನಾಪತ್ತೆಯಾಗಿದೆ. ಇಲ್ಲಿ ಅನೇಕ ಭೌತಿಕ ಸಂಗತಿಗಳನ್ನು ನಾಟಕೀಯ ಸಂಕೇತವಾಗಿ ಮಾರ್ಪಡಿಸುವಲ್ಲಿ ಅಡೆತಡೆಗಳುಂಟಾಗಿವೆ. ಆದ್ದರಿಂದಲೇ ಯಯಾತಿ, ಹಯವದನದಷ್ಟು ಯಶಸ್ಸು ಈ ನಾಟಕಕ್ಕೆ ಸಿಗಲಿಲ್ಲ. 'ಎಲ್ಲ ಬಣ್ಣವನ್ನು ಮಸಿ ನುಂಗಿತು' ಎಂಬಂತೆ ಮತ್ತೆ ಈ ನಾಟಕದಲ್ಲಿ ಎದ್ದು ಕಾಣುವುದು ಪುರಾಣದ ಕತೆಯೇ.

ಈ ಎಲ್ಲ ಮಿತಿಗಳ ನಡುವೆಯೂ ಇಪ್ಪತ್ತನೆಯ ಶತಮಾನದ ಅನನ್ಯ ನಾಟಕಕಾರರಾಗಿ ಕಾರ್ನಾಡರು ಮಿಂಚಿದ್ದಾರೆ. ಆ ಮೂಲಕ ಕನ್ನಡ ವಾಙ್ಮಯದ ಎಲ್ಲೆಯನ್ನು ಅವರು ಸಾಕಷ್ಟು ವಿಸ್ತರಿಸಿದಾರೆ. ನಾಟಕದಿಂದ ನಾಟಕಕ್ಕೆ ಅವರು ಬೆಳೆದಿದ್ದಾರೆ; ಅಷ್ಟೇ ಅಲ್ಲ ರಂಗಭೂಮಿಯ ಸೂಕ್ಷ್ಮತೆಯನ್ನು ಇನ್ನಷ್ಟು ಹೆಚ್ಚಿಸಿದ್ದಾರೆ. ಮಾನಿಷಾದದಂತ ಕಿರುನಾಟಕವಿರಲಿ, ಹಯವದನದಂತಹ ಪೂರ್ಣಾಂಗ ನಾಟಕವಿರಲಿ, ಅಲ್ಲೆಲ್ಲ ಅವರು ಎತ್ತುವ ಪ್ರಶ್ನೆಗಳು, ಜೀವನದರ್ಶನವನ್ನು ಒಳ ಗೊಂಡ ವೈಚಾರಿಕತೆಗೆ ಸಾರ್ವತ್ರಿಕದೆಡೆಗೆ ಮುಖಮಾಡುತ್ತವೆ. ಒಬ್ಬ ನಾಟಕಕಾರ ತನ್ನ ಭಾಷೆಗೆ, ರಂಗಭೂಮಿಗೆ ಇದಕ್ಕಿಂತ ಹೆಚ್ಚೇನನ್ನು ಕೊಡಲು ಸಾಧ್ಯ.

***

ಕಲೆ, ಮಹಿಳೆ ಮತ್ತು ಸೌಂದರ್ಯಪ್ರಜ್ಞೆ*

ಡಾ॥ ಚಂದ್ರಮೌಳಿ ಎಸ್. ನಾಯ್ಕರ್

ನಮ್ಮ ಜೀವನದಲ್ಲಿ ಸಂತಸ ನೀಡುವ ಮತ್ತು ತೃಪ್ತಿಯನ್ನು ನೀಡುವ ವಿವಿಧ ಅನುಭವಗಳು ದಿನನಿತ್ಯ ನಮ್ಮ ಅನುಭವಕ್ಕೆ ಬರುತ್ತವೆ-ಬರುತ್ತಲಿರುತ್ತವೆ. ಅವುಗಳಲ್ಲಿ ಕೆಲವನ್ನು ನಾವು ನಮ್ಮ ಅನುಭವದ ಅದಮ್ಯ ಚೇತನದಿಂದ ಪ್ರತಿಕೃತಿಯಾಗಿ ಮಾಡಲು ಅಥವಾ ಬರೆಯಲು ಇಲ್ಲವೇ ಚಿತ್ರಿಸಲು ಅಥವಾ ಹೇಳಲು ಸಂಕಲ್ಪಿಸಿ ಮಾಧ್ಯಮವೊಂದರಿಂದ ಅದನ್ನು ನಾವು ಸೃಷ್ಟಿಸಿದಾಗ, ಪ್ರಮಾಣಬದ್ಧವಾಗಿ ನಿರ್ಮಾಣ ಮಾಡಿದಾಗ ಅಥವಾ ಆಕರ್ಷಕವನ್ನಾಗಿ ಮಾಡಿದಾಗ ಇಲ್ಲವೇ ವಿಚಿತ್ರವಾಗಿ ಮಾಡಿದಾಗ ಸೃಷ್ಟಿಗೊಂಡ ವಸ್ತುವಿಗೆ ನಾವು 'ಕಲೆ'ಯೆಂಬುದಾಗಿ ತಿಳಿಯುತ್ತೇವೆ-ಅರಿಯುತ್ತೇವೆ ಅಥವಾ ಈ ಹಿನ್ನೆಲೆಯ ವಿಚಾರದಲ್ಲಿ ಒಪ್ಪುತ್ತೇವೆ.

ಇಂಥ ವಿಚಾರದಲ್ಲಿ ಅನೇಕ ಸಾಧನಗಳನ್ನು ಬಳಸಿಕೊಂಡು, ತನ್ನ ಮನಸ್ಸಿನಲ್ಲಿ ಹುಟ್ಟಿದ ಭಾವನೆಗಳಿಗೆ ಒಂದು ರೂಪವನ್ನು ಕೊಟ್ಟು ಅಥವಾ ಭಾವನೆಗಳನ್ನು ಒಂದು ರೂಪದಲ್ಲಿ ಅಭಿವ್ಯಕ್ತಿಗೊಳಿಸಿದಾಗ ಅದು ಕಲಾಕೃತಿಯಾಗುತ್ತದೆ. ಇದರಲ್ಲಿ ಎರಡು ಬಗೆಗಳನ್ನು ಕಾಣಬಹುದು.

೧. ಕಾಲ್ಪನಿಕ, ಅವ್ಯಕ್ತರೂಪವಾದ ಕೃತಿ

೨. ಗುರುತಿಸಬಲ್ಲ ವ್ಯಕ್ತರೂಪವಾದ ಕೃತಿ.

ಮೊದಲಿನವದರಲ್ಲಿ ಆಧುನಿಕ(ಕಾಲ್ಪನಿಕ) ಕಲೆಯಲ್ಲಿ ವೈಚಾರಿಕತೆ ಅಥವಾ ಸಮಂಜಸತೆ ಇರಬಹುದು ಇರಲಿಕ್ಕಿಲ್ಲ. ಇಲ್ಲಿ ಯಾವ ನಿಯಮಗಳೂ ಅನ್ವಯಿಸಲಿಕ್ಕಿಲ್ಲ; ಎರಡನೆಯದರಲ್ಲಿ ಕೆಲವಾದರೂ ನಿಯಮಗಳಿದ್ದು, ವೈಚಾರಿಕತೆಯಿದ್ದು ಕೃತಿ ಅಥವಾ ಕಲೆ ಮನವರಿಕೆಗೆ ಸಮೀಪವಾಗಿರಬೇಕಾಗುತ್ತದೆ. ಉದಾ: ಪೋರ್ಟ್ರೇಟ್ ನಲ್ಲಿ ಮನವರಿಕೆಯಾಗುವ ಗುಣಗಳಿರುತ್ತವೆ. ಈ ಎರಡೂ ತರಹದ ಕೃತಿಗಳಲ್ಲಿ (ಕಲಾಕೃತಿಯಾಗಿರಲಿ-ಬಿಡಲಿ) ಕಲಾಕಾರ ಅಥವಾ ಶಿಲ್ಪಿಯೂ ತನ್ನಲ್ಲಿ ಮೂಡಿದ ಭಾವನೆಗಳನ್ನು ಮೂರ್ತರೂಪಕ್ಕೆ ತರುವಲ್ಲಿ ಮನವರಿಕೆ ಮಾಡುವ ಗುಣಗಳನ್ನು ಅಭಿವ್ಯಕ್ತಗೊಳಿಸಬೇಕಾಗುತ್ತದೆ. ಅವನ ಕೃತಿಯಿಂದಾಗಿ

* ಧಾರವಾಡದ ನವ್ಯ ನೃತ್ಯ ನಿಕೇತನದ ಆಶ್ರಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಲಲಿತಕಲಾ ಅಕಾಡೆಮಿಯ ಸಹಯೋಗದಲ್ಲಿ ರಾಜ್ಯಮಟ್ಟದ ಮಹಿಳಾ ಕಲಾವಿದೆಯರ ಶಿಬಿರದಲ್ಲಿ ೧೯೯೭ರ ಡಿಸೆಂಬರ್ ೧೬ ರಂದು ಮಂಡಿಸಿದ ಲೇಖನ

ವನು ಕಲಾಕಾರನಾಗುತ್ತಾನೆ, ಶಿಲ್ಪಿಯಾಗುತ್ತಾನೆ, ಸಂಗೀತಗಾರನಾಗುತ್ತಾನೆ ಲ್ಲವೆ ವಾಗ್ಮಿಯಾಗುತ್ತಾನೆ.

ವಾಚಿಕವೆಲ್ಲ ವಾಙ್ಮಯವಲ್ಲ, ಗೀಚಿದುದೆಲ್ಲ ಸಾಹಿತ್ಯವಲ್ಲವೆಂದು ಹೇಳಿದಾಗ ುಚ್ಚನು ಏನೆಲ್ಲವನ್ನು ಮಾತನಾಡುತ್ತಾನೆ. ಆದರೆ ಅದು ವಾಙ್ಮಯವಾಗಲಾರದು. ದೇ ರೀತಿ ಪೆನ್ನು ರಿಪೇರಿ ಮಾಡುವವನು ಮುಂಜಾನೆಯಿಂದ ಸಂಜೆಯವರೆಗೆ ಚುತ್ತಾನೆ. ಅದು ಸಾಹಿತ್ಯವಾಗಲಾರದು. ಅದರಂತೆ ಮಾಡಿದ್ದೆಲ್ಲ ಕಲಾಕೃತಿಯಾಗ ರದು.

ಅವನ ಸೃಷ್ಟಿಯಲ್ಲಿ ಅವನಿಗೆ ಸಮಾಧಾನ, ನೆಮ್ಮದಿ ಮತ್ತು ಸಂತೋಷ ರಬೇಕು. ಅವನು ಸೃಷ್ಟಿಸಿದ ಕೃತಿ ಕಂಡಾಗ ಇನ್ನುಳಿದವರಿಗೂ ಸಂತೋಷವಾಗ ೇಕು. ಇಲ್ಲವೆ ವೈಚಾರಿಕ ಪ್ರಚೋದನೆ ನೀಡಬೇಕು. ಒಮ್ಮೊಮ್ಮೆ ಕಲಾಕಾರನ ೖಚಾರಿಕ ವಿಕಾರಗಳ ಸೃಷ್ಟಿಯೂ ಒಂದು ಪ್ರತಿಕೃತಿಯಾಗಬಹುದು ಅಥವಾ ಗಲಿಕ್ಕಿಲ್ಲ; ಇಲ್ಲವೆ ಆಗಬೇಕೆಂಬ ನಿಯಮವೂ ಇಲ್ಲ. ಕಲಾವಿದನು ತನ್ನ ಕಲಾ ತಿಯ ರಚನೆಯ ಕಾಲದಲ್ಲಿ ಪಡೆಯುವ ಆನಂದ, ತೃಪ್ತಿ ಮತ್ತು ತಲ್ಲೀನತೆಯ ಯೇ ಅದರ ಮೂಲಭೂತ ಸಾರ್ಥಕತೆಯಿರುತ್ತದೆ. ಇನ್ನು ಕಲಾಕೃತಿ ಮುಗಿದಾಗ ದನ್ನು ಮುಗಿಸಿದ ಆನಂದ, ಕರ್ತವ್ಯವನ್ನು ಪೂರ್ಣಗೊಳಿಸಿಕೊಂಡ ಜವಾಬ್ದಾರಿ ಹಿತತ್ವವೂ ಆತನ ಸಾರ್ಥಕತೆಯನ್ನು ಸೂಚಿಸುವುದು. ಉದಾ: ಎಸ್. ಎಂ. ಂಡಿತರೆಂಬ ಕಲಾವಿದರು ತಮ್ಮ ಕಲಾಕೃತಿಯನ್ನು ಮುಗಿಸಿ, ಪ್ಯಾಕ್ ಮಾಡಿ, ಟ್ಟಿ ಹೊಲಿದು, ಬೆಲೆಪಟ್ಟಿ ಹಚ್ಚಿಯೇ ವಿಶ್ರಾಂತಿ ಪಡೆಯುತ್ತಿದ್ದರೆಂಬುದನ್ನು ಇಲ್ಲಿ ದಾಹರಿಸಬಹುದಾಗಿದೆ.

ಆಕಾರ, ಬಣ್ಣ ಜೋಡಣೆ, ಸ್ವರೂಪ, ಗಾತ್ರ, ಹಿನ್ನೆಲೆ, ದುಂಡು, ಕೋಣ, ತ್ರಿಕೋಣ, ಅಕೋಣಾ ಮೊದಲಾದವುಗಳಿಗಿಂತ ಭಿನ್ನವಾದುದು, ತನ್ನದೇ ದ ವಿಶಿಷ್ಟ ಗುಣ-ಆಕಾರದಿಂದಾಗಿ ಆಕರ್ಷಕವಾಗಿರುವ ವಸ್ತುವು ನರನ್ನಾಕರ್ಷಿಸು ವುದೆಂಬುದನ್ನು ಯಾರಾದರೂ ಒಪ್ಪಲೇಬೇಕು.

ಕಲಾಕೃತಿಯೊಂದರಲ್ಲಿ ಗಾತ್ರಕ್ಕೆ ಮಹತ್ವವಿದ್ದಾಗ ಗುಣಕ್ಕೆ ಮಹತ್ವವಿರದೇ ೋಗಬಹುದು. ಗುಣವು ಮುಖ್ಯವಾದಾಗ ಗಾತ್ರವು ಮಹತ್ವವಿರದಿರಬಹುದು. ಷ್ಟೋ ಸಾರೆ ಜೀವನದಲ್ಲಿ ವಸ್ತುಗಳ, ಕಲೆ ಅಥವಾ ಸೌಂದರ್ಯವೆಂಬುದು ಸ್ತುವನ್ನಾಧರಿಸಿಯೂ ಇರಬಹುದು; ಗುಣಗಳನ್ನಾಶ್ರಯಿಸಿಯೂ ಇರಬಹುದು. ದಾಹರಣೆಗೆ: ಕಾಳಿದಾಸನು ವರ್ಣಿಸಿದ ಶಕುಂತಲೆಯ ಸೌಂದರ್ಯ ಬಾಹ್ಯ ೂಪದಲ್ಲಿ ದೈಹಿಕ ಸೌಂದರ್ಯವೇ ಆಗಿದೆಯಾದರೂ ಸೂಕ್ಷ್ಮವಾಗಿ ಪರಿಶೀಲಿಸಿ ಾಗ ಶಕುಂತಲೆಯ ಶೀಲಾದಿ ಸುಂದರ ಗುಣಗಳ ಗ್ರಾಹಿತ್ವವು ಕಂಡುಬರುತ್ತದೆ.

ದುಷ್ಯಂತ ರಾಜನು ಶಕುಂತಲೆಯ ವೇಷ-ವಿನ್ಯಾಸ, ಲೀಲಾ-ವಿನ್ಯಾಸ, ಲಜ್ಜಾ -ವಿನ್ಯಾಸ ಮತ್ತು ಭೃಂಗಪೀಡಿತಳಾಗಿ ರಕ್ಷಣೆಗಾಗಿ ಪರದಾಡುವಾಗ, ಅಸಹಾಯಕ ವಾದ ಸ್ಥಿತಿಯಲ್ಲಿ ದೀನಳಾದಾಗ ಅವಳ ದೈಹಿಕ ಸೌಂದರ್ಯ, ಲಜ್ಜಾ ಸೌಂದರ್ಯ, ಕೋಮಲ ಸಂಚಾರಾದಿಗಳನ್ನು ಕಂಡು ಮೋಹಿತನಾಗುತ್ತಾನೆ. ಅವಳು ಶೀಲ ದಲ್ಲಿಯೂ ಶ್ರೇಷ್ಠಳಾಗಿರುವುದನ್ನು ಅರಿತಾಗಲಂತೂ ಅವಳ ಸೌಂದರ್ಯಕ್ಕಾಗಿ ಇನ್ನೂ ಹೆಚ್ಚು ಮೋಹಿತನಾಗುತ್ತಾನೆ. ಇಲ್ಲಿ ದೈಹಿಕ ಸೌಂದರ್ಯವು ಶ್ರೇಷ್ಠವೇ? ಅಥವಾ ಶೀಲಸೌಂದರ್ಯವು ಶ್ರೇಷ್ಠವೇ? ಎಂಬುದನ್ನು ಪ್ರಶ್ನಿಸಿದಾಗ ಇದು ಶೀಲ ಸೌಂದರ್ಯವನ್ನು ಪ್ರತಿಪಾದಿಸುವ ಉದಾಹರಣೆಯಾಗಿದೆಯೆಂಬುದು ಉತ್ತರ ರೂಪದಲ್ಲಿ ದೊರೆಯುವ ಸಮರ್ಪಕ ಕಲ್ಪನೆಯಾಗಿದೆ.

ಇಮ್ಯಾನ್ಯುಯೆಲ್ ಕಾಂಟ್ ಎಂಬ ತತ್ವಜ್ಞಾನಿಯು Critique of Judgement ಎಂಬ ಕೃತಿಯಲ್ಲಿ 'ಸೌಂದರ್ಯವು ಮತ್ತು ಅದರ ವರ್ಣನೆಯು ನೈತಿಕತೆಯ ಸಂಕೇತವಾಗಿದೆ'ಯೆಂದು ವ್ಯಾಖ್ಯಾನಿಸಿದರು. 'ಸೌಂದರ್ಯ ವರ್ಣನೆ ಯಲ್ಲಿ ಗುಣಗಳೂ ಸೇರುತ್ತವೆ'ಯೆಂದು ಅವರು ಹೇಳಿದರು. ಈ ಸಿದ್ಧಾಂತದ ಹಿನ್ನೆಲೆಯಲ್ಲಿ ಸೌಂದರ್ಯದಲ್ಲಿ ಗುಣಗಳು ಸೇರಿರುವುದನ್ನು ನಾವು ಸಾಮಾನ್ಯವಾಗಿ ಒಪ್ಪಬೇಕಾಗುತ್ತದೆ.

ಮಹಿಳೆ ಈ ಜೀವನದ, ಸೃಷ್ಟಿಯ ಅವಿಭಾಜ್ಯ, ಅನಿವಾರ್ಯ, ಅಗತ್ಯ, ಸೃಜನಪೂರ್ಣ ಅಂಗವಾಗಿದ್ದಾಳೆ. ತಾಯಿಯಾಗಿ, ತಂಗಿಯಾಗಿ, ಸೋದರಿಯಾಗಿ, ಹೆಂಡತಿಯಾಗಿ, ಪ್ರೇಯಸಿಯಾಗಿ, ಅಜ್ಜಿಯಾಗಿ, ಮಗಳಾಗಿ, ಮೊಮ್ಮಗಳಾಗಿ, ತನ್ನ ಕರ್ತವ್ಯವನ್ನು ಈ ಜಗದ ಮೇಲೆ ಮಾಡಿದ್ದಾಳೆ-ಮಾಡುತ್ತಲಿದ್ದಾಳೆ. ಆದರೆ ಇಷ್ಟಕ್ಕೆ ಅವಳ ಪಾತ್ರ ಮುಗಿಯಲಿಲ್ಲ. ಅವಳು ದೇವತೆಯಾಗಿ, ಪೂಜ್ಯಳಾಗಿ, ದೀನಳಾಗಿ, ತ್ಯಾಜ್ಯಳಾಗಿ, ಅಬಲೆಯಾಗಿ, ಸಬಲೆಯಾಗಿ, ಸ್ವತಂತ್ರಳಾಗಿ, ದಕ್ಷಳಾಗಿ, ಅಧಿಕಾರಿ ಯಾಗಿ, ಯೋಜನಗಾರ್ತಿಯಾಗಿ, ಮಾರ್ಗದರ್ಶಿಕೆಯಾಗಿ, ಕುಟುಂಬದ ಪ್ರೇರಣೆ ಯಾಗಿ ಹೀಗೆ ಹತ್ತು ಹಲವು ಮುಖಗಳಲ್ಲಿ ಕಾರ್ಯನಿರ್ವಹಿಸಬಲ್ಲವಳಾಗಿದ್ದಾಳೆ. ಮಹಿಳೆ ಹುಟ್ಟಿದ ಮಗುವಿಗೆ ಪ್ರಥಮ ಗುರುವಾಗುತ್ತಾಳೆ. ಅಳುವ ಮಗುವಿನ ತೊಟ್ಟಿಲು ತೂಗುವ ಅವಳು ದೇಶವನ್ನಾಳುತ್ತಾಳೆ. ತನ್ನ ಶ್ರದ್ಧೆ, ನಂಬಿಕೆ, ವಿಶ್ವಾಸ, ಸದಾಚಾರ, ನಿಯಮಿತತನ, ಕ್ರಿಯಾಶೀಲತೆ, ಕಾರ್ಯೋನ್ಮುಖತೆ ಮೊದಲಾದ ಸಕಲ ಕಾರ್ಯಗಳಿಗೆ ಪ್ರೇರಣೆಯಾಗಿ ಪೂಜ್ಯಳಾಗುತ್ತಾಳೆ. ಆದ್ದರಿಂದ ಸಂಸ್ಕೃತದಲ್ಲಿ ಹೇಳಿದ ಮಾತು 'ಯತ್ರ ನಾರ್ಯಸ್ತು ಪೂಜ್ಯಂತೆ ತತ್ರ ರಮಂತೆ ದೇವತಾಃ" ಎಂಬುದು ಸಾರ್ಥಕವಾಗಿದೆ.

ಮಹಿಳೆ ಶಾಂತವಾಗಿದ್ದರೆ ಮನೆ ಶಾಂತವಾಗಿರುತ್ತದೆ. ಮನೆ ಸುಂದರವಾಗಿರುತ್ತದೆ. ಅವಳಲ್ಲಿ ಸಹನೆಯಿದ್ದರೆ ಎಲ್ಲವೂ ಸುಖಕರವಾಗಿರುತ್ತದೆ. Patience in the woman and wisdom in the man makes a home happy ಎಂಬುದೊಂದು ಜಗತ್ಪ್ರಸಿದ್ಧ ಮಾತಾಗಿದೆ. ನಾರಿ ಶಕ್ತಿಯ ದ್ಯೋತಕ, ಸಂಕೇತ, ಸಾಕಾರ. ಒಲಿದರೆ ನಾರಿ ಮುನಿದರೆ ಮಾರಿ, ನಾರಿ ಸ್ವರ್ಗಕ್ಕೆ ದಾರಿ. ನಾರಿಗೆ ಗುಣವೇ ಶೃಂಗಾರ. ನಾರಿ ಪ್ರಕೃತಿಯ ಪ್ರತಿಕೃತಿ, ಹೆಣ್ಣಿನಿಂದ ಇಹವು ಹೆಣ್ಣಿನಿಂದ ಪರವು. ಹೆಣ್ಣಿನಿಂದ ಸಕಲ ಭೋಗ ಭಾಗ್ಯವು. ಪುರುಷನ ಮಾರಕ ಶಕ್ತಿಯಂತೆ ಧರ್ಮದ ತಾರಕ ಶಕ್ತಿಯಂತೆ ಅವಳು ಪ್ರೇರಕ ಶಕ್ತಿ. ಆದಿಶಕ್ತಿ, ಪರಾಶಕ್ತಿ, ವಿಶಿಷ್ಟ ಶಕ್ತಿ, ಸ್ಫೂರ್ತಿದಾಯಿನೀ, ಚೇತೋಹಾರಿ, ಛಲಗಾರ್ತಿ ಎಂದು ನೂರಾರು ಬಗೆಯಲ್ಲಿ ವರ್ಣಿತಳಾಗಿದ್ದಾಳೆ. ಮೂಲಶಕ್ತಿಯ ಕೋಮಲ ಧಾರೆಯಾದ ಇವಳು ಮಾಡುವ ಪ್ರತಿಯೊಂದು ಕೆಲಸವೂ ಕಲಾಪೂರ್ಣ, ನೈಪುಣ್ಯದ ದ್ಯೋತಕ, ಮುಂಜಾನೆ ರಂಗವಲ್ಲಿ ಹಾಕುವುದರಿಂದ ಹಿಡಿದು ಮನೆಯನ್ನು ಓರಣವಾಗಿಡುವಲ್ಲಿ, ಸ್ವಚ್ಛವಾಗಿಡುವಲ್ಲಿ, ಅಂದವಾಗಿಡುವಲ್ಲಿ, ಸಕಲ ಜವಾಬ್ದಾರಿಗಳಲ್ಲಿಯೂ ತನ್ನದೇ ಆದ ನಿಯಮಿತ ತನದಿಂದ, ನಿಷ್ಠೆಯಿಂದ, ಗುಣಸುಂದರಿಯಾಗಿ, ರೂಪಸುಂದರಿಯಾಗಿ, ಕಾರ್ಯವನ್ನು ನಿರ್ವಹಿಸುವವಳಾಗಿ ಮಹಿಳೆ ಸಮಾಜದಲ್ಲಿ, ಸಂಸ್ಥೆಯಲ್ಲಿ, ಕಛೇರಿಯಲ್ಲಿ, ಕಾರ್ಖಾನೆಯಲ್ಲಿ– ಹೀಗೆ ಹಲವು ಹತ್ತು ಕಡೆ ತನ್ನ ಶ್ರದ್ಧಾಪೂರ್ವಕ ಕಾರ್ಯವನ್ನು ಮಾಡಿ, ಸುಂದರವಾಗಿ ಮಾಡಿ, ಸ್ವಸಂಪೂರ್ಣತೆಗಾಗಿ ಮಾಡಿ ತನ್ನ ಹಿರಿಮೆಯನ್ನು ಮೆರೆಯುತ್ತಾಳೆ. ತನ್ನ ವ್ಯಕ್ತಿತ್ವದ ಪ್ರಭಾವ ಬೀರುತ್ತಾಳೆ. ಅವಳ ನಿಷ್ಠೆ, ಕ್ರಿಯೆ, ಜವಾಬ್ದಾರಿಯಲ್ಲವೂ ನಿಷ್ಕಳಂಕವಾಗಿರುವುದು, ಭಾವಪೂರ್ಣವಾಗಿರುವುದು ಮತ್ತು ಅರ್ಥಪೂರ್ಣ ವಾಗಿರುವುದು.

ಇಂಥ ಮಹಿಳೆ ಕಲಾಕ್ಷೇತ್ರದಲ್ಲಿಯೂ ತನ್ನ ಗರಿಮೆಯನ್ನು ತೋರಿಸಬಲ್ಲವಳಾಗಿದ್ದಾಳೆ. ಅವಳಿಗೆ ಅವಕಾಶ ಸಿಗಬೇಕು. ಆದರೆ ಸ್ವಾತಂತ್ರ್ಯದ ಭಾವನೆ ಅಂದರೆ separatism ಬೇಡ. ಮಹಿಳೆಯ ನಿಷ್ಠಾಪೂರ್ಣ ಕಲಾಕೃತಿಯಲ್ಲಿ ತನ್ಮಯತೆ, ಏಕತೆ, ಮಾಧುರ್ಯ, ಸೃಜನಾತ್ಮಕತೆ ಒಡಮೂಡಬಲ್ಲದಾಗಿದೆ. ಸಹಿಷ್ಣುತೆಯ ಪರಾಕಾಷ್ಠೆಯನ್ನು ಮುಟ್ಟಿದ ಮಹಿಳೆ ಜೀವನವನ್ನು ಸುಂದರಗೊಳಿಸಬಲ್ಲಳು. ತನ್ನ ಪ್ರತಿಯೊಂದು ಕ್ರಿಯೆಯಲ್ಲಿಯೂ ತನ್ನ ನೋವನ್ನು ಸಹಿಸಿಕೊಂಡು ತೊಂದರೆಯನ್ನು ಸಹಿಸಿಕೊಂಡು ಸಾರ್ವತ್ರಿಕವಾಗಿ ಹಿತವನ್ನು ನೀಡಬಲ್ಲಳು. ಅವಳ ಇರುವೇ ಮಧುರ, ಅವಳ ಸಂಚಾರವೇ ಮಧುರ, ಅವಳ ಸೌಂದರ್ಯವೇ ಸೌಂದರ್ಯವೆಂದು ಅನೇಕರು ಹೇಳಿದರು. ಮಹಿಳೆಯ ಬಗ್ಗೆ ಎಷ್ಟು ಹೇಳಿದರೂ, ಏನು ಹೇಳಿದರೂ ಕಡಿಮೆಯೇ ಅನಿಸುವುದು ನನಗೆ.

'ಅಲಂಕಾರಯುಕ್ತವೇ (ಮಾಹಿಳೆಯೇ) ಸುಂದರ'ವೆಂಬುದನ್ನು ಹೇಳುವ ಸಂಸ್ಕೃತದ ಗಾದೆಯಿದೆ. 'ಸೌಂದರ್ಯಮಲಂಕಾರಾತ್' ಎಂದು ಅದು ಹೇಳಿದೆ. 'A thing of beauty is a joy forever' ಎಂದು ಆಂಗ್ಲ ಕವಿ ಕೀಟ್ಸ್ ಹೇಳಿದರು. ಈ ಜಗತ್ತಿನಲ್ಲಿ ಸುಂದರವಾದದ್ದು, ಸುಂದರವಲ್ಲದ್ದು ಯಾವುದೂ ಇಲ್ಲ. ಯಾರಿಗೆ ಯಾವುದು ರುಚಿಸುತ್ತದೆಯೋ ಅವರಿಗೆ ಅದು ಸುಂದರವಾಗಿ ಕಾಣುವುದು ಎಂದು ಮತ್ತೊಬ್ಬ ಸಂಸ್ಕೃತ ಕವಿ ಹೇಳಿದ್ದಾರೆ.

ನಾಸ್ತಿ ಕಂಚಿತ್ ಸ್ವಭಾವೇನ ಸುಂದರಂ ವಾಪ್ಯಸುಂದರಮ್
ಯದ್ಯಸ್ಯ ರೋಚತೇ ತಸ್ಯೈ ಭವೇತ್ ತತ್ತಸ್ಯ ಸುಂದರಮ್॥

'ನಿಸರ್ಗ ಸೌಂದರ್ಯವೇ ಸೌಂದರ್ಯ; ಕೃತ್ರಿಮ ಸೌಂದರ್ಯವು ವಸ್ತುಗಳ ಸುಂದರ ಸಮೂಹ'ವೆಂದು ಹೇಳುತ್ತ ಹೆಚ್.ಡಬ್ಲ್ಯೂ.ಕಾರ್ ಎಂಬುವರು 'Natural beauty is beautiful thing; artistic beauty is a beautiful presentation of a thing' ಎಂದು ಹೇಳಿದರು. 'beauty unadorned is adorned most' ಅನಲಂಕೃತ ಸೌಂದರ್ಯವೇ ನಿಜವಾದ ಸೌಂದರ್ಯ'ವೆಂಬುದು ಇನ್ನೊಂದು ಜಾಗತಿಕ ಸತ್ಯವಾಗಿದೆ.

'ಸುಂದರವಾಗಿರುವುದೇ ಮೂರ್ತಿ'ಎಂಬುದನ್ನು ಈ ರೀತಿ ಹೇಳಿದರು. 'ಅ
ರೂಪ್ಯಾಶ್ಚ ಮೂರ್ತೀನಾಮ್': ಮೂರ್ತಿಯು ಸೌಂದರ್ಯದ ಪರಾಕಾಷ್ಠೆಯಾಗಿ ಬೇಕು ಅಂದಾಗಲೇ ಅದು ಭಕ್ತಿ, ಗೌರವಾದರಗಳನ್ನು ಪಡೆಯಬಲ್ಲದೆಂದು ಸಂಸ್ಕೃತ ಆಲಂಕಾರಿಕರ ಮತವಾಗಿದೆ.

'ಸ್ವಭಾವ ಸುಂದರಮ್ ವಸ್ತು ನ ಸಂಸ್ಕಾರಮಪೇಕ್ಷತೆ' ಎಂದು ಹೇಳುತ್ತ 'ಸುಂದರ ವಸ್ತುವು ಕೃತ್ರಿಮತೆಯನ್ನು ಬಯಸದು' ಎಂದು ಕುಸುಮದೇವನೆಂ ಕವಿ ವ್ಯಾಖ್ಯಾನಿಸಿದರು.

'ಸರ್ವ ಶೋಭನೀಯಂ ಸುರೂಪಂ ನಾಮಂ'ವೆಂದು ಭಾಸ ಕವಿ ಹೇ ದರು. 'ಸಹಜ ಸುಂದರ ವಸ್ತುವೇ ಸೌಂದರ್ಯದ ಪ್ರತೀಕ'ವೆಂಬುದು ಅದ ತಾತ್ಪರ್ಯವಾಗಿದೆ.

ಹ್ಯೂಮ್‌ವೆಂಬುವರು 'Beauty is no quality in things themselve it exists merely in the mind which contemplates it' ಎಂದು ಹೇಳಿದ 'ಸೌಂದರ್ಯವೆಂಬುದು ವಸ್ತುಗಳಲ್ಲಿರದೇ ಅವುಗಳನ್ನು ನೋಡುವ ಮನಸ್ಸಿನ ರುತ್ತದೆ' ಎಂದು ಸಾರಿದರು.

‘Beauty lies in the eyqes of the beholder and not in the ings beheld’ ‘ನೋಡುವ ವಸ್ತುಗಳಲ್ಲಿ ಸೌಂದರ್ಯವಿರದು, ಅವುಗಳನ್ನು ೋಡುವ ಕಣ್ಣುಗಳಲ್ಲಿ ಸೌಂದರ್ಯವಿರುವುದು’ ಎಂಬುದನ್ನು ಹಲವಾರು ಜನರು ಕ ಕೆಳಗಿನಂತೆ ವಿವರಿಸಿದರು.

1. ‘Beauty in the eye of the beholder ‘ನೋಡುವ ಕಣ್ಣಲ್ಲಿ ಸೌಂದರ್ಯವಿರುವುದು’ -Margaret Walfe Hungerford

2. ‘Beauty is altogether in the eye of the beholder’ ‘ಸೌಂದರ್ಯವು ನೋಡುವ ಕಣ್ಣುಗಳಲ್ಲಿರುವುದು’ -Lew Wallace

3. ‘Beauty is bought by judgement of the eye’ ‘ಕಣ್ಣಿನಿಂದಲೇ ಸೌಂದರ್ಯವನ್ನು ಕೊಳ್ಳಲು ಸಾಧ್ಯ’-William Shakespeare

4. ‘The Beautiful is in the eye of him who sees it’‘ನೋಡುವವನ ಕಣ್ಣುಗಳಲ್ಲಿಯೇ ಸೌಂದರ್ಯವಡಗಿರುವುದು -A. C. Sharoth

5. ‘Those who love beauty will see beauty every where’ ಸೌಂದರ್ಯವನ್ನು ಪ್ರೀತಿಸುವವರೇ ಎಲ್ಲೆಡೆಯಲ್ಲಿ ಸೌಂದರ್ಯವನ್ನು ಕಾಣುವರು’- Lord Avebury.

‘ಕ್ಷಣಕ್ಷಣಕ್ಕೂ ನಾವೀನ್ಯವನ್ನು ನೀಡುವುದೇ ಸೌಂದರ್ಯ’ವೆಂದು ಮಾಘ ು ಈ ಕೆಳಗಿನ ಶ್ಲೋಕದಲ್ಲಿ ಹೇಳಿದರು.

ಕ್ಷಣೆ ಕ್ಷಣೆ ಯನ್ನವತಾಮುಪೈತಿ
ತದೇವ ರೂಪಂ ರಮಣೀಯತಾಯಾಃ ॥

‘That is the nature of beauty
which attains novelty every moment’

ಬರ್ಥವನ್ನು ಇದು ಹೇಳುತ್ತದೆ.

‘ಸರ್ವಾಸ್ವವಸ್ಥಾಸು ಅನವದ್ಯತಾ ರೂಪಸ್ಯ’ ಎಂದು ಕಾಳಿದಾಸರು ಳಿದರು. ‘The perfection of beauty under all circumstances’ಎಂಬ ಗ್ಲೀಷ್ ನುಡಿಯನ್ನು ಈ ಮಾತು ಸಮರ್ಥಿಸುತ್ತದೆ. ಸಕಲ ಅವಸ್ಥೆಗಳಲ್ಲಿ ದರ್ಯವು ರಮಣೀಯವಾಗಿರುತ್ತದೆಂಬುದನ್ನು ಈ ಕೆಳಗಿನ ನುಡಿ ಡುತ್ತದೆ.

ಸರ್ವಾಸ್ವವಸ್ಥಾಸು ರಮಣೀಯತ್ವಮಾಕೃತಿ ವಿಶೇಷಾಣಾಮ್।
'How charming/beautiful are noble forms under all conditions'

ಎಂಬ ಉಕ್ತಿಯನ್ನು ಇದು ಸಮರ್ಥಿಸುತ್ತದೆ. ಈ ಎಲ್ಲ ನುಡಿಗಳು ಕೀಟ್ಸ್ ಕವಿಯು ಹೇಳಿದ ಈ ಕೆಳಗಿನ ಉಕ್ತಿಯನ್ನು ನೆನಪಿಸುತ್ತವೆ.

'A thing of beauty is a joy forever' 'ಸುಂದರ ವಸ್ತು ಸದಾ ಸಂತಸದಾಯಕ' ಸುಂದರ ವಸ್ತು ಸಂತಸದಾಯಕವಾಗಿರುವುದು. ಅದುವೇ ಸತ್ಯ. ಸತ್ಯವೇ ಸುಂದರವಾಗುವುದು. 'Truth is beauty; beauty the truth' ಎಂಬ ಸತ್ಯವನ್ನು ಈ ಮಾತು ಸಮರ್ಥಿಸುತ್ತದೆ.

'ಸೌಂದರ್ಯವೇ ಬ್ರಹ್ಮ; ಬ್ರಹ್ಮವೇ ಸೌಂದರ್ಯ'. 'ಅವರ್ಣನೀಯವಾದ ಆನಂದದ ಸ್ಥಿತಿಯೇ ಸೌಂದರ್ಯ'ವೆಂದು ಅನೇಕರು ಹೇಳಿದ್ದಾರೆ. ಇದರ ತಾತ್ಪರ್ಯವೇನೆಂದರೆ, 'ವರ್ಣಿಸಲಿಕ್ಕಾಗದ್ದೇ ಸೌಂದರ್ಯ'. ಈ ಮಾತನ್ನು 'ಸತ್ಯಂ ಶಿವಂ ಸುಂದರಂ' ಎಂದು ಮತ್ತೆ ಕೆಲವರು ಸಾರಿದ್ದಾರೆ.

ಒಟ್ಟಿನಲ್ಲಿ ಸೌಂದರ್ಯವೆಂಬುದು ಒಂದು 'ವಿಶೇಷ ಪ್ರಜ್ಞೆ' ಅಥವಾ 'ಮನಸ್ಸಿನ ಸ್ಥಿತಿ' ಎಂದು ಹೇಳಬಹುದಾಗಿದೆ. ಇಂಥ ಸ್ಥಿತಿ ಮಹಿಳೆಗೆ ವಿಶೇಷವಾಗಿ ಹೆಚ್ಚಾಗಿರುತ್ತದೆ ಎಂಬುದನ್ನು ನಾವೆಲ್ಲ ಒಪ್ಪುತ್ತೇವೆ. ಹೀಗಾಗಿ ಅವಳ ಕಲೆಯ ಪ್ರತಿಕೃತಿ ಅಥವಾ ಕಲಾಕೃತಿ ಹೆಚ್ಚು ಭಾವಪೂರ್ಣವಾಗಿರುವುದು. ಅಲ್ಲದೇ ಅರ್ಥಪೂರ್ಣವೂ ಆಗಿರುವುದು, ಕಲಾ ತನ್ಮಯತೆಯನ್ನೂ ಮೈಗೂಡಿಸಿಕೊಂಡಿರುವುದು.

ಮಹಿಳೆಯ ಕಲಾಕೃತಿಯು ಕಲೆ, ಸೌಂದರ್ಯ ಮತ್ತು ಸೌಂದರ್ಯಪ್ರಜ್ಞೆಯನ್ನು ಹೊಂದಿರುವುದೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು.

ಕಲೆ, ಮಹಿಳೆ ಮತ್ತು ಸೌಂದರ್ಯ ಪ್ರಜ್ಞೆ ಒಂದಕ್ಕೊಂದು ಪೂರಕ, ಅಗತ್ಯ, ವಿಚಾರಪ್ರಚೋದಕ ಮತ್ತು ಅನುಪಮವೆಂದು ಹೇಳಬಹುದು.

- ಸಂಸ್ಕೃತಿ ಚಿಂತನೆ -

ಸಂತೋಷ ಎಂದರೇನು ?

ಡಾ|| ಸುಧೀರ್ ಕಾಕರ್

ಹೊಸ ಸಹಸ್ರಮಾನದ ಪ್ರಾರಂಭದಲ್ಲಿ ಜಗತ್ತಿನಾದ್ಯಂತ ಚಿಂತಕರು - ಮನುಷ್ಯ ಜೀವಿಯ ಇಂದಿನ ಪರಿಸ್ಥಿತಿ ಹಾಗೂ ಅದರ ಭವಿಷ್ಯತ್ತಿನ ಸ್ಥಿತಿಯನ್ನು ಕುರಿತು ಸಾಕಷ್ಟು ಆಲೋಚನೆಗಳನ್ನು ಮಾಡಿದ್ದಾರೆ. ಅವರು ವ್ಯಕ್ತಪಡಿಸಿದ ಆಲೋಚನೆಗಳಲ್ಲಿ, ನನಗೆ ಗಾಢವಾಗಿ ತಟ್ಟಿದ್ದು, ನಮ್ಮ ಆಧುನಿಕ ನಾಗರೀಕತೆಯ ಬಗೆಗಿನ ತೀವ್ರ ಕಳವಳ ಮತ್ತು ಅದು ಹಿಡಿಯುತ್ತಿರುವ ದಾರಿಯ ಬಗೆಗಿನ ಆತಂಕ. ಆಧುನಿಕ ನಾಗರೀಕತೆಯ ಅಸ್ವಸ್ಥತೆಗಳಾದ - ಪರಿಸರ ಶೋಷಣೆ, ರಾಜಕೀಯ ದಬ್ಬಾಳಿಕೆ, ಆರ್ಥಿಕ ಅಸಮಾನತೆ ಹಾಗೂ ಆಧ್ಯಾತ್ಮಿಕತೆಯ ಅಪ್ರಸ್ತುತತೆ - ಇವುಗಳು ಮನುಷ್ಯನ ವಿವೇಕವನ್ನು ಪೊಟಕುಗೊಳಿಸುತ್ತಿವೆ, ಹಾಗೂ ಬದುಕಿನಲ್ಲಿ ಸಮಗ್ರತೆ, ಅರ್ಥ ಹಾಗು ಉದ್ದೇಶವನ್ನೇ ಬರಿದು ಮಾಡುತ್ತಿವೆ ಎಂದು ನಮ್ಮ ಎಲ್ಲ ಪ್ರೌಢ ಮತ್ತು ಚಿಂತನಾತ್ಮಕ ಮನಸ್ಸುಗಳು ಸೂಚಿಸುತ್ತಿವೆ. ಜಾಗತಿಕ ಮಾರುಕಟ್ಟೆಗಳ ಮತ್ತು ವಿಜಯೋನ್ಮತ್ತ ಬಂಡವಾಳ ಶಾಹಿತ್ವದ ಈ ಯುಗದ ಅಸ್ವಸ್ಥತೆಗೆ ಪರಿಹಾರ - ಬಹುಪಾಲು ಚಿಂತಕರು, ಕಲಾಕಾರರು, ವಿಜ್ಞಾನಿಗಳು ಹಾಗೂ ಲೇಖಕರ ಪ್ರಕಾರ 'ಅಂತರ್ಮುಖಿಗೊಳ್ಳುವುದು'. ಇದು ಎಲ್ಲ ಆಧ್ಯಾತ್ಮಿಕ ಪರಂಪರೆಗಳ -(ಅದು ಪೂರ್ವವೇ ಆಗಿರಲಿ ಪಶ್ಚಿಮವೇ ಆಗಿರಲಿ)-ಸಂದೇಶವೂ ಹೌದು. ವ್ಯಕ್ತಿತ್ವದ ಔನ್ನತ್ಯವನ್ನು ಅವು ಒತ್ತಿ ಹೇಳುತ್ತವೆಯೋ ಹೊರತು ಸ್ವ-ಅಭಿವೃದ್ಧಿ ಮತ್ತು ಸ್ವಾರ್ಥ ಕೇಂದ್ರಿತ ಮನೋವೃತ್ತಿಯನ್ನಲ್ಲ. ಆತ್ಮಾಭಿವೃದ್ಧಿಗಾಗಿ ತೊಡಗಿಕೊಂಡಿರುವ ಜೀವನ ಭೌತಿಕವಾಗಿ ಬಹಳ ಸರಳ, ಆದರೆ ಸಾಂಸ್ಕೃತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಅದು ಅತ್ಯಂತ ಶ್ರೀಮಂತ. ಇಂಥ ಜೀವನವು, ಸದಾ ಆರ್ಥಿಕ ವಿಸ್ತರಣೆ ಮತ್ತು ಸಂಪತ್ತಿನ ಜಮಾವಣೆ ಮಾಡುವ ಆಧುನಿಕ ಸಮಾಜಗಳ ಜೀವನಕ್ಕಿಂತ, ಹೆಚ್ಚು ಸ್ವತಂತ್ರ ಹಾಗೂ ವಿಶ್ವಾಸಾರ್ಹ. ಪ್ಲೇಟೊ ಹೇಳುವ 'ಬಡತನವೆನ್ನುವುದು ಸಾಮಗ್ರಿಗಳ ಅಭಾವವಲ್ಲ ; ಅದು ಅತಿ ಆಸೆಯ ಒಂದು ಬಗೆ'' ಎನ್ನುವ ಮಾತಾಗಲೀ, ಬುದ್ಧನು ಕಲಿಸಿದ 'ಅತಿ ಆಸೆಯೇ ಮನುಷ್ಯನ ದುಃಖ ಹಾಗೂ ನೋವಿಗೆ ಮೂಲ' ಎನ್ನುವ ತತ್ವವಾಗಲೀ ಅಥವಾ

'ಈ ಜಗತ್ತಿನಲ್ಲಿ ಪ್ರತಿಯೊಬ್ಬರ ಅವಶ್ಯಕತೆಗೂ ದಕ್ಕುವಂಥದ್ದು ಸಾಕಷ್ಟಿದೆ, ಆದರೆ ಮನುಷ್ಯನ ಆಸೆಬುರುಕತನಕ್ಕೆ ಸಾಕಾಗುವಷ್ಟು ಇಲ್ಲಿ ಇಲ್ಲ' ಎನ್ನುವ ಗಾಂಧೀಜಿಯುವರ ಹೇಳಿಕೆಯಾಗಲೀ – ಒಂದು ವಿಚಾರವನ್ನು ಸ್ಪಷ್ಟವಾಗಿ ಒಪ್ಪುತ್ತವೆ. ಅದು ಏನೆಂದರೆ 'ನಿಜವಾದ ಸ್ವಾತಂತ್ರ್ಯವೆನ್ನುವುದು – ಆಸೆಯಿಂದ ಸ್ವತಂತ್ರರಾಗುವುದೇ ವಿನಃ ಸಮಕಾಲೀನ ಪರಿಸ್ಥಿತಿ, ವಿದ್ಯಮಾನ, ಸ್ಥಿತಿಗತಿಗಳಿಂದ ದೂರಹೋಗುವು ದಲ್ಲ'. ನಮ್ಮ ಅವಶ್ಯಕತೆಗಳನ್ನು ನಾವು ಪೂರೈಸಿಕೊಳ್ಳಬೇಕು ನಿಜ, ಆದರೆ ಈ ಪೂರೈಕೆಯ ಹಾದಿಯಲ್ಲಿ ನಿಜವಾದ ಅವಶ್ಯಕತೆಗಿರುವ ಮಿತಿಯನ್ನು– ಯಾವುದನ್ನು ಹಿಂದೂಗಳು 'ಮರ್ಯಾದೆ' ಎಂದು ಕರೆಯುತ್ತಾರೋ ಅದನ್ನು – ನಾವು ಮರೆಯಬಾರದು. ಅವಶ್ಯಕತೆಗಳಿಗೆ ಎರಡು ಮಿತಿಗಳಿವೆ. ಅತ್ಯಂತ ಕೆಳಗಿನ ಮಿತಿಯನ್ನು ದಾಟಿದರೆ, ಅವಶ್ಯಕತೆಯು 'ಅಭಾವ'ವೆಂದೆನಿಸಿ ಕೊಳ್ಳುತ್ತದೆ; ಅತ್ಯಂತ ಮೇಲಿನ ಮಿತಿಯನ್ನು ದಾಟಿದರೆ ಅವಶ್ಯಕತೆಯು ಅಕ್ಷರಶಃ ವ್ಯಾಧಿಯೆನಿಸಿಕೊಳ್ಳುತ್ತದೆ. ಬೇರೆ ಭಾಷೆಯನ್ನು ಬಳಸಿ ಹೇಳಬೇಕೆಂದರೆ, – ನ್ಯಾಯದ ಎಲ್ಲೆಯನ್ನು ಮೀರದ ಕಡಿಮೆ ಭೌತಿಕ ಸಂಪತ್ತು ಮತ್ತು ಸಾಂಸ್ಕೃತಿಕ ಬೆಳವಣಿಗೆಯ ವಾತಾವರಣದಲ್ಲಿ 'ಸಂತೋಷ'ವೆನ್ನುವುದು ಬಾಹ್ಯ ಸ್ಥಿತಿಗತಿ ಗಳಿಂದ ಬಹುಪಾಲು ಮುಕ್ತ ಹಾಗೂ ಸ್ವತಂತ್ರ ಅಸ್ತಿತ್ವವನ್ನು ಹೊಂದಿರುತ್ತದೆ ಇಂಥ ಸಂತೋಷದ ಸ್ಥಿತಿಯನ್ನು ಪ್ರಮುಖವಾಗಿ ಬಾಹ್ಯ, ಭೌತಿಕ ಸಂಪತ್ತಿನ ಸಾಧನದಿಂದ ಪಡೆಯಲು ಇಚ್ಛಿಸುವುದು – ವಿಫಲತೆಗೆ ದಾರಿ ಮಾಡಿಕೊಡುತ್ತದೆ ಯಷ್ಟೇ ಅಲ್ಲ, ವ್ಯಕ್ತಿತ್ವದ ಬೆಳವಣಿಗೆಗೆ ಇದು ಬಾಧಕವೂ ಆಗುತ್ತದೆ. ಈ ರೀತಿಯ ಪ್ರಯತ್ನವು ಕ್ಷುದ್ರ ಅಥವಾ ಹೇಯವಾದುದು; ಪ್ಲೇಟೋ ಹೇಳುವ 'ಹಂದಿಗಳ ಸಾಮ್ರಾಜ್ಯ'ವನ್ನಷ್ಟೇ ಅದು ಕಟ್ಟಬಲ್ಲದು.

ಆಧುನಿಕ ಜಗತ್ತಿನ ವ್ಯಾಧಿಯ ಈ ಬಗೆಯ ಶೋಧನೆ ಮತ್ತು ಇಂ ವ್ಯಾಧಿಗೆ ಹೇಳಲಾದ ಪರಿಹಾರ ಹಾಗೂ ಉಪಾಯಗಳನ್ನು ನಾನೂ ಒಪ್ಪುತ್ತೇ ಇದು ಪ್ರಾಚೀನ ಸಂದೇಶವಾದರೂ, ಆಧುನಿಕ ಸಮಾಜಗಳ ಸಮಸ್ಯೆಗ ಪರಿಹಾರದ ದೃಷ್ಟಿಯಿಂದ ಪ್ರಸ್ತುತತೆಯನ್ನು ಪಡೆದಿದೆ. ಆದರೆ ಈ ಸಂದರ್ಭ ದಲ್ಲಿ ಏಳುವ ಪ್ರಶ್ನೆ ಏನೆಂದರೆ – ಈ ಸನಾತನ ಸತ್ಯವನ್ನು ಈಗ ಕಾರ್ಯ ರೂಪಕ್ಕೆ ತರಲಿಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದು. ಇದು ಕೇವಲ ಆಧ್ಯಾ ಜೀವಿಗಳೆಂಬ ಅಲ್ಪ ಸಂಖ್ಯಾತರ ಹುಡುಕುವಿಕೆ ಮಾತ್ರವಾಗದೆ ನಮ್ಮ ಸಾಮಾ ಬದುಕಿನಲ್ಲೂ ಈ ಸತ್ಯಕ್ಕೆ ಒಂದು ಅವಕಾಶ ಅಥವಾ ಒಂದು ಆಕೃತಿಯ ಕೊಡಲಿಕ್ಕೆ ಸಾಧ್ಯವೇ? ಆಸೆಯಿಂದ ಮುಕ್ತಗೊಳಿಸುವಂಥ ಪ್ರಜ್ಞೆಯ ರಾಜಕೀ ಚಲನೆಯನ್ನು ನಾವು ಪ್ರೋತ್ಸಾಹಿಸೋಣ; ಆದರೆ ಅದರ ಜೊತೆ 'ಸಂತೋಷ'ವೆಂದರೇನು ಎನ್ನುವ ಪ್ರಶ್ನೆಗೆ ಉತ್ತರವನ್ನು ಅತ್ಯಂತ ಸಾಮಾನ್ಯ

ಮಾನವೀಯ ನೆಲೆಯಲ್ಲಿಯೇ ಹುಡುಕಲು ಸಾಧ್ಯವೇ ಎನ್ನುವುದನ್ನೂ ನೋಡೋಣ.

ನನ್ನ ಪ್ರಕಾರ, ಸಾಧಾರಣೀಕರಣಗೊಳ್ಳುವ 'ಸಂತೋಷ'ದ ಸಾಧನೆಯ – ಪ್ರಶ್ನೆಯ ಪ್ರಾರಂಭ ಮತ್ತು ಅಂತ್ಯ ಒಂದು ಚೈನೀ ಹೇಳಿಕೆಯಲ್ಲೇ ಅಡಗಿದೆ: 'ಸಂತೋಷ' ವೆನ್ನುವುದು ಯಾರನ್ನಾದರೂ ಪ್ರೀತಿಸುವುದು, ಯಾವುದಾದರೂ ಕೆಲಸ ಮಾಡುವುದು ಮತ್ತು ಯಾವುದರಲ್ಲಾದರೂ ವಿಶ್ವಾಸವಿಡುವುದು. ಪ್ರೀತಿ, ಕೆಲಸ ಮತ್ತು ನಿರೀಕ್ಷೆಯ ವಿಶ್ವಾಸ ಇವುಗಳು 'ಪವಿತ್ರ ಪಾನಪಾತ್ರೆ'ಯ ಮೂರು ಘಟಕಗಳೆಂದು ಕರೆಯಬಹುದು. ಈ ಬಗೆಯ ದೃಷ್ಟಿಕೋನಕ್ಕೆ ಅನೇಕ ಕಡೆಗಳಿಂದ, ಹಾಗೂ ಆಶ್ಚರ್ಯಕರ ಮೂಲಗಳಿಂದ ಬೆಂಬಲ ಸಿಗುತ್ತದೆ. ನನ್ನ ಓದಿನ ಶಿಸ್ತಾದ 'ಮಾನಸಿಕ ವಿಶ್ಲೇಷಣೆ'ಯನ್ನೇ ತೆಗೆದುಕೊಳ್ಳಿ; ಅಲ್ಪ ಸ್ವಲ್ಪ ಸಂತೋಷ, ಹಾಗೂ ವ್ಯಕ್ತಿಯ ದುಃಖದ ಉಪಶಮನ ಮಾಡುವುದನ್ನು ಅದು ತನ್ನ ಗುಣ ಮಾಡುವ ಗುರಿ ಎಂದು ಭಾವಿಸಿದೆ. ಫ್ರಾಯ್ಡ್ ವೃದ್ಧನಾಗಿದ್ದಾಗ, ಒಬ್ಬ ಪತ್ರಿಕಾ ವರದಿಗಾರ ಅವರನ್ನು 'ವಯಸ್ಕರಲ್ಲಿ ಮಾನಸಿಕ ಆರೋಗ್ಯದ ಅಗತ್ಯತೆಗಳೇನು'? ಎಂದು ಕೇಳಿದ. (ಇಲ್ಲಿ ನಾನು ಸಂತೋಷವನ್ನು ಮಾನಸಿಕ ಸ್ವಾಸ್ಥ್ಯದ ಜೊತೆಗೆ ಸಂವಾದಿಯಾಗಿ ನೋಡುತ್ತಿದ್ದೇನೆ). ವರದಿಗಾರ ಫ್ರಾಯ್ಡ್‌ನಿಂದ ಬಹುದೊಡ್ಡ ಉತ್ತರವನ್ನು ನಿರೀಕ್ಷಿಸಿದ್ದ. ಅದರ ಬದಲಿಗೆ ಅವನಿಗೆ ಸಿಕ್ಕಿದ್ದು ಎರಡೇ ಶಬ್ದದ ಉತ್ತರ : "ಲೆಯ್‌ಬೆನೆ ಅಂಡ್ ಅರ್‌ಬಿಟೆನ್" – 'ಪ್ರೀತಿ ಮತ್ತು ಕೆಲಸ'. ಈ ದೃಷ್ಟಿಯಲ್ಲಿ, ಸಂತೋಷವೆನ್ನುವುದು ಟಯೋಟಾ ಕ್ವಾಲಿಸ್, ಕುಕ್ಕಿಂಗ್ ರೇಂಜ್ ಮತ್ತು ೨೯ ಇಂಚಿನ ಟಿ.ವಿ.ಯನ್ನು ಹೊಂದುವುದರಲ್ಲಿ ಇಲ್ಲ. ನಾನು ಮಾತನಾಡಿದ, ಭಿನ್ನ ಆದಾಯದ, ಸಾಮಾಜಿಕ ಶ್ರೇಣಿಯ, ಭಾರತದ ಹಾಗೂ ಪಶ್ಚಿಮ ದೇಶಗಳ ನೂರಾರು ಜನರು ತಮ್ಮ ಆತ್ಮಾವಲೋಕನದಿಂದ ಹೇಳಿದ ಮಾತುಗಳನ್ನು ಗಮನಿಸಿ ನಾನು ಹೇಳಬಲ್ಲೆ – 'ಸಂತೋಷವು ಮನುಷ್ಯನ ಎರಡು ಮೂಲಭೂತ ಕ್ರಿಯೆಗಳಾದ ಪ್ರೀತಿ ಮತ್ತು ಕೆಲಸವನ್ನೇ ಅವಲಂಬಿಸಿದೆ. ಎಲ್ಲ ಮನೋಚಿಕಿತ್ಸೆಯು ಪ್ರೀತಿ ಮತ್ತು ಕೆಲಸಕ್ಕೆ ಉಂಟಾಗುವ ಪ್ರತಿಬಂಧಕಗಳನ್ನು ತೆಗೆದುಹಾಕುವ ದಿಸೆಯಲ್ಲಿಯೇ ಕೆಲಸ ಮಾಡುತ್ತದೆ. ಇದನ್ನೇ ವಿಸ್ತರಿಸಿ ಹೇಳುವುದಾದರೆ, ಫ್ರಾಯ್ಡ್‌ನ ಸೂತ್ರವು – 'ಒಬ್ಬ ಸಂತುಷ್ಟ ಮನುಷ್ಯನು ಬಹಳ ಕಾಲ ತಾಳಬಲ್ಲ ಸಂಬಂಧವನ್ನು ಬೆಳೆಸಬಲ್ಲನೆಂದೂ, ಅಡೆತಡೆಯಿಲ್ಲದ ಒಳ್ಳೆಯ ಹಾಗೂ ಸೃಜನಶೀಲ ಕೆಲಸವನ್ನು ಮಾಡುವುದರಲ್ಲಿ ತನ್ನ ಪ್ರತಿಭೆಯನ್ನು ಉಪಯೋಗಿಸ ಬಲ್ಲನೆಂದೂ– ಹೇಳುವ ಅಂಶವನ್ನು ಒಳಗೊಂಡಿದೆ. ಫ್ರಾಯ್ಡ್‌ನು 'ಸಂತೋಷ'ದ ಮೂರನೆಯ ಘಟಕವಾದ 'ನಿರೀಕ್ಷೆಯ ವಿಶ್ವಾಸ'ವನ್ನು ತನ್ನ ಸೂತ್ರದಲ್ಲಿ ಬಿಟ್ಟಿರುವುದು ಬಡ

ರಾಷ್ಟ್ರವಾದ ನಮ್ಮಂಭವರ ಸಂದರ್ಭದಲ್ಲಿ ಆಶ್ಚರ್ಯಕರವಾದ ವಿಷಯವೇ ಆಗಿದೆ. ಕರ್ನಾಟಕದ ಒಳಪ್ರಾಂತ್ಯದ ಒಂದು ಹಳ್ಳಿಯಿಂದ ವಲಸೆ ಬಂದು ಬೆಂಗಳೂರಿನ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ಈ ಹೆಣ್ಣು ಮಗಳನ್ನೇ ತೆಗೆದುಕೊಳ್ಳಿ. ಅವಳು ಬೆನ್ನುಮೂಳೆ ಮುರಿಯುವಷ್ಟು ಮನೆ ಕಟ್ಟುವ ಕೆಲಸದಲ್ಲಿ ದಿನಕ್ಕೆ ಹದಿನಾಲ್ಕು ಗಂಟೆ ದುಡಿಯುತ್ತಾಳೆ; ಅಲ್ಯುಮಿನಿಯಂ ತಗಡಿನ ತಟ್ಟೆಯಲ್ಲಿ ಹಳಸಿದ ಊಟವನ್ನು ಮಾಡುತ್ತಾಳೆ; ಆರೇಳು ಜನರ ಜೊತೆ ನಾರುವ ಸ್ಥಳದ ಗುಡಿಸಲಿನಲ್ಲಿ ವಾಸಿಸುತ್ತಾಳೆ. ಆದರೂ ಹಳ್ಳಿಯ ತನ್ನ ಜೀವನವು ಇಲ್ಲಿಗಿಂತ ಚೆನ್ನಾಗಿತ್ತು ಎಂಬ ಭಾವನೆಯನ್ನೇ ಆಶ್ಚರ್ಯಕರ ರೀತಿಯಲ್ಲಿ ತಿರಸ್ಕರಿಸುತ್ತಾಳೆ. ಯಾಕೆ? ಇಲ್ಲಿ 'ಭೌತಿಕ ಸ್ಥಿತಿಗತಿ'ಗಳು ಅಲ್ಲಿಗಿಂತ ಪರವಾಗಿಲ್ಲ ಎಂದು ಅವಳು ಉತ್ತರಿಸಬಹುದಾದರೂ ವಾಸ್ತವವಾಗಿ ಅದು ಹಾಗಲ್ಲ. ಈ ವಾತಾವರಣದಲ್ಲಿ ಅವಳು ಮೊದಲ ಬಾರಿಗೆ ತನ್ನ ಕೈಯಲ್ಲಿ ಭವಿಷ್ಯವನ್ನು ಅನುಭವಿಸಬಲ್ಲಳು; ತನ್ನ ಮಕ್ಕಳಿಗೆ ಒಳ್ಳೆಯ ಜೀವನ ದಕ್ಕೀತೆಂಬ ವಿಶ್ವಾಸವನ್ನು ಮೊದಲ ಬಾರಿಗೆ ಅವಳು ಪಡೆಯುತ್ತಾಳೆ. 'ವಿಶ್ವಾಸ' ವೆನ್ನುವುದು – ನಮ್ಮ ಎದುರಿಗಿರುವ ಜಗತ್ತಿನಲ್ಲಿ, ಅಡಗಿಕೊಂಡಿರುವ ಹಾಗೂ ಪ್ರಕಟವಾಗದೇ ಇರುವ ಒಂದು ಕ್ರಮವಿದೆ ಎನ್ನುವ ಮಾನಸಿಕ ನಂಬಿಕೆಯನ್ನು ಉಂಟುಮಾಡುತ್ತದೆ. ಜೀವನದಲ್ಲಿ ಎಷ್ಟೇ ಅನ್ಯಾಯ, ಕ್ರೂರತೆ ಮತ್ತು ದುಃಖವಿದ್ದಾಗಲೂ ಬದುಕಿಗೆ ನಾವು ನಂಬುವಂಥ ಒಂದು ಗುರಿ ಇದೆ ಎಂದು ಭಾವಿಸಲು ಅದು ಪ್ರೇರೇಪಿಸುತ್ತದೆ. ಒಬ್ಬ ಸಿನಿಕನಿಗೆ – ಕೊಳಚೆ ಪ್ರದೇಶದ ಈ ಹೆಣ್ಣು ಮಗಳಿಗೆ ತನ್ನ ಭವಿಷ್ಯದ ಬಗೆಗಿನ ವಿಶ್ವಾಸದ ನಂಬಿಕೆ ಅವಾಸ್ತವವೆಂದು ಅನ್ನಿಸಬಹುದು; ವಿಶ್ವಾಸದ ಮೇಲಿನ ಅವಳ ಭರವಸೆಯು ನಿರರ್ಥಕ ; ಸಾಯುವವನು ಹುಲ್ಲಿನ ಕಡ್ಡಿಯನ್ನು ಹಿಡಿದುಕೊಂಡಷ್ಟೇ ಗಟ್ಟಿ ಎಂದೂ ಅವನು ಹೇಳಬಹುದು. ಆದರೆ, ಇವಳನ್ನು ಹಾಗು ಇಂಥ ಕೋಟ್ಯಾಂತರ ಇನ್ನಿತರ ಜನರನ್ನು ಇಷ್ಟೆಲ್ಲಾ ವ್ಯತಿರಿಕ್ತ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸನ್ನಿವೇಶಗಳ ನಡುವೆ ಭರವಸೆ ಹಾಗೂ ನಗುಮುಖ ಹೊಂದುವಂತೆ ಮಾಡಿದ ಅಂಶವು (ಅದೆಷ್ಟೇ ದೂರದಲ್ಲಿದ್ದರೂ) ಭವಿಷ್ಯತ್ತಿನ ಬಗೆಗೆ ಅವರಲ್ಲಿ ಮೊಳೆತಿರುವ ವಿಶ್ವಾಸವೇ ಆಗಿದೆ.

ವಿಶ್ವಾಸ ಅಥವಾ ಭರವಸೆಯೆನ್ನುವುದು ಪ್ರೀತಿ ಹಾಗು ಕೆಲಸಕ್ಕೆ ಮುಂಚಿನ ಘಟಕವೆಂದೇ ಹೇಳಬೇಕಾಗುತ್ತದೆ. ಮಹಾಭಾರತದಲ್ಲಿ ಒಂದು ಮಾತಿದೆ : **"ಭರವಸೆ ಎನ್ನುವುದು ಪ್ರತಿಯೊಬ್ಬ ಮನುಷ್ಯನ ತಳಾದಿ ... ಭರವಸೆಯು ನಾಶವಾದರೆ, ಸಾವಿಗೆ ಸಮವೆನ್ನಿಸುವ ಮಹಾದುಃಖವು ಬಂದು ಒದಗುತ್ತದೆ"**. ಇದು ಕೇವಲ ವ್ಯಕ್ತಿಗಳಿಗೆ ಅನ್ವಯಿಸುವ ಮಾತಲ್ಲ ; ಸಮುದಾಯ ಗಳಿಗೇ ಅನ್ವಯಿಸುವ ಅಂಶವಾಗಿದೆ.

ಇಂದು ನಾನು – ಭರವಸೆ ಅಥವಾ ವಿಶ್ವಾಸದ ಬಗ್ಗೆ ಮಾತನಾಡುವುದಿಲ್ಲ. ಇಲ್ಲಿ ನೆರೆದಿರುವ, ಜೀವನ ಪಥವನ್ನು ಆರಂಭಿಸುವ ತರುಣ, ತರುಣಿಯರನ್ನು ಉದ್ದೇಶಿಸಿ ನಾನು 'ಸಂತೋಷ'ದ ಎರಡನೇ ಘಟಕವಾದ 'ಕೆಲಸ'ದ ಬಗ್ಗೆ ಕೆಲವು ಅಂಶಗಳನ್ನು ಹೇಳಲು ಇಚ್ಛಿಸುತ್ತೇನೆ.

'ಕೆಲಸ'ವೆನ್ನುವುದು ಅವಶ್ಯಕತೆಯಿಂದಾಗಿ ಹುಟ್ಟಿದ ಒಂದು 'ಭಾರ'ವೆಂದು ಭಾವಿಸುವುದು ತಪ್ಪು. ಮೇಲಿನ ಲೋಕದ ಹಿಂದೂಗಳ ಸ್ವರ್ಗವಾಗಲೀ, ಮುಸ್ಲಿಂರ ಜನ್ನತ್ ಆಗಲಿ – ಈ ಸ್ಥಳಗಳಲ್ಲಿ ಜನರು ತಮ್ಮೆಲ್ಲ ಅವಶ್ಯಕತೆ ಹಾಗೂ ಕನಸುಗಳನ್ನು ಕೆಲಸ ಮಾಡದೆ ಪೂರೈಸಿಕೊಳ್ಳುತ್ತಾರೆಂಬ ಭಾವನೆ ಎಲ್ಲವೂ ಒಂದು ಸಂಪೂರ್ಣವಾದ ತಪ್ಪು ಗ್ರಹಿಕೆ. ಇಲ್ಲಿ ಬದುಕುತ್ತಿರುವ ಜನರಿಗೂ ಈ ರೀತಿಯ ಬದುಕು ಸಾಧ್ಯವಿಲ್ಲ. ಕೆಲಸದಿಂದ ನಿವೃತ್ತರಾಗಿ ತಮ್ಮೆಲ್ಲ ಭೌತಿಕ ಅವಶ್ಯಕತೆಗಳಿಗೆ ಅನುಗುಣವಾದ ಹಣವನ್ನು ಹೊಂದಿ, ಇಲ್ಲಿ ಬದುಕುತ್ತಿರುವಂಥವರಲ್ಲಿಯೂ ಅತ್ಯಂತ ಆಳದಲ್ಲಿ ಒತ್ತಡ ಮತ್ತು ಖಿನ್ನತೆಗಳು ತುಂಬಿರುತ್ತವೆ. ನಾವು ನಮ್ಮ ಜೀನ್ಸ್‌ಗಳಿಂದಲೂ ಮತ್ತು ಸಾಮಾಜಿಕ ಪ್ರತೀಕ್ಷೆಯ ಕಾರಣವಾಗಿಯೂ ಉತ್ಪಾದನಾ ಸಾಮರ್ಥ್ಯತೆಯನ್ನೂ ಹೊಂದಿರುವುದು ಅನಿವಾರ್ಯ ವೆಂದು ಮನಶ್ಶಾಸ್ತ್ರಜ್ಞರು ಹೇಳುತ್ತಾರೆ.

ಹಸುಗೂಸುಗಳು ತಮ್ಮ ಜೀವಿತಾವಧಿಯ ಮೊದಲ ವರ್ಷದಲ್ಲೇ ಸುತ್ತಣ ಪರಿಸರಕ್ಕೆ ಪ್ರತಿಕ್ರಯಿಸುವುದರಲ್ಲಿ ಆನಂದ ವ್ಯಕ್ತಪಡಿಸುತ್ತವೆ. ಉದಾಹರಣೆಗೆ ಲೈಟಿನ ಸ್ವಿಚ್ಚನ್ನು ಹಚ್ಚುವುದು, ಆರಿಸುವುದು ಮಾಡುವಾಗ ಅದಕ್ಕೆ ಅವು ಪ್ರತಿಕ್ರಯಿಸುತ್ತವೆ. ಸುತ್ತಣ ವಾತಾವರಣದ ಬೆಂಬಲವಿದ್ದರೆ, ಮಕ್ಕಳು ಧೃಡ ಏಕಾಗ್ರತೆಯಿಂದ ಕಾರ್ಯ ಪ್ರವೃತ್ತರಾಗುವುದರಲ್ಲಿ ಸಂತೋಷಪಡುತ್ತವೆ. ಕೆಲಸದಲ್ಲಿ ತೀವ್ರ ತೊಡಗುವಿಕೆ ಮತ್ತು ಏಕಾಗ್ರತೆ, ಇವು ಸಂತೋಷದ ಪ್ರಮುಖ ಅಂಗಗಳು; ಬೇರೊಂದು ರೀತಿಯಲ್ಲಿ ಹೇಳುವುದಾದರೆ, ಕೂಲಿ ಮಾಡುವುದು ಹೊರೆಯೆನಿಸಬಹುದು; ಆದರೆ ಕೆಲಸವು ನಮಗೆ ದೊರಕಿದ ಒಂದು ವಿಶಿಷ್ಟ ಸ್ಥಾನವೇ ಆಗಿದೆ. 'ಕೆಲಸ'ವೆಂದರೆ ನನ್ನ ದೃಷ್ಟಿಯಲ್ಲಿ ನಾವು ಯಾವುದನ್ನು ಸ್ವತಃ ಆಯ್ಕೆ ಮಾಡುತ್ತೇವೆಯೋ ಅದು. ನಮ್ಮೆಲ್ಲ ಪರಿಣತಿಯನ್ನು ಇಂಥ ಕೆಲಸ ಬಯಸುತ್ತದೆ ಮತ್ತು ಸಮಾಜಕ್ಕೆ ಅದರಿಂದ ಪ್ರಯೋಜನವೂ ಆಗುತ್ತದೆ. ಕೂಲಿಯೂ ಸಮಾಜಕ್ಕೆ ಪ್ರಯೋಜನಕ್ಕೆ ತರುವಂಥ ಕಾರ್ಯವೇ ಆದರೂ, ಅದು ನಮ್ಮ ಮೇಲೆ ಹೇರಿರುವಂಥದ್ದು, ಹಾಗೂ ನಮ್ಮ ಎಲ್ಲ ಕೌಶಲ್ಯವನ್ನೂ ಅದು ಬಯಸಬೇಕೆಂಬುದಿಲ್ಲ.

ಜೀವನದಲ್ಲಿ 'ಕೆಲಸ'ದಷ್ಟೇ ಅಧಿಕ ಆನಂದ ಕೊಡುವಂಥ, ಹಾಗೂ ನಮ್ಮೆಲ್ಲ ಪರಿಶ್ರಮ ಮತ್ತು ಕೌಶಲ್ಯವನ್ನೂ ಒಟ್ಟಿಗೆ ಕೇಂದ್ರೀಕರಿಸಿ ಮಾಡುವಂಥ ಕೆಲವು ಸಂಗತಿಗಳಿವೆ. ಇಂಥ ಸಂತೋಷದ ಘಳಿಗೆಗಳು, – ಮನಃಶಾಸ್ತ್ರಜ್ಞ ಮಿಹಾಲಿ ಚಿಖ್‌ರೆಝೆನ್ ಮಿಹಾಲಿ ಹೇಳುವ "ಪ್ರವಹಿಸುವ ಅನುಭವಗಳು" – ಜನಪ್ರಿಯ ನಂಬಿಕೆಗೆ ವಿರುದ್ಧವಾಗಿ ವಿಶ್ರಾಂತಿಯ ಸಮಯದಲ್ಲಿ ಒದಗದೆ 'ಕೆಲಸ' ಮಾಡುತ್ತಿರುವಾಗಲೇ ಒದಗಿಬರುವಂಥವುಗಳಾಗಿವೆ. ಈ ಪ್ರವಾಹದಲ್ಲಿ ನಾವು ಸಂಪೂರ್ಣ ತಲ್ಲೀನರಾಗಿರುತ್ತೇವೆ, ಪರಿಶ್ರಮವಿಲ್ಲದೆ, ಕಾರ್ಯಸಾಧನೆಯಲ್ಲಿ ತೊಡಗಿರುತ್ತೇವೆ. ಇಂಥ ತಲ್ಲೀನತೆಯ ಪ್ರವಾಹವು ಇನ್ನೂ ಅನೇಕ ಸಂದರ್ಭಗಳಲ್ಲಿಯೂ, ಉದಾಹರಣೆಗೆ – ಅಗಾಧ ಪ್ರೀತಿಯ ಸ್ಥಿತಿಯಲ್ಲಿ, ಸುಂದರವಾದ ಸಂಗೀತವನ್ನು ಕೇಳುವಲ್ಲಿಯೂ ಆಗುತ್ತದೆ. ಆದರೆ ಕೆಲಸದಲ್ಲಿ ಪ್ರವೃತ್ತರಾಗಿದ್ದಾಗ ಆಶ್ಚರ್ಯವೆನ್ನಿಸುವಂತೆ ಇದು ಉಂಟಾಗುವುದು ಹೆಚ್ಚು ಖಚಿತ. ಈ ಸ್ಥಿತಿಯಲ್ಲಿ ವ್ಯಕ್ತಿಯು ತನ್ನ ದೇಹ ಮತ್ತು ಜಗತ್ತಿನ ಸಂಬಂಧದಲ್ಲಿ ಹೆಚ್ಚು ಸಾಂಗತ್ಯವನ್ನು ಪಡೆದವನಾಗಿರುತ್ತಾನೆ ಮತ್ತು ವಿಶಾಲಗೊಳಿಸುವ ಪ್ರಕ್ರಿಯೆಯಲ್ಲಿ ತೊಡಗಿರುತ್ತಾನೆ. ಕಾಲದ ಪ್ರಜ್ಞೆ ಸಿಧಾನಗೊಂಡಂತೆ ಅನ್ನಿಸುತ್ತದೆ; ಹಾಗೂ ಹೆಚ್ಚು ಸಮಯವು ನಮ್ಮ ಕೈಯಲ್ಲಿದ್ದಂತೆ ತೋರುತ್ತದೆ. ಅತ್ಯಂತ ಶ್ರೇಷ್ಠ ಕೆಲಸವೆನ್ನುವುದನ್ನು ಅಕ್ಷರಶಃ ಗುರುತಿಸುವುದಾದರೆ ಅದು 'ಪೂಜೆ' ಅಥವಾ 'ಧ್ಯಾನ'ವೇ ಆಗಿದೆ. ಇದು ಕುತೂಹಲ, ಆಶ್ಚರ್ಯ ಹಾಗೂ ವಿಸ್ಮಯಗಳನ್ನೂ ಉಂಟುಮಾಡುತ್ತದೆ. ಈ ಅರ್ಥದಲ್ಲಿಯೇ ನಿಮಗೊಂದು 'ನೌಕರಿ' ಸಿಕ್ಕರೆ ಅದು 'ಕೆಲಸ'ವೇ ಆಗಿರಲಿ ಎಂದು ನಾನು ಆಶಿಸುತ್ತೇನೆ.

ಈ ಘಟ್ಟದಲ್ಲಿ ನಿಮಗೆ ಸರಿಯಾಗಿಯೇ ಕೆಲವೊಂದು ಪ್ರಶ್ನೆಗಳು ಉದ್ಭವವಾಗಬಹುದು :- ಈ ಕೆಟ್ಟ ಕಾಲದಲ್ಲಿ ಇಂಥ 'ಕೆಲಸ' ಸಿಗಲು ಸಾಧ್ಯವೇ? ನೀವು ಸಿವಿಲ್ ಇಂಜಿನಿಯರ್ ಆಗಿದ್ದು, ನಿಮ್ಮ ಸಾಮರ್ಥ್ಯವೆಲ್ಲವನ್ನೂ ಕೊಟ್ಟು 'ಕೆಲಸ' ಮಾಡಬೇಕೆಂದಿರುವಾಗ, ನಿಮ್ಮ ಬಾಸ್ ತಾನು ಲಾಭ ಮಾಡಿಕೊಳ್ಳಲು ನಿಮಗೆ ಕೆಟ್ಟ ಕಟ್ಟಡದ ಸಾಮಗ್ರಿಗಳನ್ನು ಬಳಸಲು ಒತ್ತಾಯಿಸಿದರೆ ಏನು ಮಾಡುವುದು? ; ಅಥವಾ ನೀವು ವೈದ್ಯಕೀಯ ಸಾಮಗ್ರಿಗಳನ್ನು ಮಾರುವವರಾಗಿದ್ದು, ನಿಮ್ಮ ಕೌಶಲ್ಯವನ್ನು ಬಳಸುವ ಬದಲು, ವೈದ್ಯರಿಗೆ ಲಂಚ ಕೊಟ್ಟು ಸಾಮಗ್ರಿಗಳನ್ನು ಕೊಳ್ಳಲು ಪ್ರೇರೇಪಿಸುವಂತೆ ನಿಮ್ಮ ಕಂಪನಿಯು ಉತ್ತೇಜನ ಕೊಟ್ಟರೆ ಏನು ಮಾಡುವುದು? ಅಥವಾ ನೀವು ಶಿಕ್ಷಕರಾಗಿದ್ದು, ಪಠ್ಯಕ್ರಮ ಹಾಗೂ ಸಂಸ್ಥೆಯ ನಿಯಮಗಳಿಗೆ ಕಟ್ಟು ಬಿದ್ದು ನಿಮ್ಮ ಸೃಜನಾತ್ಮಕ ಸಾಮರ್ಥ್ಯವನ್ನು ಬಿಚ್ಚಿಡುವ ಅವಕಾಶಗಳಿಲ್ಲದಿದ್ದರೆ ಏನು ಮಾಡುವುದು? ಇಂಥ ದಿನನಿತ್ಯದ ದ್ವಂದ್ವಗಳಿಗೆ ಹಾಗೇ ಸರಳವಾದ ಉತ್ತರವನ್ನು ಕೊಡಲು ಸಾಧ್ಯವಿಲ್ಲ. ಪ್ರತಿ

ಯೊಬ್ಬ ವ್ಯಕ್ತಿಯೂ ಆಯಾ ಸಂದರ್ಭದಲ್ಲಿ ಏನು ಮಾಡಬೇಕೆಂಬುದನ್ನು ಯೋಚಿಸಿ, ನಿಶ್ಚಯಿಸಬೇಕಾಗುತ್ತದೆ. ಇಂಥ ನಿಶ್ಚಯಕ್ಕೆ ಸಿದ್ಧಗೊಳಿಸುವುದಕ್ಕೆ ಸಂಬಂಧ ಪಟ್ಟಂತೆ ಒಂದು ಸಣ್ಣ ಸಲಹೆಯನ್ನು ನಾನು ಕೊಡಬಲ್ಲೆ. ಅದೇನೆಂದರೆ, ನಿಮ್ಮ ಕ್ರಿಯೆ ಮತ್ತು ನಿಶ್ಚಯಕ್ಕೆ ಏನೇ ಹಲವಾರು ಕಾರಣಗಳು ಇದ್ದಿರಬಹುದಾದರೂ, ಅತ್ಯಂತ ಉನ್ನತವೂ ಹಾಗೂ ಮುಖ್ಯವಾದ ಪರಿಗಣನೆ ಯಾವುದಾಗಿರಬೇಕೆಂದರೆ - ನೀವು ತೆಗೆದುಕೊಳ್ಳುವ ನಿಶ್ಚಯವು ನಿಮ್ಮ ವೈಯಕ್ತಿಕ ವ್ಯಕ್ತಿತ್ವದ ಅನನ್ಯತೆಯ ಸೂಕ್ಷ್ಮತೆಗೆ ಮತ್ತು ಸಂವೇದನೆಗೆ ತಕ್ಕುದಾಗಿರಬೇಕು. ಇನ್ನೊಂದು ರೀತಿಯಲ್ಲಿ ಈ ಮಾತನ್ನು ಹೀಗೆ ಹೇಳಬಹುದು– 'ನೀವು ಆಯ್ಕೆ ಮಾಡಿಕೊಳ್ಳುವ ದಾರಿಯು, ನೀವು ಗಾಢವಾಗಿ ನಂಬಿರುವ 'ನಾನು ಎಂಥವನು?' ಎಂಬ ಎಚ್ಚರಕ್ಕೆ ಸರಿ ಹೊಂದುವಂಥದ್ದಾಗಿರಬೇಕು. ನಾನು ಈ ಸಂದರ್ಭದಲ್ಲಿ ನಮ್ಮ ಪ್ರಾಚೀನ ನಾಣ್ಣುಡಿಯಾದ "ನೀನು ನಿನ್ನ ಆತ್ಮಕ್ಕೆ ಸತ್ಯವಾಗಿರು" ಎಂಬ ಮಾತಿಗಿಂತ ಹೆಚ್ಚಿನದೇನನ್ನು ತಮಗೆ ಸೂಚಿಸುತ್ತಿಲ್ಲ.

ಸಮಾಜ ಶಾಸ್ತ್ರಜ್ಞರು ಮನುಷ್ಯನ ವ್ಯಕ್ತಿತ್ವದ ಅನನ್ಯತೆಯ ಕೇಂದ್ರ ಧಾತು 'ನೈತಿಕತೆ' ಎಂದು ಗುರುತಿಸಿದ್ದಾರೆ. ಇದರ ಅರ್ಥವೇನೆಂದರೆ - ಯಾವ ಗೆರೆಯನ್ನು ದಾಟಬಾರದು ಮತ್ತು ಯಾಕಾಗಿ ದಾಟಬಾರದು ಎನ್ನುವುದನ್ನೂ ಆಯಾ ವ್ಯಕ್ತಿಯೇ ನಿರ್ಧರಿಸುತ್ತಾನೆ. ಆದ್ದರಿಂದ ನೀವು ಕೆಲಸದ ಜೀವನಕ್ಕೆ ಪ್ರವೇಶಮಾಡುವ ಮುನ್ನ ನಿಮ್ಮ ಅನನ್ಯತೆಯ ಗ್ರಹಿಕೆಯನ್ನು ಹೆಚ್ಚು ಕಡಿಮೆ ಖಚಿತಪಡಿಸಿಕೊಳ್ಳುವುದು ಬಹು ಮುಖ್ಯವಾದ ವಿಚಾರವಾಗಿದೆ. 'ಹೆಚ್ಚು-ಕಡಿಮೆ' ಎನ್ನುವ ಮಾತನ್ನು ಯಾಕೆ ಬಳಸುತ್ತಿದ್ದೇನೆ ಎಂದರೆ, ಒಬ್ಬ ವ್ಯಕ್ತಿಯ ಅನನ್ಯತೆ ಹಾಗೆ ಜೀವನದುದ್ದಕ್ಕೂ ಒಂದೇ ಬಗೆಯಲ್ಲಿ ಸ್ಥಗಿತಗೊಂಡಿದ್ದಾಗಿರುವುದಿಲ್ಲ. ಏಕೆಂದರೆ, ನಿಮ್ಮ ಪ್ರೌಢ ವಯಸ್ಕ ಜೀವನದ ಅವಧಿಯನ್ನೇ ತೆಗೆದುಕೊಳ್ಳಿ. ಈ ಸಂದರ್ಭದ ಜೀವನದ ನಾಟಕದಲ್ಲಿ 'ನಾನು ಯಾರು'? ಎನ್ನುವ ಪ್ರಶ್ನೆಯು ನೀವು ವಹಿಸಬೇಕಾದ ಅನೇಕ ಪಾತ್ರಗಳ ಮೇಲೆ ನಿಂತಿರುತ್ತದೆ ಮತ್ತು ಅನಿವಾರ್ಯವಾದ ಗೊಂದಲಗಳನ್ನೂ ಹುಟ್ಟಿಸುತ್ತದೆ. ಮುಖ್ಯವಾದ ಅಂಶವೇನೆಂದರೆ, ನೀವು ಯಾರು? ಎಲ್ಲಿಂದ ಬಂದಿದ್ದೀರಿ? ಎಲ್ಲಿಗೆ ಹೋಗುತ್ತೀರಿ? ಎಲ್ಲಿ ನೀವು ಜಯಗಳಿಸಿದ್ದೀರಿ; ಎಲ್ಲಿ ಅನುತ್ತೀರ್ಣರಾಗಿದ್ದೀರಿ?– ಎಂಬ ಪ್ರಶ್ನೆಗಳು ನಿಮ್ಮ ಒಳಗಿನ ಆತ್ಮದೊಡಗಿನ ಸಂಭಾಷಣೆಯಾಗಿ ಸದಾ ಇದ್ದೇ ಇರುತ್ತವೆ. ಈ ಸಂಭಾಷಣೆಗಳು ನಿಮ್ಮೊಳಗಿನ ಸ್ವಗತಗಳಾಗಿರುತ್ತವೆ; ಅನೇಕ ಬಾರಿ ಅಪ್ರಜ್ಞಾಪೂರ್ವಕ ನೆಲೆಯವಾಗಿರುತ್ತವೆ; ಇವು ನಿಮ್ಮ ಅನನ್ಯತೆಯ ಚಹರೆಯನ್ನೂ ಕಾಪಿಡುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಇವುಗಳೇ ನಿಮ್ಮ ಅಂತರ್ ಜೀವನದ ಅಗಾಧ ಐಶ್ವರ್ಯ. ಇವುಗಳ ಗೈರುಹಾಜರಿಯಲ್ಲಿ, ಈ ಜಗತ್ತಿನ ಸಕಲ ಸಂಪತ್ತೂ ನಿಮ್ಮ ಮಾನಸಿಕ ಬಡತನವನ್ನು ಮುಚ್ಚಿಡಲಾರದು.

ನಿಮ್ಮ ಅನನ್ಯತೆ ಹಾಗೂ ನಿಮ್ಮತನಕ್ಕೆ ಸಾಂಗತ್ಯವಲ್ಲದ ಅನೇಕ ಕ್ರಿಯೆಗಳನ್ನು ಮಾಡಬೇಕಾದ ದ್ವಂದ್ವಕ್ಕೆ ಸಿಲುಕುವ ಇಂದಿನ ಸ್ಥಿತಿಗತಿಗಳನ್ನು ಕುರಿತು ಈಗ ಯೋಚನೆ ಮಾಡೋಣ. ನಾವು ಇನ್ನೂ ತರುಣರಾಗಿರುವಾಗ ಈ ಸಮಸ್ಯೆ ಎದ್ದು ಕಾಡುತ್ತದೆ. 'ನಾನು ಯಾರು', 'ನನ್ನ ಅನನ್ಯತೆ ಏನು' ಎನ್ನುವುದು ಇನ್ನೂ ಗಟ್ಟಿಗೊಳ್ಳದ, – ಅಳ್ಳಕವಾಗಿಯೇ ಇರುವ ಈ ಸಂದರ್ಭದಲ್ಲಿ 'ಏನು ಮಾಡಬೇಕು' ಎನ್ನುವುದು ಹೇಗೆ ಗೊತ್ತಾಗುತ್ತದೆ? ಈ ಸಂದರ್ಭದಲ್ಲಿ ಮನಃಶಾಸ್ತ್ರಜ್ಞರು ಹೇಳುವ 'ದರ್ಪಣ ಪರೀಕ್ಷೆ' ಯನ್ನು ನಾನು ನಿಮಗೆ ಶಿಫಾರಸ್ಸು ಮಾಡುತ್ತೇನೆ. ಈ ಪರೀಕ್ಷೆ ಬಹಳ ಸರಳವಾದದ್ದು. ನೀವು ಸಂದೇಹಾಸ್ಪದವಾದ, ಗೊಂದಲಮಯ ಹೆಜ್ಜೆಯನ್ನು ಇಡಬೇಕಾದ ಪ್ರಸಂಗ ಬಂದಾಗ ಅಥವಾ ನೀವು ಮಾಡುತ್ತಿರುವುದು ಸರಿ ಎನ್ನುವುದರ ಬಗ್ಗೆ ನಿಮಗೆ ಸಂದೇಹ ಹುಟ್ಟಿದಾಗ, ಬೆಳಗ್ಗೆ ಶೇವ್ ಮಾಡುವಾಗಲೋ, ಬಟ್ಟೆ ಹಾಕಿಕೊಳ್ಳುವ ಸಂದರ್ಭದಲ್ಲೋ ಕನ್ನಡಿಯ ಮುಂದೆ ನಿಂತುಕೊಳ್ಳಿ. ಕನ್ನಡಿಯಲ್ಲಿ ನಿಮ್ಮ ಮುಖವನ್ನೇ ದಿಟ್ಟಿಸಿ ನೋಡಿ. ನೀವು ಆ ಮುಖವನ್ನು ಇಷ್ಟಪಡುತ್ತೀರಾ? ನಿಮಗೆ ಆ ಮುಖ ಆನಂದವನ್ನೂ, ಶಾಂತತೆಯನ್ನೂ, ಹಗುರ ಭಾವನೆಯನ್ನೂ ಕೊಡುತ್ತದೆಯೆ? ಅಥವಾ ಸ್ವಲ್ಪ 'ಅಧಃಪತನಕ್ಕೆ ಇಳಿದೆ' ಎಂಬ ಭಾವವನ್ನು ಅದು ಸೂಚಿಸುತ್ತದೆಯೇ? ಕೊನೆಯ ಭಾವವೇನಾದರೂ ಮೂಡಿದಲ್ಲಿ ನೀವು ಮಾಡಬೇಕೆಂದಿರುವ ಕೆಲಸ ನಿಮ್ಮ ವ್ಯಕ್ತಿತ್ವದ ಅನನ್ಯತೆಗೆ ಹೊಂದುವುದಿಲ್ಲ ವೆಂದೇ ಅರ್ಥ.

ಅನೇಕ ಜನರ ಸಂದರ್ಭದಲ್ಲಿ ಈ 'ದರ್ಪಣ ಪರೀಕ್ಷೆ' ಕೆಲಸ ಮಾಡುವುದಿಲ್ಲ. ಉದಾಹರಣೆಗೆ – ನಂಬಿದ ಜನಕ್ಕೆ ಅವರ ಬೆಲೆಬಾಳುವ ವಸ್ತುಗಳೇ ದಕ್ಕದ ಹಾಗೆ ತನ್ನೆಲ್ಲ ಕುಶಲತೆಯನ್ನೂ ತೋರುವ ವೃತ್ತಿನಿರತ ಮೋಸಗಾರ, ಪೋಲಿಸರಿಗೆ ಚಳ್ಳೆಹಣ್ಣು ತಿನ್ನಿಸುವುದರಲ್ಲಿ ಮಜಾ ತೆಗೆದುಕೊಳ್ಳುವ ಸ್ಮಗ್ಲರ್, ಚುನಾವಣೆಯ ಸಂದರ್ಭದಲ್ಲಿ ಮೈಲುದ್ದ ಆಶ್ವಾಸನೆಗಳನ್ನೂ ಕೊಡುವ ರಾಜಕಾರಣಿ – ಇಂಥ ಜನರು ಬೆಳಗಿನ ಹೊತ್ತು ತಮ್ಮ ಮುಖ ನೋಡಿಕೊಂಡಾಗ ತುಂಬ ಸಂತೋಷ, ಸಮಾಧಾನಪಡುತ್ತಾರೆ. ಇಂಥ ಕಡೆಗಳಲ್ಲಿ 'ವೈಯಕ್ತಿಕ ದರ್ಪಣ ಪರೀಕ್ಷೆ'ಯ ಜೊತೆಗೆ 'ಸಾರ್ವತ್ರಿಕ ಪರೀಕ್ಷೆ'ಯನ್ನು ಮಾಡಿಕೊಳ್ಳುವ ಅವಶ್ಯಕತೆ ಹುಟ್ಟುತ್ತವೆ: ಅಂದರೆ ಒಂದು ಹೊಸ, ಅಧಿಕ (ಹೆಚ್ಚುವರಿ) ಪ್ರಶ್ನೆಯನ್ನು ಕೇಳಿಕೊಳ್ಳಬೇಕಾಗುತ್ತದೆ. ಕೇಳಿಕೊಳ್ಳಬೇಕಾದ ಪ್ರಶ್ನೆ ಹೀಗಿರಬೇಕಾಗುತ್ತದೆ : 'ನನ್ನ ಹಾಗೆ ಎಲ್ಲರೂ ವರ್ತಿಸುವಂತಾದರೆ, ಅಂಥ ಜಗತ್ತಿನಲ್ಲಿ ಬದುಕುವ ಪರಿ ಹೇಗಿರುತ್ತದೆ?' 'ಕೆಲಸ'ದ ಸಂದಿಗ್ಧ ಪರಿಸ್ಥಿತಿಗಳಲ್ಲಿ ಬಹು ಮುಖ್ಯವಾದ ಆಯ್ಕೆಯನ್ನು ಮಾಡಬೇಕಾದ ಪ್ರಸಂಗ ಬಂದಾಗ,

'ವೈಯಕ್ತಿಕ ಹಾಗೂ ಸಾರ್ವತ್ರಿಕ ದರ್ಪಣ ಪರೀಕ್ಷೆಯನ್ನೂ ಮಾಡಿಕೊಂಡು, ನಿಮ್ಮ ಆಯ್ಕೆಯು ನಿಮ್ಮೊಳಗಿನ ಅಂತರಾತ್ಮಕ್ಕೆ ಹೊಂದುವುದೇ ಅಥವಾ ಅದನ್ನು ಧಿಕ್ಕರಿಸುವುದೇ ಎಂದು ನೋಡಿಕೊಳ್ಳುವುದು ಒಳ್ಳೆಯ ಉಪಾಯವೇ ಆಗಿದೆ.

ಸಂತೋಷದ ಮೊದಲ ಘಟಕ 'ಪ್ರೀತಿ' ಇದೆಯಲ್ಲ, ಅದರ ವಿಚಾರ ನಿಮಗೆ ಗೊತ್ತಾ? ಅದರ ಅದ್ಭುತವಾದ ಸ್ವರೂಪಗಳ ಬಗ್ಗೆ ಸಂಪುಟಗಟ್ಟಲೆ ಈಗಾಗಲೇ ಬರೆದದ್ದಾಗಿದೆ; ಇನ್ನು ಮುಂದೆ ನಿರಂತರವಾಗಿ ಬರೆಯುಲಿಕ್ಕೂ ಉಂಟು. ಎಲ್ಲ ದೇಶಗಳ, ಎಲ್ಲ ಕಾಲಗಳ ಕವಿಗಳು ಪ್ರೀತಿಯ ತೀವ್ರತೆ ಹಾಗೂ ಲೈಂಗಿಕ ತೃಪ್ತಿಯನ್ನು ಕುರಿತು ಹಾಡಿದಷ್ಟೇ ಅಥವಾ ಅದಕ್ಕಿಂತ ಹೆಚ್ಚು ಅದರ ಅನುಪಸ್ಥಿತಿ ಹಾಗೂ ಕೊರತೆಯ ಬಗ್ಗೆಯೂ ಹಾಡಿದ್ದಾರೆ. ಪ್ರೀತಿ ಮತ್ತು ಲೈಂಗಿಕತೆಯು ಜೀವವನ್ನು ಸೃಷ್ಟಿಸುವುದು ಮಾತ್ರವಲ್ಲ; 'ಕುಟುಂಬ' 'ಗೆಳೆತನ' ಮತ್ತು 'ಸಮುದಾಯ'ಗಳೆಂಬ ಪ್ರೀತಿಯ ಗಂಟಿನಿಂದ ಜನರನ್ನು ಒಗ್ಗೂಡಿಸ ಬಲ್ಲುದೆನ್ನುವುದನ್ನೂ ನಾವು ತಿಳಿಯಲು ಮರೆತಿದ್ದೇವೆ.

ಪ್ರೀತಿಯ ಬಹು ಮುಖ್ಯ ಹಾಗೂ ಅತ್ಯಗತ್ಯ ಧಾತುವೂ, ಸಂತೋಷದ ಅವಿಭಾಜ್ಯ ಅಂಗವೂ, ಒಂದು ಅಂಶವೂ ಆದ 'ಸಾಮೀಪ್ಯ'ದ ಬಗ್ಗೆ ನಾನು ಈಗ ಮಾತನಾಡಲು ಇಚ್ಛಿಸುತ್ತೇನೆ. 'ಸಾಮೀಪ್ಯ'ದ 'ಶುಷ್ಕ' ಅರ್ಥವನ್ನು ಕೊಡಲು ನನಗೆ ಇಷ್ಟವಿಲ್ಲ. ಅದರ ಬದಲು ಅದರ 'ರಸ' ಅಂದರೆ ಮೂಲ ಸತ್ವವನ್ನು ಹೇಳಿದ ಕವಿಯನ್ನೇ ಮಾತನಾಡಲು ಬಿಡುತ್ತೇನೆ. ರಾಮನ ತೋಳಿನ ಮೇಲೆ ಮಲಗಿದ ಸೀತೆಯನ್ನು ನೋಡುತ್ತಾ ರಾಮನು 'ಸಾಮೀಪ್ಯ'ವನ್ನು ಕುರಿತು ಮಾಡಿದ ಆಲೋಚನೆಯನ್ನು ೮ನೇ ಶತಮಾನದ ಸಂಸ್ಕೃತ ಕವಿ ಭವಭೂತಿಯು ಹೀಗೆ ವರ್ಣಿಸುತ್ತಾನೆ.

'ಎಲ್ಲಿ ಸುಖ-ದುಃಖದ ಅನುಭವವು ಭಿನ್ನವಲ್ಲವೋ !
ಎಲ್ಲಿ ಹೃದಯಕ್ಕೊಂದಷ್ಟು ವಿಶ್ರಾಂತಿ ದಕ್ಕುತ್ತದೋ !
ಎಲ್ಲಿ ಕಾಲದೊಡನೆ ಭಾವನೆಗಳು ಬತ್ತುವುದಿಲ್ಲವೋ !
ಎಲ್ಲಿ (ವಯಸ್ಸಿನೊಡನೆ) ಕಾಲ ಪ್ರವಾಹದಲ್ಲಿ ಎಲ್ಲ ರಹಸ್ಯಗಳು ಬಿಚ್ಚಿ
ಮುಕ್ತವಾಗುವವೋ! ಮತ್ತು
ಎಲ್ಲಿ ಅತ್ಯಗತ್ಯ ಪ್ರೀತಿ ಪಕ್ವವಾಗುವುದೋ
ಆ ಸ್ಥಿತಿ
'ಸಾಮೀಪ್ಯ'ವಲ್ಲದೇ ಇನ್ನೇನು?'

ಪ್ಲೇಟೋನ 'ಸಿಂಪೋಸಿಯಂ'ನಲ್ಲಿ, ಅವನು ಅರಿಸ್ಟೊಫೆಸಿಸ್‌ನ ಮೂಲಕ ಹೇಳಿಸುವ ಪುರಾಣಕಥೆಯ ಪ್ರಕಾರ, ಮನುಷ್ಯನು ತನ್ನ ಜೀವವನ್ನು ಎಂಟು ಕೈಕಾಲುಗಳ, ಎರಡು ಮುಖಗಳ, ವಿರುದ್ಧ ದಿಕ್ಕಿನಲ್ಲಿರುವ ಎರಡು ಲೈಂಗಿಕ

ಅಂಗಾಂಗಗಳ – ವೃತ್ತಾಕೃತಿಯ ಜಂತುವಾಗಿ ಪ್ರಾರಂಭಿಸಿದ. ಈ ಜಂತುಗಳು ಎಷ್ಟು ಬಲಶಾಲಿಯಾಗಿದ್ದುವೆಂದರೆ, ಅವು ದೇವರುಗಳಿಗೆ ಒಂದು ದೊಡ್ಡ ಗಂಡಾಂತರವನ್ನು ಒಡ್ಡಿದವು. ಅವುಗಳು ದೇವರುಗಳ ಮೇಲೆ ಧಾಳಿ ಮಾಡಿದಾಗ ಝಿಯಸ್ ಎನ್ನುವವ ಈ 'ಹ್ಯುಬ್ರಿಸ್'ನ ವಿರುದ್ಧ ತಿರುಗಿ ಬಿದ್ದ. ಅವುಗಳನ್ನು ಅವನು ಸಂಪೂರ್ಣ ನಾಶಮಾಡದೆ ಎರಡು ಭಾಗಗಳಾಗಿ ಕತ್ತರಿಸಿದ. ಅಲ್ಲಿಂದ ಮುಂದೆ, ಮನುಷ್ಯನ ಈ ಎರಡು ಭಾಗಗಳು-ಒಂದನ್ನೊಂದು ಇಚ್ಛೆ ಪಡುತ್ತ ಹತ್ತಿರ ಬಂದವು; ಒಂದು ಇನ್ನೊಂದನ್ನು ತಮ್ಮ ಬಾಹುಗಳಿಂದ ಅಪ್ಪಿಕೊಳ್ಳುತ್ತ, ಒಂದಾಗಲು ಹಾತೊರೆದವು. ಯಾವ ಕಾರ್ಯವನ್ನೂ ಪ್ರತ್ಯೇಕವಾಗಿ ಮಾಡಲು ಬಯಸದೆ, ಇವುಗಳು ಒಂದು ಘಟ್ಟದಲ್ಲಿ ತೀವ್ರ ಸ್ವನಿರ್ಲಕ್ಷ್ಯ ಹಾಗೂ ಹಸಿವಿನಿಂದ ಸಾಯುವ ಮಟ್ಟಕ್ಕೆ ಬಂದವು. ತಮ್ಮನ್ನು ತಾವು ನಾಶಗೊಳಿಸಿಕೊಳ್ಳುವ ಕ್ರಿಯೆಯಲ್ಲಿ ಅವು ಇದ್ದಾಗ ಝಿಯಸ್‌ನು ಅವುಗಳ ಮೇಲೆ ಕರುಣೆ ತೋರಿ, ಅವುಗಳ ಲೈಂಗಿಕ ಅಂಗಗಳನ್ನು ಎದುರು ಬದಿರಾಗುವಂತೆ ತಿರುಗಿಸಿದ – ಅವುಗಳು ಸಂಭೋಗದಲ್ಲಾದರೂ ಒಂದಾಗುವ ಹಾಗೆ ಅಪ್ಪಿಕೊಳ್ಳಲಿ – ಎಂದು. ಅವುಗಳು ಆ ಕ್ಷಣದಲ್ಲಾದರೂ ಒಂದಾದ ತೃಪ್ತಿ ಪಟ್ಟು, ನಂತರ ತಮ್ಮ ತಮ್ಮ ಕೆಲಸಕಾರ್ಯಗಳಿಗೆ ಹೋಗಬಹುದಲ್ಲ! ಪರಸ್ಪರ ನಮ್ಮೊಳಗೆ ಇರುವ ಮೋಹ ಎಷ್ಟು ಅನಾದಿಯೆಂದರೆ, ಅದು ಮತ್ತೆ ಮತ್ತೆ ಎರಡನ್ನು ಒಂದು ಮಾಡಿ ನಮ್ಮ ಮೂಲ ಪ್ರಕೃತಿಯನ್ನು ಗಳಿಸಿಕೊಳ್ಳುವಂಥದ್ದು; ಮನುಷ್ಯ ಜೀವಿಯ ಈ ಇಬ್ಭಾಗದ ಗಾಯದ ಸ್ಥಿತಿಯನ್ನು ವಾಸಿ ಮಾಡಲು ಬಯಸುವಂಥದ್ದು.

ಉಪನಿಷದ್‌ಗಳು ಸೃಷ್ಟಿಸಿದ ಸೃಷ್ಟಿಯ ಕಥೆಯ ಪ್ರಕಾರ,–'ಸೃಷ್ಟಿಯ ಪ್ರಾರಂಭದಲ್ಲಿ ಪುರುಷನೊಬ್ಬನೇ ಇದ್ದ. ಸುತ್ತಣ ನೋಟದಲ್ಲಿ ಅವನಿಗೆ ಆನಂದವೇ ಸಿಗಲಿಲ್ಲ. (ಈಗಲೂ ಸಹ)ಮನುಷ್ಯ ಒಂಟಿಯಾಗಿದ್ದರೆ ಸಂತೋಷವಿರುವುದಿಲ್ಲ. ಆದ್ದರಿಂದ ಅವನು ಇನ್ನೊಂದನ್ನು ಬಯಸಿದ. ಆತ್ಮೀಯವಾಗಿ ಅಪ್ಪಿಕೊಂಡ ಗಂಡು – ಹೆಣ್ಣಾಗಿ ಅವನು ರೂಪುಗೊಂಡ: ತನ್ನನ್ನು ಇಬ್ಭಾಗ ಮಾಡಿಕೊಂಡ. ಇದರಿಂದಲೇ ಗಂಡ – ಹೆಂಡತಿಯ ಉದ್ಭವವಾಯಿತು.

ಈ ಬಗ್ಗೆಯೇ, ಕುರಾನಿನಲ್ಲಿ ಒಂದು ಮಾತಿದೆ : 'ನಿನ್ನ ಒಬ್ಬನವೇ ಆತ್ಮವನ್ನು, ಆ ದೊಡ್ಡವನು ಸೃಷ್ಟಿಸಿದ; ಮತ್ತು ಅಲ್ಲಿಂದಲೇ ಅದರ ಹೆಣ್ಣುತನವನ್ನು ರೂಪಿಸಿದ. ಏಕೆಂದರೆ ಆಗ ಮಾತ್ರ ಅವಳಲ್ಲಿ ಅವನಿಗೆ ನಂಬಿಕೆ ಹಾಗೂ ಸಮಚಿತ್ತ ಇಡಲು ಸಾಧ್ಯವಾಗಬಹುದೆಂಬ ಭಾವ'.

ಕುರಾನಿನ ಈ ಹೇಳಿಕೆ ಹಾಗೂ ಒಂದೆ ನಾನು ಹೇಳಿದ ಪುರಾಣ ೆಗಳಲ್ಲಿ – ಐಂದ್ರಿಯಿಕ ಭೋಗಾಸಕ್ತಿಯ ಮೇಲೆ ತೀವ್ರವಾದ ಉದಾಸೀನತೆಯು ಎಡೆದು ಕಾಣುವ ಹಾಗಿದೆ. ಆದ್ದರಿಂದಲೇ ಗಂಡು-ಹೆಣ್ಣು ಒಂದಾಗುವಲ್ಲಿ ಂಗಿಕ ಆಸೆಯ ಪಾತ್ರವನ್ನು ಇವು ಮುಂದು ಮಾಡುವುದಿಲ್ಲ. ತಾನು ಕಟ್ಟಿದ ರಾಣ ಕಥೆಯ ಬಗ್ಗೆಯೇ ವಿಚಾರ ಮಾಡುತ್ತ ಪ್ಲೇಟೊ ಹೀಗೆ ಹೇಳುತ್ತಾನೆ. ಂಡು – ಹೆಣ್ಣಿನ ನಡುವಣ ತೀವ್ರ ಸೆಳೆತಕ್ಕೆ ಕೇವಲ ಪ್ರೇಮಿಗಳ ಸಂಭೋಗಾ ುಯೇ ಕಾರಣವೆಂದು ಹೇಳಲಿಕ್ಕಾಗುವುದಿಲ್ಲ. ಎರಡೂ ಅಂತರಾತ್ಮಗಳು ತೀವ್ರ ಗಿ ಬಯಸುವ, ಹೇಳಲಾಗದ, ಕತ್ತಲಿನಲ್ಲಿ ತಡಕಾಡುವಂತೆ – ತಡಕಾಡುವ, ಗೂ ಸಂದೇಹಭರಿತ ನಿರೀಕ್ಷೆ ಹಾಗೂ ಅಳುಕಿನಲ್ಲಿ ಚಲಿಸುವ-ಬೇರೆ ಏನೋ ಅದು ಇರಬೇಕು". ಈ ಪುರಾಣ ಕಥೆಗಳು 'ಈ ಬೇರೆ ಏನೋ' ನ್ನುವುದನ್ನು ಲೈಂಗಿಕ ಆಸಕ್ತಿಗಿಂತ ಹೆಚ್ಚು ಮೂಲಭೂತವಾದದ್ದೆಂದು ಸ್ಪಷ್ಟವಾಗಿ ುಸುತ್ತವೆ. ನಾನು ಇದನ್ನೇ ಅನ್ಯೋನ್ಯತೆ ಮತ್ತು ಆತ್ಮೀಯತೆಗಾಗಿ ಪಡುವ ಬಲ ಎಂದು ಕರೆಯುತ್ತೇನೆ.

'ಆತ್ಮೀಯತೆ' ಎನ್ನುವುದಕ್ಕೆ, ಇನ್ನೊಂದು ವ್ಯಕ್ತಿಯ ಜೊತೆಗಿನ ಪ್ರೀತಿಯ ೂಲಕ, ಸಂಪೂರ್ಣತೆ ಅಥವಾ ಸಮಗ್ರತೆಯನ್ನು ಸಾಧಿಸುವುದು ಎಂಬ ಗ್ಯಾರ್ಥವನ್ನೂ (ಧ್ವನಿಯನ್ನು)– ನಾವು ಹಚ್ಚಬಹುದಾಗಿದೆ. ಆತ್ಮೀಯತೆಯ ರ್ನುಭವವು, ಪರಿಶುದ್ಧ, ಪ್ರಶಾಂತ, ನಿಷ್ಕಲ್ಮಶವಾದ ನಂಬಿಕೆಯೇ ಆಗಿದೆ. ಡು – ಹೆಣ್ಣಿನ ನಡುವಣ ನಿಜವಾದ ಆತ್ಮೀಯತೆಯಲ್ಲಿ ಗಂಡು ತಾನು ್ಣಿಗಿಂತ ಶ್ರೇಷ್ಠನೆಂದು ತಿಳಿಯುವ ಭಾವಕ್ಕೆ ಅವಕಾಶವಿಲ್ಲ; ಲಿಂಗ ಬೇಧ ಣದಿಂದಾಗಿ ತಮ್ಮಿಬ್ಬರ ಸಂಬಂಧದ ನಡುವೆ ವಿಭಿನ್ನ ನಿಯಮಗಳು ುಯವಾಗುತ್ತವೆ ಎಂದು ತಿಳಿಯಲೂ ಅವಕಾಶವಿಲ್ಲ.

" ಭಾವಾವಶತೆಗಿಂತ, ಅಪರೂಪವಾಗಿರುವ ಗಾಢ ಆತ್ಮೀಯತೆ ನ್ನು ಯಾರಾದರೂ ಅನುಭವಿಸಿದ್ದರೆ ಅವರು ಖಂಡಿತವಾಗಿಯೂ ಈ ೀಯತೆಯು ಜಗತ್ತನ್ನು ಹೊಸ ದರ್ಶನದಲ್ಲಿ ತೋರಿಸಬಲ್ಲುದೆಂದು ಪ್ರಮಾಣ ಡಿ ಹೇಳಬಲ್ಲರು. ಇದುವರೆಗೆ ಕೇವಲ ನೆರಳುಗಳಾಗಿ, ತೆರೆಮರೆಯ ತಿಗಳಾಗಿ ಇದ್ದ ಹಾಗೆ ಕಂಡವರೆಲ್ಲರನ್ನೂ, 'ಆತ್ಮೀಯತೆ'ಯು ಗಾಢವಾಗಿ ಳಿಸಬಲ್ಲದು. ಅದು ಪ್ರೀತಿಸುವವರಲ್ಲಿ ನಿಸರ್ಗ ಮತ್ತು ಕಲೆಯ ಜೊತೆಗಿನ ಂಧವನ್ನು ಇನ್ನಷ್ಟು ಚೈತನ್ಯಮಯಗೊಳಿಸುತ್ತದೆ ಮತ್ತು ಅವನ ಅಥವಾ ಳ ಐಂದ್ರಿಯಿಕ ಹಾಗೂ ಅಧ್ಯಾತ್ಮಿಕ ಪ್ರಕ್ರಿಯೆಗಳನ್ನು ಇನ್ನಷ್ಟು ಗಾಢಗೊಳಿಸು

ನೀವು ವೃತ್ತಿ ಜೀವನಕ್ಕೆ ಒಂದು ಬಗೆಯ ಭ್ರಮನಿರಸನದ ವಾತಾವರಣದಲ್ಲಿ (ಇದನ್ನು 'ಸಿನಿಸಿಜಂ' ಕಾಲ ಘಟ್ಟ ಎಂದು ಹೇಳಲು ನನಗೆ ಇಷ್ಟವಿಲ್ಲ) – ಕಾಲಿಡುತ್ತಿದ್ದೀರಿ ಎನ್ನುವುದು ನನಗೆ ಗೊತ್ತಿದೆ. ಈ ಕಾಲದ ಬಹುಮುಖ್ಯವಾದ ಭ್ರಮನಿರಸನಗಳು ಎರಡು : **ಒಂದನೆಯುದು** – ೧೯ನೆಯ ಮತ್ತು ೨೦ನೆಯ ಶತಮಾನದಲ್ಲಿ ಪ್ರಬಲವಾಗಿದ್ದು, ಭೂಮಿಯ ಮೇಲೆ ಸ್ವರ್ಗವನ್ನು ತರುತ್ತೇವೆ ಎಂದು ನಿಷ್ಫಲ ವಚನ ತೊಟ್ಟಂಥ ಕ್ರಾಂತಿಕಾರಿ ವಿಚಾರಧಾರೆಯ **ಚಳುವಳಿಗಳದು** ಅದರಲ್ಲಿಯೂ ಮುಖ್ಯವಾಗಿ **ಮಾರ್ಕ್ಸ್‌ವಾದಿ** ಚಿಂತನೆಯದು. **ಇನ್ನೊಂದು – ಬಂಡವಾಳಶಾಹಿಯ** ಹಾಗೂ ಅದರ ರೋಗಗ್ರಸ್ಥ ನೆಲೆಗಳಾದ ತಣಿಸಲಾಗದ ದುರಾಸೆ, ಎದ್ದು ಕಾಣುವ ಅಸಮಾನತೆಗಳು, ಉಪಭೋಗದ ಸಾಮಗ್ರಿಗಳನ್ನು ಸ್ವಾರ್ಥಕ್ಕಾಗಿ ತುಂಬಿಕೊಳ್ಳುವುದರ ಆಚೆಗೆ ಎಲ್ಲ ಅರ್ಥಗಳನ್ನು ಕಳೆದುಕೊಂಡುಬಿಟ್ಟಿರುವ ಸ್ಥಿತಿ. ಪರಂಪರೆಯೂ ಈಗ ತನ್ನೆಲ್ಲ ಸತ್ವವನ್ನು ಕಳೆದುಕೊಂಡಿದೆ: ಪರಂಪರಾಗತ ಮೌಲ್ಯಗಳನ್ನು ಸಂಪೂರ್ಣವಾಗಿ ತಿರಸ್ಕರಿಸದಿದ್ದರೂ ಗಂಭೀರವಾಗಿಯೇ ಪ್ರಶ್ನಿಸಲಾಗುತ್ತಿದೆ; ತರುಣ – ತರುಣಿಯರಿಗೆ ಯಾವುದನ್ನು ಅನುಕರಿಸಬೇಕೆಂಬ ಸ್ಪಷ್ಟ ಮಾದರಿ, ದಾರಿ, ಹಾಗೂ ವ್ಯಕ್ತಿತ್ವಗಳ ಕೊರತೆ ಅಗಾಧವಾಗಿದೆ, **ಸಾಂಸ್ಕೃತಿಕವಾಗಿ – ಈ ಕಾಲವನ್ನು 'ಮಿಶ್ರಣದ ಮತ್ತು ಜೋಡಣೆಯ' ಕಾಲವೆಂದು ಕರೆಯಬಹುದು.** ನಾವು ಈಗ ಜಗತ್ತಿನ ಎಲ್ಲ ಭಾಗಗಳ ಮತ್ತು ಎಲ್ಲ ಚಾರಿತ್ರಿಕ ಘಟ್ಟಗಳ ಅನುಪಯೋಗಿ ಶೈಲಿಯ ಎಲ್ಲ '**ತ್ಯಾಜ್ಯ**'ಗಳನ್ನು ವಿವೇಚನೆಯಿಲ್ಲದೆ, ಅಲಂಕಾರವಾಗಿ, ಶೃಂಗಾರವಾಗಿ ಧರಿಸುತ್ತಿದ್ದೇವೆ. ಸಂಸ್ಕೃತಿಯ ವಿಭಿನ್ನ ಶೈಲಿಗಳ ಋಜುತ್ವಕ್ಕೆ ಕಾರಣವಾದ ಆಚರಣೆ ಮತ್ತು ಚರಿತ್ರೆಯ ಪ್ರಾಯೋಗಿಕ ಸಂವೇದನೆಯ ಜೊತೆಗೆ ಸಂವಾದವನ್ನು ನಾವು ಮರೆತೇಬಿಟ್ಟಿದ್ದೇವೆ. ಸಂಗ್ರಹವಾಗಿ ಹೇಳುವುದಾದರೆ, ದಾರಿ ಗುರುತುಗಳಿಲ್ಲದ ಇಂದಿನ ಸಂಕ್ರಮಣ ಮತ್ತು ಬೆರಕೆಯ ಯುಗದಲ್ಲಿ, 'ಸಂತೋಷ'ಕ್ಕಾಗಿ ಹುಡುಕಾಟ ನಿರಂತರವಾಗಿರಬೇಕಾಗುತ್ತದೆ ಮತ್ತು ಸಂತೋಷದ ಮೂಲಸತ್ವಗಳಾದ ಪ್ರೀತಿ, ಕೆಲಸ ಮತ್ತು ನಿರೀಕ್ಷೆ ಇವು ಸಾರ್ವತ್ರಿಕವಾಗಿರಬೇಕಾಗುತ್ತದೆ ಎಂದು ನಾನು ಸೂಚಿಸಬಯಸುತ್ತೇನೆ.

***

ಟಾಲ್‌ಸ್ಟಾಯ್‌ರ 'ಅನ್ನಾ ಕರೆನಿನಾ' ಕಾದಂಬರಿಯಲ್ಲಿ

ನೈತಿಕ ಮೌಲ್ಯ ಹಾಗೂ ಅನೈತಿಕ ವಿಚಾರಗಳ ಸಂಘರ್ಷ

ಬಿ. ಸಿ. ರಾಜ್‌ಕುಮಾರ್

ಜಗತ್ತಿನ ಸರ್ವಶ್ರೇಷ್ಠ ಕಾದಂಬರಿಕಾರರಲ್ಲಿ ಒಬ್ಬರಾದ ಕೌಂಟ್ ಲಿಯೋ ಟಾಲ್‌ಸ್ಟಾಯ್ ತಮ್ಮ ಅಪ್ರತಿಮ ಪ್ರತಿಭಾ ಕೌಶಲದಿಂದ ಇಡೀ ಮಾನವಕುಲವನ್ನು ಪ್ರಭಾವಿಸುವಂಥ ವಿಚಾರಗಳನ್ನು ತಮ್ಮ ಸಾಹಿತ್ಯ ಕೃತಿಗಳ ಮೂಲಕ ಸಾರಿದ ಮಹಾನ್ ಸಾಹಿತಿ, ಈತ ಕೇವಲ ಕಾದಂಬರಿಕಾರ ಮಾತ್ರವಲ್ಲ ಸುಪ್ರಸಿದ್ಧ ಕಥೆಗಾರ, ಜನಪ್ರಿಯ ನಾಟಕಕಾರ, ದೊಡ್ಡ ವಿಚಾರವಾದಿ, ಸಾಹಿತ್ಯದ ರಸಋಷಿ, ಮಹಾನ್ ದಾರ್ಶನಿಕ, ಅವರ ಕಲ್ಪನಾಲೋಚನಗಳು ಹಾಗೂ ಅನುಭವ ಜನ್ಯ ಅಭಿವ್ಯಕ್ತಿಗಳು ಕಾಲ ದೇಶಾತೀತವಾದವುಗಳು, ಅವರ ಅನುಭವ ಮೂಸೆಯಲ್ಲಿ ಮಿಂದ ಪಾತ್ರಗಳು ಗೌರಿಶಂಕರದಂತೆ ಓದುಗನ ಮನದಲ್ಲಿ ಅಚ್ಚಳಿಯದೆ ಉಳಿದು ಬಿಡುತ್ತದೆ.

ಟಾಲ್‌ಸ್ಟಾಯ್‌ರ ಚಿಂತನೆಗಳು ಮುಖ್ಯವಾಗಿ ಮಾನವನ ಬದುಕಿನ ಬಗೆಗೆ ಕಾಳಜಿಯುಳ್ಳ ವಿಚಾರಗಳಾಗಿರುವುದರಿಂದ ಬದುಕಿನ ಬಗೆಗೆ ಅವರಿಗಿರುವ ಶ್ರದ್ಧೆಯನ್ನು, ಆಸಕ್ತಿಯನ್ನು, ಜವಾಬ್ದಾರಿಯನ್ನು ನಾವು ಗ್ರಹಿಸಬಹುದಾಗಿದೆ.

ಬಾಳು ಸಾರ್ಥಕವಾಗುವುದು ಹೇಗೆ?
ಮನುಷ್ಯ ಯಾವ ಮೌಲ್ಯಗಳನ್ನು ಮೆಚ್ಚಿ ಬದುಕಬೇಕು?
ಬಾಳಿನಲ್ಲಿ ನೋವು ಏಕುಂಟು?
ಮನುಷ್ಯನ ನೈತಿಕ ಕಾಳಜಿ ಎಷ್ಟು?

ಎಂಬಿವೇ ವಿಚಾರಗಳು ಅವರ ಸಾಹಿತ್ಯದ ಮುಖ್ಯ ಕೇಂದ್ರಗಳಾಗಿವೆ ಎಂದು ಹೇಳಿದರೆ ಅಸಮಂಜಸವಾಗಲಾರದೇನೋ. ಅವರ ಇನ್ನೊಂದು ವೈಶಿಷ್ಟ್ಯವೆಂದರೆ ಕ್ರೈಸ್ತಮತದ ವಿಚಾರದಲ್ಲಿ ಗಾಢವಿಶ್ವಾಸ.

"ಸಾಹಿತ್ಯದ ಕೆಲವು ಕೃತಿಗಳು ನಾವು ನಮ್ಮ ಮೌಲ್ಯಗಳನ್ನು ಮತ್ತೆ ಮತ್ತೆ ಶೋಧಿಸಿಕೊಳ್ಳುವಂತೆ ಮಾಡುತ್ತವೆ, ಅಂಥ ಮೇರು ಕೃತಿಗಳಲ್ಲಿ ಅನ್ನಾಕರೆನಿನಾ ಒಂದು".. ಎಂಬ ವಿಮರ್ಶಕರ ಮಾತು ಎಷ್ಟು ಅರ್ಥಪೂರ್ಣ!

ಈ ಲೇಖನದ ಮುಖ್ಯ ಉದ್ದೇಶ ಟಾಲ್‌ಸ್ಟಾಯ್‌ರವರು ತಮ್ಮ ಅನ್ನಾಕರೆನಿನಾ ಕಾದಂಬರಿಯಲ್ಲಿ ಬರುವ ಶ್ರೀಮತಿ ಅನ್ನಾ ಕರೆನಿನಾ ಎಂಬ ಪಾತ್ರದ ನಡೆವಳಿಕೆಗಳನ್ನು ಕುರಿತದ್ದಾಗಿದೆ. ವಿವಾಹಿತ ಹೆಣ್ಣೊಬ್ಬಳು ತನ್ನವರ ಹಿತಾಸಕ್ತಿಯನ್ನು ಬಲಿಗೊಟ್ಟು ತನ್ನ ಬಯಕೆಯನ್ನು ಪೂರೈಸಿಕೊಳ್ಳುವುದು ಎಷ್ಟು ಸಮಂಜಸ? ಅದರಿಂದ ಅವಳಿಗೆ ನೆಮ್ಮದಿ ಸಾಧ್ಯವೆ? ಆಕೆ ಸಮಾಜವನ್ನು ಬಿಟ್ಟು ಬಾಳಬಲ್ಲಳೆ? ಹಾಗೆ ಬಾಳಿ ಆಕೆ ತನ್ನ ಬದುಕನ್ನು ಸಾರ್ಥಕ ಪಡಿಸಿಕೊಂಡಳೆ? ಇಂಥ ವ್ಯಕ್ತಿಗಳಿಗೆ ಮುಂದಾದಾಗಬಹುದಾದ ದುರಂತವೇನು? ಎಂಬುದನ್ನು ಚರ್ಚಿಸಬಹುದಾಗಿದೆ.

ಈ ಲೇಖನಕ್ಕೆ ಅಗತ್ಯವಾದ ಕಥಾ ಹಂದರವಿಷ್ಟು. ಅನ್ನಾಕರೆನಿನ್ ಎಂಬ ಪೀಟರ್ಸ್‌ಬರ್ಗ್ ನಗರದ ರಾಜತಂತ್ರಜ್ಞನ ಮಡದಿ. ಅವಳಿಗೆ ಪ್ರೇಮವೆಂದರೇನೆಂದು ಅರಿಯುವ ಮೊದಲೆ ತನಗಿಂತ ಇಪ್ಪತ್ತು ವರ್ಷ ಹಿರಿಯವನಾದ ಕರೆನಿನ್‌ನನ್ನು ವಿವಾಹವಾಗಿ ಸುಮಾರು ೧೨ ವರ್ಷಗಳು ಕಳೆದುಹೋಗಿವೆ. ತನ್ನ ಅಣ್ಣನ ಒಡೆದು ಹೋಗುತ್ತಿದ್ದ ಸಂಸಾರವನ್ನು ಸರಿಪಡಿಸಲು ಬಂದು ಅದರಲ್ಲಿ ಸಫಲಳಾದರೂ ಅವಳು ವ್ರಾಂಸ್ಕಿ ಎಂಬ ಯುವಕನಲ್ಲಿ ಅನುರಕ್ತಳಾಗಿ, ಕರೆನಿನ್‌ನಿಂದ ವಿಚ್ಛೇದನೆಯನ್ನು ಪಡೆದುಕೊಳ್ಳದೆ, ಅತ್ತ ವ್ರಾಂಸ್ಕಿಯನ್ನು ವಿವಾಹವೂ ಆಗದೆ (ರಷ್ಯನ್ ಸಮಾಜದಲ್ಲಿ ವಿಚ್ಛೇದನವಿಲ್ಲದೆ ವಿವಾಹ ಸಾಧ್ಯವಾಗಲಾರದು) ಪ್ರೇಮ ಜೀವನವನ್ನು ನಡೆಸುತ್ತ ತನ್ನ ಸುತ್ತಲಿನವರ ಹಾಗೂ ಸಂಬಂಧಿಕರಿಗೊದಗಬಹುದಾದ ನೋವು ದುಃಖಗಳಿಗೆ ಬೆಲೆ ಕೊಡದೆ ಸಮಾಜದಲ್ಲಿ ತನ್ನ ಅಸ್ತಿತ್ವಕ್ಕೆ ಧಕ್ಕೆ ತಂದುಕೊಂಡು, ಮುಂದೆಂದೂ ಅವಳು ಸಮಾಜದಲ್ಲಿ ಮತ್ತೆ ಸ್ಥಾನ ಕಲ್ಪಿಸಿಕೊಳ್ಳುವ ಅವಕಾಶ ಕಳೆದುಕೊಂಡು ಕೊನೆಗೆ ತಾನು ಅರಸೊರಟ ಸುಖದೊರೆತರೂ, ಅದನ್ನು ಅನುಭವಿಸಲಾರದೆ ದುಃಖ ನೋವು ಪಾಪ ಪ್ರಜ್ಞೆಗಳಿಂದಾಗಿ ಕ್ರೂರ ಮರಣವನ್ನು ಅಪ್ಪುತ್ತಾಳೆ.

ಈ ಕಾದಂಬರಿಯಲ್ಲಿ ಮುಖ್ಯವಾಗಿ ನೈತಿಕ ಮೌಲ್ಯ ಹಾಗೂ ಅನೈತಿಕ ವಿಚಾರದ ಸಂಘರ್ಷ ಹಾಗೂ ಅನೈತಿಕ ವಿಚಾರಗಳಿಗೆ ಅಂಥ ವ್ಯಕ್ತಿಗಳಿಗೆ ಮಾರ್ಗದರ್ಶನ ಮಾಡಿ ಉತ್ತಮ ದಾರಿಗೆ ಹಚ್ಚುವ ಪ್ರಯತ್ನ ಕಾದಂಬರಿಯುದ್ದಕ್ಕೂ ನಡೆಯುತ್ತದೆ. ಇದಕ್ಕೆ ಕಾದಂಬರಿಕಾರನ ಮನೋಧರ್ಮ ಮುಖ್ಯವಾಗುತ್ತದೆ.

ನಾವೆಲ್ಲ ತಪ್ಪು ಮಾಡಬಹುದಾದವರೆ, ಅಂಥ ತಪ್ಪು ಮಾಡುವವರು ತಿದ್ದಿಕೊಂಡು ಬದಲಾಗುವ ಸಾಧ್ಯತೆ ಇದೆ. ಅವರು ನಮ್ಮಂತೆ ದೌರ್ಬಲ್ಯವನ್ನು ಹೊಂದಿದ ವ್ಯಕ್ತಿಗಳೇ ಆಗಿದ್ದಾಗೆ. ಅಂಥವರ ಬಗೆಗೆ ಸಹಾನುಭೂತಿ, ಮರುಕ ತೋರಬೇಕು, ಆದರೆ ಸಹಾನುಭೂತಿ ಹಾಗೂ ಅಂಥ ಪಾತ್ರಗಳಿಗೆ ನೀಡುವ

ಶಿಕ್ಷೆ ಇವುಗಳಲ್ಲಿ ವ್ಯತ್ಯಾಸವಿದೆ; ಅಂದರೆ ಸಹಾನುಭೂತಿಗರ್ಹವಾದ ಪಾತ್ರಗಳಿಗೆ ಶಿಕ್ಷೆ ನೀಡಬಾರದೆಂದಲ್ಲ, 'ಸಹಾನುಭೂತಿ ಬೇರೆ, ಅವುಗಳಿಗೆ ನೀಡುವ ಶಿಕ್ಷೆ ಬೇರೆ' ಎಂಬ ವಿಚಾರ ಕಾದಂಬರಿಕಾರನಿಗರಿವಿದೆ, ಆದ್ದರಿಂದಲೇ ಕಾದಂಬರಿಕಾರ ಅನೈತಿ ಕತೆಯ ಅಪರಾವತಾರದಂತಿರುವ ಅನ್ನಾಕರೆನಿನಾ ಬಗೆಗೆ, ಅವಳ ಮತ್ತು ವ್ರಾಂಸ್ಕಿ ಯರ ಪ್ರಣಯ ಪ್ರಸಂಗ ವಿಷಯದಲ್ಲಿ ಅನುಕಂಪವಿದ್ದರೂ, ಕಾದಂಬರಿಕಾರ ಸ್ಪಷ್ಟವಾಗಿಯೇ ತನ್ನ ನೈತಿಕ ನಿಲುವನ್ನು ಸೂಚಿಸುತ್ತಾನೆ. ಅವನ ಈ ತೀರ್ಪಿನ ಹಿಂದೆ ಗಾಢವಾದ ನೈತಿಕ ಕಾಳಜಿ ಆಧಾರವಾಗಿದೆ.

ಮನುಷ್ಯನಲ್ಲಿ ರಕ್ತಗತವಾಗಿರುವ ವಿಚಾರ ಅಥವಾ ಅಂಶಗಳು ಎರಡು ಧರ್ಮ ಮತ್ತು ಕಾಮ. ಇವು ಮನುಷ್ಯನನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡು ಅವನ ವ್ಯಕ್ತಿತ್ವವನ್ನು ನಿಯಂತ್ರಿಸುತ್ತಿರುತ್ತವೆ ಹಾಗೂ ವ್ಯಕ್ತಿತ್ವವನ್ನು ರೂಪಿಸುತ್ತಿರುತ್ತವೆ. ಶ್ರೀಮತಿ ಅನ್ನಾಳ ಪ್ರೇಮ ಸಮಾಜದ ದೃಷ್ಟಿಯಲ್ಲಿ ಅವಳ ಸುಂದರ ವ್ಯಕ್ತಿತ್ವವನ್ನು ಅಸಹ್ಯಕರವನ್ನಾಗಿಸಿದರೆ, ಧರ್ಮ ಅವಳನ್ನು ಪತನದ ಪ್ರಪಾತಕ್ಕೆ ದೂಡುತ್ತದೆ.

ಕಾದಂಬರಿಯ ಪ್ರಾರಂಭದಲ್ಲಿ ಶ್ರೀಮತಿ ಅನ್ನಾಳ ಪತಿವ್ರತಾ ಶಿರೋಮಣಿಯ ಆದರ್ಶ ವ್ಯಕ್ತಿತ್ವದ ಚಿತ್ರಣವನ್ನು ಕಾದಂಬರಿಕಾರ ನೀಡುತ್ತಾನೆ. ಆಕೆ ಸಮಾಜದ ಆದರ್ಶ ಪ್ರತಿನಿಧಿಯಾಗಿ, ಉಜ್ವಲ ಮಹಿಳೆಯಾಗಿ, ಸುಂದರ ವಾತ್ಸಲ್ಯಮಯ ಮಾತೆಯಾಗಿ, ಸಮಾಜದ ಅನಿವಾರ್ಯ ಅಂಗವಾದ ದಂಪತಿಗಳ ಕುಟುಂಬವನ್ನು ಸಂಪಾದಿಸುವ ಆಕರ್ಷಕ ವ್ಯಕ್ತಿತ್ವದ ಹೆಣ್ಣಾಗಿ ಬರುವ ಈಕೆ, ಎಲ್ಲರಿಗೂ ಪ್ರೀತಿ ಪಾತ್ರಳಾದವಳು. ಶ್ರೀಮತಿ ಅನ್ನಾಕರೆನಿನ್‌ಳ ರೂಪ ಲಾವಣ್ಯ ಹಾಗೂ ಅವಳಲ್ಲಿ ಸುಪ್ತವಾಗಿ ಹುದುಗಿದ್ದ ಪ್ರೇಮ ವ್ರಾಂಸ್ಕಿಯನ್ನು ಕಂಡಾಗ ಉರಿಯುವ ಬೆಂಕಿಗೆ ತುಪ್ಪ ಬಿದ್ದಂತೆ ಅವಳ ಸುಂದರ ವ್ಯಕ್ತಿತ್ವವನ್ನು ನಿರ್ನಾಮ ಮಾಡಿಬಿಡುತ್ತದೆ. ಆಕೆಯ ಬದುಕು ನಮ್ಮ ಮುಂದೆ ಹಂತಹಂತವಾಗಿ ಕುಸಿಯುತ್ತಾ ಹೋಗುವುದನ್ನು ಕಂಡಾಗ ನಮಗೆ ಕರುಣೆ ಮರುಕಗಳು ಹಾಗೂ ಅವಳ ಬಗೆಗೆ ಸಹಾನುಭೂತಿ ಮೂಡುತ್ತದೆ. ಆದರೂ ಸಮಾಜದ ದೃಷ್ಟಿಯಲ್ಲಿ ಅವಳು ಮಾಡಿದ್ದು ತಪ್ಪೆನಿಸದಿರುವುದಿಲ್ಲ, ಅದಕ್ಕೆ ಕಾರಣ ಅವಳು ಸಮಾಜದಲ್ಲಿ ವ್ಯಕ್ತಿಯೊಬ್ಬನ ಮಡದಿಯಾಗಿದ್ದು ಅದನ್ನು ಮರೆತು ಸಲ್ಲದ ಕೃತ್ಯದಲ್ಲಿ ತೊಡಗಿದ್ದು.

ಅನ್ನಾ ಇಲ್ಲಿ ಕೇವಲ ಲಾವಣ್ಯವತಿಯಾದ ಹೆಣ್ಣಲ್ಲ, ನವಯುವತಿಯಲ್ಲ, ಸುಂದರ ಹುಡುಗಿ ಮಾತ್ರವಲ್ಲ, ಅವಳು ಶ್ರೀಮತಿ ಅನ್ನಾ ಕರೆನಿನ್, ಒಂದು ಪ್ರತಿಷ್ಠಿತ ಕುಟುಂಬದ ಸದ್ಗೃಹಿಣಿ, ಸಾಮಾಜಿಕ ಸ್ತರದಲ್ಲಿ ಉನ್ನತ ಸ್ಥಾನಮಾನ ಪಡೆದ ರಾಜತಂತ್ರಜ್ಞನ ಮಡದಿ, ಒಂದು ಮಗುವಿನ ವಾತ್ಸಲ್ಯಮಯಿ ತಾಯಿ,

ತನ್ನ ವೈಯಕ್ತಿಕ ಬಯಕೆ ಹಾಗೂ ವಿಷಯಗಳ ಆಗುಹೋಗುಗಳೊಂದಿಗೆ ಸಮಾಜಕ್ಕೆ ತನ್ನ ಕರ್ತವ್ಯವಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು, ಪ್ರತಿಯೊಂದು ವಿಷಯದಲ್ಲಿ ಎಚ್ಚರಿಕೆಯಿಂದ ತೀರ್ಮಾನ ಕೈಗೊಳ್ಳಬೇಕಾಗುತ್ತದೆ. 'ವ್ಯಕ್ತಿಯೊಬ್ಬ ಯಾವಾಗ ತನ್ನ ಕರ್ತವ್ಯಗಳನ್ನು ಮರೆತು ತನ್ನ ವೈಯಕ್ತಿಕ ಬಯಕೆಗಳ ತೃಪ್ತಿಯಲ್ಲಿ ತೊಡಗುತ್ತಾನೋ ಆಗ ಅವನಿಗೆ ದುರಂತ ತಪ್ಪಿದ್ದಲ್ಲ' ಸಮಾಜದಲ್ಲಿನ ತನ್ನ ಸ್ಥಾನಮಾನ, ಅದರಿಂದ ಪಡೆಯುವ ಸೌಲಭ್ಯಗಳನ್ನೆಲ್ಲ ಅನುಭವಿಸುವ ವ್ಯಕ್ತಿ ಸಮಾಜಕ್ಕೆ ತನ್ನ ಕರ್ತವ್ಯವೇನೆಂಬುದನ್ನು ಅರಿತು ನಡೆದರೆ ವ್ಯಕ್ತಿಗೂ ಹಿತ, ಸಮಾಜಕ್ಕೂ ಹಿತ.

ಶ್ರೀಮತಿ ಅನ್ನಾ ಕರೆನಿನ್- ವ್ರಾಂಸ್ಕಿಯರ ಪ್ರಥಮ ಸಮಾಗಮದ ಸಂದರ್ಭ (ರೈಲ್ವೆ ನಿಲ್ದಾಣ)ದಲ್ಲಿ ಬದುಕಿನಲ್ಲಿ ನೊಂದ ವ್ಯಕ್ತಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ಚಿತ್ರವನ್ನು ಕಾದಂಬರಿಕಾರ ನೀಡುತ್ತಾನೆ. ಈ ಒಂದು ಚಿತ್ರ ಶ್ರೀಮತಿ ಅನ್ನಾ-ವ್ರಾಂಸ್ಕಿಯರ ಸಂಬಂಧದ ಮುಂದಿನ ಬೆಳವಣಿಗೆ ಹಾಗೂ ಪರಿಣಾಮಗಳನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಹೀಗೆ ಪ್ರಾರಂಭದಲ್ಲಿ ಪರಿಸರ ಅನ್ನಾಳಿಗೆ ಎಚ್ಚರಿಕೆ ನೀಡುತ್ತಿದ್ದರೂ ಆಕೆ ಅವಕ್ಕೆ ಕಿಂಚಿತ್ತೂ ಗಮನಹರಿಸದೆ ತನ್ನ ನಿರ್ಭಿಡೆಯ ಪ್ರೇಮ ವ್ಯವಹಾರದಲ್ಲಿ ತೊಡಗುತ್ತಾಳೆ. ತನ್ನ ಕೃತ್ಯಕ್ಕೆ ತನ್ನ ಪರಿಸರವೆ ವಿರುದ್ಧವಾಗಿ ನಿಂತಾಗ ಅದನ್ನರಿತು ಮುನ್ನಡೆಯುವುದು ವಿವೇಕ ಪೂರ್ಣ ನಿರ್ಧಾರ ಎನಿಸಿಕೊಳ್ಳುತ್ತದೆ. ಶ್ರೀಮತಿ ಅನ್ನಾಳ ಮುಂದಿನ ಅನೈತಿಕ ಪ್ರೇಮವನ್ನು ಸ್ಪಷ್ಟವಾಗಿ ವಿರೋಧಿಸುವ ಚಿನ್ಹೆಗಳು ಈ ಸಂದರ್ಭದಲ್ಲಿ ಕಂಡುಬರುತ್ತದೆ.

ಈ ಪ್ರಣಯಿಗಳದು ಸುಂದರವಾದ ಜೋಡಿಯಿರಬಹುದು. ಇವರ ಪ್ರೇಮ ಸಹಜವಾದದ್ದಿರಬಹುದು. ಆದರೆ ಸಹಜವಾದದ್ದಲ್ಲ, ನೈತಿಕವಲ್ಲ ಎಂಬ ವಿಚಾರವನ್ನು ನಾವು ಗಮನಿಸಬೇಕಾಗುತ್ತದೆ. ಇಲ್ಲಿ ಶ್ರೀಮತಿ ಅನ್ನಾಳಾಗಲೀ, ವ್ರಾಂಸ್ಕಿಯಾಗಲೀ ತಮ್ಮ ಮಿತಿಯರಿತು ನಡೆಯಬೇಕಾಗುತ್ತದೆ. ಅನ್ನಾಳಿಗೆ ತನ್ನ ಮಿತಿಯನ್ನರಿತು ತನ್ನ ಕುಟುಂಬದ ಏಳಿಗೆಗಾಗಿ ಮನಸ್ಸು ಮಾಡಿ ಮುಂದುವರೆದಿದ್ದರೆ, ತನ್ನ ಅತ್ತಿಗೆ ಡಾಲಿಯ ವಿವೇಕವಿದ್ದರೆ, ಅವಳಿಗೆ ಮುಂದೊದಗಬಹುದಾದ ದುರಂತವನ್ನು ತಪ್ಪಿಸಬಹುದಿತ್ತು. ಕಾದಂಬರಿಕಾರ ಡಾಲಿಯೆಂಬ ವಿವೇಕಪೂರ್ಣ ಪಾತ್ರವೊಂದನ್ನು ಶ್ರೀಮತಿ ಅನ್ನಾಳ ಎದುರಿಗೆ ತಂದು ಇವರಿಬ್ಬರ ನಡುವಿನ ವ್ಯತ್ಯಾಸಗಳನ್ನು ಚರ್ಚೆಗೊಳಪಡಿಸುತ್ತಾನೆ.

ಶ್ರೀಮತಿ ಅನ್ನಾ ಕರೆನಿನ ಸ್ವತಃ ಡಾಲಿಯ ದಾಂಪತ್ಯವನ್ನು ಸರಿಪಡಿಸಿದವಳು. ಈ ಒಂದು ಉದಾಹರಣೆ ಹಾಗೂ ನಂತರದ ಡಾಲಿಯ ನಡವಳಿಕೆಗಳು ಅವಳಿಗೆ

ಮಾರ್ಗದರ್ಶನ ಮಾಡಬಹುದಾಗಿದ್ದಿತು. ಅವಳು ಡಾಲಿಯ ನಿಲುವನ್ನಾದರೂ ಅನುಸರಿಸುವ ಪ್ರಯತ್ನವನ್ನಾದರೂ ಮಾಡಬಹುದಿತ್ತು. ಡಾಲಿಯ ಸಾತ್ವಿಕ ವ್ಯಕ್ತಿತ್ವ ಹಾಗೂ ಉತ್ತಮ ಮೌಲ್ಯಗಳು, ಅವಳ ಸಂಸ್ಕಾರ ಅನ್ನಾಳ ವ್ಯಕ್ತಿತ್ವದಲ್ಲಿಲ್ಲದ್ದು ಅವಳ ಈ ರೀತಿಯ ನಡವಳಿಕೆಗೆ ಕಾರಣವಿರಬಹುದು.

ಕಾದಂಬರಿಕಾರ ಶ್ರೀಮತಿ ಡಾಲಿ ಶ್ರೀಮತಿ ಅನ್ನಾಕರೆನಿನಾಳ ತೌಲನಿಕ ವಿವೇಚನೆಯನ್ನು ಮಾಡುತ್ತಾನೆ. ಶ್ರೀಮತಿ ಡಾಲಿಯು ಅನ್ನಾಳಂತೆಯೆ ಪತಿಯಿಂದ ಪ್ರೇಮ ವಂಚಿತೆ. ಅಬ್ಲಾನ್‌ಸ್ಕಿಯಂಥ ಅಯೋಗ್ಯ ಪತಿಯ ಮಡದಿಯಾಗಿದ್ದಾಗ್ಯೂ, ಅವನ ಸ್ತ್ರೀ ಲಂಪಟ ಕೃತ್ಯಗಳು ಅವಳಿಗೆ ಅವಮಾನಕಾರಿಯಾಗಿದ್ದಾಗ್ಯೂ, ತಾನು ಹಾಗೂ ತನ್ನ ಮಕ್ಕಳು ಬಡತನದಿಂದ ನರಳುತ್ತಿದ್ದರೂ ತನ್ನ ಪತಿ ಮಹಾಶಯನಿಂದ ಯಾವುದೇ ಆರ್ಥಿಕ ಸಹಾಯವಿಲ್ಲದಿದ್ದರೂ, ಇನ್ನೊಬ್ಬರ ಹಂಗಿನಲ್ಲಿದ್ದುಕೊಂಡು ತನ್ನ ಮಕ್ಕಳ ಭವಿಷ್ಯವೇ ತನ್ನ ಭವಿಷ್ಯ, ಅವರ ನಗುವಿನಲ್ಲಿ ತನ್ನ ನಗುವನ್ನು ಕಾಣುತ್ತಾ ಬದುಕುವ ಡಾಲಿಯ ವ್ಯಕ್ತಿತ್ವವನ್ನು ಕಂಡಾಗ, ಎಲ್ಲ ಸೌಲಭ್ಯ, ಕೀರ್ತಿ, ಅಧಿಕಾರ, ಗೌರವ, ಶ್ರೀಮಂತಿಕೆಗಳಿದ್ದರೂ, ಅನ್ನಾ ತಾನೊಬ್ಬಳು ಪ್ರೇಮವಂಚಿತೆಯೆಂಬ ಮಂತ್ರವನ್ನು ಯಾವಾಗಲೂ ಪಠಿಸುತ್ತಾ ಅದನ್ನು ಪೂರೈಸಿಕೊಳ್ಳಲು ಎಲ್ಲವನ್ನೂ ತ್ಯಾಗಮಾಡುತ್ತಾ ಹೋಗುವುದನ್ನು ಕಂಡಾಗ ಅವಳ ವ್ಯಕ್ತಿತ್ವದ ವಿಚಾರ ನಮಗೆ ವೇದ್ಯವಾಗುತ್ತದೆ.

ದಾಂಪತ್ಯ ಬಂಧಕ್ಕೆ ಸಿಲುಕಿದ ವ್ಯಕ್ತಿಯೊಬ್ಬಳು ಅನ್ಯ ಪುರುಷನೊಂದಿಗೆ ಸಂಬಂಧಹೊಂದಿ ತನ್ನ ಬಯಕೆಯನ್ನು ಈಡೇರಿಸಿಕೊಳ್ಳುವುದು ಎಷ್ಟು ಸಮಂಜಸ? ಎಂಬ ಈ ಪ್ರಶ್ನೆ ಶ್ರೀಮತಿ ಅನ್ನಾ ಕರೆನಿನಾಳಂಥ ಸ್ತ್ರೀ ಪಾತ್ರಕ್ಕೆ ಮಾತ್ರ ಅನ್ವಯಿಸದೆ, ಹಲವಾರು ಹೆಣ್ಣುಗಳೊಂದಿಗೆ ಸಂಬಂಧವಿರಿಸಿಕೊಂಡಿರುವ ಡಾಲಿಯ ಪತಿ ಅಬ್ಲಾನ್‌ಸ್ಕಿಯಂಥ ಪುರುಷ ಪಾತ್ರಕ್ಕೂ ಹಾಗೂ ತನ್ನನ್ನೇ ನಂಬಿ ಪ್ರೇಮಿಸಿ ವಿವಾಹವಾಗುವ ಇಚ್ಛೆ ಹೊಂದಿದ್ದ ಹೆಣ್ಣನ್ನು ಮೋಸಗೊಳಿಸಿ ಒಬ್ಬ ಗೃಹಿಣಿಯನ್ನು ಸಲ್ಲದ ಕೃತ್ಯಕ್ಕೆ ಪ್ರೇರೇಪಿಸಿದ ವ್ರಾಂಸ್ಕಿಗೂ ಅನ್ವಯಿಸುವ ವಿಚಾರವಾಗಿದೆ. ಈ ಪ್ರಶ್ನೆಗೆ ಆ ಪಾತ್ರಗಳ ಒಪ್ಪಿಗೆ ಹಾಗೂ ಅವುಗಳ ಸ್ವರೂಪವನ್ನರಿತು ಉತ್ತರಿಸಬೇಕಾಗುತ್ತದೆ. ಒಟ್ಟಾರೆ ಕಾದಂಬರಿಕಾರನ ಪ್ರಕಾರ ರಷ್ಯನ್ ಸಮಾಜಕ್ಕೆ ಈ ಸಂಬಂಧ ವರ್ಜ್ಯ. ಆ ಸಮಾಜ ಇಂಥ ಸಂಬಂಧಗಳನ್ನು ಧಿಕ್ಕರಿಸುತ್ತದೆ. ಮಾತ್ರವಲ್ಲ. ಅಂಥವರಿಗೆ ಕ್ರೂರ ಶಿಕ್ಷೆ ತಪ್ಪಿದ್ದಲ್ಲ. ಇಡೀ ಸಮಾಜ ಅಥವಾ ಪರಿಸರ ತನ್ನ ನಿಲುವು, ನೀತಿ ನಿಯಮಗಳಿಂದ ಶ್ರೀಮತಿ ಅನ್ನಾಳನ್ನು ಸರಿದಾರಿಗೆ ತರುವ ಪ್ರಯತ್ನ ಮಾಡುತ್ತದೆ, ಅದಕ್ಕೆ ಆ ಪಾತ್ರ ಸೊಪ್ಪು ಹಾಕದಿದ್ದಾಗ ಆ ಪಾತ್ರಗಳ ದುರಂತಕ್ಕೆ ದಾರಿ ಮಾಡಿಕೊಡುತ್ತದೆ.

'ಅನ್ನಾ ಕರೆನಿನಾ' ಕಾದಂಬರಿಯಲ್ಲಿ ನೈತಿಕ ಮೌಲ್ಯಗಳ ಪ್ರತಿನಿಧಿಯಾಗಿ ಬರುವಂಥ ಪಾತ್ರಗಳೆಂದರೆ ಶ್ರೀಮತಿ ಡಾಲಿ, ಶ್ರೀ ಕರೆನಿನ್, ಮೇಡಂ ಸ್ಟಾಲ್, ವೆರೆಂಕೆ, ಲೆವಿನ್–ಕಿಟ್ಟಿ ಮುಂತಾದ ಪಾತ್ರಗಳು ಆದರ್ಶ ಪಾತ್ರಗಳಾಗಿ ಬಂದರೆ ಅನೈತಿಕ ಪಾತ್ರಗಳಲ್ಲಿ ಮುಖ್ಯಸ್ಥಾನ ಅನ್ನಾಳಿಗೆ ಸಂದರೆ, ನಂತರದ ಸ್ಥಾನ ಅವಳ ಸೋದರ ಅಬ್ಲಾನ್‌ಸ್ಕಿ ಮತ್ತು ವ್ರಾಂಸ್ಕಿಗೆ ಸಲ್ಲುತ್ತದೆ.

ತನ್ನ ಕುಟುಂಬದ ಸದಸ್ಯರೊಬ್ಬರು ತನ್ನ ಕಣ್ಮುಂದೆಯ ವಿನಾಶದ ಅಂಚನ್ನು ತಲುಪುತ್ತಿದ್ದರೆ ಯಾವ ವ್ಯಕ್ತಿಯೂ ಸಹ ಅದನ್ನು ನೋಡುತ್ತಾ ಸುಮ್ಮನಿರಲಾರ, ಅವನಿಗೂ ಜವಾಬ್ದಾರಿಯಿರುತ್ತದೆ. ಆದರ ಮೂಲಕ ವಿನಾಶದತ್ತ ಸರಿಯುತ್ತಿರುವ ತನ್ನ ಸದಸ್ಯನನ್ನು ಸರಿದಾರಿಗೆ ತರುವ ಪ್ರಯತ್ನವನ್ನು ಮಾಡಬೇಕು. ಆ ದಿಕ್ಕಿನಲ್ಲಿ ಶ್ರೀಕರೆನಿಸ್ ತನ್ನ ಹೆಂಡತಿಯನ್ನು ಸರಿದಾರಿಗೆ ತರುವ ಪ್ರಯತ್ನ ಮಾಡುತ್ತಾರೆ. ಲಜ್ಜೆ ಬಿಟ್ಟು ಅವಳೊಂದಿಗೆ ನೇರ ಸಂಘರ್ಷಕ್ಕೂ ಇಳಿಯುತ್ತಾನೆ. "ನಿನ್ನ ಭಾವನೆಗಳು ನಿನ್ನ ಸದ್ವಿವೇಚನೆಗೆ ಸಂಬಂಧಿಸಿದವು ಆದರೆ ನಿನಗೆ ನನಗೆ ಮತ್ತು ದೇವರಿಗೆ ಜವಾಬ್ದಾರನಾಗಿರುವ ನಾನು ನಿನ್ನ ಕರ್ತವ್ಯಗಳನ್ನೆತ್ತಿ ತೋರಿಸಬೇಕಾಗಿದೆ. ನಮ್ಮ ಬದುಕನ್ನೊಟ್ಟಿಗೆ ಬೆಸೆದಿರುವವನು ದೇವರೆ ಹೊರತು ಮನುಷ್ಯನಲ್ಲ, ಈ ಐಕ್ಯವನ್ನೊಡೆಯುವುದು ಮಹಾಪರಾಧ, ಇಂಥ ಅಪರಾಧಕ್ಕೆ ಕ್ರೂರ ಶಿಕ್ಷೆ ತಪ್ಪಿದ್ದಲ್ಲ" ಎಂಬ ಎಚ್ಚರಿಕೆಯನ್ನು ಕೊಡುವುದರ ಮೂಲಕ ಅವಳ ಕರ್ತವ್ಯ ಮತ್ತು ಕುಟುಂಬದ ಪಾವಿತ್ರ್ಯವನ್ನು ಒತ್ತಿಹೇಳುತ್ತಾನೆ. ತನ್ನ ಹೆಂಡತಿ ಪರ ಪುರುಷನೊಡನೆ ಅನೈತಿಕ ಸಂಬಂಧವಿಟ್ಟುಕೊಂಡಿರುವುದು ಖಚಿತವಾದಾಗ, ತನ್ನ ಕಣ್ಮುಂದೆ ಅಸಹ್ಯಕರ ಸಂಬಂಧಗಳು ಬಂದು ನಿಂತಾಗ ಯಾವ ವ್ಯಕ್ತಿಗೆ ತಾನೆ ನೋವು ಜಿಗುಪ್ಸೆಗಳು ಉಂಟಾಗುವುದಿಲ್ಲ, ಯಾವ ವ್ಯಕ್ತಿ ಅದನ್ನು ನೋಡಿಕೊಂಡು ಸುಮ್ಮನಿದ್ದಾನು? ಶ್ರೀ ಕರೆನಿನ್ ಶ್ರೀಮತಿ ಅನ್ನಾಳ ನಡವಳಿಕೆಗಳಿಂದಾಗಿ ಅನುಭವಿಸುವ ಚಿತ್ರಹಿಂಸೆ ಅಷ್ಟಿಷ್ಟಲ್ಲ. "ನೀತಿಗೆಟ್ಟ ಹೆಂಗಸು, ಮಾನಮಾರ್ಯಾದೆ ಇಲ್ಲದವಳು, ಧರ್ಮದ ಗಂಧವಿಲ್ಲದವಳು, ಹೃದಯ ವಿಹೀನೆ ನಾನವಳನ್ನು ಮೊದಲಿನಿಂದ ಬಲ್ಲೆ... ಆದರೂ ಅವಳ ಮೇಲಿನ ಮರುಕದಿಂದ ಮೋಸ ಹೋದೆ" ಎಂಬ ಅವನ ಅಂತರಂಗದ ಮಾತು "ನಾನು ಮೊದಲನೆಯವನೂ ಅಲ್ಲ, ಕೊನೆಯವನೂ ಅಲ್ಲ, ಮೆನಿಲಾಯಿಸನ ಸುಂದರ ಹೆಲೆನ್ ಮೊದಲು ಗೊಂಡು ಸಮಕಾಲೀನ ಅತ್ಯುನ್ನತ ಸಮಾಜದೊಳಗಿನ ವಿಶ್ವಾಸದ್ರೋಹಿ ಸ್ತ್ರೀಯರ ಕಿರುಕುಳಕ್ಕೊಳಗಾದ ಗಂಡಂದಿರ ನಿದರ್ಶನಗಳ ದೊಡ್ಡ ಮೆರವಣಿಗೆ ಆವನ ಕಣ್ಮುಂದೆ ಹಾದು ಹೋಯಿತು".

"ನಿನ್ನೊಬ್ಬಳ ಬಗೆಗೆ ನೀನು ಯೋಚಿಸುತ್ತೀಯೆ, ಹಿಂದೊಮ್ಮೆ ನಿನ್ನ ಗಂಡನಾಗಿದ್ದವನ ಸಂಕಟದ ಬಗೆಗೆ ನೀನು ನಿರ್ಲಕ್ಷ್ಯಂದಿದ್ದೀಯ. ಅವನ ಇಡೀ ಬಾಳು ಹಾಳಾಯಿತು. ಅದರ ಬಗ್ಗೆ ಎಳ್ಳಷ್ಟೂ ಆತಂಕವಿಲ್ಲ ನಿನಗೆ", ಎಂಬ ಅವನ ನೊಂದ ನುಡಿ ತನ್ನ ಮಹತ್ವಪೂರ್ಣ ಕಾರ್ಯಗಳಿಗೆ ತನ್ನ ಬಾಳಿನ ಸಾರ್ಥಕತೆಗೆ ಅವಳ ಈ ಅನೈತಿಕ ಸಂಬಂಧ ಮತ್ತು ವಿಷಯಗಳು ಅಡ್ಡಿಯಾದದ್ದನ್ನು ಅವನ ಈ ನೊಂದ ನುಡಿ ಬಿಂಬಿಸುತ್ತದೆ.

ಶ್ರೀಮತಿ ಅನ್ನಾಳು ಕಾಯಿಲೆ ಬಿದ್ದಾಗಿನ ದೃಶ್ಯ ಹಾಗೂ ಅನ್ನಾ – ಕರೆನಿನ್-ವ್ರಾಂಸ್ಕಿಯರ ಸಂಭಾಷಣೆಗಳು, ಸನ್ನಿವೇಶಗಳು ಅದ್ಭುತವಾದವು. ಶ್ರೀಮತಿ ಅನ್ನಾಳ ವ್ಯಕ್ತಿತ್ವದ ಬಗೆಗೆ ನಮಗೆ ಸಂಪೂರ್ಣ ದೃಷ್ಟಿ ಕೂಡ ಈ ಸನ್ನಿವೇಶ ದಲ್ಲಿಯೇ ದೊರಕುತ್ತದೆ. ಕಾಯಿಲೆಯಿಂದ ಚೇತರಿಸಿಕೊಂಡ ನಂತರದ ಅವಳ ನಿರ್ಧಾರ ನಮ್ಮಲ್ಲಿ ದಿಗ್ಭ್ರಮೆಯನ್ನುಂಟು ಮಾಡುತ್ತದೆ. ಈ ನಡವಳಿಕೆಯಿಂದ ಶ್ರೀಮತಿ ಅನ್ನಾಳ ವ್ಯಕ್ತಿತ್ವ ಮತ್ತೂ ಕೆಳಗಿಳಿಯುತ್ತದೆ. ಆದರೆ ಆಕೆಯನ್ನು ಕ್ಷಮಿಸಿ ಉದಾರವಾಗಿ ನಡೆಸಿಕೊಳ್ಳುವ ಶ್ರೀ ಕರೆನಿನ್‌ರ ವ್ಯಕ್ತಿತ್ವ ನಿಜಕ್ಕೂ ಘನವಾದ ವ್ಯಕ್ತಿತ್ವ ವಾಗಿ ಕಾಣುತ್ತದೆ. "ತಾನು ಪಾಪಿ, ತನ್ನ ಕೃತ್ಯಕ್ಕೆ ಕ್ಷಮೆ ಯಾರಿಂದಲೂ ಎಂದಿಗೂ ಲಭ್ಯವಿಲ್ಲ" ಎಂದು ಅನ್ನಾ ಹೇಳುತ್ತಾಳೆ, ತನ್ನಲ್ಲಿ ಇನ್ನೊಂದು ವ್ಯಕ್ತಿತ್ವ ಅಡಗಿ ಈ ಎಲ್ಲ ಕೃತ್ಯಗಳನ್ನು ಮಾಡಿಸಿತೆಂದು ಹೇಳುವ ಶ್ರೀಮತಿ ಅನ್ನಾ (ಕಾಯಿಲೆ ಬಿದ್ದಾಗಿನ ಸಂದರ್ಭ)ಳ ವ್ಯಕ್ತಿತ್ವ ಸುಧಾರಿಸಿದೆ, ಅವಳು ತನ್ನ ತಪ್ಪನ್ನು ಅರಿತು ಕೊಂಡಿದ್ದಾಳೆ ಎಂದು ಸಹೃದಯರು ಭಾವಿಸುತ್ತಿರುವಾಗಲೇ ಕಾಯಿಲೆಯಿಂದ ಮುಕ್ತಳಾದ ಕ್ಷಣವೇ ಆ ಇನ್ನೊಂದು ವ್ಯಕ್ತಿಯ ದಾರಿ ಹಿಡಿಯುತ್ತಾಳೆ. ಅಂದರೆ ವ್ರಾಂಸ್ಕಿಯ ಹಿಂದೆ ಬೀಳುವ ಮೂಲಕ ತನ್ನ ಹಿಂದಿನ ಅನೈತಿಕತೆಯ ಬದುಕನ್ನೆ ಅಪ್ಪಿಕೊಳ್ಳುವುದರಿಂದ ಓದುಗರಿಗೆ ತೀವ್ರ ಆಘಾತವಾಗುತ್ತದೆ. ಇದಕ್ಕೆ ತದ್ವಿರುದ್ಧ ವಾಗಿ ಶ್ರೀ ಕರೆನಿನ್ ಕಾಯಿಲೆಯಿದ್ದ ಶ್ರೀಮತಿ ಅನ್ನಾಳಿಗೆ, ಅವಳ ಮಗು (ವ್ರಾಂಸ್ಕಿ ಸಂಬಂಧದ)ವಿಗೆ ಶುಶ್ರೂಷೆ ಮಾಡಿಸುತ್ತಾನೆ. ತನ್ನಿಂದ ಕೊಲೆಗೆ ಮಾತ್ರ ಅರ್ಹವಾದ ವ್ರಾಂಸ್ಕಿಯನ್ನು ಅನ್ನಾಳ ಅಪೇಕ್ಷೆಯ ಮೇರೆಗೆ ಕ್ಷಮಿಸಿ, ಅನ್ನಾಳನ್ನು ಕ್ಷಮಿಸುತ್ತಾನೆ. ಇಂಥ ಔದಾರ್ಯದ ಉನ್ನತ ಗುಣಗಳಿಂದ ಅವನ ವ್ಯಕ್ತಿತ್ವ ಹುಣ್ಣಿಮೆಯ ಚಂದ್ರನಂತೆ ಬೆಳಗುತ್ತದೆ. "ತನ್ನ ಕೋಟನ್ನೊಯ್ದವನಿಗೆ ತನ್ನ ಮೇಲಂಗಿಯನ್ನೂ ಕೊಡಬೇಕೆಂದಿದ್ದೇನೆ" ಎಂಬ ಅವನ ನೊಂದ ಔದಾರ್ಯದ ನುಡಿ ನಮಗೆ ದಿಗ್ಭ್ರಮೆಯನ್ನುಟ್ಟಿಸುತ್ತದೆ. ತನ್ನ ಸಂಸಾರ ಒಡೆದು ಹೋಗುತ್ತಿದ್ದಾಗ, ತನಗೆ ತಕ್ಕ ತಿಳುವಳಿಕೆ ನೀಡಿ ತನ್ನ ಸಂಸಾರ ಸರಿಪಡಿಸಿದ ಶ್ರೀಮತಿ ಅನ್ನಾಳಿಗೆ ಪ್ರೀತಿ ಸಹಾಯ ಮಾಡುವ ಉದ್ದೇಶದಿಂದ ಶ್ರೀಮತಿ ಡಾಲಿ ಶ್ರೀಕರೆನಿನ್‌ನನ್ನು ಅನ್ನಾಳನ್ನು ಕ್ಷಮಿಸುವಂತೆ

ಕೇಳಿಕೊಂಡಾಗ "ರಕ್ಷಣೆ ಬೇಕೆನ್ನುವ ವ್ಯಕ್ತಿ ಯನ್ನು ರಕ್ಷಿಸಬಹುದು ಆದರೆ ಒಂದು ವ್ಯಕ್ತಿ ದಾರಿ ಬಿಟ್ಟಿರುವಾಗ, ನೀತಿಗೆಟ್ಟಿರುವಾಗ ಆತ್ಮವಿನಾಶವೆ ಮೋಕ್ಷವೆಂದು ಬಗೆದಿರುವಾಗ ಅವಳ ಉದ್ಧಾರ ಹೇಗೆ ಸಾಧ್ಯ" ಎಂಬ ಅವನ ಮಾತು ಅನ್ನಾಳ ವ್ಯಕ್ತಿತ್ವ ಸರಿಪಡಿಸಲಾಗದಷ್ಟು ಪತನ ಹೊಂದಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಭಾರತೀಯರಲ್ಲಿ ಒಂದು ಮಾತಿದೆ "ಭಾರ್ಯಾರೂಪವತೀ ಶತ್ರುಃ" ಎಂದು. ಸೀತೆಯನ್ನು ಮಡದಿಯನ್ನಾಗಿ ಪಡೆದ ಶ್ರೀರಾಮ (ರಾಮಾಯಣ, ವಾಲ್ಮೀಕಿ) ಪಟ್ಟ ಪಾಡುಗಳು. ಹೆಲೆನ್‌ಳನ್ನು ಪತ್ನಿಯನ್ನಾಗಿ ಪಡೆದ ಗ್ರೀಕ್ ಅರಸ ಮೆನಿಲಾಯಸನ ದುಃಖ ದುರಂತಗಳು (ಇಲಿಯಡ್–ಹೋಮರ್) ಹಾಗೂ ಸುಂದರಿಯಾದ ಮಡದಿ ಯನ್ನು ಪಡೆದ ಶ್ರೀ ಕರೆನಿನ್ ದುಃಖಿಗಳು ಸಮಾನವೆನಿಸಬಹುದು. ಸಮಾಜದಲ್ಲಿ ತಮ್ಮ ಮಡದಿಯರನ್ನು ಕಾಯ್ದುಕೊಳ್ಳುವುದೇ ಕಠಿಣವೆನಿಸುತ್ತದೆ.

ಪತಿಯಿಂದ ದೊರೆಯದ ಸುಖವನ್ನು ಬೇರೆಯವರಿಂದ ಪಡೆಯಹೊರಟ ವಳಿಗೆ ದೊರೆತುದು ಸುಖಕ್ಕಿಂತ ದುಃಖವೇ, ಧರ್ಮ ಅವಳ ಮೇಲೆ ಸವಾರಿ ಮಾಡುತ್ತಾ ಪಾಪ ಪ್ರಜ್ಞೆಯನ್ನು ಜಾಗೃತಗೊಳಿಸುತ್ತಾ ನೋವನ್ನು ಅಧಿಕಗೊಳಿಸಿ ಚಿತ್ರಹಿಂಸೆ ನೀಡಿತು.

ಶ್ರೀಮತಿ ಅನ್ನಾಳಿಗೆ ತನ್ನ ದುರಂತದ ಅರಿವಿದೆ. ತನ್ನ ಅನೈತಿಕ ಬದುಕಿಗೆ ದೊರೆಯುವ ಶಿಕ್ಷೆಯನ್ನು ಊಹಿಸಿಯೇ ಅವಳು ನಡುಗುತ್ತಾಳೆ, ತನಗೆ ದೊರೆಯ ಬಹುದಾದ ಘೋರ ಶಿಕ್ಷೆಯನ್ನು ಅವಳು ಕಲ್ಪಿಸಿಕೊಳ್ಳಲಾರಳು. "ತನ್ನ ಪ್ರೇಮಿಯ ನ್ನೊಡಗೂಡುವ ಸಲುವಾಗಿ ಪತಿಸುತರನ್ನು ತ್ಯಜಿಸುವ ಲಜ್ಜೆಗೇಡಿ ಹೆಣ್ಣಿನಂತೆ ಅದನ್ನು ಅನಿಷ್ಟಸ್ಥಾನದೊಂದಿಗೆ ವಿನಿಮಯ ಮಾಡಿಕೊಳ್ಳುವ ಶಕ್ತಿಯೂ ಅವಳಲ್ಲಿರ ಲಿಲ್ಲ, ಪ್ರೀತಿಯ ಲೋಕದಲ್ಲಿಯೂ ಅವಳು ಸ್ವಾತಂತ್ರ್ಯವನ್ನು ಅನುಭವಿಸು ವಂತಿಲ್ಲ. ಯಾವಾಗಲೂ ಅಪರಾಧ ಶೋಧದ ಕತ್ತಿ ತಲೆಯ ಮೇಲೆ ನೇತಾಡುತ್ತಿ ರುವಾಗ ಅವಳೆಂದಿಗೂ ತಪ್ಪಿತಸ್ಥೆಯಾಗಿ ಉಳಿಯುವ ಸಂಭವವೇ ಇತ್ತು: ತನ್ನ ಗಂಡನನ್ನು ವಂಚಿಸಿ ಯಾವ ವ್ಯಕ್ತಿಯ ಬದುಕಿನೊಡನೆ ಒಂದಾಗಿ ಬಾಳುವುದು ಸಾಧ್ಯವಿರಲಿಲ್ಲವೋ, ಯಾರಿಂದ ದೂರವಾಗಿ ಪ್ರತ್ಯೇಕವಾಗಿ ಬಾಳು ನಡೆಸಬೇಕಾ ಗಿತ್ತೋ, ಅಂಥವನೊಡನೆ ಲಜ್ಜೆಗೇಡಿತನ ಸಂಬಂಧವಿರಿಸಿಕೊಳ್ಳುವ ಪ್ರಸಂಗವೊದ ಗಿತ್ತು. ಅದರ ಭಯಂಕರತೆ ಮತ್ತು ಅದರ ಪರ್ಯವಸಾನ ಅವಳಿಂದ ಕಲ್ಪಿಸಿ ಕೊಳ್ಳಲಾಗಲಿಲ್ಲ"ಎಂಬ ಕಾದಂಬರಿಕಾರನ ಮಾತುಗಳು ಅವಳ ನೈತಿಕ ಅಧಃ ಪತನದ ಅರಿವನ್ನು ಜಗಜ್ಜಾಹೀರುಪಡಿಸುತ್ತದೆ. "ಅವಳ ಬದುಕನ್ನು ರೂಪಿಸಿದ್ದ ಸಕಲ ಸಂಗತಿಗಳನ್ನು ತ್ಯಜಿಸಿದಾಗ ಧರ್ಮ ತನ್ನ ನೆರವಿಗೆ ಬರುತ್ತದೆಂದವಳು ತಿಳಿದಿದ್ದಳು, ಆದರೆ ಹಿಂದೆಂದೂ ಎದುರಿಸದಿದ್ದ ಮೊತ್ತಮೊದಲ ಬಾರಿಗೆ

ತನಗೆದುರಾದ ಪಾರಮಾರ್ಥಿಕ ಸ್ಥಿತಿಯಿಂದ ಸಂಕಟಕ್ಕೊಳಗಾದದ್ದು ಮಾತ್ರವಲ್ಲದೆ ಗಾಬರಿಗೊಳಗಾದವಳು" ಎಂಬ ಮಾತು ಅವಳ ಬದುಕಿಗೆ ಪ್ರಸ್ತಾವ ಆಸರೆಯೂ ಇಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಈ ಸಂದರ್ಭದಲ್ಲಿ ನಮ್ಮ ಮುಂದೆ ವ್ಯಕ್ತಿ-ಸಮಾಜ ಸಂಬಂಧದ ಪ್ರಶ್ನೆ ಎದುರಾಗುತ್ತದೆ. ಶ್ರೀಮತಿ ಅನ್ನಾ-ವ್ರಾಂಸ್ಕಿ ಸಮಾಜವನ್ನು ಬಿಟ್ಟು ಬಾಳಬಲ್ಲರೆ? ಎಂಬುದು. ಕಾದಂಬರಿಯಲ್ಲಿ ಶ್ರೀಮತಿ ಅನ್ನ-ವ್ರಾಂಸ್ಕಿ ಸಮಾಜದ ಸೋಂಕೇ ಬೇಡ ಎಂದು ಪ್ರಶಂತವಾದ ಸ್ಥಳವೊಂದಕ್ಕೆ ತೆರಳುತ್ತಾರೆ. ಆದರೆ ಇಂಥ ಪರಿಸರ ಆಡಂ-ಈವ್‌ರಿಂದ 'ಪ್ಯಾರಡೈಸ್'ನಲ್ಲಿ ಸಾಧ್ಯವೆ ಹೊರತು ಇಂದಿನ ನಾಗರಿಕ ಸಮಾಜದಲ್ಲಿ ಅದು ಸಾಧ್ಯವಿಲ್ಲ. ಏಕೆಂದರೆ ವ್ಯಕ್ತಿ ಸಮಾಜದ ಒಂದು ಅನಿವಾರ್ಯ ಅಂಗವಾಗಿದ್ದಾನೆ. ಸಮಾಜವನ್ನು ತಿರಸ್ಕರಿಸಿ ಅಥವಾ ಸಮಾಜದಿಂದ ತಿರಸ್ಕರಿಸಲ್ಪಟ್ಟು ಹೋದ ಇವರಿಬ್ಬರು ಸಮಾಜದಲ್ಲಿ ತಮ್ಮನ್ನು ಮತ್ತೆ ಸಂಸ್ಥಾಪಿಸಿಕೊಳ್ಳಲು ಸಾಧ್ಯವಾಗಲೂ ಇಲ್ಲ. ಸಮಾಜ ಅದಕ್ಕೆ ಅವಕಾಶಕೊಡಲೂ ಇಲ್ಲ. ವ್ರಾಂಸ್ಕಿಗೆ ಆ ಸಮಾಜ ಸ್ಥಾನವನ್ನು ಕಲ್ಪಿಸಬಹುದಾದರೂ ಶ್ರೀಮತಿ ಅನ್ನಾಳಿಗೆ ಸಮಾಜದಲ್ಲಿ ಕೊನೆಗೂ ಸ್ಥಾನ ಕಲ್ಪಿಸದೆ ಶಾಶ್ವತವಾಗಿ ಆ ಸಮಾಜದಿಂದಲೆ ಸಂಪೂರ್ಣ ಕಣ್ಮರೆಯಾಗುವಂತೆ ಮಾಡುತ್ತದೆ.

ಪ್ರೇಮ ಜೀವನದಲ್ಲಿ ಅದ್ಭುತ ಸುಖದೊರೆಯುತ್ತದೆಂದು ಹೊರಟ ಶ್ರೀಮತಿ ಅನ್ನಾ ಅದರ ಹಿಂದಿರುವ ಇನ್ನೊಂದು ಮುಖ ನೋವು, ಸಂಕಟ, ಅಸಹಾಯಕತೆ, ನಿಂದೆ, ಕಟಕಿ ಮುಂತಾದವುಗಳನ್ನು ಊಹಿಸದೆ ಪ್ರೇಮದಲ್ಲಿ ಬಿದ್ದು ನರಕಯಾತನೆಯನ್ನನುಭವಿಸುತ್ತಾಳೆ. ಅವಳ ಈ ಮಾನಸಿಕ ಹಿಂಸೆಯನ್ನು ಕಾದಂಬರಿಕಾರ ದೇವರಿಂದ ಬಂದ ಶಿಕ್ಷೆ ಎಂದು ಪರಿಗಣಿಸುತ್ತಾನೆ. ವ್ರಾಂಸ್ಕಿಯ ಬಗೆಗೆ ಅವಳಿಗೆ ಭಯ, ಸಂಶಯ, ಅಭದ್ರತೆಯ ಚಿಂತೆ ಮುಂತಾದ ಮಾನಸಿಕ ಸಂಘರ್ಷವೇರ್ಪಟ್ಟು ಶ್ರೀಮತಿ ಅನ್ನಾ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇದು ದೈವದ ಶಿಕ್ಷೆ ಎಂಬುದು ಕಾದಂಬರಿಕಾರನ ನಿಲುವು.

ಕಾದಂಬರಿಕಾರ ಮತ್ತು ಓದುಗರು ಶ್ರೀಮತಿ ಅನ್ನಾಳ ಅಭಿಪ್ರಾಯಗಳನ್ನು ತಿಳಿಯದೆ ಒಂದು ನಿರ್ಧಾರಕ್ಕೆ ಬರುವುದು ತಪ್ಪಾಗುತ್ತದೆ. ಅವಳ ಈ ಎಲ್ಲ ನಡವಳಿಕೆ ಹಾಗೂ ವರ್ತನೆಗಳಿಗೆ ಅವಳದೇ ಆದ ಸಮರ್ಥನೆ ಇರಬಹುದೆಂಬುದನ್ನು ಅಲ್ಲಗಳೆಯಲಾಗದು. ಆಕೆ ಸಹ ನಮ್ಮ ನಿಮ್ಮಂತೆ ಮಾನವಳು. ಮನುಷ್ಯ ತಪ್ಪು ಮಾಡುವುದು ಸಹಜ. ಆಕೆ ಸಮಾಜದ ನಿರ್ಬಂಧಗಳನ್ನು ಗಾಳಿಗೆ ತೂರಿ ತನ್ನ ಬಯಕೆಯ ತೃಪ್ತಿಗೆ ಮುಂದಾಗಲು ಕಾರಣ ತಾನು ಬಯಸಿದ ಪ್ರೀತಿ ತನ್ನ ಗಂಡನಿಂದ ದೊರಕಲಿಲ್ಲ. ಅದನ್ನು ಬೇರೊಬ್ಬನಿಂದ ಪಡೆಯುವುದು ತಪ್ಪಲ್ಲ

ಎಂಬ ನಿಲುವು. "ತಾನೊಬ್ಬ ಪ್ರೇಮ ವಂಚಿತ ಹೆಣ್ಣು ನಾನು ಪ್ರೇಮ-ಮಾಧುರ್ಯಕ್ಕಾಗಿ ಹಾತೊರೆಯುವ ಹೆಣ್ಣೆಂಬ ಆಲೋಚನೆಯೂ ಅವನಲ್ಲಿಲ್ಲ" ಎಂಬ ಅವಳ ಮಾತು ಅವಳ ನಡವಳಿಕೆಗಳಿಗೆ ಸಮರ್ಥನೆಯಾಗುತ್ತದೆ. ವ್ಯಕ್ತಿಯ ಇಚ್ಛೆಗಳನ್ನು ಪೂರೈಸಲಾರದ, ಅವನ ಹಿತಾಸಕ್ತಿಗಳಿಗೆ ವಿರುದ್ಧವಾದ ನಿಯಮಗಳನ್ನು ತೆಗೆದು ಹಾಕಿ ಬದಲಾಗುತ್ತಿರುವ ಮೌಲ್ಯಗಳಿಗೆ ಸಮಾಜ ಹೊಂದಿಕೊಳ್ಳಬೇಕು. ಆದರೆ ವ್ಯಕ್ತಿಯ ಸ್ವೇಚ್ಛಾಚಾರ ಹಾಗೂ ಅನೈತಿಕ ವಿಚಾರಗಳನ್ನೆಲ್ಲ ಸಮಾಜ ಸ್ವೀಕರಿಸಬೇಕೆಂದೇನಿಲ್ಲ. ಶ್ರೀಮತಿ ಅನ್ನಾಳನ್ನು ಒಬ್ಬ ಅತೃಪ್ತ ಹೆಣ್ಣಾಗಿ ನೋಡಿದಾಗ ಅವಳ ನಿಲುವು ಸಮರ್ಥನೀಯವಾದರೂ, ಆಕೆ ಪುರುಷನೊಬ್ಬನ ಪತ್ನಿಯಾಗಿರುವುದರಿಂದ ಆಕೆಯನ್ನು ಸಮಾಜದ ದೃಷ್ಟಿಯಿಂದ ನಾವಾಗಲೀ ಕಾದಂಬರಿಕಾರನಾಗಲೀ ಸಮರ್ಥಿಸುವುದು ಸಾಧ್ಯವಿಲ್ಲ. ಸಮಾಜ ಸಮತೋಲನವಾಗಿ ನಡೆಯಬೇಕಾದಲ್ಲಿ ಸಮಾಜದ ಎಲ್ಲ ವ್ಯಕ್ತಿಗಳು ಸಹಕರಿಸಬೇಕಾಗುತ್ತದೆ. ವ್ಯಕ್ತಿ ತನ್ನ ಸುತ್ತಮುತ್ತಲಿನವರ ಹಿತಾಸಕ್ತಿಗಳನ್ನು ಗಮನಲ್ಲಿಟ್ಟುಕೊಂಡು ತನ್ನ ಹಿತಾಸಕ್ತಿಗಳನ್ನು ಪೂರೈಸಿಕೊಂಡರೆ ಎಲ್ಲರಿಗೂ ಹಿತ.

ಇಚ್ಛಾ ಸ್ವಾತಂತ್ರ್ಯವನ್ನು ಹೊಂದಿರುವ ವ್ಯಕ್ತಿ ಪರಿಸರದ ವಿರುದ್ಧ ಹೋರಾಡುವಾಗ ಅವನು ಒಂದು ಉದಾತ್ತ ಕಾರ್ಯಕ್ಕೆ ಇಲ್ಲವೆ ಸಾಮಾಜಿಕ ಅಥವಾ ರಾಜಕೀಯ ತತ್ವ ಪ್ರಣಾಳಿಕೆಗೆ ಬದ್ಧನಾಗಿರಬೇಕಾಗುತ್ತದೆ. ಸ್ವಾತಂತ್ರ್ಯವನ್ನು ಬಯಸಿ ಕುಟುಂಬದ ವಿರುದ್ಧ ಇಲ್ಲವೇ ದೇಶದ ವಿರುದ್ಧ ಬಂಡೇಳುವುದು ವ್ಯಕ್ತಿಯ ಅಸ್ತಿತ್ವಕ್ಕೆ ಅಪಾಯವನ್ನೊಡ್ಡುವ ಕಾರ್ಯವಾಗುತ್ತದೆ. ಹಾಗೆ ಮಾಡಿದರೆ ಪಲಾಯನವಾದವನ್ನು ಪುರಸ್ಕರಿಸಿದಂತಾಗುತ್ತದೆ. ಆದ್ದರಿಂದ ವ್ಯಕ್ತಿ ತನಗೆ, ತನ್ನ ಸಮಾಜಕ್ಕೆ, ದೇಶಕ್ಕೆ ಬದ್ಧನಾಗಿದ್ದುಕೊಂಡು ತನ್ನ ವಿಮೋಚನೆಯನ್ನು, ತನ್ನ ಉದ್ಧಾರವನ್ನು ಮಾಡಿಕೊಳ್ಳಬೇಕಾಗುತ್ತದೆ.

ಚರಿತ್ರೆ/ರಾಜಕೀಯ

ಶ್ರೇಷ್ಠ ಸಂಸದೀಯ ಮುತ್ಸದ್ದಿ ಶ್ರೀ ಎಸ್. ನಿಜಲಿಂಗಪ್ಪ

ಡಾ॥ ಪಿ. ರಾಮಣ್ಣ

20ನೇ ಶತಮಾನ ಕಂಡ ಶ್ರೇಷ್ಠ ಮಟ್ಟದ ರಾಜಕೀಯ ಮುತ್ಸದ್ದಿ, ಮಹಾತ್ಮಗಾಂಧಿಯವರ ಸರಳತೆ, ಪರಿಶುದ್ಧತೆ ಹಾಗೂ ಉನ್ನತ ಮೌಲ್ಯಗಳನ್ನು ಮೈಗೂಡಿಸಿಕೊಂಡು ಹಗಲಿರುಳೆನ್ನದೆ ನಾಡು ನುಡಿಗಾಗಿ ಅಹರ್ನಿಷಿ ದುಡಿದ ಸಿದ್ದವನಹಳ್ಳಿ ನಿಜಲಿಂಗಪ್ಪ ಗಾಂಧಿ ಪರೀಕ್ಷೆಯಲ್ಲಿ ಪಾಸಾಗಿದ್ದ ಅಪ್ಪಟ ಗಾಂಧೀವಾದಿ. ಕರ್ನಾಟಕ ಏಕೀಕರಣ ಮತ್ತು ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧೀಜಿಯವರು ಬೋಧಿಸಿದ ಸತ್ಯ ಮತ್ತು ಅಹಿಂಸಾ ತತ್ವಗಳ ಆಧಾರದ ಮೇಲೆ ಹೋರಾಡಿ ಯಶಸ್ಸು ಸಾಧಿಸಿದ 'ಅಖಂಡ ಕರ್ನಾಟಕದ ಧೈರ್ಯಶಾಲಿ ಮುಖಂಡ', ಆಧುನಿಕ ಕರ್ನಾಟಕದ ರೂವಾರಿ, ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಮೌಲ್ಯಗಳ ಉಳಿವಿಗಾಗಿ ಹೋರಾಡಿದ ಕಳಂಕರಹಿತ, ಓರ್ವ ಅಪರೂಪ ರಾಜಕೀಯ ಧುರೀಣ, ಎಸ್.ನಿಜಲಿಂಗಪ್ಪನವರ ಹೆಸರು ರಾಜ್ಯದ ರಾಜಕೀಯ ಚರಿತ್ರೆಯಲ್ಲಿ ಸ್ಥಿರಸ್ಥಾಯಿಯಾಗಿ ಉಳಿದಿದೆ. ಮೂರು ಬಾರಿ ಕರ್ನಾಟಕದ ಮುಖ್ಯಮಂತ್ರಿಯಾಗಿ 8 ವರ್ಷಗಳ ಕಾಲ ಸರ್ವತೋಮುಖ ಅಭಿವೃದ್ಧಿಗೆ ಅಹರ್ನಿಷಿ ದುಡಿದ ಕರ್ನಾಟಕ ರತ್ನ ಎಸ್ಸೆನ್ ನಿಷ್ಠಾವಂತ ಆಡಳಿತಗಾರ. ರಾಜಕೀಯ ಆಶೋತ್ತರಗಳಾಗಲಿ, ತಮ್ಮ ವೈಯಕ್ತಿಕ ಬದುಕಿನಲ್ಲಾಗಲೀ, ಸಾಫಲ್ಯ-ವೈಫಲ್ಯಗಳನ್ನು ಸಮನಾಗಿ ಸ್ವೀಕರಿಸುತ್ತಾ ಸ್ವಾಸ್ಥ್ಯವನ್ನು ಕಾಪಾಡಿಕೊಂಡು ಬಂದವರು, ತಮ್ಮ ಜೀವನ ಸಾಧನೆಯ ಏಳು ಬೀಳುಗಳ ನಡುವೆ ಕರ್ನಾಟಕದ ಏಳಿಗೆಗಾಗಿ ಶ್ರಮಿಸಿ ವಿರೋಧಿಗಳನ್ನು ತಲೆದೂಗುವಂತೆ ಮಾಡಿದ ಜನಪ್ರಿಯ ಮುಖ್ಯಮಂತ್ರಿ. ಎಸ್ಸೆನ್ ತಮ್ಮ ಆಡಳಿತದ ಅವಧಿಯಲ್ಲಿ ಅಸಮಾನ್ಯತೆ, ಸ್ವಜನ ಪಕ್ಷಪಾತ ಮತ್ತು ಭ್ರಷ್ಟಾಚಾರಗಳ ವಿರುದ್ಧ ಹೋರಾಡಿ ಪ್ರಧಾನಿಗಳನ್ನೇ ಪ್ರಶ್ನಿಸಿ ಸಕ್ರಿಯ ರಾಜಕಾರಣದಿಂದ ಹೊರನೆಡೆದರೂ ದಶಕಗಳ ಕಾಲ ರಾಜ್ಯ ಮತ್ತು ರಾಷ್ಟ್ರದ ಆಡಳಿತ ರಾಜಕಾರಣ ಮತ್ತು ಸಮಾಜದ ಆಗುಹೋಗುಗಳನ್ನು ಗಮನಿಸುತ್ತಾ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನವನ್ನು ನೀಡುತ್ತಿದ್ದರು.

ಎಸ್ಸೆನ್‌ರವರು ಡಿಸೆಂಬರ್ 10, 1902ರಲ್ಲಿ ಬಳ್ಳಾರಿ ಜಿಲ್ಲೆಯ ಹಡಗಲಿ ತಾ॥ ಹಲವಾಗಲು ಗ್ರಾಮದ ಶ್ರೀಮಾನ್ ಅಬಲೂರು ಅಡಿವಪ್ಪ ಮತ್ತು ಶ್ರೀಮತಿ

ಲೀಲಮ್ಮ ಅವರ ಮಗನಾಗಿ ಸಂಪ್ರದಾಯಸ್ಥ ಬಡ ಕುಟುಂಬದಲ್ಲಿ ಜನಿಸಿದ್ದರೂ
ವೈಜ್ಞಾನಿಕ ಮನೋಧರ್ಮವನ್ನು ಮೈಗೂಡಿಸಿಕೊಂಡು ಬೆಳೆದರು. ಬಾಲ್ಯದ
ದಿನಗಳಲ್ಲಿ "ಅವ್ವ ಕೂಲಿಮಾಡಿ ತಂದ ಅಲ್ಪ ಕೂಲಿಯ ಜೊತೆಗೆ ಆಗಾಗ
ಮದುವೆ ಮತ್ತು ನಿಶ್ಚಯ ಕಾರ್ಯದ ಮಹೂರ್ತಗಳಲ್ಲಿ ನಮಗೆ ಬರುತ್ತಿದ್ದ ವೀಳೆದೆಲೆ,
ಅಡಿಕೆ, ತೆಂಗಿನಕಾಯಿ, ಬಾಬು (ರಿವಾಜು)ನ ವರಮಾನವನ್ನು ಅವ್ವ
ಕೂಡಿಡುತ್ತಿದ್ದಳು" ಎಂದು ಎಸ್ಸೆನ್ ತಮ್ಮ ಆತ್ಮಕತೆಯಲ್ಲಿ ಹೇಳಿದ್ದಾರೆ. ಕಡು
ಬಡತನದಲ್ಲಿ ಸ್ವಂತ ವ್ಯಕ್ತಿತ್ವದಿಂದ ಮೇಲೆ ಬಂದರೂ, ಬಡತನ ಒಂದು
ಶಾಪವಾಗದಿದ್ದರೂ ಅದು ವರವಂತೂ ಅಲ್ಲ ಎಂಬುದು ಅವರ ಪುಸ್ತಕ "ಮೈ ಲೈಫ್
ಆ್ಯಂಡ್ ಪಾಲಿಟಿಕ್ಸ್"ನಿಂದ ವ್ಯಕ್ತವಾಗುತ್ತದೆ. ನಂತರ ಎಸ್ಸೆನ್ ತಮ್ಮ ತಂದೆ ಸಾವಿನ
ನಂತರ ತಾಯಿಯೊಂದಿಗೆ ಸಿದ್ದವನಹಳ್ಳಿಯಲ್ಲಿ ನೆಲೆಸಿದ್ದರಿಂದಾಗಿ ಸಿದ್ದವನಹಳ್ಳಿ
ನಿಜಲಿಂಗಪ್ಪ ಎಂದು ಕರೆಯಲ್ಪಟ್ಟರು. ತಮ್ಮ ಬಾಲ್ಯದ ವಿದ್ಯಾಭ್ಯಾಸವನ್ನು ಚಿತ್ರದುರ್ಗದ
ಚಿಕ್ಕಪ್ಪನ ಮನೆಯಲ್ಲಿದ್ದುಕೊಂಡು ಮುಗಿಸಿದರು. ಬೆಂಗಳೂರಿನಲ್ಲಿ ಬಿ.ಎ. ಪದವಿಯನ್ನು
ಮತ್ತು ಪುಣೆಯಲ್ಲಿ ಕಾನೂನು ಪದವಿಯನ್ನು ಪಡೆದುಕೊಂಡರು. 1926ರಲ್ಲಿ ಎಸ್ಸೆನ್
ವಕೀಲಿ ವೃತ್ತಿಯನ್ನು ಪ್ರಾರಂಭಿಸಿ ಕಪ್ಪು ಕೋಟು ಧರಿಸಿದ ದಿನವೇ ಕೇಸ್ ಒಂದು
ಬಂದಿತು. ಕೇಸ್ ದಾಖಲು ಮಾಡುವ ಕ್ರಮ ಅವರಿಗೆ ತಿಳಿದಿರಲಿಲ್ಲ. ನಿವೃತ್ತ
ಗುಮಾಸ್ತನ ನೆರವಿನಿಂದ ಎಸ್ಸೆನ್ ಕೇಸ್ ದಾಖಲಿಸಿದರು. ತಮಗೆ ಬಂದ ರೂ. 2
ರಲ್ಲಿ ಗುಮಾಸ್ತನಿಗೆ ರೂ. 5 ನೀಡಲು ಹೋದಾಗ ಗುಮಾಸ್ತನು ಅದನ್ನು ಪಡೆಯಲು
ನಿರಾಕರಿಸುತ್ತಾನೆ. ಈ ಹಣ ಸಂಪಾದನೆಯಲ್ಲಿ ನಿನ್ನದು ಮುಖ್ಯಪಾತ್ರವಿದೆ. ಆದ್ದರಿಂ
ನೀನು ಹಣ ತೆಗೆದುಕೊಳ್ಳಲೇ ಬೇಕೆಂದು ಬಲವಂತದಿಂದ ಎಸ್ಸೆನ್ ಗುಮಾಸ್ತನಿ
ಹಣ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು. ಹೀಗೆ ನಿಜಲಿಂಗಪ್ಪನವರು ತಮ್ಮ ವೃ
ಜೀವನದಲ್ಲಿ ಬಹುಬೇಗನೆ ನುರಿತ ವಕೀಲರಾದರು. ಚಿತ್ರದುರ್ಗದಲ್ಲಿ ಮಾತ್ರವಲ್ಲದೆ
ರಾಜ್ಯದ ಉಚ್ಚ ನ್ಯಾಯಾಲಯದವರೆಗೂ ತಮ್ಮ ಕೌಶಲ್ಯವನ್ನು ಪ್ರದರ್ಶಿಸು
ಅವಕಾಶ ಪ್ರಾಪ್ತವಾಯಿತು. ವಕೀಲರಾಗಿ ಎಸ್ಸೆನ್‌ರವರ ಖ್ಯಾತಿ ಬ
ಡಾ|| ಜವರೇಗೌಡರು ಹೇಳುವಂತೆ ""ಎಸ್ಸೆನ್ ಮೊಕದ್ದಮೆಯ ಸೋಲು ಗೆಲು
ಗಳಿಂದ ಕುಗ್ಗುವ ಹಾಗು ಹಿಗ್ಗುವ ಪ್ರವೃತ್ತಿಯವರಲ್ಲ. ತಮಗೆ ಸರಿ ಎಂದು ಕಂಡದ್ದ
ಯುಕ್ತವಾದ ತರ್ಕಪುಷ್ಟಿ, ಪ್ರಾಮಾಣಿಕವಾಗಿ ವಾದಿಸುವಷ್ಟರಿಂದಲೆ ಅವರಿಗೆ ತೃಪ್ತಿ
ಆಸೆ ಆಮಿಷಗಳ ಮೂಲಕ ನ್ಯಾಯಮೂರ್ತಿಗಳನ್ನೊಲಿಸುವ, ಕಕ್ಷಿಗಾರರಿ
ಗೊತ್ತಾಗದಂತೆ ಎದುರು ಪಕ್ಷದ ವಕೀಲರೊಡನೆ ರಹಸ್ಯ ಸಂಧಾನದಲ್ಲಿ ತೊಡಗು
ಸಾಕ್ಷಿಗಳಿಂದ ಸುಳ್ಳು ಹೇಳಿಸುವ, ಅಪರಾಧಿಗಳಿಗೆ ಪ್ರೋತ್ಸಾಹ ಕೊಡು
ಅಧಿಕಾರಿಗಳನ್ನು ಒಲಿಸುವ ಭ್ರಷ್ಟಾಚಾರಕ್ಕೆ ಅವರು ಹೊರತು" ಎನ್ನುವುದು ಅವರಲ್ಲಿ
ಪ್ರಾಮಾಣಿಕತೆಯ ವಕಾಲತ್ತು ಯಶಸ್ಸಿಗೆ ದಾರಿ ಎಂಬುದನ್ನು ತಿಳಿಯಬಹುದು
ಹೀಗೆ ಹಳ್ಳಿಯ ಬಡಕುಟುಂಬದಿಂದ ಬಂದಿದ್ದ ನಿಜಲಿಂಗಪ್ಪನವರು ರೈತರ ಬ

ಸಹಾನುಭೂತಿ ಉಳ್ಳವರಾಗಿದ್ದರು. ಈ ರೀತಿಯಲ್ಲಿ 1939ರ ಹೊತ್ತಿಗಾಗಲೆ ಕಾಂಗ್ರೆಸಿನ ಅನುಯಾಯಿಯಾಗಿದ್ದ ಎಸ್ಸೆನ್‌ರವರ ಬದುಕು ರಾಷ್ಟ್ರೀಯ ಬದುಕಿನೊಂದಿಗೆ ಬೆರೆತುಹೋಗಿತ್ತು. ಕಾನೂನುಭಂಗ ಚಳವಳಿಯಲ್ಲಿ ಭಾಗವಹಿಸಿದ ಎಸ್ಸೆನ್ ಚಿತ್ರದುರ್ಗದ ತುರುವನೂರಿನ ಈಚಲು ಮರ ಕಡಿಯುವ ಚಳವಳಿಯಲ್ಲಿ ಪಾಲ್ಗೊಂಡಿದ್ದರ ಪರಿಣಾಮವಾಗಿ ತಮ್ಮ ವಕೀಲಿ ವೃತ್ತಿಯ ಸನ್ನದ್ದನ್ನು ಕಳೆದುಕೊಳ್ಳಬೇಕಾಯಿತು. ತಮ್ಮ ವಕೀಲಿವೃತ್ತಿಯಿಂದ ಹೊರಬರುವ ಮೂರು ವರ್ಷಗಳ ಮೊದಲೆ ಎಸ್ಸೆನ್‌ರವರು ಚಿತ್ರದುರ್ಗ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು.

ಈ ರೀತಿಯ ಅವಿರತ ಹೋರಾಟದ ಫಲವಾಗಿ ಎಸ್ಸೆನ್‌ರವರು ಜನಮನ್ನಣೆ ಗಳಿಸಿದರು. 1946ರಲ್ಲಿ ಕೆ.ಪಿ.ಸಿ.ಸಿ. ಅಧ್ಯಕ್ಷರಾದರೂ ಸುಮ್ಮನಿರದೆ ಏಕೀಕರಣ ಚಳವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡದ್ದು ಅವರಲ್ಲಿದ್ದ ದೇಶಪ್ರೇಮಕ್ಕೆ ಹಿಡಿದ ಕನ್ನಡಿ. ಏಕೀಕರಣ ಚಳುವಳಿಯಲ್ಲೂ ಇದ್ದು ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿದ್ದುದು ಸಹ ನೆಹರುರವರ ಅವಕೃಪೆಗೆ ಕಾರಣವಾಗಿದ್ದರೂ, ಎಸ್ಸೆನ್ ತಮ್ಮ ಪಟ್ಟನ್ನು ಸಡಿಲಿಸದೆ ಏಕೀಕರಣ ಚಳವಳಿಯ ಅವಶ್ಯಕತೆಯನ್ನು ರಾಷ್ಟ್ರನಾಯಕರಿಗೆ ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾದರು. ಈ ರೀತಿ ಏಕೀಕರಣ ಹೋರಾಟದ ಫಲವಾಗಿ ಎಸ್ಸೆನ್ 1952ರಲ್ಲಿ ಪ್ರಚಂಡ ಬಹುಮತದಿಂದ ಲೋಕಸಭೆಗೆ ಆಯ್ಕೆಯಾದರು. ಈ ಸಂದರ್ಭದಲ್ಲಿ ಪಕ್ಷದ ಆಂತರಿಕ ಕಾರಣಗಳಿಂದ ಏಕೀಕರಣದ ಬಗ್ಗೆ ಕಾಂಗ್ರೆಸ್ಸಿಗರು ಮಾತನಾಡಬಾರದೆಂದು ಪಕ್ಷದ ವರಿಷ್ಠರ ಸೂಚನೆ ಇದ್ದಾಗಲೂ ಎಸ್ಸೆನ್ ಚಳುವಳಿಯಿಂದ ಹಿಂದೆ ಸರಿಯಲಿಲ್ಲ. ಇವರ ಈ ಹೋರಾಟದ ಪರಿಣಾಮದಿಂದಾಗಿ ನವಂಬರ್ 1, 1956 ರಂದು ಕರ್ನಾಟಕ ಏಕೀಕರಣವಾಯಿತು. ನಂತರ ಸಿದ್ದವನಹಳ್ಳಿ ನಿಜಲಿಂಗಪ್ಪನವರು ಏಕೀಕೃತ ಕರ್ನಾಟಕದ ಮೊದಲ ಮುಖ್ಯಮಂತ್ರಿ ಎಂಬ ಕೀರ್ತಿಗೆ ಪಾತ್ರರಾದರು.

"ಏಕೀಕರಣದ ರೂವಾರಿ" ಎಸ್ಸೆನ್ ಸ್ವಾತಂತ್ರ್ಯ ಹೋರಾಟಗಾರರು. ಕ್ರಿಯಾಶೀಲ ರಾಜಕೀಯ ಮುತ್ಸದ್ದಿ ಹಾಗು ಕರ್ನಾಟಕ ಏಕೀಕರಣದ ರೂವಾರಿಯೂ ಹೌದು. 1944ರಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ್ಯೂ, ಕರ್ನಾಟಕ ಏಕೀಕರಣವಾಗಲೇಬೇಕೆಂಬ ದೃಢಸಂಕಲ್ಪ ಉಳ್ಳವರಾಗಿದ್ದರು 1946ರ ಜನವರಿಯಲ್ಲಿ ಮುಂಬಯಿಯಲ್ಲಿ ನಡೆದ ಏಕೀಕರಣದ ಸಮ್ಮೇಳನವನ್ನು ಉದ್ಘಾಟಿಸುತ್ತಾ ಸರ್ದಾರ್ ವಲ್ಲಭಭಾಯಿ ಪಟೇಲರು ಕನ್ನಡ ಜನತೆಯ ಆಸೆ ಆಕಾಂಕ್ಷೆಗಳ ಅರಿವು ನನಗಿದೆ, ಕನ್ನಡ ಮಾತನಾಡುವವರೆಲ್ಲರೂ ಏಕೀಕೃತ ಕನ್ನಡ ಪ್ರಾಂತ್ಯದ ನೆರಳಿನಲ್ಲಿಯೆ ನಿಲ್ಲಬೇಕೆಂಬ ಆಕಾಂಕ್ಷೆಗೆ ನನ್ನ ಹೃತ್ಪೂರ್ವಕ ಬೆಂಬಲವಿದೆ ಎಂದು ನಿಜಲಿಂಗಪ್ಪನವರ ಅಭಿಪ್ರಾಯಕ್ಕೆ ಪುಷ್ಟಿ ನೀಡಿದರು 1947ರ ಮೈಸೂರು ಚಲೋ ಚಳವಳಿಯಲ್ಲಿ ಭಾಗವಹಿಸಲು ದೆಹಲಿಯಿಂದ ಕೊಡಗಿನ ಮಾರ್ಗವಾಗಿ

ಬರುತ್ತಿದ್ದ ನಿಜಲಿಂಗಪ್ಪ ನವರನ್ನು ಬಂಧಿಸಿ 20 ದಿನಗಳು ಸೆರೆಯಲ್ಲಿಡಲಾಗಿತ್ತು. ಸೆರೆವಾಸ ಅನುಭವಿಸಿದರೂ ಇವರ ದೇಶಾಭಿಮಾನ ಕುಗ್ಗಲಿಲ್ಲ. ಬಿಡುಗಡೆಯ ನಂತರ ನಿಜಲಿಂಗಪ್ಪನವರು ನಾಡುನುಡಿಗಾಗಿ ಅವಿರತವಾಗಿ ಶ್ರಮಿಸತೊಡಗಿದರು. 1947ರ ಡಿಸೆಂಬರ್‌ನಲ್ಲಿ ಕಾಸರಗೋಡಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿತ್ತು. ಈ ಸಮ್ಮೇಳನದಲ್ಲಿ ನಿಜಲಿಂಗಪ್ಪನವರು ಮಾತನಾಡುತ್ತಾ ಕರ್ನಾಟಕ ಪ್ರಾಂತ್ಯ ನಿರ್ಮಾಣವಾಗದಿದ್ದರೆ ದೆಹಲಿಯಲ್ಲಿ ಸಿದ್ಧವಾಗುತ್ತಿರುವ ರಾಜ್ಯಾಂಗವನ್ನು ಕನ್ನಡಿಗರು ಅಂಗೀಕರಿಸುವುದಿಲ್ಲ. ಅದನ್ನು ತೀವ್ರವಾಗಿ ಪ್ರತಿಭಟಿಸಲಾಗುವುದು ಎಂದು ಗುಡುಗಿದರು. ಆ ಸಮಯದಲ್ಲಿ ಸ್ವಾತಂತ್ರ್ಯಾನಂತರ ಕರ್ನಾಟಕ ಏಕೀಕರಣ ಸಾಧ್ಯವಿಲ್ಲ ಎನ್ನುವ ಆತಂಕ ಕನ್ನಡಿಗರನ್ನು ಕಾಡತೊಡಗಿತು. ಸ್ವಾತಂತ್ರ್ಯಾನಂತರ 1953ರಲ್ಲಿ ಅಧಿಕಾರ ಪಡೆದಿದ್ದ ಕಾಂಗ್ರೆಸ್ ನಾಯಕರು ಇದನ್ನು ಮರೆತು ತಣ್ಣಗಿದ್ದರು. ಆದರೆ ಎಸ್ಸೆನ್ ಮತ್ತು ಕೆಲವು ಲೋಕಸಭಾ ಸದಸ್ಯರು ಏಕೀಕರಣ ಬೇಡಿಕೆಯನ್ನು ಜೀವಂತವಾಗಿರಿಸಿದ್ದರು. ಕೆಲವು ಕಾಂಗ್ರೆಸ್ ನಾಯಕರು ಏಕೀಕರಣ ಚಳವಳಿಯನ್ನು ಕೆರಳಿಸುತ್ತಾ ಭಾವನಾತ್ಮಕ ಹೇಳಿಕೆಗಳನ್ನು ನೀಡುತ್ತಿದ್ದರು. ಇದರಿಂದ ಎಸ್ಸೆನ್‌ರವರಿಗೆ ಬೇಸರವಾಗಿತ್ತು ಹಾಗೂ ನೆಹರುರವರು ದೇಶವು ಆರ್ಥಿಕ, ಸಾಮಾಜಿಕ ಸಮಸ್ಯೆಗಳಿಂದ ಬಳಲುತ್ತಿದೆ. ಈ ಸಂದರ್ಭದಲ್ಲಿ ವಿನಾಶಕಾರಿ, ಜಾತಿ-ಮತ ಮತ್ತು ಪ್ರಾಂತೀಯ ವಿಷಯಗಳನ್ನು ಭಾವನಾತ್ಮಕವನ್ನಾಗಿಸಬಾರದೆಂದು, ಈ ರೀತಿ ಚಳುವಳಿಗಳನ್ನು ಪ್ರಚೋದಿಸಿದರೆ ಶಿಸ್ತಿನ ಕ್ರಮಕ್ಕೆಗೊಳ್ಳುವುದಾಗಿ ತಿಳಿಸುತ್ತಾ ನೆಹರು ಕಾಂಗ್ರೆಸಿಗರ ಬಾಯಿ ಮುಚ್ಚಿಸಿದ್ದರು. ಆದರೆ ನಿಜಲಿಂಗಪ್ಪನವರು ಮಾತ್ರ ಸಮಯ ಸಿಕ್ಕಾಗಲೆಲ್ಲ ನೆಹರುರವರನ್ನು ಭೇಟಿ ಮಾಡಿ ಏಕೀಕರಣದ ವಿಚಾರವನ್ನು ಪ್ರಸ್ತಾಪಿಸುತ್ತಲೇ ಇದ್ದರು ಮತ್ತು ಇದಕ್ಕೆ ಸಂಬಂಧಿಸಿದಂತೆ ಸುದೀರ್ಘವಾಗಿ ಪತ್ರ ವ್ಯವಹಾರವೂ ನಡೆದಿತ್ತು. ಈ ವಿಚಾರದಲ್ಲಿ ನೆಹರುರವರು 'ನಿಜಲಿಂಗಪ್ಪನವರಿಗೆ ನೀವು ಏಕೀಕರಣ ಬೇಡಿಕೆಯನ್ನು ಏಕೆ ಕೈಬಿಡಬಾರದು' ಎಂದಾಗ, ನೆಹರೂರವರ ಮಾತಿಗೆ ನಿಜಲಿಂಗಪ್ಪನವರು ಜನತೆಗೆ ಬೇಕಾದ ಯಾವುದನ್ನೂ ನಾನು ಬಿಟ್ಟುಕೊಡಲಾರೆ ಎಂದು ನಿಷ್ಠೂರವಾಗಿ ನುಡಿದ ತತ್ವನಿಷ್ಠರು. ಎಸ್ಸೆನ್ ಈ ನಿಟ್ಟಿನಲ್ಲಿ 11-3-53ರಲ್ಲಿ ಅಂದಿನ ಪ್ರಧಾನಮಂತ್ರಿಗಳಾದ ನೆಹರೂರವರಿಗೆ ಪತ್ರ ಬರೆದು ಬಳ್ಳಾರಿ, ಮಡಕಶಿರಾ ತಾಲ್ಲೂಕುಗಳನ್ನು ಮೈಸೂರು ರಾಜ್ಯಕ್ಕೆ ಸೇರಿಸಬೇಕೆಂದು ಒತ್ತಾಯಿಸಿದರು. ಆಗ ನೆಹರೂರವರು ಆದವಾನಿ, ಆಲೂರು, ಬಳ್ಳಾರಿಗಳನ್ನು ಆಂಧ್ರಪ್ರದೇಶದಲ್ಲಿಯೇ ಉಳಿಸಲು, ಹೈದರಾಬಾದ್ ಕಾಂಗ್ರೆಸ್ ಅದಿವೇಶನದ ತೀರ್ಮಾನದಂತೆ ಘೋಷಿಸಿದ ತಕ್ಷಣವೇ ಮುಂಡಗೋಡು ತಾಲ್ಲೂಕಿನ ನಾರಾಯಣ ಪೈಗಳು ಒಂದು ಕಡೆ ಉಪವಾಸ ಸತ್ಯಾಗ್ರಹ ಕೈಗೊಂಡರು ಮತ್ತು ಸರ್ಕಾರದ ಈ ತೀರ್ಮಾನದಿಂದ ಬೇಸರಗೊಂಡ ಬಳ್ಳಾರಿಯ ಜನ ಹರತಾಳವನ್ನು ಪ್ರಾರಂಭಿಸಿದರು. ಈ ಹರತಾಳದಿಂದ ಬಳ್ಳಾರಿ ಜನಜೀವನ ಅಸ್ತವ್ಯಸ್ತವಾಯಿತು. ಈ

ಸಮಯದಲ್ಲಿ ಅದರಗುಂಚಿಯ ಶಂಕರ ಗೌಡರು ಏಕೀಕರಣಕ್ಕಾಗಿ ಉಪವಾಸ ಸತ್ಯಾಗ್ರಹ ಕೈಗೊಂಡರು. ಕರ್ನಾಟಕ ಪ್ರಾಂತ್ಯದ ಪ್ರಸಕ್ತ ಪರಿಸ್ಥಿತಿಯ ಗಂಭೀರತೆಯನ್ನು ಅರಿತ ಕಾಂಗ್ರೆಸ್ ಹುಬ್ಬಳ್ಳಿಯಲ್ಲಿ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿತು.

ಕರ್ನಾಟಕ ರಾಜ್ಯವನ್ನು 1954ರ ಅಂತ್ಯದೊಳಗಾಗಿ ರಚಿಸಿ ಭಾರತ ಸರ್ಕಾರ 1955ರ ಅಕ್ಟೋಬರ್ ಅಂತ್ಯದೊಳಗೆ ಸ್ಪಷ್ಟ ಹಾಗೂ ಅಸಂದಿಗ್ಧ ರೀತಿಯಲ್ಲಿ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಬೇಡಿಕೆಯನ್ನು ಮನ್ನಿಸದಿದ್ದರೆ, ಕಾಂಗ್ರೆಸ್ ಪಕ್ಷದ ಸಂಸತ್ ಸದಸ್ಯರು ಹಾಗೂ ಶಾಸಕರು ಸಾರಾಸಗಟಾಗಿ ರಾಜೀನಾಮೆ ಸಲ್ಲಿಸಬೇಕೆಂದು ಈ ಸಭೆಯಲ್ಲಿ ತೀರ್ಮಾನಿಸಲಾಯಿತು. ಪ್ರಾಂತೀಯ ಕಾಂಗ್ರೆಸಿಗರ ಈ ತೀರ್ಮಾನ ವನ್ನು ಶಂಕರಗೌಡರಿಗೆ ತಿಳಿಸಿ ಉಪವಾಸ ನಿಲ್ಲಿಸುವಂತೆ ಕೇಳಲು ನಿಜಲಿಂಗಪ್ಪನವರು ಬಳ್ಳಾರಿಗೆ ಹೋದಾಗ ಅವರಿಗೆ ಅಭೂತಪೂರ್ವ ಸ್ವಾಗತ ನೀಡಿದ ಜನತೆ, ಸಂತೋಷ ಸಂಭ್ರಮದಿಂದ ತಮ್ಮ ನಾಯಕನನ್ನು ಬರಮಾಡಿಕೊಂಡರು ಮತ್ತು ಮೇ 25, 1953 ರಂದು ನೀಲಗಿರಿಯ ಕರ್ನಾಟಕ ಸಂಘವನ್ನು ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಮುಖ್ಯಮಂತ್ರಿ ಕೆ.ಹನುಮಂತಯ್ಯನವರು ಉದ್ಘಾಟಿಸಿದ ಸಂದರ್ಭ ದಲ್ಲಿ ಅಲ್ಲಿಯ ಜನರು ನೀಲಗಿರಿಯನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಮನವಿ ಸಲ್ಲಿಸಿದರು. ನೀಲಗಿರಿಯನ್ನು ಕುರಿತು ರಾಜ್ಯ ಪುನರ್ ವಿಂಗಡಣಾ ಆಯೋಗದ ಮುಂದೆ ಎಸ್ಸೆನ್ ಮೇ 7, 1954 ರಂದು ಚರ್ಚಿಸಿದರು, ಹಾಗೂ ವಿವಿಧ ಪಕ್ಷಗಳ ಮುಖಂಡರು ರಾಜ್ಯದ ವಿವಿಧ ಭಾಗಗಳಿಂದ ಬಂದು ದಾವಣಗೆರೆಯಲ್ಲಿ ಸೇರಿ ಚರ್ಚಿಸಿ ಒಮ್ಮತದ ಮನವಿಯೊಂದನ್ನು ಸಿದ್ಧಪಡಿಸಿದರು. ಕನ್ನಡಿಗರ ಬಗ್ಗೆ ಮತ್ತು ಇನ್ನು ಹಲವಾರು ಪ್ರಾಂತ್ಯಗಳ ಬಗೆಗೂ ಚರ್ಚೆ ನಡೆಸುವಂತೆ ನಿಜಲಿಂಗಪ್ಪನವರಿಗೆ ಸರ್ವಾಧಿಕಾರ ನೀಡಲಾಯಿತು. ನಂತರ ನಿಜಲಿಂಗಪ್ಪನವರು ಮೇ 5, 1953ರಲ್ಲಿ ಮಿಶ್ರರವರನ್ನು ಭೇಟಿಮಾಡಿ ಮನವಿ ಸಲ್ಲಿಸಿ, ಬಳ್ಳಾರಿ ತಾಲ್ಲೂಕನ್ನು ಕುರಿತು ಕೂಲಂಕುಷವಾಗಿ ಚರ್ಚಿಸಲಾಯಿತು. ಈ ಚರ್ಚೆಯ ಪರಿಣಾಮವಾಗಿ ಮಿಶ್ರರವರು ಮಾಡಿದ ಶಿಫಾರಸ್ಸನ್ನು ಕೇಂದ್ರ ಅಂಗೀಕರಿಸಿತು. ಸ್ನೇಹ ಸೌಹಾರ್ದದ ಮೂಲಕ ಜೂನ್ 17, 1955 ರಂದು ನೆಹರುರವರು ನಿಜಲಿಂಗಪ್ಪನವರ ಪತ್ರಕ್ಕೆ ಉತ್ತರಿಸುತ್ತಾ, 'ಕರ್ನಾಟಕ ರಾಜ್ಯ ರಚನೆ ಈಗ ಸುಲಭವಾಗಿದೆ. ಬೇರೆ ಬೇರೆ ಕಾರಣಗಳಿಂದ ಈ ಬಗ್ಗೆ ತೀರ್ಮಾನ ಕೈಗೊಳ್ಳಲು ತಡವಾಗಿದೆ. ಮೈಸೂರು ಏಕೀಕರಣಕ್ಕೆ ಅಡ್ಡಿ ಎಂಬ ಆತಂಕವೂ ಈಗಿಲ್ಲ, ಯಾವುದೇ ಪ್ರಾಂತ್ಯ ರಚನೆಯನ್ನು ಪ್ರತ್ಯೇಕವಾಗಿ ನಿರ್ಧರಿಸುವ ಬದಲು ಎಲ್ಲಾ ಸಮಸ್ಯೆಗಳನ್ನು ಒಮ್ಮೆಗೆ ಬಗೆಹರಿಸುವುದು ಲೋಕಪ್ರಿಯವೆಂದು ಮತ್ತು ವರಿಷ್ಠಾಧಿಕಾರ ಉಳ್ಳ ಪ್ರಾಂತ್ಯಗಳ ಪುನರ್ವಿಂಗಡನಾ ಆಯೋಗವನ್ನು ಈ ವರ್ಷದ ಕೊನೆಯೊಳಗಾಗಿ ರಚಿಸಲಾಗುವುದು' ಎಂದು ನೆಹರು

ತಿಳಿಸಿದರು. ಈ ಪ್ರಯತ್ನದಿಂದಾಗಿ 1956 ಜನವರಿ 26 ರಂದು ಕನ್ನಡ ಮಾತನಾಡುವ ಎಲ್ಲಾ ಪ್ರಾಂತ್ಯಗಳನ್ನು ಒಟ್ಟುಗೂಡಿಸಿ ಮೈಸೂರು ರಾಜ್ಯ ರಚನೆಯಾಯಿತು. ಈ ಕಾರ್ಯವು ರಾಜಕೀಯ ಕ್ಷೇತ್ರದ ಯಶಸ್ಸಿಗೆ ಸಂಪರ್ಕವೂ ಅನಿವಾರ್ಯಗಳಲ್ಲೊಂದು ಎಂದು ನಿಜಲಿಂಗಪ್ಪನವರು ಬಲ್ಲವರಾಗಿದ್ದರು ಮತ್ತು ಗಡಿ ನಿರ್ಣಯದ ನಂತರ ನೆರೆಹೊರೆಯ ರಾಜ್ಯಗಳ ನಾಯಕರ ಮನಸ್ಸಿನಲ್ಲಿ ಯಾವುದೇ ಬಗೆಯ ಕಟು ನಿಲ್ಲಬಾರದೆಂಬುದು ಅವರ ನಿಲುವಾಗಿತ್ತು. ಸಮಸ್ಯೆ ಯಾವುದೇ ಇರಲಿ ಅದನ್ನು ಮಾತಿನ ಮೂಲಕ ಬಗೆಹರಿಸಿಕೊಳ್ಳಬಹುದೆಂದು ನಂಬಿದ್ದರು. ಅವರು ಬಳ್ಳಾರಿ ಸಮಸ್ಯೆಯನ್ನು ಬಗೆಹರಿಸಿದ್ದೇ ಹೀಗೆ. ಸಮಯ ಸಿಕ್ಕಾಗಲೆಲ್ಲಾ ಎಸ್ಸೆನ್‌ರವರು ಆಯೋಗದ ಸದಸ್ಯರನ್ನು ಪ್ರತ್ಯೇಕವಾಗಿ ಅಥವಾ ಒಟ್ಟಾಗಿ ಕಂಡು ವಿಶ್ಲೇಷಿಸಿ ಅಪೇಕ್ಷೆಗಳನ್ನು ಬಗೆಹರಿಸುತ್ತಿದ್ದರು. ಬಳ್ಳಾರಿ, ಬೆಳಗಾಂ, ಕಾಸರಗೋಡು ಮೊದಲಾದ ಪ್ರದೇಶಗಳ ಸೇರ್ಪಡೆಯ ಬಗ್ಗೆ ಗಾಳಿಸುದ್ದಿ ಕಿವಿಗೆ ಬಿದ್ದಾಗ ಆಯೋಗದ ಸದಸ್ಯರಿಗೆ ಪತ್ರ ಬರೆದು ಕರ್ನಾಟಕದ ನಿಲುವನ್ನು ತಿಳಿಸುತ್ತಿದ್ದರು. ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಫೆಬ್ರವರಿ 19, 1956 ರಂದು ಬೆಂಗಳೂರಿನಲ್ಲಿ ಸಭೆ ಸೇರಿತ್ತು. ಈ ಸಭೆಯಲ್ಲಿ ವೀರಣ್ಣಗೌಡ, ಎಚ್.ಸಿ.ದಾಸಪ್ಪ ಹಾಗೂ ಶ್ರೀಯುತ ಕೃಷ್ಣಪ್ಪ ಮೊದಲಾದವರು ದ್ವಿಭಾಷಾ ಪ್ರಾಂತ್ಯ ರಚನೆಯ ಪರವಾಗಿ ವಾದಿಸಿದರು. ಮೈಸೂರು ಪ್ರತ್ಯೇಕವಾಗಿ ಬೇಕೆನ್ನುವುದು ಈ ಧೋರಣೆಯಲ್ಲಿ ಅಡಕವಾಗಿತ್ತು. ಈ ತೀರ್ಮಾನವನ್ನು ಕಾರ್ಯಕಾರಿ ಸಮಿತಿಗೆ ಬಿಡುವುದೆಂದು ತೀರ್ಮಾನಿಸಲಾಯಿತು, ಹಾಗೂ ಏಪ್ರಿಲ್ 23, 1956 ರಂದು ರಾಜ್ಯ ಪುನರ್ವಿಂಗಡನಾ ಆಯೋಗದ ವರದಿಯನ್ನು ಗೃಹಮಂತ್ರಿಗಳು ಲೋಕಸಭೆಯ ಮುಂದೆ ಮಂಡಿಸಿದರು. ನಂತರ ಅದನ್ನು ಪರಿಶೀಲನಾ ಸಮಿತಿಗೆ ಒಪ್ಪಿಸಬಹುದೆಂದು ಸೂಚಿಸಿದರು.

ಈ ಸಮಿತಿಗೆ ಕೇಂದ್ರ ಸಚಿವರೊಬ್ಬರು ಎಸ್ಸೆನ್‌ರವರ ಹೆಸರನ್ನು ಸಮಿತಿಯಲ್ಲಿ ಸೇರಿಸಿದ್ದರು. ಆದರೆ ಸ್ಪೀಕರ್ ಓದಿದ ಹೆಸರುಗಳ ಪಟ್ಟಿಯಲ್ಲಿ ನಿಜಲಿಂಗಪ್ಪನವರ ಹೆಸರು ಬಿಟ್ಟುಹೋಗಿತ್ತು. ಈ ಚಿತಾವಣೆ ಎಸ್ಸೆನ್‌ರವರ ಅಭ್ಯುದಯವನ್ನು ಸಹಿಸದ ಲೋಕಸಭಾ ಸದಸ್ಯರೊಬ್ಬರು ನಡೆಸಿದ್ದರೆಂದು ಎಸ್ಸೆನ್‌ ತಿಳಿಯಿತು. ಆದರೂ ರಾಜ್ಯ ಪುನರ್ವಿಂಗಡನಾ ಮಸೂದೆಯ ದ್ವಿತೀಯ ಪಠ 9-8-1956ರಂದು ನೆರವೇರಿತು. ಅಂದು ತಮ್ಮ ಹೋರಾಟದ ಬದುಕಿನ ಬಹುದೊ ಗುರಿ ತಲುಪಿದ್ದ ಎಸ್ಸೆನ್‌ರವರು ಸಂತೋಷಭರಿತರಾದರು. ಈ ರೀತಿ ಹೋರಾಡಿ ಎಸ್ಸೆನ್‌ರನ್ನು ಕುರಿತು 'ಏಕೀಕರಣ ಚಳುವಳಿಯಲ್ಲಿ ಪ್ರಾಂತೀಯ ಹುರು ಹುಮ್ಮಸ್ಸುಗಳಿಂದ ದಿಟ್ಟ ಹೆಜ್ಜೆ ಇಟ್ಟ ನಿಷ್ಠಾವಂತ'ರೆಂದು ಉಪರಾಷ್ಟ್ರಪತಿ ಬಿ. ಜತ್ತಿಯವರು ಎಸ್ಸೆನ್‌ರವರನ್ನು ಶ್ಲಾಘಿಸಿದಾರೆ, ಹಾಗೂ 'ನೆಹರು ಮೊದಲಾದ ಕೇಂ ನಾಯಕರ ವಿರಸ ಕಟ್ಟಿಕೊಂಡರೂ ಮಣಿಯದೆ, ಗೆಲ್ಲುವವರೆಗೆ ನಿಲ್ಲದೆ ಹೋರಾ ನಡೆಸಿದ ಧೀರ'ರೆಂದು ಗೊರೂರು ಪ್ರಶಂಸಿಸುತ್ತಾರೆ. ಆ ಸಂದರ್ಭದಲ್ಲಿ ಸಂಯು

ಕರ್ನಾಟಕ ಪತ್ರಿಕೆ ಎಸ್ಸೆನ್‌ರವರನ್ನು ಕುರಿತು 'ಅಖಂಡ ಕರ್ನಾಟಕದ ಧೈರ್ಯಶಾಲಿ ಮುಖಂಡ' ಎಂದು ವರದಿ ಮಾಡಿತ್ತು.

ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ : ಸರ್ಕಾರ, ಆಡಳಿತ ಮತ್ತು ರಾಜಕಾರಣದಲ್ಲಿ ಸುಧಾರಣೆ: ರಾಜ್ಯ ಪುನರ್ವಿಂಗಡನಾ ಮಸೂದೆ ಕುರಿತು ತೃತೀಯ ವಠಣ, ಆಗಸ್ಟ್ 10, 1956ರಲ್ಲಿ ಲೋಕಸಭೆಯಲ್ಲಿ ಮುಕ್ತಾಯಗೊಂಡು ಫಜಲ್ ಆಲಿ ಆಯೋಗದ ವರದಿಯಂತೆ ನವಂಬರ್ 1, 1956ರಲ್ಲಿ ಕರ್ನಾಟಕ ಏಕೀಕರಣಗೊಂಡಾಗ ಎಸ್.ನಿಜಲಿಂಗಪ್ಪನವರು ರಾಜ್ಯದ ಮುಖ್ಯಮಂತ್ರಿಯಾದರು. ಕಡಿದಾಳ್ ಮಂಜಪ್ಪನವರು ಶಾಸಕಾಂಗ ಪಕ್ಷದ ನಾಯಕತ್ವಕ್ಕೆ ಎಸ್ಸೆನ್‌ರವರ ಹೆಸರನ್ನು ಸೂಚಿಸಿದರು ಹಾಗೂ ಕರ್ನಾಟಕ ಏಕೀಕರಣಕ್ಕಾಗಿ ಹಗಲಿರಳು ದುಡಿದ ಎಸ್ಸೆನ್ ರವರು ಶಾಸಕಾಂಗ ಪಕ್ಷದ ನಾಯಕರಾದದ್ದು ಅವರ ಸೇವೆಗೆ ಸಂದ ಸೂಕ್ತ ಗೌರವ, ಎಂದು ಮೈಸೂರು ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿದ್ದ ಚೆನ್ನಯ್ಯನವರು ನುಡಿದರು. ಈ ಗೌರವವನ್ನು ಸ್ವೀಕರಿಸಿದ ಎಸ್ಸೆನ್ ಈ ರಾಜ್ಯಕ್ಕೆ ತಮ್ಮ ಹೆಚ್ಚಿನ ಸೇವೆ ಹಾಗೂ ಜವಾಬ್ದಾರಿಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತೇನೆಂದು ತಿಳಿಸಿದರು.

ಹೀಗೆ ಎಸ್ಸೆನ್ ನವಂಬರ್ 1, 1956ರಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದಾಗ ಅವರು ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನಲ್ಲೂ ಸದಸ್ಯರಾಗಿಲ್ಲದ್ದರಿಂದ ಅವರು ಸಂವಿಧಾನದ 364(4) ಪ್ರಕಾರ 6 ತಿಂಗಳಲ್ಲಿ ಸದಸ್ಯತ್ವವನ್ನು ಪಡೆಯಬೇಕಾಗಿತ್ತು. ಆದ್ದರಿಂದ ಎಸ್ಸೆನ್ ಫೆಬ್ರವರಿ, ಮಾರ್ಚ್ 1957ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಆಯ್ಕೆಗೊಂಡರು. ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ರಾಜ್ಯದ ಆಡಳಿತಾತ್ಮಕ ಸಮಸ್ಯೆಗಳನ್ನು ತಾಳ್ಮೆ ಹಾಗೂ ಪರಿಶ್ರಮದಿಂದ ಸುಧಾರಿಸಬೇಕಾಗಿತ್ತು. ಈ ಸ್ಥಿತಿಯಲ್ಲಿ ಎಸ್ಸೆನ್‌ರವರು ಸಚಿವ ಸಂಪುಟ ರಚನೆಗೆ ಏಪ್ರಿಲ್ 17, 1957ರಂದು 11 ಮಂತ್ರಿಗಳ ಪಟ್ಟಿಯನ್ನು ಪ್ರಕಟಿಸಿದರು. ನಂತರ ಏಪ್ರಿಲ್ 19 ರಂದು ಶ್ರೀ ವೈಕುಂಠಬಾಳಿಗಾ, ಶ್ರೀ ವೆಂಕಟಪ್ಪಾ ಹಾಗೂ ಆರ್. ಎಂ. ಪಾಟೀಲರನ್ನು ಸಂಪುಟದಲ್ಲಿ ಸೇರಿಸಿಕೊಂಡರು. ಆದರೆ ಎಸ್ಸೆನ್‌ರವರು ಮುಖ್ಯಮಂತ್ರಿಗಳಾಗಿ ಅಧಿಕಾರವಹಿಸಿಕೊಂಡ ಕೇವಲ 14 ತಿಂಗಳಲ್ಲಿ ಅವರನ್ನು ಪದಚ್ಯುತಿಗೊಳಿಸಲು ಕಾಂಗ್ರೆಸಿನಲ್ಲಿ ಭಿನ್ನಮತೀಯರು ಒಡಕನ್ನು ಹುಟ್ಟಿಸಿದರು. ಸಾಹುಕಾರ ಚೆನ್ನಯ್ಯ ಮತ್ತು ಸುಬ್ರಹ್ಮಣ್ಯ, ಮಾಲಿ ಮರಿಯಪ್ಪ ಹಾಗೂ ವಾಯ್ದು ಅವರಿದ್ದ ಭಿನ್ನಮತೀಯರ ಗುಂಪು ಕೆ.ಹನುಮಂತಯ್ಯ, ಕೌಜಲಗಿ, ಮಲ್ಲಿಕಾರ್ಜುನಸ್ವಾಮಿ ಇವರೆಲ್ಲರ ಬೆಂಬಲದಿಂದ ಹೈಕಮಾಂಡ್ ಮುಂದೆ ಅವಿಶ್ವಾಸ ನಿರ್ಣಯ ಮಂಡಿಸಲು ಮುಂದಾದರು ಹಾಗೂ ಧಾರವಾಡ ಜಿಲ್ಲಾ ಕಾಂಗ್ರೆಸ್ಸಿನ ಅಧಿಕಾರವನ್ನು ನಿರಂತರವಾಗಿ ಕೈಯಲ್ಲಿಟ್ಟುಕೊಂಡಿದ್ದ ಹಳ್ಳಿಕೇರಿ ಗುದ್ಲೆಪ್ಪನವರ

ಗುಂಪಿನ ದರ್ಪವು ಅತಿಯಾಗಿತ್ತು. ಈ ರೀತಿ ರಾಜ್ಯದ ಕಾಂಗ್ರೆಸಿನಲ್ಲಿ ಬೆಳೆದ ಗುಂಪುಗಾರಿಕೆಯಿಂದಾಗಿ ಎಸ್ಸೆನ್ ಮೇ 16, 1958ರಂದು ಮುಖ್ಯಮಂತ್ರಿ ಸ್ಥಾನ ತ್ಯಜಿಸಿದರು. ಆದರೆ ಶಾಸಕಾಂಗ ಪಕ್ಷದಲ್ಲಿ ಕೇವಲ 5 ಮತಗಳ ಅವಿಶ್ವಾಸ ನಿರ್ಣಯ ದಿಂದ ಸೋಲನ್ನು ಕಂಡ ಎಸ್ಸೆನ್‌ರವರು ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ಯಾರ ಬೆಂಬಲನ್ನು ಸಹ ಯಾಚಿಸಲಿಲ್ಲ. ಏಕೆಂದರೆ ಜೊತೆಯಲ್ಲಿದ್ದ ವಿಶ್ವಾಸ ಘಾತುಕರ ರಾಜಕೀಯ ವರ್ತನೆಯಿಂದ ರೋಸಿದ್ದ ಅವರು ನಗುನಗುತ್ತಲೆ ಅಧಿಕಾರವನ್ನು ತ್ಯಜಿಸಿದರು.

ಈ ರೀತಿ ರಾಜ್ಯದ ರಾಜಕೀಯದಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಎಸ್ಸೆನ್ ನವೆಂಬರ್ 1, 1956 ರಿಂದ ಏಪ್ರಿಲ್ 1, 1957 ಹಾಗೂ ಮೇ 16, 1958ರ ಅವಧಿಗೆ ರಾಜ್ಯದ ಜನಪ್ರಿಯ ಮುಖ್ಯಮಂತ್ರಿಯಾಗಿ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಿದರು ಮತ್ತು ಶ್ರೀಮಾನ್ ಬಿ.ಡಿ.ಜತ್ತಿಯವರ ಅಧ್ಯಕ್ಷತೆಯಲ್ಲಿ 'ಭೂ ಸುಧಾರಣ ಮಂಡಳಿ' ರಚಿಸಿದರು ಹಾಗೂ 1956ರಲ್ಲಿ ಮೈಸೂರು ಸರ್ಕಾರ ನೇಮಿಸಿದ್ದ 'ಮಸ್ಕರೆ ವೇತನ ಆಯೋಗದ ವರದಿಯಂತೆ ಸರ್ಕಾರಿ ನೌಕರರ ಸಂಬಳ, ಸಾರಿಗೆ ಭತ್ಯೆ ಹೆಚ್ಚಿಸಿದರು. 1957ರಲ್ಲಿ ವಿದ್ಯುಚ್ಛಕ್ತಿ ಮಂಡಳಿ ಸ್ಥಾಪನೆಗೊಂಡಿತು ಮತ್ತು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ (1956-1961) ನೀರಾವರಿ ಅಭಿವೃದ್ಧಿಗಾಗಿ ಸುಮಾರು 34.30 ಕೋಟಿ ರೂಪಾಯಿಗಳ ವೆಚ್ಚದಲ್ಲಿ 8.78 ಲಕ್ಷ ಹೆಕ್ಟೇರ್ ಪ್ರದೇಶವನ್ನು ನೀರಾವರಿ ಗೊಳಪಡಿಸಲಾಯಿತು. ಈ ಮೂಲಕ ಎಸ್ಸೆನ್ ಸರ್ಕಾರವು 1956ರಲ್ಲಿ ತುಂಗಭದ್ರಾ ಮೇಲ್ದಂಡೆ ಯೋಜನೆಯ ಮೊದಲ ಹಂತಕ್ಕೆ ಚಾಲನೆ ನೀಡಿತು. ಅದೇ ವರ್ಷದಲ್ಲಿ ಪೂರ್ಣಗೊಂಡ ಈ ಜಲಾಶಯವು ಸುಮಾರು 3.30 ಲಕ್ಷ ಜಮೀನಿಗೆ ನೀರಾವರಿ ಸೌಲಭ್ಯ ಹಾಗೂ ವಿದ್ಯುಚ್ಛಕ್ತಿ ಉತ್ಪಾದಿಸಲಾಗುತ್ತಿದ್ದು ಇದನ್ನು ಆಂಧ್ರ ಮತ್ತು ಕರ್ನಾಟಕದ ಸಹಯೋಗದೊಂದಿಗೆ ಹೊಸಪೇಟೆಯಲ್ಲಿ ನಿರ್ಮಿಸಲಾಗಿದೆ. ಎಸ್ಸೆನ್ ಸರ್ಕಾರ ಜಾರಿಗೆ ತಂದ ಘಟಪ್ರಭಾ ಅಣೆಕಟ್ಟೆಯ ದ್ವಿತೀಯ ಯೋಜನೆಯ ಎರಡು ಅಣೆಕಟ್ಟೆಗಳನ್ನು ಧೂಪನಾಳ ಮತ್ತು ಹಿಡಕಲ್‌ನಲ್ಲಿ ನಿರ್ಮಿಸಲಾಗಿದ್ದು ಈ ಯೋಜನೆಗಳಿಂದ ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಗಳ 3.18 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಲಭ್ಯವಾಗಿದೆ. ಹಾಗೂ ಮೈಸೂರು ಜಿಲ್ಲೆಯ ಬಿದರಹಳ್ಳಿ ಬಳಿ ಕಬಿನಿ ಜಲಾಶಯ ಯೋಜನೆ ನಿರ್ಮಾಣವು, ಕೃಷಿ ಅಭಿವೃದ್ಧಿಗೆ ಎಸ್ಸೆನ್ ಸರ್ಕಾರ ಮಾಡಿದ ಮಹತ್ವದ ಸಾಧನೆಯಾಗಿದೆ.

ನಂತರ ಎಸ್ಸೆನ್, 1959ರಲ್ಲಿ ಕೇಂದ್ರ ಸರ್ಕಾರದ ರಾಷ್ಟ್ರ ಸಹಕಾರ ಕೃಷಿ ಅಧ್ಯಯನ ಮಂಡಳಿ ಹಾಗೂ ತೈಲ ನಿಗಮಗಳ ಅಧ್ಯಕ್ಷರಾಗಿದ್ದರಿಂದ ಪೆಟ್ರೋಲ್ ವಿತರಣೆ ಪದ್ಧತಿಯಲ್ಲಿ ಸೂಕ್ತ ಸುಧಾರಣೆ ತಂದರು. ತದನಂತರ

ಎಸ್ಸೆನ್ 1960ರಲ್ಲಿ ರಾಜ್ಯದ ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ಹಾಗೂ 1962ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಹೊಸದುರ್ಗ ಕ್ಷೇತ್ರದಿಂದ ಸ್ಪರ್ಧಿಸಿ ಪರಾಭವಗೊಂಡರು. ಎಸ್ಸೆನ್‌ರವರ ಈ ಸೋಲನ್ನು ಡಾ|| ಜವರೇಗೌಡರು ಈ ರೀತಿ ವಿಶ್ಲೇಷಿಸಿದ್ದಾರೆ; '1960ರ ಆರಂಭದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಗುಂಪು ಭಾವನೆ ಬೆಳೆದು ನಿಷ್ಠಾವಂತ ಕಾಂಗ್ರೆಸಿಗರನ್ನು ಚಿಂತೆಗೆ ಗುರಿಮಾಡಿತು. ಹಾಗು ಮೈಸೂರು ಕಾಂಗ್ರೆಸ್ ಸಮಿತಿ ಮತ್ತು ಕಾಂಗ್ರೆಸ್ ಮಂತ್ರಿಮಂಡಲದ ನಡುವೆ ಸಾಮರಸ್ಯವಿಲ್ಲದೆ ಕಾಂಗ್ರೆಸ್ ದುರ್ಬಲಗೊಂಡಿದ್ದರಿಂದ ಪ್ರಜೆಗಳೊಡನೆ ಸಂಬಂಧಗಳು ಸಡಿಲಗೊಳ್ಳುತ್ತಿದ್ದವು ಹಾಗು ಸಂಸ್ಥೆಗಿಂತ ಸರಕಾರವೇ ಹೆಚ್ಚೆನ್ನುವ ಭಾವನೆ ಬೆಳೆದಿತ್ತು ಮತ್ತು ಜಾತೀಯತೆ, ಆಂತರಿಕ ಶತ್ರುಗಳ ಕಿತಾಪತಿಯಿಂದಾಗಿ ಕೆಲವೇ ವೀರಶೈವ ಮಠಗಳ ಕೈವಾಡವೂ ಎಸ್ಸೆನ್‌ರವರ ಸೋಲಿಗೆ ಕಾರಣವಾಯಿತು' ಎಂದಿದ್ದಾರೆ.

ಈ ರೀತಿಯಲ್ಲಿ ರಾಜ್ಯದ ರಾಜಕಾರಣದಲ್ಲಿದ್ದ ಬಿಕ್ಕಟ್ಟು ಮತ್ತು ಭಿನ್ನಾಭಿಪ್ರಾಯಗಳಿಂದ ಸೋಲನ್ನು ಕಂಡ ಎಸ್ಸೆನ್‌ರವರು ಧೃತಿಗೆಡಲಿಲ್ಲ. ಪುನಃ 1962ರ ಜೂನ್ 21 ರಂದು ಬಾಗಲಕೋಟೆ ಕ್ಷೇತ್ರದಿಂದ ಉಪ ಚುನಾವಣೆಯಲ್ಲಿ ಆಯ್ಕೆಯಾಗಿ 3ನೇ ಬಾರಿಗೆ ಮುಖ್ಯಮಂತ್ರಿಯಾದರು. ಈ ಸಂದರ್ಭದಲ್ಲಿ ಭಾರತದ ಮೇಲೆ ಚೀನಾ ದೇಶ ದಾಳಿಮಾಡಿದಾಗ ರಾಷ್ಟ್ರರಕ್ಷಣೆಗಾಗಿ ನಿಧಿ ಸಂಗ್ರಹಿಸಿ ಕೊಟ್ಟರು ಹಾಗು ಬೆಳಗಾವಿ ಜಿಲ್ಲೆಯಲ್ಲಿ ಎಸ್ಸೆನ್ ಮತ್ತು ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದ ಇಂದಿರಾಗಾಂಧಿ ಈ ಇಬ್ಬರಿಗೂ ಹಣ ಮತ್ತು ಬಂಗಾರದ ತುಲಾಭಾರಮಾಡಿ ರಾಷ್ಟ್ರದ ನಿಧಿಗೆ ಹಣ ಸಂಗ್ರಹಿಸಲಾಯಿತು.

ಈ ದಿಸೆಯಲ್ಲಿ ಎಸ್ಸೆನ್‌ರವರು ಜೂನ್ 16,1962 ರಿಂದ ಮಾರ್ಚ್ 3,1967ರವರೆಗೆ ಮುಖ್ಯ ಮಂತ್ರಿಯಾಗಿ ಆಡಳಿತದ ಚುಕ್ಕಾಣಿ ಹಿಡಿದು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಾ ಆಧುನಿಕ ಕರ್ನಾಟಕ ನಿರ್ಮಾಣಕ್ಕೆ ಭದ್ರ ಬುನಾದಿ ಹಾಕಿದರು. 1964ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ, 1965ರಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆಗೊಂಡವು ಹಾಗೂ ಹಾಸನ, ಮಂಗಳೂರು ರೈಲು ಮಾರ್ಗಕ್ಕೆ ಕೇಂದ್ರದ ಅನುಮತಿ ದೊರೆಯಿತು. 1964ರಲ್ಲಿ ರಾಜ್ಯಾದ್ಯಂತ ಏಕರೂಪ ಭೂಕಂದಾಯ ಪದ್ಧತಿ ಜಾರಿಗೊಂಡಿತು. 1958ರಲ್ಲಿ ಆರಂಭವಾದ ಶರಾವತಿ ವಿದ್ಯುತ್ ಯೋಜನೆ ಪ್ರಥಮ ಹಂತ ಜನವರಿ 1965ರಲ್ಲಿ ಪೂರ್ಣ ಗೊಂಡಿತು. 1964ರಲ್ಲಿ ಬೆಂಗಳೂರಿಗೆ ನೀರು ಪೂರೈಕೆ ಯೋಜನೆ ಆರಂಭವು ಅವಿಸ್ಮರಣೀಯವಾಗಿದೆ. ಇದೇ ಸಂದರ್ಭದಲ್ಲಿ ರಾಜ್ಯ ಕೈಗಾರಿಕಾ ಬ್ಯಾಂಕ್ ಸ್ಥಾಪನೆಗೊಂಡಿತು ಹಾಗೂ (1961-66) ತೃತೀಯ ಪಂಚವಾರ್ಷಿಕ ಯೋಜನೆಯ ಅನ್ವಯ ಎಸ್ಸೆನ್‌ರವರು ಕರ್ನಾಟಕದಲ್ಲಿ 4 ದೊಡ್ಡ ಹಾಗೂ 5 ಚಿಕ್ಕ ನೀರಾವರಿ ಯೋಜನೆಗಳನ್ನು ಆರಂಭಿಸಿದರು.

ಈ ಯೋಜನೆಗಳಲ್ಲಿ ಕೃಷ್ಣ ಮೇಲ್ದಂಡೆ ಮೊದಲ ಹಂತವು ಕರ್ನಾಟಕ ನೀರಾವರಿ ಯೋಜನೆಗಳಲ್ಲೇ ಪ್ರಮುಖವಾದದ್ದು. ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಆಲಮಟ್ಟಿ ಮತ್ತು ಮುದ್ದೇಬಿಹಾಳ್ ತಾಲ್ಲೂಕಿನ ನಾರಾಯಣಪುರದಲ್ಲೂ ನಿರ್ಮಾಣ ವಾಗಿವೆ. ಇದು ಪ್ರಾರಂಭದಲ್ಲಿ ಸುಮಾರು 815 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ನೀಡುವುದರೊಂದಿಗೆ ವಿದ್ಯುಚ್ಛಕ್ತಿ ಉತ್ಪಾದನೆಗೂ ನೆರವಾಯಿತು. ಆದರೆ ಇತ್ತೀಚಿನ ವರ್ಷಗಳಲ್ಲಿ ಆಂಧ್ರ ಮತ್ತು ಕರ್ನಾಟಕ ರಾಜ್ಯಗಳ ನಡುವೆ ಕೃಷ್ಣಾ ನದಿ ನೀರಿನ (ಆಲಮಟ್ಟಿ ವಿವಾದ) ಹಂಚಿಕೆ ಕುರಿತು ವಿವಾದವು ಸೃಷ್ಟಿಯಾಗಿದ್ದರಿಂದಾಗಿ ನದಿ ನೀರಿನ ಬಳಕೆ ಮತ್ತು ಕೃಷಿ ನೀರಾವರಿ ಯೋಜನೆಗಳು ಕುಂಠಿತಗೊಂಡವು. ಆದರೆ ಕರ್ನಾಟಕವು ಶ್ರೇಷ್ಠ ನ್ಯಾಯಾಲಯ ನೀಡಿದ ತೀರ್ಪಿನಂತೆ ಕೃಷ್ಣಾ ಮೇಲ್ದಂಡೆ ಯೋಜನೆಯ ಎರಡನೇ ಹಂತವನ್ನು 2000ನೇ ಇಸವಿಯಲ್ಲಿ ಪೂರ್ಣಗೊಳಿಸಿದ್ದರಿಂದ (2000-2001ನ ಸಾಲಿನ ಈ ಯೋಜನೆಯಿಂದಾಗಿ) ಸುಮಾರು ಒಂದು ಲಕ್ಷ ಹೆಕ್ಟೇರಿಗೆ ನೀರಾವರಿ ಸಾಮರ್ಥ್ಯ ಲಭ್ಯವಾಗಿದೆ.

ಈ ದಿಶೆಯಲ್ಲಿ ಎಸ್ಸೆನ್ ಸರ್ಕಾರವು ಮಲಪ್ರಭಾ ಯೋಜನೆಯನ್ನು (ರೇಣುಕಾ ಸಾಗರ) ಪ್ರಾರಂಭಿಸಿ ಮಲಪ್ರಭಾ ನದಿಗೆ ಸೌದತ್ತಿ ತಾಲ್ಲೂಕಿನ ನವಿಲು ತೀರ್ಥದ ಬಳಿ ಅಣೆಕಟ್ಟು ನಿರ್ಮಿಸಿದ್ದರಿಂದ ಬೆಳಗಾಂ, ಧಾರವಾಡ ಮತ್ತು ವಿಜಾಪುರ ಭಾಗಗಳ 2ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಲಭ್ಯವಾಗಿದೆ. ಈ ರೀತಿ ಎಸ್ಸೆನ್‌ರವರು ತಮ್ಮ ಆಡಳಿತಾವಧಿಯಲ್ಲಿ ಜಲಸಂಪನ್ಮೂಲದೊಂದಿಗೆ ವಿದ್ಯುಚ್ಛಕ್ತಿ ಅಭಿವೃದ್ಧಿಗೊಳಿಸಲು ಶರಾವತಿ ಜಲ ವಿದ್ಯುತ್ ಯೋಜನೆಯನ್ನು 1959ರಲ್ಲಿ ಪ್ರಾರಂಭಿಸಿದ್ದರಿಂದ ಸುಮಾರು 120 ಕೋಟಿ ವೆಚ್ಚದಲ್ಲಿ ಲಿಂಗನಮಕ್ಕಿಯಲ್ಲಿ ಬೃಹತ್ ಜಲಾಶಯ ನಿರ್ಮಿಸಿ ಅಲ್ಲಿಂದ ನೀರನ್ನು ಕೊಳವೆ ಸುರಂಗದ ಮೂಲಕ ಶರಾವತಿ ವಿದ್ಯುತ್ ಸ್ಥಾವರಕ್ಕೆ ಹೊಯ್ದು ವಿದ್ಯುತ್ತನ್ನು ಉತ್ಪಾದಿಸಲಾಗಿದೆ. ಇಲ್ಲಿ 10 ಉತ್ಪಾದನಾ ಘಟಕಗಳನ್ನು ಜೋಡಿಸಲಾಗಿದೆ. ಈ ವಿದ್ಯುತ್ ಸ್ಥಾವರವು ವಾರ್ಷಿಕ 4,350 ಮೆಗಾ ಯೂನಿಟ್ಸ್ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿದ್ದು ಇದು ರಷ್ಯಾ ಹೊರತಾಗಿ ವಿಶ್ವದಲ್ಲೇ ಅತಿದೊಡ್ಡ ವಿದ್ಯುತ್ ಸ್ಥಾವರವಾಗಿದೆ. ಈ ರೀತಿಯಲ್ಲಿ ನೀರಾವರಿ, ವಿದ್ಯುತ್ ಹಾಗೂ ಅರಣ್ಯಗಳ ಅಭಿವೃದ್ಧಿಯಿಂದ ಪ್ರಗತಿ ಸಾಧ್ಯವೆಂದು ಮನಗಂಡಿದ್ದ ಎಸ್ಸೆನ್‌ರವರು ಒಂದೇ ವರ್ಷದಲ್ಲಿ ಈ ಯೋಜನೆಗಳನ್ನು ಜಾರಿಗೊಳಿಸಿ ರಾಜ್ಯಕ್ಕೆ ಬೆಳಕನ್ನು ನೀಡಿದರು. ಅದರಂತೆ ಎಸ್ಸೆನ್‌ರವರು ಕೇವಲ 6 ವರ್ಷಗಳಲ್ಲಿ ಲಿಂಗನಮಕ್ಕಿ ಜಲಾಶಯವನ್ನು ನಿರ್ಮಿಸಲು ಶ್ರಮಿಸಿದರು. ಇದರ ಫಲವಾಗಿ ವಾರ್ಷಿಕ 250 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಈ ನಿಟ್ಟಿಯಲ್ಲಿ ಎಸ್ಸೆನ್‌ರವರು ದೂರದೃಷ್ಟಿಯುಳ್ಳ ಯೋಜನೆಗಳ ಜನಕರಾದರು. ಆದರೆ ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ವಿದ್ಯುತ್

ಉತ್ಪಾದನೆಯಲ್ಲಿ 4 ಶಾಖೋತ್ಪನ್ನ ಕೇಂದ್ರಗಳು ನಷ್ಟದಲ್ಲಿವೆ ಹಾಗು ಮುಂಗಾರು ಮಳೆ ಅಭಾವ, ಜನಸಂಖ್ಯೆ ಹಾಗೂ ಕೈಗಾರಿಕೆಗಳ ಹೆಚ್ಚಳ ಮತ್ತು ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರಗಳ ಸಂಕಲ್ಪದ ಕೊರತೆಯು ಮುಖ್ಯ ಕಾರಣವಾಗಿದೆ.

ಈ ದೃಷ್ಟಿಯಲ್ಲಿ ಎಸ್ಸೆನ್ ಸರ್ಕಾರವು 1967ರಲ್ಲಿ ರಾಜ್ಯದ ಕೃಷಿ ಮತ್ತು ಕೈಗಾರಿಕಾ ಅಭಿವೃದ್ಧಿಯಲ್ಲಿ ಮೈಸೂರು ಕೃಷಿ ಕೈಗಾರಿಕಾ ನಿಗಮ ಸ್ಥಾಪಿಸಿದ್ದು ಕೃಷಿ ಕ್ಷೇತ್ರದಲ್ಲಿ ದಿಟ್ಟ ನಿಲುವಾಗಿತ್ತು. ಇದರೊಂದಿಗೆ ರಾಜ್ಯದ ಆರ್ಥಿಕ ಪ್ರಗತಿಗಾಗಿ ಕೃಷಿ ಅಭಿವೃದ್ಧಿಪಡಿಸಲು ಪ್ರಯತ್ನಿಸಿದರು. 1964ರಲ್ಲಿ ಎಸ್ಸೆನ್ ಸರ್ಕಾರವು ರಾಜ್ಯದ 7 ಲಕ್ಷ ಎಕರೆ ಕೃಷಿ ಪ್ರದೇಶವನ್ನು ನೀರಾವರಿ ವ್ಯಾಪ್ತಿಗೆ ತರಲು ಪ್ರಯತ್ನಿಸಿದರು. ಇದರ ಹೆಚ್ಚಿನ ಭೂಭಾಗ ಕೃಷ್ಣ ಮೇಲ್ದಂಡೆ ವ್ಯಾಪ್ತಿಗೆ ಒಳಪಡುತ್ತದೆ. 1956ರಲ್ಲಿ ರಾಜ್ಯದ ಕೃಷಿ ಕ್ಷೇತ್ರದಲ್ಲಿ ಕೇವಲ 7% ಪ್ರದೇಶಕ್ಕೆ ನೀರಾವರಿ ಅನುಕೂಲತೆ ಇದ್ದರೆ ಅದು 1998ರಲ್ಲಿ 10% ಏರಿದ್ದು ಎಸ್ಸೆನ್ ಸರ್ಕಾರದ ಪ್ರಯತ್ನವಾಗಿದೆ.

1968ರಲ್ಲಿ ಮುಖ್ಯಮಂತ್ರಿ ಎಸ್ಸೆನ್ ಜಪಾನಿನ ಪ್ರವಾಸ ಮುಗಿಸಿ ಹಿಂದಿರುಗಿದಾಗ ಕೈಗಾರಿಕೋದ್ಯಮಿಗಳನ್ನು ವಾಣಿಜ್ಯಾಧಿಪತಿಗಳನ್ನು ಒಂದೆಡೆ ಸೇರಿಸಿ ಧನ ಸಂಗ್ರಹ ಸಂಸ್ಥೆಯೊಂದನ್ನು ಸ್ಥಾಪಿಸಿ ಕರ್ನಾಟಕದ ಅಭಿವೃದ್ಧಿಗೆ ಶ್ರಮಿಸುವಂತೆ ವಿನಂತಿಸಿಕೊಂಡರು. ಹುಬ್ಬಳ್ಳಿ ಕಾರವಾರದ ನಡುವೆ ರೈಲು ಮಾರ್ಗವನ್ನು ಬಳ್ಳಾರಿ ಪ್ರದೇಶದಲ್ಲಿ ಅದಿರು ಹದಮಾಡುವ ಕಾರ್ಖಾನೆಯನ್ನು ಮತ್ತು ಭಟ್ಕಳದಲ್ಲಿ ನೌಕಾನೆಲೆಯನ್ನು ರೂಪಿಸುವಂತೆ ಅವರಿಗೆ ಸೂಚಿಸಿದರು. ಅಷ್ಟೇ ಅಲ್ಲದೆ ಸಂಜಮಗಾಂಧಿಯವರ ನಾಲ್ಕು ಅಂಶದ ಕಾರ್ಯಕ್ರಮಗಳು ಸ್ವೀಕಾರ ಯೋಗ್ಯವೆಂದು ತಿಳಿಸಿದರು. ಬೃಹತ್ ಕೈಗಾರಿಕೆಗಳಿಂದ ನಿರುದ್ಯೋಗ ಸಮಸ್ಯೆ ಬಗೆಹರಿಯುವುದಾದರು, ಕೃಷಿ ತೋಟಗಾರಿಕೆ, ಹಂದಿ, ಕೋಳಿ, ಜೇನು ಕೃಷಿ, ಮೀನು ಸಾಕಾಣಿಕೆ, ಗುಡಿ ಕೈಗಾರಿಕೆಗಳನ್ನು ಹಾಗೂ ಮರ-ಮುಟ್ಟು ಕೆಲಸ, ತೆಂಗಿನ ನಾರಿನ ಸಣ್ಣ ಕೈಗಾರಿಕೆಗಳ ಮೂಲಕವೂ ಮಾನವ ಶಕ್ತಿಯನ್ನು ಸಂಪೂರ್ಣವಾಗಿ ಬಳಸಬಹುದೆಂದು ತಿಳಿಸಿದ್ದರು. ವಿದ್ಯುಚ್ಛಕ್ತಿ ಮತ್ತು ಅಣುಶಕ್ತಿಗಿಂತ ಮಾನವ ಶಕ್ತಿ ಪ್ರಖರವಾದುದೆಂದು ಅದನ್ನು ಸಮರ್ಥವಾಗಿ ಬಳಸಿಕೊಳ್ಳಲು ಎಸ್ಸೆನ್ ಕರೆ ನೀಡಿದರು. ಜನಗಳ ಮತ್ತು ದನಗಳ ಮಲಮೂತ್ರಗಳ ಸರಿಯಾದ ಬಳಕೆಯಿಂದ ಇಂಧನ ಶಕ್ತಿಯ ಬಳಕೆ ಮತ್ತು ವಿಪುಲ ಗೊಬ್ಬರ ದೊರೆಯುತ್ತದೆ ಎಂದು ಸುಧಾರಣೆಗೆ ಸಲಹೆ ನೀಡಿದ್ದಾರೆ. ಇನ್ನು ಎಸ್ಸೆನ್‌ರವರು ಕಾರ್ಮಿಕರಿಗೆ ಕನಿಷ್ಠ ವೇತನ ಗುಣ, ಗಾತ್ರದ ಆಧಾರದ ಮೇಲೆ ನಿರ್ಧಾರವಾಗಬೇಕು. ಉತ್ಪಾದನೆ ಸ್ಥಗಿತಗೊಳ್ಳದ ರೀತಿಯಲ್ಲಿ ಹರತಾಳ ಮತ್ತು ಮುಷ್ಕರಗಳನ್ನು ಕೋರ್ಟುಗಳ ಮೂಲಕ ನಿಯಂತ್ರಿಸಬೇಕೆಂದು ಸಲಹೆ ನೀಡಿದರು. ಹೊರ ದೇಶಗಳಿಗೆ ಕಚ್ಚಾ ಅದಿರು ರಫ್ತು ಮಾಡುವ

ಬದಲು ಸಿದ್ಧ ಲೋಹವನ್ನು ರಫ್ತು ಮಾಡಿದರೆ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವುದು ಎಂಬುದು ಎಸ್ಸೆನ್‌ರವರ ಖಚಿತ ನಿಲುವಾಗಿತ್ತು.

1968ರ ಜನವರಿಯಲ್ಲಿ ಎಸ್ಸೆನ್‌ರವರು ಕೇಂದ್ರ ಕಾಂ ಅಧ್ಯಕ್ಷರಾಗಿದ್ದಾಗ ಹೈದರಾಬಾದ್‌ನಲ್ಲಿ ನಡೆದ 71ನೇ ಅಖಿಲ ಭಾರತ ಕಾಂ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಔದ್ಯೋಗಿಕ ಸಾಧನೆಯಿಂದ ಸಣ್ಣ ಕೈಗಾ ಗಳಿಗೆ ಪ್ರೋತ್ಸಾಹ ನೀಡಬೇಕು. ಕೃಷಿ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಭೂಸುಧಾರಣೆ ಶಾಸನ ಮೂಲಕ ಉಳುವವನೆ ಭೂಮಿಯ ಒಡೆಯ ಗುರಿಯನ್ನು ಕಾಂಗ್ರೆಸ್ ಇನ್ನೂ ಸಾಧಿಸಲಾಗಿಲ್ಲ ಎಂದು ತಿಳಿಸುತ್ತಾ, ಎಸ್ಸೆನ್ ವಿಚಾರದಲ್ಲಿ ಕ್ರಾಂತಿಕಾರಿ ಬದಲಾವಣೆಯಾಗಲು ಕಾಲಬೇಕು ನಿಜ. ಆದರೆ ದಿಕ್ಕಿನಲ್ಲಿ ಸರ್ಕಾರವು ಅಗತ್ಯ ಕ್ರಮ ಕೈಗೊಂಡಿಲ್ಲ. ಈ ವಿಚಾರವಾಗಿ 'ಆ ಅಧಿವೇಶನದಲ್ಲಿ ಮಂಜೂರು ಮಾಡಿದ ಸಮಾಜವಾದಿ ಸಮಾಜ ರಚನೆ ಬೇಕೆನ್ನುವ ಗೊತ್ತುವಳಿಯಲ್ಲಿ ಅರ್ಥವೂ ಇಲ್ಲ, ಸತ್ವವೂ ಇಲ್ಲ. ನೆಹರೂರವ ಸಮಾಜವಾದದ ಬಗ್ಗೆ ಸ್ಪಷ್ಟ ಕಲ್ಪನೆ ಇಲ್ಲ. ಅವರು ರಷ್ಯಾವನ್ನು ಮೆಚ್ಚಿ ಅದ ಅತಿಯಾಗಿ ಅನುಕರಣೆ ಮಾಡುತ್ತಿದ್ದಾರೆ ಎಂದು ಎಸ್ಸೆನ್‌ರವರು ಕಾಂಗ್ರೆಸ್ ಅಧ್ಯಕ್ಷ ಮಾತನಾಡಿದ್ದಾರೆ.

1972ರ ಅಕ್ಟೋಬರ್ ತಿಂಗಳ ಕೊನೆಯಲ್ಲಿ ಪೂನಾದಲ್ಲಿ ಅ ಭಾರತೀಯ ಕಾಂಗ್ರೆಸ್ ಸಮಿತಿ ಸಮಾವೇಶಗೊಂಡಾಗ ಈ ಸಭೆಯಲ್ಲಿ ಪ್ರ ರಾಜಕೀಯ, ಆರ್ಥಿಕ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು. ಈ ಸಭೆ ಎಸ್ಸೆನ್‌ರವರು ರಾಜಕೀಯ, ಆರ್ಥಿಕ ನಿರ್ಣಯಗಳನ್ನು ಕುರಿತು ಮಾ ಭಾಷಣವಿದು: "ಆರ್ಥಿಕ ಶಕ್ತಿಯನ್ನು ಬೆಳೆಸುವುದಕ್ಕೆ ಬದಲಾಗಿ ರಾಜಕೀ ಶಕ್ತಿಯನ್ನು ಬೆಳೆಸುವ ಹಂಬಲ ಆಡಳಿತ ನಡೆಸುವವರಲ್ಲಿ ಅಪಾರ ಪ್ರಮಾಣದ ಆದ್ದರಿಂದ ಆರ್ಥಿಕ ಶಕ್ತಿ ಕುಸಿಯುತ್ತಿದೆ. ಸಮಾಜವಾದ, ಸಾಮಾಜಿಕ ನ್ಯಾಯ ಗರೀಬಿ ಹಟಾವೋ ಎಲ್ಲಾ ಸರಿ. ಆದರೆ ಸಮಾಜವಾದ ವೆಂದರೇನು? ಅ ಲಕ್ಷಣಗಳೇನು? ಎಂದು ಕಾಮರಾಜ್‌ರನ್ನು ಕೇಳಿದೆ. ಅವರು ನನಗೇ ಹಾಕಿದರು: "ಹಿಂದೂ ಧರ್ಮ ಎಂದರೇನು? ಅದರ ಲಕ್ಷಣ ವಿವರಿಸಬಲ್ಲಿರಾ ಎಂದು. ಗಾಂಧೀಜಿಯವರ ಪ್ರಕಾರ ಹಣ ಒಂದೇ ಕಡೆ ಸಂಗ್ರಹವಾಗಬಾರ ಅಧಿಕಾರ ಕೇಂದ್ರೀಕರಣವಾಗಬಾರದು. ಸರ್ವಾಂಗೀಣ ಅಭಿವೃದ್ಧಿ ಸಾಮಾನ್ಯರಿಗೂ ಅವಕಾಶ ಕಲ್ಪಿಸಬೇಕು. ಜಾನುವಾರು ವಿಮಾ ಯೋಜನೆ ಬೇಕು. ಬ್ಯಾಂಕ್ ರಾಷ್ಟ್ರೀಕರಣವಾದರೂ ಬಡತನವನ್ನು ಹೋಗಲಾಡಿಸಿಲ್ಲ. ಆಕಾಶವಾಣಿ ಇಂದಿರಾಗಾಂಧಿಯವರ ಜಾಹೀರಾತು ಮಾಧ್ಯಮವಾಗಿದೆ. ರಾ ಷ್ಟ್ರಪತಿಗೆ ಅಷ್ಟು ಎಂದರೆ ಸಮಾಜವಾದ ಸಾಧಿಸಿದಂತಾಯಿತೆ? ಔಷಧಿ ನಿಂ

ದಿಂದ ಬಡವರು ಬಳಸುವ ಔಷಧಿಗಳ ಬೆಲೆ ಗಗನಕ್ಕೇರಿದೆ. ವರಿಷ್ಠ ನ್ಯಾಯಾಲಯ ವಿರುವುದು ಶ್ರೀಮಂತರಿಗಾಗಿ. ಭೂಮಿ ನಿಯಂತ್ರಣ ಯಶಸ್ವಿಯಾಗಿಲ್ಲ. ಜಮೀನುದಾರರ ತಂತ್ರಗಳು ಹೆಚ್ಚಿವೆ. ಸರ್ಕಾರಿ ಉದ್ದಿಮೆಗಳಲ್ಲಿ ಸಾವಿರಾರು ಕೋಟಿ ಹಣ ನಷ್ಟವಾಗುತ್ತಿದೆ. ದೇಶಾಂತಕ್ಕೆ ನೀರಾವರಿ ಸೌಲಭ್ಯವಿಲ್ಲವೆನ್ನುವ ಎಸ್ಸೆನ್‌ರವರ ಈ ರೀತಿಯಾದ ಚಿಂತನೆಗಳಲ್ಲಿ ಅತ್ಯಂತ ವೈಜ್ಞಾನಿಕ ಮತ್ತು ಪ್ರಗತಿಪರವಾಗಿದ್ದು ಅವರ ರಾಷ್ಟ್ರೀಯ ಹಿತಾಸಕ್ತಿ ಮತ್ತು ನಂಬಿಕೆಗಳನ್ನು ಪ್ರತಿಬಿಂಬಿಸುತ್ತವೆ.

ಹೀಗೆ ಕರ್ನಾಟಕ ರಾಜ್ಯದ ರಾಜಕೀಯ ಚರಿತ್ರೆಯಲ್ಲಿ ಎಸ್. ನಿಜಲಿಂಗಪ್ಪನವರ ಹೆಸರು ಸ್ಥಿರಸ್ಥಾಯಿಯಾಗಿ ಉಳಿದಿದೆ. **ಆಡಳಿತ ಸುಧಾರಣೆಗೆ** ಸಂಬಂಧಿಸಿದಂತೆ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 60ಕ್ಕೆ ಏರಿಸಬೇಕೆಂಬ ಅವರ ಸಲಹೆ ವಿಚಾರಯೋಗ್ಯವಾಗಿದೆ. ಭಾರತೀಯರ ಆಯುಸ್ಸಿನ ಪ್ರಮಾಣ ಅಧಿಕಗೊಂಡಿರುವುದರಿಂದ ಈ ಏರಿಕೆ ಅನಿವಾರ್ಯವೆನ್ನುವ ಶ್ರೀಯುತರ ಮಾತು ಸರಿಯಾದುದು. ನೌಕರರ ದೀರ್ಘಾವಧಿಯ ಅನುಭವದ ಫಲ ಸರ್ಕಾರಕ್ಕೆ ದೊರೆಯುವುದಲ್ಲದೆ ಪಿಂಚಣಿ ವೆಚ್ಚವನ್ನು ತಗ್ಗಿಸಬಹುದೆಂಬ ಇವರ ವಾದವು ಅಂಗೀಕಾರ ಯೋಗ್ಯವಾಗಿದೆ. ನೌಕರರ ಹುದ್ದೆಗಳನ್ನು ಅರ್ಧದಷ್ಟು ಕಡಿತಗೊಳಿಸಲು ಸಾಧ್ಯವಿದೆ ಎಂದೂ ಈ ಸಂಖ್ಯೆಯ ಹೆಚ್ಚಳದಿಂದ ಅದಕ್ಷತೆ, ಅನ್ಯ ಬೇಜವಾಬ್ದಾರಿಗಳು ಹೆಚ್ಚಿ ಸರ್ಕಾರದ ಕೆಲಸಗಳು ನಿಧಾನವಾಗುತ್ತವೆ. ಆದ್ದರಿಂದ ಆಡಳಿತ ವೆಚ್ಚ ಕಡಿಮೆ ಮಾಡಿ, ಉಳಿದ ಹಣವನ್ನು ಅಭಿವೃದ್ಧಿಗೆ ಬಳಸಲು ಎಸ್ಸೆನ್‌ರವರ ಸಲಹೆಗಳು. ಆಡಳಿತದ ಸುಧಾರಣೆಯನ್ನು ತೋರಿಸುತ್ತವೆ ಹಾಗೂ ಮತದಾನದ ಹಕ್ಕನ್ನು 18 ವರ್ಷಕ್ಕೆ ಇಳಿಸಲು ಸೂಚಿಸಿದವರೂ ಇವರೆ. ಹೀಗೆ ಎಸ್ಸೆನ್ ರಾಷ್ಟ್ರದ ವಿವಿಧ ಆಡಳಿತದ ಜವಾಬ್ದಾರಿಯುತ ಸ್ಥಾನಗಳಿಂದ ನಿವೃತ್ತಿಯಾಗಿದ್ದರೂ ಅವರಿಗೆ ಸುಧಾರಣೆ ಪರವಾದ ಚಿಂತನೆಗಳು ಇಳಿಮುಖವಾಗಲಿಲ್ಲ. ಯಾರೇ ಪ್ರಧಾನಿಯಾಗಲಿ ಯಾರೇ ಮುಖ್ಯಮಂತ್ರಿಯಾಗಲಿ, ಯಾವುದೇ ಪಕ್ಷ ಅಧಿಕಾರಕ್ಕೆ ಬರಲಿ ತಮಗೆ ತಿಳಿದ ಅಭಿವೃದ್ಧಿಪರ ವಿಚಾರಗಳನ್ನು ಸಂಬಂಧಪಟ್ಟವರ ಗಮನಕ್ಕೆ ತರುವುದನ್ನು ಮರೆಯುತ್ತಿರಲಿಲ್ಲ. ಕಿವಿಗೆ ಬಿದ್ದ ಜನರ ಸಮಸ್ಯೆಗಳನ್ನು ಪಕ್ಷಾತೀತವಾಗಿ ಯಾವುದೇ ಭೇದ ಭಾವವಿಲ್ಲದೆ ಎಲ್ಲರಲ್ಲಿಯೂ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದರು.

ವಿಧಾನ ಸಭೆಯಲ್ಲಿ ಎಸ್ಸೆನ್ : ಗಡಿ ವಿವಾದ ಕುರಿತು ಚರ್ಚೆ : 1956ರಲ್ಲಿ ರಾಜ್ಯಗಳ ಪುನರ್ ವಿಂಗಡಣೆ ಆದಾಗ, ಕನ್ನಡ ಜನರಿರುವ ಹಲವಾರು ಪ್ರದೇಶಗಳು ಸೇರಿ ಕರ್ನಾಟಕ ಏಕೀಕರಣವಾಯಿತು. ಮಹಾರಾಷ್ಟ್ರದ ಅಸಮಾಧಾನದಿಂದ ಗಡಿವಿವಾದದ ವಿಷಯದಲ್ಲಿ ತಮಗೆ ಅನ್ಯಾಯವಾಗಿದೆ ಎನ್ನುವುದನ್ನು ಅವರು ಬಹು ವ್ಯವಸ್ಥಿತ ರೀತಿಯಿಂದ ದೇಶದ ತುಂಬೆಲ್ಲಾ ಪ್ರಚಾರ ಮಾಡಿದರು.

೧೯೬೪ರ ಮೇ ತಿಂಗಳಲ್ಲಿ ನೆಹರೂ ನಿಧನಕ್ಕೆ ಕೆಲವು ದಿನಗಳ ಮುಂ
ಮುಂಬಯಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸಭೆ ಸೇರಿತ್ತು. ಅ
ಮಹಾರಾಷ್ಟ್ರ ಏಕೀಕರಣ ಸಮಿತಿ ಬೆಳಗಾವಿ ಮಹಾರಾಷ್ಟ್ರದಲ್ಲಿ ಸೇರಬೇಕೆಂದು ದೊ
ಗದ್ದಲ ಸೃಷ್ಟಿಸಿತು. ಆಗ ನಿಜಲಿಂಗಪ್ಪನವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ
ಸದಸ್ಯರಾಗಿದ್ದರು. ಬೆಳಗಾವಿ ಸಮಸ್ಯೆ ಆಗಲೇ ಮುಗಿದ ಅಧ್ಯಾಯವಾಗಿರುವುದರಿಂ
ಅದರ ಮರುಪರಿಶೀಲನೆ ಕೂಡದೆಂದೂ, ಕರ್ನಾಟಕ ರಾಜ್ಯ ಸರ್ಕಾರ, ಕೆ.ಪಿ.ಸಿ.
ಮತ್ತು ವಿರೋಧ ಪಕ್ಷಗಳು ಸಹಿತ ಒಮ್ಮತದಿಂದ ತೀರ್ಮಾನಿಸಿವೆ ಮತ್ತು ಮುಂ
ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಹೋದಾಗ ನಿಜಲಿಂಗಪ್ಪನವರು ಪುನ
ಪರಿಶೀಲನೆಗೆ ಒಪ್ಪಬಾರದೆಂದು ಸಾರ್ವಜನಿಕರಿಂದಲೂ ಒತ್ತಾಯ ಬಂದಿತ್ತು. ಆದ
ಅವರು ಬೆಳಗಾವಿಯ ಸಮಸ್ಯೆಯೊಡನೆ ಕಾಸರಗೋಡು ಸಮಸ್ಯೆಯನ್ನೂ ಪು
ಪರಿಶೀಲನೆ ಮಾಡುವ ಏಕಸದಸ್ಯ ಆಯೋಗದ ರಚನೆಗೆ ಒಪ್ಪಿಕೊಂಡರು. ಅದ
ಪರಿಣಾಮವಾಗಿಯೇ 1965ರಲ್ಲಿ ಮಹಾಜನ್ ಆಯೋಗ ನೇಮಕ ಆಯಿತು.
ಆಯೋಗದ ನೇಮಕಕ್ಕೆ ಅವರು ಒಪ್ಪಬಾರದಾಗಿತ್ತೆಂದು ವಾದಿಸಿ, ಅವರನ್ನು ಕ
ಟೀಕೆಗೆ ಗುರಿಮಾಡಲಾಯಿತು. ಆದರೆ ಮಹಾರಾಷ್ಟ್ರೀಯರ ಹಟಮಾರಿತನಕ್ಕೆ ಒಂ
ಅಂತಿಮ ಹೊಡೆತ ಕೊಡುವ ದೃಷ್ಟಿಯಿಂದ, ಇವರು ಕೈಬಿಟ್ಟುಹೋಗಿದ್ದ ಕಾ
ಗೋಡನ್ನು ಮರಳಿಪಡೆಯುವ ದೃಷ್ಟಿಯಿಂದ ನಿಜಲಿಂಗಪ್ಪನವರು ಕೈಗೊ
ನಿರ್ಧಾರವು ಸಾಧುವೆಂದು ಮಹಾಜನ್ ವರದಿಯೇ ಸಾಕ್ಷಿಯಾಗಿದೆ. ಅದರಲ್ಲಿ ಒ
ಉನ್ನತಸ್ಥಾನವನ್ನು ಅಲಂಕರಿಸಿದ್ದ ನ್ಯಾಯಮೂರ್ತಿಗಳನ್ನು ನೇಮಕ ಮಾಡಲಾಗು
ದೆಂಬ ಭರವಸೆಯಿದ್ದುದರಿಂದ ಕರ್ನಾಟಕಕ್ಕೆ ಎಂದೆಂದಿಗೂ ಅನ್ಯಾಯವಾಗಲ
ದೆಂಬ ಎಸ್ಸೆನ್ನರವರ ನಂಬಿಕೆ ಸರ್ವಸಮ್ಮತವಾಗಿತ್ತು ಹಾಗೂ ಕರ್ನಾಟ
ಸುದೈವಕ್ಕೆ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಮಹಾಜನ್‌ರ
ನೇಮಕ ವಾದದ್ದಂತೂ ಸರ್ವಸಮರ್ಥಕವಾದ ನಿರ್ಧಾರವಾಗಿತ್ತು.

1966 ರಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಭೆ ಮುಂಬಯಿಯಲ್ಲಿ ಸೇರಿ
ಅದರ ಸಂಪೂರ್ಣ ಪ್ರಯೋಜನ ಪಡೆಯಬೇಕೆಂದು ಮರಾಠಿಗರು ಉಪಾ
ಮಾಡಿದರು. ಅವರಿಗೆ ಅನುಕೂಲ ಸಿಂಧುವಾಗಿ ಗಡಿ ವಿವಾದವನ್ನು ಪರಿ
ಬೇಕೆಂದು ಒತ್ತಾಯಪಡಿಸಲು ಉಪವಾಸ ಹೂಡಿದರು. ಆಗ ಕಾಂಗ್ರೆಸ್ ಕಾ
ಕಾರೀ ಸಮಿತಿಯ ಸದಸ್ಯರು ಶ್ರೀ ನಿಜಲಿಂಗಪ್ಪ ಅವರ ಮೇಲೆ ಒತ್ತಡ ತಂದು
ವಿವಾದವನ್ನು ಪರಿಹರಿಸುವ ಆಯೋಗ ರಚನೆಗೆ ಒಪ್ಪಬೇಕೆಂದು ಅವರನ್ನು
ಪಂತಪಡಿಸಿದರು. ಅವರ ಮಾತಿಗೆ ಕಟ್ಟುಬಿದ್ದು ನಿಜಲಿಂಗಪ್ಪ ಅವರು ಆಯೋ
ರಚನೆಗೆ ಅನಿವಾರ್ಯವಾಗಿ ಒಪ್ಪಬೇಕಾಯಿತು. ಸಭೆಯಲ್ಲಿ ಮೂವರು ಸ
ಆಯೋಗವೊಂದನ್ನು ರಚಿಸಬೇಕೆನ್ನುವ ಪ್ರಸ್ತಾಪವಾಯಿತು. ನ್ಯಾಯವಾದ ಕಾ
ಗೋಸ್ಕರ ಆ ಪ್ರಸ್ತಾಪಕ್ಕೆ ಸ್ವಾಗತ ದೊರೆಯಲಿಲ್ಲ.

ಆದರೂ ತ್ರಿಸದಸ್ಯ ಆಯೋಗವು ಏನೇ ಶಿಫಾರಸ್ಸು ಮಾಡಿದರೂ ನನ್ನು ತೀರ್ಪು ಎಂಬಂತೆ ಎಲ್ಲರೂ ಒಪ್ಪಬೇಕೆಂದು ಆಗ ತೀರ್ಮಾನಿಸಲಾಯಿತು. ಹಾಜನ್ ಆಯೋಗದ ವರದಿ ಸಲ್ಲಿಕೆಯಾದ ನಂತರ 1967ರ ಸಪ್ಟೆಂಬರ್ 4 ದು ಎಸ್. ನಿಜಲಿಂಗಪ್ಪ ಆಯೋಗದ ವರದಿಯನ್ನು ತಾವು ಒಪ್ಪುವುದಾಗಿ ಹೇಳಿಕೆ ಡಿದರು. ಆಗಿನ್ನೂ ಅವರಿಗೆ ವರದಿಯ ಪ್ರತಿ ತಲುಪಿರಲಿಲ್ಲ. ಆದರೂ 1966ರ ಕ್ಟೋಬರ್ ತಿಂಗಳು ಕಾಂಗ್ರೆಸ್ ಕೇಂದ್ರ ಕಾರ್ಯಕಾರಿ ಸಮಿತಿ ಸ್ವೀಕರಿಸಿದ್ದ ರ್ಣಯಕ್ಕೆ ಬದ್ಧರಾಗಿ ತಮ್ಮ ಹೇಳಿಕೆ ನೀಡಿದ್ದರು. ಸೆಪ್ಟೆಂಬರ್ 13, 1967 ರಂದು ಹಾರಾಷ್ಟ್ರದ ಮುಖ್ಯಮಂತ್ರಿ ವಿ.ಪಿ.ನಾಯಕ್ ಅವರು ನೀಡಿದ ಹೇಳಿಕೆಯಲ್ಲಿ ಎಸ್. ಜಲಿಂಗಪ್ಪನವರು ಮಹಾಜನ್ ಆಯೋಗದ ವರದಿಯನ್ನು ಒಪ್ಪುವುದಾಗಿ ನೀಡಿ ವ ಹೇಳಿಕೆಯಲ್ಲಿ ಹೊಸದೇನೂ ಇಲ್ಲವೆಂದು, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಭೆಯಲ್ಲಿ ಗಡಿ ಸಮಸ್ಯೆಯ ಪ್ರಸ್ತಾಪ ಬಂದಾಗಲೇ, ಗಡಿ ಸಮಸ್ಯೆಯನ್ನು ಬಹುಕಾಲ ಳೆಸಬಾರದೆಂದೂ, ಏಕ ಸದಸ್ಯ ಆಯೋಗ ನೀಡುವ ತೀರ್ಪಿಗೆ ಎರಡೂ ಜ್ಯಗಳು ಬದ್ಧರಾಗಬೇಕೆಂದೂ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಒಪ್ಪಿಗೆ ಡಿದ್ದಾರೆಂದೂ ತಿಳಿಸಿ, ತಮಗೆ ಆಯೋಗದ ವರದಿಯ ಪ್ರತಿ ಇನ್ನೂ ತಲುಪ ದ್ದರೂ ತಾವು ಎಂತಹುದೇ ತೀರ್ಪಿಗೆ ಬದ್ಧರು ಎಂದು ತಿಳಿಸಿದ್ದರು. ನಂತರ ಮಹಾ ಷ್ಟ್ರವು ವರದಿ ಬಂದ ಮೇಲೆ ಧ್ವನಿ ಬದಲಿಸಿತು.

ಮಹಾಜನ್ ಆಯೋಗದ ವರದಿಯ ಶಿಫಾರಸ್ಸನ್ನು ತಕ್ಷಣ ಜಾರಿಗೆ ಸುವಂತೆ ಮೈಸೂರು ವಿಧಾನ ಸಭೆ ಮತ್ತು ವಿಧಾನ ಪರಿಷತ್ತು 1967ರ ಡಿಸೆಂಬರ್ ಲ್ಲಿ ನಿರ್ಣಯ ಮಾಡಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದವು. ಆದರೆ, ಮಹಾ ಷ್ಟ್ರದ ಪ್ರಭಾವಕ್ಕೆ ಮಣಿದ ಸರ್ಕಾರ ಮಹಾಜನ್ ಆಯೋಗದ ಯಾವ ಫಾರಸ್ಸನ್ನು ಜಾರಿಗೆ ತರಲಿಲ್ಲ. 4-8-1968 ರಂದು ಬೀದರ್‌ನಲ್ಲಿ ನಡೆದ ಮೈಸೂರು ದೇಶ ಕಾಂಗ್ರೆಸ್ ಸಮಿತಿಯೂ ಮಹಾಜನ್ ಆಯೋಗದ ತೀರ್ಮಾನಗಳನ್ನು ರಿಗೆ ತಂದು ಮಹಾರಾಷ್ಟ್ರ, ಮೈಸೂರು, ಕೇರಳ ರಾಜ್ಯಗಳ ಗಡಿ ಸಮಸ್ಯೆಯನ್ನು ಹರಿಸುವಂತೆ ಕೇಂದ್ರ ಸರ್ಕಾರವನ್ನು ಕೋರುವ ನಿರ್ಣಯ ಕೈಗೊಂಡಿತು.

ಈ ವಿಚಾರದಲ್ಲಿ ಎಸ್ಸೆನ್‌ರವರಿಂದ ಇಷ್ಟೆಲ್ಲಾ ಪ್ರಯತ್ನಗಳು ಮುಂದು ದರೂ ಮಹಾಜನ್ ಆಯೋಗ ಜಾರಿಗೆ ಬಾರದೆ ನನೆಗುದಿಗೆ ಬಿದ್ದಿತು. ಆದರೆ, ವರಿ **26, 1966 ಹಾಗು ಜುಲೈ 1966ರಲ್ಲಿ** ವಿಧಾನಸಭೆಯಲ್ಲಿ ಗಡಿ ವಿವಾದ **ತು ಈ ರೀತಿ ಚರ್ಚಿಸಿದ್ದಾರೆ.** ನನಗೆ ಮೈಸೂರಿನ ಬಗ್ಗೆ ಎಷ್ಟು ಆಸಕ್ತಿ ಇದೆಯೋ ಆಸಕ್ತಿ ಮಹಾರಾಷ್ಟ್ರದ ಬಗ್ಗೆಯೂ ಇದೆ. ಏಕೆ ದರೆ, ನಾವೆಲ್ಲರೂ ಒಂದೇ ಶಕ್ಕೆ ಸೇರಿದವರು. ಮಹಾರಾಷ್ಟ್ರದಲ್ಲಿ ಈ ಚಳುವಳಿ ನಡೆಯುತ್ತಿರುವ ರೀತಿ ನನಗೆ ನೂ ಒಪ್ಪುವುದಿಲ್ಲ. ಈ ಚಳವಳಿಯಲ್ಲಿ ಸಾಮಾನ್ಯ ಪ್ರಜೆಗಳಲ್ಲಿ ಯಾವುದೇ ಆಸಕ್ತಿ

ಇಲ್ಲ. ಇದರ ಬಗ್ಗೆ ಹಲವು ವ್ಯಕ್ತಿಗಳು ಭಾವನಾತ್ಮಕವಾಗಿ ಉಪಯೋಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಗಡಿ ಪ್ರಶ್ನೆಯನ್ನು ಹಲವು ನಿರ್ಧಾರಿತ ಒಪ್ಪಿರುವ ತತ್ವಗಳಿಗನುಗುಣವಾಗಿ ತೀರ್ಮಾನ ಮಾಡಬೇಕಾಗಿದೆ. ಧರ್ ಆಯೋಗ, ರಾಜ್ಯ ಪುನರ್ವಿಂಗಡಣಾ ಆಯೋಗ ಮತ್ತು ಹಲವು ಆಯೋಗಗಳು ಇದ್ದು ಅವೆಲ್ಲವೂ ಗಡಿಯನ್ನು ಯಾವ ಆಧಾರದ ಮೇಲೆ ನಿರ್ಧರಿಸಬೇಕೆಂಬ ವಿಷಯವಾಗಿ ನಿರ್ದೇಶನಗಳ ನಿಯಮಾವಳಿಗಳನ್ನು ನೀಡಿವೆ. ಈ ವಿಷಯಗಳಲ್ಲಿ ಭಾಷೆಗೆ ಪ್ರಾಮುಖ್ಯತೆ ನೀಡಬೇಕೆಂದು ಅವರು ಅಭಿಪ್ರಾಯಪಟ್ಟರೂ ಭೌಗೋಳಿಕ ಸಾಮೀಪ್ಯ, ಆರ್ಥಿಕ ಅಭಿವೃದ್ಧಿ, ಸಾರಿಗೆ ಸೌಲಭ್ಯ, ಆಡಳಿತಾತ್ಮಕ ಅನುಕೂಲಗಳು ಮತ್ತಿತರ ಅಂಶಗಳು ಕೂಡ ಸಮಾನ ಪ್ರಾಮುಖ್ಯತೆ ಪಡೆಯುತ್ತವೆ. ಹಾಗೂ ಮರಾಠಿ ಭಾಷೆಯ ಜನ ಮೈಸೂರು ರಾಜ್ಯದಲ್ಲಿ ಅಥವಾ ಕನ್ನಡ ಭಾಷೆಯ ಜನರು ಮಹಾರಾಷ್ಟ್ರದಲ್ಲಿ ಉಳಿಯದಂತೆ ಗಡಿಗಳನ್ನು ತೀರ್ಮಾನಿಸಿರುವುದು ಯಾವುದೇ ಮಾನವ ಯತ್ನದಿಂದ ಸಾಧ್ಯವೇ? ಇದನ್ನು ಮಾಡಲು ಸಾಧ್ಯವಿಲ್ಲ. ಇದು ಅಸಾಧ್ಯವೂ ಹೌದು ಮತ್ತು ಒಂದು ವೇಳೆ ಈ ರೀತಿ ಆಗುವುದಾದರೆ ಅದು ಒಳ್ಳೆಯದೂ ಅಲ್ಲ. ಏಕೆಂದರೆ ಸುಮಾರು 15-20 ಮೈಲಿಯ ಸುತ್ತ ಪ್ರದೇಶದಲ್ಲಿ ಜನರು ಎರಡೂ ಭಾಷೆಗಳನ್ನು ಅರ್ಥಮಾಡಿಕೊಳ್ಳುತ್ತಾರೆ. ಇದರ ಬಗ್ಗೆ ಯಾವುದೇ ತೊಂದರೆ ಇಲ್ಲ. ಇವೆಲ್ಲಾ ವಿಷಯಗಳನ್ನೂ ಈಗ ಪರಿಶೀಲಿಸಬೇಕು. ನಾವು ತಿಳಿದು ಕೊಳ್ಳಬೇಕು. ನಮಗೆ ಭಾಷಾವಾರು ರಾಜ್ಯಗಳು ಬೇಕಿತ್ತು, ನಾವದನ್ನು ಪಡೆದಿದ್ದೇವೆ. ಮತ್ತು ತೃಪ್ತಿಕರವಾಗಿ ನಡೆಸಿಕೊಂಡು ಹೋಗುತ್ತಿದ್ದೇವೆ ಎಂದು, ಎಸ್ಸೆನ್‌ರವರು ವಿಶ್ಲೇಷಿಸಿದ್ದಾರೆ. ಈ ವಿಚಾರವಾಗಿ ಎಸ್ಸೆನ್ ರಾಷ್ಟ್ರ ರಾಜ್ಯದ ಸಕ್ರಿಯ ರಾಜಕಾರಣದಿಂದ ನಿವೃತ್ತಿ ಪಡೆದಾಗಲೂ ಕನ್ನಡ ನಾಡು ನುಡಿ, ನೆಲ-ಜಲ, ಜನ ಮತ್ತು ಗಡಿ ಸಮಸ್ಯೆಯ ಸಂವೇದನಾಶೀಲರಾಗಿ ಚಿಂತಿಸಿದರು.

ಶಿಕ್ಷಿತ ನಿರುದ್ಯೋಗಿಗಳ ಬಗ್ಗೆ 24ನೇ ಜುಲೈ 1957ರಲ್ಲಿ ವಿಧಾನಸಭೆಯಲ್ಲಿ ಮಾತನಾಡುತ್ತಾ ಈಗ ವಿದ್ಯಾವಂತರಾದ ಜನಗಳಿಗೆ ಕೆಲಸ ಸಿಗುವುದಿಲ್ಲ ಎಂದು ಒಂದು ಸ್ಲೋಗನ್ ಎತ್ತಿಕೊಂಡು ಇಲ್ಲಿ ಹೇಳಿದರೆ ಅದನ್ನು ಜನ ನಂಬುತ್ತಾರೆ. ಆ ರೀತಿ ನಂಬುವ ಜನಗಳಿದ್ದಾರೆ. ಇದನ್ನು ಹೋಗಲಾಡಿಸಲು ಜನಗಳ [illegible] ಪಂಚವಾರ್ಷಿಕ ಯೋಜನೆಗಳನ್ನು ಕೈಗೊಂಡಿರುವ [illegible] ಅದೇ ಆಗಿದೆ. ಹಳ್ಳಿಗಳಲ್ಲಿಯೂ, ಪಟ್ಟಣಗಳಲ್ಲಿಯೂ ಸಣ್ಣ ಸಣ್ಣ ಗ್ರಾಮಗಳಲ್ಲಿಯೂ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರಯತ್ನಮಾಡಲಾಗುತ್ತಿದೆ ಎಂಬುದನ್ನೂ ಉಲ್ಲೇಖಿಸಿದ್ದಾರೆ.

ಜನರ ಆಸ್ತಿ ಸಂಪತ್ತುಗಳನ್ನು ನಿಗದಿ ಮಾಡಲು ಆಯೋಗದ ಸ್ಥಾಪನೆ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತಾ 26ನೇ ಫೆಬ್ರವರಿ 1966 ರಂದು

ಮುಖ್ಯವಾಗಿ ಮಂತ್ರಿಗಳು, ಶಾಸಕರುಗಳು ಇವರ ವಿಚಾರದಲ್ಲಿ ಒಂದು ಕಮೀಷನ್ ನೇಮಕ ಮಾಡಬೇಕೆಂಬ ಒಂದು ನಿರ್ಣಯ ತಂದಿದ್ದಾರೆ. ಇದು ಕಾರ್ಯತಃ ಸಾಧ್ಯವಾಗದ ಮಾತು. ಕಮೀಷನ್ ನೇಮಕ ಮಾಡುವುದಕ್ಕಾಗುವುದಿಲ್ಲ. ಸಮುದ್ರಕ್ಕಿಂತಲೂ ಆಳವಾದ ವಿಚಾರವನ್ನು ಮಾಡಬೇಕು ಎಂದು ಹೇಳಿದ್ದಾರೆ. ಇದಕ್ಕೆ ಸುಮಾರು ವರ್ಷಗಳ ಕಾಲ ಬೇಕಾಗುವುದು. ಒಟ್ಟಾರೆ ಲಂಚ ರುಷವತ್ತು ಇಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಲಂಚವನ್ನು ನಿರ್ಮೂಲನೆ ಮಾಡಲು ನಾವೆಲ್ಲಾ ಭಾಗಿಯಾಗಬೇಕಾಗಿದೆ.

19ನೇ ನವೆಂಬರ್ 1966ರಲ್ಲಿ ನಾಗರೀಕ ಸೇವಾ ಆಯೋಗದ ಕುರಿತು, ಚರ್ಚೆಯ ಸಂದರ್ಭದಲ್ಲಿ ಕೆಲವರು ಸರ್ಕಾರದ ವಿರುದ್ಧ ಟೀಕೆ ಮಾಡತಕ್ಕಂಥ ವಿಚಾರದಲ್ಲಿ ಕೂಡ ಅದಕ್ಕೆ ಯೋಗ್ಯವಾಗಿರ ತಕ್ಕಂಥ ಒಂದು ಸಮಯ, ಸಂದರ್ಭ, ಮಿತಿಬೇಕು, ಮಿತಿಮೀರಿ ಟೀಕೆ ಮಾಡುತ್ತಾ ಹೋದರೆ ಚೆನ್ನಾಗಿ ಕಾಣುವುದಿಲ್ಲ. ಅದು ಸಹಜವಾಗಿಯೂ ಇರುವುದಿಲ್ಲ. ಆದುದರಿಂದ ಅಂಥಾದ್ದನ್ನು ಹೆಚ್ಚಾಗಿ ನಾವು ಗಮನದಲ್ಲಿಟ್ಟುಕೊಳ್ಳಬೇಕಾಗಿಲ್ಲ. ಯಾವುದೇ ಒಂದು ವಿಷಯದ ಬಗ್ಗೆ ಸರ್ವೇಸಾಮಾನ್ಯವಾಗಿ ಟೀಕೆ ಬರುತ್ತದೆ. ಆದರೆ ಇವತ್ತಿನ ದಿವಸ, ಲೋಕಸೇವಾ ಆಯೋಗದ ಸದಸ್ಯರ ಮೇಲೆ ಯಾವುದೇ ರೀತಿಯ ಟೀಕೆ ಬಂದರೆ ಅದು ಸತ್ಯಕ್ಕೆ ಬಹುದೂರವಾದುದು ಎಂದು ನಾನು ಹೇಳುತ್ತೇನೆ. ಲೋಕಸೇವಾ ಆಯೋಗಕ್ಕೆ ನೇಮಕವಾಗಿರತಕ್ಕಂಥ ಈ ಸದಸ್ಯರು ಎಲ್ಲರೂ ಯೋಗ್ಯರು, ನಿಷ್ಪಕ್ಷಪಾತಿಗಳೂ ಹೌದು, ಅವರೆಲ್ಲರೂ ಗೌರವಕ್ಕೆ ಪಾತ್ರರಾಗಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಅವರ ಮೇಲೆ ಒಂದೂ ಆಪಾದನೆ ಬಂದಿಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು, ಕೆಲವು ತಪ್ಪು ಮಾಡಿರಬಹುದು. ಅವರು ಹೇಳಿದ್ದನ್ನು ಸರಕಾರ ಒಪ್ಪದೇ ಇರಬಹುದು. ಸರಕಾರಕ್ಕೆ ಈ ಅಧಿಕಾರ ಇದೆ. ಇಷ್ಟು ಜನ ಅಭ್ಯರ್ಥಿಗಳು ಬೇಕು ಎಂದು ಸರಕಾರ ತಿಳಿಸಿದರೆ ಅವರು ಶಿಫಾರಸ್ಸನ್ನು ಮಾಡುತ್ತಾರೆ. ಆದರೆ, ಶಿಸ್ತಿಗೆ ವಿರೋಧವಾಗಿ ನಡೆದವರ ಬಗ್ಗೆ ಏನು ಮಾಡಬೇಕು ಎಂದು ಕೇಳತಕ್ಕಂಥಾದ್ದು ನಮ್ಮ ಕರ್ತವ್ಯ, ನಾವು ಕೇಳುತ್ತೇವೆ.

ಆಡಳಿತ ಭಾಷೆ ಕುರಿತು ಚರ್ಚೆ ಮಾಡುತ್ತ 5ನೇ ಸೆಪ್ಟೆಂಬರ್ 1963ರಂದು, ಜನರ ಸೇವೆ ಮಾಡುವವರು ಆ ಭಾಷೆ ಬರುವವರು ಮಾತ್ರ ವಲ್ಲ ಅಥವಾ ಭಾಷೆ ಬಂದರೆ ಮಾತ್ರ ಸಾಲದು. ಆ ಪ್ರದೇಶದ ಜನರ ಸೇವೆ ಮುಖ್ಯ. ಆದುದರಿಂದ ಇಲ್ಲಿ ಕನ್ನಡದಲ್ಲಿ ಮಾತನಾಡದಿದ್ದರೆ ಅದರಿಂದ ಅಲ್ಲೋಲ ಕಲ್ಲೋಲವಾಗುವುದಿಲ್ಲ. ಯಾವ ಭಾಷೆಯಲ್ಲಿ ಮಾತನಾಡಿದರೆ ಎಲ್ಲರಿಗೂ ತಿಳಿಯುತ್ತದೆಯೋ ಅದನ್ನು ತಿಳಿದುಕೊಳ್ಳುವುದು ಉತ್ತಮ. ಈ ಸಮಯ ಅಧಿಕೃತ ಭಾಷೆಯ ಈ ಮಸೂದೆಯನ್ನು ತಂದಿದೆ, ಯಾವ ಜನರು ಹೆಚ್ಚಾಗಿ ಮಾತನಾಡು

ತ್ತಾರೋ, ಆ ಭಾಷೆಯಲ್ಲಿ ಆಡಳಿತ ನಡೆಸುವುದು ಅವಶ್ಯಕ. ಹಾಗೆಂದ ಮಾತ್ರಕ್ಕೆ ಅಲ್ಪಸಂಖ್ಯಾತರು ಮಾತನಾಡುವ ಭಾಷೆಯನ್ನಾಗಲೀ ಅವರನ್ನಾಗಲೀ ತಾತ್ಸಾರ ಮಾಡುವುದು ನಮ್ಮ ಉದ್ದೇಶವಲ್ಲ. ಮೈಸೂರು ಸರ್ಕಾರದವರು ಯಾವತ್ತೂ ಅಲ್ಪಸಂಖ್ಯಾತರಿಗೆ ಅನ್ಯಾಯ ಮಾಡಿಲ್ಲ. ಆ ಮಾನ್ಯ ಸದಸ್ಯರ ಪ್ರದೇಶದಲ್ಲಿ ಮೊದಲು ಎಷ್ಟು ಮರಾಠಿ ಶಾಲೆಗಳಿದ್ದವೋ ಎಷ್ಟು ವಿದ್ಯಾರ್ಥಿಗಳಿದ್ದರೋ, ಎಷ್ಟು ಕಟ್ಟಡಗಳಿದ್ದವೋ ಈಗ ಅದಕ್ಕಿಂತ ಶೇಕಡಾ 50-60 ರಷ್ಟು ಜಾಸ್ತಿಯಾಗಿವೆ. ಆದುದರಿಂದ ನನ್ನ ಆ ಸ್ನೇಹಿತರು ಎಲ್ಲಾ ಸಂದರ್ಭಗಳಲ್ಲಿಯೂ ರಾಜಕೀಯ ಮಾಡುವುದು ಸರಿಯಲ್ಲ. ಇದರಿಂದ ಯಾವ ಸೇವೆ ಮಾಡಬೇಕೆಂದು ಅವರು ಬಂದಿದ್ದಾರೋ ಅದು ಆಗುವುದಿಲ್ಲ. ಈ ಹೊತ್ತು ಮಸೂದೆ ಅಂಗೀಕೃತವಾಗಿ ಕಾನೂನಾದರೆ ನಾಳೆ ಯಿಂದಲೇ ಈಗಿರುವ ಎಲ್ಲವನ್ನೂ ಕೂಲಂಕುಷವಾಗಿ ಆಲೋಚನೆ ಮಾಡಿ ಇದನ್ನು ತರುತ್ತೇವೆ. ಆದಷ್ಟು ಕಡಿಮೆ ಕಾಲವನ್ನು ತೆಗೆದುಕೊಂಡು ಅಧಿಕೃತ ಭಾಷೆ ಕನ್ನಡ ಆಗಬೇಕೆಂಬುದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತಿದ್ದೇನೆ.

ಆಡಳಿತ ಭಾಷೆಯ ಬಗ್ಗೆ ಪ್ರಶ್ನೋತ್ತರ **ಅವಧಿಯಲ್ಲಿ 29ನೇ ಜೂನ್ 1967ರಲ್ಲಿ ಶ್ರೀ ವಾಟಾಳ್ ನಾಗರಾಜ್** - ಪ್ರತಿ ಇಲಾಖೆಯಲ್ಲಿಯೂ ಇಂಗ್ಲೀಷ್ ಬಿಟ್ಟು , ಕನ್ನಡದಲ್ಲಿಯೇ ಕಾರ್ಯಕಲಾಪವನ್ನು ನಡೆಸುವುದಕ್ಕೆ ಏನು ತೊಂದರೆ ಎಂಬ ಪ್ರಶ್ನೆಗೆ ನಿಜಲಿಂಗಪ್ಪನವರು ಉತ್ತರಿಸುತ್ತಾ ಕೆಲವು ಇಲಾಖೆಗಳಲ್ಲಿ ಪ್ರಾರಂಭ ಮಾಡಿದ್ದೇವೆ ಹಾಗೂ ಕೆಲವು ಜಿಲ್ಲೆಗಳಲ್ಲಿಯೂ ಪ್ರಾರಂಭ ಮಾಡಿಯಾಯಿತು. ಆದರೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಮತ್ತು ಅಧಿಕಾರಿಗಳು ನಮಗೆ ಸಾಕಷ್ಟು ಶಬ್ದ ಸಂಗ್ರಹವಿಲ್ಲ ಎಂದು ಹೇಳುತ್ತಿದ್ದಾರೆ. ಅದರ ಮೇಲೆ ಒಂದು ಸಮಿತಿಯನ್ನು ಮಾಡಿದ್ದು ಅದರ ವರದಿ ಬಂದಿದೆ. ಯಾವ ಯಾವ ಶಬ್ದಗಳನ್ನು ಆಡಳಿತ ಭಾಷೆಯಾಗಿ ಕನ್ನಡದಲ್ಲಿ ಮಾಡಿದ ಪ್ರಯುಕ್ತ ಉಪಯೋಗಿಸಲು ಸಾಧ್ಯ ವಾಗುತ್ತದೆ ಎಂದು 5-4-1967ರಲ್ಲಿ ವರದಿ ಬಂದಿದೆ. ಕೆಲವು ಶಬ್ದಗಳಿಗೆ ಪಾರಿಭಾಷಿತ ಶಬ್ದಗಳು ಯಾವುದನ್ನು ಉಪಯೋಗಿಸಬೇಕು ಎಂದು ನೋಡಿ ಬಹುಮಟ್ಟಿಗೆ ಜಾರಿಗೆ ತರಬಹುದು. ಶ್ರೀ ಎ.ಜೆ. ದೊಡ್ಡಮೇಟಿ ಸಾಧ್ಯವಾದಷ್ಟು ತೀವ್ರವಾಗಿ ಕಾರ್ಯರೂಪಕ್ಕೆ ತರಲಾಗುವುದು ಎಂದು ಹೇಳಿದ್ದಾರೆ. ಶಾಸನ ಸಭೆಯಲ್ಲಿ ಮಂತ್ರಿಗಳು ಉತ್ತರ ಕೊಡುವುದು ಅಥವಾ ಇಲ್ಲ, ಈ ಪ್ರಶ್ನೆಗಳನ್ನು ಸಭೆಯ ಮುಂದೆ ಇಡುತ್ತೇವೆ ಎನ್ನುವುದು, ಇಷ್ಟನ್ನಾದರೂ ಹೇಳಲು ಕನ್ನಡವನ್ನು ಉಪಯೋಗಿಸುವುದಕ್ಕೆ ಏನು ತೊಂದರೆ ಎಂಬ ಪ್ರಶ್ನೆಗೆ ಮಾನ್ಯ ಎಸ್ಸೆನ್‌ರವರು ಉತ್ತರಿಸುತ್ತಾ ಈ ಕೆಳಗಿನಂತೆ :

ಎಲ್ಲಾ ಮಂತ್ರಿಗಳು, ಎಲ್ಲಾ ಸದಸ್ಯರುಗಳು ಕನ್ನಡದಲ್ಲಿಯೇ ಮಾತನಾಡಿ ದರೆ ಸಂತೋಷ, ಎಲ್ಲರೂ ಒಪ್ಪತಕ್ಕ ಮಾತು, ಸುಸ್ವಾಗತ, ಆದರೆ ಎಲ್ಲವನ್ನೂ

ಕನ್ನಡದಲ್ಲಿಯೇ ಮಾಡಬೇಕು ಎಂದರೆ ಬಹಳ ಕಷ್ಟವಾಗುತ್ತದೆ. ಕೆಲವು ಸದಸ್ಯರಿಗೆ ಕನ್ನಡ ಬರುವುದಿಲ್ಲ, ಕೆಲವು ಸದಸ್ಯರಿಗೆ ಕನ್ನಡ ತಿಳಿಯುವುದಿಲ್ಲ, ಆದುದರಿಂದ ಕೆಲವು ಕಾಲದ ಮೇಲೆ ಹಾಗೆ ಮಾಡಬಹುದು ಎಂದು ಕಾಣುತ್ತದೆ. ಎಲ್ಲಿಯವರೆಗೆ ನಮ್ಮ ಶಬ್ದ ಸಂಗ್ರಹ ಸಾಕಷ್ಟು ಕನ್ನಡ ಭಾಷೆಯಲ್ಲಿ ಇಲ್ಲವೋ, ಅಲ್ಲಿಯವರೆಗೆ ಈ ಕಷ್ಟವಿರುತ್ತದೆ. ಆದಷ್ಟು ಜಾಗ್ರತೆ ಈ ಕಷ್ಟ ತೊಲಗಲಿ ಎಂದು ಹಾರೈಸುತ್ತೇನೆ ಎಂದು ಕನ್ನಡ ಅಭಿಮಾನವನ್ನು ಮೆರೆದಿದ್ದಾರೆ.

ವಿಧಾನ ಪರಿಷತ್ತಿನಲ್ಲಿ ಎಸ್ಸೆನ್ : ಮೈಸೂರು ಪಂಚಾಯತಿ ರಾಜ್ ಮಸೂದೆ 1964ರ ಮೇಲಿನ ಚರ್ಚೆ : ಪ್ರಜಾಪ್ರಭುತ್ವ ಯಶಸ್ವಿಯಾಗಿ ಪರಿಣಾಮಕಾರಿಯಾಗಿ ನಡೆಯಬೇಕಾದರೆ, ಜನರು ಇದರಲ್ಲಿ ವಿಶ್ವಾಸವಿಟ್ಟು ತಮ್ಮ ಜವಾಬ್ದಾರಿ ಹೊರತಕ್ಕ ಅರ್ಹತೆ ಪಡೆಯಬೇಕಾದರೆ, ಇಂಥ -ಒಂದು ಮಸೂದೆ ಅವಶ್ಯಕವೆಂದು ಕಂಡುಬಂದಿದೆ. ಅದು ಚೆನ್ನಾಗಿ ಆಗಬೇಕೆಂಬ ದೃಷ್ಟಿಯಿಂದ ಇದನ್ನು ಮಂಡಿಸಿದ್ದು ಆಗಿದೆ. ಇದರಲ್ಲಿ ಈ ಮೂರು ಹಂತಗಳಲ್ಲಿ ಆಗತಕ್ಕ ಕೆಲಸಕಾರ್ಯ ಗಳಿಗೆ ಒದಗಿಸಿರತಕ್ಕ ಹಣ ಸಾಲದೇ ಹೋದರೆ ಮತ್ತಷ್ಟು ಹಣವನ್ನು ಬೇರೆ ರೂಪ ದಲ್ಲಿ ಕೊಡಬೇಕಾದ್ದು, ಒದಗಿಸಬೇಕಾದ್ದು ಅವಶ್ಯಕ ಎಂದು ಕಾಣುತ್ತದೆ. ಅವರಿಗೂ ಯಾವ ಜವಾಬ್ದಾರಿ ಇದೆಯೋ ಅದನ್ನು ಯೋಗ್ಯವಾದ ರೀತಿಯಲ್ಲಿ ನಿರ್ವಹಿಸುವುದಕ್ಕೆ ಅವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಸಾಕಾದಷ್ಟು ಅಧಿಕಾರವನ್ನು ಕೊಡುವುದಕ್ಕೆ ಬೇಕಾದ ಎಲ್ಲಾ ಏರ್ಪಾಡುಗಳೂ ಈ ಮಸೂದೆಯಲ್ಲಿ ಅಡಕವಾಗಿವೆ. ಇದರಲ್ಲಿ ಮುಖ್ಯವಾದದ್ದು ಹಣಕಾಸಿನ ವಿಚಾರ. ಅದಕ್ಕೆ ಸಾಕಾಗುವಷ್ಟು ಅಧಿಕಾರವನ್ನು ಇಲ್ಲಿ ಕೊಟ್ಟಿದೆ. ಪಂಚಾಯ್ತಿ ತಾಲ್ಲೂಕು ಬೋರ್ಡು, ಮತ್ತು ಜಿಲ್ಲಾ ಪರಿಷತ್ತಿಗೆ ಯಾವ ರೀತಿ ಹಣವನ್ನು ಹಂಚಬೇಕು ಎಂಬ ವಿಚಾರವು ಇಧರಲ್ಲಿ ಅಡಕವಾಗಿದೆ.

ಸರಕಾರದ ಖರ್ಚು ಕಡಿಮೆ ಮಾಡುವುದರ ಕುರಿತು ಚರ್ಚೆ 23ನೇ ಮಾರ್ಚ್ 1957: ಹಿಂದೆ ನಮ್ಮ ಸಂಸ್ಥಾನ ಒಂದು ಪೊಲೀಸ್ ಸ್ಟೇಟ್ ಆಗಿತ್ತು. ಆದರೆ ಈ ದಿವಸ ಇದೊಂದು (ವೆಲ್‌ಫೇರ್ ಸ್ಟೇಟ್ ಆಗಿದೆ) ಎಂದರೆ ಒಂದು ಸುಖೀ ರಾಜ್ಯವಾಗಿದೆ. ನಾವು ಈ ದಿವಸ ನಮ್ಮ ದೇಶದ ಜನಗಳಿಗೆ ಹೆಚ್ಚು ಹೆಚ್ಚು ಅನುಕೂಲತೆಗಳನ್ನು ಮಾಡಬೇಕಾಗಿದೆ. ಆದ್ದರಿಂದ ನಮ್ಮ ಖರ್ಚು ದಿನ ದಿನಕ್ಕೂ ಹೆಚ್ಚಾಗುತ್ತಿದೆ. ನಮ್ಮ ದೇಶದಲ್ಲಿ ಸಂಪತ್ತು ಅಭಿವೃದ್ಧಿಯಾಗಬೇಕಾದರೆ, ನಾವು ದೇಶಾಭಿವೃದ್ಧಿ ಕಾರ್ಯಗಳಿಗೆ ಮತ್ತು ಸಂಪತ್ತು ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಹೆಚ್ಚಾಗಿ ಗಮನ ಕೊಡಬೇಕು. ಈ ವಿಚಾರಗಳನ್ನೆಲ್ಲಾ ಈಗಾಗಲೇ ಸರ್ಕಾರ ದವರು ಪರಿಶೀಲನೆಗಳನ್ನು ತೀವ್ರವಾಗಿ ನಡೆಸುತ್ತಿದ್ದಾರೆ. ಈ ಕಾರಣದಿಂದ ಈಗ ಪ್ರತಿ ಯೊಂದು ಇಲಾಖೆಯೂ ಹೆಚ್ಚಿನ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ.

ಅನೇಕ ಪರಿ ನಾವು ದೊಡ್ಡ ಉದ್ಯಮಗಳನ್ನು ಕೈಗೊಳ್ಳಬೇಕೆಂದು ಪರಿಯೋಜನೆಗಳನ್ನು ಮಾಡುತ್ತಿದ್ದೇವೆ. ತರೀ ಜಮೀನುಗಳ ವಿಸ್ತೀರ್ಣವನ್ನು ಹೆಚ್ಚು ಮಾಡಲು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಈ ರೀತಿ ನಾವು ಕೈಗೊಳ್ಳುವ ಎಲ್ಲಾ ಯೋಜನೆಗಳಿಂದಲೂ ಸರ್ಕಾರಕ್ಕೆ ಹೆಚ್ಚಿನ ವರಮಾನ ಬಂದೇ ಬರುತ್ತದೆ.

ಲೋಕ ಸಭೆಯಲ್ಲಿ ಎಸ್ಸೆನ್: ಪಂಚವಾರ್ಷಿಕ ಯೋಜನೆಗಳ ಒಂದು ಚರ್ಚೆ 18ನೇ ಡಿಸೆಂಬರ್ 1952 ; ನಾವು ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ಪರಿಹರಿಸಲು ಭಾರಿ ಶ್ರಮಪಡುತ್ತಿರುವ ಯೋಜನಾ ಆಯೋಗವನ್ನು ನಾನು ಅಭಿನಂದಿಸುತ್ತೇನೆ. ನಾವು ಇಂದು ದೇಶದಲ್ಲಿ ಎದುರಿಸುತ್ತಿರುವ ಮುಖ್ಯ ಸಮಸ್ಯೆ ಮಾನವ ಸಂಪನ್ಮೂಲದ ನಿರ್ಲಕ್ಷ್ಯ ಎಂಬ ಅಂಶವನ್ನು ಗುರುತಿಸಿ ಅರಿತಿರುವುದಕ್ಕಾಗಿ ಅವರಿಗೆ ನಾನು ಪ್ರತ್ಯೇಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಗ್ರಾಮಗಳಲ್ಲಿ ವಾಸಿಸುತ್ತಿರುವ ನಿರುದ್ಯೋಗಿ ಮತ್ತು ಅರೆ ನಿರುದ್ಯೋಗಿಗಳ ಬಗ್ಗೆ ಬಹಳ ಕಳವಳ ವ್ಯಕ್ತಪಡಿಸಲಾಗುತ್ತಿದೆ. ಇಂದು ನಿರುಪಯೋಗವಾಗಿರುವ ಮಾನವ ಶಕ್ತಿಯ ಬಳಕೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಈ ದೃಷ್ಟಿಯಲ್ಲಿ ಪ್ರತ್ಯೇಕ ಒತ್ತನ್ನು ಸಣ್ಣ ಕೈಗಾರಿಕೆಗೆ ಮತ್ತು ಗುಡಿ ಕೈಗಾರಿಕೆಗೆ ನೀಡಲಾಗುತ್ತಿದೆ. ನಾನು ಈ ವಿಷಯದ ಬಗ್ಗೆ ಮಾತನಾಡುತ್ತಾ ಒಂದು ಅಂಶ ಹೇಳಬಯಸುತ್ತೇನೆ. ಜನರ ಶಕ್ತಿಯನ್ನು ಸರಿಯಾದ ದಾರಿಯಲ್ಲಿ ಹರಿಸುವವರೆಗೂ ಯಾವುದೇ ಯೋಜನೆಯು ಯಶಸ್ವಿಯಾಗುವುದಿಲ್ಲ, ಅದಕ್ಕೊಂದು ಅರ್ಥವೂ ಇರುವುದಿಲ್ಲ ಎಂಬ ಅಂಶವನ್ನು ಲೋಕಸಭೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರ ಧುರೀಣರಾಗಿ ಎಸ್ಸೆನ್: ರಾಷ್ಟ್ರ ಮತ್ತು ರಾಜ್ಯ ಮಟ್ಟದ ಹಲವಾರು ವೈವಿಧ್ಯಮಯ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದವರು. ಭಾರತ ಸಂವಿಧಾನ ರಚನಾ ಸಭೆಯ ಸದಸ್ಯರಾಗಿ 1952-56ರಲ್ಲಿ ಲೋಕ ಸಭಾ ಸದಸ್ಯರಾಗಿ, ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಹಾಗು ವರ್ಕಿಂಗ್ ಕಮಿಟಿ ಸದಸ್ಯರಾಗಿ ಭಾರತ ಸರ್ಕಾರದ ರೈಲು ಮತ್ತು ಅನಿಲ ಆಯೋಗದ ಅಧ್ಯಕ್ಷರಾಗಿ ದಕ್ಷ ಮತ್ತು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿದ್ದಾರೆ. ಆದರೆ ಎಸ್ಸೆನ್ ಜನವರಿ 7,1968ರಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದಾಗ ರಾಷ್ಟ್ರದ ರಾಜಕಾರಣವು ಮುಳ್ಳಿನ ಹಾಸಿಗೆಯಾಗಿತ್ತು. ಪಕ್ಷದಲ್ಲಿ ಅಶಿಸ್ತು ಪಕ್ಷಾಂತರಿಗಳ ಅವಾಂತರ, ಪ್ರಧಾನಿ ಮತ್ತು ಎಸ್ಸೆನ್‌ರವರ ನಡುವೆ ಭಿನ್ನಾಭಿಪ್ರಾಯಗಳು ತಲೆದೋರಿದ್ದವು ಮತ್ತು ಚುನಾವಣಾ ವೆಚ್ಚ ನಿಭಾಯಿಸುವುದು ಅಧ್ಯಕ್ಷರಿಗೆ ತಲೆನೋವಾಯಿತು. ಈ ಸಂದರ್ಭದಲ್ಲಿ 3-5-1969ರಲ್ಲಿ ರಾಷ್ಟ್ರಪತಿ ಜಾಕೀರ್ ಹುಸೇನ್‌ರ ನಿಧನದಿಂದಾಗಿ ಉತ್ತರಾಧಿಕಾರಿಯ ಆಯ್ಕೆ ಪ್ರಕ್ರಿಯೆಯಲ್ಲಿ ಪ್ರಧಾನಿ ಇಂದಿರಾಗಾಂಧಿ ಮತ್ತು ಎಸ್ಸೆನ್ ನಡುವೆ ಭಿನ್ನಾಭಿಪ್ರಾಯಗಳು ತಲೆದೋರಿ ಎಸ್ಸೆನ್‌ರ ಅಭ್ಯರ್ಥಿ ಸಂಜೀವರೆಡ್ಡಿಯವರು ಸೋತು ಇಂದಿರಾಗಾಂಧಿಯವ

ಂದ ಅಭ್ಯರ್ಥಿ ವಿ.ವಿ.ಗಿರಿ ರಾಷ್ಟ್ರಪತಿಯಾಗಿ ಆಯ್ಕೆಯಾದಾಗ ಕಾಂಗ್ರೆಸ್ ಲ್ಲಿ ಒಡಕು ಕಾಣಿಸಿಕೊಂಡಿತು. ಅಲ್ಲಿ ಅಭ್ಯರ್ಥಿಯಾಗಿ ಸೋಲಿನಿಂದ ಪ್ರಸ್ತು ರಣದಿಂದ ಸೃಷ್ಟಿಯಾದ ಪ್ರಾಮಾಣಿಕತೆಯ ಗೊಂದಲ ಅದರಲ್ಲಿ ಬಿಕ್ಕಟ್ಟಾಗಿ ಪರಿಣಮಿಸಿತು. ನಂತರ 1-11-1969ರಂದು ವಿಚಾರಣೆಯ ಮೊದಲ ಪತ್ರದ ವಿಚಾರಣೆಗಾಗಿ ಎಸ್ಸೆನ್ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಭೆಗೆ ಇಂದಿರಾಗಾಂಧಿಯವರನ್ನು ಕರೆದರು. ಆದರೆ, ಇಂದಿರಾಗಾಂಧಿ ರೇ ಕಾರ್ಯಕಾರಿ ಸಮಿತಿ ಸಭೆಯನ್ನು ತಮ್ಮ ನಿವಾಸದಲ್ಲಿ ಕರೆದರು. ಹೀಗೆ ಸಭೆಗಳು ಪ್ರತ್ಯೇಕವಾಗಿ ನಡೆದವು. ಅಧ್ಯಕ್ಷರಿಂದ... ಅಧ್ಯಕ್ಷರಾಗಿದ್ದ ಎಸ್ಸೆನ್ ಗೊತ್ತುವಳಿಯನ್ನು ಮಂಡಿಸಿ ಇಂದಿರಾಗಾಂಧಿಯವರು ಪಕ್ಷದಲ್ಲಿ ಶಿಸ್ತು ುವ ಮಾಡಿದ್ದಾರೆಂದು ಅವರನ್ನು ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವದಿಂದ ಗೊಳಿಸಿ ಸಭಾ ಸಮಿತಿಯಲ್ಲಿ ನಿರ್ಧರಿಸಿದರು. ಆದರೆ ಪ್ರಧಾನಮಂತ್ರಿ ರಾಗಾಂಧಿ ಈ ಗೊತ್ತುವಳಿಯನ್ನು ಒಪ್ಪಿಕೊಳ್ಳದೆ ಸಂಸತ್ತಿನ ಉಭಯ ಸದನಗಳ ಕರೆದಾಗ ಒಟ್ಟು 420 ಸದಸ್ಯರಲ್ಲಿ 310 ಸದಸ್ಯರು ಹಾಜರಿದ್ದರು ಆದರೆ ಂಗಪ್ಪನವರು ಕರೆದ ಕಾಂಗ್ರೆಸ್ ಸಭೆ ಅನಧಿಕೃತವೆಂದು ತೀರ್ಮಾನಿಸ ಯಿತು. ಇದರಿಂದಾಗಿ ಕಾಂಗ್ರೆಸ್ ಹೋಳಾಯಿತು ಅಂದಿನಿಂದ ಎಸ್ಸೆನ್ ಅಧ್ಯಕ್ಷ ದ್ದ ಕಾಂಗ್ರೆಸ್‌ನಲ್ಲಿ ಎರಡು ಬಣವಾಗಿ ಇಂದಿರಾಗಾಂಧಿ ನೇತೃತ್ವದ ಆಡಳಿತ ಗ್ರೆಸ್ ಮತ್ತು ಎಸ್ಸೆನ್‌ರವರ ನೇತೃತ್ವದಲ್ಲಿ ಸಂಸ್ಥಾ ಕಾಂಗ್ರೆಸ್ ಎಂದು ಅಸ್ತಿತ್ವದಲ್ಲಿ ವು. ಈ ವಿಚಾರವು ಚುನಾವಣಾ ಆಯೋಗದ ಮುಂದೆ ಬಂದಾಗ ನಿಜವಾದ ಗ್ರೆಸ್ ಯಾವುದು ಮತ್ತು ಪಕ್ಷದ ಹಣವು, ಚಿಹ್ನೆ ನೀಡುವ ವಿಚಾರವು ಯಾರಿಗೆ ಬೇಕೆಂಬುದು ನಿರ್ಧಾರವಾಗಿತ್ತು. ಈ ವಿಚಾರವಾಗಿ ಎಸ್ಸೆನ್‌ರವರು ದೆಹಲಿಯ ಗ್ರೆಸ್ ಪಕ್ಷದ ಕಛೇರಿ 'ಜಂತರ್ ಮಂತರ್' ಯಾರಿಗೆ ಸೇರಬೇಕೆಂಬುದನ್ನು ು ಚರ್ಚಿಸಲು ಪಕ್ಷದ ಕಛೇರಿಗೆ ಹೋಗುತ್ತಿದ್ದಾಗ 'ಯಂಗ್‌ಸ್ಟರ್' ಎಂದೇ ಪ್ರರಾಗಿದ್ದ ಮಾಜಿ ಪ್ರಧಾನಿ ಚಂದ್ರಶೇಖರ್, ನಿಜಲಿಂಗಪ್ಪನವರ ಮೇಲೆ ಹಲ್ಲೆ ಿ ಅವರ ಅಂಗಿ ಹಿಡಿದು ಹಿಗ್ಗಾ ಮುಗ್ಗಾ ಎಳೆದಾಡಿದಾಗ 67ರ ವಯೋವೃದ್ಧ ದ್ದ ಎಸ್ಸೆನ್ ಜೋಲಿ ತಪ್ಪಿ ಬೀಳುತ್ತಿದ್ದಾಗ ಒಬ್ಬರು ಹಿಡಿದು ನಿಲ್ಲಿಸುತ್ತಿದ್ದ ಹೃದಯ ಹಕ ದೃಶ್ಯದ ಚಿತ್ರ ಪಟವು ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಈ ಚಿತ್ರ ಅಂದಿನ ಗ್ರೆಸ್ ಸಮಿತಿಯಲ್ಲಿದ್ದ ದುರವಸ್ಥೆಯ ಆಡಳಿತವು ಅವನತಿ ಹಂತವನ್ನು ಮುಟ್ಟಿ, ವನ್ನು ಅರಾಜಕತೆಯತ್ತ ತಳ್ಳುವ ಪ್ರತ್ಯಕ್ಷ ಚಿತ್ರಣವೂ ಆಗಿತ್ತು (ಎಸ್ಸೆನ್ ಈ ರವನ್ನು ಎಸ್ಸೆನ್ 13-3-1968ರ ತಮ್ಮ ದಿನಚರಿಯಲ್ಲಿ ತಿಳಿಸಿದ್ದಾರೆ)

ಈ ಬಿರುಕಿನಲ್ಲಿ 1971ರ ಲೋಕಸಭಾ ಚುನಾವಣೆಯಲ್ಲಿ ಇಂದಿರಾಗಾಂಧಿ ನ ಆಡಳಿತ ಕಾಂಗ್ರೆಸ್ ಪಕ್ಷ ಜಯಗಳಿಸಿತು. ಆದರೆ, ಎಸ್. ನಿಜಲಿಂಗಪ್ಪ ಿ ಸಂಸ್ಥಾ ಕಾಂಗ್ರೆಸ್ ಜನತಾ ಪಕ್ಷದಲ್ಲಿ ವಿಲೀನವಾಯಿತು. ಈ ಮಧ್ಯೆ, ಇಂದಿರಾ

ಗಾಂಧಿಯವರ ಆಡಳಿತದ ಅಟ್ಟಹಾಸವು ಎಲ್ಲೆ ಮೀರಿ, 1975ರಲ್ಲಿ ತುರ್ತು ಪರಿಸ್ಥಿತಿ ಜಾರಿಗೊಳಿಸಿದಾಗ ದೇಶದಲ್ಲಿ ಉಂಟಾಗಿದ್ದ ಅರಾಜಕತೆಯನ್ನು ಕುರಿತು ಶ್ರೀ ಎಸ್. ನಿಜಲಿಂಗಪ್ಪನವರು ಕಟುವಾಗಿ ಟೀಕಿಸಿದರು. ನಂತರ 1977ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಶ್ರೀ ಜಯಪ್ರಕಾಶ್ ನಾರಾಯಣ್‌ರವರ ನೇತೃತ್ವದಲ್ಲಿ ನಡೆದ ಚಳುವಳಿಯು ಇಂದಿರಾಗಾಂಧಿಯವರ ದುರಾಡಳಿತ ವಿರುದ್ಧ ಮಾಡಿದ್ದ ಪ್ರಚಾರದಿಂದಾಗಿ 1977ರಲ್ಲಿ ಜನತಾ ಪಕ್ಷ ಜಯಗಳಿಸಿ ಮುರಾರ್ಜಿ ದೇಸಾಯಿ ಪ್ರಧಾನಿಯಾದರು. ಆದರೆ, 1978ರಲ್ಲಿ ಜನತಾಪಕ್ಷದಲ್ಲಿ ಉಂಟಾದ ಭಿನ್ನಮತೀಯ ಸಮಸ್ಯೆ ಮತ್ತು ಕಿತ್ತಾಟಗಳನ್ನು ಕಂಡು ಎಸ್ಸೆನ್‌ರವರು ಪಕ್ಷದಿಂದ ಹೊರಬಂದರು. ಆದರೆ, 1978ರ ಏಪ್ರಿಲ್‌ನಲ್ಲಿ ಪ್ರಧಾನಿ ಮುರಾರ್ಜಿ ದೇಸಾಯಿಯವರು ಗುಜರಾತ್ ರಾಜ್ಯಪಾಲರಾಗಲು ಎಸ್ಸೆನ್‌ರವರನ್ನು ವಿನಂತಿಸಿದಾಗ ಅವರು ನಿರಾಕರಿಸಿದರು. ನಂತರ, 1979ರ ಕೊನೆಯಲ್ಲಿ ಲೋಕಸಭೆ ವಿಸರ್ಜಿಸಿದಾಗ ನಡೆದ ಚುನಾವಣೆಯಲ್ಲಿ ಎಸ್ಸೆನ್ ಜನತಾ ಪಕ್ಷದ ಪರವಾಗಿ ಪ್ರಚಾರಕ್ಕೆ ಕರ್ನಾಟಕದಲ್ಲಿ ಹೋರಾಡಿದರು. ನಂತರ 1979ರಿಂದ ಎಸ್ಸೆನ್‌ರವರು ಕೇಂದ್ರ ಮತ್ತು ರಾಜ್ಯದ ರಾಜಕಾರಣದಿಂದ ದೂರ ಉಳಿದರು. ಹೀಗೆ ಎಸ್ಸೆನ್ (1979-2002ರ) 23 ವರ್ಷಗಳು ಸಮಾಜದ ಸ್ವಾಸ್ಥ್ಯಕ್ಕಾಗಿ ಚಿಂತಿಸಿದರು.

ಈ ರೀತಿ ಸಕ್ರಿಯ ರಾಜಕಾರಣದಿಂದ ದೂರ ಉಳಿದು ಸಮಾಜ ಸೇವೆಗೆ ಕರೆಯಿತ್ತರು : ದೇಶದ ಅಧೋಗತಿ ಕುರಿತು ಎಸ್ಸೆನ್ ಈ ರೀತಿ ವಿಷಾದಿಸುತ್ತಾ, "ಇಂದು ಗಾಂಧಿ ತತ್ವಗಳನ್ನು ಅನೇಕ ಹಿರಿಯ ನಾಯಕರು ಗಾಳಿಗೆ ತೂರಿ ದೇಶವನ್ನು ಅಧೋಗತಿಗೆ ತಳ್ಳಿದ್ದಾರೆ. ಭ್ರಷ್ಟಾಚಾರವು ತಾಂಡವವಾಡುತ್ತಿದೆ", ದೇಶದಲ್ಲಿ ಜಾತೀಯತೆ, ಅಪ್ರಮಾಣಿಕತೆಯಿಂದ ಹೊಲಸು ರಾಜಕೀಯ ತುಂಬಿತುಳುಕುತ್ತಿದೆ ಎಂದು ಎಸ್ಸೆನ್ ಡಿಸೆಂಬರ್ 10, 1996 ರಂದು ಸನ್ಮಾನ ಸಮಾರಂಭ ಏರ್ಪಡಿಸಿದ ಸಂದರ್ಭದಲ್ಲಿ ನೋವಿನಿಂದ ನುಡಿದಿದ್ದಾರೆ.

ಸ್ವಾಭಿಮಾನ ಬೆಳೆಸಿಕೊಳ್ಳಲು ಯುವಕರಿಗೆ ಎಸ್ಸೆನ್ ಕರೆನೀಡಿದ್ದಾರೆ ಯುವಕರು ವಿಚಾರಪರ ರಾಗಬೇಕು, ಸಮಾಜದ ತಪ್ಪನ್ನು ಎತ್ತಿ ತೋರಿಸಬೇಕು ಸ್ವಾಭಿಮಾನಿಗಳಾಗಿ ದುಡಿದು ಬಾಳುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಎಸ್ಸೆನ್ ಯುವಕರಿಗೆ ಕರೆ ನೀಡಿದ್ದಾರೆ. ಮಹಾತ್ಮರ ಉದಾತ್ತ ಗುಣಗಳನ್ನು, ವೇದಗಳ ಉನ್ನತ ಅಂಶಗಳನ್ನು ಯುವಜನತೆ ಅಳವಡಿಸಿಕೊಳ್ಳಬೇಕು. ನಾವು ನುಡಿದಂತೆ ನಡೆಯುತ್ತಿದ್ದೆ ವೆಯೇ? ಎಂಬ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು ನಾವೆಲ್ಲಾ ಒಟ್ಟಿಗೆ ಬದುಕೋಣ ಎಂದು ಬಾಯಲ್ಲಿ ಹೇಳುತ್ತಿದ್ದರೂ ಜಾತಿಮತಗಳ ಹೆಸರಿನಲ್ಲಿ ಸಮಾಜವನ್ನು ಇಬ್ಭಾಗ ಮಾಡಲಾಗುತ್ತಿದೆ. ಹೇಳಿದ್ದೆಲ್ಲ ವೇದವಾಕ್ಯವೆಂದು ತಿಳಿಯದೇ ವೈಚಾರಿಕತೆ ಬೆಳೆಸಿಕೊಳ್ಳಬೇಕು ಎಂದು ಎಸ್ಸೆನ್ ಜನವರಿ 27, 2000ರಂದು ಏರ್ಪಡಿಸಲಾಗಿದ್ದ 'ಶತಮಾನದ ಹಿರಿಯರಿಗೆ ನಮನ' ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದ್ದನ್ನು ಸ್ಮರಿಸಬಹುದು.

ಕಾಂಗ್ರೆಸ್ ಪಕ್ಷದ ಪುನರುಜ್ಜೀವನಕ್ಕೆ ಎಸ್ಸೆನ್‌ರ ಸಲಹೆ; ಮೌಲ್ಯಗಳು ಎಲ್ಲಾ ಕ್ಷೇತ್ರಗಳಲ್ಲಿ ಕಣ್ಮರೆಯಾಗುತ್ತಿರುವ ಈ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು, ನಾಯಕರು ಮತ್ತು ನಾಗರೀಕರು ರಾಜಕೀಯ ತತ್ವ ಸಿದ್ಧಾಂತ ಮತ್ತು ಮೌಲ್ಯಗಳನ್ನು ರಕ್ಷಿಸಲು ಮುಂದಾಗಬೇಕು. ಕಾಂಗ್ರೆಸ್ ಪಕ್ಷದಲ್ಲಿ ಅನೇಕ ವರ್ಷಗಳಿಂದ ಅಪ್ರಮಾಣಿಕತೆ, ಭ್ರಷ್ಟಾಚಾರವೇ ತಾಂಡವವಾಡುತ್ತಿದೆ. ಅಧಃಪತನಗೊಳ್ಳುತ್ತಿದೆ. ಭಾರತದ ಸ್ವತಂತ್ರ್ಯಾನಂತರದ ರಾಷ್ಟ್ರ ರಾಜಕಾರಣದಲ್ಲಿ ಬಿಕ್ಕಟ್ಟು ಉಲ್ಬಣವಾಗಿದೆ. ಈ ದಿಸೆಯಲ್ಲಿ ಕಾಂಗ್ರೆಸ್ ಪಕ್ಷವನ್ನೇ ಬದಲಾಯಿಸಿ ಹೊಸ ಪಕ್ಷವನ್ನು ಕಟ್ಟಲು ಸಾಧ್ಯವಿಲ್ಲ. ಆದ್ದರಿಂದ ಹಳೆ ಕಾಂಗ್ರೆಸ್ಸನ್ನೆ ಪುನರುಜ್ಜೀವನಗೊಳಿಸಲು, ಜಾತ್ಯಾತೀತ ತತ್ವಗಳಲ್ಲಿ ನಂಬಿಕೆಯುಳ್ಳ; ದೂರದೃಷ್ಟಿಯುಳ್ಳ ನಾಯಕರು ಮುಂದಾಗಬೇಕಾಗಿದೆ. ಆದರೆ ನೆಹರು ನಂತರ ಬಂದ ಇಂದಿರಾಗಾಂಧಿ ಆಡಳಿತದಲ್ಲಿನ ಅಶಿಸ್ತು ಅಪ್ರಮಾಣಿಕತೆ, ಸ್ವಜನಪಕ್ಷಪಾತದಿಂದ ಕಾಂಗ್ರೆಸ್ ಪಕ್ಷವು ಅವನತಿಯ ಹಂತವನ್ನು ತಲುಪಿತು. ಈ ರೀತಿ ರಾಜಕೀಯ ಮೌಲ್ಯಗಳ ಕುಸಿತದಿಂದಾಗಿ ಕಾಂಗ್ರೆಸ್ಸೇತರ ಕೋಮುವಾದಿ ಪಕ್ಷಗಳು ತಲೆ ಎತ್ತಿದವು. ಈ ಕಾರಣದಿಂದಲೇ 1969ರಲ್ಲಿ ಕಾಂಗ್ರೆಸ್ ವಿಭಜನೆಯಾಯಿತು ಎಂದು ಎಸ್ಸೆನ್‌ರವರು ಆಗಸ್ಟ್ 15,1996ರ ಪತ್ರಿಕಾ ಗೋಷ್ಠಿಯಲ್ಲಿ ಹೇಳಿಕೊಂಡಿದ್ದಾರೆ. ಇತ್ತೀಚೆಗೆ ರಾಷ್ಟ್ರೀಯ ರಾಜಕಾರಣದಲ್ಲಿ ಸೋನಿಯಾ ಗಾಂಧಿಯವರು ವಿದೇಶಿ ಪ್ರಜೆ ಎಂದು ಬೊಬ್ಬೆ ಇಟ್ಟಾಗ ಎಸ್ಸೆನ್‌ರವರು ಈ ರೀತಿ ಹೇಳಿದರು. ''ಸೋನಿಯಾ ಈ ದೇಶದ ಸೊಸೆ, ಜನ ಬಯಸಿದರೆ ಆಕೆ ಪ್ರಧಾನಿಯಾಗಲಿ'' ಎಂದು ಹಾರೈಸಿ ತಮ್ಮ ಮನೆಗೆ ಬಂದ ಸೋನಿಯಾಗಾಂಧಿಗೆ ಎಸ್ಸೆನ್‌ರವರು ಭಾರತದ ಸಂವಿಧಾನ ಪುಸ್ತಕ ನೀಡಿ ಕಾಂಗ್ರೆಸ್ ಪಕ್ಷದ ಪುನರುಜೀವಸಕ್ಕೆ ಮುಂದಾಗಲು ಸೋನಿಯಾಗೆ ಸಲಹೆ ನೀಡಿದ್ದರು.

ಚಿತ್ರದುರ್ಗಕ್ಕೆ ಕುಡಿಯುವ ನೀರು ಪೂರೈಸಲು ಎಸ್ಸೆನ್ ಆಗ್ರಹ : ನವೆಂಬರ್ 1, 1997ರಲ್ಲಿ ಚಿತ್ರದುರ್ಗದಲ್ಲಿ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಎಸ್ಸೆನ್‌ರವರು' ದಿನೇ ದಿನೇ ಬೆಳೆಯುತ್ತಿರುವ ಚಿತ್ರದುರ್ಗ ನಗರಕ್ಕೆ ಕುಡಿಯುವ ನೀರು ಪೂರೈಕೆಯಾಗಬೇಕು ಮತ್ತು ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿರುವ ಜಿಲ್ಲೆಗೆ ನೀರಾವರಿ ಸೌಲಭ್ಯವನ್ನು ಒದಗಿಸಿದರೆ, ಅದೇ ನನಗೆ ಅಭಿನಂದನೆ' ಎಂದು ಮಾತನಾಡಿದ್ದು ಎಸ್ಸೆನ್‌ರವರಿಗಿದ್ದ ಜನಪರ ಹಿತಚಿಂತನೆ ಮತ್ತು ಗಂಭೀರತೆಯನ್ನು ಸೂಚಿಸುತ್ತದೆ. ಅದರಂತೆ ಸುಮಾರು 6 ವರ್ಷಗಳಿಂದ ಕರ್ನಾಟಕ ರಾಜ್ಯದ ಬರಗಾಲದ ಕೇಂದ್ರಸ್ಥಾನವಾಗಿರುವ ಚಿತ್ರದುರ್ಗ ಜಿಲ್ಲೆಗೆ ನೀರಾವರಿ ಸೌಲಭ್ಯ ಒದಗಿಸಲು ಬಹಳ ಕಾಲದಿಂದಲೂ ಬೇಡಿಕೆ ಇದೆ. ಈ ವಿಚಾರವಾಗಿ ಎಸ್ಸೆನ್‌ರವರು 1974ರಲ್ಲಿ ಚಿತ್ರದುರ್ಗ ಜಿಲ್ಲೆ ಭೀಕರ ಬರಗಾಲಕ್ಕೆ ತುತ್ತಾದಾಗ ಅವರು ಕ್ಷಾಮ ಪರಿಹಾರ ಕಾರ್ಯ ಕೈಗೊಳ್ಳಲು ಪ್ರಧಾನಿ ಇಂದಿರಾಗಾಂಧಿ ಹಾಗೂ ರಾಜ್ಯದ ಮುಖ್ಯ ಮಂತ್ರಿಗಳಿಗೂ ಪತ್ರ ಬರೆದು ಆಗ್ರಹಿಸಿದ್ದರು. ಈ ದಿಸೆಯಲ್ಲಿ 1989ರಲ್ಲಿ ಜನತಾದಳ ಸರ್ಕಾರವು 'ತುಂಗಾ ತಿರುವು

ಯೋಜನೆ'ಯನ್ನು ಪ್ರಾರಂಭಿಸುತ್ತಿದ್ದು ಇದು ವಿಳಂಬವಾಗಿದೆ. ಈ ಯೋಜನೆಯ ಪ್ರಚಾರವಾಗಿ ಎಸ್ಸೆನ್‌ರವರ ನೇತೃತ್ವದಲ್ಲಿ ನೀರಾವರಿ ಇಲಾಖೆಯ ನಿವೃತ್ತ ಇಂಜಿನಿಯರ್ ಜೆ.ಆರ್.ರಾಮಮೂರ್ತಿ, ಜೆ.ಅನಂತರೆಡ್ಡಿ ಮತ್ತು ನೀರಾವರಿ ತಜ್ಞ ಬಿ.ಎಸ್.ಪರಮಶಿವಯ್ಯ ಅವರನ್ನು ಒಳಗೊಂಡ ನಿಯೋಗವು ನೀರಾವರಿ ಸಚಿವರಾಗಿದ್ದ ಕೆ.ಎನ್.ನಾಗೇಗೌಡರ ವರೊಂದಿಗೆ ಚರ್ಚಿಸಿತ್ತು. ಈ ಯೋಜನೆ ಜಾರಿಯಿಂದಾಗಿ ಚಿತ್ರದುರ್ಗ ಜಿಲ್ಲೆಯ 2.5 ಲಕ್ಷ ಎಕರೆಗೆ ಅರೆ ನೀರಾವರಿ ಸೌಲಭ್ಯವನ್ನು ಪಡೆಯುವ ಭರವಸೆ ಇತ್ತು. ಆದರೆ, ಈ ಯೋಜನೆ ಕಾರ್ಯಗತವಾಗುವಲ್ಲಿ ವಿಳಂಬವಾಗಿದೆ ಎಂದು ಎಸ್ಸೆನ್‌ರವರು ತಮ್ಮ ಕನಸಾಗಿದ್ದ ಈ ಜಿಲ್ಲೆಯ ನೀರಾವರಿ ಯೋಜನೆ 'ತುಂಗಾ ತಿರುವು ಯೋಜನೆ' ಪ್ರಗತಿಯಾಗದಿರುವುದನ್ನು ಕುರಿತು ಈ ರೀತಿ ನೊಂದುಕೊಳ್ಳುತ್ತಿದ್ದರು. 'ನಾನು 1968ರಲ್ಲಿ ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷನಾಗಿ ಹೋಗದಿದ್ದರೆ, ರಾಜ್ಯದ ಎಷ್ಟೋ ಕೆಲಸಗಳನ್ನು ಪೂರ್ಣಗೊಳಿಸಬಹುದಿತ್ತು' ಎಂದು ತಮ್ಮ ಆತ್ಮಕಥೆಯಲ್ಲಿ ಹೇಳಿದ್ದಾರೆ. ಈ ದಿಸೆಯಲ್ಲಿ ಶ್ರೇಷ್ಠ ಮುತ್ಸದ್ದಿ ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪ 20ನೇ ಶತಮಾನ ಕಂಡ ಅಪ್ಪಟ ಗಾಂಧಿವಾದಿ. ಸ್ವಾತಂತ್ರ ಹೋರಾಟಗಾರ, ರಾಷ್ಟ್ರಪ್ರೇಮಿ, ನಾಡಪ್ರೇಮಿ, ಕರ್ನಾಟಕ ರೂವಾರಿ, ರಾಜಕೀಯ ವಿಜ್ಞಾನಿ ಮತ್ತು ದಕ್ಷ ಆಡಳಿತಗಾರ. ತಮ್ಮ 98 ವಸಂತಗಳಲ್ಲೂ ಎಸ್ಸೆನ್ ಸೃಜನಶೀಲ ಚಿಂತಕರಾಗಿ ಕ್ರಿಯಾತ್ಮಕ ಜೀವನೋತ್ಸಾಹವನ್ನು ಹೊಂದಿ ಮಹಾತ್ಮರಂತೆ ಸರಳ, ಪ್ರಾಮಾಣಿಕ ಜೀವನ ನಡೆಸಿದವರು. ಅಧ್ಯಯನ ಶೀಲತೆ, ಬರಹ ಮತ್ತು ಭಾಷಣಗಳಿಂದ ಸಾಮಾಜಿಕ ಸ್ವಾಸ್ಥ್ಯ ಕಾಪಾಡುವ ಅಭಿರುಚಿವುಳ್ಳವರಾಗಿದ್ದರೂ ಎಸ್ಸೆನ್ ಯಾರಿಗೂ ಕೇಡನ್ನು ಬಯಸದ ಅಜಾತ ಶತ್ರು. ತಾನು ನಂಬಿದ್ದ ತತ್ವಗಳನ್ನು ಬಲಿಕೊಡದೆ, ಹೊಂದಾಣಿಕೆ ರಾಜಕಾರಣ ಮಾಡದ ಅವರ ರಾಜಕೀಯ ಬದುಕು ತೆರೆದಿಟ್ಟ ಪುಸ್ತಕ. ಆಡಳಿತ ಮತ್ತು ರಾಜಕಾರಣದಲ್ಲಿ ಮೌಲ್ಯಗಳನ್ನು ನೆಲೆಗೊಳಿಸಲು ನಿರ್ಭೀತಿಯಿಂದ ತಲೆಎತ್ತಿ ನಡೆದು ಧೀಮಂತ ನಾಯಕರಾಗಿದ್ದ ಎಸ್ಸೆನ್ ಬಯಸಿದ್ದರೆ ರಾಷ್ಟ್ರಪತಿಯಾಗಬಹುದಿತ್ತು. ಆದರೆ, ನೆಹರು ಮತ್ತು ಇಂದಿರಾಗಾಂಧಿಯವರನ್ನು ಪ್ರಶ್ನಿಸುವುದರ ಮೂಲಕ ಅಧಿಕಾರ ವ್ಯಾಮೋಹವನ್ನು ತೊರೆದು ಪಕ್ಷರಾಜಕಾರಣದಿಂದ ಹೊರನಡೆದರು. ಮಹಾತ್ಮಾಗಾಂಧಿಯವರ ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡಿದ್ದ ಎಸ್ಸೆನ್ ಪರಿಶುದ್ಧತೆಯ ಪ್ರತಿರೂಪವಾಗಿದ್ದರು. ಕಂದಾಚಾರ ಮತ್ತು ಮೂಢನಂಬಿಕೆಗಳ ಕಡುವಿರೋಧಿಯಾಗಿದ್ದ ಎಸ್ಸೆನ್ ಜಾತ್ಯಾತೀತ ರಾಜಕಾರಣಿ. ಈ ರೀತಿ ಸ್ವಚ್ಛ ಆಡಳಿತಗಾರರಾಗಿದ್ದ ಎಸ್ಸೆನ್‌ರವರನ್ನು ರಾಷ್ಟ್ರಕವಿ ಕುವೆಂಪುರವರು 'ರಾಜರ್ಷಿ' ಎಂದು ಕರೆದಿದ್ದಾರೆ. ಹಾಗೂ ಇವರ ವ್ಯಕ್ತಿತ್ವ ಜೀವನ ಸಾಧನೆ ಮತ್ತು ನಿರಂತರ ಕ್ರಿಯಾಶೀಲತೆಯನ್ನು ಗುರುತಿಸಿ ರಾಷ್ಟ್ರ ಮತ್ತು ರಾಜ್ಯ ಸರ್ಕಾರಗಳು, ಸಂಘ ಸಂಸ್ಥೆಗಳು ಅತ್ಯುನ್ನತ ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. 1968ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ 'ಗೌರವ ಡಾಕ್ಟರೇಟ್', 1998ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯ, 'ವಿಶೇಷ

ಡಾಕ್ಟರೇಟ್', ಕುವೆಂಪು ವಿಶ್ವ ವಿದ್ಯಾಲಯ 'ಗೌರವ ಡಾಕ್ಟರೇಟ್' ಹಾಗೂ 1998ರಲ್ಲಿ 'ಡಾ|| ಜಚನಿ ಮಾನವತಾ' ಪ್ರಶಸ್ತಿ 1999ರಲ್ಲಿ ಕಲ್ಕತ್ತಾದ 'ಪ್ರಫುಲ್ಲಚಂದ್ ಸೇನ್' ಪ್ರಶಸ್ತಿ ಹಾಗೂ ಅಕ್ಟೋಬರ್ 2, 1999ರಲ್ಲಿ ಕರ್ನಾಟಕ ರಾಜ್ಯ ಸರ್ಕಾರವು 'ಕರ್ನಾಟಕ ರತ್ನ' ಪ್ರಶಸ್ತಿ ನೀಡಿ ಗೌರವಿಸಿದೆ. ಆದರೆ ದಿನಾಂಕ ಆಗಸ್ಟ್ 8, 2000, ಸಮಯ 22.30ರಲ್ಲಿ ಗಾಂಧಿಯುಗದ ಕೊಂಡಿ ಕಳಚಿತು. ಅದೊಂದು ಹೃದಯ ಸ್ಪರ್ಶಿ, ಭಾವಪೂರ್ಣ ಶ್ರದ್ಧಾಂಜಲಿ ಸಭೆ. ಹೃದಯಾಂತರಾಳದ ನೆನಪಿನ ಅಂಗಳದಿಂದ ಸುರುಳಿ ಸುರುಳಿಯಾಗಿ ಹೊರಬಂದ ಸವಿ ನೆನಪುಗಳು. ಜೊತೆಯಲ್ಲಿ ಉಮ್ಮಳಿಸಿ ಬಂದ ದುಃಖ, ನೆರೆದಿದ್ದವರ ಕಣ್ಣುಗಳನ್ನು ಕಣ್ಣೀರು ಮಂಜಾಗಿಸಿತ್ತು. ಜಯನಗರದ ಶಿವರಾತ್ರೀಶ್ವರ ಕೇಂದ್ರ ಸಭಾಂಗಣದಲ್ಲಿ ಬಸವ ಸಮಿತಿ, ಅಖಿಲ ಭಾರತ ಶರಣ ಸಾಹಿತ್ಯ ವೇದಿಕೆ ಹಾಗೂ ಬಸವ ವೇದಿಕೆಗಳಿಂದ ರಾಷ್ಟ್ರನಾಯಕ, ಕರ್ನಾಟಕ ರತ್ನ, ನವಕರ್ನಾಟಕ ನಿರ್ಮಾತೃ ಸಿದ್ದವನಹಳ್ಳಿ ನಿಜಲಿಂಗಪ್ಪನವರ ಭಾವ ಪೂರ್ಣ ಶ್ರದ್ಧಾಂಜಲಿ ಕುರಿತು ಮಾತನಾಡಲು ಹೊರಟ ಸಾಹಿತಿ ಗೊ.ರು.ಚ. ಅವರಿಗೆ ಮಾತು ಹೊರಡಲೇ ಇಲ್ಲ. ಎಸ್ಸೆನ್‌ರವರ ನೆನಪುಗಳನ್ನು ಹೊರಹೊಮ್ಮಿಸ ಲಾಗದ ವೇದನೆಯಲ್ಲೇ ಅವರು 'ಎಸ್ಸೆನ್‌ರವರು ಸಾವಿನಂಚಿನಲ್ಲಿದ್ದಾಗಲೂ ಸಮಷ್ಠಿಯ ಸೌಖ್ಯವನ್ನು ವಿಚಾರಿಸಿದ ಒಬ್ಬ ಮಹಾನ್ ಚೇತನ' ಎಂದು ದುಃಖತಪ್ತ ರಾಗಿ ಹೇಳಿದರು. ಈ ರೀತಿ ರಾಷ್ಟ್ರವು ಸುಧಾರಕನ ಜೀವನ, ಸಾಧನೆಯನ್ನು ಸ್ಮರಿಸುತ್ತಿದೆ.

ಈ ದಿಸೆಯಲ್ಲಿ ಡಿಸೆಂಬರ್ 9, 2001ರಂದು ಎಸ್ಸೆನ್‌ರವರ ಜನ್ಮಶತಮಾನೋ ತ್ಸವ ಆಚರಣಾ ಸಮಿತಿ ಚಿತ್ರದುರ್ಗ ನಗರದ ಸೀಬಾರದ ಸಮೀಪದ ಸ್ಮಾರಕದಲ್ಲಿ ಶ್ರದ್ಧಾಂಜಲಿ ಸಭೆ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ರಾಮಕೃಷ್ಣ ಹೆಗಡೆಯವರು ಎಸ್ಸೆನ್‌ರವರ ಹೆಸರಿನಲ್ಲಿ ರಾಷ್ಟ್ರೀಯ ಪ್ರತಿಷ್ಠಾನ ಸ್ಥಾಪಿಸಲಾಗಿದ್ದು ಆ ಮೂಲಕ ಅವರ ಮೌಲ್ಯ ತತ್ವಗಳನ್ನೊಳಗೊಂಡ ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಗುಡಿಕೈಗಾರಿಕೆ, ಒಣಭೂಮಿ ಅಭಿವೃದ್ಧಿಗಳಿಗೆ ಹೆಚ್ಚಿನ ಗಮನ ಹರಿಸಲು 3-4 ದತ್ತಿ ಸಂಸ್ಥೆಗಳು ಸ್ಥಾಪನೆ ಗೊಂಡಿವೆ. ಈ ಮಹತ್ಕಾರ್ಯದಲ್ಲಿ ಚಿತ್ರದುರ್ಗದ ಬೃಹನ್‌ಮಠ 18 ಎಕರೆ ಭೂಮಿ ನೀಡಿದೆ ಮತ್ತು ಸರ್ಕಾರದಿಂದ 100 ಎಕರೆ ಭೂಮಿಯನ್ನು ಕೇಳಲಾಗಿದೆ. ಈ ಮಹತ್ವದ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿರುವುದು, ಎಸ್ಸೆನ್ ರವರಿಗೆ ರಾಷ್ಟ್ರ ಮತ್ತು ರಾಜ್ಯ ನೀಡುತ್ತಿರುವ ಅತ್ಯಂತ ದೊಡ್ಡ ಗೌರವ. ಈ ದಿಸೆ ಯಲ್ಲಿ ಎಸ್ಸೆನ್‌ರವರ ತತ್ವ ಸಿದ್ಧಾಂತಗಳು ಮುಂದಿನ ಪೀಳಿಗೆಗೆ ಆದರ್ಶಪ್ರಾಯ ವಾಗಲಿ ಎಂದು ಹಾರೈಸಿದರು. ಈ ದೃಷ್ಟಿಯಲ್ಲಿ ಎಸ್. ನಿಜಲಿಂಗಪ್ಪನವರು ಒಬ್ಬ ವ್ಯಕ್ತಿಯಲ್ಲ. ಅವರು ನೂರಾರು ವ್ಯಕ್ತಿಗಳ ಸಂಗಮ. ಅಂತಹ ವ್ಯಕ್ತಿಯ ವ್ಯಕ್ತಿತ್ವ ಅವಲೋಕಿಸುವ ಕೆಲಸ ಒಂದೆರಡು ವರ್ಷಗಳಲ್ಲಿ ಸಾಧ್ಯವಿಲ್ಲ, ದಶಕಗಳೇ ಬೇಕು. ಮತ್ತು ಈ ಮಹಾನ್ ನೇತಾರನ ಜನ್ಮ ಶತಮಾನೋತ್ಸವ (1902- 2002) ಸಂದರ್ಭದಲ್ಲಿ ವಿಧಾನಸೌಧದ ಮುಂಭಾಗ ಅವರ ಪ್ರತಿಮೆ ಅನಾವರಣ

ಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜಕೀಯ ಚಿಂತನೆ ಅಭಿನಂದನಾ ಗ್ರಂಥ ವನ್ನು ನಿರ್ಮಿಸಿ ರಾಜ್ಯ ಸರ್ಕಾರ ಗೌರವ ಸಲ್ಲಿಸಿದೆ.

ಆಧಾರ ಗ್ರಂಥಗಳು ಮತ್ತು ಲೇಖನಗಳು

1) ಶ್ರೀ ಎಸ್. ನಿಜಲಿಂಗಪ್ಪನವರ ಜನ್ಮಶತಾಬ್ಧಿ ಸಮಾರಂಭ, ಚಿತ್ರದುರ್ಗ, ಪ್ರಜಾವಾಣಿ, ಡಿಸೆಂಬರ್, 30, 2002.

2) ಕರ್ನಾಟಕ ರತ್ನ ಶ್ರೀ ಎಸ್. ನಿಜಲಿಂಗಪ್ಪನವರು ಪ್ರೊ|| ಬಿ. ರಾಜಶೇಖರಪ್ಪ ಆಕೃತಿ ಪತ್ರಿಕೆ, ನವೆಂಬರ್ 15, 2001, ಪುಟ - 15, 16

3) ಸಿದ್ದವನಹಳ್ಳಿ ನಿಜಲಿಂಗಪ್ಪ - ಡಾ|| ಸೂರ್ಯನಾಥ ಕಾಮತ್, ಕರ್ನಾಟಕದ ಮುಖ್ಯ ಮಂತ್ರಿಗಳು (ಎಸ್.ವಿ. ಶ್ರೀನಿವಾಸರಾವ್ ಮತ್ತು ಅರಳುಮಲ್ಲಿಗೆ ಪಾರ್ಥಸಾರಥಿ), ಸಾಧನ ಪ್ರಕಾಶನ, ಬೆಂಗಳೂರು, 2001.

4) ಎಸ್. ನಿಜಲಿಂಗಪ್ಪ ; ಒಂದು ಅಧ್ಯಯನ - ಕೋ. ಚೆನ್ನಬಸಪ್ಪ ಲೋಹಿಯಾ ಪ್ರಕಾಶನ, ಬಳ್ಳಾರಿ, 2001

5) ನಿಜಲಿಂಗಪ್ಪ ಜನ್ಮ ಶತಮಾನೋತ್ಸವ ಆಚರಣೆ, ಚಿತ್ರದುರ್ಗ, ಪ್ರಜಾವಾಣಿ ಡಿಸೆಂಬರ್, 9, 2001.

6) ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ - ಫಾಲಾಕ್ಷ ಶಶಿ ಪ್ರಕಾಶನ, ತಿಪಟೂರು, 2000.

7) ಎಸ್. ನಿಜಲಿಂಗಪ್ಪ - ಡಾ||. ಸಂದೀಪ್ ಶಾಸ್ತ್ರಿ ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ ಮಾಲಿಕೆ, ಕರ್ನಾಟಕ ವಿಧಾನ ಸಭೆ ಸಚಿವಾಲಯ, ಬೆಂಗಳೂರು, ಮಾರ್ಚ್, 1999.

8) ಕರ್ನಾಟಕದ ರೂವಾರಿ (ಶ್ರೀ ಎಸ್. ನಿಜಲಿಂಗಪ್ಪನವರ ಜೀವನ ಚರಿತ್ರೆ) ದೇಜಗೌ, ಸಂವಹನ ಪ್ರಕಾಶನ, ಮೈಸೂರು, 1998

9) ಕಾಂಗ್ರೆಸ್ ಪುನರುಜ್ಜೀವನಕ್ಕೆ ಎಸ್ಸೆನ್ ಕರೆ, ಪ್ರಜಾವಾಣಿ, ಆಗಸ್ಟ್ 15, 1996, ಬೆಂಗಳೂರು.

10) ಕರ್ನಾಟಕ ಏಕೀಕರಣ ಇತಿಹಾಸ - ಡಾ||. ಎಚ್. ಎಸ್. ಗೋಪಾಲರಾವ್ ನವಕರ್ನಾಟಕ ಪ್ರಕಾಶನ, ಬೆಂಗಳೂರು, 1996

11) ಕಾಯಕಯೋಗಿ ರಾಷ್ಟ್ರನಾಯಕ (ನಿಜಲಿಂಗಪ್ಪನವರ ಜೀವನ ಚಿತ್ರ) ದೇ. ಜವರೇಗೌಡ, ದೇಜಗೌ ಟ್ರಸ್ಟ್ ಮೈಸೂರು, 1992

12) ಬಯೋಗ್ರಫಿ ಆಫ್ ಶ್ರೀ ಎಸ್. ನಿಜಲಿಂಗಪ್ಪ - ಎಸ್.ಎನ್. ಶಾಂತವೀರಪ್ಪ

13) ಭಾರತವ ಬೆಳಗುತಿದೆ ಕನ್ನಡದ ಜ್ಯೋತಿ - ಬಿ. ಪುಟ್ಟಸ್ವಾಮಯ್ಯ

14) ನವಕರ್ನಾಟಕ ನಿರ್ಮಾಪಕರು - ಪಾಟೀಲ ಪುಟ್ಟಪ್ಪ

★★★

ಆಲೂರ ವೆಂಕಟರಾಯರ 'ಕರ್ನಾಟಕತ್ವ'ದ ಪರಿಕಲ್ಪನೆ

ಡಾ|| ಸಿ. ಆರ್. ಗೋವಿಂದರಾಜು

ಕಳೆದ ಶತಮಾನದ ಆರಂಭದಲ್ಲಿ ಅಖಂಡ ಕರ್ನಾಟಕದ ರಾಜ್ಯದ ಕಲ್ಪನೆಯೇ ಇರಲಿಲ್ಲ. ಆದರೆ 'ಕರ್ನಾಟಕ' ಈ ಪರಿಕಲ್ಪನೆ ಕನ್ನಡ ಸಾಹಿತ್ಯ ಪರಂಪರೆಯ ಉದ್ದಕ್ಕೂ ಬಳಕೆಗೊಂಡಿರುವುದನ್ನು ಅಸಂಖ್ಯ ಉಲ್ಲೇಖಗಳ ಮೂಲಕ ಕಾಣುತ್ತೇವೆ. ವಸಾಹತುಶಾಹಿ ಆಡಳಿತದ ಪರಿಣಾಮದಿಂದ ಕನ್ನಡ ಭಾಷೆಯನ್ನು ಆಡುವ ಜನರು ಪ್ರಾದೇಶಿಕವಾಗಿ ಹಲವು ವಿಭಾಗಗಳಲ್ಲಿ ಹಂಚಿಹೋಗುವಂತಾಗಿತ್ತು. ರಾಜಕೀಯವಾಗಿ ಛಿದ್ರಗೊಂಡಿದ್ದ ಕನ್ನಡ ಸಾಂಸ್ಕೃತಿಕ ಸಂದರ್ಭ ಅನೇಕ ಸವಾಲುಗಳನ್ನು, ಸಮಸ್ಯೆಗಳನ್ನು ಎದುರಿಸುವುದು ಅನಿವಾರ್ಯವಾಗಿತ್ತು. ನಾಡಿಗೆ ಸ್ವತಂತ್ರ ಅಸ್ತಿತ್ವವಾಗಲಿ, ತನ್ನದೇ ಆದ ಅನನ್ಯತೆ-ಅಸ್ಮಿತೆಗಳಾಗಲಿ ಇಲ್ಲದಿದ್ದ ಅಂದಿನ ಸ್ಥಿತಿಯಲ್ಲಿ ಕನ್ನಡಿಗರನ್ನು ಸಂಘಟಿಸುವುದು ಒಂದು ಮಹತ್ವದ ಕ್ರಿಯೆಯಾಗಿತ್ತು. ಭಾರತದ ಸ್ವಾತಂತ್ರ್ಯ ಹೋರಾಟ ಹಾಗೂ ಅಖಂಡ ಕರ್ನಾಟಕ ನಿರ್ಮಾಣದ ಆಶಯಗಳು ಕನ್ನಡಿಗರನ್ನು ತಮ್ಮದೇ ಆದ ರೀತಿಯಲ್ಲಿ ಪ್ರತಿಕ್ರಿಯಿಸುವಂತೆ ಮಾಡಿದ್ದವು. ಪರಕೀಯ ಆಕ್ರಮಣವು ನಮ್ಮ ಚರಿತ್ರೆಯನ್ನು ಅವಲೋಕಿಸುವಂತೆ, ವಿಮರ್ಶಿಸುವಂತೆ ಒತ್ತಾಯವನ್ನು ತಂದಿತು. ಅಧಿಕಾರಶಾಹಿಯ ಅವಮಾನವನ್ನು ಮೀರಲು ನಮ್ಮ ಗತಕಾಲದ ಅವಲೋಕನ ಅವಕಾಶ ಕಲ್ಪಿಸಿತು. ಭೌತಿಕವಾಗಿ ಅನೇಕ ಮೂಲಭೂತ ಅವಸ್ಥಾಂತರಗಳನ್ನು ತಂದ ಬ್ರಿಟಿಷ್ ಅಧಿಕಾರಶಾಹಿಗೆ ಭಾರತೀಯರ ಪ್ರತಿಭಟನೆ ಅನೇಕ ಮಟ್ಟಗಳಲ್ಲಿ ಪ್ರಕಟಗೊಂಡಿದ್ದು ಈ ಘಟ್ಟದಲ್ಲಿಯೆ.

ಕರ್ನಾಟಕದ ಸಂದರ್ಭದಲ್ಲಿ ನಮ್ಮ ಸಂಸ್ಕೃತಿಯನ್ನು ಆತ್ಮರಕ್ಷಣೆಯ ಸಾಧನವನ್ನಾಗಿ ಬಳಸಲು ಅನೇಕ ಪ್ರಯತ್ನಗಳು ನಡೆದವು. ಇಂಥ ಪ್ರಯತ್ನದ ಮುಖ್ಯ ವಕ್ತಾರರಾದವರು ಆಲೂರ ವೆಂಕಟರಾಯರು (೧೮೮೦-೧೯೬೪). ರಾಷ್ಟ್ರೀಯತೆಯ ಜಾಗೃತಿಗೆ ಪ್ರಾಂತ್ಯಾಭಿಮಾನದ ಜಾಗೃತಿ ಮೊದಲು ಆಗಬೇಕು ಎಂಬುದು ಇವರ ನಿಲುವು. ರಾಷ್ಟ್ರಾಭಿಮಾನಕ್ಕೆ ಪ್ರಾಂತ್ಯಾಭಿಮಾನವು ಪೂರಕವಾಗಬೇಕೆಂಬುದು ಅವರ ಧೋರಣೆ. ಇಂಥ ಸಂದರ್ಭದಲ್ಲಿ ಆಲೂರರು 'ಕರ್ನಾಟಕತ್ವ'ದ ಪರಿಕಲ್ಪನೆಯನ್ನು, ಚಿಂತನೆಯನ್ನು ಪ್ರತಿಪಾದಿಸಿದರು. ನಾಡು-

ನುಡಿಗಳ ಬಗೆಗೆ ಅಭಿಮಾನ ಮೂಡಿಸುವ ಅವರ ಈ ಕಲ್ಪನೆ ಒಂದು ಅನಿವಾರ್ಯತೆಯೇ ಆಗಿತ್ತು. ಆದರೆ ಇಂದಿನ 'ಕರ್ನಾಟಕತ್ವ'ದ ಪರಿಕಲ್ಪನೆಯ ಸ್ವರೂಪವೇ ಭಿನ್ನರೀತಿಯದು. ಕರ್ನಾಟಕದ ಏಕೀಕರಣ ಸಾಧನೆಗೆ ಆಲೂರರ ಕರ್ನಾಟಕತ್ವದ ಪರಿಕಲ್ಪನೆಯ ಸ್ವರೂಪವನ್ನು ವಿಶ್ಲೇಷಿಸುವುದರೊಂದಿಗೆ, ಈ ಹೊತ್ತಿಗೂ ಪ್ರಸ್ತುತವಾಗಬಹುದಾದ ಕೆಲವು ಪ್ರಶ್ನೆಗಳ ಕಡೆಗೆ ಗಮನಹರಿಸುವುದು ಪ್ರಸ್ತುತ ಪ್ರಬಂಧದ ಆಶಯವಾಗಿದೆ.

ಭಾರತದಲ್ಲಿ ಭಾಷೆ, ಪ್ರದೇಶ, ಜಾತಿ, ಜನಾಂಗ, ಧರ್ಮ, ಲಿಂಗ ಮೊದಲಾದವುಗಳ ಮೂಲಕ ಪ್ರತ್ಯೇಕತೆಯನ್ನು ಎತ್ತಿಹಿಡಿಯುವ ಚಳವಳಿಗಳು ಇಂದಿಗೂ ನಡೆಯುತ್ತಲಿವೆ. ವಸಾಹತುಶಾಹಿ ಸಂದರ್ಭದಿಂದ ದತ್ತವಾದ ಚಿಂತನೆಗಳೇ ನಮ್ಮ ಸಂಸ್ಕೃತಿಯ ವಿವರಣೆ, ವಿಶ್ಲೇಷಣೆಗಳಿಗೆ ಮುಖ್ಯ ಭಿತ್ತಿಯಾಗಿರುವುದೇ ಇದಕ್ಕೆ ಮುಖ್ಯ ಕಾರಣ. ಅಂದಿನ 'ಹಿಂದೂ ರಾಷ್ಟ್ರೀಯವಾದಿ'ಗಳು ಪರಕೀಯತೆಯನ್ನು ಕೊನೆಗಾಣಿಸಲು "ರಕ್ತ ಚೆಲ್ಲುವುದು ಕೊಲ್ಲುವುದು, ಕೊಲ್ಲಿಸಿಕೊಳ್ಳುವುದು ಸಾಮ್ರಾಜ್ಯ ನಿರ್ಮಾಣದ ಪ್ರಕ್ರಿಯೆಯಲ್ಲಿ ಅನಿವಾರ್ಯ" ಎಂದು ನಂಬಿದವರು. ಅಂದು ತ್ಯಾಗ, ಬಲಿದಾನಗಳಂಥ ಧಾರ್ಮಿ ಭಾವನೆಗಳನ್ನು ಸಂಕೇತಿಸುವ ಪರಿಕರಗಳು ಬ್ರಿಟಿಷ್ ಆಡಳಿತಶಾಹಿಯ ವಿರು ಅನಿವಾರ್ಯವಾಗಿದ್ದವು. ಆದರೆ ಇಂದು ಅದೇ ಪರಿಕರಗಳನ್ನು ಸ್ವಾರ್ಥ ಸಾಧನೆ ಕೋಮುವಾದದ ಹುಟ್ಟಿಗೆ ಬಳಸಲಾಗುತ್ತಿದೆ. ದುರುದ್ದೇಶಗಳಿಗೆ ಇಂ ಪರಿಕರಗಳನ್ನು ಬಳಸುತ್ತಿರುವುದರಿಂದ ಅನೇಕ ಗೊಂದಲಗಳು ನಿರ್ಮಾ ಆಗುತ್ತಲಿವೆ. ಇಂಥ ಪರಿಸ್ಥಿತಿಯನ್ನು ಇತಿಹಾಸತಜ್ಞ ಎಸ್. ಚಂದ್ರಶೇಖರ್ ಅವ ಹೀಗೆ ವಿವರಿಸುತ್ತಾರೆ.

"ತಿಲಕ್, ಆಲೂರು, ಗಂಗಾಧರರಾವ್ ದೇಶಪಾಂಡೆ, ವೆಂಕಟಕೃಷ್ಣ ಮೊದಲಾದ ಪ್ರಾರಂಭಕಾಲದ ರಾಷ್ಟ್ರೀಯವಾದಿಗಳು ಜನರಲ್ಲಿ ರಾಷ್ಟ್ರಪ್ರಜ್ಞೆಯ ಜಾಗೃತಗೊಳಿಸಲೆಂದು ಉಪಯೋಗಿಸಿದ ಪ್ರಾದೇಶಿಕ, ಧಾರ್ಮಿಕ ಮ ಉಪಾಯಗಳನ್ನು ಇಂದಿಗೂ ಹಾಡಿ ಹೊಗಳಲಾಗುತ್ತಿದೆ. ಸ್ಥಳೀಯ ದೇಶಭಕ್ತಿಯನ್ನು ಪ್ರಚೋದಿಸಲು ಆ ಉಪಕರಣಗಳು ಚಳುವಳಿಯ ಮೇ ಬೀರಿದ ಕೆಟ್ಟ ಹಾಗೂ ಋಣಾತ್ಮಕ ಪರಿಣಾಮಗಳ ಬಗ್ಗೆ ಮಾತನಾಡುವುದಿಲ್ಲ ಪ್ರಾದೇಶಿಕತೆ, ಜಾತೀಯತೆ ಮತ್ತು ಭಾಷಿಕ ನೆಲೆಗಳನ್ನು ಅದೇ ರೀತಿಯ ಜ ತಮ್ಮ ದುರುದ್ದೇಶಗಳಿಗಾಗಿ ಬಳಸುವರೆಂಬ ಸಂಗತಿಯನ್ನು ಅಲ್ಲಗಳೆಯ ಸಾಧ್ಯವಿಲ್ಲ... ಈ ರೀತಿಯ ಧೋರಣೆಯಿಂದ ನಾವು ಬಹಳವಾಗಿ ಪ್ರಭಾ ರಾಗಿದ್ದೇವೆ".

ಖ್ಯಾತ ವಿಮರ್ಶಕ ಕೀರ್ತಿನಾಥ ಕುರ್ತಕೋಟಿ ಅವರು,

"ಆಲೂರರವರ ಜೀವನದಲ್ಲಿ 'ಕರ್ನಾಟಕತ್ವ'ವನ್ನು ನೋಡಬೇಕು. 'ಕರ್ನಾಟಕತ್ವ'ದಲ್ಲಿ ಆಲೂರರವರನ್ನು ನೋಡಬೇಕು ಎನ್ನುವ ಮಟ್ಟಿಗೆ ಅವರೆಡೂ ಅಭಿನ್ನವಾದವುಗಳಾಗಿವೆ. ಈ ಸಂಕೇತ ಆಲೂರರವರ ವ್ಯಕ್ತಿತ್ವದಷ್ಟು ಸಂಕುಚಿತವಾಗಿದೆ ಕರ್ನಾಟಕದಷ್ಟು ವ್ಯಾಪಕವೂ ಆಗಿದೆ",

ಎನ್ನುವಾಗ ಆಲೂರ ವೆಂಕಟರಾಯರ ವ್ಯಕ್ತಿತ್ವ ಹಾಗೂ ಆಶಯಗಳನ್ನು ಕುರಿತ ವಿವರಣೆಯಾಗಿದೆ. ಕರ್ನಾಟಕತ್ವದ ಬಗೆಗೆ ಆಲೂರರು,

> "ಕರ್ನಾಟಕತ್ವವೆಂಬುದು ನನ್ನ ವಿಶಿಷ್ಟ ವಿಚಾರ. ಆ ಶಬ್ದವು ಕೂಡ ನನ್ನ ಟಂಕಸಾಲೆಯಲ್ಲೇ ಹುಟ್ಟಿದ್ದು. ಅದೊಂದು ಶಬ್ದದಲ್ಲಿ ರಾಜಕಾರಣ, ಧರ್ಮ, ವಾಙ್ಮಯ, ಇತಿಹಾಸ, ಕಲೆ ಮುಂತಾದ ಯಾವತ್ತೂ ಚಟುವಟಿಕೆಗಳ ಅದೃಶ್ಯವಾದ ಉಗಮ ಕರ್ನಾಟಕತ್ವದ ಕಲ್ಪನೆಯಲ್ಲಿ ಗುರಿಯೂ ಕರ್ನಾಟಕತ್ವವೇ",

ಎನ್ನುತ್ತಾರೆ. ಈ ನಿಲುವಿನಿಂದ ಅವರ ಇಡೀ ಸಾರ್ವಜನಿಕ ಜೀವನವೇ ಕನ್ನಡ, ಕರ್ನಾಟಕದ ಬಗೆಗೆ ಹೇಗೆ ಸ್ಪಂದಿಸಿದೆ ಎಂಬುದು ಸ್ಪಷ್ಟ.

ಹರಿದು ಹಂಚಿಹೋಗಿದ್ದ ಕನ್ನಡಿಗರಲ್ಲಿ ನಾಡು-ನುಡಿಗಳ ಬಗೆಗೆ ಅಭಿಮಾನ ಮೂಡಿಸುವುದು ಅಂದಿಗೆ ಸುಲಭದ ಮಾತಾಗಿರಲಿಲ್ಲ. ಅದಕ್ಕಾಗಿ ನಾಡಿನಲ್ಲಿ ಆಗಿಹೋದ ಸಾಮ್ರಾಜ್ಯಗಳ, ವೀರಾಧಿವೀರರ, ವೀರ ರಮಣಿಯರ ಸಾಧನೆ, ತ್ಯಾಗ, ಸಾಹಿತ್ಯ, ಕಲೆ, ಆಧ್ಯಾತ್ಮಿಕ ವೈಭವಗಳ ಬಗೆಗೆ ಕನ್ನಡಿಗರಲ್ಲಿದ್ದ 'ಸ್ವಾಭಿಮಾನ ಶೂನ್ಯತೆ'ಯನ್ನು ಹೋಗಲಾಡಿಸುವ ಮಾರ್ಗ ಹುಡುಕಬೇಕಾಯಿತು. ಆಲೂರರು ಆ ಮಾರ್ಗವನ್ನು ಹುಡುಕಿದರು. ಅಂದರೆ ಕರ್ನಾಟಕ ಇತಿಹಾಸದ ಬಗೆಗಿನ ಅಜ್ಞಾನವನ್ನು ದೂರ ಮಾಡಲು ಸಂಶೋಧನೆಯನ್ನು ನಡೆಸಿ, ತಿಳುವಳಿಕೆಯನ್ನು ಉಂಟುಮಾಡಿದರು. ಆ ತಿಳುವಳಿಕೆಯೇ ಕರ್ನಾಟಕತ್ವದ ಜಾಗೃತಿ ಆಗಿದೆ. ಆದುದರಿಂದಲೇ ಅಖಂಡ ಕರ್ನಾಟಕದ ಗುರಿಗೆ ಒಳ್ಳೆಯ ಮಾಧ್ಯಮವೆನಿಸಿದುದು. ಆ ಮೂಲಕವೇ ಅವರು ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಕನ್ನಡಿಗರನ್ನು ಐಕ್ಯರಾಗುವಂತೆ ಪ್ರಯತ್ನ ಮಾಡಹೊರಟವರು.

ಆಲೂರ ವೆಂಕಟರಾಯರು ಕರ್ನಾಟಕತ್ವದ ಜಾಗೃತಿ ಮೂಡಿಸಲು ಮೂರು ಮುಖ್ಯವಾದ ಪ್ರಸಂಗಗಳು ಪ್ರಭಾವ ಬೀರಿವೆ. ಈ ಪ್ರಭಾವದಿಂದಾಗಿ ಇಡೀ ಸಾರ್ವಜನಿಕ ಜೀವನವನ್ನು ಕರ್ನಾಟಕತ್ವದ ಪ್ರಸಾರಕ್ಕಾಗಿ ವಿನಿಯೋಗಿಸಿದರು.

ಮೊದಲನೆಯದಾಗಿ, ಅವರ ಪುಣೆಯ ವಿದ್ಯಾರ್ಥಿ ಜೀವನದಲ್ಲಿ ಮರಾಠಿ ಮಾತನಾಡುವವರ ಪ್ರಾಬಲ್ಯದಿಂದ 'ತಾನು ಕನ್ನಡಿಗ' (ಕಾನಡೀ ಅಪ್ಪಾ) ಎಂದು ಗುರುತಿಸಿಕೊಳ್ಳುವಂತೆ ಆದುದು. ಪ್ರತ್ಯೇಕಿಸಿ ನೋಡುವ ಮರಾಠಿಗರ ಈ ನಿಲುವಿನಿಂದ ಕನ್ನಡದ ಬಗೆಗೆ, ಕನ್ನಡ ಮಾತನಾಡುವವರ ಬಗೆಗೆ ಎಲ್ಲಿಲ್ಲದ ಅಭಿಮಾನ ಮೂಡುವಂತೆ ಆಯಿತು.

ಎರಡನೆಯದಾಗಿ, ವ್ಯಾಸಂಗದ ಅನಂತರ ಧಾರವಾಡಕ್ಕೆ ಬಂದು ನೆಲೆಸಿದ ಅವರು ಒಮ್ಮೆ ಮಿತ್ರರೊಡನೆ ಆನೆಗೊಂದಿಯ ದರ್ಶನಕ್ಕೆ ಹೋದದ್ದು. ೪-೫-೧೯೦೫ರಂದು ಆನೆಗೊಂದಿ, ಹಂಪಿಯ ದರ್ಶನ ಅವರನ್ನು ಕರ್ನಾಟಕದ ಬಗೆಗೆ ಅಭಿಮಾನವನ್ನುಂಟು ಮಾಡಿಸಿತು. ಆ ಆಕಸ್ಮಿಕ ದರ್ಶನವನ್ನು ಕುರಿತು ಆಲೂರರು "ನನ್ನ ಮನದಲ್ಲಿ ಕರ್ನಾಟಕತ್ವದ ಭಾವನೆಯು ಒಡಮೂಡಲಿಕ್ಕೆ ಪ್ರಾರಂಭವಾದ ದಿವಸ. ಹಾಗೆಯೇ ಅದು ನನ್ನ ಜೀವದಲ್ಲಿಯ ತಿರುಗಣಿ ಸ್ಟೇಷನ್ (ರಿವರ್ಸಿಂಗ್ ಸ್ಟೇಷನ್) ಎಂದೂ ಹೇಳಬಹುದು" ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೂರನೆಯದಾಗಿ, ಆನೆಗೊಂದಿ-ಹಂಪಿ ದರ್ಶನವಾದ ಮೂರು ತಿಂಗಳಿಗೆ 'ವಂಗಭಂಗ'ದ ಘಟನೆ, ಚಳವಳಿಗಳು ಅವರ ಮೇಲೆ ಗಾಢವಾದ ಪರಿಣಾಮ ಬೀರಿದವು. 'ವಂಗಭಂಗ'ದೊಂದಿಗೆ 'ಕರ್ನಾಟಕ ಭಂಗ'ವನ್ನು ಹೋಲಿಸಿದಾಗ ಅವರಿಗೆ ಬ್ರಿಟಿಷರ 'ಒಡೆದು ಆಳುವ ನೀತಿ'ಯು ಸ್ಪಷ್ಟವಾಗಿ ಅರಿಯುವಂತೆ ಆಯಿತು. ಅಂದು ಬಂಗಾಳವು ಎರಡು ಭಾಗಗಳಾದುದಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ಪ್ರತಿಭಟನೆಗಳೂ ನಡೆದವು. ಆದರೆ ಕನ್ನಡ ಮಾತನಾಡುವವರು ಇಪ್ಪತ್ತಕ್ಕೂ ಹೆಚ್ಚು ಆಡಳಿತ ವಿಭಾಗಗಳಲ್ಲಿ ಹರಿದು ಹಂಚಿಹೋದುದಕ್ಕೆ ಕನ್ನಡಿಗರೇ ಉಸಿರು ಎತ್ತದಿದ್ದುದು ಅವರಿಗೆ ಆಶ್ಚರ್ಯವಾಗಿ, ಅಪಮಾನವಾಗಿ ಕಂಡಿತು. ಆಗಲೇ ಅವರು ಕರ್ನಾಟಕತ್ವದ ಕಲ್ಪನೆಯನ್ನು ಕನ್ನಡದ ಎಲ್ಲ ಕಾರ್ಯಕ್ಷೇತ್ರಗಳಲ್ಲೂ ಮೂಡುವಂತೆ ನಿರ್ಧರಿಸಿದ್ದು. ಈ ಮೂರು ಘಟನೆಗಳು ಆಲೂರರನ್ನು ಕರ್ನಾಟಕತ್ವದ ಕಾರ್ಯಗಳಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಳ್ಳುವಂತೆ ಮಾಡಿದ್ದವು.

ಭಾರತದ ಸ್ವಾತಂತ್ರ್ಯ ಹೋರಾಟ ಮತ್ತು ಛಿದ್ರವಾಗಿದ್ದ ಕರ್ನಾಟಕವನ್ನು ಒಂದುಗೂಡಿಸುವ ಕಾರ್ಯ-ಇವುಗಳಲ್ಲಿ ಆಲೂರರು ಎರಡನೆಯದನ್ನು ಆರಿಸಿಕೊಂಡರು. ಎಲ್ಲರೂ ರಾಷ್ಟ್ರೀಯ ಮಟ್ಟದಲ್ಲಿ ಕೆಲಸ ಮಾಡಲು ಯೋಚಿಸುತ್ತಿದ್ದ ಅಂದಿನ ಸಂದರ್ಭವು ಪ್ರಾಂತೀಯ ಮಟ್ಟವನ್ನು ಅಷ್ಟಾಗಿ ಗಣನೆಗೆ ತೆಗೆದುಕೊಂಡಿರಲಿಲ್ಲ. ಇದಕ್ಕೆ ಅಂದಿನ ಸ್ಥಿತಿಗತಿಗಳ ಜೊತೆಗೆ, ರಾಷ್ಟ್ರೀಯ

ಕಾರ್ಯಕ್ಷೇತ್ರದಲ್ಲಿ ಬಹುಬೇಗ ದೊರೆಯುತ್ತಿದ್ದ ಕೀರ್ತಿ, ಪ್ರತಿಷ್ಠೆಗಳೂ ಕಾರಣ ಆಗಿರಬಹುದು. ಕರ್ನಾಟಕದ ಪರ ಅಭಿಮಾನವನ್ನು ಮೂಡಿಸುವ ಕಾರ್ಯ ಕನ್ನಡಿಗರಿಗೆ ಸೇರಿದೆ ಎಂದು ಯೋಚಿಸಿತ್ತಿದ್ದ ಆಲೂರರಂಥವರು ಮಾತ್ರ ಪ್ರಾತೀಯ ಮಟ್ಟದಲ್ಲಿ ನಿಂತು ರಾಷ್ಟ್ರಕ್ಕಾಗಿ ಕ್ರಿಯಾಶೀಲವಾಗುವ ನಿಲುವು ತಳೆಯುವಂತೆ ಆಯಿತು. ಆದ್ದರಿಂದ ಅವರು :

> "ರಾಷ್ಟ್ರೀಯತ್ವಕ್ಕೂ ಕರ್ನಾಟಕತ್ವಕ್ಕೂ ನನಗೆ ವಿಶೇಷ ಭೇದವೇ ತೋರುವುದಿಲ್ಲ. ಕರ್ನಾಟಕತ್ವವನ್ನಷ್ಟೇ ಕಾರ್ಯಕ್ಷೇತ್ರವನ್ನಾಗಿ ತಕ್ಕೊಂಡು, ರಾಷ್ಟ್ರೀಯತ್ವದಲ್ಲಿ ಕೆಲಸ ಮಾಡಿದೆನು. ಇದಕ್ಕೆ 'ಪ್ರಾದೇಶಿಕ ರಾಷ್ಟ್ರೀಯತ್ವ' ಅಥವಾ 'ಕರ್ನಾಟಕ ರಾಷ್ಟ್ರೀಯತ್ವ'ವೆಂದು ಕರೆಯಬಹುದು",

ಎಂಬುದಾಗಿ ಸಮರ್ಥಿಸಿಕೊಳ್ಳುತ್ತಾರೆ. ಹೋಂರೂಲ್ (೧೯೧೪–೧೮), ಅಸಹಕಾರ (೧೯೨೧) ಮೊದಲಾದ ಚಳವಳಿಗಳನ್ನು ಅವರು "ಕರ್ನಾಟಕ ಪ್ರಾಂತೀಯ ಹೋಂರೂಲ್ ಚಳವಳಿ", "ಕರ್ನಾಟಕ ಪ್ರಾಂತೀಯ ಸಹಕಾರ ಚಳವಳಿ" ಎಂದು ಕರೆಯಬೇಕೆಂದು ಪಟ್ಟುಹಿಡಿದು ಕರ್ನಾಟಕತ್ವವನ್ನು ಪ್ರಕಟಿಸಿದರು. ಜನತಾಪ್ರಧಾನ ಚಳವಳಿಗಳ ಪ್ರಚಾರವು ಪ್ರಾಂತೀಯ ಭಾಷೆಯಲ್ಲಿ (ಕನ್ನಡದಲ್ಲಿ) ಇರಬೇಕೆಂಬುದು ಅವರ ನಿಲುವು. ಅವರ ಈ ನಿಲುವೇ ಕರ್ನಾಟಕತ್ವದ ಅಭಿಮಾನವನ್ನು ಕಡಿಮೆ ಸಮಯದಲ್ಲಿ ಹೆಚ್ಚು ಜನರಿಗೆ ತಲುಪುವಂತೆ ಮಾಡಿದ್ದು.

ಆಲೂರರ ಕರ್ನಾಟಕತ್ವವು ಕನ್ನಡ ಸಂಸ್ಕೃತಿಯ ಅಸ್ಮಿತೆಯನ್ನು ಭಾರತೀಯ ಸಂಸ್ಕೃತಿಯೊಂದಿಗೆ ಬೆರಸಿ ನೋಡುತ್ತದೆ. ಆ ಮೂಲಕ ಅದು ತನ್ನ ವಿಶಿಷ್ಟ ಸ್ವರೂಪವನ್ನು ಪಡೆಯುತ್ತದೆ ಎಂದುಬು ಅವರ ವಾದ. ಪರಿಕೀಯ ಅಪಘಾತಕ್ಕೀಡಾಗಿರುವ ಭಾರತೀಯ ಸಂಸ್ಕೃತಿ ತನ್ನ ಜೀವಂತಿಕೆಯಲ್ಲಿ ಎಲ್ಲೋ ಗೌಣವಾಗಿ ಉಸಿರಾಡುತ್ತಿದೆ ಎಂದು ಅರಿತು ಆ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಿದರು.

ಭಾರತ ಮತ್ತು ಕರ್ನಾಟಕ ಸಂಸ್ಕೃತಿಗಳನ್ನು ಒಟ್ಟುಗೂಡಿಸುವಾಗ ಅವರು ವೇದಾಂತವನ್ನು ಆಧರಿಸಿದ ವೈದಿಕ ಸಂಸ್ಕೃತಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಾರೆ. ವಸಾಹತುಶಾಹಿ ಆಡಳಿತವು ಭಾರತೀಯರ ಮೇಲೆ ಬೀರಿದ ಗಾಢವಾದ ಪರಿಣಾಮದಿಂದ ನಾವು ನಮ್ಮ ಸಂಸ್ಕೃತಿಯನ್ನು ಸ್ಪಷ್ಟವಾಗಿ ಗುರುತಿಸಿಕೊಳ್ಳುವಂತೆ ಆಯಿತು. ಪಾಶ್ಚಾತ್ಯ ಸಂಸ್ಕೃತಿಯೇ ಬೇರೆ, ನಮ್ಮ ಸಂಸ್ಕೃತಿಯೇ ಬೇರೆ ಎನ್ನುವಷ್ಟರ ಮಟ್ಟಿಗೆ ಅಂದಿನ ಸ್ಥಿತಿಗಳು ಇದ್ದವು. ಕರ್ನಾಟಕದ

ಸಂದರ್ಭದಲ್ಲಿಯೂ ಕನ್ನಡಿಗರು ತಮ್ಮದೇ ಆದ ವಿಶಿಷ್ಟ ಅಂಶಗಳನ್ನು ತೋರಿಸುವಂತೆ ಆದದ್ದು ಆಲೂರರ ಕರ್ನಾಟಕಾಭಿಮಾನದಿಂದ. ಕನ್ನಡಿಗರದೇ ಆದ ಒಂದು ಸಾಂಸ್ಕೃತಿಕ ಜೀವನ, ಇತಿಹಾಸ, ಕಲೆ ಇದೆ ಎಂಬುದನ್ನು ಅವರು ಕರ್ನಾಟಕತ್ವದ ಪರಿಕಲ್ಪನೆಯ ಮೂಲಕ ಮನವರಿಕೆ ಮಾಡಿಕೊಟ್ಟರು. ಹೀಗೆ ಮನವರಿಕೆ ಮಾಡಿಕೊಡುವಾಗ ಆಲೂರರು ಕರ್ನಾಟಕ ಹಾಗೂ ಭಾರತ ಬೇರೆ ಬೇರೆ ಸಂಸ್ಕೃತಿಗಳನ್ನು ಹೊಂದಿರದೆ ಒಂದು ಒಟ್ಟುಗೂಡಿಸಿದ ಸಂಸ್ಕೃತಿಯ ಸ್ವರೂಪವನ್ನು ಗುರುತಿಸಿಕೊಂಡರು. ಆ ಮೂಲಕ ಕರ್ನಾಟಕ, ಭಾರತ ಎರಡೂ ಕ್ಷೇತ್ರಗಳ ಮೇಲಿನ ಒಂದೇ ಬಗೆಯ ಹಿತವನ್ನು ಎತ್ತಿತೋರಿಸುವ ಆಶಯ ಅವರದು.

ಭಾರತವು ಸ್ವಾತಂತ್ರ್ಯ ಪಡೆದು ಇಂದಿಗೆ ಐದುವರೆ ದಶಕಗಳೇ ಆಗಿವೆ. ಆದರೂ ಭಾಷಾಭಿಮಾನದ, ಭಾವುಕ ಅತಿರೇಕಗಳಿಂದ ಕೂಡಿದ ಸಂಕುಚಿತ ಭಾವನೆಗಳು ಕಡಿಮೆ ಆಗಿಲ್ಲ. ಆಲೂರರು ಭಾಷೆಯ ಬಗೆಗೆ ಅಂದು ತಳೆದಿದ್ದ ಅಭಿಪ್ರಾಯಕ್ಕೂ ಹಾಗೂ ಪ್ರಸ್ತುತ ಸ್ಥಿತಿಯಲ್ಲಿರುವ ಭಾಷಾಭಿಮಾನಕ್ಕೂ ಸಾಕಷ್ಟು ವ್ಯತ್ಯಾಸಗಳು ಇವೆ. ಪರಕೀಯರ ಆಡಳಿತದಲ್ಲಿ ನಮ್ಮ ಭಾಷೆಯ ಬಗೆಗೆ ನಾವು ತಳೆದ ಅಭಿಮಾನಕ್ಕೂ ಇಂದು ನಮ್ಮದೇ ಆದ ಆಡಳಿತದಲ್ಲಿ ನಾವು ತಳೆಯುತ್ತಿರುವ ಭಾಷಾಭಿಮಾನಕ್ಕೂ ವ್ಯತ್ಯಾಸಗಳು ಇವೆ.

> "ಅಖಂಡ ಕರ್ನಾಟಕಕ್ಕೆ ನಿಕಟವಾದ ವಿಷಯ ಕನ್ನಡ ನುಡಿ. [illegible] ಭವಿತವ್ಯಗಳೂ ಕನ್ನಡ ನುಡಿಯಿಂದಲೇ, ಗುಡಿಗೊಂಡಾಗಲೆ ನಾಡೊಂದಾಗಲು ... ಉದಕಮಂಡಲ, ಹೈದ್ರಾಬಾದ್ ಕರ್ನಾಟಕ ಪ್ರಾಂತ್ಯಗಳಲ್ಲಿ ಬೇರೆ ಭಾಷೆಗಳು ಕನ್ನಡದ ಕುತ್ತಿಗೆ ಹಿಚುಕುತ್ತಿರುವುವು",

ಎಂಬ ಆಲೂರರ ಮಾತುಗಳು ಹಾಗೂ ಬೆಳಗಾವಿ, ಧಾರವಾಡಗಳಲ್ಲಿ ಸಾರ್ವಜನಿಕ ಜೀವನದಲ್ಲಿ ಮರಾಠಿಗೆ ಬದಲಾಗಿ ಕನ್ನಡವನ್ನು ಬಳಸಲು ವ್ಯಕ್ತವಾದ ಹಿನ್ನೆಲೆಯಲ್ಲಿ "ಇದು ಭಾಷಾದ್ವೇಷದ ಪ್ರಶ್ನೆಯಾಗಿಲ್ಲ; ಹಕ್ಕಿನ ಪ್ರಶ್ನೆಯಿತ್ತು" ಎನ್ನುವ ಅವರ ನಿಲುವು ನಮಗೆ ಅತಿರೇಕವಾಗಿ ಕಾಣಬಹುದು. ಆದರೆ ಅಂದಿನ ಸ್ಥಿತಿಯಲ್ಲಿ ಕನ್ನಡಿಗರೇ ಕನ್ನಡ ಮಾತನಾಡಲು ನಾಚುತ್ತಿದ್ದ ಉದಾಹರಣೆಗಳು ಇವೆ. ಆದುದರಿಂದ ಅವರು ಕನ್ನಡ ಪ್ರದೇಶಗಳಲ್ಲೇ ಬೇರೆ ಬೇರೆ ಭಾಷೆಗಳನ್ನು ಬಳಸುತ್ತಿದ್ದುದು ಅಖಂಡ ಕರ್ನಾಟಕ ನಿರ್ಮಾಣಕ್ಕೆ ಧಕ್ಕೆ ತರುತ್ತದೆ ಎಂಬ ಅರ್ಥದಲ್ಲಿ ಆಡಿದ ಮಾತುಗಳಾಗಿವೆ. "ಮಾತೃಭಾಷೆಗಿಂತ ದೇಶಭಾಷೆಗೆ ಒಂದು ಬಗೆಯ ಮಹತ್ವವಿದೆ" ಎನ್ನುವ ಆಲೂರರು ರಾಷ್ಟ್ರೀಯತೆ

ಎತ್ತಿಹಿಡಿಯುತ್ತಾರೆ. ಅಲ್ಲದೆ,

> "ಕರ್ನಾಟಕತ್ವವೆಂದರೆ ಕನ್ನಡ ವಾಙ್ಮಯ ಮಾತ್ರವಲ್ಲ, ಕನ್ನಡ ನುಡಿಯೆಂದರೆ ಕರ್ನಾಟಕ ಸರ್ವಸ್ವವೆಂದು ತಿಳಿಯುವುದೊಂದು ವರ್ಗವು ನಮ್ಮಲ್ಲಿದೆ. ಅದು ಅಷ್ಟು ಸರಿಯಲ್ಲ",

ಎನ್ನುವ ಅವರ ನಿಲುವು ಇಂದಿನ ಸಂದರ್ಭದಲ್ಲಿ ವಿಶೇಷವಾಗಿ ಗಮನಿಸಬೇಕಾದ ವಿಚಾರವಾಗಿದೆ.

ಕರ್ನಾಟಕದಲ್ಲಿರುವ ತುಳು, ಕೊಂಕಣಿ, ಕೊಡವ ಮೊದಲಾದ ಭಾಷೆಗಳಿಗೆ ತಕ್ಕುದಾದ ಸ್ಥಾನ ನೀಡಿ, ಕರ್ನಾಟಕದ ರಾಜ್ಯಭಾಷೆ ಹಾಗೂ ರಾಜಕಾರಣಕ್ಕೆ ಸ್ಥಾನ ಕನ್ನಡಕ್ಕೆ ಮೊದಲ ಸ್ಥಾನ ನೀಡುವುದು ಅವರ ನಿಲುವು ಆಗಿತ್ತು. ಲಿಪಿಯಲ್ಲಿ ತೆಲುಗು ಕನ್ನಡವೂ; ನುಡಿಯಲ್ಲಿ ತಮಿಳು, ತೆಲುಗು, ಕನ್ನಡ ಆದಷ್ಟು ಒಂದುಗೂಡಬೇಕೆನ್ನುವ ಅವರು, ಅಂತಃಪ್ರಾಂತೀಯ ಸಂಪರ್ಕಕ್ಕೆ ಹೆಚ್ಚು ಒತ್ತು ನೀಡಿದರು. ಕರ್ನಾಟಕದಲ್ಲಿನ ಭಿನ್ನ ಭಾಷೀಯರು ಕನ್ನಡ ಭಾಷೆಯೊಡನೆ ತಾದಾತ್ಮ್ಯವನ್ನು ಹೊಂದಿ ಕರ್ನಾಟಕದ ಸೇವೆಯನ್ನು ಮಾಡಬೇಕೆಂಬ ಅವರ ಕರ್ನಾಟಕತ್ವವು ಬಹಳ ಜನರಿಗೆ ಹಿಡಿಸಿತು. ಆದುದರಿಂದ ಗುರುನಾಥ ನಾಟಕ, ರಾನಡೆ, ಕರಮರಕರ, ಬೇಂದ್ರೆ, ಶಂ.ಬಾ. ಜೋಶಿ, ಬಾಲಚಂದ್ರ ಘಾಣೇಕರ, ಗದ್ರೆ ಮೊದಲಾದವರು ಕನ್ನಡದ ಸೇವೆ ಮಾಡುವಂತೆ ಆಯಿತು.

> "ಕರ್ನಾಟಕಸ್ಥರು ಭಾಷಾನ್ವಯ ಪ್ರಾಂತದ ಬಗೆಗೆ ಪ್ರಯತ್ನಿಸಿದಾಗ ರಾಷ್ಟ್ರೀಯತ್ವವನ್ನು ಮರೆತಿಲ್ಲ",

ಎನ್ನುವ ಅವರ ಮಾತುಗಳಿಂದ ಕನ್ನಡತ್ವವು ರಾಷ್ಟ್ರೀಯತ್ವಕ್ಕೆ ಪೂರಕವಾಗಿ ಇರಬೇಕಾದುದನ್ನು ತಿಳಿಸುತ್ತದೆ.

ಆಲೂರರ ಬರಹ ಹಾಗೂ ಕಾರ್ಯ ಚಟುವಟಿಕೆಗಳು ತಾತ್ವಿಕ ಚಿಂತನೆಯಿಂದ ಕೂಡಿದ ಕರ್ನಾಟಕತ್ವದ ಚಳವಳಿಯೇ ಆಗಿರುತ್ತಿತ್ತು. ಅವರ ಎಲ್ಲ ಕಾರ್ಯಯೋಜನೆಗಳು ವಸಾಹತುಶಾಹಿ ಸವಾಲುಗಳಿಗೆ ತೀವ್ರವಾಗಿ ಪ್ರತಿಕ್ರಿಯಿಸಿರುವುದೇ ಆಗಿವೆ. ಕರ್ನಾಟಕತ್ವದ ಕಲ್ಪನೆಯಿಂದ ಕೇವಲ ಪ್ರತ್ಯೇಕ ಪ್ರಾಂತ್ಯವನ್ನು ಪಡೆಯುವುದು ಅವರ ಧ್ಯೇಯ ಆಗಿರಲಿಲ್ಲ. ಬದಲಾಗಿ ಕನ್ನಡ ಮಾತನಾಡುವ ಎಲ್ಲಾ ಪ್ರದೇಶಗಳ ಜನರನ್ನೂ ಒಂದೇ ಆಡಳಿತಕ್ಕೆ ಒಳಪಡಿಸುವುದು, ಆ ಮೂಲಕ ರಾಷ್ಟ್ರೀಯ ಹೋರಾಟಕ್ಕೆ ಹೆಚ್ಚು ಬಲವನ್ನು ಒದಗಿಸುವುದು ಅವರ ಗುರಿ ಹಾಗೂ ಧ್ಯೇಯ ಆಗಿತ್ತು. ಅವರ ಕರ್ನಾಟಕತ್ವವು ಸ್ವಾತಂತ್ರ್ಯ ಹೋರಾಟಕ್ಕೆ ವಿರುದ್ಧವಾಗಿ ಇರಲಿಲ್ಲ. ಆದರೆ ಜಾತಿ, ಮತ, ಪ್ರಾಂತೀಯತೆ,

ಪಕ್ಷಭೇದಗಳಿಂದ ರಾಷ್ಟ್ರೀಯತ್ವಕ್ಕೂ, ಕರ್ನಾಟಕತ್ವಕ್ಕೂ ನೂರೆಂಟು ತೊಡಕುಗಳ ಉಂಟಾದವು. ಆಲೂರರ ಚಿಂತನೆಗಳಿಗೆ ಭಿನ್ನಮತವನ್ನು ತೋರುವವರೂ ಇದ್ದರು

ಮೂಲತಃ ಆಧ್ಯಾತ್ಮಿಕ ಪ್ರವೃತ್ತಿಯವರಾದ ಆಲೂರರು ಧರ್ಮದ ಮೂಲ ಕರ್ನಾಟಕತ್ವದ ಪರಿಕಲ್ಪನೆಯನ್ನು ಗುರುತಿಸುತ್ತಾರೆ. ದ್ವೈತ, ಅದ್ವೈತ, ವಿಶಿಷ್ಟಾ ದ್ವೈತ, ಜೈನ, ವೀರಶೈವ ಮೊದಲಾದ ಧಾರ್ಮಿಕ ಪಂಥಗಳಿಗೆ ಕರ್ನಾಟಕವೆ ಮೂಲಸ್ಥಾನ ಎಂದು ಅವರು ಪ್ರತಿಪಾದಿಸಿದವರು. ಹಾಗೆಯೇ ಈ ಎಲ್ಲಾ ಪಂಥಗಳಿಗೂ ಸೇರಿದ ಜನರು ಕರ್ನಾಟಕದಲ್ಲಿರುವುದರಿಂದ ಅವರಲ್ಲಿ ಬಹು ಬೇಗ ಕರ್ನಾಟಕತ್ವದ ಜಾಗೃತಿಯನ್ನು ಮೂಡಿಸಲು ಸಾಧ್ಯವೆಂದು ಅವರ ತಿಳಿಸಿದ್ದರು. ಇಲ್ಲಿ ಆಲೂರರು ಯಾವುದೇ ಒಂದು ಪಂಥಕ್ಕೆ ಪ್ರಾಶಸ್ತ್ಯ ನೀಡ ಸಮಸ್ತ ಕನ್ನಡಿಗರನ್ನೂ ದೃಷ್ಟಿಯಲ್ಲಿ ಇರಿಸಿಕೊಂಡು ಕಾರ್ಯನಿರ್ವಹಿಸುವುದ ಅವರ ಅಖಂಡ ಕರ್ನಾಟಕದ ಉದ್ದೇಶಕ್ಕೆ ಸೂಕ್ತವೆನ್ನಿಸುತ್ತದೆ. ಆದುದರಿಂದಲೆ ಅವರು ವಿದ್ಯಾರಣ್ಯ, ಬಸವೇಶ್ವರ, ಕುಮಾರವ್ಯಾಸ, ನಿಜಗುಣ ಶಿವಯೋಗಿ, ಸಾ ಮೊದಲಾದವರ ಉತ್ಸವಗಳನ್ನು ನಾಡಹಬ್ಬಗಳನ್ನಾಗಿ ಆಚರಿಸಲು ಯೋಜಿಸಿದರ 'ನಾಡಹಬ್ಬ' ಪದ ಧಾರವಾಡದಲ್ಲಿ ಹುಟ್ಟಿಕೊಂಡು ಬಳಕೆಗೆ ಬಂದುದರ ಬಗೆ ಬೇಂದ್ರೆಯವರು "ನಾಡಹಬ್ಬವು ರಾಷ್ಟ್ರೈಕ್ಯದ ಭೂಮಂಡಲೈಕ್ಯದ, ತ್ರಿಲೋಕೈಕ್ಯ ಕುರುಹಿನ ಹಬ್ಬ-ಪರ್ವ" ಎನ್ನುತ್ತಾರೆ. ಇದರಿಂದ ನಾಡಹಬ್ಬದ ವ್ಯಾ ಸ್ಪಷ್ಟವಾಗುತ್ತದೆ. ಆಲೂರರು ಸಹ ಈ ರಾಷ್ಟ್ರ ಐಕ್ಯದ ದೃಷ್ಟಿಯಲ್ಲಿ ನಾಡಹಬ್ಬಗಳನ್ನು ಆಚರಿಸಲು ಹುರಿದುಂಬಿಸಿದರು. ತಿಲಕರ ಶಿವಾಜಿ, ಗಣಪ ಗೋವು ಮೊದಲಾದ ಸಂಕೇತಗಳ ಬಳಕೆಗೂ ಆಲೂರರ ಸಂಕೇತಗಳ ಬಳಕೆ ಹೆಚ್ಚು ವ್ಯತ್ಯಾಸಗಳು ಇಲ್ಲ. ಇದೇ ಸನ್ನಿವೇಶದಲ್ಲಿ ಆಲೂರರು ಇಸ್ಲಾಂ ಮ ಕ್ರೈಸ್ತ ಮತ್ತು ಕ್ರೈಸ್ತ ಧರ್ಮೀಯ ಕನ್ನಡಿಗರನ್ನು ಪರಿಗಣಿಸದಿರುವ ಮಿತಿಗಳಿ ಒಳಪಡುವುದುಂಟು.

ಆಲೂರರ ವಿಚಾರಧಾರೆಯನ್ನು ಸ್ಥೂಲವಾಗಿ ಹೀಗೆ ಸಂಗ್ರಹಿಸಬಹುದು

"ಕರ್ನಾಟಕತ್ವವೆಂದರೆ ಕಿರಣಕೇಂದ್ರಕಾಜು (Focussing Lens ಅದರೊಳಗಿಂದ ಭರತ ಭೂಮಿ ಮಾತ್ರವೇ ಏಕೆ ವಿಶ್ವವೆ ನಮಗೆ ಗೋಚರವಾ ತ್ತದೆ. ವಿಶ್ವದ ಕಿರಣಗಳೂ ಭಾರತದ ಕಿರಣಗಳೂ ನಮ್ಮ ಕರ್ನಾಟ ಕಾಜಿನಲ್ಲಿ ಅಂತರ್ಯಾಮಿಯಾಗಿವೆ".

"ಕರ್ನಾಟಕದ ಸರ್ವಾಂಗೀಣ ಉನ್ನತಿ ಎಂಬೀ ಮೂರು ಶಬ್ದಗಳಲ್ಲಿ ಜಗತ್ತೆಲ್ಲವೂ (ಕರ್ನಾಟಕ, ಭರತಖಂಡ, ವಿಶ್ವ) ಅಡಗಿದೆ. ಪರವಾ

ಯಾವುದೇ ಪ್ರತಿಮೆ ಇರಲಿ, ಅದರಲ್ಲಿ ಪರಮಾತ್ಮನ ವಿಶ್ವಶಕ್ತಿಯೆಲ್ಲವೂ ಅಡಗಿರುತ್ತದೆ".

"ನಮ್ಮ ಕಾರ್ಯಕ್ಷೇತ್ರವು ಕರ್ನಾಟಕವಾದರೂ ಭರತಭೂಮಿಯೇ ಧರ್ಮಕ್ಷೇತ್ರವು... ರಾಸಕ್ರೀಡೆಯಲ್ಲಿ ಬೇರೆ ಬೇರೆ ಗೋಪಿಕಾ ಸ್ತ್ರೀಯರು ಕೋಲಾಟವನ್ನು ಆಡುವಾಗ ಹೇಗೆ ಒಬ್ಬನೇ ಕೃಷ್ಣನನ್ನು ತಮ್ಮ ಹತ್ತಿರ ಕಾಣುತ್ತಿದ್ದರೋ ಹಾಗೆ ವಿವಿಧ ಪ್ರಾಂತಗಳು ವಿಶಿಷ್ಟ ಮಾರ್ಗದಿಂದ ತಮ್ಮ ಉನ್ನತಿಯನ್ನು ಮಾಡಿಕೊಳ್ಳುವಾಗ, ರಾಷ್ಟ್ರೀಯತ್ವವನ್ನು ಹತ್ತಿರವೇ ಕಾಣಬೇಕು".

"ಕರ್ನಾಟಕಾಂತರ್ಯಾಮಿಯಾದ ಭಾರತೀದೇವಿಗೆ ನಮೋ
ಭಾರತಾಂತರ್ಯಾಮಿಯಾದ ಭೂದೇವಿಗೆ ನಮೋ"

"ಕರ್ನಾಟಕದ ಸ್ಥೂಲ ಶರೀರವು ಚಿಕ್ಕದಾದರೂ ಸೂಕ್ಷ್ಮ, ಕಾರಣ ಶರೀರಗಳು ಅತ್ಯಂತ ವ್ಯಾಪಕವಾಗಿವೆ".

ಈ ಮೇಲಿನ ಕರ್ನಾಟಕತ್ವದ ವಿಚಾರಗಳಲ್ಲಿ ವಿಶ್ವಶಕ್ತಿ, ವಿಶ್ವರೂಪ, ಪರಮಾತ್ಮ, ಕೃಷ್ಣ, ಧರ್ಮಕ್ಷೇತ್ರ, ಅಂತರ್ಯಾಮಿತ್ವ, ಸ್ಥೂಲ-ಸೂಕ್ಷ್ಮ-ಕಾರಣ ಶರೀರಗಳು ಮೊದಲಾದುವು ಕರ್ನಾಟಕ, ಭಾರತ ಮತ್ತು ವಿಶ್ವವನ್ನು ಒಂದಲ್ಲ ಒಂದು ರೀತಿಯಲ್ಲಿ ಹೊಂದಿಸಿ ಹೇಳಹೊರಟಿವೆ.

ಆಲೂರರ ಈ ವಿಚಾರಗಳು ಗೀತೆ, ವೇದ, ಉಪನಿಷತ್ತುಗಳ ಪ್ರಭಾವದ ಹಿನ್ನೆಲೆಯಿಂದ ಕರ್ನಾಟಕತ್ವದ ತೀರ್ಮಾನಗಳಾಗಿ ಹೊರಹೊಮ್ಮಿವೆ. ಆಧ್ಯಾತ್ಮಿಕವಾದ, ತಾತ್ತ್ವಿಕವಾದ ಅವರ ಚಿಂತನೆಯು ಬ್ರಿಟಿಷ್ ಅಥವಾ ಪಾಶ್ಚಾತ್ಯ ಸಂಸ್ಕೃತಿಯನ್ನು ಸನಾತನ ಸಂಸ್ಕೃತಿಗೆ ವಿರೋಧವಾಗಿ ನೋಡುವಂತೆ ಇದೆ. ಈ ನಿಟ್ಟಿನಲ್ಲಿ ನಮ್ಮದೇ ಆದ ಸಂಸ್ಕೃತಿ, ಪರಂಪರೆಗಳ ಮೂಲಕ ಕರ್ನಾಟಕತ್ವ, ರಾಷ್ಟ್ರೀಯತ್ವವನ್ನು ಆಲೂರರು ಹೆಚ್ಚು ಜನರಿಗೆ ಮನಮುಟ್ಟುವಂತೆ ಸಾರಲು ಹೊರಟವರು. ಪ್ರತಿಯೊಬ್ಬ ಮನುಷ್ಯನಲ್ಲಿ ಅಂತಸ್ಥವಾಗಿರುವ ಧರ್ಮವನ್ನು ಅವರು ಗ್ರಹಿಸುವ ರೀತಿಯಲ್ಲೇ ಅರ್ಥೈಸಿ ಹೇಳಬೇಕೆಂದು ಅಂದಿನ ರಾಷ್ಟ್ರೀಯ ಹೋರಾಟಗಾರರು ಚೆನ್ನಾಗಿ ಅರಿತಿದ್ದರು. ಇದಕ್ಕೆ ಗಾಂಧಿ, ಅರವಿಂದ, ತಿಲಕ್ ಮೊದಲಾದವರು ಹೊರತಲ್ಲ. (ಆದರೆ ಆ ರೀತಿ ಅರ್ಥೈಸುವಿಕೆಯಿಂದ ಜನರನ್ನು ಹೇಗೆ ಪ್ರಭಾವಿತರನ್ನಾಗಿಸಬಹುದು ಎಂಬುದು ಮುಖ್ಯವಾದುದಾಗಿತ್ತು.) ಅಂದು ಪರಕೀಯ ಸಂಸ್ಕೃತಿಯೊಂದಕ್ಕೆ ವಿರೋಧವನ್ನು ವ್ಯಕ್ತಪಡಿಸುವ ಕಾರಣಕ್ಕಾಗಿ ಆಲೂರರು ಕರ್ನಾಟಕತ್ವದಲ್ಲಿ ಧರ್ಮವನ್ನು ಬಳಸಿಕೊಂಡರು. ಆದರೆ ಇಂದಿಗೂ

ಈ ಧರ್ಮದ ಘಟಕಗಳು ಭಾರತೀಯ ಜನಸಮುದಾಯಗಳನ್ನೇ ಛಿದ್ರಗೊಳಿಸಲು ಒಳಕೆ ಆಗುತ್ತಿರುವುದು ದುರದೃಷ್ಟಕರ.'

ಗಾಂಧಿ ಅವರ ಸತ್ಯ, ಅಹಿಂಸೆ, ಶಾಂತಿ, ಸೌಹಾರ್ದ, ಧರ್ಮ ಸಹಿಷ್ಣುತೆಗಳಿಂದ ಕೂಡಿದ ತಾತ್ತ್ವಿಕ ಚಿಂತನೆಗೂ ಆಲೂರರ 'ಹಿಂದೂ ರಾಷ್ಟ್ರೀಯವಾದ'ದ ಅಥವಾ ಸನಾತನ ಧರ್ಮದ ಹಿನ್ನೆಲೆಯಿಂದ ಹೊರಹೊಮ್ಮುವ ತಾತ್ತ್ವಿಕ ಚಿಂತನೆಗೂ ಸಾಕಷ್ಟು ವ್ಯತ್ಯಾಸಗಳು ಇವೆ. ಅಹಿಂಸೆಯ ತತ್ತ್ವವೊಂದನ್ನೇ ಒಪ್ಪಿದ ಆಲೂರರು ಧಾರ್ಮಿಕವಾಗಿ ಕರ್ನಾಟಕತ್ವವನ್ನು ಸಂಯೋಜಿಸುತ್ತಾರೆ. ಆಲೂರರ ಚಿಂತನೆಗಳು ತಿಲಕರ "ಆಧ್ಯಾತ್ಮಿಕ ಏಕತೆಯೇ ಭಾರತದ ಮೂಲಭೂತ ಏಕತೆಯ ಮುಖ್ಯ ರಹಸ್ಯ" ಎಂಬ ತಾತ್ತ್ವಿಕ ಚಿಂತನೆಗೆ ಹತ್ತಿರ ಆಗಿವೆ. ಇದಕ್ಕೆ ಆಲೂರರ ಮೇಲೆ ಆದ ತಿಲಕರ ಗಾಢ ಪ್ರಭಾವವೇ ಕಾರಣ.

ಹಿಂದೂ ರಾಷ್ಟ್ರೀಯವಾದಿಗಳ 'ಬಲಿಷ್ಠ ಪ್ರಭುತ್ವ'ದ ವಿಚಾರಗಳು ಆಲೂರರ ಕರ್ನಾಟಕತ್ವದ ಪರಿಕಲ್ಪನೆಯ ಮೇಲೆ ಪ್ರಭಾವ ಬೀರಿವೆ. ಆಂಗ್ಲರ ಆಡಳಿತಕ್ಕೆ ವಿರೋಧವನ್ನು ವ್ಯಕ್ತಪಡಿಸುವ ವಿಚಾರಗಳು ಆಲೂರರ ಬರಹಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿವೆ. ಅದರಲ್ಲೂ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಸಂದರ್ಭದ ವಿಶ್ಲೇಷಣೆಯಲ್ಲಿ ಅವರ ವಿರೋಧವನ್ನು ಸ್ಪಷ್ಟವಾಗಿ ಗುರುತಿಸಬಹುದು. ಉದಾಹರಣೆಗೆ :

೧. "ಪರಧರ್ಮೀಯರೂ ಪರಕೀಯರೂ ಆದ ಮುಸಲ್ಮಾನರನ್ನು ಹೇಗಾದರೂ ಮಾಡಿ ಮುಂದಕ್ಕೆ ಬರಗೊಡಬಾರದೆಂಬ ತೀಕ್ಷ್ಣವಾದ ಭಾವನೆಯು ಮಾತ್ರ ಪ್ರತಿಯೊಬ್ಬ ಹಿಂದುವಿನಲ್ಲಿ ಜಾಗೃತವಾಗಿತ್ತು".

೨. "ಹಿಂದೂಧರ್ಮವು ಹಲಕೆಲವು ತತ್ತ್ವಗಳನ್ನು ಸಾಮಾನ್ಯ ಜನರ ಮನದಲ್ಲಿ ಕೂಡ ಅತ್ಯಂತ ಆಳವಾಗಿ ನಡಿಸಿಟ್ಟು, ಆ ತತ್ವಗಳಿಗೋಸ್ಕರ ಅವರು ಪ್ರಾಣವನ್ನು ಅರ್ಪಿಸಲು ಕೂಡ ಸಿದ್ಧರಾಗುವಂತೆ ಮಾಡಿದೆ".

'ಪರಧರ್ಮೀಯರೂ, ಪರಕೀಯರೂ' ಆಲೂರರ ಕಾಲದಲ್ಲಿ ಬ್ರಿಟಿಷರೆ ಆಗಿದ್ದರು. ಆದರೆ ಅವರ ಕಾಲದಲ್ಲಿಯೇ ಇದ್ದ ಮುಸಲ್ಮಾನರು ಭಾರತೀಯರಾಗಿದ್ದರೂ ಇಂತಹ ಬರೆಹಗಳಿಂದ ಭಿನ್ನ ರೀತಿಯಲ್ಲಿ ಆಲೋಚಿಸುವಂತೆ ಮಾಡುತ್ತವೆ.

"ಕರ್ನಾಟಕವು ನನ್ನ ಸಾಗುಮಾಡುವ ಭೂಮಿ; ನಾನು ಅದರ ರೈತನು ಆ ಭೂಮಿಯಲ್ಲಿ ರಾಜಕಾರಣ ವಾಙ್ಮಯ, ಇತಿಹಾಸ ಮುಂತಾದ ಹೊಲಗಳು

ವು. ಯಾವ ಕಾಲಕ್ಕೆ ಯಾವ ಹೊಲಕ್ಕೆ ಮಳೆಯಾಗಿ ಬಿತ್ತುವ ಹದ
ುತ್ತದೋ ಆ ಕಾಲಕ್ಕೆ ಅದರಲ್ಲಿ ಕರ್ನಾಟಕತ್ವದ ಬೀಜಗಳನ್ನು ಬಿತ್ತುವುದು
್ವ ಕಾರ್ಯ ಮಾಡುವುದರ ಮುಖ್ಯ ಧೋರಣೆ",

ನ್ನುವ ಆಲೂರರು ಪತ್ರಿಕೋದ್ಯಮದ ಮೂಲಕವೂ ಕರ್ನಾಟಕತ್ವದ ಬೀಜವನ್ನು
ತ್ತಿ ಅಭಿಮಾನ ತುಂಬಿದರು.

ಆಲೂರರು ಪತ್ರಿಕೋದ್ಯಮಕ್ಕೆ ಕಾಲಿಡುವ ಮೊದಲು ತಿಲಕರ 'ಕೇಸರಿ'
ಲ್ಲಿ ಬರುತ್ತಿದ್ದ ಬ್ರಿಟಿಷ್ ವಿರೋಧಿ ಬರಹಗಳಿಂದ ಹೆಚ್ಚು ಪ್ರಭಾವಿತರಾಗಿದ್ದರು.
೯೦೭ರಲ್ಲಿ 'ವಾಗ್ಭೂಷಣ' ಪತ್ರಿಕೆಯನ್ನು ವಹಿಸಿಕೊಂಡ ಅವರು ಫೆಬ್ರವರಿ
ಚಿಕೆಯ ಸಂಪಾದಕೀಯದಲ್ಲಿ ಪ್ರಥಮ ಬಾರಿಗೆ 'ಕರ್ನಾಟಕದ ಏಕೀಕರಣ'
ತು ಬರೆದರು. ಅದರಲ್ಲಿ ತಮ್ಮ ಕಲ್ಪನೆಯ ಕರ್ನಾಟಕವನ್ನು, ಏಕೀಕರಣದ
ತ್ಯವನ್ನು ಹಾಗೂ ಸಾಧ್ಯತೆಯನ್ನು ಜನರಿಗೆ ವಿವರಿಸಿದರು. ಇದೇ ಹೆಚ್ಚು
ಭಾವ ಬೀರಿದ ಅವರ ಮೊದಲ ಸಂಪಾದಕೀಯ ಆಗಿದೆ. ಡಿ.ವಿ. ಗುಂಡಪ್ಪ
ವರ ಸಂಪಾದಕತ್ವದ 'ಕರ್ನಾಟಕ' ಎಂಬ ಆಂಗ್ಲ ಪತ್ರಿಕೆಯಲ್ಲಿ(೨-೪-೧೯೧೩)
ಲೂರರು 'ಕನ್ನಡಿಗರ ಏಕೀಕರಣ'ದ ಬಗೆಗೆ ಲೇಖನ ಬರೆದು ಮೈಸೂರು
ಂತ್ಯದ ಕನ್ನಡಿಗರಲ್ಲಿ ಕರ್ನಾಟಕತ್ವದ ಜಾಗೃತಿ ಮೂಡಿಸಿದರು. 'ಕರ್ನಾಟಕ
ತ್ರ', 'ಕರ್ನಾಟಕ ವೃತ್ತ', 'ಕನ್ನಡ ಕೇಸರಿ', 'ಲೋಕಬಂಧು', 'ಚಂದ್ರೋದಯ',
ಾಜಹಂಸ', 'ವಿಜಯ', 'ಕರ್ಮವೀರ' ಮೊದಲಾದ ಪತ್ರಿಕೆಗಳಲ್ಲಿ
ಖನಗಳನ್ನು, ಸಂಪಾದಕೀಯಗಳನ್ನು ಬರೆದು ಕನ್ನಡಿಗರಲ್ಲಿ ಕರ್ನಾಟಕದ ಭಾಷೆ,
ಿಹಾಸ, ಸಂಸ್ಕೃತಿಗಳ ಬಗೆಗೆ ಸಾತ್ವಿಕ ಅಭಿಮಾನವನ್ನು ಹುಟ್ಟಿಸಿದರು. ಅಂದು
ೀ ಕರ್ನಾಟಕಕ್ಕೆ 'ಕರ್ನಾಟಕತ್ವ'ದ ಸರ್ವತೋಮುಖವಾದ ಅಭಿವೃದ್ಧಿಯ ಬಗೆಗೆ
ಹೇಳುವ ಪತ್ರಿಕೆಯೊಂದರ ಅವಶ್ಯಕತೆ ಇತ್ತು. ಅದಕ್ಕಾಗಿ ಆಲೂರರು
೨೨ರಲ್ಲಿ 'ಜಯಕರ್ನಾಟಕ' ಮಾಸಪತ್ರಿಕೆಯನ್ನು ಹೊರತಂದರು. ಇದು
ಡಿಗರ ವಿಚಾರಗಳ ಮುಖವಾಣಿ ಆಯಿತು.

'ಕರ್ಮವೀರ'ದ ಪ್ರಮುಖ ಬರಹಗಾರರಾಗಿದ್ದ ಆಲೂರರು ೧೪-೧೦-
೨೧ ರ ಸಂಚಿಕೆಯಲ್ಲಿ ಒಂದು ಐತಿಹಾಸಿಕ ಲೇಖನವನ್ನು ಬರೆದರು.
ರವಾಡದ ಗೋಲಿಬಾರ್ ಪ್ರಕರಣಕ್ಕೆ ಸಂಬಧಿಸಿದಂತೆ ಎರಡು ರೀತಿಯ ಅರ್ಥ
ಡುವ 'ಭೂರಕ್ಷಸಾಯ ಸ್ವಾಃ' (ಬ್ಯೂರಾ ಕ್ರಸಿಯ ಸ್ವಾಹಾ) ಎಂಬ ಈ ಲೇಖನ
ಟಿಷ್ ಆಳರಸ ವಿರುದ್ಧವೇ ಆಗಿತ್ತು. "ಬ್ರಿಟಿಷ್ ನ್ಯಾಯದೇವತೆಯು ಮಾತ್ರ
ರವಾಡದಲ್ಲಿ ದಿಗಂಬರಳಾಗಿ ನಿಂತಳು. ಕರ್ನಾಟಕಸ್ಥರೇ, ಏಳಿರಿ ನಿಮ್ಮೊಳಗಿನ
ಗಗಳನ್ನೆಲ್ಲಾ ಸುಟ್ಟು ಬೂದಿ ಮಾಡಿ ಸ್ವರಾಜ್ಯ ದೇವತೆಯ ಆರಾಧನೆಗೆ ಮತ್ತೆ

ಆರಂಭಿಸಿ" ಎಂದೆಲ್ಲಾ ಬರೆದಿದ್ದ ಈ ಲೇಖನದ ಪರಿಣಾಮವಾಗಿ ಸಂಪಾದಕರಾದ ರಂಗನಾಥ ದಿವಾಕರರು ಸೆರೆಮನೆ ಸೇರಬೇಕಾಯಿತು. ಇನ್ನೊಂದು ಐತಿಹಾಸಿಕ ಲೇಖನವು 'ಕರ್ಮವೀರ'ದಲ್ಲಿಯೇ ೧೬-೨-೧೯೨೨ರ ಸಂಚಿಕೆಯಲ್ಲಿ ಪ್ರಕಟವಾಯಿತು. 'ಧೃತ-ರಾಷ್ಟ್ರರೆಲ್ಲರೂ (ಬ್ಯೂರಾಕ್ರಾಸ್ಟ್) ಕುರುಡರೇ' ಎಂಬ ಈ ಲೇಖನದಲ್ಲಿ ಬ್ರಿಟಿಷ್ ನಿರಂಕುಶ ಪ್ರಭುತ್ವವನ್ನು ಟೀಕಿಸಿ ಬರೆಯಲಾಗಿದೆ. ಇದೂ ಸಹ ಕನ್ನಡಿಗರನ್ನು ಎಚ್ಚರಿಸಿತು.

ಕರ್ನಾಟಕದ ಒಡಕಿನ ಪರಿಣಾಮವಾಗಿ ಕರ್ನಾಟಕತ್ವವನ್ನು ಪ್ರತಿಪಾದಿಸಿದ ಆಲೂರರು ಅಖಂಡ ಕರ್ನಾಟಕದ ಬಗೆಗೆ ಸಾತ್ವಿಕ ಅಭಿಮಾನದ ಜರೂರನ್ನು ಅರಿತರು. ಕನ್ನಡಿಗರಲ್ಲಿ ಆ ಅಭಿಮಾನವನ್ನು ಮೂಡಿಸುವ ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡಹೊರಟವರು. ನಮ್ಮ ಪ್ರಾಂತ್ಯದಲ್ಲಿ ಭಾಷೆ, ವರ್ತಮಾನ-ಮಾಸಪತ್ರಿಕೆ, ವ್ಯಾಪಾರ, ಶಿಕ್ಷಣ, ರಾಷ್ಟ್ರೀಯ ಸಭೆಯ ಕಾರ್ಯ, ಬಂದರಿನ ಅಗತ್ಯತೆ, ವಿಶ್ವವಿದ್ಯಾಲಯದ ಅವಶ್ಯಕತೆ, ಇತಿಹಾಸ ಸಂಶೋಧನೆಯ ಜರೂರು, ಬ್ರಾಹ್ಮಣ-ಬ್ರಾಹ್ಮಣೇತರ ನಡುವೆ ಮೂಡಬೇಕಾದ ಸಾಮರಸ್ಯ-ಹೀಗೆ ಹತ್ತು ಹಲವು ವಿಷಯಗಳಲ್ಲಿ ಪ್ರಗತಿ ಅಥವಾ ಕ್ರಿಯಾಶೀಲತೆ ಕಂಡುಬರದಿದುವುದಕ್ಕೆ ಕನ್ನಡಿಗರಲ್ಲಿದ್ದ ಅಜಾಗೃತ ಭಾವನೆ, ಕರ್ನಾಟಕದ ವಿಶಿಷ್ಟ ಅಂಶಗಳನ್ನು ಅರಿತು ಘೋಷಿಸುವುದರ ಬಗೆಗೆ ಇರುವ ಅಜ್ಞಾನಗಳೇ ಮುಖ್ಯ ಕಾರಣ ಎಂದು ಆಲೂರರು ಅರಿತುಕೊಂಡರು. ಆಲೂರರ ಕರ್ನಾಟಕತ್ವದ ಪರಿಕಲ್ಪನೆಯು ಅರಿವಾದಂತೆಲ್ಲಾ ನಮ್ಮಲ್ಲಿನ ಕೊರತೆ-ಬೇಡಿಕೆಗಳು ಕಣ್ಣಿನ ಮುಂದೆ ಬಂದು ನಿಲ್ಲತೊಡಗಿದವು. ಆ ಕೊರತೆ-ಬೇಡಿಕೆಗಳ ನಿವಾರಣೆಗೆ ಆಲೂರರಂಥ ಕನ್ನಡಾಭಿಮಾನಿಗಳು ಮಾರ್ಗ-ಯೋಜನೆಗಳನ್ನು ರೂಪಿಸಿದರು. ಕರ್ನಾಟಕವು ಎಲ್ಲ ರೀತಿಯಿಂದಲೂ ಅಭಿವೃದ್ಧಿ ಹೊಂದುವ, ಪರಕೀಯತೆಯಿಂದ ಸ್ವಾತಂತ್ರ್ಯದ ಕಡೆಗೆ ಹೆಜ್ಜೆ ಹಾಕುವ ಆಶಯ ಅವರದು. ಅದಕ್ಕಾಗಿ ಏಕೀಕರಣ ಸಂಘ-ಸಂಸ್ಥೆಗಳು, ಗ್ರಂಥಭಂಡಾರಗಳು, ಇತಿಹಾಸ ಸಂಶೋಧನ ಮಂಡಳ, ಪರಿಷತ್ತು ಮೊದಲಾದವು ಸ್ಥಾಪಿತವಾಗಿ ಉತ್ತಮ ಫಲಿತಾಂಶ ನೀಡಿದವು. ಬೇಂದ್ರೆಯವರು "ಆಡು ಮುಟ್ಟದ ಗಿಡವಿಲ್ಲ, ವೆಂಕಟರಾಯರು ಮಾಡದ ಕೆಲಸವಿಲ್ಲ" ಎಂದು ಒಂದೆಡೆ ಹೇಳಿದ್ದಾರೆ. ಆದರೂ ಆಲೂರರಲ್ಲಿ ಸಂಘಟನೆಯ ಶಕ್ತಿಯಾಗಲಿ ಚಳವಳಿಯು ವೃತ್ತಿಯಾಗಲಿ, ಜನಸಂಮೋಹ ನಾಯಕನ ಸ್ವಭಾವವಾಗಲಿ ಇರಲಿಲ್ಲ ಎಂಬ ಟೀಕೆಗಳೂ ಇವೆ.

ಏನೇ ಆದರೂ ಅಂಥ ಟೀಕೆಗಳು ತುಂಡು ತುಂಡು ಕರ್ನಾಟಕವನ್ನು ಒಂದು ಮಾಡುವ ಅವರ ಉದ್ದೇಶದ ಮುಂದೆ ಗೌಣವಾಗಿಬಿಡುತ್ತವೆ. ಅವ

ಕಾರ್ಯ ವೈಖರಿಯು ನಿಲುವುಗಳು ಅಂದಿನ ಪರಿಸ್ಥಿತಿಗೆ ತೆಗೆದುಕೊಂಡ ಕರ್ನಾಟಕತ್ವದ ನಿಲುವುಗಳಾಗಿ ಪ್ರಕಟಗೊಂಡದ್ದಾಗಿವೆ. ಅವರ ಸಾಂಸಾರಿಕ, ಏಕಾಂತಿಕ ಜೀವನದ ಮಧ್ಯೆ ಕರ್ನಾಟಕತ್ವದ ಸಾರ್ವಜನಿಕ ಜೀವನ ತನ್ನದೇ ಆದ ಮಹತ್ವ ಪಡೆಯಿತು. ಫಲಿತಾಂಶವಾಗಿ ಕರ್ನಾಟಕವು ೧೯೫೬ರ ನವೆಂಬರ್ ೧ ರಂದು ರಾಜಕೀಯವಾಗಿ ಮತ್ತೆ ಒಂದುಗೂಡಿತು.

ಆಲೂರರು ಕನ್ನಡಿಗರಲ್ಲಿದ್ದ ಕರ್ನಾಟಕದ ಬಗೆಗಿನ ಭ್ರಾಮಕ ಕಲ್ಪನೆಗಳನ್ನು ಹೊರದೂಡಲು ತಮ್ಮ ಜೀವನವಿಡೀ ಶ್ರಮಿಸಿದವರು. ಅದಕ್ಕಾಗಿ ಭಾವುಕ, ಅತಿರೇಕಗಳಿಂದ ಕೂಡಿದ ಕಲ್ಪನೆಗೆ ಮೀರಿದ ಸಂಗತಿಗಳ ವರ್ಣನೆಯ ಕಡೆಗೆ ಮೊರೆಹೋಗುತ್ತಾರೆ ಎನಿಸಬಹುದು. ಆದರೆ ಅಂದಿನ ಸ್ಥಿತಿ-ಗತಿಗಳನ್ನು ನಾವು ಪರಿಗಣನೆಗೆ ತೆಗೆದುಕೊಂಡಲ್ಲಿ ಬಹುಪಾಲು ರಾಷ್ಟ್ರೀಯ ಹೋರಾಟಗಾರರು ಒಂದಲ್ಲ ಒಂದು ರೀತಿಯಲ್ಲಿ ಆಲೂರರಂತೆಯೇ ಅತಿರೇಕವಾದಿಗಳೇ ಆಗಿದ್ದಾರೆ. ಆಲೂರರು ಅತಿರೇಕವಾಗಿ ಕಂಡಿದ್ದರೆ ಅವರಲ್ಲಿದ್ದ ನಾಡು-ನುಡಿ-ಸಂಸ್ಕೃತಿಯ ಬಗೆಗಿನ ಅಪಾರವಾದ ಅಭಿಮಾನವೇ ಕಾರಣ. ಉದಾಹರಣೆಗೆ, 'ಕರ್ನಾಟಕ' ಎಂದಾಕ್ಷಣ ಪುಲಕಿತರಾಗುತ್ತಿದ್ದ ಆಲೂರರು, 'ಮೈಸೂರು ರಾಜ್ಯ' ಎಂದು ಕರೆಯುವುದನ್ನು ತೀವ್ರವಾಗಿ ಪ್ರತಿಭಟಿಸಿದರು. ಕರ್ನಾಟಕವನ್ನು 'ಮೈಸೂರು' ಎಂದು ಕರೆದಾಗ ಪ್ರತಿಭಟಿಸದಿರುವುದು ದಾಸ್ಯ ಮನೋಭಾವದ (ಮೈಸೂರು ಪ್ರಾಂತ್ಯದವರನ್ನು) ಸಂಕೇತವೇ ಆಗಿದೆ ಎಂದು ಗುರುತಿಸುತ್ತಾರೆ. 'ಕರ್ನಾಟಕ' ಎಂಬ ಪದದಲ್ಲಿ ಏನಿದೆ? ಎಂದು ಪ್ರಶ್ನೆ ಮಾಡುವವರಿಗೆ ಆಲೂರರು 'ಕಾಂಗ್ರೆಸ್' ಎಂಬ ಪದವನ್ನು ಹೇಗೆ ಬಿಡಲು ಸಾಧ್ಯವಿಲ್ಲವೋ ಹಾಗೆಯೇ 'ಕರ್ನಾಟಕ' ಎಂಬ ಪದವನ್ನು ಕನ್ನಡಿಗರು ಬಿಡಲು ಸಾಧ್ಯವಿಲ್ಲವೆನ್ನುತ್ತಿದ್ದರು. ನಮ್ಮದೇ ಆದ ಪರಂಪರೆಯಿಂದ ಬಂದಂಥ ಹೆಸರನ್ನು ಬಿಟ್ಟು ವಸಾಹತುಶಾಹಿ ಪರಿಣಾಮವಾಗಿ ಬಂದ ಹೆಸರನ್ನು ಇಟ್ಟುಕೊಳ್ಳಲು ಸಾಧ್ಯವಿಲ್ಲವೆಂದು ಪಟ್ಟು ಹಿಡಿದರು. ಅವರಿಗೆ 'ಕಾಂಗ್ರೆಸ್', 'ಮೈಸೂರ್' ಎಂಬ ಆಂಗ್ಲ ಪದಗಳು ಬ್ರಿಟಿಷ್‌ಶಾಹಿ ಆಡಳಿತದ, ದಾಸ್ಯದ ಸಂಕೇತಗಳಾಗಿ ಕಂಡವು.

ಆಲೂರರು ಭಾರತದ ರಾಷ್ಟ್ರಗೀತೆಯಲ್ಲಿ "....ಉತ್ಕಲ, ವಂಗ...." ಮೊದಲಾದ ಹೆಸರುಗಳಿರುವಂತೆ 'ಕರ್ನಾಟಕ' ಎಂಬ ಪದವನ್ನು ಸೇರಿಸಲು ಒತ್ತಾಯಿಸಿದರು. 'ದ್ರಾವಿಡ' ಎಂಬ ಪದವೊಂದರಿಂದಲೇ ಕರ್ನಾಟಕವು ಹೇಗೆ ಗುರುತಿಸಲ್ಪಡಲು ಸಾಧ್ಯ ಎಂದು ಪ್ರಶ್ನೆ ಮಾಡಿದರು. ರಾಷ್ಟ್ರಗೀತೆಯಲ್ಲಿ ಕರ್ನಾಟಕವನ್ನು ಸೇರಿಸಲು ರಾಷ್ಟ್ರಾಧ್ಯಕ್ಷರಿಗೆ, ಪ್ರಧಾನಿಗಳಿಗೆ ಮನವಿ ಸಲ್ಲಿಸಿದರು. ಆದರೆ ಪ್ರಯೋಜನವಾಗಲಿಲ್ಲ. ಇದು ಆಲೂರರಲ್ಲಿ ಕರ್ನಾಟಕದ ಬಗ್ಗೆ ಇದ್ದ

ಉತ್ಕಟವಾದ ಅಭಿಮಾನವನ್ನು ಹೇಳುತ್ತವೆ. ಸದಭಿಮಾನವು ಅತಿರೇಕವಾದರೆ ಅದು ಮದಭಿಮಾನವಾಗುತ್ತದೆ" ಎನ್ನುವ ಅವರು ಕೆಲವೆಡೆ ಅತಿರೇಕಕ್ಕೂ ಕೂಡ ಎಡೆಮಾಡಿ ಕೊಟ್ಟಿದ್ದಾರೆ, ಎನ್ನಿಸುತ್ತದೆ.

ಆಲೂರ ವೆಂಕಟರಾಯರ ಕಾಲಕ್ಕೆ ಪ್ರಸ್ತುತವೆನ್ನಿಸುತ್ತಿದ್ದ ಕರ್ನಾಟಕತ್ವದ ಜಾಗೃತಿಗೂ, ಇಂದು ನಮಗೆ ಬೇಕಿರುವ ಕರ್ನಾಟಕ ಅಭಿಮಾನಕ್ಕೂ ಸಾಕಷ್ಟು ಅಂತರವಿದೆ. ಅಂದರೆ ಇಂದು ಕರ್ನಾಟಕವು ರಾಜಕೀಯವಾಗಿ ಏಕೀಕರಣ ಹೊಂದಿ ನಾಲ್ಕೂವರೆ ದಶಕಗಳೇ ಕಳೆದಿವೆ, ಆದರೂ ಅದರ ಭಾಗಗಳು ಯಾವುದೇ ರೀತಿಯ ಅಭಿವೃದ್ಧಿಯನ್ನೂ ಹೊಂದಿಲ್ಲ. ಇಂದಿಗೂ ಅನೇಕ ಪ್ರದೇಶಗಳು ಪ್ರಾಥಮಿಕ ಅವಶ್ಯಕತೆಗಳಿಂದ ವಂಚಿತವಾಗಿವೆ. ಕರ್ನಾಟಕಕ್ಕೆ ಸೇರಬೇಕಾಗಿರುವ ಪ್ರದೇಶಗಳ ಬಗೆಗೆ ಹೋರಾಡುವುದಕ್ಕಿಂತ ಮೊದಲು ಸೇರಿರುವ ಗಡಿ ಪ್ರದೇಶಗಳಲ್ಲಿನ ಕನ್ನಡಿಗರ ಸ್ಥಿತಿಯ ಬಗೆಗೆ ಗಮನ ಹರಿಸಬೇಕಾಗಿದೆ. ಮಹಾಜನ್ ವರದಿಗಳಿಂದ ಸಮಸ್ಯೆಗಳನ್ನು, ಇತರೆ ಗಡಿಭಾಗಗಳ ಇತ್ಯರ್ಥವನ್ನು ಸಾಮರಸ್ಯದಿಂದ ಬಗೆಹರಿಸಿಕೊಳ್ಳಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಕರ್ನಾಟಕದ ಆರ್ಥಿಕಾಭಿವೃದ್ಧಿಯ ಕಡೆಗೆ ನಾವಿಂದು ಹೆಚ್ಚು ಗಮನಹರಿಸಬೇಕಾಗಿದೆ. ಕರ್ನಾಟಕದ ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಆದ್ಯತೆ ನೀಡಬೇಕೆನ್ನಿಸುತ್ತದೆ. ಹೀಗೆ ಹತ್ತು ಹಲವು ಸಮಸ್ಯೆಗಳ ಪರಿಹಾರಕ್ಕೆ ಆಲೂರರ ಕರ್ನಾಟಕತ್ವದ ಪರಿಕಲ್ಪನೆಯನ್ನು ಬಳಸಿಕೊಳ್ಳುವ ಜರೂರು ನಮಗಿಂದು ಮೊದಲಿಗಿಂತಲೂ ಹೆಚ್ಚಾಗಿದೆ ಎನ್ನಿಸುತ್ತದೆ.

'ಕನ್ನಡ ನಾಡು ಒಂದಾಗಿದೆಯಾದರೂ ಕನ್ನಡಿಗರು ಒಂದಾಗಿಲ್ಲ' ಎಂಬ ಮಾತು, ಕರ್ನಾಟಕವು ಸಂಪೂರ್ಣವಾಗಿ ಭಾವನಾತ್ಮಕ ಏಕೀಕರಣ ಸಾಧಿಸಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ. ಅಂತಹ ಭಾವನಾತ್ಮಕ ಏಕೀಕರಣದ ಹೊಣೆ ನಮ್ಮ ಮೇಲಿದೆ. ಅದಕ್ಕೆ ಆಲೂರರ ಕರ್ನಾಟಕತ್ವದ ಪರಿಕಲ್ಪನೆ ಭಿನ್ನರೀತಿ ರೂಪ ತಾಳಿದು ಇಂದಿನ ಹಲವಾರು ಸಮಸ್ಯೆಗಳನ್ನು ಬಗೆಹರಿಸಬೇಕಿದೆ. ಅಂ ಕರ್ನಾಟಕತ್ವದ ಅಭಿಮಾನವನ್ನು ಕನ್ನಡಿಗರ ಹೃದಯದಲ್ಲಿ ಮೂಡುವಂ ಮಾಡಿದವರು ಆಲೂರರೊಬ್ಬರೇ ಅಲ್ಲ. ಅವರೊಂದಿಗೆ ಅನೇ ಕನ್ನಡಾಭಿಮಾನಿಗಳು ಈ ದಿಸೆಯಲ್ಲಿ ಕೆಲಸ ಮಾಡಿದ್ದಾರೆ. ಆದರೆ ಅವರೆಲ್ಲರಿ ಕರ್ನಾಟಕದ ಪರ ಕಾರ್ಯ ಮಾಡಲು ಪ್ರೇರಕ ನೀಡಿದಾತ ಆಲೂರ ವೆಂ ರಾಯರ 'ಕರ್ನಾಟಕತ್ವ'ದ ಪರಿಕಲ್ಪನೆಯೇ ಆಗಿದೆ ಎಂದರೆ ತಪ್ಪಲ್ಲ.

***

ನಾಗೊಂಡನ ಹಳ್ಳಿಯ ಅಪ್ರಕಟಿತ ಬಂಡೆಗಲ್ಲು ಶಾಸನ

ಡಾ|| ಎಂ. ಜಿ. ಮಂಜುನಾಥ

ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿಗೆ ಸೇರಿದ ನಾಗೊಂಡನ ಹಳ್ಳಿ ಗ್ರಾಮವು ಮಾಲೂರಿನಿಂದ ಪಶ್ಚಿಮಕ್ಕೆ ಐದು ಕಿ.ಮೀ. ದೂರದಲ್ಲಿದೆ. ಗ್ರಾಮದ ಹೊರವಲಯದಲ್ಲಿ ಪೂರ್ವ ದಿಕ್ಕಿನಲ್ಲಿ ಹಲವಾರು ಬಂಡೆಗಳಿಂದ ಕೂಡಿರುವ ಸಣ್ಣ ಗುಡ್ಡವಿದೆ. ಆ ಗುಡ್ಡದಲ್ಲಿನ ಒಂದು ಹುಟ್ಟು ಬಂಡೆಯ ಮೇಲೆ ಪ್ರಸ್ತುತ ಶಾಸನವನ್ನು ಕೊರೆಯಲಾಗಿದೆ.


ಹತ್ತು ಅಡಿ ಎತ್ತರದ ಕಣ ಶಿಲೆಯ ಬಂಡೆಯ ಮೇಲೆ ಕೊರೆಯಲಾಗಿರುವ ಈ ಶಾಸನದಲ್ಲಿ ೧೬ ಸಾಲುಗಳ ಬರಹವಿದೆ.

ಶಾಸನ ಪಾಠ

೧. ಸ್ವಸ್ತಿಶ್ರೀ ಮನು ಮಹಾ
೨. ಮಂಡಳೇಶ್ವರ ಅರಿರಾಯ ವಿಭಾ
೩. ಡ ಭಾಷೆಗೆ ತಪ್ಪುವರಾಯರ
೪. ಗಂಡ ಶ್ರೀವೀರ ಹರಿಯಪ್ಪವೊ
೫. ಡೆಯರು ಪ್ರಿಥುವೀರಾಜ್ಯಮಾಡುತಿರ
೬. ಲಾಗಿ ಶ್ರೀ ವೀರಯಿಂಮಡಿ ಬುಕ್ಕರಾಯನ ಅರಮನೆಯ
೭. ತಟ್ಟೆಯ ನಾಯ್ಕ ಅಂಬರನಾಯ್ಕಂಗೆ ಮಾಸಂಡಿಯ ನಾಡನಾ
೮. ಗೊಂಡನಹಳ್ಳಿ ಸಲ್ಲುವ ದಿನದಲಿ ಪ್ರಮೋದೂತ ಸಂವತ್ಸ
೯. ರದ ಪ್ರುಷ್ಯ ಸು ೧೨ ಸೋ ಓರಾಮಜೀಯನ ಮಗ
೧೦. ಚೊಕ್ಕಜೀಯನು ಕಟ್ಟಿಸಿದ ಚೊಕ್ಕಸಮುದ್ರಕ್ಕೆ ಕೊಟ್ಟ ಕ
೧೧. ಟ್ಟೆ ಗೊಡಗೆ ಗದ್ದೆ ಹತ್ತು ಕೊಳಗವು ಸಲ್ಲ ಬಹೆವೂ
೧೨. ಇಧರ್ಮ್ಮವನು ಅಳುಹಿದಡೆ ಗಂಗೆಯ ತಡಿಯ ಕಪಿಲೆಯ
೧೩. ಕೊಂದ ಪಾಪದಲಿ ಹೋಹರು ಇಧರ್ಮ್ಮಕ್ಕೆ ನಾಗಿ
೧೪. ಜೀಯ (ನ) ಮಕ್ಕಳುಗಳು ಮುಂತಾಗಿ ಕೊಟ್ಟ
೧೫. ಸಾಕ್ಷಿಮಂಗಳ ಮಹಾಶ್ರೀಶ್ರೀ
೧೬. ಅಲ್ಪನ ಬರಹ.

ಶಾಸನದ ಸಾರಾಂಶ

ವಿಜಯನಗರದ ಅರಸ ವೀರ ಹರಿಹರರಾಯ ರಾಜ್ಯಭಾರ ಮಾಡುತ್ತಿ
ಕಾಲದಲ್ಲಿ ಬುಕ್ಕರಾಯನು ಕೋಲಾರ ಜಿಲ್ಲೆಯ ಮುಳಬಾಗಿಲಿನಿಂದ ರಾಜ್ಯಭಾ
ಮಾಡುತ್ತಿದ್ದನು. ಆ ಬುಕ್ಕರಾಯನ ಅರಮನೆಯ ಅಧಿಕಾರಿಗಳಾದ ತಟ್ಟ
ನಾಯಕ, ಅಂಬರ ನಾಯಕರಿಗೆ ಮಾಸಂಡಿಯ ನಾಡಿನ ನಾಗೊಂಡನಹಳ್ಳಿ ಸೇರಿ



ಕಾಲದಲ್ಲಿ ಪಿರುಮಿಜೀಯನ ಮಗ ಚೊಕ್ಕಜೀಯನು ಕಟ್ಟಿಸಿದ ಚೊಕ್ಕಸಮು
ಹತ್ತು ಕೊಳಗ ಗದ್ದೆಯನ್ನು ಕೊಡುತ್ತೇವೆಂದು ತಟ್ಟಿಯನಾಯ್ಕ ಅಂಬರನಾ
ಈ ಶಾಸನವನ್ನು ಬರೆಸಿದ್ದಾರೆ. ಈ ಧರ್ಮಕ್ಕೆ ನಾಗಿಜೀಯನ ಮ
ಸಾಕ್ಷಿಯಾಗಿದ್ದಾರೆ. ಈ ಶಾಸನವನ್ನು ಅಲ್ಲಪ್ಪನೆಂಬುವನು ಬರೆದಿರುವು
ಶಾಸನದ ಕಡೆಯ ಸಾಲಿನಿಂದ ತಿಳಿದುಬರುತ್ತದೆ. ಈ ಸಾಲಿನಲ್ಲಿ 'ಅಲ್ಲಪ್ಪ'ನೆ
ದನ್ನು ಬರೆಯುವುದಕ್ಕೆ ಬದಲಾಗಿ 'ಅಲ್ಪ'ನೆಂಬ ಬರಹವಿದೆ. ಇದು ಕಂಡ
ಕಾರನ ದೋಷವೆನ್ನಬೇಕಾಗುತ್ತದೆ.

ಐತಿಹಾಸಿಕ ಮಹತ್ವ

ವಿಜಯನಗರ ಸಾಮ್ರಾಜ್ಯದ ಅಧಿಪತಿಯಾಗಿದ್ದ ಹರಿಹರರಾ
ಚಕ್ರವರ್ತಿಯಾಗಿ ಆಳ್ವಿಕೆ ಮಾಡುತ್ತಿದ್ದ ಕಾಲದಲ್ಲಿ ಇಮ್ಮಡಿ ಬುಕ್ಕರಾ
ಕೋಲಾರ ಜಿಲ್ಲೆಯ ಮುಳಬಾಗಿಲನ್ನು ರಾಜಧಾನಿಯನ್ನಾಗಿಸಿಕೊಂಡು 'ಮುಳವಾ
ರಾಜ್ಯವನ್ನು ಆಳುತ್ತಿದ್ದನು. ಆ ಸಂದರ್ಭದಲ್ಲಿ ಬುಕ್ಕರಾಯನ ಅರಮ
ಮುಳಬಾಗಿಲಿನಲ್ಲಿದ್ದುದು ಇನ್ನೂ ಹಲವಾರು ಶಾಸನಗಳಲ್ಲಿ ದಾಖಲಾಗಿರುವು
ಗಮನಿಸಬಹುದು. ಆ ಅರಮನೆಯ ರಕ್ಷಣೆಯ ಜವಾಬ್ದಾರಿ ಹೊತ್ತಿದ್ದ ತ
ನಾಯ್ಕ, ಅಂಬರನಾಯ್ಕರು ಮಾಸಂಡಿನಾಡಿನ ನಾಗೊಂಡನಹಳ್ಳಿಯ ಒ
ಹೊಂದಿದ್ದುದು ಪ್ರಸ್ತುತ ಶಾಸನದಿಂದ ತಿಳಿಯುತ್ತದೆ.

ಆ ಸಂದರ್ಭದಲ್ಲಿ ನಾಗೊಂಡನಹಳ್ಳಿಯಲ್ಲಿ ಪಿರುಮಿಜೀಯನ ಮಗ
ಜೀಯನು ಒಂದು ಕೆರೆಯನ್ನು ಕಟ್ಟಿಸಿದನು. ಅದರ ಹೆಸರು 'ಚೊಕ್ಕಸ

ಂಬುದಾಗಿ ಶಾಸನವು ದಾಖಲಿಸಿದೆ. ಆ ಚಿಕ್ಕ ಸಮುದ್ರದ ನಿರ್ವಹಣೆಗೋಸ್ಕರ ಟ್ಟಿ ಕೊಡುಗೆಯಾಗಿ ಹತ್ತು ಕೊಳಗ ಧಾನ್ಯವನ್ನು ಬೆಳೆಯಬಹುದಾದಷ್ಟು ಮಿಯನ್ನು ಸಲ್ಲಿಸಿ ಬರುತ್ತೇವೆ ಎಂಬುದಾಗಿ ತಟ್ಟಿಯನಾಯ್ಕ ಅಂಬರನಾಯ್ಕರು ಶಾಸನವನ್ನು ಹಾಕಿಸಿದ್ದಾರೆ. ಈ ಧರ್ಮವನ್ನು ನಾಶಮಾಡಿದರೆ ಗಂಗೆಯ ತದಲ್ಲಿ ಕಪಿಲೆಯನ್ನು ಕೊಂದ ಪಾಪದಲ್ಲಿ ಹೋಗುತ್ತಾರೆ ಎಂಬುದಾಗಿ ಪಾಶಯವನ್ನು ಹಾಕಿಸಲಾಗಿದೆ. ಈ ದಾನಕ್ಕೆ ನಾಗಿಜೀಯನ ಮಕ್ಕಳು ಕ್ಷಿಯಾಗಿದ್ದಾರೆ.

ಸನದ ಕಾಲ

ಪ್ರಸ್ತುತ ಶಾಸನವು ಪ್ರಮೋದೂತ ಸಂವತ್ಸರದ ಪುಷ್ಯ ಶುದ್ಧ ದ್ವಾದಶಿ ೕಮವಾರದಂದು ರಚಿತವಾಗಿದೆ. ಇದು ಕ್ರಿ.ಶ. ೧೩೯೦ರ ಜನವರಿ ೨೪ರ ೕಮವಾರಕ್ಕೆ ಸರಿಹೊಂದುತ್ತದೆ.

ಸನದ ಶಿಲ್ಪ

ಶಾಸನ ಪಾತದ ಮೇಲ್ಭಾಗದಲ್ಲಿ ಸೂರ್ಯ, ಚಂದ್ರರ ಮಧ್ಯದಲ್ಲಿ ವಲಿಂಗ, ಕಠಾರಿಗಳ ರೇಖಾ ಚಿತ್ರಗಳಿವೆ.

ಂಸ್ಕೃತಿಕ ಮಹತ್ವ

ಮಧ್ಯಕಾಲೀನ ಕರ್ನಾಟಕದಲ್ಲಿ ಕೆರೆ ಕಟ್ಟೆಗಳನ್ನು ಕಟ್ಟಿಸಿ ಅವುಗಳ ರ್ವಹಣೆಗೋಸ್ಕರ ದಾನದತ್ತಿಗಳನ್ನು ನೀಡುತ್ತಿದ್ದ ಪದ್ಧತಿ ವ್ಯಾಪಕವಾಗಿತ್ತು. ನಗಳ ಹಾಗೂ ಪ್ರಾಣಿಪಕ್ಷಿಗಳ ಉಪಯೋಗಕ್ಕಾಗಿ ನೀರಿನ ಸೌಕರ್ಯವನ್ನು ದಗಿಸಿಕೊಡುವುದು ಪುಣ್ಯದ ಕಾರ್ಯ ಎಂಬುದಾಗಿ ತಿಳಿದಿದ್ದ ಜನರು ಕಟ್ಟಿಸಿದ ತಹ ನೂರಾರು ಕೆರೆಗಳ ಬಗ್ಗೆ ವಿವರಗಳನ್ನು ನೀಡುವಂಥಹ ನೂರಾರು ಸನಗಳು ಕರ್ನಾಟಕದಾದ್ಯಂತ ದೊರೆಯುತ್ತವೆ. ಕರ್ನಾಟಕದಲ್ಲಿ ಅತಿ ಹೆಚ್ಚು ಗಳನ್ನುಳ್ಳ ಜಿಲ್ಲೆ ಕೋಲಾರ ಎಂಬುದನ್ನು ಈ ಸಂದರ್ಭದಲ್ಲಿ ನೆನೆಯಬಹುದು. ಯನಗರದ ಆಳ್ವಿಕೆಯ ಕಾಲಘಟ್ಟದಲ್ಲಿ ಕೋಲಾರ ಜಿಲ್ಲೆಯಾದ್ಯಂತ ನಿರ್ಮಾಣ ಗಿರುವ ನೂರಾರು ಕೆರೆಗಳು ಇಂದಿಗೂ ನಮಗೆ ನೋಡಲು ಸಿಗುತ್ತವೆ. ಈ ಗಳ ನಿರ್ಮಾಣದ ಬಗ್ಗೆ ಶಾಸನಾಧಾರಗಳೂ ಸಹ ದೊರೆಯುವುದು ಶೇಷ

***

* ಕ್ಷೇತ್ರಕಾರ್ಯದ ವೇಳೆಯಲ್ಲಿ ನೆರವು ನೀಡಿದ ವಿದ್ಯಾರ್ಥಿಮಿತ್ರ ಎನ್. ಚಂದ್ರಪ್ಪ ಮತ್ತು ಕುಟುಂಬದವರಿಗೆ ವಂದನೆಗಳು.

ಕಲ್ಯಾಣ ಚಾಲುಕ್ಯ ದೊರೆ ಇಮ್ಮಡಿ ಜಯಸಿಂಹನ ಪಿರಿಯರಸಿ ಸುಗ್ಗಲಾದೇವಿ : ಕೆಲವು ಟಿಪ್ಪಣಿಗಳು

ಡಾ|| ಶಿ. ನಾಗಭೂಷಣ

ಕನ್ನಡ ನಾಡಿನ ಶಾಸನಗಳಲ್ಲಿ ಮತ್ತು ಕಾವ್ಯ ಪುರಾಣಗಳಲ್ಲಿ ಸುಗ್ಗಲೆ, ಸುಗ್ಗಲಾದೇವಿ ಹೆಸರಿನ ಹಲವಾರು ಮಹಿಳೆಯರು ತಮ್ಮ ವ್ಯಕ್ತಿತ್ವ, ನಿಷ್ಠೆ, ಆದರ್ಶಗಳಿಂದ ಉಲ್ಲೇಖಿಸಲ್ಪಟ್ಟಿದ್ದಾರೆ. ಅವರುಗಳಲ್ಲಿ ಕಲ್ಯಾಣ ಚಾಲುಕ್ಯ ದೊರೆ ಇಮ್ಮಡಿ ಜಯಸಿಂಹನ ಪಿರಿಯರಸಿ ಸುಗ್ಗಲಾದೇವಿಯ ಹೆಸರು ಕರ್ನಾಟಕ ಸಂಸ್ಕೃತಿಯಲ್ಲಿ ಆದರ್ಶಪ್ರಾಯವಾದುದು ಮತ್ತು ಅನುಕರಣೀಯವಾದುದು. ಹನ್ನೊಂದನೇ ಶತಮಾನದಲ್ಲಿ ಪರಸಮಯಿಗಳ ನಿಗ್ರಹಿಸಿ ಶೈವ ಸಮಯವನ್ನು ಉದ್ಧರಿಸಿದ ಶರಣೆ ಸುಗ್ಗಲೆಯು ದೇವರ ದಾಸಿಮಯ್ಯನ ಶಿಷ್ಯೆ ಹಾಗೂ ಕಲ್ಯಾಣ ಚಾಲುಕ್ಯ ದೊರೆ ದೇಸಿಂಗರಾಯನ ಪಟ್ಟದ ರಾಣಿ. ಈಕೆ ತನ್ನ ಆದರ್ಶ ರಾಜ ಪತ್ನಿತ್ವ ಹಾಗೂ ಧಾರ್ಮಿಕ ಕಾರ್ಯಗಳಿಂದಾಗಿ ಶಾಸನಗಳಲ್ಲಿ ಮಾತ್ರವಲ್ಲದೆ ಕನ್ನಡ ಕಾವ್ಯಗಳಲ್ಲಿ ಅದರಲ್ಲೂ ವೀರಶೈವ – ಕಾವ್ಯ ಪುರಾಣಗಳಲ್ಲಿ ಉಲ್ಲೇಖಿಸ ಲ್ಪಟ್ಟಿದ್ದಾಳೆ. ಕನ್ನಡನಾಡಿನ ಮಧ್ಯಕಾಲೀನ ಧಾರ್ಮಿಕ ಚರಿತ್ರೆಯಲ್ಲಿ ರಾಣಿ ಸುಗ್ಗಲೆಯ ಹೆಸರು ಗಮನಾರ್ಹವಾದುದು. ಹನ್ನೊಂದನೇ ಶತಮಾನದಲ್ಲಿ ಅ ವೇಳೆಗಾಗಲೇ ಅಸ್ತಿತ್ವದಲ್ಲಿದ್ದ ಜೈನಮತದ ವಿರುದ್ಧ ಹೋರಾಡಿ, ಶೈವ ಮತ ಪ್ರಸಾರಕಿಯಾಗಿಯೂ ದೇವರದಾಸಿಮಯ್ಯನ ಶೈವತತ್ತ್ವ ಸಿದ್ಧಾಂತಗಳ ಪ್ರಸರಣಕ್ಕೆ ರಾಜಾಶ್ರಯ ದೊರಕಿಸಿ ನೆಲೆ ನಿಂತವಳಾಗಿದ್ದಾಳೆ.

ಕಲ್ಯಾಣ ಚಾಲುಕ್ಯ ದೊರೆ ಇಮ್ಮಡಿ ಜಯಸಿಂಹನ ಪಟ್ಟಮಹಿಷಿಯಾದ ಶರಣೆ ಸುಗ್ಗಲೆಯು ವೀರಶೈವ ಕಾವ್ಯ – ಪುರಾಣಗಳಲ್ಲಿ ಉಲ್ಲೇಖಿತಳಾಗುವುದ ಕ್ಕಿಂತ ಮೊದಲೆ ಸಮಕಾಲೀನ ಶಾಸನಗಳಲ್ಲಿಯೇ ಶೈವಧರ್ಮ ಪ್ರಸಾರಕಿಯಾಗಿ ಬಿಂಬಿತಳಾಗಿದ್ದಾಳೆ. ಸುಗ್ಗಲಾದೇವಿಯ ಶೈವಮತ ನಿಷ್ಠೆಯನ್ನು ಕುರಿತು ಕ್ರಿ.ಶ ೧೦೨೮ರ ದೇವೂರ ಶಾಸನವು ಸೂಚಿಸಿದೆ[೧]. ಈಕೆಯು ದೇವೂರಿನ ಮಾರಸಿಂಗೇ ಶ್ವರ ದೇವಾಲಯದ ಉಸ್ತುವಾರಿಯ ಸಲುವಾಗಿ ಪಾಶುಪತ ಯೋಗಾಚಾರ್ಯ ಶ್ರೀ ಮಧ್ವಸ್ಮರಾಶಿ ಪಂಡಿತದೇವರಿಗೆ ೧೦೦ ಮತ್ತರು ಭೂಮಿಯನ್ನು ದ

೧ S.I.I Vol No XX. ಶಾಸನ ಸಂ. ೨೩ ದೇವೂರ [ಸಿಂದಗಿ]

ಯಾಗಿ ನೀಡಿದ ವಿವರವನ್ನು ಉಲ್ಲೇಖಿಸಿದೆ. ರಾಣಿ ಸುಗ್ಗಲಾದೇವಿಯು ಶೈವ ಧರ್ಮದವಳಾಗಿದ್ದಳು ಎಂಬುದನ್ನು ದೇವೂರಿನ ಶಾಸನವು ದೃಢೀಕರಿಸುವುದರಿಂದ ಈಕೆಯು ಬಸವಪೂರ್ವ ಯುಗದ ಪವಾಡ ಪುರುಷ, ಪರಸಮಯಿಗಳ ವಿರುದ್ಧ ಹೋರಾಡಿ ಶೈವಮತವನ್ನು ರಕ್ಷಿಸಿದ ವೀರ ಮಾಹೇಶ್ವರ ನಿಷ್ಠ ದೇವರ ದಾಸಿಮಯ್ಯನ ಶಿಷ್ಯಳಾಗಿದ್ದಳು ಹಾಗೂ ಶೈವಮತವನ್ನು ಸ್ವೀಕರಿಸಿದ್ದಳು ಎನ್ನುವ ಕನ್ನಡ – ತೆಲುಗು ವೀರಶೈವ ಕಾವ್ಯ – ಪುರಾಣಗಳಲ್ಲಿಯ ಪರೋಕ್ಷ ಪ್ರಸ್ತಾಪಕ್ಕೆ ಸ್ವಲ್ಪ ಮಟ್ಟಿಗೆ ಐತಿಹಾಸಿಕತೆ ಇದೆ ಎಂದೆನಿಸುತ್ತದೆ.

ಪಾಲ್ಕುರಿಕೆ ಸೋಮನಾಥನ ತೆಲುಗು ಬಸವ ಪುರಾಣಮು ಕೃತಿಯನ್ನು ಅನುಸರಿಸಿ ಕನ್ನಡದಲ್ಲಿ ರಚಿತವಾದ ಭೀಮಕವಿಯ ಬಸವ ಪುರಾಣ, ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣ, ಷಡಕ್ಷರ ಕವಿಯ ಬಸವರಾಜ ವಿಜಯ ಪುರಾಣ ಕೃತಿಗಳೂ, ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿ, ಶಾಂತಲಿಂಗ ದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ, ಉತ್ತರ ದೇಶದ ಬಸವಲಿಂಗನ ಬಸವೇಶ್ವರ ಪುರಾಣ, ಕಥಾಸಾಗರ, ಇತ್ಯಾದಿ ಕೃತಿಗಳಲ್ಲಿ ಸುಗ್ಗಲೆಯ ಬಗೆಗೆ ಸ್ವಲ್ಪ ಮಟ್ಟಿಗೆ ಮಾಹಿತಿ ಸಿಗುತ್ತಿದೆ.

ಇಮ್ಮಡಿ ಜಯಸಿಂಹನು ಜೈನಧರ್ಮವನ್ನು ಅನುಸರಿಸಿದ್ದನು ಎಂಬುದು, ಬಸವ ಪುರಾಣದ,

'ಸ್ರಾವಕನಪಹರಿಸಿ ಸುಗ್ಗಲ
ದೇವಿಯರ ಗುರು ದಾಸಿಮಯ್ಯನು
ಶೈವನಂ ಮಾಡಿದನೊಲಿದು ದೇಸಿಂಗರಾಯನು'[೭] ಎಂಬ

ಚನ್ನಬಸವ ಪುರಾಣದ,

'ಜಿನಭಕ್ತನೆನಿಸುವ ದೇಸಿಂಗ ಬಲ್ಲಾಳನಾತನ ಮಡದಿ ಸುಗ್ಗಲೆಯು ಶಿವಭಕ್ತೆ...'[೮] ಎಂಬ

ಭೈರವೇಶ್ವರ ಕಾವ್ಯ ಕಥಾಮಣಿ ಸೂತ್ರರತ್ನಾಕರದ,

'ಹೊಟ್ಟಲಕೆರೆಯೆಂಬ ಪುರದಲ್ಲಿ ಸುಗ್ಗಲಾದೇವಿಯರು ದೇಸಿಂಗರಾಯನೆಂಬ ಜೈನನ ಮದುವೆಯಾಗಿರಲು'[೯] ಎಂಬ ಹೇಳಿಕೆಗಳಿಂದ ತಿಳಿದುಬರುತ್ತದೆ.

---

[೭] ಬಸವ ಪುರಾಣ [ಸಂ|| ಆರ್. ಸಿ. ಹಿರೇಮಠ] ಸಂ. ೫೦. ಪು. ೭೬೮

[೮] ಚೆನ್ನಬಸವಪುರಾಣ [ಗದ್ಯಾನುವಾದ : ಎಂ. ಚಂದ್ರಶೇಖರ್] ಕಾಂ.೨. ಸಂ. ೫೭ ಪ. ಸಂ. ೧೧

[೯] ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರದ ರತ್ನಾಕರ [ಸಂ|| ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ] ಭಾಗ–೨, ಪು. ೬೫

ಇಮ್ಮಡಿ ಜಯಸಿಂಹನು ಮೊದಲು ಜೈನನಾಗಿದ್ದು, ಸುಗ್ಗಲೆಯು ತನ್ನ ಗುರು ದೇವರ ದಾಸಿಮಯ್ಯನ ಪ್ರಭಾವದಿಂದ ಶೈವಮತಕ್ಕೆ ಪರಿವರ್ತಿಸಿದಳು ಎಂಬ ವೀರಶೈವ ಕಾವ್ಯ ಪುರಾಣಗಳಲ್ಲಿಯ ಉಲ್ಲೇಖಿವನ್ನು ಈತನನ್ನು ಕುರಿತಾದ ಶಾಸನಗಳು ಖಚಿತವಾಗಿ ಸಮರ್ಥಿಸದಿದ್ದರೂ ಇಮ್ಮಡಿ ಜಯಸಿಂಹನು ಜೈನ ಧರ್ಮದ ಆರಾಧಕನಾಗಿದ್ದನು ಎಂಬುದನ್ನು ಶ್ರವಣಬೆಳಗೊಳ ಶಾಸನವು ಪರೋಕ್ಷವಾಗಿ ಸೂಚಿಸುತ್ತದೆ.[1] ಈ ಶಾಸನದಲ್ಲಿಯ 'ತತ್ರಧರ್ಮದಾ ಮಲಧಾರಿ ಮುನೀಂದ್ರೋ ಸೌಗುಣ ಚಂದ್ರಾಭಿದಾನಕಃ ಬಲಿಪುರೆ ಮಲ್ಲಿಕಾ ಮೋದ ಶಾಂತೀ ಚರಣಾರ್ಚಕಂ' ಎಂಬ ಉಲ್ಲೇಖದ ಪ್ರಕಾರ ಬಲಿಪುರದ ಅರಸ ಮಲ್ಲಿಕಾ ಮೋದನು ಜೈನಾಚಾರ್ಯನಾದ ಗುಣಚಂದ್ರನ ಚರಣಾರ್ಚಕನಾಗಿದ್ದನು ಎಂಬುದಾಗಿ ತಿಳಿದು ಬರುತ್ತದೆ. ಇಮ್ಮಡಿ ಜಯಸಿಂಹನು ಬಳ್ಳಿಗಾವೆಯಲ್ಲಿ ರಾಜ್ಯ ವಾಳುತ್ತಿದ್ದಾಗ ಆತನನ್ನು ಮಲ್ಲಿಕಾಮೋದ ಎಂಬ ಹೆಸರಿನಿಂದ ಬಳ್ಳಿಗಾವೆಯ ಕ್ರಿ.ಶ. ೧೦೧೯, ೧೦೩೫, ೧೦೩೮ರ ಶಾಸನಗಳು ಉಲ್ಲೇಖಿಸಿವೆ[2]. ಆದಾಗ್ಯೂ ಇಮ್ಮಡಿ ಜಯಸಿಂಹನನ್ನು ಕುರಿತ ಶಾಸನಗಳಲ್ಲಿ ಹೆಚ್ಚಿನವು (ಸು. ೩೩ ಶೈವಶಾಸನಗಳೇ ಆಗಿವೆ. ಬಹುಶಃ ಈ ಶಾಸನಗಳು ಸುಗ್ಗಲಾದೇವಿಯ ಒತ್ತಾಯ ದಿಂದ ಶೈವ ಧರ್ಮಕ್ಕೆ ನಿಷ್ಠೆಯನ್ನು ವ್ಯಕ್ತಪಡಿಸುವ ಕಾಲಕ್ಕೆ ಸೇರಿದವುಗಳಾಗಿ ಬೇಕು ಎಂದೆನಿಸುತ್ತದೆ.

ಇಮ್ಮಡಿ ಜಯಸಿಂಹನು ಪೊಟ್ಟಲ ಕೆರೆಯನ್ನು (ಈಗಿನ ನಿಜಾಂ ನಾ ನಲ್ಲಿಯ ಹೈದರಾಬಾದ್-ಜೈರಾಬಾದ್ ದಾರಿಯ ನಡುವೆ ಇರುವ ಪೊಟ್ಲಚೆರು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸುತ್ತಿದ್ದ ಕಾಲದಲ್ಲಿ ರಾ ಸುಗ್ಗಲಾದೇವಿಯ ಶೈವ ಮತ ಪ್ರಸಾರ ಚಟುವಟಿಕೆಗಳು ತೀವ್ರಗೊಂಡುದ್ದ ಬಗೆಗೆ ವೀರಶೈವ-ಕಾವ್ಯ ಪುರಾಣಗಳಲ್ಲಿಯ ವಿವರಗಳು ಸ್ಥಿರೀಕರಿಸುತ್ತ ಪಾಲ್ಕುರಿಕೆ ಸೋಮನಾಥನ ಬಸವಪುರಾಣಮು ಕೃತಿಯಲ್ಲಿ ಪ್ರಪ್ರಥಮವಾ ಸುಗ್ಗಲೆಯ ಶಿವಮತ ಪ್ರಸಾರ ಚಟುವಟಿಕೆಗಳ ವಿವರ ಕಂಡುಬಂದಿದ್ದು, ಅದ ಕೆಳಕಂಡಂತೆ ಸಂಗ್ರಹಿಸಲಾಗಿದೆ.

ಪೊಟ್ಲಚೆರುವೆಂಬ ಪುರಿಯಲ್ಲಿದ್ದ ಏಳ್ನೂರ ಬಸದಿಗಳ ಕಟ್ಟಿ ಕೆಳಕಂಡ ಮೆರೆಯುವಿಪ್ಪತ್ತು ಸಾವಿರ ಜಿನ ಮುನಿಗಳೋಲೈಪ ಜಿನಕುಲ ಗುರುಪೊಟ್ಟ ಭೂಪತಿಗೆ ಮುಖ್ಯ ಆಚಾರ್ಯನಾಗಿದ್ದನು. ದೊರೆಯ ಸತಿ ಸುಗ್ಗಲಾದೇವಿ

---

[1] E. C. Vol. No. II ಶ್ರವಣ ಬೆಳ್ಗೊಳ ಸಂ. ೭೯. ಪು. ೫೭

[2] ಬಿ. ಆರ್. ಗೋಪಾಲ, ಕಲ್ಯಾಣ ಚಾಲುಕ್ಯರು ಮತ್ತು ಕಲಚೂರಿಗಳು ಪು. ೧೧

ದೇವರ ದಾಸನ ವರ ದಯಾನಿಂದ ಸದ್ಭಕ್ತೆ ಯಾದಳೆಂದಾಗಿ ಗುರುವಾಗಿ ಸ್ವೀಕರಿಸಿದ್ದಳು. ಇಲ್ಲಿಯ ಸ್ಥಿತಿಯನ್ನು ಗುರು ದಾಸಿಮಯ್ಯನಿಗೆ ಬಿನ್ನವಿಸಿ, ರವಮಾಡಿಕೊಂಡು ಜಂಗಮಾರ್ಚನೆಯ ಮಾಡುವಾಗ ರಾಜ ಜೈನಗುರುಗಳು ವನಿತೆಗಿಂತೆಂದ,

'ಸತಿಗೊಂದು ಗತಿಯು ತಾ ಪತಿಗೊಂದು ಗತಿಯು
ಯಾವ ಲೋಕದಲಾದರಿಹುದೇನು ಸತಿಯೇ?
ಎಲ್ಲಿಯು ಗುರುಗಳು ಹಿಂದಿನ ಬುಧರು
ಬೇಗನೆ ಕಳುಹಿಸು ಜೈನರು ಕೇಳ
ವಿಪರೀತವಹುದಿನ್ನು ಹೆಚ್ಚು ಮಾತೇಕೆ?
ನಿಮ್ಮ ಸ್ವಾಮಿಗಳ ಕಳುಹಿಸೆನಲು'

ಇದಕ್ಕೆ ಪ್ರತಿಯಾಗಿ ಸುಗ್ಗಲಾ ದೇವಿಯು,

ಪುರುಷಗೆ ಸತಿಗಾದರೊ ಮಾರ್ಗವೊಂದೆ
ಗುರು ಶಿಷ್ಯರಿಗೆ ಬೇರೆ ಮಾರ್ಗಗಳುಂಟೆ
ಮದುವೆಯ ದಿನವೆನಗಿತ್ತ ಭಾಷೆಯನು
ನೀನೆನಪಿಲೊಳಿಡಲು ಹೆಚ್ಚಿನದೇಕೆ?
ಮಾಡಿಕೋ ಮತ್ತೊಬ್ಬ ಭಾರ್ಯೆಯ ನೀನು
ಬಿಡು ನನ್ನ ಮೃಡನ ಬಿಟ್ಟೆಲ್ಲಿಗೆ ನಾನು
ಇಲ್ಲಿರಲೊಲ್ಲೆನು ವೇದ ಶಾಸ್ತ್ರಾದಿ
ವಾದತರ್ಕ ಪ್ರತಿವಾದಗಳಿಂದ

ಎಂದು ವಾದವನ್ನು ಹೂಡುತ್ತಾಳೆ. ಅಲ್ಲದೆ ಸುಗ್ಗಲೆಯು ತನ್ನ ಗುರುವಿಗೆ ಅರಸನ ಸಭೆಯಲ್ಲಿ ಉನ್ನತಾಸನವನ್ನಿಕ್ಕಿ ಮೂರ್ತವಂ ಮಾಡಿಸಿ ದಾಸಯ್ಯನ ಪಾದಗಳ ನೊತ್ತುತ್ತಲ್ಲಿ ಇರಲು, ಜೈನ ಮುನಿಗಳು ಬಂದು 'ದಾಸಯ್ಯಗಳೇ, ನಿಮ್ಮ ರಾಮನಾಥನು ಅಣೋರಣೀಯಾನ್ ಮಹತೋ ಮಹೀಯಾನ್' ಎಂಬ ಶ್ರುತಿಯುಂಟೆಂಬರಿ ಸರ್ವತ್ರಗತನಹುದೆ? ಎನಲು, ಅಹುದಹುದು, ಅಲ್ಲದಿರ್ದೊಡೆ ಈ ಚರಾಚರಕ್ಕೆ ಚೈತನ್ಯವೆಲ್ಲಿದೆನಲು ಭ್ರಷ್ಟರಾದ ಜೈನರೆಂದರು, ಭುವನವೆಲ್ಲ ಶಿವನಾದೊಡೆ ಮಲಮೂತ್ರಗಳನ್ನೆಲ್ಲಿ ಬಿಡುವಿರಿ? ಎಂದು ಕೇಳಲು, ಅದರಿಂಬ ಬೋಜಾವೆಂಬೆಂದೊಬ್ಬ ಶ್ರಮಣನ ಕರೆದು, 'ನಿನ್ನ ಜಿಹ್ವೆಯಲ್ಲಿ ಶಿವನುಂಟೆ' ಎಂದು ಕೇಳಲು ಅವನು ಇಲ್ಲವೆನುತ್ತ ತಲೆದೂಗಲು, 'ಇಲ್ಲ' ಅವನ ತಲೆಯಂ ಮೆಟ್ಟಿ ಶಿವನಿಲ್ಲವೆಂಬವನ ಬಾಯಿ ಮಲವಡವಾಗಿ ಮಲಮೂತ್ರಗಳ ಬಿಡುವ ತಾವು ಮಗೆಂದು ದಾಸಯ್ಯನು ಆ ವಾದಿಗಳ ಖಂಡಿಸಿ ಮುಡಿಯಲು ಮುಂದುವರಿದು,

ರಾಮನಾಥನು ಸರ್ವಗನಲ್ಲಡಗಿದ್ದು
ಭೂಮಿಯ ಭಕ್ತರು ಹೊಂದದೆಯಿರಲು
ಅಪ್ರಸಿದ್ಧದ ಮಾತನಾಡ ಬೇಕೀಗ
ಸುಪ್ರಸಿದ್ಧದ ದೃಷ್ಟಿ ಪ್ರತ್ಯಯದಿಂದ
ತೋರಿಸುವೆನು ಕೇಳಿದರೆ ನೀವು ಈಗ
ಈ ಪೊಟ್ಟಲಕೆರೆಯಲ್ಲಿ ಗಣಿತವಾಗಿರುವ
ಬಸದಿಯೇಳ್ನೂರನಾನೊಡೆಸಿ ಹಾಕುವೆನು
ಪಶುಗಳೆ ನಿಮ್ಮನೇನೆಂದು ಸೋಲಿಸಲಿ ಎನಲು

ಅದಕ್ಕೆ ಪ್ರತಿಯಾಗಿ ಜೈನರು
ದೃಷ್ಟಾಂತ ವೀಗಲೇ ಆಗಲಿ ದೃಷ್ಟ
ದುಷ್ಟೋರಗವನೀಗ ಹಿಡಿಸುವೆವೆನುತ
ವಾಸುಕಿಯಂತಹ ಪಟುನಾಲಿಗೆಗಳ
ವಿಷದಿಂದ ಕೊಲ್ಲುವ ಘೋರ ಸರ್ಪವನು
ಗಡಿಗೆಯೊಂದರಲಿಟ್ಟು ಇಹನೇನಿದರಲಿ
ಮೃಡಸರ್ವಗತನೆಂದು ಹೇಳುವೆ

ಎನಲು, ಆದಕ್ಕೆ ದಾಸಿಮಯ್ಯನು

'ಇಹನವನು ಮಾತವೇತಕೆ ಘಟದೊಳಗು ಇಹನೆಲ್ಲರಲಿ ಸರ್ವಗತನು' ಎನುತ ಪುರಾತನ ಮಹಾಭಕ್ತಜನ ಪಾದಪದ್ಮ ಸಂಸ್ಮರಣಾತ್ಮನಾಗಿ ಘಟಕದಲ್ಲಿ ಭಯಂಕರವಾಗಿದ್ದ ಸರ್ಪನ ಮೇಲೆ ಹಸ್ತನು ಮಡಗಿ ಸ್ಫಟಿಕ ಪ್ರಕಾರದ ಲಿಂಗವಂ ಮಾಡಿ ಅದಕ್ಕೆ 'ಉತ್ತರನಾಥ' ಎಂಬ ಪೆಸರಿಟ್ಟೂ ಪೊಟ್ಟಲಕೆರೆಯಲ್ಲಿ ಏಳ್ನೂರ ಬಸದಿಗಳನ್ನು ಒಡೆದು ಹಾಕಿ ಬಲ್ಲಹನ [ಇಮ್ಮಡಿ ಜಯಸಿಂಹ] ಸಂತೋಷದಲ್ಲಿ ಲಿಂಗಸಹಿತನ ಮಾಡಲು' ಎಂಬ ವಿವರ ಪ್ರಥಮ ಬಾರಿಗೆ ನಮೂದಿತವಾಗಿದೆ.

ಚನ್ನಬಸವ ಪುರಾಣದಲ್ಲಿ,

ಜನಭಕ್ತನೆನಿಪ ದೇಸಿಂಗ ಬಲ್ಲಾಳನಾ
ತನ್ನ ಮಹದಿ ಸುಗ್ಗಲೆಯು ಶಿವಭಕ್ತೆ ತನ್ನ ಗುರು
ವೆ[illegible] ಜಿನರ ಕೊಡೆವಾದಂತೆರ್ದು ಪೆಟ್ಟಿಗೆಯೊಳು
ತೊನೆವ ಘಟಸರ್ಪನಂ ಚಂದ್ರಕಾಂತದ ಲಿಂಗ
[illegible] ಮಾಡಿ [illegible] ಜೈನಗಾನ್ನೆಳಂ ಮಾಡಿ
[illegible]ಯನಂದು ಶಿವಾ[illegible]ಮಂ ಮಾಡಿದಳೆನೆಂಬೆನಚ್ಚರಿಯನು

ಚನ್ನಬಸವ ಪುರಾಣ (ಗದ್ಯಾನುವಾದ ಎಂ. ಚಂದ್ರಶೇಖರ) ಕಾಂ. ೩. ಸಂ. ೫೭. ಪ. ೨೨. ೧೧

ಎಂದು ಒಂದು ಷಟ್ಪದಿ ಪದ್ಯದಲ್ಲಿ ಸುಗ್ಗಲೆಯ ಶಿವಭಕ್ತಿಯ ನಿಷ್ಠೆಯನ್ನು ಆಕೆಯ ಗುರುವಿನ ಪವಾಡವನ್ನು ಪ್ರಸ್ತಾಪಿಸಿದ್ದಾನೆ. ಸುಗ್ಗಲೆಯನ್ನು ಕುರಿತು ಪಾಲ್ಕುರಿಕೆ ಸೋಮನಾಥನ ಬಸವ ಪುರಾಣ ಕೃತಿಯಲ್ಲಿ ವ್ಯಕ್ತವಾಗಿರುವ ಅಂಶ ಗಳೇ ಕನ್ನಡದ ವೀರಶೈವ ಕಾವ್ಯ-ಪುರಾಣಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಗಳೊಂದಿಗೆ ಸಂಕ್ಷಿಪ್ತವಾಗಿ ಅನುರಣಿತವಾಗಿವೆ.

ಹನ್ನೊಂದನೇ ಶತಮಾನದ ಉತ್ತರಾರ್ಧದ ವೇಳೆಗೆ ಉತ್ತುಂಗ ಸ್ಥಿತಿಯಿಂದ ಇಳಿಮುಖಗೊಳ್ಳುತ್ತಿದ್ದ ಜೈನಮತ ಹಾಗೂ ರಾಜಾಶ್ರಯ ಮತ್ತು ಜನಾನುರಾಗದ ಮೂಲಕ ಪ್ರಬುದ್ಧಮಾನಕ್ಕೆ ಬರುತ್ತಿದ್ದ ಶೈವಮತದ ನಡುವೆ ಅಸ್ತಿತ್ವದ ಸಲುವಾಗಿ ಸಂಘರ್ಷಗಳ ನಿರ್ಮಾಣ ಉಂಟಾಗಿತ್ತು. ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕಾಲ ಶೈವ ಧರ್ಮ ತನ್ನ ನೆಲೆಯನ್ನು ಬಲಪಡಿಸಿಕೊಳ್ಳುವ ಸ್ಥಿತಿಗೆ ಪೂರಕವಾಗಿತ್ತು. ಇಂತಹ ಕಾಲದಲ್ಲಿ ಇಮ್ಮಡಿ ಜಯಸಿಂಹನ ರಾಣಿಯಾಗಿದ್ದ ಸುಗ್ಗಲೆಯು ಪರಸಮಯಿಗಳ ವಿರುದ್ಧ ಹೋರಾಡಿ ಶೈವಧರ್ಮವನ್ನು ರಕ್ಷಿಸಿದ ಕಾವ್ಯ - ಪುರಾಣೋಕ್ತ ಹಾಗೂ ಶಾಸನೋಕ್ತ ಪ್ರಥಮ ಮಹಿಳೆಯಾಗಿ ಕಂಡುಬರುತ್ತಾಳೆ.

ಸುಗ್ಗಲೆಯನ್ನು ಕುರಿತು ವೀರಶೈವ ಕಾವ್ಯ - ಪುರಾಣಗಳಲ್ಲಿ ನಿರೂಪಿತ ವಾಗಿರುವ ಸಂಗತಿಯಲ್ಲಿ ಒಂದು ಅಂಶವನ್ನು ಗ್ರಹಿಸಬಹುದು. ದೇಶಿಗರಾಯನ ಪಿರಿಯರಸಿಯಾಗಿದ್ದ ಸುಗ್ಗಲೆಯು 'ಗಂಡನೇ ಪರದೈವ' ಎನ್ನುವ ಸಂಪ್ರದಾಯದ ಮಾತನ್ನು ಬದಿಗೆ ಸರಿಸಿ ತನ್ನ ಮನಸ್ಸಿಗೆ ಒಪ್ಪಿದ ಧರ್ಮವೇ ಧರ್ಮ, ತನಗೆ ಒಪ್ಪಿದ ಗುರುವೇ ಗುರು ಎನ್ನುವ ಕೆಚ್ಚೆದೆಯನ್ನು ಮೊಟ್ಟ ಮೊದಲ ಬಾರಿಗೆ ಪ್ರದರ್ಶಿಸಿದವಳಾಗಿ ಕಂಡುಬರುತ್ತಾಳೆ. ರಾಜಸಭೆಯಲ್ಲಿ ರಾಜನ ವಿರುದ್ಧವೇ ವಾದ ಮಾಡಿ ನೆಚ್ಚಿನ ಶೈವ ಗುರುವಿನ ಸೇವೆ ಮಾಡುವ ಮೂಲಕ ತನ್ನ ದಿಟ್ಟತನವನ್ನು ಪ್ರದರ್ಶಿಸಿ ಶಿವನಿಷ್ಠೆಯನ್ನು ಮೆರೆದವಳು. ಅಕ್ಕ ಮಹಾ ದೇವಿಯ ಹಾಗೆ, ಅವಳಿ ಗಿಂತ ಮೊದಲೇ ರಾಜನ ಎದುರು ಸವಾಲು - ಪ್ರತಿಜ್ಞೆ ಒಡ್ಡಿ, ಪ್ರತಿಜ್ಞೆಯನ್ನು ಈಡೇರಿಸುವಲ್ಲಿ ಯಶಸ್ವಿಯಾದವಳು. ಚಕ್ರವರ್ತಿಯಾಗಿದ್ದ ತನ್ನ ಪತಿಯನ್ನೇ ಶೈವಧರ್ಮದೆಡೆಗೆ ಪರಿವರ್ತಿಸುವಲ್ಲಿ ಜಯಶೀಲಳಾದವಳು. ಕಲ್ಯಾಣ ಚಾಲುಕ್ಯರ ಆರಂಭ ಕಾಲದ ದೊರೆಗಳ ಕಾಲಾವಧಿಯಲ್ಲಿ ಸುಗ್ಗಲಾ ದೇವಿಯಂತಹ ರಾಣಿ ಯೊಬ್ಬಳು ಆಗ ತಾನೇ ಕನ್ನಡನಾಡಿನಲ್ಲಿ ರಾಜಾನುರಾಗ ಹಾಗೂ ಪ್ರಜಾನುರಾಗದ ನೆರವಿನಿಂದ ತನ್ನ ನೆಲೆಗಟ್ಟನ್ನು ಗಟ್ಟಿತನಗೊಳಿಸಿ ಕೊಳ್ಳಲು ಪ್ರಯತ್ನಿಸುತ್ತಿದ್ದಂತಹ ಸಂಕ್ರಮಣ ಕಾಲದಲ್ಲಿ ಹಾಗೂ ಮುಂದೆ ನಡೆದ ಬಸವಾದಿ ಪ್ರಮಥರ ಸಮಾಜೋ ಧಾರ್ಮಿಕ ಚಳುವಳಿಯ ಕುರುಹಾಗಿ ಶಿವಧರ್ಮ, ಶಿವಸಂಸ್ಕೃತಿಯನ್ನು ರಕ್ಷಿಸುವಲ್ಲಿ, ಬೆಳೆಸುವಲ್ಲಿ ಪ್ರಪ್ರಥಮ ಶಿವಶರಣೆಯಾಗಿ ಕಂಡುಬಂದಿರುವುದು ವಿಚಾರಾರ್ಹವಾದುದಾಗಿದೆ. ಸುಗ್ಗಲಾ ದೇವಿಯ ಹೆಸರು ವೀರಶೈವ ಧರ್ಮದ ಇತಿಹಾಸ-ಸಂಸ್ಕೃತಿಯ ಅಧ್ಯಯನದ ಸಂದರ್ಭದಲ್ಲಿ ಉಲ್ಲೇಖಾರ್ಹವಾಗಿದೆ.

ಇದಕ್ಕಿಂತ ಮಹತ್ತರ ಸಂಗತಿ ಎಂದರೆ, ನಂತರದ ಶಾಸನಗಳಲ್ಲಿ ಸುಗ್ಗಲೆ ಹೆಸರಿನ ಇತರೆ ಸ್ತ್ರೀಯರ ಹಾಗೂ ರಾಣಿಯರ ವ್ಯಕ್ತಿತ್ವವನ್ನು ನಿರೂಪಿಸುವಾಗ ಇಮ್ಮಡಿ ಜಯಸಿಂಹನ ಪಿರಿಯರಸಿ ಶರಣೆ ಸುಗ್ಗಲಾದೇವಿಯ ಆದರ್ಶ ರಾಜ ಪತ್ನಿತ್ವವನ್ನು, ವ್ಯಕ್ತಿತ್ವವನ್ನು, ಶೈವನಿಷ್ಠೆಯನ್ನು ಮಾದರಿಯಾಗಿಟ್ಟುಕೊಂಡು ವರ್ಣಿಸಿರುವುದು ಕಂಡುಬರುತ್ತದೆ. ನಿದರ್ಶನವಾಗಿ ಎರಡು ಶಾಸನಗಳಲ್ಲಿಯ ವಿವರವನ್ನು ಪರಿಶೀಲಿಸಬಹುದಾಗಿದೆ.

ಕ್ರಿ. ಶ. ೧೧೮೭ ಕೆರೆಸಂತೆ ಶಾಸನವು[೮] ಹೊಯ್ಸಳ ದೊರೆ ಬಲ್ಲಾಳನ ಅರಸಿ ಕೇತಲದೇವಿಯನ್ನು ವರ್ಣಿಸುತ್ತ,

ಪಡೆದಳ್ಸುಗ್ಗಲದೇವಿ ಮುನ್ನ ಜಯಸಿಂಹೋರ್ವೀಶನೊಳು ಸೌಮ್ಯಮಂ
ಪಡೆದಳು ಸಾಂತಲದೇವಿ ಮತ್ತೆ ತೊದಳೇ ಶ್ರೀವಿಷ್ಣು ಭೂಪಾಲನೊಳ್
ಪಡೆದಳ್ಕೇತಲ ದೇವಿ ವಲ್ಲಭನೊಳೀ ಬಲ್ಲಾಲಭೂಪಾಳನೊಳ್
ಪಡೆದಮ್ಮೂರ್ವರು ಮೂವರರಸಿಯರು ಸೌಭಾಗ್ಯ ಭಾಗ್ಯಗಳಂ'

ಎಂದು ನಿರೂಪಿಸಿದ್ದು ಹೊಯ್ಸಳ ಅರಸಿಯರ ವ್ಯಕ್ತಿತ್ವವನ್ನು ನಿರೂಪಿಸಲು ಸುಗ್ಗಲಾದೇವಿಯ ಆದರ್ಶತೆಯನ್ನು ಮಾದರಿಯಾಗಿ ಅನುಸರಿಸಿರುವುದು ಕರ್ನಾಟಕದ ಪ್ರಾಚೀನ ರಾಣಿಯರಲ್ಲೇ ಈಕೆ ಉನ್ನತವಾದ ವ್ಯಕ್ತಿತ್ವವನ್ನು ಹೊಂದಿದವಳಾಗಿದ್ದಳು ಎಂಬುದನ್ನು ಧ್ವನಿಸುತ್ತದೆ. ಅದೇ ರೀತಿಯಾಗಿ ಕುವರ ಲಕ್ಷ್ಮನ ಹೆಂಡತಿ ಸುಗ್ಗಲೆಯನ್ನು ಹಳೇಬೀಡಿನ ಶಾಸನವು ವರ್ಣಿಸುವಾಗ ಕಲ್ಯಾಣ ಚಾಲುಕ್ಯ ರಾಣಿ ಸುಗ್ಗಲೆಯ ಆದರ್ಶ ಮಹಿಳತ್ವವನ್ನು ಮಾದರಿಯಾಗಿಟ್ಟುಕೊಂಡು ನಿರೂಪಿಸಿದೆ.

ಜಯಸಿಂಹ ಕ್ಷಿತಿಪಾಳಕಂಗೆ ಜಗಮೆಲ್ಲಂ ಬಣ್ಣಿಸಲ್ ಪುಣ್ಯಭಾ
ಷೆಯನಾ ಸುಗ್ಗಲದೇವಿ ಕೊಟ್ಟ ತೆಱದಿಂ ಬಲ್ಲಾಳ ಭೂಪೋತ್ತಮ
ಪ್ರಿಯಪುತ್ರಂಗೆ ಕುಮಾರಲಕ್ಷ್ಮ ರಥಿನೀನಾಥಂಗೆ ಕೊಟ್ಟಳ್ ಮನಃ
ಪ್ರಿಯೆಯಿಂ ಸುಗ್ಗಲಾದೇವಿ ಭಾಷೆಯ ನಿಳಾಚಕ್ರಂ ಪೊಗಳ್ವನ್ನೆಗಂ”[೯]

ಈ ವಿವರಗಳು. ಸುಗ್ಗಲಾದೇವಿಯು ತನ್ನ ಶಿವಧರ್ಮನಿಷ್ಠೆ, ಉನ್ನತವಾದ ವ್ಯಕ್ತಿತ್ವದಿಂದಾಗಿ ಖ್ಯಾತಿ ಪಡೆದಿದ್ದು, ನಂತರ ಕಾಲದ ರಾಜಮನೆತನದ ಸ್ತ್ರೀಯರನ್ನು ವರ್ಣಿಸುವಾಗ ಈಕೆಯ ಆದರ್ಶತ್ವವನ್ನು ಮಾದರಿಯಾಗಿ ಅನುಸರಿಸಿರುವುದು "ಕನ್ನಡ ನಾಡಿನ ಮಧ್ಯಕಾಲೀನ ಚರಿತ್ರೆಯಲ್ಲಿ ಸ್ತ್ರೀಯೊಬ್ಬಳು ಪಡೆದಿದ್ದ ಸ್ಥಾನದ ಪ್ರತೀಕವಾಗಿದೆ".

---

೮ Mar 1925 ಕಡೂರು ನಂ. ೬೪. ಕೆರೆಸಂತೆ

೯ E. C. Vol. No. V-II ಕ್ರಮಸಂಖ್ಯೆ ೧೧೨, ಹಳೇಬೀಡು

ಜಾನಪದ

ಜಾನಪದ ೧೯೯೧, ಏನು?

ಪ್ರೊ. ಹಿ. ಶಿ. ರಾಮಚಂದ್ರೇಗೌಡ

ಪುಸ್ತಕ ಚಿಂತನೆ ಎಂದರೆ ಹಾಳೆಗಳಲ್ಲಿ ದಾಖಲಾಗಿರುವ ಪಠ್ಯವೊಂದರ ವ್ಯಸನವಲ್ಲ. ಪಠ್ಯವನ್ನು ಮೌಲ್ಯ ಮಾಡಿಕೊಂಡ ಕಾಳಜಿ ಮಾತ್ರ ಅದು. ಪಠ್ಯ ಇರುವಂತ ಯಾವುದೇ ನಿರ್ಜೀವ ವಸ್ತುವಿನಂತೆ ಒಂದು ವಸ್ತು. ಪಠ್ಯವಾಗಿಸುವಾಗ ನಾವು ಒಂದು ಸಾಂಸ್ಕೃತಿಕ ಪ್ರಕ್ರಿಯೆಯನ್ನು ಹೊರತೆಗೆದು ನಿರ್ಜೀವದಲ್ಲಿ ಇಟ್ಟಿರುತ್ತೇವೆ. ಒಬ್ಬ 'ಸಾಂಸ್ಕೃತಿಕ' ತಾನು ಓದುವ, ನೋಡುವ ಅಥವ ಬೇರಾವ ಲೀಲೆಯಿಂದಲಾದರೂ ಮುಖಾಮುಖಿಯಾಗುವಾಗ ಅದನ್ನು ಮಾತನಾಡಿಸುತ್ತಾನೆ. ಆಗ ಪಠ್ಯ ಸಂವಾದಕ್ಕೆ ತೊಡಗುತ್ತದೆ. ಪಠ್ಯವನ್ನು ಮಾಡುವವನು ಮತ್ತು ಓದುಗ, ನೋಡುಗ ಅಥವ ಭಾಗವಹಿಸುವವನು ಸಾಮಾನ್ಯನಲ್ಲ; 'ಸಾಂಸ್ಕೃತಿಕ', ಬದುಕುವ ಅನೇಕ ಸಂದರ್ಭಗಳನ್ನು ಹೊರತೆಗೆದು ಪಠ್ಯಗಳಾಗಿ ಪರೀಕ್ಷಿಸುವ ಅವನ ವ್ಯಕ್ತಿತ್ವ ಸಂಸ್ಕೃತಿ ನಿರ್ಮಿತಿಯ ರಹಸ್ಯವನ್ನು ಅರ್ಥಮಾಡಿಕೊಳ್ಳುವುದು. ತನ್ನಷ್ಟಕ್ಕೆ ತಾನಿದ್ದ ಸಂಸ್ಕೃತಿಯನ್ನು ಈ ರೀತಿ ಓದು, ವ್ಯಸನ, ಅಭ್ಯಾಸ, ಆದರ್ಶ, ಮುನ್ನೋಟ... ಇತ್ಯಾದಿ ಮೌಲ್ಯ ಮಾಡಿಕೊಂಡು ಶೋಧಿಸುವ ಬಗೆ ಬದುಕನ್ನು ಚಲನೆ ಅಥವ ಭವಿಷ್ಯ ಮಾಡಿಕೊಳ್ಳುವ ಬಗೆ, ನಾಯಕತ್ವದ ಬಗೆ. ಸಂಸ್ಕೃತಿಯ ಅಧ್ಯಯನದ ಪರಿಣಾಮವೆಂದರೆ ಹೀಗೆ ಜನಾಂಗಕ್ಕೆ, ಸಮೂಹಕ್ಕೆ, ಪ್ರದೇಶಕ್ಕೆ ಶಕ್ತಿ ವರ್ಧಿಸುವ ನಡೆ. ಆದ್ದರಿಂದಲೆ ಪಠ್ಯದಲ್ಲಿ ಪಠ್ಯ ಮಾಡಿದ ಹೊರಗಿನವನು ಅಥವ ಪಠ್ಯದ ಒಳಗಿನವನು ಒಬ್ಬ ನಾಯಕನಾಗಿರುತ್ತಾನೆ. ಅವನಿಗಾಗಿಯೊ ಅಥವ ಹೊರಗೆ ಇರುವವರಿಗಾಗಿಯೊ ಅಲ್ಲಿ ಒಂದು ಸಮಾಜ ದರ್ಶಿತವಾಗಿರುತ್ತದೆ. ಆದ್ದರಿಂದ ಪಠ್ಯದಲ್ಲಿ ಒಂದು ವರ್ತಮಾನ ಮತ್ತು ಅದಕ್ಕೆ ನಡೆಯಾದ ಒಂದು ಭವಿಷ್ಯ ಇರುತ್ತವೆ. ಇದನ್ನು ಓದುವುದೆ ಪುಸ್ತಕ ಚಿಂತನೆ. ಆದ್ದರಿಂದಲೆ ಒಂದು ಪುಸ್ತಕ ಒಂದು ಭಾಷೆಯ ವಿಷಯ ಮಾತ್ರವಾಗಿರದೆ ಒಂದು ಸಂಸ್ಕೃತಿಯ ವಿಷಯವಾಗಿರುತ್ತದೆ. ಒಂದು ಪುಸ್ತಕದ ಪರಿಚಯ ಅಥವ ವಿಮರ್ಶೆ ಎನ್ನುವುದು ಹೀಗೆ ನಮ್ಮ ವರ್ತಮಾನ ಮತ್ತು ಭವಿಷ್ಯದ ಚಿಂತನೆ.

ಜಾನಪದ ಸಂಬಂಧಿ ಪುಸ್ತಕಗಳ ಚಿಂತನೆ ಮಾಡುವುದೆಂದರೆ ಚಲನೆಯಲ್ಲಿರುವ ಸಂಸ್ಕೃತಿಯನ್ನು ಪರೀಕ್ಷಿಸಿ ಒಪ್ಪುವುದು. ನಮ್ಮ ಪಠ್ಯ ಬರಹವ

ಸಾಹಿತ್ಯ ಪುಸ್ತಕದಂತೆ, ಭಾಷೆಯ ಪುಸ್ತಕದಂತೆ ಅಲ್ಲ. ಅಲ್ಲಿ ಸಂಸ್ಕೃತಿಯ, ಒಂದು ಪ್ರಕಾರವನ್ನು ಕುರಿತು ಹೇಳಿರುತ್ತದೆ. ನಮ್ಮದು ಮಾನವ ಸೃಷ್ಟಿಸಿಕೊಂಡ, ಸಾಂಸ್ಕೃತಿಕಗೊಂಡ ಎಲ್ಲವುಗಳ ಸಂಯೋಜಿತ ಪ್ರಕ್ರಿಯೆಯ ಪರಿಶೀಲನೆ. ಆ ಕೆಲಸ ಬರಹಗಾರರೆಂಬ ನಮ್ಮಂಥವರ ಪಥ್ಯಗಳಿಂದ ಆಗಿದೆಯೆ ಎಂದು ನೋಡ ಬೇಕು. ಅಂಥ ಕೆಲಸ ಮಾಡುವ ಹೊಣೆಯಿಂದ ನಾನು ೧೯೯೯ರ ಜಾನಪದ ಪುಸ್ತಕಗಳನ್ನು ಪರಿಶೀಲಿಸಿದ್ದೇನೆ.

ಇದುವರೆಗೆ ನಮಗೆ ಮೂರೇ ಬಗೆಯ ಜಾನಪದ ಪಥ್ಯ ಚಿಂತನೆ ಸಾಧ್ಯ ವಾಗಿರುವುದು. ಒಂದು, ನವೋದಯ ಅಥವಾ ಸ್ವಾತಂತ್ರ್ಯ ಹೋರಾಟ ಕಾಲದ ಜಾನಪದ ಪಥ್ಯ. ಇದು ದೇಶೀ ನೆಲೆಯದು. ಗಾಂಧೀಜಿ, ಲೋಹಿಯಾ ಅಂಥ ವರನ್ನು ಹೊರತುಪಡಿಸಿದರೆ ಈ ಕಾಲದ ದೇಶಿ ಕೇವಲ ರಾಜಕೀಯ ದೇಶಿ ಆಗಿತ್ತೆ ಹೊರತು ಸಾಂಸ್ಕೃತಿಕ ದೇಶಿ ಆಗಿರಲಿಲ್ಲ. ಎರಡು, ವಸಾಹತುಶಾಹಿ ಪ್ರೇರಿಸಿದ ವೈಜ್ಞಾನಿಕ ಪಥ್ಯ. ಇದು ಶುದ್ಧ ಭೌತವಾದಿ ಪಥ್ಯ. ನಮ್ಮ ಸಮಾಜ ಜ್ಞಾನಗಳನ್ನೆಲ್ಲ ವಿಜ್ಞಾನ ಎಂದು ಬೀಗಿ ಕರೆದುಕೊಳ್ಳುತ್ತ ಸಮಾಜದ ಸಹಜ ಕ್ರಿಯಾತ್ಮಕ ಮಗ್ಗುಲುಗಳನ್ನೆಲ್ಲ ಸವರಿ ಹಾಕಿ ನಮ್ಮ ಸಮಾಜ ಜ್ಞಾನ ಮತ್ತು ಪ್ರಕ್ರಿಯೆಯನ್ನು ಕುಂಡದ ಗಿಡದ ಸ್ವರೂಪಕ್ಕೆ ಇಳಿಸಿದ್ದು. ಮೂರು, ಅಲ್ಲಿ-ಇಲ್ಲಿ ಹಣಕಿ-ಇಣುಕಿ ನಮಗೆ ಗೋಚರವಾಗಿದೆ ಮತ್ತು ನಾವು ಗೋಚರ ಮಾಡಿಸಿ ಕೊಳ್ಳದೆ ಹೋದ ವೈಚಾರಿಕ ಪಥ್ಯ. ಈ ವೈಚಾರಿಕ ಪಥ್ಯವನ್ನು ವಿರೋಧ ಮುಖಿ ಎಂದು ಆಡಳಿತ ಶಾಹಿ ಹೆದರಿಕೆ ಹುಟ್ಟಿಸಿದ್ದರಿಂದ ಮತ್ತು ಅದು ಅನುಕೂಲ ಸಿಂಧು ವ್ಯವಸ್ಥೆ ಆಗಿರಲಿಲ್ಲವಾದ್ದರಿಂದ—ಅನುಕೂಲ ವೃತ್ತಿಯ (previlaged class) ಬರಹಗಾರರು ಮತ್ತು ಓದುಗರು ಆ ಪಥ್ಯ ಚಿಂತನೆಯನ್ನು ಕೈಗೆತ್ತಿ ಕೊಳ್ಳಲು ಹೆದರಿದರು. ಈ ಪಥ್ಯ ನಮ್ಮ ಸಾಮಾನ್ಯ ಜನರಲ್ಲಿಯೆ ಉಳಿಯಿತು; ಇನ್ನೂ ಅಲ್ಲೆ ಇದೆ. ಕೆಲವು ಬರಹಗಾರರು ಮಾತ್ರ ಆ ಕಡೆ ಇದ್ದಾರೆ. ನಿಜವಾದ ಜಾನಪದ ಚಿಂತನೆ ಈ ಮುಖದಿಂದ ಹೊರಡಬೇಕು. ಬಹುತೇಕ ನಿಮ್ಮ ಓದು, ವಿದ್ಯೆ ಆಡಳಿತಶಾಹಿಯ ಸಮರ್ಥನೆಯಾಗಿರುವುದರಿಂದ ಹಾಗೂ ನಮ್ಮ ವಿದ್ಯಾ ವಂತ ಬರಹ ಗಾರರು ಅದರ ಒಂದು ಭಾಗವೇ ಆಗಿರುವುದರಿಂದ ಸಂಸ್ಕೃತಿ ಜೀವನವನ್ನು ತೆರೆದು ನೋಡಲು ಆಗುತ್ತಿಲ್ಲ. ಆದ್ದರಿಂದ ಯಾವುದೇ ವಿಷಯ ಕುರಿತು ಬರೆಯುತ್ತಾ ಹೋದರೂ ಅದು ಒಂದು ರೊಟೀನ್‌ವರ್ಕ್ ಆಗಿರುತ್ತದೆ; ನಮ್ಮ ಉದ್ಯೋಗ ನಿಯಮದಂತೆ. ನಮ್ಮ ಜಾನಪದ ಪುಸ್ತಕ ಚಿಂತನೆ ಈ ಜಾಡನ್ನು ಬಿಟ್ಟು ಚಲಿಸಿದಂತಿಲ್ಲ.

ಈ ಕಾರಣವಾಗಿಯೆ ೧೯೯೯ರ ನಿಮ್ಮ ಪುಸ್ತಕ ಚಿಂತನೆ ಜಾನಪದ ಸಂಸ್ಕೃತಿಯ ಒಪ್ಪಿದಾಗಿ ಕಾಣುವ ಆಶಯಗಳ ಚಿಂತನೆಗೆ ಮಾತ್ರ ಸೀಮಿತವಾಗಿದೆ.

ಪ್ರದೇಶ ಜಾನಪದ, ಜನಾಂಗ ಜಾನಪದ, ಮಹಾಕಾವ್ಯ ಜಾನಪದ, ಪುರಾಣ – ಕಾವ್ಯ ಜಾನಪದ, ಗಾದೆ–ಒಗಟು ಜಾನಪದ, ಯಕ್ಷಗಾನ ಜಾನಪದ, ಬುಡಕಟ್ಟು ಜಾನಪದ, ಸಂವಹನ ಜಾನಪದ– ಹೀಗೆ ಕೈಗೆ, ಕಣ್ಣಿಗೆ, ಕಾಲಿಗೆ ಎಡವಲು ಸಿಗುವ ವಿಷಯಗಳ ಆಯ್ಕೆಗೇ ಪ್ರಾಧಾನ್ಯ. ಬೀಡಿ ಸೇದುವ, ಬಾಡು ತಿನ್ನುವ, ಸೊಳ್ಳೆ ಹೊಡೆಯುವ, ಹೇನು ಕುಕ್ಕುವ ಅಥವ ಪ್ರೇಮ ಮಾಡುವ ಇಂಥ ಜಾನಪದ ನವಿರನ್ನು ಮೈಮೇಲೆ ತಂದುಕೊಳ್ಳುವ ಪ್ರಯತ್ನ ಉಂಟಾ? ಜಾನಪದ ಸಂಗ್ರಹ ಮತ್ತು ಚಿಂತನೆ ಬೇರೆ ಮಗ್ಗುಲುಗಳಿಗೆ ಹೊರಳಿಕೊಳ್ಳದೆ ಜಾನಪದ ಅಧ್ಯಯನವನ್ನು ಮುಂದುವರಿಸುವುದರಿಂದ ಪ್ರಯೋಜನವಿಲ್ಲ.

ಪ್ರದೇಶ ಚಿಂತನೆ : ಮಾನ ಅಭಿಮಾನ

'ಪ್ರದೇಶ' ಜಾನಪದ ಚಿಂತನೆಯ ಮೂಲ ನೆಲೆಗಳಲ್ಲಿ ಒಂದು. ಜಾನಪದ–ಜಾನಪದಗಳ ಹುಟ್ಟು. ಬೆಳವಣಿಗೆ ಮತ್ತು ಬಳಕೆಗಳ ಮೇಲೆ ಅದು ನಿರ್ಣಾಯಕ ಕೆಲಸ ಮಾಡುತ್ತದೆ. ಜಾನಪದ ಶಕ್ತಿಶಾಲಿಯಾಗಿ ಮಾತನಾಡುವುದೆ ಪ್ರಾದೇಶಿಕ ವಿಶಿಷ್ಟತೆಯ ಮೇಲೆ. ಅದೊಂದು ಬಗೆಯ ಸಾಂಸ್ಕೃತಿಕ ಹಕ್ಕುದಾರಿಕೆ ಎನ್ನುವಂತೆ ಪ್ರತಿಪಾದಿಸಲಾಗುತ್ತದೆ. ಕರ್ನಾಟಕ ಪ್ರಾದೇಶಿಕವಾಗಿ ಹಲವುಗಳಲ್ಲಿ ವಿಂಗಡಿಸಲ್ಪಟ್ಟಿದೆ ಹಾಗೂ ಪ್ರತಿಪಾದಿಸಲ್ಪಟ್ಟಿದೆ. ಇವುಗಳನ್ನು ರಾಜಕೀಯ ಮಾಡಿಕೊಳ್ಳುವ ಸಂಗತಿಯೂ ಉಂಟು. ಇದನ್ನು ಪ್ರಾದೇಶಿಕ ಜಾನಪದ ಹಾಗೂ ಪ್ರಾದೇಶಿಕ ರಾಜಕೀಯ ಎನ್ನುತ್ತೇವೆ. ಅದು ಜಾನಪದ ಚಿಂತನೆಗೆ ಹೊರತಲ್ಲ. ಆಡಳಿತಾತ್ಮಕ ರಾಜಕೀಯ ಹೇಗೆ ಶಕ್ತವೋ ಹಾಗೆ, ಪ್ರಾದೇಶಿಕ ರಾಜಕೀಯವೂ ಶಕ್ತಿ. ಹಿಟ್ಟುಂಡವನು ಗಟ್ಟಿ ಎಂದು ಒಬ್ಬ ರಾಜಕೀಯ ಮಾಡುತ್ತಿದ್ದರೆ, ಜೋಳ ತಿಂದವನು ತೋಳ ಎಂದು ಮತ್ತೊಬ್ಬ ರಾಜಕೀಯ ಮಾಡುತ್ತಿರುತ್ತಾನೆ. ಅಂದಮೇಲೆ ಜಾನಪದ – ಜಾನಪದಗಳು ಪ್ರಾದೇಶಿಕ ರಾಜಕೀಯ ಶಕ್ತಿ ಕೇಂದ್ರಗಳು. ಇಂಥ ರಾಜಕೀಯ ಚಟುವಟಿಕೆಯ ಅನೇಕ ಕಾಲಗಳ ಸೃಷ್ಟಿಯನ್ನು ಇತಿಹಾಸ ಎಂದು ಕರೆಯುತ್ತೇವೆ.

ದಕ್ಷಿಣ ಕರ್ನಾಟಕದ ಪ್ರಭು ಜನಪದದೊಳಗಿಂದ ಕುವೆಂಪು ಸೃಷ್ಟಿಯಾದರು. ಆದ್ದರಿಂದಲೇ ಅವರಲ್ಲಿ ಆಧುನಿಕ ರಾಜಕೀಯ ಶಕ್ತಿಯ ಸೈದ್ಧಾಂತಿಕತೆ ಸೃಷ್ಟಿಯಾಯಿತು. ಬೇಂದ್ರೆಯವರು ಪ್ರಭುತ್ವ ಜನಪದದ ಅಂಚಿನಲ್ಲಿ ಬದುಕಿದರು. ಅವರಿಗೆ ಜನಪದ ಜೀವನದ ಘಟನೆಗಳು ಮುಖ್ಯವಾದವು, ಸೈದ್ಧಾಂತಿಕತೆ ದೂರ ಉಳಿಯಿತು. ಸಿದ್ಧಾಂತಗಳು ಯಾವಾಗಲೂ ಪ್ರಭು ಅಥವ ಶಕ್ತಿಕೇಂದ್ರಗಳಿಂದ ಹುಟ್ಟುತ್ತವೆ. ೧೯೯೯ರ ಜಾನಪದ ಕುರಿತ ಪ್ರಾದೇಶಿಕ ಕೃತಿಗಳು ಪರೋಕ್ಷವಾಗಿ ಇದನ್ನು ದಾಖಲಿಸಿವೆ. ದುರುಗದ ಜಾನಪದ ಚಿತ್ರದುರ್ಗ ಪ್ರದೇಶ ಹಾಗೂ

ಒಂದು ಐತಿಹಾಸಿಕ ಪ್ರಭುಕೇಂದ್ರದಿಂದ ಜನಪದವನ್ನು ಗ್ರಹಿಸಿದೆ. ಮೀರಾಸಾಬಿ
ಹಳ್ಳಿ ಶಿವಣ್ಣ ದುರುಗದ ಸುತ್ತ ಜನಪದ ಜೀವನ ಹೇಗಿದೆ ಎಂಬುದನ್ನು
ಅಧಿಕೃತ ದಾಖಲೆ ಎಂಬಂತೆ ನೀಡುತ್ತಾರೆ. ಬುಡಕಟ್ಟುಗಳು ಅವರ ಚಿಂತನೆಯ
ಮುಖ್ಯ ಕೇಂದ್ರ. ಇಪ್ಪತ್ತೊಂದು ಲೇಖನಗಳ ಅವರ ಈ ಕೃತಿಯಲ್ಲಿ ಬುಡಕಟ್ಟಿನ
ಸಂಸ್ಕೃತಿ ಸ್ಥಿತಿ ಹಾಗೂ ಆಧುನಿಕ ಪರಿಸ್ಥಿತಿಗಳ ಜೊತೆಗೆ ಮುಖಾಮುಖಿಯಾಗಿ
ಮಾತನಾಡುತ್ತಾರೆ. ಅವರಿಗಿರುವ ಈ ಮಾತನಾಡುವ ಗುಣ ಅವರ ತೀವ್ರ
ಜಾನಪದ ಬದ್ಧತೆಯಿಂದ ಬಂದುದು ಎಂಬುದನ್ನು ಅವರ ಲೇಖನಗಳು ಸಾದರ
ಪಡಿಸುತ್ತವೆ. ಆಧುನಿಕ ಅಭಿವೃದ್ಧಿ ಬುಡಕಟ್ಟು ಜನರ ನೆಲೆ ತಪ್ಪಿಸುತ್ತಿರುವ
ಬಗ್ಗೆ ಅವರು ತೀವ್ರವಾಗಿ ಪ್ರತಿಕ್ರಿಯಿಸುತ್ತಾರೆ. ಅಲೆಮಾರಿ ಜನಾಂಗವೊಂದರ
ಬಗ್ಗೆ ಬರೆಯುತ್ತಾ, "ಜಗಲೂರು ತಾಲ್ಲೂಕಿನ ಬಂಗಾರು ಗುಡ್ಡದ ದೊಂಬಿ
ದಾಸರು ಮೂಲ ಕಸುಬಾದ ಬಯಲಾಟವನ್ನು ಬಿಟ್ಟು ಬೀಗ ರಿಪೇರಿ ಮುಂತಾದ
ವ್ಯವಹಾರ ಮಾಡಿಕೊಂಡು ಬದುಕುತ್ತಿರುವುದು ನೋಡಿದರೆ ಕಲೆಗೆ ಒದಗಿದ
ದುರ್ಗತಿ ಅರ್ಥವಾಗುತ್ತದೆ" (ಪು ೧೨) ಎನ್ನುತ್ತಾರೆ. ಇದು ಕಲೆಯ ಸಮಸ್ಯೆ
ಅಲ್ಲ, ಜೀವನ ಸಮಸ್ಯೆ ಕಲೆ ಜೀವನವಾಗದಿದ್ದರೆ ಅಲ್ಲಿ ಜನಪದ ಉಳಿಯುವು
ದಿಲ್ಲ. ಜನಪದ ಕಲೆಯ ಸ್ವಭಾವವೆ ಹಾಗೆ. ಕಲೆಯಷ್ಟೇ ಅದರ ಜೊತೆಗಿದ್ದ
ಜನ ಕಳೆದು ಹೋಗುತ್ತಿರುವುದು ಜಾನಪದ ಚಿಂತಕರಿಗೆ ಮುಖ್ಯವಾಗಬೇಕು
ಆಗ ನಮ್ಮ ಜಾನಪದ ಚಿಂತನೆ ಸಾಮಗ್ರಿ ಆಧಾರಿತ ನೆಲೆಯಿಂದ ಸೃಷ್ಟಿ
ಬದ್ಧತೆಯ ಕಡೆಗೆ ಚಲಿಸುತ್ತದೆ.

ನಮ್ಮೂರಿನ ನೆನಪುಗಳಲ್ಲಿ ಚಂದ್ರಪ್ಪಗೌಡರು ಅಭಿಮಾನ ಮತ್ತು ಆಧುನಿಕ
ಗಳೆರಡನ್ನೂ ಮುಖಾಮುಖಿ ಮಾಡಿ ನೋಡುತ್ತಾರೆ. ಹತ್ತು ಚಿಕ್ಕ ಲೇಖನಗಳಲ್ಲಿ
ಮರೆಯಲಾಗದ ಹಾಗೂ ಆಧುನಿಕತೆಯ ಕಾರಣದಿಂದ ಮತ್ತೆ ಮನಸ್ಸಿನಲ್ಲಿ ಪ್ರ
ಆಗುತ್ತಿರುವ ಭೂತಕಾಲದ ಅನುಭವಗಳು ವರ್ತಮಾನವೇ ಆಗುವ ಪರಿ
ಅಚ್ಚರಿಗೊಂಡಿದ್ದಾರೆ. ಎನ್. ಆರ್. ನಾಯಕರದು ಉತ್ತರ ಕನ್ನಡ ಜಾನಪ
ಸಂಗ್ರಹದ ಆಧಿಪತ್ಯ. ಅವರು ಹಾಗೆ ಮೇಲ್ಪಟ್ಟದಲ್ಲಿ ಗುರುತಿಸುವಂತೆ ಕೆಲ
ಮಾಡಿದ್ದಾರೆ. ಅವರ 'ಸುಗ್ಗಿ ಹಬ್ಬ' ಅಂಥದೊಂದು ಸಮೃದ್ಧ ಕೃತಿ. ಉತ್ತ
ಕನ್ನಡ ಜಿಲ್ಲೆಯ ಜಾನಪದ ಸಂಗ್ರಹದ ಹಿನ್ನೋಟವನ್ನು ಒದಗಿಸುತ್ತಾ, ಹಾಲ
ಒಕ್ಕಲು ಹಾಗೂ ಮಾರ ಪಂತರ ಸುಗ್ಗಿ, ಕೋಲು, ಹಗ್ಗ ಹಾಗೂ ಮುಕ್ತಾ
ಎಂಬ ಹಾಡು ಪ್ರಕಾರಗಳನ್ನು ಸಂಗ್ರಹಿಸಿದ್ದಾರೆ.

'ಉತ್ತರ ಕರ್ನಾಟಕದ ಜಾನಪದ ಗೀತ ಮೇಳಗಳು' ವೀರೇಶ ಬಡಿಗೆ
ಅವರ ಶ್ರದ್ಧೆ ಮತ್ತು ಸಾಮರ್ಥ್ಯದ ಕೊಡುಗೆ. ಉತ್ತರ ಕರ್ನಾಟಕದ ಚೌ
ಗೊಂದಲ, ಡೊಳ್ಳು ಹಾಗೂ ಭಜನೆಯೆಂಬ ನಾಲ್ಕು ಪ್ರಕಾರಗಳ ಪ್ರಾದೇ

ಪ್ರದರ್ಶನ ಮತ್ತು ಅನನ್ಯತೆಯನ್ನು ಗುರುತಿಸುತ್ತಾರೆ. "ದೇಶಿ ಸಂಸ್ಕೃತಿಗಳ ಬಗ್ಗೆ, ಹೊಸ ಹೊಸ ಅಧ್ಯಯನದ ದಾರಿಗಳ ಬಗ್ಗೆ ತುಂಬ ಆಸಕ್ತಿ ಬೆಳೆಸಿಕೊಂಡಿರುವ ಸಂಶೋಧಕರು ಪ್ರಸ್ತುತ ಅಧ್ಯಯನದಲ್ಲಿ ಆಧುನಿಕ ದಮನಕಾರಿ ಪ್ರವೃತ್ತಿಯಿಂದ ಊನವಾದ ಜಾನಪದ ಜಗತ್ತಿನ ನಂಬಿಕೆ, ಶ್ರದ್ಧೆ, ಸಮೃದ್ಧತೆ, ತನ್ಮಯತೆಗಳನ್ನು ಒಂದು ಸಂಯೋಜಕ ಪ್ರತಿಬಿಂಬವನ್ನಾಗಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ" ಎಂಬ ಚಂದ್ರಶೇಖರ ಕಂಬಾರರ ಮಾತು ಇವರ ಬಗ್ಗೆ ಸರಿಯಾಗಿದೆ.

ಯಕ್ಷ ಚಿಂತನೆ : ಮಧ್ಯಂತರ — ಮಮಕಾರ

ಯಕ್ಷಗಾನ ನಮ್ಮ ಬಯಲಾಟದ ಒಂದು ಬೆಳೆದ ಉಪಮಾದರಿ. ಸಂಗೀತಾತ್ಮಕವಾಗಿಯೂ ಅದನ್ನು ಕರ್ನಾಟಕ ಬಯಲಾಟದಿಂದ ಪ್ರತ್ಯೇಕಿಸಿ ನೋಡಬಹುದು. ಉಳಿದಂತೆ ವಿಜೃಂಭಣೆಗೊಂಡಿದೆ ಎಂಬುದನ್ನು ಬಿಟ್ಟರೆ ಕರ್ನಾಟಕದ ಇತರ ಬಯಲಾಟಗಳ ವಸ್ತು, ಅಲಂಕರಣ ಹಾಗೂ ಅಭಿನಯಗಳಿಗೆ ಹತ್ತಿರದಲ್ಲಿದೆ. ಯಕ್ಷಗಾನ ಈಗ ಕರ್ನಾಟಕ ಜಾನಪದ ಅಧ್ಯಯನದ ಹಾಗೂ ರಾಜಕೀಯದ ಸಮಸ್ಯೆಗಳಲ್ಲಿ ಕೂಡ ಒಂದು. ಬೆಳೆದ ಹೆಣ್ಣಿಗೆ ಗಂಡು ಹುಡುಕುವ ತಿಪ್ಪಾಚಾರದಂತೆ ಯಕ್ಷಗಾನದ ಅರ್ಹತೆಯನ್ನು ಬೇರೆ ಬೇರೆ ಮಾನ ಮಾರ್ಗಗಳಿಂದ ಅಳೆಯುವ ಪ್ರಯತ್ನ ನಡೆದಿದೆ. ಏಕೆಂದರೆ ಅದರ ಮೇಲೆ ಹೆಚ್ಚು ಒತ್ತು ಬಿದ್ದಿದೆ. ಅದು ಒಂದು ಪ್ರದರ್ಶನ ಪ್ರಕಾರ ಮಾತ್ರವಾಗಿ ಉಳಿದಿಲ್ಲ, ಒಂದು ಪ್ರದೇಶದ ಸಾಂಸ್ಕೃತಿಕ ವಕ್ತಾರನಾಗ ಹೊರಟ ಜರೂರಿನಿಂದ ಅಲ್ಲಿ ಅನೇಕ ಸಾಂಸ್ಕೃತಿಕ ಪ್ರಶ್ನೆಗಳು ಹುಟ್ಟಿವೆ. ಕರ್ನಾಟಕ ಜಾನಪದ ಪ್ರಕಾರಗಳನ್ನು ಹೊರಗಿಟ್ಟು ನೋಡುವ ಒಂದು ಮಡಿ ಕಲ್ಪನೆ ಅದರೊಳಗಿರುವಂತೆ, ಅದನ್ನು ಪ್ರತ್ಯೇಕ ವೈಭವೀಕರಣದಲ್ಲಿ ನೋಡುವ ಮತ್ತೊಂದು ಪ್ರತ್ಯೇಕಿತ ಅಳತೆಯನ್ನು ಅಳವಡಿಸಿಕೊಳ್ಳಲಾಗಿದೆ. ಆದ್ದರಿಂದ ಯಕ್ಷಗಾನದ ಸಮಸ್ಯೆ ಬಗೆಹರಿಯದ ಸಮಸ್ಯೆ. ಇತರ ಜಾನಪದ ಬಯಲಾಟಗಳ ಸಮಸ್ಯೆ. ಬಿಟ್ಟ ಅಥವ ಮುಂದೂಡಿದ ಸಮಸ್ಯೆ.

ಕರಾವಳಿಯ ಯಕ್ಷಗಾನದ ಮೇಲೆ ಹೆಚ್ಚಾದ ಸಾಂಸ್ಕೃತಿಕ ಒತ್ತಡದಿಂದಾಗಿಯೇ ಕುರಿತು ನಿರಂತರ ಕೃತಿಗಳು ಪ್ರಕಟವಾಗುತ್ತಿವೆ. ಇಲ್ಲಿ ಕಲೆಯ ಪ್ರಶ್ನೆಗಿಂತ ಳಕೆದಾರನ ಸಮಸ್ಯೆಗಳೇ ಹೆಚ್ಚು ಚರ್ಚೆಗೆ ಒಳಗಾಗುತ್ತಿವೆ. ಅಷ್ಟರ ಮಟ್ಟಿಗೆ ಯಕ್ಷಗಾನ ಮಾರುಕಟ್ಟೆಯಲ್ಲಿದೆ. ಆದ್ದರಿಂದ ಬಹುತೇಕ ಕೃತಿಗಳ ಚಿಂತನೆಯನ್ನು ಳಕೆದಾರ ಮತ್ತು ಮಾರುಕಟ್ಟೆಯ ಮಧ್ಯಂತರ ಚಿಂತನೆ ಎಂದು ಕರೆಯಬಹುದು.

ಒಬ್ಬ ನಿಷ್ಠ ಕಲಾವಿದ, ಕಲಾಚಿಂತಕರಾಗಿ ಕೆರೆಮನೆ ಶಂಭು ಹೆಗಡೆಯವರು ಮ್ಮ 'ಯಕ್ಷಗಾನ ರಂಗ ಚಿಂತನೆ' ಕೃತಿಯಲ್ಲಿ ಯಕ್ಷಗಾನ ಪ್ರದರ್ಶನಗಳು

ಮ್ಮ ಮನವನ್ನು ಮಾರಿಕೊಳ್ಳುತ್ತಿರುವುದರ ಬಗ್ಗೆ ತೀವ್ರ ಆತಂಕಕ್ಕೆ ಒಳಗಾಗಿರು ವುದು ಕಾಣುತ್ತಿದೆ. ಯಕ್ಷಗಾನದ ನೆಲೆ, ನಿಲುವು, ಪ್ರೇಕ್ಷಕ ಪ್ರದರ್ಶನ ಹಾಗೂ ವಿಮರ್ಶೆಯ ಬಗ್ಗೆ ಆರು ಗಂಭೀರ ಪ್ರಶ್ನೆಗಳನ್ನು ಎತ್ತಿದ್ದಾರೆ. "ಯಕ್ಷಗಾನಕ್ಕೆ ಯಕ್ಷಗಾನದಿಂದಲೆ ಅಪಾಯ ಬಂದಿದೆ..." ಯಕ್ಷಗಾನಕ್ಕೆ ಸಿಕ್ಕಿದ ಸುವರ್ಣ ಅವಕಾಶಗಳಲ್ಲೆಲ್ಲ ಅದರ ದುರುಪಯೋಗವೆ ನಡೆದಿದೆ. ಯಕ್ಷಗಾನ ಇಂದು ಪೂರ್ತಿ ನೆಲೆ ತಪ್ಪಿದೆ" ಎಂದು ಆತಂಕದಲ್ಲಿ ಕಳೆದು ಹೋಗಬಹುದಾದ ಒಂದು ಕಲಾ ಪ್ರಕಾರದ ಬಗ್ಗೆ ಕಳಕಳಿ ವ್ಯಕ್ತಪಡಿಸಿದ್ದಾರೆ. ಅಂಥ ನೆಲೆ ತಪ್ಪಲು ಇರುವ ಕಾರಣಗಳನ್ನು ಹುಡುಕುವಾಗ ಅವರು ಹೆಚ್ಚು ಪರಾಮರ್ಶನ ಜ್ಞಾನಕ್ಕೆ ತೆರೆದುಕೊಳ್ಳುವ ಅವಶ್ಯಕತೆ ಇದೆ ಎನಿಸುತ್ತದೆ.

ಎಂ. ಪ್ರಭಾಕರ ಜೋಶಿಯವರು ತಮ್ಮ ಎರಡೂ ಕೃತಿಗಳಲ್ಲಿ ಯಕ್ಷಗಾನ ಪಠ್ಯವನ್ನು ಪಟ್ಟಾಗಿ ಹಿಡಿದು ಅರ್ಥಗಳನ್ನು ಹಿಂಡುವ ಪಂಡಿತ ವಿಮರ್ಶಕನ ಕೆಲಸ ಮಾಡಿದ್ದಾರೆ. ಯಕ್ಷಗಾನ ಪಠ್ಯವನ್ನು ಅವರು ಹೇಗೆ ತೆಗೆದುಕೊಂಡಿದ್ದಾರೆ ಎಂದರೆ ಅದೊಂದು ಕೇಂದ್ರ ಸಾಂಸ್ಕೃತಿಕ ಪಠ್ಯ ಎಂಬಂತೆ. ಅಲ್ಲಿಂದ ಅರ್ಥಗಳು ಹಾಗೂ ಸಂದೇಶಗಳನ್ನು ಹೊರಡಿಸುವ ಹಟ ಅವರದು. ಅದಕ್ಕಾಗಿ ಪ್ರಯೋಗಗಳನ್ನು ಪರೀಕ್ಷೆಗೆ ಒಡ್ಡುತ್ತಾರೆ. ಇಂಥ ಸಂದರ್ಭಗಳಲ್ಲಿ ಪಠ್ಯ ಒಂದು ಕಡೆ ಉಳಿದು ವಿಶ್ಲೇಷಣೆ ಮತ್ತೊಂದು ಕಡೆ ಅನಾಥವಾಗಿ ಉಳಿಯುವ ಸಾಧ್ಯತೆಗಳೂ ಉಂಟು. ಪಠ್ಯ ಮತ್ತು ಅರ್ಥಗಾರಿಕೆಯ ಬಗ್ಗೆ ಲೇಖಕರಿಗಿರುವ ಶ್ರದ್ಧೆ ಮತ್ತು ಬದ್ಧತೆ ಅಸಾಧಾರಣವಾದುದು. ಇಂಥ ನಿಷ್ಠೆ ಜಾನಪದ ವಿದ್ವಾಂಸನಿಗೆ ಅಗತ್ಯ. ಪ್ರದರ್ಶನ ಸಿದ್ಧಾಂತ ಚಿಂತನೆಗೆ ತಮ್ಮನ್ನು ಒಳಗುಪಡಿಸಿಕೊಂಡ ಜೋಶಿಯವರು 'ಕೃಷ್ಣ ಸಂಧಾನ : ಪ್ರಸಂಗ ಮತ್ತು ಪ್ರಯೋಗ'ದಲ್ಲಿ ಪಠ್ಯ ಚಿಂತನೆಯ ಜೊತೆಗಿನ ಪ್ರದರ್ಶನದ ಮೈಕ್ರೋ ವಿಶ್ಲೇಷಣೆ ನಡೆಸಿದ್ದಾರೆ.

'ಯಕ್ಷಗಾನ ವಾಚಸ್ಪತಿ' ಹೊಳಲಿ ಶಂಕರ ನಾರಾಯಣ ಶಾಸ್ತ್ರಿಗಳ ಸರ ಪರಿಚಯವನ್ನೊಳಗೊಂಡಿದೆ. ಉದ್ಯಾವರಮಾಧವ ಆಚಾರ್ಯರ ಕೃತಿಯಲ್ಲಿ ಆರ ಲೇಖನಗಳವೆ. ಅವರು ಯಕ್ಷಗಾನದ ನಿಜವಾದ ಕ್ರಿಯಾಶೀಲತೆ ಮತ್ತು ಸಾಂಸ್ಕೃತಿ ಬದ್ಧತೆಯನ್ನು ಪ್ರಶ್ನಿಸುತ್ತಾರೆ. ಕಾರಂತರ ಕಲಾತ್ಮಕ ಕ್ರಿಯಾಶೀಲತೆ ಮತ ಸಾಂಸ್ಕೃತಿಕ ಬದ್ಧತೆ ಇತರ ಯಕ್ಷಗಾನ ಪ್ರಯೋಗಗಳಿಗೆ ಮಾದರಿಯಾಗದಿರುವು ಅವುಗಳ ಹಿನ್ನಡೆಗೆ ಕಾರಣ ಎನ್ನುತ್ತಾರೆ. ಪಾಲ್ತಾಡಿ ರಾಮಕೃಷ್ಣ ಆಚಾರ್ ಅವ ಜನಪದ ಕುಣಿತಗಳ ಸಂವಹನ ಮಾಧ್ಯಮ ಸಾಧ್ಯತೆಯನ್ನು ಚರ್ಚಿಸುತ್ತಾ ಜನಪದ ಕುಣಿತಗಳನ್ನು ಕೇವಲ ರಾಜಕೀಯ ವಿಷಯವಾಗಿ ಬಳಸುವುದ

ಬಗ್ಗೆ ಅವರ ಆಕ್ಷೇಪವಿದೆ. ಈ ಬಗ್ಗೆ ಬೇರೆ ಯಾರೂ ಕೆಲಸ ಮಾಡಿಲ್ಲವೆನ್ನುವ ಅವರು ಕರ್ನಾಟಕ ಜಾನಪದ ದರ್ಶನದ ದಾವಣಗೆರೆ ಸಮ್ಮೇಳನದ ಸಂಚಿಕೆಯನ್ನು ಗಮನಿಸುವುದು ಒಳಿತು.

‘ಶ್ರೀ ಕೃಷ್ಣ ಪಾರಿಜಾತ’ ಮತ್ತು ‘ಅಭಿಮನ್ಯು ಕಾಳಗ’ ಯಕ್ಷಗಾನ ಪಠ್ಯಗಳ ಸಂಪಾದಿತ ಕೃತಿಗಳು. ಶ್ರೀಕೃಷ್ಣ ಪಾರಿಜಾತ ಸಂಪಾದಕರಿಗೆ ಇರುವ ಜಾನಪದ ಬದ್ಧತೆ ಹಾಗೂ ಉದ್ದೇಶ ಅಭಿಮನ್ಯು ಕಾಳಗ ಕೃತಿ ಸಂಪಾದಕರಿಗೆ ಇಲ್ಲ.

ಜನಾಂಗ ಚಿಂತನೆ : ಹಳಹಳಿಕೆ – ಆತ್ಮರತಿ

ಜಾಗತೀಕರಣದ ಆರಂಭದೊಂದಿಗೆ ಜಾತೀಕರಣವು ಹೊಸ ಪರಿವೇಶಗಳಲ್ಲಿ ರಾಜ್ಯಶಕ್ತಿಯಾಗಿ ರೂಪುಗೊಳ್ಳುವ ಸೂಚನೆಗಳು ಕಾಣುತ್ತಿದೆ. ಭಾರತದ ಅತ್ಯಂತ ಶಕ್ತಿಶಾಲಿ ಕೇಂದ್ರ ವ್ಯವಸ್ಥೆ ಎಂದರೆ ಜಾತಿ ತಾನೇ! ಜಾಗತಿಕ ಆರ್ಥಿಕ ಇಲ್ಲವೆ ರಾಜಕೀಯ ಶಕ್ತಿಯಾಗಿ ರೂಪುಗೊಳ್ಳುವ ಸಾಧ್ಯತೆ ಇಲ್ಲದ ಭಾರತದ ಅಂತರಂಗಕ್ಕೆ ಪುನರ್ ಜಾತೀಕರಣಗೊಳ್ಳುವುದೆ ಹೊಸ ಶಕ್ತಿ ಸಂಚಯನ ಆಗಬಹುದು. ಭಾರತದ ಕೇಂದ್ರ ಸ್ಥಾನದಲ್ಲಿ ರಾಜ್ಯಶಕ್ತಿಯಾಗಿ ಜಾತಿ ನೆಲೆಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಮಠಮಾನ್ಯಗಳು ಈಗ ಹೊಸ ಶಕ್ತಿ ಸಂಚಯನದಲ್ಲಿ ತೊಡಗಿವೆ. ಆ ಶಕ್ತಿ ಪಾರಲೌಕಿಕವಾದುದಲ್ಲ; ರಾಜ್ಯ ಶಕ್ತಿಯನ್ನು ನೇರವಾಗಿ ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವುದು. ರಾಜ್ಯ ಶಕ್ತಿಗೆ ಪ್ರಭು, ಸೂತ್ರಧಾರ ಅಥವ ಕುಲಗುರುವಾಗುವ ಪ್ರಯತ್ನಗಳು ಎದ್ದು ಕಾಣುತ್ತಿವೆ. ದಲಿತರು ಮೀಸಲಾತಿಯ ಕೇಂದ್ರದಲ್ಲಿ ಶಕ್ತಿ ಸಂಚಯನ ಮಾಡಿಕೊಳ್ಳುತ್ತಿದ್ದರೆ, ಕೆಳ ಮತ್ತು ತಳವರ್ಗಗಳು ತಮ್ಮ ರಾಜ್ಯ ಶಕ್ತಿ ಸಂಚಯನಕ್ಕೆ ಮಾರ್ಗ ಹುಡುಕುತ್ತಿವೆ. ಅವಕ್ಕೆ ಜಾತೀಕರಣಗೊಳ್ಳದೆ ಬೇರೆ ಮಾರ್ಗವೇ ಇಲ್ಲ ಎನ್ನುವಂತೆ ಕಾಣುತ್ತಿದೆ. ತುಂಬ ಸ್ಪೀಡ್ ಆಗಿ, ಮಾರ್ಗದರ್ಶಕ ಆಗಿ ಜಾತಿ ಶಕ್ತಿ ವರ್ಧಕ ಮತ್ತು ಸಂಪತ್ತು ಸಂಚಯನ ಮಾರ್ಗ ಎನಿಸಿದೆ. ಅದಕ್ಕಾಗಿ ತಮ್ಮ ತಮ್ಮ ಕೆಳ – ತಳ ವರ್ಗ ಹುಡುಕಿ ತಮ್ಮ ಹಳೆಯ ಪಂಗಡ ಕಟ್ಟಲಿಕ್ಕೆ ಹೊಸ ಜಾತೀಕರಣ ಶೃಂಗಾರವನ್ನು ಮಾಡಹೊರಟಿದ್ದಾರೆ. ಸ್ವಾತಂತ್ರ್ಯ ನಂತರದ ದಶಕದಲ್ಲಿ ಕೆಲವು ತಳ ಜನರು ತಮಗೊಂದು ಮಠಮಾನ್ಯ ಬೇಕೆಂದು ಹೊರಟಿದ್ದುಂಟು. ಆಗವರ ಅಪೇಕ್ಷೆ ಹಾಗೂ ಜಾತಿಯಾಗುವ ಮೂಲಕ ಬ್ರಾಹ್ಮಣೀಕರಣದ ಕಡೆಗೆ ಚಲಿಸುವುದು ಅರ್ಥಾತ್ ಶ್ರೇಷ್ಠತೆಯ ಕಡೆಗೆ ಪಯಣ ಎಂದು ಭಾವಿಸಿದ್ದರು. ಈಗಿನ ನಡತೆ ಅದಕ್ಕೆ ಭಿನ್ನ ದಿಕ್ಕಿನಲ್ಲಿದೆ. ಜಾತೀಕರಣ ಎಂದರೆ ಮಠ ಗುರುಗಳನ್ನು ನೇಮಿಸಿಕೊಂಡು ಆಧುನಿಕ ಸೌಲಭ್ಯಗಳಿಗಾಗಿ ರಾಜ್ಯಶಕ್ತಿಯನ್ನು ತಮ್ಮ ಕಡೆಗೆ ಎಳೆದು ತರುವುದು. ಜಾತಿ ಶ್ರೇಣಿಯ ಕನಿಷ್ಠ ತಳದಲ್ಲಿರುವ ದಲಿತರು ಮೀಸಲಾತಿಯ ಕೇಂದ್ರದಿಂದ

ಶಕ್ತಿಯನ್ನು ಗ್ರಹಿಸುವುದು – ಸಾಮಾನ್ಯ ಪ್ರವೃತ್ತಿಯಾಗಿರುವಂತೆ ಕಾಣುತ್ತಿದೆ. ತಮ್ಮ ಜನಪದ – ಜಾನಪದಗಳನ್ನು ಪುನರ್ ಸಂಘಟಿಸುವ ಮೂಲಕ ಹಳೆಯ ಬಾಟಲಿಗೆ ಹೊಸ ಹೆಂಡವನ್ನು ತುಂಬಿಸಿಕೊಳ್ಳಲು ಇವರು ಯತ್ನಿಸಿದ್ದಾರೆ. ೧೯೯೯ರ ಜಾನಪದ ವರ್ಷದಲ್ಲಿ ಪ್ರಕಟವಾಗಿರುವ ತಿಗಳ ಜನಾಂಗದ ಇತಿಹಾಸ ಮತ್ತು ಕರಗ ಶಕ್ತ್ಯೋತ್ಸವ, 'ಸಂಕೇತಿ : – ಅವಲೋಕನ', 'ಶೋಷಿತ ಜಂಗಮರ ಮೀಸಲಾತಿ', 'ಲಂಬಾಣಿ – ಸಂಸ್ಕೃತಿ' ಮತ್ತು 'ಗೊಲ್ಲ ಕಡಗ' ಕೃತಿಗಳಲ್ಲಿ ಇಂಥ ಚಲನೆಯನ್ನು ಗುರುತಿಸಬಹುದು.

ತಿಗಳ ಜನಾಂಗದ ಬಗ್ಗೆ ಬರೆಯುತ್ತಿರುವ ಕೆ. ಲಕ್ಷ್ಮಣ್ ಈ ಕೆಲಸ ತಿಗಳರಿಗೆ ತಿಗಳರನ್ನು ಪರಿಚಯಿಸುವುದು ಎನ್ನುತ್ತಾರೆ. ಈ ಜನ ತಮ್ಮ ಬಗ್ಗೆ ವ್ಯೆ ಮರೆತು ಕೂತಿದ್ದಾರೆಂಬುದು ಅವರ ತಿಳುವಳಿಕೆ. ಈ ಜನಾಂಗದ ಅಭಿವೃದ್ಧಿಗೆ ಅವರು ಕಂಡುಕೊಂಡ ಮಾರ್ಗ "ಇಂಥಹ ಪ್ರಯತ್ನ ಸಾರ್ಥಕವಾಗ ಬೇಕಾದರೆ ಈ ಜನಾಂಗಕ್ಕೆ ಒಬ್ಬ ಕುಲಗುರುವಿನ ಅವಶ್ಯಕತೆ ಇದೆ. (ಇದರ ಬಗ್ಗೆ ಇತರ ಜನಾಂಗದವರಲ್ಲಿ ಆದ ಬದಲಾವಣೆಗಳನ್ನು ಕಾಣಬಹುದಾಗಿದೆ). .. ಈ ದೆಸೆಯಲ್ಲಿ ಜನಾಂಗದ ಹಿರಿಯರು ಎಲ್ಲ ಶಾಸ್ತ್ರಗಳನ್ನು ಬಲ್ಲ ಮತ್ತು ಜನಾಂಗದ ನೇತೃತ್ವ ವಹಿಸಬಲ್ಲಂತಹ ಕುಲಗುರುವನ್ನು ಪಡೆಯುವ ಬಗ್ಗೆ ಇಲ್ಲವೇ ಅಂತಹ ವ್ಯಕ್ತಿತ್ವವನ್ನು ವಿದ್ಯೆ, ಸಿದ್ಧಿ ಸಾಧನೆಗಳೊಂದಿಗೆ ತಯಾರು ಮಾಡುವ ಬಗ್ಗೆ ಚಿಂತನೆಗಳನ್ನು ನಡೆಸುತ್ತಿದ್ದಾರೆ (ಪು. ೧೦೮)" ಗುರುವನ್ನು ತಯಾರು ಮಾಡುವ ಯೋಚನೆಯೆ ಆ ಜನಾಂಗ ಜನಪದವಾಗಿ ಅಸಂಘಟಿತ ವಾಗಿದೆ ಹಾಗೂ ಬೌದ್ಧಿಕವಾಗಿ ಹಿಂದೆ ಬಿದ್ದಿವೆ ಎಂದು ಅರ್ಥ. ಆದರೆ ಅವರು ಎಟುಕಿಸಿಕೊಳ್ಳಲು ಹೊರಟಿರುವ ಆದರ್ಶ ಗುರುವಿನ ನೇತೃತ್ವದ ಮೂಲಕ ಹಣ ತರುವ ವಿವಿಧ ಬಗೆಯ ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸುವುದು. ಈ ಕಾರಣಕ್ಕೆ ತಮ್ಮ ಜನಾಂಗದ ಅಸ್ತಿತ್ವವನ್ನು ಪೌರಾಣಿಕ ಹಾಗೂ ಜನಪದೀಯ ಆಚರಣೆ ಮತ್ತು ಕೃಷಿ ಬದುಕಿನ ಮೂಲಕ ಪ್ರತಿಪಾದಿಸುತ್ತಾರೆ. ಈ ಕಾರಣಕ್ಕೆ ಕೆಳವರ್ಗ ಗಳನ್ನು ದೂಷಿಸಲಾಗುವುದಿಲ್ಲ. 'ಹಿರಿಯಕ್ಕನ ಚಾಲು ಮನೆ ಮಕ್ಕಳಿಗೆಲ್ಲ" ಎಂಬಂತೆ ಮೇಲ್ಜಾತಿಯ ಮೂಲಕ ಅವರು ಬದುಕಿನ ಸಂದೇಶವನ್ನು ಹುಡುಕುತ್ತಿದ್ದಾರೆ. ಭಾರತದ ಅಭಿವೃದ್ಧಿ ತತ್ವ ದಾರಿತಪ್ಪಿರುವುದೇ ಇಲ್ಲಿ; 'ತೋಳನ ಕೈಗೆ ಕುರಿ ಕಾಯುವ ಕೆಲಸ ಕೊಟ್ಟಂತೆ'.

ಶೋಷಿತ ಜಂಗಮರ ಮೀಸಲಾತಿ ಕುರಿತ ಕೃತಿ ಬೇರೆಯದೆ ನೆಲೆಯಲ್ಲಿ ವಾದ ಹೂಡುತ್ತದೆ. ತಕರಾರು ಶುರುವಾಗುವುದು ಇಲ್ಲಿ. "ಭಾರತದ ಯಾವ ಗ್ರಾಮದಲ್ಲೂ ಇಲ್ಲಿಯ ತನಕ ಜಂಗಮರ ಮಕ್ಕಳು ಶಾಲೆಯ ಹೊರಗಡೆ ಕುಳಿತು

ವ್ಯಾಸಂಗ ಮಾಡಿದ ದಾಖಲೆಗಳಿಲ್ಲ. ಬ್ರಾಹ್ಮಣರಂತೆ ಶ್ರೇಷ್ಠರೆನ್ನುವ ಈ ಜನಾಂಗ ದಿಢೀರನೇ ಅಸ್ಪೃಶ್ಯರಾದ ಬಗ್ಗೆ ಆಶ್ಚರ್ಯದ ಐತಿಹಾಸಿಕ ಘಟನೆಗಳಾಗುತ್ತಿವೆ (೧೦೩) "ವೀರಶೈವ ಜಂಗಮರು ಮತ್ತು ಬೇಡರ ಜಾತಿಯ ಜನರು ಇಂತಹ ಮುಗ್ಧರ ಬದುಕಿನ ಆಧಾರ ಸ್ತಂಭವಾದ ಮೀಸಲಾತಿಯನ್ನು ಅಲುಗಾಡಿಸುತ್ತಿರುವುದನ್ನು ಪರಮೇಶ್ವರನು ಸಹ ಒಪ್ಪಿಕೊಳ್ಳುವುದಿಲ್ಲ (೧೬೬)". "೧೯೮೦ರಲ್ಲಿ ವೀರಶೈವ ಜಂಗಮರು ಈ ಜನಾಂಗದ ಹೆಸರಿನ ಮೇಲೆ ಸಂಘ ಸ್ಥಾಪಿಸಿರುವುದು ಅಷ್ಟೇ ಅಕ್ರಮವಾಗಿದೆ. ಆದುದರಿಂದ ಸಹಕಾರಿ ಕಾಯಿದೆಗಳಿಗೆ ತಿದ್ದುಪಡಿ ತಂದು ಇಂತಹ ಅಪಕೃತ್ಯಗಳಿಗೆ ಕಾನೂನುಬದ್ಧವಾದ ದಂಡನೆ ವಿಧಿಸಬೇಕಾದ ಕರ್ತವ್ಯವನ್ನು ಸರ್ಕಾರ ವಹಿಸಿಕೊಳ್ಳಬೇಕಾಗಿದೆ. ಬಲವಂತವಾಗಿ ಪ್ರಯೋಗಿಸಿದ ಮಾಹಿತಿಯಿಂದ ದಕ್ಷಿಣ ಭಾರತದ ದಲಿತರ ಪಾಲಿಗೆ ಮರಣ ಶಾಸನವಾಗಿದೆ"(೧೭೬). "ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಕೆಲವು ಬ್ರಾಹ್ಮಣ ಜಾತಿಯ ಜನರಿದ್ದಾರೆ" (೧೭೪). ಇಡೀ ಕೃತಿಯನ್ನು ಓದುತ್ತಿದ್ದರೆ ಭಾರತ ದರಿದ್ರ ಅಭಿವೃದ್ಧಿ ಸಿದ್ಧಾಂತ ಎದುರು ಬೀಳುತ್ತದೆ. ಒಂದು ಜಾತಿ, ಒಂದು ಪಂಗಡವನ್ನು ಮತ್ತೊಂದು ಜಾತಿ ಮತ್ತು ಪಂಗಡ ಕಿತ್ತು ತಿನ್ನುವುದೇ ಅಭಿವೃದ್ಧಿ ಸಿದ್ಧಾಂತವಾಗಿದೆ. ಭಾರತದ ಸನಾತನ ಜಾತಿ ಅಭಿವೃದ್ಧಿ ಸಿದ್ಧಾಂತವೇ ಹಾಗೆ. ಮೀಸಲಾತಿಯ ಮೇಲೆ ಜಾತಿಯ ರಣಹದ್ದುಗಳು ಬಿದ್ದಿರುವುದನ್ನು ಮೃತ ಮನಸ್ಸಿನ ದಲಿತರು ಹೇಗೆ ವಿರೋಧಿಸಬಹುದು ಎಂಬುದಕ್ಕೆ ದಾಸನೂರು ಕೂಸಣ್ಣನವರ ಈ ಕೃತಿ ಸಾಕು.

ದುರಂತ ಎಂದರೆ ಲೇಖಕರು ತಮ್ಮ ಸಾಮಾಜಿಕ ನ್ಯಾಯದ ಬಗ್ಗೆ ಬಹುಪಾಲು ಸಾಮಗ್ರಿ ಸಂಗ್ರಹಿಸಿ, ಶ್ರಮಪಟ್ಟು ಚಿಂತನೆ ನಡೆಸುತ್ತಿದ್ದರೂ ಪ್ರಚಲಿತ ಶೋಷಣಾ ಧರ್ಮದಿಂದ ಹೊರಗೆ ನಿಲ್ಲಲು ಸಾಧ್ಯವಾಗಿಲ್ಲ. ಅದೇ ಧರ್ಮ ಅದೇ ಜಾತಿಯ ಮೇಲೆ ತಮ್ಮ ವಿಧಾನಸೌಧದ ಕನಸು ಕಾಣುತ್ತಾರೆ. ಧರ್ಮದ ಕೇಂದ್ರ ದೇವರು ಅಲ್ಲ; ಸತ್ಯಶೋಧನೆ ಎಂಬ ಅಂಬೇಡ್ಕರ್ ಅವರ ಚಿಂತನೆಯನ್ನು ಇವರು ಅರ್ಥ ಮಾಡಿಕೊಳ್ಳುವುದು ಯಾವಾಗ? ಜಾನಪದ ವಿದ್ವಾಂಸರಾದವರಿಗೆ? ಈ ಕೃತಿಯಿಂದ ಒಡೆದ ಮತ್ತೊಂದು ಮುಖದ ಕತೆ ಅರ್ಥವಾಗುತ್ತಿದೆ. ಅದೆಂದರೆ, ಕೆಳವರ್ಗಗಳು ತಮ್ಮನ್ನು ಸಮರ್ಥಿಸಿಕೊಳ್ಳಲು ಜನಪದ ಇತಿಹಾಸ ಸಾಲದೆ ಜನಪದ ಇತಿಹಾಸಕ್ಕೆ ಬರುತ್ತಿರುವುದು. ಅಷ್ಟರ ಮಟ್ಟಿಗೆ ಅಖಂಡ ಜೀವನದ ಪರಿಚಯದ ಕಡೆಗೆ ನಮ್ಮ ದಾರಿ ನಡೆಯುತ್ತದೆ.

ಸಿ. ಎಸ್. ರಾಮಚಂದ್ರ ಅವರು ಏನೂ ಗಲಾಟೆ ಮಾಡಿಕೊಳ್ಳದೆ ಸಂಕೇತಗಳ ಸ್ಥಿತಿ ಮತ್ತು ಬದಲಾವಣೆಯನ್ನು ಅವಲೋಕಿಸುತ್ತಾರೆ. ಸಂಪ್ರದಾಯ ಶೀಲ ಈ ಜನ ತಮ್ಮ ಸಂಸ್ಕೃತಿಯ ಬಗ್ಗೆ ಹೆಮ್ಮೆಯುಳ್ಳವರಾಗಿದ್ದಾರೆ. ಈಗೀಗ

ನೆಮ್ಮದಿಯಿಂದ ಗುಂಪು ಸಂಸ್ಕೃತಿಯನ್ನು ಹಂಚಿಕೊಂಡು ಬದುಕುತ್ತಿದ್ದವರು ಕುಲಗುರು ಮತ್ತು ಮಠದ ಹಾದಿಗುಂಟ ಹೊರಟಿರುವುದನ್ನು ಲೇಖಕರು ದಾಖಲಿಸುತ್ತಾರೆ. ಈ ಬಗ್ಗೆ ಲೇಖಕರು ಯಾವ ವಕಾಲತ್ತನ್ನೂ ವಹಿಸುವುದಿಲ್ಲ. ಸಂಕೇತಿ ಜನಾಂಗದ ಬದುಕು, ಭಾಷೆ, ಸಾಹಿತ್ಯವನ್ನು ಸರಳವಾಗಿ, ನೇರವಾಗಿ ಪರಿಚಯಿಸುತ್ತಾರೆ.

'ಲಂಬಾಣಿ–ಸಂಸ್ಕೃತಿ' ತನ್ನ ಹಕ್ಕಿನ ಬಗ್ಗೆ ಗದ್ದಲವನ್ನೇನೂ ಮಾಡುವುದಿಲ್ಲ; ಇರುವ ಸ್ಥಿತಿ ಹಾಗೂ ಬದಲಾಗದ ಪರಿಸ್ಥಿತಿಯ ಬಗ್ಗೆ ನೊಂದುಕೊಳ್ಳುತ್ತದೆ. ಲಂಬಾಣಿ ಜನ ಒಂದು ಜನಪದ, ಅವರ ಬದುಕು ಪೂರಾ ಜಾನಪದೀಯ. ಅದರಲ್ಲಿ ವಿಶಿಷ್ಟತೆಗಳಿವೆ. ಆದರೆ ಅವು ಬದಲಾಗುವ ಸಾಮಾಜಿಕ ಸಂದರ್ಭದಲ್ಲಿ ಎಂದೆಂದಿಗೂ ವಿಶಿಷ್ಟತೆಗಳಾಗಿಯೆ ಉಳಿಯುತ್ತವೆಯೆ ಎಂಬುದು ಕ್ರಿಯಾಶೀಲ ಜಾನಪದ ಚಿಂತಕನ ಪ್ರಶ್ನೆ. ಆ ಪ್ರಶ್ನೆ ಅವ್ಯಕ್ತವಾಗಿ ಸಣ್ಣರಾಮ ಅವರ 'ಲಂಬಾಣಿ–ಸಂಸ್ಕೃತಿ' ಶೋಧದಲ್ಲಿ ವ್ಯಕ್ತವಾಗಿದೆ.

ಮೇಲಿನ ಲೇಖಕರು ತಮ್ಮ ಜನಾಂಗದೊಳಗೆ ನಿಂತು ಅವರ ಏಳು–ಬೀಳುಗಳನ್ನು ಹತ್ತಿರಕ್ಕೆ ತಂದುಕೊಂಡು ಚರ್ಚಿಸುವವರು. ಅವರಲ್ಲಿ ಸ್ವಂತದ ಕಾಳಜಿಯೂ ಇದೆ, ಒಂದು ಸಮಾಜದ ಬಗ್ಗೆ ಇರಬೇಕಾದ ಸಾಮಾಜಿಕ ಕಾಳಜಿಯೂ ಇದೆ. 'ಗೊಲ್ಲ ಕಡಗ'ದ ಲೇಖಕರು ಗೊಲ್ಲ ಸಮುದಾಯಕ್ಕೆ ಬದುಕಿನಿಂದ ಹೊರಗಡೆಯವರು, ಸಂಶೋಧನೆಯ ನೆಲೆಯಲ್ಲಿ ಹತ್ತಿರದವರು. ಮೀರಾಸಾಬಿಹಳ್ಳಿ ಶಿವಣ್ಣ ಗೊಲ್ಲರ ಸಂಸ್ಕೃತಿಯನ್ನು ಹತ್ತಿರದಿಂದ ಕಂಡು, ಅನುಭವಿಸಿ ಆಪ್ತವಾಗಿ ಬರೆಯುತ್ತಾರೆ. ಅವರ ಸಂಸ್ಕೃತಿ ದೊಡ್ಡದಾಗಿ ಕಂಡಿರುವಂತೆ ಅವರ ಕಷ್ಟಗಳು ಅವರನ್ನು ಕಾಡಿವೆ. ಎಚ್ಚೆತ್ತ ಜನಾಂಗಗಳ ಅಬ್ಬರಗಳ ಮಧ್ಯೆ ಇವರು ಏನಾಗುತ್ತಿದ್ದಾರೆ? "ಇಡೀ ಗೊಲ್ಲ ನಡಾವಳಿಗಳೇ ಪರಿಶುದ್ಧತೆಯತ್ತ ಧೇನಿಸುತ್ತಿರುವಂತೆ ಕಂಡುಬರುತ್ತಿದೆ",(೯)ಎನ್ನುತ್ತಾರೆ. ಇದೇನೋ ಆಧುನಿಕ ಜಗತ್ತು ಕಲಿಯಬೇಕಾದ ಪಾಠ. ಆದರೆ ಈ ಜಗತ್ತು ಅದನ್ನು ತಮ್ಮ ನಡಾವಳಿಯಿಂದ ಕೈ ಬಿಟ್ಟಿದೆಯಲ್ಲ! ನಮ್ಮ ಇವತ್ತಿನ ಅಭಿವೃದ್ಧಿ ಸಿದ್ಧಾಂತ ಈ ಕಾಡು ಗೊಲ್ಲರನ್ನು ಎಲ್ಲಿ ಪ್ಲೇಸ್ ಮಾಡುತ್ತವೆ ಎಂಬುದೆ ನಮ್ಮ ಆತಂಕ

ಜನಪದ ಮಹಾಕಾವ್ಯ : ಮಹತ್ತಿನ ಮೇಲೆ ಸವಾರಿ

ಕನ್ನಡ ವಿಶ್ವವಿದ್ಯಾನಿಲಯ ಒಂದು ಜನಪದ ಮಹಾಕಾವ್ಯಗಳ ಪರ್ವವನ್ನು ಆರಂಭಿಸಿದೆ. ಒಂದು ನಾಡಿನ ಸಂಸ್ಕೃತಿ ನಿರ್ಮಿತಿಯಲ್ಲಿ ಇವುಗಳ ಪಾತ್ರ ಬಹುದೊಡ್ಡದು. ಇವುಗಳನ್ನು ಮೊತ್ತದ ಕೃತಿಗಳಾಗಿ ಪರಿಗಣಿಸುವುದು ಶಿಷ್ಟ ಸಾಹಿತಿಗಳ ಮನೋಧರ್ಮ. ಅವರಿಗೆ ಅವು ಪರಾಮರ್ಶನ ಕೃತಿಗಳು. ಜನಪ

ಬದುಕಿಗೆ ಅವು ಮಹಾ ಪ್ರಕ್ರಿಯೆ ಹಾಗೂ ಮುಂದಾಲೋಚನೆಯ ಮಾರ್ಗದರ್ಶಿಗಳು. ಒಂದು ಬುಡಕಟ್ಟು ಪಂಗಡ, ಕುಲ ಅಥವ ಜನಪದ ಒಂದರ ಒಂದು ಪರ್ವದ ಒಟ್ಟು ಸಂಭವದ ಪರಿಣಾಮಗಳು; ರಾಮಾಯಣ ಮತ್ತು ಮಹಾಭಾರತಗಳ ಹಾಗೆ. ಜನಪದ ಸಂಸ್ಕೃತಿಯ ಪರಿಣಾಮದಲ್ಲಿ ಒಂದು ರಾಮಾಯಣ ಇಲ್ಲದಿರಬಹುದು, ಮಹಾಭಾರತವಂತೂ ಇದ್ದೇ ಇರುತ್ತದೆ. ಅದಿಲ್ಲದೆ ಬದುಕು ದಾಖಲಾಗುವುದು ಹೇಗೆ ?

ಬುಡಕಟ್ಟು, ಪ್ರದೇಶಕಟ್ಟು ಹಾಗೂ ಮಾರ್ಗಕಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯ ಸಂಗ್ರಹಿಸಿದ ಮಹಾಕಾವ್ಯಗಳು ಜನಪದ ಇತಿಹಾಸವನ್ನು ಸೃಷ್ಟಿಸಿವೆ. ಬುಡಕಟ್ಟಿನ ನ್ಯಾಯಕ್ಕಾಗಿ, ಪ್ರದೇಶಕಟ್ಟಿನ ಆರ್ಥಿಕ ಸಂರಕ್ಷಣೆಗಾಗಿ, ಮಾರ್ಗಕಟ್ಟಿನ ಚಾಲನೆಯ ಸಂದರ್ಭದಲ್ಲಿ ಎದುರಾದ ಶತೃಗಳ ದಮನಕ್ಕಾಗಿ ಸಾಂಸ್ಕೃತಿಕ ನಾಯಕರು ಹೋರಾಟ ನಡೆಸಿದ್ದಾರೆ. ಇಂಥ ದೊಡ್ಡ ಸಾಂಸ್ಕೃತಿಕ ಪ್ರಕ್ರಿಯೆಯನ್ನು ಆರಂಭಿಸಿರುವ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಕನ್ನಡ ಜನತೆ ಬೆಂಬಲವಾಗಿರಬೇಕು.

ಗಂಗಾಧರ ದೈವಜ್ಞ ಮಾಳಿಂಗರಾಯನ ಕಾವ್ಯ ಸಂಗ್ರಹವನ್ನು ಹದವರಿತು ಮಾಡಿದ್ದಾರೆ. ಕಾವ್ಯದ ಪರಿಚಯ ಮಾಡಿಕೊಟ್ಟಿದ್ದಾರೆ. ಆ ಕಾವ್ಯದೊಳಗೆ ಒಬ್ಬ ವೀರ ಹಾಗೂ ಒಬ್ಬ ಸಿದ್ಧ ಒಟ್ಟಾಗಿರುವ ಸೃಜನಶೀಲ ನಾಯಕನನ್ನು ಗುರುತಿಸಿದ್ದಾರೆ. ಗೊಂಡರ ರಾಮಾಯಣ ಒಳ್ಳೆಯ ಸಂಗ್ರಹ. ಸಂಗ್ರಾಹಕ ಹಿ. ಚಿ. ಬೋರಲಿಂಗಯ್ಯನವರ ಪ್ರಸ್ತಾವನೆ ಹೊಸ ನೆಲೆಯ ಚಿಂತನೆ. ಎ. ವಿ. ನಾವಡರು ಸಿರಿಕಾವ್ಯವನ್ನು ಸಮಗ್ರ ನೋಟದಲ್ಲಿ ಕಂಡು ಸಂಗ್ರಹಿಸಿದ್ದಾರೆ. ಅವರ ಸುದೀರ್ಘ ಮುನ್ನುಡಿ ಕಾವ್ಯವನ್ನು ಪ್ರವೇಶಿಸಲು ಮತ್ತು ಅರ್ಥೈಸಲು ನೆರವಾಗುತ್ತದೆ. ಒಂದು ಒಳ್ಳೆಯ ಸಂಗ್ರಹಕ್ಕೆ ಇರಬೇಕಾದ ಎಲ್ಲ ಲಕ್ಷಣಗಳೂ ಇವರ ಸಿರಿಕಾವ್ಯ ಸಂಗ್ರಹದಲ್ಲಿವೆ.

ಮಂಜುನಾಥ ಬೇವಿನಕಟ್ಟಿ ಬಹುದೊಡ್ಡ ಮೈಲಾರ ಲಿಂಗನ ಕಾವ್ಯವನ್ನು ಶ್ರದ್ಧೆಯಿಂದ ಸಂಗ್ರಹಿಸಿಕೊಟ್ಟಿದ್ದಾರೆ. ಕೃತಿಯ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಬೇಕಿತ್ತು. 'ಸ. ಚಿ. ರಮೇಶಸ್ವಾಮಿ ಚಿನ್ನಮ್ಮನ ಕಾವ್ಯವನ್ನು ಅಚ್ಚುಕಟ್ಟಾಗಿ ಸಂಗ್ರಹಿಸಿಕೊಟ್ಟಿದ್ದಾರೆ. ಮಹಾಕಾವ್ಯ ಮತ್ತು ಜನಪದ ಸಂಸ್ಕೃತಿಯ ಬಗ್ಗೆ ಸಾಮಾನ್ಯ ಜ್ಞಾನ ನೀಡುವ ಪ್ರಸ್ತಾವನೆ ಬರೆದಿದ್ದಾರೆ. ಈ ಬಗೆಯ ಕಾವ್ಯಗಳ ಸಂಗ್ರಹ, ಸಂಪಾದನೆ ಹಾಗೂ ವಿಶ್ಲೇಷಣೆಯನ್ನು ಕನ್ನಡ ವಿಶ್ವವಿದ್ಯಾಲಯ ಮುಂದುವರಿಸಬೇಕು. ಈ ಕಾರಣಕ್ಕೆ ಕರ್ನಾಟಕದ ಬೇರೆ ಬೇರೆ ಭಾಗಗಳನ್ನು ಪಡೆಯಬೇಕು. ಇದು ಕೇವಲ ಕಾವ್ಯ ಸಂಗ್ರಹದ ಕೆಲಸವನ್ನು ಸಂಸ್ಕೃತಿ ಸಂಗ್ರಹ ಹಾಗೂ ಸಂಸ್ಕೃತಿ ಪುನರ್ ನಿರ್ಮಾಣದ ಕೆಲಸ. ಆದರೆ ಸಂಖ್ಯೆಯನ್ನು ಹೆಚ್ಚಿಸಬಾರದು.

ಸಂಗ್ರಹ ಚಿಂತನೆ : ಬದ್ಧತೆ – ವ್ಯಸನ

ಚಿಕ್ಕ ಕಾವ್ಯಗಳಲ್ಲಿ ದೊಡ್ಡ ಹೆಜ್ಜೆಗಳೇನೂ ಕಾಣದು. ಚಿಕ್ಕಣ್ಣ ಯೆಣ್ಣೆಕಟ್ಟೆ ಅವರ ಚಿತ್ರದೇವರ ಕಾವ್ಯ ಸಂಗ್ರಾಹಕರು ಹೇಳುವಂತೆ ಈ ದೇವರನ್ನು ಕುರಿತ ಮೊದಲ ಕಾವ್ಯ ಸಂಗ್ರಹ. ಈ ಕಾವ್ಯದ ಬಗ್ಗೆ ಅವರು ಮನಸೋತಿದ್ದಾರೆ. ಶ್ರದ್ಧೆ ವಹಿಸಿ ಅಚ್ಚುಕಟ್ಟಾಗಿ ಸಂಗ್ರಹಿಸಿದ್ದಾರೆ. ಡಿ. ಎಸ್. ಅಕ್ಕಿಯವರ 'ಹಡದವ್ವ ಹಾಡ್ಯಾಳೆ' ಸಂಗ್ರಹದಲ್ಲಿ ಇಪ್ಪತ್ತೇಳು ಹಾಡುಗಳಿದ್ದು ಜೈನಧರ್ಮ ನೆಲದಲ್ಲಿ ನೆಲೆಯೂರಿರುವ ಆಶಯಗಳು ಸಿಗುತ್ತಿವೆ. ಜಿನಧರ್ಮದ ಮಣ್ಣಿನ ಸಂಬಂಧವನ್ನು ನಿರುಕಿಸುವ ನೂರ ಎಂಟು ಹಾಡುಗಳು 'ಜೈನ ಜನಪದ ಹಾಡು' ಸಂಗ್ರಹದಲ್ಲಿವೆ. ಬೇರೆ ಒಂಬೆನಡು ಗೀತ ಸಮುಕಲನಗಳಿವೆ, ಅವು ನಕಲಿಗಳು.

ಸುಧಾಕರ ಅವರ 'ಶಿವಗಾದೆ ಸುತ್ತಿನ' ಜನಪದ ಕತೆಗಳು. ಜೀನಹಳ್ಳಿ ಸಿದ್ದಲಿಂಗಪ್ಪ ಅವರ 'ಸುಮ್ ಸುಮ್ಕೆ ಬಸವಯ್ಯ' ಮತ್ತು ಪಿ. ಕೆ. ರಾಜಶೇಖರ ಅವರ 'ಮಾತಿನರಗಿಣಿ' ಈ ವರ್ಷದ ಪ್ರಮುಖ ಜನಪದ ಕಥಾ ಸಂಗ್ರಹಗಳು. ಈ ಮೂವರೂ ಈ ಕ್ಷೇತ್ರದಲ್ಲಿ ಪಳಗಿದವರು. 'ಸುಮ್ ಸುಮ್ಕೆ ಬಸವಯ್ಯ' ಸಂಗ್ರಹಕ್ಕೆ ವಿಮರ್ಶಕರಾದ ಎಸ್–ಶಿವಾನಂದ ಗಮನಸೆಳೆಯುವ ವಿಮರ್ಶೆ ಮಾಡಿದ್ದಾರೆ. ಸಾಂಪ್ರದಾಯಿಕ ಜಾನಪದ ವಿದ್ವಾಂಸರ ಕಥಾ ವಿಶ್ಲೇಷಣೆಯ ಜಾಡು ಹರಿದು; ಸಾಹಿತ್ಯ – ಸಂಸ್ಕೃತಿಯ ನೆಲೆಯಲ್ಲಿ ಇಲ್ಲಿಯ ಜನಪದ ಕಥೆಗಳನ್ನು ವಿಶ್ಲೇಷಿಸಿದ್ದಾರೆ. ಇದೇ ಸಂಗ್ರಾಹಕರ 'ಜಾನಪದ ಮತ್ತು ಜಾನಗಣಿತ' ಹಾಗೂ ಜನಪದ ಗಣಿತ ಚಮತ್ಕಾರ ಈ ವರ್ಷ ಪುನರ್ ಮುದ್ರಣಗೊಂಡಿವೆ.

'ಮಾತಿನರಗಿಣಿ' ಪಿ.ಕೆ. ರಾಜಶೇಖರ ಅವರು ಸಂಗ್ರಹಿಸಿದ ಕಥಾ ಸಂಗ್ರಹ. ಹದಿನೈದು ರಮ್ಯಕತೆಗಳಲ್ಲಿ ಒಂದು ಸುದೀರ್ಘ ಸರಪಳಿ ಕತೆ ಇದೆ. ಈ ಸರಪಳಿ ತಂತ್ರ ಶಿಷ್ಟ ಸಮಾಜದ್ದು. ತಂತ್ರ ಜನಪದ ಕತೆಗಾರ್ತಿಯೊಬ್ಬರ ಕಂಠಕ್ಕೂ ಬಂದಿದೆ. ಒಬ್ಬಳೇ ಕಥೆಗಾರ್ತಿಯ ಬಗ್ಗೆ ಸಂಗ್ರಾಹಕರು ಹೊಸ ರೀತಿಯ ಪರಿಚಯ ಮಾದರಿಯೊಂದನ್ನು ಅಳವಡಿಸಿ ನಮ್ಮೆದುರಿಗೆ ಕೂರಿಸಿದ್ದಾರೆ.

ಈ ವರ್ಷದ ಗಾದೆ, ಒಗಟು ಸಂಗ್ರಹಗಳ ಬಗ್ಗೆ ಹೇಳುವಂತಿಲ್ಲ; ಅವೆಲ್ಲ ಸಂತೆಯ ಮಾಲುಗಳು. ಹೆಚ್. ನಂಜೇಗೌಡರ ಸಂಗ್ರಹ ವಾಸಿ. ಅವರೂ ಪೂರಾ ಮೌಖಿಕ ಪರಂಪರೆಯ ಗಾದೆಗಳನ್ನು ಸಂಗ್ರಹಿಸಿಲ್ಲ. ಜಾಗತಿಕ ಮಾರುಕಟ್ಟೆ ನಮ್ಮ ಜಾನಪದಕ್ಕೂ ಪ್ರವೇಶ ಮಾಡಿರುವುದರ ಸ್ಪಷ್ಟ ಸೂಚನೆಗಳು ಗಾದೆ ಒಗಟು ಸಂಗ್ರಹಗಳಿಂದ ಕಾಣುತ್ತಿವೆ. ಬೇರೆ ಬೇರೆ ಸಂಗ್ರಹ ಹಾಗೂ ಇತರ

ಮೂಲಗಳಿಂದ ಆಯ್ದುಕೊಂಡು ಸಂತೆ ಮಾರಾಟಕ್ಕೆ ಸಿದ್ಧಪಡಿಸಲಾಗಿದೆ. ಕಡಿಮೆ ಬೆಲೆಗೆ ಆಕರ್ಷಕ ಮಾಲುಗಳು ಅಷ್ಟೆ. ಹೇಳಿದವರ - ಕೇಳಿದವರ ಗುರುತು ಇಲ್ಲ. ನಮಃ ಶಿವಾಯ.

ವೈವಿಧ್ಯ ಚಿಂತನೆ : ಕಟ್ಟು – ಬಿಕ್ಕಟ್ಟು

ಈ ವರ್ಷ ಕೆಲವು ಮುಖ್ಯ ಅನ್ನಬಹುದಾದ ಜಾನಪದ ವಿಮರ್ಶಾ ಕೃತಿಗಳು ಬಂದಿವೆ. ತೀ. .ನಂ. ಶಂಕರನಾರಾಯಣ, ಅರವಿಂದ ಮಾಲಗತ್ತಿ, ರಾಜೇಗೌಡ ಹೊಸಹಳ್ಳಿ, ಎಂ. ಬೈರೇಗೌಡ, ಎ. ವಿ. ನಾವಡ, ಎಂ. ಜಿ. ಈಶ್ವರಪ್ಪ, ಕೆ. ವಿ. ಚಂದ್ರಣ್ಣಗೌಡ ಮತ್ತು ಬಸವಲಿಂಗ ಸೊಪ್ಪಿನ ಮಠ, ನಮ್ಮ ಗಮನ ಸೆಳೆಯುತ್ತಾರೆ. ತೀ.ನಂ. ಶಂಕರನಾರಾಯಣರ 'ಜಾನಪದ ಸಮೀಕ್ಷೆ – ವಿಶ್ಲೇಷಣೆ' ಹಲವು ವರ್ಷಗಳ ಹಲವನ್ನು ಒಳಗೊಂಡ ಕೃತಿ. ಆರಂಭ ದಿಂದಲೂ ಆರಕ್ಕೆ ಏರದೆ ಮೂರಕ್ಕೆ ಇಳಿಯದೆ ಎಲ್ಲರನ್ನೂ ಎಲ್ಲವನ್ನೂ ಏಕ ಪ್ರಕಾರವಾಗಿ ಒಳಗೊಳ್ಳುತ್ತ, ಸಮಸ್ಯೆಗಳನ್ನು ಮೇಲೆಳೆದುಕೊಳ್ಳದೆ ಬರೆಯುವುದನ್ನೂ ಬದ್ಧತೆಯನ್ನೂ ಅಲುಗಾಡಿಸಿಕೊಳ್ಳದೆ, ನಡೆದ ಹಾದಿಯುನ್ನು ವಿವರಗಳಲ್ಲಿ ದಾಖಲಿಸಿಕೊಳ್ಳುತ್ತ; ಅಷ್ಟಕ್ಕೆ ಪ್ರಾಮಾಣಿಕವಾಗಿರುತ್ತ ನಮ್ಮ ಮಧ್ಯದ ಜಾನಪದ ವಿದ್ವಾಂಸ – ತೀ. ನಂ. ಶಂಕರನಾರಾಯಣ ಇಂಥ ನಡವಳಿಕೆ ಹಾಗೂ ಬರಹದ ಪ್ರತಿಕೃತಿಯೇ ಮೇಲಿನ ಪುಸ್ತಕ.

ಒಂದು ಕಡೆಗೆ ಜಾನಪದ ವಿದ್ವಾಂಸರನ್ನು ಪರಿಚಯಿಸುತ್ತ, ಇನ್ನೊಂದು ಕಡೆಗೆ ಸ್ಥಳ–ಸಂಸ್ಥಾನಗಳ ಜಾನಪದವನ್ನು ಪರಿಚಯಿಸುತ್ತ ಮಗುದೊಂದು ಕಡೆ ಜಾನಪದ ಪ್ರಸ್ತುತ ಚರ್ಚೆಯ ಸಂಗತಿಗಳಾದ ನಗರ ಜಾನಪದ, ಅನ್ವಯಿಕ ಜಾನಪದ ಮತ್ತು ಜಾನಪದ ಮುನ್ನೋಟದ ಬಗ್ಗೆಯೂ ಬರೆಯುತ್ತಾರೆ. ಕೆಲವೊಮ್ಮೆ ಗಂಭೀರ ಶೀರ್ಷಿಕೆಗಳಿಂದ ಬರೆಯ ಹೊರಡುವ ತೀ. ನಂ. ಶಂ. ಕೊನೆಗೆ ಮುಖ್ಯವಾದುದೇನನ್ನೂ ಹೇಳದೆ ವಿರಮಿಸುವುದುಂಟು. ವಿಸ್ತೃತ ಓದು, ಸಮೃದ್ಧ ವಿವರ ಬಲ್ಲ ಲೇಖಕರು ಒಂದು ನಿರ್ದಿಷ್ಟ ಬದ್ಧತೆಗೆ ಒಳಗಾಗದಿರುವುದೆ ಅವರ ಬರವಣಿಗೆಯ ಮಿತಿ ಎನಿಸುತ್ತದೆ.

'ಒಂದು ಸೊಲ್ಲು ನೂರು ಸೊರ' ಕೃತಿಯ ಮೂಲಕ ಎ. ವಿ. ನಾವಡರು "ಹಲವು ಹೋಗಿ ಒಂದಾಗುವುದು ಶಿಷ್ಟ ಪದದ ಲಕ್ಷಣ. ಒಂದು ಹಲವಾಗು ವುದು ಜಾನಪದದ ಲಕ್ಷಣ" ಎನ್ನುವ ಸ್ಪಷ್ಟ ಜ ನಪದ ಅರಿವಿನ ಮೂಲಕ ವಿವಿಧ ವಿಷಯಗಳ ಬಹುಮುಖಿ ಚಿಂತನೆ ನಡೆಸಿದ್ದಾರೆ. ಸೋಗು, ಪಾಡ್ದನ, ಕೊಂಕಣ ಖಾವಿನ ಜನಾಂಗ, ಬುಡಕಟ್ಟು ಅಭಿವೃದ್ಧಿ, ಜಾನಪದ ಪಥ್ಯ, ನಂಬಿಕೆ,

ಯಕ್ಷಗಾನ, ಮೌಖಿಕ ಸೂತ್ರ ಸಿದ್ಧಾಂತ, ಕ್ರಿಯಾತ್ಮಕ ಸಿದ್ಧಾಂತ ಮತ್ತು
ಪ್ರದರ್ಶನಾತ್ಮಕ ಸಿದ್ಧಾಂತಗಳ ಬಗ್ಗೆ ಧಾರಾಳವಾಗಿ ಬರೆಯುತ್ತಾರೆ. ಜಾನಪದವನ್ನು
ಉದಾರವಾಗಿ ನೋಡುವ ನಾವಡರು ಎಲ್ಲ ವಿಷಯಗಳ ಬಗ್ಗೆ ತುಂಬ
ಬೀಸಾಗಿಯೆ ಬರೆಯುತ್ತಾರೆ. "ಕಾಡಿನ ನಂಟು ಕಡಿಯಿತು, ಆದರೆ ನಾಡಿನ
ನೆಲದೊಂದಿಗೆ ನಂಟು ಸಾಧ್ಯವಾಗಲಿಲ್ಲ"(೧೭೫) ಎಂದು ಬುಡಕಟ್ಟಿನ ಸ್ಥಿತಿ
ಬಗ್ಗೆ ಕಳವಳ ವ್ಯಕ್ತಮಾಡುತ್ತಾರೆ. ಬೇರೆ ವಿಷಯಗಳ ಮೇಲಿನ ಬರವಣಿಗೆಗಿಂ
ಸಿದ್ಧಾಂತಗಳ ಕುರಿತ ಬರವಣಿಗೆಯಲ್ಲಿ ನಾವಡರ ಶ್ರದ್ಧೆ ಹೆಚ್ಚು ನಿರ್ದಿಷ್ಟವಾ
ಕೆಲಸ ಮಾಡುತ್ತಿರುವಂತಿದೆ.

"ಈ ಬೌದ್ಧಿಕ ದಾಸ್ಯತ್ವ, ಆರ್ಥಿಕ ದಾಸ್ಯತ್ವದಿಂದ ಮುಂದುವರೆದ
ರಾಜಕೀಯ, ಧಾರ್ಮಿಕ, ಶೈಕ್ಷಣಿಕ, ಭಾಷಿಕ ಇಂಥವೆಲ್ಲ ದಾಸ್ಯಗಳಿಂ
ಮುಕ್ತರಾಗಲು ನಮಗೆ ದೇಶೀವಾದವೆ ಮೂಲ ಮಂತ್ರ"(೩೪) ಎಂದು ಹೊರಡು
ಅರವಿಂದ ಮಾಲಗತ್ತಿ ಅವರು ತಮ್ಮ ಕೃತಿ 'ಪುರಾಣ ಜಾನಪದ ಮತ್ತು ದೇಶಿ
ವಾದ' ಕೃತಿಯಲ್ಲಿ ದೇಶೀವಾದವನ್ನು "ಒಂದು ಜನಾಂಗದ ಹಾಗೂ ನೆಲೆ ನಿಂ
ಮಣ್ಣಿನ ವಾಸನೆಯಿಂದ ಹೊರ ಬಂದ ಸೂತ್ರಬದ್ಧವಾದ ಎಲ್ಲ ಮೊತ್ತವನ್ನು
ದೇಶೀವಾದ ಎಂದು ಕರೆಯಬಹುದು"(೩೫) ಎನ್ನುತ್ತಾರೆ. ಇವರ ಬಿಟ್ಟು ದೇಶಿ
ಚಿಂತನೆ ವಿಧಿ ಬಂಧ ಮತ್ತು ಅವುಗಳ ಉಲ್ಲಂಘನೆಯ ಸಂಬಂಧಗ
ವಿಶ್ಲೇಷಣೆಗೆ ಬದ್ಧವಾಗಿವೆ. ಆದಕಾರಣ, ಭಾರತೀಯ ದೇಶೀಯತೆಯನ್ನು
ವಿವರಿಸುವಾಗ ಹಿಂದೂ ಸಮಾಜದ ಜೀವ ಕೋಶಗಳಾದ ಜಾತಿ, ವರ್ಣ ಮತ್ತು
ಧರ್ಮಗಳೆಂಬ ಸಂಬಂಧಾತ್ಮಕ ಪರಿಕಲ್ಪನೆಗಳು ಅವರ ಚಿಂತನೆಯ ಆಕರಗಳಾ
ತ್ತವೆ. ಅವರ ಈ ಚಿಂತನೆ ಒಂದು ಪ್ರತಿ ಸಂಸ್ಕೃತಿಯ ನೆಲೆಗೆ ನಮ್ಮ
ಒಯ್ಯುವಂತಿದೆ.

ಮಾಲಗತ್ತಿಯವರ ಬರವಣಿಗೆ ತುಂಬ ಶಿಸ್ತುಬದ್ಧ ಹಾಗೂ ತರ್ಕಬ
ವಾಗಿರುವುದರಿಂದ ಬರೆಯುತ್ತ ಅವರು ದಣಿಯುತ್ತಿರುವಂತೆ ಹಾಗೂ ಓದುಗರ
ದಣಿಸುತ್ತಿರುವಂತೆ ಕಾಣುತ್ತದೆ. ಅವರು ಚಿಂತನೆಯನ್ನು ಸುಲಭವ
ತೆಗೆದುಕೊಂಡಂತೆ ಕಾಣುವುದಿಲ್ಲ. ತಮ್ಮ ಆಸ್ತ ವಿಷಯವಾದ ಜನಪ
ಗಳಿಗೆ ಒಳಹೋಗುತ್ತ ಎಲ್ಲ ಸಾಧ್ಯವಾದ ವಾದಗಳನ್ನು ಗಣಿಯಿಂದ ತೆಗೆದ
ಹಾಕುತ್ತಾರೆ. ಈ ಸಂಕಲನದ ಅವರ "ಪುರಾಣದ ಸೃಷ್ಟಿ ಕ್ರಿಯೆ: ನಾಯ
ಸಿದ್ಧಾಂತ ಮತ್ತು ಸೃಜನಶೀಲ ಸಾಹಿತ್ಯಕ್ಕೊಂದು ನವಪುರಾ" ಲೇಖನ ಸ
ಶಿಸ್ತಿನ ಹೊಸ ಆಲೋಚನಾ ವಿಧಾನ.

"ಜಾನಪದ ವೈವಿಧ್ಯ"ದ ಎಂ. ಭೈರೇಗೌಡರ ಬರವಣಿಗೆಯ ರೀತಿಯೇ ಬೇರೆ. ಅದು ಸರಳ, ನೇರ; ಬಾರೆ ಹೊಲಕ್ಕೆ ನಾಟಿಹಾಕಿದಂತೆ ಅವರು ಸಾಮಗ್ರಿ ಮಾತ್ರ ಕೊಡುವುದಿಲ್ಲ, ಅದರ ಜೊತೆಗಿನ ಸಮಸ್ಯೆಯನ್ನೂ ಜೊತೆಮಾಡಿ ಕೇಳುತ್ತಾರೆ. ಸಾಂಪ್ರದಾಯಿಕ ಸಂಗ್ರಾಹಕನಿಗೆ ಸಿಕ್ಕದ – ದಕ್ಕದ ಕೆಲವು ನೆಲೆಗಳು ಇವರ ಪ್ರಜ್ಞೆಗೆ ಬರುತ್ತವೆ. ಇವರಲ್ಲಿ ಮುಕ್ತ – ಚಲನಶೀಲ ಮನಸ್ಸಿದೆ. ಇವರು ಬುಡಕಟ್ಟುಗಳ ಬಗ್ಗೆ ಹೇಳುವುದೆ ಒಂದು ಚಂದ ಅನಿಸುತ್ತದೆ. ಇದು ಕೆಲವೊಮ್ಮೆ ಜನಪ್ರಿಯ ಧಾಟಿ ಇರಬಹುದೆ ಅನಿಸುವುದೂ ಉಂಟು. ಬುಡಕಟ್ಟು ಕುರಿತು ಅಧಿಕೃತವಾಗಿ ಮಾತನಾಡಬಲ್ಲ ಲೇಖಕರು ಆ ಕುರಿತ ಲೇಖನಗಳಲ್ಲಿ ಆಧುನಿಕತೆ ಹಾಗೂ ಆಧುನಿಕತೆಯ ಮಾದರಿಯಾದ ಕೆಲ ಸಂಗ್ರಾಹಕರು ಶೋಷಕರಾಗಿರುವ ಬಗ್ಗೆ ಆಕ್ರೋಶದಿಂದ ಬರೆಯುತ್ತಾರೆ. ಅಷ್ಟೇ ಪ್ರಾಮಾಣಿಕತೆ ಆಗುವುದಿಲ್ಲ ಎನ್ನುವುದಕ್ಕೆ ಗ್ರಾಮಸಂಸ್ಕೃತಿ ಕುರಿತ ಅವರ ವೈಭವದ ಬರವಣಿಗೆಗಳು ಸಾಕ್ಷಿ.

'ಜಾನಪದ ಸಂಕಥನ'ದ ಹದಿಮೂರು ಲೇಖನಗಳನ್ನು ಓದುಗರ ಎದೆಗೆ ಚಾಚುವ ರಾಜೇಗೌಡ ಹೊಸಹಳ್ಳಿ ತಮ್ಮ ಜಾನಪದ ಬದ್ಧತೆಯ ಬಗ್ಗೆ ಹೀಗೆ ಹೇಳಿಕೊಳ್ಳುತ್ತಾರೆ : "ನಾನು ಜಾನಪದ ಕ್ಷೇತ್ರಕಾರ್ಯದಲ್ಲಿ ದೊರಕಿದ ಮತ್ತು ಅನುಭವದಲ್ಲಿ ಕೆನೆಗಟ್ಟಿದ ವಸ್ತುಗಳನ್ನು ಹಿಮ್ಮುಖವಾಗಿ ಕೆದಕುವವನು". ವಾಸ್ತವದಲ್ಲಿ ರಾಜೇಗೌಡರು ಹಾಗಲ್ಲ; ಒಳಕ್ಕೆ ಡೈವ್ ಮಾಡಿ ಅಲ್ಲಿ ಮಿಸುಕುವ ಮನಸ್ಸುಗಳನ್ನು ಹಿಡಿಯುವವರು, ಓದುಗರನ್ನು ಸ್ಪರ್ಶಿಸುವವರು. ಆ ಕಾರಣಕ್ಕೆ ಇಲ್ಲಿಯ ಲೇಖನಗಳು ಒಂದಕ್ಕಿಂತ ಒಂದು ಮೇಲಾಗಿವೆ, ಮನನೀಯವಾಗಿವೆ ಮತ್ತು ಖುಷಿ ಕೊಡುತ್ತವೆ.

ಎಂ. ಜಿ. ಈಶ್ವರಪ್ಪ ನಮ್ಮ ನಡುವೆಯ ಕ್ರಿಯಾಶೀಲ ಜಾನಪದ ಸಂಗ್ರಾಹಕ ಮತ್ತು ವಿಮರ್ಶಕ. ಅವರು ಜಾನಪದದಲ್ಲಿ ತಮಗೆ ಹೇಳಬೇಕೆನಿಸುವುದರ ಬಗ್ಗೆ ಕಷ್ಟಪಡುವುದಿಲ್ಲ. ಅವರ 'ಜಾನಪದ ಇಬ್ಬನಿ' ಕೃತಿಯಲ್ಲಿ ಇದನ್ನು ಕಾಣಬಹುದು. ಕೃಷಿ ಸಂಬಂಧಿ ಜಾನಪದ ವಿಷಯಗಳ ಬಗ್ಗೆ ಜರೂರಿನಿಂದ ಬರೆಯುವ ಅವರು ಹಬ್ಬಣ ಹಾಗೂ ರಾಮಧಾನ್ಯ ಚರಿತೆಯ ಜಾನಪದೀಯ ನೆಲೆಗಳನ್ನು ಬಿಡಿಸಿ ಬ್ರೀಪ್ ಆಗುತ್ತಾರೆ.

'ವಿಚಾರ ವೀಳ್ಯ' ಕೆ. ವಿ. ಚಂದ್ರಣ್ಣ ಗೌಡರ ಜಾನಪದ ಹಾಗೂ ಇತರ ವಿಷಯಕ ಹನ್ನೊಂದು ಲೇಖನಗಳ ಸಂಕಲನ. ಜಾನಪದ ಕುರಿತ ಲೇಖನಗಳಲ್ಲಿ ಒಬ್ಬ ಉದಾರವಾದಿ ಲೇಖಕನ ಒಳ್ಳೆಯ ಮಾತುಗಳು ತುಂಬ ಇವೆ. ಸಾಮಾನ್ಯ ಓದುಗ ಹತ್ತಿರದಿಂದ ಆಕರ್ಷಿತನಾಗುತ್ತಾನೆ, ಹೊಸ ಓದುಗ ತುಂಬ ಖುಷಿಯನಾಗುತ್ತಾನೆ. ಆರೋಗ್ಯಕರ ಚಿಂತನೆ ಇದೆ. ಆದರೆ ಅದು ಆಳಕ್ಕೆ

ಉಳಿಯುವುದಿಲ್ಲ ಮತ್ತು ಹೆಚ್ಚು ದೂರ ನಡೆಯಲಾರದು. ಆಕರ ಸಂಪುಟದ ಬಸವಲಿಂಗ ಸೊಪ್ಪಿನ ಮತ ಅವರದು. ಜಾನಪದ ಸಂಬಂಧಿ ಕುತೂಹಲ ಕೆರಳಿಸುವ ವಿದ್ವತ್ತು ಲೇಖನಗಳಲ್ಲಿದೆ. ಅವರ ಬರವಣಿಗೆ ಲವಲವಿಕೆ ಬಂದರೆ ಹೆಚ್ಚು ಸಾಧಿಸಬಲ್ಲರು.

"ಪ್ರಸ್ತುತ ಜಾನಪದ ಭಿತ್ತಿ' ಗ್ರಂಥದ ಬಹುಪಾಲು ಬರಹಗಳು ದೇಸೀ ನೆಲೆಯಿಂದ ರೂಪುಗೊಂಡಂಥವು" ಎನ್ನುವ ವೈ. ಸಿ. ಭಾನುಮತಿ ಅವರ ಲೇಖನಗಳಲ್ಲಿ ತುಂಬ ಸಾಮಗ್ರಿ ಇದೆ. ವಿವರಣೆ ಇದೆ. ಈ ಕೆಲಸಕ್ಕೆ ಅವರು ದೇಶಿ ಎಂದು ಕರೆದುಕೊಂಡಂತೆ ಕಾಣುತ್ತದೆ. ಈ ಬಗೆಯ ತಪ್ಪು ಗ್ರಹಿಕೆ ಅನೇಕ ಮಂದಿಗೆ ಇದೆ. ಇವರ ಬದ್ಧತೆ ಜಾನಪದ ಅಂಶಗಳ ಹುಟ್ಟು, ಆಗುವ ಪದ ನಿಷ್ಪತ್ತಿ, ಬೆಳವಣಿಗೆ – ಈ ಥರದ ಜಾನಪದ ಪ್ರಾಕೃತ ತತ್ವಕ್ಕೆ ಸಂಬಂಧಿಸಿತ್ತು. ಇವರ ಲೇಖನಗಳು ಮಾಹಿತಿ ಕೊಡುವುದಕ್ಕಿಂತ ಹೆಚ್ಚು ಮುಂದೆ ಹೋಗುವುದಿಲ್ಲ. ಜಾನಪದ ಸಾಮಗ್ರಿಯನ್ನು ಸಂಗ್ರಹಿಸುವ, ಸಂಪಾದಿಸುವ ಮತ್ತು ಅದನ್ನು ಓರಣವಾಗಿ ಇಡುವ ಸಾಮರ್ಥ್ಯ ಲೇಖಕಿಗಿದೆ.

ಜೀಶಂಪ ಅವರ ಹೆಸರಿನಲ್ಲಿ ಈ ವರ್ಷ ಬಂದಿರುವ 'ಚಿಂತನ ಲಹರಿ' ಅವರು ಒಂದು ಕಾಲದಲ್ಲಿ ಬರೆದಿದ್ದ ಲೇಖನಗಳನ್ನು ಅವರ ಶಿಷ್ಯರು ಪುಸ್ತಕ ರೂಪದಲ್ಲಿ ತಂದಿರುವುದು. ಆರಂಭಿಕ ಜಾನಪದ ವಿದ್ವಾಂಸನ ಆದರ್ಶ ಬೋಧನೆ ಲೇಖನಗಳ ತಿರುಳು. 'ಜಾನಪದ ಶಾಸ್ತ್ರ' ಎಂಬ ಬಿ. ಬಿ. ಹೆಂಡಿಯವರ ಲೇಖನಗಳ ಸಂಕಲನ ಇದೇ ಮಾದರಿಯದು. ನಿಂಗಣ್ಣ ಸಣ್ಣಕ್ಕಿಯವರ 'ಜಾನಪದ ವೈಭವ' ಒಂದು ವ್ಯಾವಹಾರಿಕ ಬರವಣಿಗೆ. ಮರು ಮುದ್ರಣವಾಗಿ ಹೊರ ಬಂದಿದೆ. ವೃತ್ತಿ ಕಲಾವಿದರ ಬಗ್ಗೆ ಸಾಮಾನ್ಯ ಪರಿಚಯಾತ್ಮಕ ಲೇಖನಗಳಿವೆ.

ವೀರೇಶ ಬಡಿಗೇರರ ಶ್ರದ್ಧೆಯ, ಛಲದ ಬರವಣಿಗೆ 'ಗುಳ್ಳವ್ವ' ಕೃತಿ. ಒಂದು ದೈವ ಮತ್ತು ಅದರ ಸಂಪ್ರದಾಯಗಳನ್ನು ನಾಲ್ಕು ನಿಟ್ಟಿನಿಂದ ನೋಡುವ, ಗ್ರಹಿಸುವ ವಸ್ತುನಿಷ್ಠ ಮನೋಧರ್ಮ ಇಲ್ಲಿದೆ. 'ಜಾನಪದ ವೈವಿಧ್ಯ' ಲೇಖಕರಾದ ಬಿ.ಎಸ್ ಸ್ವಾಮಿಯವರೆ ಹೇಳುವಂತೆ, "ನಲವತ್ತೆರಡು ಜಾನಪದ ಕುರಿತ ಪ್ರಬಂಧ ಮತ್ತು ಟಿಪ್ಪಣಿಗಳ ಸಂಕಲನ. ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಸರಳವಾಗಿ ಬರೆಯಲಾಗಿದೆ. ಸಂಪೂರ್ಣ ವಿವೇಚನೆಗೆ ಒಳಗಾಗದಿದ್ದರೂ ಮಾಹಿತಿಯನ್ನು ಒದಗಿಸುತ್ತವೆ". 'ಹೊಳೆ ದಂಡೆ ಕರಿಕೆ' ಚಿಕ್ಕಣ್ಣ ಯೆಣ್ಣೆಕಟ್ಟೆ ಅವರ ಹನ್ನೆರಡು ಕಿರು ಲೇಖನಗಳ ಸಂಕಲನ. 'ಜಾನಪದ ಸಂಸ್ಕೃತಿ ಹೊಳೆದಂಡೆಯ ಕರಿಕೆಯ ಹಾಗೆ' ಎನ್ನುವ ಲೇಖಕರು ಜಾನಪದದ ಕೆಲವು ಸಂಗತಿ ಹಾಗೂ ಮತ್ತೆ ಕೆಲವು ವಿಸಂಗತಿಗಳನ್ನು ಸರಳವಾಗಿ ಚರ್ಚಿಸಿದ್ದಾರೆ.

ಈ ವರ್ಷ ಜಾನಪದ ಸಮಾಚಾರ ಎಂಬ ಎರಡು ಜಾನಪದ ಅಕಾಡೆಮಿಯ ಸಂಚಿಕೆಗಳು ಹೊರಬಂದಿವೆ. ಈ ಎರಡೂ ಸಂಚಿಕೆಗಳಲ್ಲಿ ಜನಪದ ಕಲಾವಿದರ ಬಗ್ಗೆ ಅಗತ್ಯಕ್ಕಿಂತ ಹೆಚ್ಚಿನ ಕಳಕಳಿಯನ್ನು ವ್ಯಕ್ತಪಡಿಸಲಾಗಿದೆ. ಸಮಾಜದ ಕೋಳಿಯನ್ನು ಕವುಚಿ ಹಾಕಿ ತಮ್ಮದೆ ಕೋಳಿ ಕೂಗಿಸಿ ಬೆಳಕು ಹರಿಸಲು ಹೊರಡುವ ಮಾತಿನ ಜಾನಪದ ವಿದ್ವಾಂಸರು ತಾವು ಜಾನಪದದಿಂದಲೇ ದೂರ ಸರಿಯುತ್ತಿದ್ದೇವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಅಂಥ ವಿಸ್ಮೃತಿಯ ಬರವಣಿಗೆ ಈ ಎರಡೂ ಸಂಚಿಕೆಗಳಲ್ಲಿದೆ.

ಅರವಿಂದ ಮಾಲಗತ್ತಿ, ಬೈರೇಗೌಡ, ರಾಜೇಗೌಡ ಹೊಸಹಳ್ಳಿ- ಇವರನ್ನು ಹೊರತು ಪಡಿಸಿ ಉಳಿದೆಲ್ಲ ಲೇಖಕರು ಬಹುಶ್ರುತ ಜಾನಪದವನ್ನು ಏಕಶ್ರುತ ಆಧುನಿಕ ಪರಿಕಲ್ಪನೆಗೆ ಒಗ್ಗಿಸಿ, ಬಗ್ಗಿಸಿ ಒಂದು ಮಾದರಿ ತಯಾರಿಸುವವರು. ಒಂದು ರೀತಿಯಲ್ಲಿ ಆಧುನಿಕ ವಿಜ್ಞಾನ ನಾನಾ ದೇಶಗಳ ಕಚ್ಚಾಮಾಲುಗಳನ್ನು ಆಮದು ಮಾಡಿಕೊಂಡು ಏಕಸ್ವರೂಪದ ಸಿದ್ಧ ವಸ್ತುಗಳನ್ನು (Finished goods) ತಯಾರಿಸಿ ಮಾರುಕಟ್ಟೆ ಮಾಡಿದಂತೆ. ಆದ್ದರಿಂದ ನಮ್ಮ ಬಹುತೇಕ ಲೇಖಕರು ಒಂದು ದೊಡ್ಡ ಕಾರ್ಖಾನೆಯಲ್ಲಿ ಒಂದೇ ಸಿದ್ಧವಸ್ತುವಿನ ಹಲವು ಬಿಡಿ ಭಾಗಗಳನ್ನು ತಯಾರು ಮಾಡುವ ಶ್ರದ್ಧೆಯ ಕಾರ್ಮಿಕರಂತೆ ಕಾಣುತ್ತಾರೆ. ಈ ಬರಹವನ್ನು ನಾವು ಒಂದೇ ಮುಖದಲ್ಲಿ ಒಂದೇ ಓದಿನಲ್ಲಿ ಮುಗಿಸಬೇಕು; ಬೇರೆ ಪ್ರಯತ್ನ ಮಾಡಿದರೆ ಫಲಾಪೇಕ್ಷೆ ಶುದ್ಧ ದಡ್ಡನಂತೆ ಕಾಣಬಹುದು. ಹತ್ತು ಸುಳ್ಳುಗಳನ್ನು ಸೇರಿಸಿ ಒಂದು ಸತ್ಯ ಮಾಡುವಂತೆ ಜಾನಪದದ ಬಗ್ಗೆ ನಾವು ಬರೆಯುತ್ತಿದ್ದೇವೆ.

ನಾವು ನಮ್ಮ ಜಾನಪದ ಚಿಂತನೆಯಲ್ಲಿ ಎಲ್ಲಿಯಾದರೂ ದಾಟಿಕೊಂಡಿದ್ದೇವೆಯೆ ಎಂಬ ಪ್ರಶ್ನೆಯನ್ನು ಹಾಕಿಕೊಂಡರೆ ನಮಗೆ ಗಾಬರಿಯಾಗಬಹುದು. ನಮ್ಮೊಳಕ್ಕೆ ದಾಟಿಕೊಂಡರೆ, ಸ್ವಲ್ಪ ಆಚೆಗೆ ಇಣುಕಿದರೆ ನಾವು ಗಾಳಿ ಹೊಡೆಯುತ್ತಿರುವುದು ಗಮನಕ್ಕೆ ಬರುತ್ತದೆ. ನಾಚಿಕೆಯೂ ಆಗುತ್ತದೆ. ಅಂಥದೊಂದು ನಾಚಿಕೆ ನಿಜವಾದರೆ ನಮ್ಮ ದಾರಿ ಋಜುವಾಗಿರುತ್ತದೆ. ಈ ಕಾರಣಕ್ಕೆ ಹೊಸ ತಲೆಮಾರಿನ ಲೇಖಕರು ದಾರಿ ಬಿಡುವುದು ಒಳ್ಳೆಯದು.

ಪ್ರದೇಶ ಚಿಂತನೆ : ಮಾನ – ಅಭಿಮಾನ

ನಮ್ಮೂರಿನ ನೆನಪುಗಳು – ಡಾ॥ ಚಂದ್ರಪ್ಪಗೌಡ

x + ೭೮ – ನೆಲಮನೆ ಪ್ರಕಾಶನ, ರಂಗನಾಥನಗರ, ಮಂಡ್ಯ ಜಿಲ್ಲೆ

ದುರುಗದ ಜಾನಪದ – ಡಾ॥ಮೀರಾಸಾಬಿಹಳ್ಳಿ ಶಿವಣ್ಣ

xii + ೧೪೮ , ಶಕ್ತಿ ಮುದ್ರಣ ಮತ್ತು ಪ್ರಕಾಶನ, ಬೆಂಗಳೂರು

ಸುಗ್ಗಿ ಹಬ್ಬ - ಡಾ|| ಎನ್. ಆರ್. ನಾಯಕ್
viii + ೨೧೨, ಕರ್ನಾಟಕ ಪ್ರಾದೇಶಿಕ ರಂಗ ಕಲೆಗಳ ಅಧ್ಯಯನ ಕೇಂದ್ರ, ಉಡುಪಿ

ಉತ್ತರ ಕರ್ನಾಟಕದ ಜಾನಪದ ಗೀತ ಮೇಳಗಳು
ಡಾ|| ವೀರೇಶ ಬಡಿಗೇರ, XX + ೧೫೧೦, ವಿಮೋಚನಾ ಪ್ರಕಾಶನ, ಬೆಳಗಾವಿ

ಯಕ್ಷ ಚಿಂತನೆ : ಮಧ್ಯಂತರ – ಮಮಕಾರ

ಯಕ್ಷಗಾನ ರಂಗ ಚಿಂತನೆ - ಕೆರೆಮನೆ ಶಂಭು ಹೆಗಡೆ
viii + ೭೬. ಕೆರೆ ಮನೆ ಶಂಭು ಹೆಗಡೆ ಷಷ್ಠ್ಯಬ್ದಿ ಸನ್ಮಾನ ಸಮಿತಿ, ಹೊನ್ನಾವರ

ಯಕ್ಷಗಾನ ವಾಚಸ್ಪತಿ - ಆ. ಬಾಲಕೃಷ್ಣ ಶೆಟ್ಟಿ ಪೊಳಲಿ
xii + ೮೫, ಮಂಗಳೂರು ವಿಶ್ವವಿದ್ಯಾಲಯ

ಯಕ್ಷ ಪ್ರಬಂಧಗಳು - ಉದ್ಯಾವರ ಮಾಧವ ಆಚಾರ್ಯ
xiii + ೭೮, ವ್ಯಾಸ ಪ್ರಕಾಶನ, ಉಡುಪಿ

ಕೃಷ್ಣ ಸಂಧಾನ : ಪ್ರಸಂಗ ಮತ್ತು ಪ್ರಯೋಗ - ಡಾ|| ಎಂ. ಪ್ರಭಾಕರ ಜೋಶಿ.
X + ೩೭೬, ಪ್ರಾದೇಶಿಕ ಜಾನಪದ ರಂಗಕಲೆಗಳ ಕೇಂದ್ರ, ಉಡುಪಿ

ಪ್ರದರ್ಶನ ಕಲೆ : ತಾಳ - ಮದ್ದಳೆ - ಡಾ|| ಎಂ. ಪ್ರಭಾಕರ ಜೋಶಿ
೫೪, ಮಂಗಳೂರು ವಿಶ್ವವಿದ್ಯಾಲಯ

ಅಭಿಮನ್ಯು ಕಾಳಗ : ಸಂ. ಶ್ರೀಮತಿ ಮೀರಾ ರಾವ್
೭೮, ಕೆಳದಿ ಸಂಗ್ರಹಾಲಯ, ಕೆಳದಿ

ಶ್ರೀಕೃಷ್ಣ ಪಾರಿಜಾತ : ಸಂ. ಡಾ|| ಬಸವರಾಜ ಮಲಶೆಟ್ಟಿ
೧೧೪ + ೧೦, ಆನಂದ ಕಂದ ಗ್ರಂಥಮಾಲೆ, ಮಲ್ಲಾಡಿ ಹಳ್ಳಿ.

ಜನಾಂಗ ಚಿಂತನೆ : ಹಳಹಳಿಕೆ – ಆತ್ಮರತಿ

ತಿಗಳ ಜನಾಂಗದ ಇತಿಹಾಸ ಮತ್ತು ಕರಗ ಶಕ್ತ್ಯೋತ್ಸವ - ಕೆ. ಲಕ್ಷ್ಮಣ್
೧೦ + ೧೨ + ೧೧೮, ಶ್ರೀಮತಿ ಸುಶೀಲ ಲಕ್ಷ್ಮಣ, ಬೆಂಗಳೂರು

ಲಂಬಾಣಿ-ಸಂಸ್ಕೃತಿ – ಡಾ. ಸಣ್ಣರಾಮ.
೨೯೦ + vi, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು

ಶೋಷಿತ ಜಂಗಮರ ಮೀಸಲಾತಿ - ದಾಸನೂರು ಕೂಸಣ್ಣ
xvi + ೧೫೨ ಒ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.

ಗೊಲ್ಲರಹಗ - ಡಾ॥ಮೀರಾಸಾಬಿಹಳ್ಳಿ ಶಿವಣ್ಣ
xvi + ೧೫೨, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು

ಸಂಕೇತಿ : ಅವಲೋಕನ - ಡಾ. ಸಿ.ಎನ್. ರಾಮಚಂದ್ರ.
xii + ೭೧, ಮಾಂಗಿರಿ ಪ್ರಕಾಶನ, ಮೈಸೂರು.

ನಪದ ಮಹಾಕಾವ್ಯ : ಮಹತ್ತಿನ ಮೇಲೆ ಸವಾರಿ

ಮಾಳಿಂಗರಾಯನ ಕಾವ್ಯ : ಸಂ. ಗಂಗಾಧರ ದೈವಜ್ಞ
xii + ೫೦ + ೨೦೪, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಗೊಂಡರ ರಾಮಾಯಣ : ಸಂ. ಪ್ರೊ. ಹಿ. ಚಿ. ಬೋರಲಿಂಗಯ್ಯ
xii + ೧೮೭, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಿರಿ ಪಾಡ್ದನ : ಸಂ. ಪ್ರೊ. ಎ. ವಿ. ನಾವಡ
೩೩೫ + ೯೦, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮೈಲಾರ ಲಿಂಗನ ಕಾವ್ಯ : ಸಂ. ಮಂಜುನಾಥ ಬೇವಿನಕಟ್ಟಿ
x + ೪೩೬, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಾಸಿ ಚಿನ್ನಮ್ಮನ ಕಾವ್ಯ : ಸಂ. ಡಾ॥ ಸ. ಚಿ. ರಮೇಶ
xii + ೧೭೪, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಂಗ್ರಹ ಚಿಂತನೆ : ಬದ್ಧತೆ – ವ್ಯಸನ

ಕಾವ್ಯ

ಚಿತ್ರ ದೇವರ ಕಾವ್ಯ : ಸಂ. ಡಾ॥ ಚಿಕ್ಕಣ್ಣ ಯಣೆಕಟ್ಟೆ
೮೦, ಗಡಿನಾಡ ಜಾನಪದ ಸಂಪರ್ಕ ಕೇಂದ್ರ, ಸಿರಾ

ಜೈನ ಜಾನಪದ ಹಾಡುಗಳು : ಸಂ. ಶ್ರೀಮತಿ ಶ್ರೀಕಾಂತಮ್ಮ ಅಕ್ಕಿ
xv + ೨೫, ರತ್ನತ್ರಯ ಪ್ರಕಾಶನ, ಮೈಸೂರು

ಹಡದವ್ವ ಹಾಡ್ಯಾಳ : ಸಂ. ಡಿ. ಎನ್. ಅಕ್ಕಿ
xii + ೧೨೨, ಕವಿ ಕುಂಚ ಪ್ರಕಾಶನ, ಕಲಬುರ್ಗಿ

ಶ್ರೀ ಸಿದ್ಧಲಿಂಗ ಮಹಾರಾಜರು : ಸಂ. ದಾನಪ್ಪ ಬಗಲಿ
೭೮, ನವನೀತ ಪ್ರಕಾಶನ, ಹಾಂಬಾ

ಕಥೆ

ಶಿವಗಂಗೆ ಸುತ್ತಿನ ಜನಪದ ಕಥೆಗಳು : ಭಾಗ ೧. – ಸಂ. ಸುಧಾಕರ
೬ + ೧೦೭, ಪ್ರತಿಭಾ ಪ್ರಕಾಶನ, ಮೈಸೂರು

ಸುಮ್ ಸುಮ್ಮೆ ಬಸವಯ್ಯ : ಸಂ. ಜೀನಹಳ್ಳಿ ಸಿದ್ದಲಿಂಗಪ್ಪ
೧೮೪, ಪ್ರೇಮಾ ಪ್ರಕಾಶನ, ಜೀನಹಳ್ಳಿ

ಮಾತಿನರಗಿಣಿ : ಸಂ. ವಿ. ಕೆ. ರಾಜಶೇಖರ
xi + ೨೨೪, ಹೊನ್ನಾರು ಜನಪದ ಗಾಯಕರು, ಮೈಸೂರು

ಗಣಿತ

ಜಾನಪದ ಮತ್ತು ಜಾಣಗಣಿತ : ಸಂ. ಜೀನಹಳ್ಳಿ ಸಿದ್ದಲಿಂಗಪ್ಪ
೫೬, ಪ್ರೇಮಾ ಪ್ರಕಾಶನ, ಜೀನಹಳ್ಳಿ

ಜನಪದ ಗಣಿತ ಚಮತ್ಕಾರ : ಸಂ. ಜೀನಹಳ್ಳಿ ಸಿದ್ದಲಿಂಗಪ್ಪ
೫೬, ಪ್ರೇಮಾ ಪ್ರಕಾಶನ ಜೀನಹಳ್ಳಿ

ಗಾದೆ

ಜನಪ್ರಿಯ ಸಾವಿರಾರು ಗಾದೆಗಳು. ಸಂ. ಮಾನಸ ಮಂಜುಳಾ ಮಾನಸ
೬೪, ತನುಮನ ಪ್ರಕಾಶನ, ಮೈಸೂರು

ಗಾದೆಗಳ ನಂಟು – ಸಂ. ಹೆಚ್. ನಂಜೇಗೌಡ
೧೦೮, ಸರಸ್ವತಿ ಪ್ರಕಾಶನ, ಹಾರೋಹಳ್ಳಿ

ಮದುವೆಯ ಗಾದೆಗಳು : ಸಂ. ಕೋಲ ರಂಗನಾಥ್ ರಾವ್
೪೬, ಗುರುರಾಜ ಪ್ರಕಾಶನ, ಬೆಂಗಳೂರು

ಗಾದೆಗಳು : ಸಂ. ಬೆಸೂರು ನಂಜಣ್ಣ
೪೦, ವಿಶ್ವಬಂಧು ಪ್ರಕಾಶನ, ಮೈಸೂರು

ಒಗಟು

ಸುಪ್ರಸಿದ್ಧ ಸಾವಿರಾರು ಒಗಟುಗಳು : ಸಂ. ಮಾನಸ, ಮಾನಸ ಮಂಜುಳ
೮೭, ತನುಮನ ಪ್ರಕಾಶನ, ಮೈಸೂರು

ಜನಪ್ರಿಯ ಒಗಟುಗಳು : ಸಂ. ಆರ್. ಸಿ. ಅರಳಿ
೬೭, ಗಣೇಶ ಪ್ರಕಾಶನ, ಗದಗ

ವೈವಿಧ್ಯ ಚಿಂತನೆ : ಕಟ್ಟು - ಬಿಕ್ಕಟ್ಟು

ಪುರಾಣ ಜಾನಪದ ಮತ್ತು ದೇಶೀವಾದ - ಡಾ|| ಅರವಿಂದ ಮಾಲಗತ್ತಿ
viii + ೨೨೮, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಜಾನಪದ ಸಂಕಥನ - ರಾಜೇಗೌಡ ಹೊಸಹಳ್ಳಿ
xvi + ೧೪೪, ಸ್ವಾತಿ ಪ್ರಕಾಶನ, ಚಾಮರಾಜಪೇಟೆ, ಬೆಂಗಳೂರು

ಜಾನಪದ ಸಮೀಕ್ಷೆ - ವಿಶ್ಲೇಷಣೆ - ಡಾ|| ತೀ. ನಂ. ಶಂಕರನಾರಾಯಣ
viii + ೪೭೮, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು

ಒಂದು ಸೊಲ್ಲು ನೂರು ಸೊರ - ಪ್ರೊ. ಎ. ವಿ. ನಾವಡ
xii + ೧೭೬, ಕರ್ನಾಟಕ ಸಂಘ, ಪುತ್ತೂರು

ಜಾನಪದ ಇಬ್ಬನಿಗಳು - ಡಾ|| ಎಂ. ಜಿ. ಈಶ್ವರಪ್ಪ
viii + ೨೨೩, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಜಾನಪದ ವೈವಿಧ್ಯ - ಡಾ|| ಎಂ. ಬೈರೇಗೌಡ
xii + ೧೮೪, ಶಕ್ತಿ ಮುದ್ರಣ ಮತ್ತು ಪ್ರಕಾಶಕರು, ಬೆಂಗಳೂರು

ಜಾನಪದ ವೈವಿಧ್ಯ - ಡಾ|| ಬಿ. ಎಸ್. ಸ್ವಾಮಿ
vi + ೨೪೯, ನವೀನ ಪ್ರಕಾಶನ, ಬೆಂಗಳೂರು

ಅಕರ ಸಂಪುಟ ೯ - ಡಾ|| ಬಸವಲಿಂಗ ಸೊಪ್ಪಿನ ಮಠ
೧೪೭, ಐದನೆ ಕನ್ನಡ ಸಾಹಿತ್ಯ ಸಮ್ಮೇಳನ, ರಾಯಚೂರು

ಜಾನಪದ ಭಿತ್ತಿ - ಡಾ|| ವೈ. ಸಿ. ಭಾನುಮತಿ
viii + ೧೩೪, ಸಂವಹನ, ಶಿವರಾಮ ಪೇಟೆ, ಮೈಸೂರು

ಚಿಂತನ ಲಹರಿ - ಡಾ|| ಜೀಶಂಪ
೭೫, ಚೇತನ ಬುಕ್ ಹೌಸ್, ಮೈಸೂರು

ಸಂವಹನ ಮಾಧ್ಯಮವಾಗಿ ಜನಪದ ಕುಣಿತಗಳು - ಡಾ|| ಪಾಲ್ತಾಡಿ ರಾಮಕೃಷ್ಣ
ಆಚಾರ್. ೮೮, ಮಂಗಳೂರು ವಿಶ್ವವಿದ್ಯಾಲಯ

ಜಾನಪದ ಶಾಸ್ತ್ರ - ಡಾ|| ಬಿ. ಬಿ. ಹೆಂಡಿ, ಸಂ. ವೀರಣ್ಣ ದಂಡೆ
X + ೧೦೨, ಅನುಭವ ಪ್ರಕಾಶನ, ಗುಲಬರ್ಗ

ಗುಳ್ಳವ್ವ - ವಿರೇಶ ಬಡಿಗೇರ

xiv + ೭೪, ಮಯ ಪ್ರಕಾಶನ, ಕಮಲಾಪುರ

ಜಾನಪದ ವೈಭವ - ಡಾ॥ ನಿಂಗಣ್ಣ ಸಣ್ಣಕ್ಕಿ

೧೧೫, ವಿದ್ಯಾನಿಧಿ ಪ್ರಕಾಶನ, ಗದಗ

ಹೊಳೆದಂಡೆ ಕರಕಿ - ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ

೮೮, ಗಡಿನಾಡ ಜಾನಪದ ಸಂಪರ್ಕ ಕೇಂದ್ರ, ಸಿರಾ

ವಿಚಾರ ವೀಕ್ಷ - ಡಾ॥ ಕೆ. ವಿ. ಚಂದ್ರಣ್ಣ ಗೌಡ

ಜಾನಪದ ಸಮಾಚಾರ - ಸಂ. ಆನಂದ ಮೂರ್ತಿ, ಕರ್ನಾಟಕ ಜಾನಪದ ಅಕಾಡೆಮಿ,
ಬೆಂಗಳೂರು, ಸಂಚಿಕೆ : ಜನವರಿ - ಜೂನ್ ಮತ್ತು ಜುಲೈ - ಡಿಸೆಂಬರ್

***

ಭಾರತೀಯ ಪ್ರಾಚೀನ ಸಂಪ್ರದಾಯದಲ್ಲಿ ಪಂಚಭೂತಗಳ ಪರಿಕಲ್ಪನೆ

ವಿಲ್ಯಂ ಮಾಡ್ತ


ಪ್ರವೇಶ

ಮಾನವ ತನ್ನ ಜೀವನದ ಅನುಭವಗಳನ್ನು ಒಂದಲ್ಲ ಒಂದು ರೀತಿಯಿಂದ ಅಭಿವ್ಯಕ್ತಗೊಳಿಸುತ್ತಾನೆ. ಈ ಅನುಭವಾಭಿವ್ಯಕ್ತಿಗೆ ಪಾರಿಭಾಷಿಕವಾಗಿ ಕಲೆ (ART < ARS (Lat.) ಎನ್ನುತ್ತಾರೆ. ಅಭಿವ್ಯಕ್ತಿಯ ಉದ್ದೇಶಕ್ಕನುಗುಣವಾಗಿ ಕಲೆಯಲ್ಲಿ ಪ್ರಮುಖವಾಗಿ ಎರಡು ವಿಧ. ಮೂಲತಃ ಅದು ಜೀವನದ ನೀಡಿಕೆಗಳ ಪೂರೈಕೆಗಾಗಿ – ಹೊಟ್ಟೆಗಾಗಿ/ಬಟ್ಟೆಗಾಗಿ – ಮೂಡಿ ಬಂದರೆ ಅದನ್ನು ಪ್ರಾಯೋಜ್ಯ ಕಲೆ (Useful Art) ಎಂದೂ ಆನಂದಕ್ಕಾಗಿ/ಹಿಗ್ಗಿಗಾಗಿ ಮೂಡಿಬಂದರೆ ಲಲಿತಕಲೆ (ಈಟಿಜ ಂಡಿಣ) ಎಂದೂ ಕರೆಯುತ್ತಾರೆ.

೨.೧ ಲಲಿತಕಲೆ

ಲಲಿತ ಕಲೆಗೆ ಸಹಜವಾಗಿ ಪ್ರಜ್ಞೆ (Consciousness), ಶೈಲಿ (Style), ಮಾಧ್ಯಮ (Medium), ಕಾಲ (Period/Time) ಮತ್ತು ಪ್ರದೇಶ (Region) ಎಂಬ ಐದು ಪ್ರಮುಖ ಆಯಾಮ (Dimension)ಗಳಿವೆ. ಪ್ರತಿಯೊಂದು ಆಯಾಮವೂ ಎರಡು ನೆಲೆಗಳಲ್ಲಿ ಕ್ರಿಯಾತ್ಮಕವಾಗಿರುತ್ತದೆ.

ಹೆಚ್ಚಿನ ಸ್ಪಷ್ಟತೆಗಾಗಿ ಈ ವಿವರಗಳನ್ನು ಈ ಕೆಳಗಿನಂತೆ ವೃಕ್ಷಚಿತ್ರದಲ್ಲಿ ಸೂಚಿಸಲಾಗಿದೆ.



೦.೨ ಸಾಹಿತ್ಯದ ವರ್ಗೀಕರಣ

ಪ್ರಸ್ತುತ ತಾತ್ವಿಕ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ಗಮನಿಸಿದಾಗ ಅಲ್ಲಿ ನಾವು ಎರಡು ಬಗೆಗಳನ್ನು ಗಮನಿಸುತ್ತೇವೆ : ಒಂದು, ಮೂಲತಃ ಸಮಷ್ಟಿ ಪ್ರಜ್ಞೆ (Common consciousness)ಯ ದೇಶಿ ಶೈಲಿ (Popular style)ಯ, ಶಾಬ್ದಿಕ ಮಾಧ್ಯಮ (Verbal medium)ದ ಪ್ರಧಾನವಾಗಿ ಪ್ರಾಚೀನ ಕಾಲ (Antic)ದ ಮತ್ತು ಗ್ರಾಮೀಣ (Rural) ಪ್ರದೇಶದ ಸಾಹಿತ್ಯ. ಇದನ್ನು ನಾವು ಜನತಾ ಸಾಹಿತ್ಯ (Popular/People's Literature) ಎಂದು ಕರೆಯುತ್ತೇವೆ. ಎರಡನೆಯದು, ಮೂಲತಃ ವ್ಯಷ್ಟಿ ಪ್ರಜ್ಞೆ (Individual consciousness) ಯ, ಮಾರ್ಗಶೈಲಿ (Elitist)ಯ, ಅಶಾಬ್ದಿಕ/ಅಪ್ಯಾತ್ಮಕ(Non-verbal) ಮಧ್ಯಮದ, ಆಧುನಿಕಕ್ಕೆ ಹೆಚ್ಚು ಪ್ರಸ್ತುತಗೊಂಡು ನಗರವಾಸಿಗಳಲ್ಲಿ ಹೆಚ್ಚು ಪ್ರಖ್ಯಾತಿ ಪಡೆದು ಕೊಳ್ಳುವ ಸಾಹಿತ್ಯ. ಇದನ್ನು ನಾವು ಅಭಿಜಾತ/ಶಿಷ್ಟ ಸಾಹಿತ್ಯ (Elitist Literature) ಎಂದು ಕರೆಯುತ್ತೇವೆ. ಯಾವುದಾದರೊಂದು ಸಮಾನ ಧರ್ಮವುಳ್ಳ ಜನಸ್ತೋಮದ ಸಾಮುದಾಯಿಕ ಸ್ವರೂಪದ ಶಾಬ್ದಿಕ ಅಭಿವ್ಯಕ್ತಿಯೇ ಜನಪದ ಸಾಹಿತ್ಯ (Folk - Literature). ಅದು ಜನಸಮುದಾಯಕ್ಕೆ ಹೆಚ್ಚು ಸೀಮಿತವಾದದ್ದು (Esoteric). ಅದು ಕಾಲಾಂತರದಲ್ಲಿ ಲಿಪ್ಯಾತ್ಮಕಗೊಂಡು, ಸೀಮೋಲ್ಲಂಘನೆ ಮಾಡಿ, ವ್ಯಾಪಕ (Exoteric) ಸ್ವರೂಪವನ್ನು ಪಡೆದುಕೊಂಡು ಜನಪ್ರಿಯ/ ಜನಾದರಣೀಯ ಸಾಹಿತ್ಯ (Favourite Literature) ಆಗಬಹುದು.

೦.೩ ಭಾರತೀಯ ಪ್ರಾಚೀನ ಸಾಹಿತ್ಯ (Antic - Literature)

ವೇದೋಪನಿಷತ್ತುಗಳು ಭಾರತೀಯ ಪ್ರಾಚೀನ ಸಾಹಿತ್ಯವೆಂದು ಹೆಸರುವಾಸಿಯಾಗಿವೆ. ಇವು ಜನತಾ ಸಾಹಿತ್ಯದ ಲಕ್ಷಣಗಳನ್ನು ಬಹುಮಟ್ಟಿಗೆ ಹೊಂದಿರುವುದರಿಂದ ಅವುಗಳನ್ನು ಜನತಾ ಸಾಹಿತ್ಯ ಎಂದು ಪರಿಗಣಿಸುವುದು ಹೆಚ್ಚು ಸೂಕ್ತವೆಂದು ನನ್ನ ವೈಯಕ್ತಿಕ ಖಚಿತ ಅಭಿಪ್ರಾಯ.

ಒಟ್ಟಿನಲ್ಲಿ ವೇದೋಪನಿಷತ್ತುಗಳನ್ನು ಶಿಷ್ಟಪದ ಸಂಪ್ರದಾಯ (Elitist - Lore) ಎಂದು ಕರೆಯುವುದಕ್ಕಿಂತ ಭಾರತೀಯ ಪ್ರಾಚೀನ ಸಂಪ್ರದಾಯ (Indian Antic - Lore) ಅಥವಾ ಜನತಾ ಸಾಹಿತ್ಯ ಎಂದು ಕರೆಯುವುದೇ ಹೆಚ್ಚು ಸಮಂಜಸ. ಭಾರತೀಯ ಪರಂಪರೆಯಲ್ಲಿ ಭಾರತೀಯ ಅವಲೋಕನದ ಸಾಮೂಹಿಕ ಅಭಿವ್ಯಕ್ತಿಯಾಗಿ, ಬಹು ಪ್ರಾಚೀನ ಕಾಲದಿಂದ ಹರಿದುಬಂದಂತಹ ಅಪೌರುಷೇಯ (Non-authored) ವಾಚಿಕ ಸಂಪ್ರದಾಯವನ್ನು ಕೇವಲ ಪಂಡಿತ ವಿದ್ವಜ್ಜನರಿಗೆ ಸೀಮಿತಗೊಳಿಸಿ ಶಿಷ್ಟ ಸಂಪ್ರದಾಯವೆಂದು ಹೆಸರಿಸುವುದು

ಭಾರತೀಯ ಸನಾತನ ಸಂಪ್ರದಾಯಕ್ಕೆ ಅಪಪ್ರಚಾರ ಮಾಡಿದಂತೆ. ಯಾಕೆಂದರೆ, ಈ ತೋಂಡೀ ಸಂಪ್ರದಾಯ ಪಂಡಿತರಂತೆ ಪಾಮರರನ್ನೂ, ಶಿಷ್ಟರಂತೆ ಜನಸಾಮಾನ್ಯರನ್ನೂ ಸಂವಹಿಸುತ್ತದೆ.

ಮೇಲಿನ ಕಾರಣಗಳಿಂದಾಗಿ ಪಂಚಭೂತಗಳನ್ನು (Elements) ಅಭಿವ್ಯಕ್ತ ಪಡಿಸುವ ವೇದೋಪನಿಷತ್ತು ಮೊದಲಾದ ಸನಾತನ ಸಾಹಿತ್ಯವನ್ನು ಶಿಷ್ಟ ಸಂಪ್ರದಾಯ (Elitistic - Lore) ಎಂದು ಕರೆಯುವುದಕ್ಕಿಂತ ಭಾರತೀಯ ಪ್ರಾಚೀನ ಸಂಪ್ರದಾಯ (Indian Antic - Lore) ಎಂದು ಕರೆಯುವುದೇ ಹೆಚ್ಚು ಸೂಕ್ತವೆಂದು ನನ್ನ ವೈಯಕ್ತಿಕ ನಿಲುವು.

೦.೪ ಪ್ರಾಚೀನ ಸಂಪ್ರದಾಯದ ಪ್ರಭಾವ

ಸುಮಾರು ೪,೦೦೦ ವರ್ಷಕ್ಕಿಂತಲೂ ಪ್ರಾಚೀನವಾಗಿರುವ ಭಾರತೀಯ ಸಾಂಪ್ರದಾಯಿಕ ಸಾಹಿತ್ಯ ಸಂಸ್ಕೃತದಲ್ಲಿದ್ದವು. ಅವು ಆರ್ಯ ಹಾಗೂ ದ್ರಾವಿಡ ಜನಾಂಗಗಳ ಪ್ರತ್ಯೇಕ ಜೀವನದೃಷ್ಟಿ(World - view)ಆಗಿರದೆ, ಸಮನ್ವಯಗೊಂಡ ಸಮಗ್ರ ಭಾರತೀಯ ಅವಲೋಕನದ ಅಭಿವ್ಯಕ್ತಿಯೆಂದೇ ಇಂದು ಗ್ರಾಹ್ಯವಾಗಿದೆ. ಶತಮಾನಗಳು ಉರುಳಿದಂತೆ ಭಾರತದಲ್ಲಿಯ ಹಲವಾರು ಜನಾಂಗಗಳು ಮತ್ತು ಅವುಗಳ ಸಂಸ್ಕೃತಿಗಳು ಸಮೀಕರಣಗೊಂಡು ಒಂದು ರಾಷ್ಟ್ರೀಯ ಸಂಪ್ರದಾಯ ಪ್ರಾಚೀನ ಕಾಲದಲ್ಲಿಯೇ ರೂಪುಗೊಂಡಿದೆ. ಅದರ ಶಾಬ್ದಿಕ ಅಭಿವ್ಯಕ್ತಿಯೇ ವೇದೋಪನಿಷತ್ತುಗಳು. ಈ ಸಾಂಪ್ರದಾಯಿಕ ಸಾಹಿತ್ಯದಲ್ಲಿ ಉಕ್ತವಾಗಿರುವ ಪಂಚ ಮಹಾಭೂತಗಳ ವಿವರ ಸಮಗೆ ಪ್ರಸ್ತುತ ಜನಪದ ನಂಬಿಕೆಗಳ ವರ್ಗೀಕರಣಕ್ಕೆ ಹಾಗೂ ಅಧ್ಯಯನಕ್ಕೆ ಈ ವಿವರಗಳು ಉಪಯುಕ್ತವೆಂದು ನಮ್ಮ ಗ್ರಹಿಕೆ.

೧.೦ ಪಂಚಮಹಾಭೂತಗಳು (Primordial Elements)

ಭಾರತೀಯ ಪ್ರಾಚೀನ ಸಂಪ್ರದಾಯದಲ್ಲಿ, ಭೌತಿಕ ಸೃಷ್ಟಿ ಪಂಚಮಹಾ ಭೂತಗಳಿಂದ ನಿರ್ಮಾಣಗೊಂಡಿದೆ ಎಂಬ ಅವಲೋಕನ ಪ್ರಧಾನವಾಗಿ ಅಭಿವ್ಯಕ್ತ ಗೊಂಡಿದೆ. ಈ ಭಾರತೀಯ ಅವಲೋಕನದ ಹಿನ್ನೆಲೆಯಲ್ಲಿ ಜನಪದ ನಂಬಿಕೆ ಗಳನ್ನು ವರ್ಗೀಕರಿಸುವ ಪ್ರಯತ್ನ ಜಾನಪದ ಅಧ್ಯಯನದಲ್ಲಿ ನಡೆಯುವುದು ಸ್ತುತ್ಯ.

ಆಧುನಿಕ ವಿಜ್ಞಾನದ ಪ್ರಕಾರ, ಪದಾರ್ಥ(matter) ಮತ್ತು ಶಕ್ತಿ(energy) ಗಳೇ ವಿಶ್ವದ ಮೂಲವಸ್ತುಗಳು(fundamental elements). ಆದರೆ, ಭಾರತೀಯ ಅವಲೋಕನ (Weltachauung)ದ ಪ್ರಕಾರ, ಭೌತಿಕ ಸೃಷ್ಟಿ ಪಂಚಮಹಾಭೂತ ಗಳಿಂದ ನಿರ್ಮಾಣಗೊಂಡಿದೆ. ಈ ಪಂಚಭೂತಗಳನ್ನು ಪರಮಾಣು (atom)

ಗಳೆಂದು ತಿಳಿದುಕೊಳ್ಳಬಾರದು. ಇವು ಅಂತರ್–ಸಂಬಂಧ (Inter-relatedness) ಉಳ್ಳವುಗಳಾಗಿದ್ದು, ಒಂದರಿಂದ ಇನ್ನೊಂದು ಹುಟ್ಟಿಕೊಂಡು ಬಂದಂಥವುಗಳು. ಈ ಮೂಲವಸ್ತುಗಳನ್ನು ದ್ರವ್ಯ ಎಂದು ತಿಳಿದುಕೊಳ್ಳುವುದಕ್ಕಿಂತ ಶಕ್ತಿಗಳು (Forces/vectors) ಎಂದು ಪರಿಗಣಿಸುವುದು ಸೂಕ್ತ. ಈ ಶಕ್ತಿಗಳು ಸೃಷ್ಟಿಯಲ್ಲಿ ಅಂತರ್ಗತ ವಾಗಿದ್ದುಕೊಂಡು ಅದರ ಬಾಹ್ಯ ಸ್ವರೂಪಕ್ಕೆ ಕಾರಣವಾಗಿವೆ*.

ಪಂಚಭೂತಗಳು ಪರಸ್ಪರ ಪೂರಕವಾಗಿವೆಯಲ್ಲದೆ ಜ್ಞಾನೇಂದ್ರಿಯಗಳಿಗೆ ಸಹಾಯಕವಾಗಿವೆ :

ಆಕಾಶದ ಅವಕಾಶವಿಲ್ಲದೆ ಶಬ್ದ ಕೇಳಿಸುವುದಿಲ್ಲ;
ವಾಯುವಿಲ್ಲದಿದ್ದರೆ ಸ್ಪರ್ಶ ತಿಳಿಯುವುದಿಲ್ಲ;
ಬೆಳಕಿಲ್ಲದಿದ್ದರೆ ಕಣ್ಣು ಕಾಣಿಸುವುದಿಲ್ಲ;
ನೀರಿಲ್ಲದಿದ್ದರೆ ರಸ ತಿಳಿಯುವುದಿಲ್ಲ;
ಭೂಮಿ ಇಲ್ಲದಿದ್ದರೆ.. ವಾಸನೆಯಿಲ್ಲ.

೧.೧ ಆಕಾಶ (Ether)

ಪಂಚಮಹಾಭೂತಗಳಲ್ಲಿ ಆಕಾಶ ಮೊದಲನೆಯದು. ಆದಿಪುರುಷನ ತಲೆಯಿಂದ ಆಕಾಶ ಹುಟ್ಟಿತು. (ಋ x, ೯೦, ೧೪). ಇದು ಬೆಳಕಿನ ಪ್ರಪಂಚ (ಐ. ಉ. I, ೧,೨) ರೂಪ, ಗಡಿಗೆಯನ್ನು ಅವಲಂಬಿಸಿಕೊಂಡಿರುವಂತೆ ಆಕಾಶ ಸತ್ತನ್ನು (being) ಅವಲಂಬಿಸಿಕೊಂಡಿರುತ್ತದೆ. ಆಕಾಶವನ್ನು ಸತ್ತಿನಿಂದ ಪ್ರತ್ಯೇಕಿಸಿದರೆ ಆಕಾಶ ಇಲ್ಲದಂತಾಗುವುದು.

ದೇವತೆಗಳು ಆಕಾಶದಲ್ಲಿ ಓಡಾಡುತ್ತಾರೆ. ದೇವತೆಗಳ ವಾಸಸ್ಥಳವಾದ ಸ್ವರ್ಗವನ್ನು ಆಕಾಶದಲ್ಲಿಯೇ ಪ್ರಾಚೀನರು ಕಲ್ಪಿಸಿದ್ದಾರೆ. ಒಟ್ಟಿನಲ್ಲಿ ಆಕಾಶ ಎಲ್ಲದಕ್ಕೂ ಅವಕಾಶವಾಗಿದೆ. ಕಾರಣ ಅದು ಎಲ್ಲದರ ಆಶ್ರಯವಾಗಿರುವ ಬ್ರಹ್ಮಕ್ಕೆ ಸಂಕೇತವಾಗಿದೆ. ಗುಣದಿಂದ ಆಕಾಶ, ಶಬ್ದಗ್ರಾಹಿ. ಇದೊಂದೇ ಅದರ ಗುಣ.

೧.೨ ವಾಯು

ವಿಶ್ವಾತ್ಮನ ಉಸಿರೇ ವಾಯುವಿಗೆ ಮೂಲ (ಪು. x, ೯೦, ೧೩) ಅದು ಆತನ ನಾಭಿ ಮೂಲದಿಂದ ಪ್ರವಹಿಸಿತು (ಅದೇ,೧೪). ಅದು ಹೆಚ್ಚು ಅಮೂರ್ತ

---

*ಭೌತಿಕ ಪ್ರಪಂಚಕ್ಕೆ ಕಾರಣೀಭೂತವಾಗಿರುವ ಈ ಪಂಚಭೂತಗಳಲ್ಲದೆ. ಮನಸ್ಸು ಬುದ್ಧಿ ಮ ತ ಅಹಂಕಾರಗಳೆಂಬ ಅಭೌತಿಕ ಭೂತಗಳೂ ಇವೆ. (ನೋಡಿ : ಭಗವದ್ಗೀತೆ ೭.೪,)

ವಾದುದರಿಂದ ಹೆಚ್ಚು ಚಲನಶೀಲವಾದದ್ದು. ಗಾಳಿ ಸ್ವೇಚ್ಛೆಯಿಂದ ಬೀಸುತ್ತದೆ, ಸುಳಿದಾಡುತ್ತದೆ (ಋ. x, ೧,೬೮). ಅದು ಕರ್ಣಗಮ್ಯವಾದರೂ ಚಕ್ಷುಗಮ್ಯವಲ್ಲ. ಅದರ ಸ್ಪರ್ಶ ಅನುಭವಕ್ಕೆ ಬಂದರೂ ಅದನ್ನು ಅರ್ಥೈಸುವುದು ಕಷ್ಟಸಾಧ್ಯ.

ಪ್ರಾಣಿಗಳ ಉಸಿರಾಟಕ್ಕೆ ಹಾಗೂ ಇರುವಿಕೆಗೆ ಗಾಳಿ ಅತ್ಯಗತ್ಯ (ಋ. x, ೧೮೬). ಕಾರಣ, ಅದು ಜೀವದಾತ; ಅಂತೆಯೇ ಅನಂತತೆಯ ಪ್ರತೀಕ (ಋ. I, ೧೩೪).

ಈ ಲೌಕಿಕ ವಾಯು, ಪಾರಮಾರ್ಥಿಕ ಪ್ರಜಾಪತಿಯನ್ನು ಸಂಕೇತಿಸುತ್ತದೆ (ಯಜು. xxxii ೧; ಬೃ. ಉ. iii, ೯, ೯). ಹೇಗೆ ಗಾಳಿ, ತನ್ನ ತೆಕ್ಕೆಗೆ ಬಂದ ವಸ್ತುಗಳನ್ನೆಲ್ಲ ಕೊಂಡೊಯ್ಯುತ್ತದೆ, ಹಾಗೆ ಪರಮಾತ್ಮ, ತನ್ನ ಅಧೀನಕ್ಕೆ ಬಂದ ಜೀವಾತ್ಮರನ್ನು ಇಹದಿಂದ ಪರದತ್ತ ಕೊಂಡೊಯ್ಯುತ್ತಾನೆ. ವಾಯುವಿಗೆ (೧) 'ಬಿಸ್' ಎಂಬ ಶಬ್ದ ಹಾಗೂ (೨) ಬೆಚ್ಚಗೂ ತಣ್ಣಗೂ ಇಲ್ಲದ ಸ್ಪರ್ಶ– ಹೀಗೆ ಎರಡು ಗುಣಗಳು. ಇವುಗಳಲ್ಲಿ ಸ್ಪರ್ಶ, ವಾಯುವಿನ ಸ್ವಂತ ಗುಣ; ಶಬ್ದ, ಪಿತ್ರಾರ್ಜಿತ (Hereditary), ಎಂದರೆ ಆಕಾಶದಿಂದ ಬಂದದ್ದು.

೧.೩ ಅಗ್ನಿ

ತೇಜಸ್, ಅಗ್ನಿಯ ಪರ್ಯಾಯ ಪದ. ಆದಿಪುರುಷನ ಬಾಯಿಯಿಂದ ಹೊರಟ ಶಬ್ದ (word)ದಿಂದ ಅಗ್ನಿ ಹುಟ್ಟಿತು (ಋ. x ೯೦, ೧೩; ಐ. ಉ.. I, ೪). ಪರಮಾತ್ಮನೇ ಅದರ ಆಧಾರ (ಬೃ. ಉ. II, ೫, ೩). ಅಫ್, ಅದರ ವಾಸಸ್ಥಾನ (ಋ. viii ೪೩, ೯; x, ೪೫, ೧, ೩; ೧೨೧, ೭; ಶ. ಬ್ರಾ. vi, ೮,೨,೪). ಬೆಂಕಿ ಮತ್ತು ನೀರು ಪರಸ್ಪರ ಸಂಬಂಧಿಗಳಾಗಿವೆ (ಋ. II, ೧,೧).

ನೀರಿನಲ್ಲಿರುವ ಬೆಂಕಿ – ಬಡಬಾಗ್ನಿಯನ್ನು ಕವಿಗಳು ಕವಿಸಮಯವನ್ನಾಗಿ ಬಳಸಿದ್ದಾರೆ. ಆದರೆ ವಾಸ್ತವಿಕವಾಗಿ ಅದು ಸರ್ವಾಂತರ್ಯಾಮಿ (ಅ. ವೇ. XII, ೧, ೧೯–೨೧) ಹಾಗೂ ಸ್ವಸ್ತಿದಾತ (ಋ. I, ೩೫, ೧).

ಅಗ್ನಿ, ಸದಾ ಯಜ್ಞಕುಂಡದಲ್ಲಿರುವಂತೆ, ಸೂರ್ಯನಲ್ಲಿ ಆಕಾಶದಲ್ಲಿ (ಋ.I , ೧೪೩, ೨), ಸುಡುವ ವಸ್ತುಗಳಲ್ಲಿ,, ಕಾಡಿನಲ್ಲಿ (ಋ. VI, ೩, ೩; x, ೭೯, ೭), ಮಾನವ ಹೃದಯದಲ್ಲಿ (ಶ.ಬ್ರಾ. II, ೨, ೨, ೧೪) ಹೀಗೆ ಹಲವೆಡೆ ಹಲವು ರೀತಿಗಳಲ್ಲಿದ್ದು ಹಲವು ಪರಿಣಾಮಗಳನ್ನುಂಟುಮಾಡುತ್ತದೆ; ಅಗ್ನಿ, ಮೇಣವನ್ನು ಹಾಗೂ ಜೇನನ್ನು ಮೃದುಗೊಳಿಸಿದರೆ, ಮಣ್ಣನ್ನು ಗಟ್ಟಿ

ಬೆಳೆಸುತ್ತದೆ; ಸಸ್ಯಗಳನ್ನು ಒಣಗಿಸುತ್ತದೆ. ಅದು ಜೀವವನ್ನು ತೆತ್ತಬಲ್ಲುದು, ತೆಗೆಯಬಲ್ಲುದು. ಬೆಂಕಿ, ಕೆಟ್ಟದ್ದನ್ನು ನಾಶಪಡಿಸುತ್ತದೆ (ಋ. I, ೧೪೫; III, ೪; iii, ೧೮, ೧-೨; VI, ೯ ಇತ್ಯಾದಿ. ಅದು ಆರೋಗ್ಯವನ್ನೂ (ಅ. ವೇ. V, ೨೨, ೧-೨) ಮುಕ್ತಿಯನ್ನೂ (ಋ. V, ೮೨, ೫-೬; ಅ. ವೇ. VI, ೧೦-೦, ೧) ದಯಪಾಲಿಸುತ್ತದೆ. ಅಗ್ನಿ ವ್ಯಕ್ತಿಯನ್ನು ಶುದ್ಧೀಕರಿಸುತ್ತದೆ (ಋ. X, ೧೬೪, ೩; ಮ. ಉ. I, ೯೭. ೧-೮; ೩೨೫-೬; ಛಾ. ಉ IV, ೧೮, ೩). ಈ ಕಾರಣಗಳಿಂದಾಗಿ ಅಗ್ನಿ, ದಿವ್ಯಕ್ಕೆ ಒಂದು ಪ್ರಬಲ ಸಂಕೇತವಾಗಿದೆ (ಋ. X, ೧೧೪, ೫; ಬೃ. ಉ. III, ೯,೨೪).

ಅಗ್ನಿಯು ಸಂಬಂಧ ಮಾನವ ಹುಟ್ಟು, ವಿವಾಹ ಮತ್ತು ಸಾವುಗಳಿಗಷ್ಟೇ ಸೀಮಿತವಾಗಿರದೆ ಸಾವಿನಾಚೆಯ ಆತನೊಂದಿಗೆ ಇರುತ್ತದೆ(ಋ. [illegible] ೧-೧೧)

ವಾಯುವಿನಿಂದ ಹುಟ್ಟಿದ ಅಗ್ನಿಗೆ –

೧. 'ಭುಗುಭುಗು' ಎಂಬ ಶಬ್ದ

೨. ಬೆಚ್ಚಗಿರುವ ಸ್ಪರ್ಶ

೩. ಬೆಳಗುವ ರೂಪ – ಹೀಗೆ ಮೂರು ಗುಣಗಳು.

ಇವುಗಳಲ್ಲಿ ರೂಪ, ತನ್ನ ಸ್ವಂತ ಗುಣ; ಉಳಿದವು ಪಿತ್ರಾರ್ಜಿತ.

೧.೪ ಆಪ್

ಜಗತ್ತಿನ ಎಲ್ಲ ಸಂಸ್ಕೃತಿಗಳಲ್ಲಿಯೂ ನೀರಿಗೆ ಅಗ್ರಸ್ಥಾನವಿದೆ. ಭಾರತೀಯ ಸಂಪ್ರದಾಯದಲ್ಲಿ ನೀರು ವಾಕ್/ ಶಬ್ದದಿಂದ ಹುಟ್ಟಿತು. ಇದು ಎಲ್ಲವನ್ನೂ ವ್ಯಾಪಿಸುವುದರಿಂದ (√ಆಪ್–), ಅದನ್ನು ಆಪ್/'ನೀರು' ಎಂದೂ ಅದು ಎಲ್ಲವನ್ನೂ ಆವರಿಸಿದುದರಿಂದ (√ವೃ), ಅದನ್ನು ವಾರಿ/'ನೀರು' ಎಂದೂ ಕರೆದರು (ಶ. ಬ್ರಾ. VI, ೧, ೧, ೯). ವಿಶ್ವವೆಲ್ಲ ನೀರನ್ನೇ ಆಧರಿಸಿಕೊಂಡಿದೆ. ಆದುದರಿಂದಲೇ ಯಜ್ಞದಲ್ಲಿ ಬಳಸಿದ ಪಾತ್ರೆಗಳನ್ನು ನೀರಿನಲ್ಲಿ ಹಾಕಬೇಕೆಂದು ಶತಪಥ ಬ್ರಾಹ್ಮಣದಲ್ಲಿ ಪದೇ ಪದೇ ಹೇಳಲಾಗಿದೆ. ಈಗಲೂ ದೇವರ ಮೂರ್ತಿಗಳನ್ನು, ಪೂಜಾ ಪಾತ್ರೆಗಳನ್ನು, ಅಲ್ಲಿ ಬಳಸಿದ ವಸ್ತುಗಳನ್ನು ಪವಿತ್ರ ನದಿಗಳಲ್ಲಿ ಎಸೆಯುತ್ತಾರೆ. ಸತ್ತ ಮಕ್ಕಳ ಹಾಗೂ ಋಷಿ ಮುನಿಗಳ ಶವಗಳನ್ನೂ ಸುಡುವ ಬದಲಾಗಿ ಪವಿತ್ರ ನದಿಗಳಲ್ಲಿ ಎಸೆಯುತ್ತಾರೆ (ಅಥವಾ ಭೂಮಿಯಲ್ಲಿ ಹೂಳುತ್ತಾರೆ (Panikkar, f. n. 59). ಸೃಷ್ಟಿ ತನ್ನ ಮೂಲಕ್ಕೆ ಹಿಂತಿರುಗುವುದನ್ನು ಈ ಆಚರಣೆಗಳೆಲ್ಲವೂ ಸಂಕೇತಿಸುತ್ತವೆ.

ನೀರಿಗೆ ಆರೋಗ್ಯ ಕೊಡುವ ಸಾಮರ್ಥ್ಯವಿದೆ (ಋ. x, ೧೩೭, ೬; ಅ. ವೇ. ೩, ೬; II, ೯೧, ೩; ಶ. ಬ್ರಾ. VI ೬, ೧, ೭) ಶುದ್ಧೀಕರಣವೇ ನೀರಿನ ಪ್ರಮುಖ ಗುಣಧರ್ಮ. ನೀರು ಇತ್ತ ಘನವೂ ಅಲ್ಲ, ಅತ್ತ ಆವಿಯೂ ಅಲ್ಲ. ಅದು ಇರುವುದು ಭೂಮಿಯಲ್ಲಿ. ಆದರೆ ಬರುವುದು ಆಕಾಶದಿಂದ. ನೀರು ಜೀವನವನ್ನು ಕೊಡಬಲ್ಲುದು. ಅಂತೆಯೇ ಕೊನೆಗೊಳಿಸಬಲ್ಲುದು. ನೀರು ಶುಭ್ರವಾಗಿರಬಹುದು ಅಥವಾ ಕಳಂಕವಾಗಿರಬಹುದು. ಅದು ಭೂಮಿಯೊಳಗೆ ಒಸರಾಗಿ ಹರಿಸಬಹುದು ಅಥವಾ ಭೂಮಿಯ ಮೇಲೆ ಹೊಳೆ ನದಿಯಾಗಿ ಹರಿಯಬಹುದು.

ನೀರು ಭೂಮಿಗೆ ಮಾತ್ರ ಸೀಮಿತವಾಗಿರದೆ ಸಸ್ಯ ಪ್ರಾಣಿಗಳಲ್ಲಿಯೂ ಹರಿಯುತ್ತದೆ. ಅದು ಹಲವಾರು ರೂಪಗಳನ್ನು ತಾಳಬಲ್ಲುದು; ಸ್ವಚ್ಛಂದವಾಗಿ ಹರಿದುಹೋಗುವ ಸ್ವಾತಂತ್ರ್ಯ ಅದಕ್ಕಿದೆ. ನೀರು, ಭೂಮಿ, ಸಸ್ಯ, ಪ್ರಾಣಿಗಳಿಗೆಲ್ಲ ಅತ್ಯಾವಶ್ಯಕವಾದ ಆಧಾರಸ್ತಂಭವಾಗಿರುವ, ಜೀವವನ್ನು ಕೊಡುವ ಹಾಗೂ ಕೆಡಿಸುವ ವಸ್ತುವಾಗಿರುವುದರಿಂದ ಸರ್ವಾಂತರ್ಯಾಮಿ ಬ್ರಹ್ಮಕ್ಕೆ ಅದು ಸೂಕ್ತ ಸಂಕೇತವಾಗಿದೆ.

ಅಗ್ನಿಯಿಂದ ಹುಟ್ಟಿದ ನೀರಿಗೆ –

೧. 'ಬುಲುಬುಲು' ಎಂಬ ಶಬ್ದ
೨. ತಣ್ಣಗಿರುವ ಸ್ಪರ್ಶ
೩. ಬಿಳಿಯ ರೂಪ
೪. ಸಿಹಿಯಾದ ರಸ – ಹೀಗೆ ನಾಲ್ಕು ಗುಣಗಳು.

ಇವುಗಳಲ್ಲಿ ರಸ, ಸ್ವಂತ ಗುಣ; ಉಳಿದವು ಪಿತ್ರಾರ್ಜಿತ.

೧.೪ ಪೃಥ್ವಿ

ಪ್ರತಿಯೊಂದು ವಸ್ತುವಿಗೂ, ಜೀವಿಗೂ ಇರುವಿಕೆಗೆ ಭೂಮಿಯೇ ಆಧಾರ ಹಾಗೂ ಮೂಲ. ಈ ಪೃಥ್ವಿಯಿಂದಲೇ ಸಕಲ ಜೀವೋತ್ಪತ್ತಿ ಹಾಗೂ ಸಂವರ್ಧನೆ. ಮಾನವನಿಗೆ ಅದು ಕೇವಲ ಬಾಹ್ಯಾಧಾರವಾಗಿರದೆ, ತನ್ನ ದೇಹದಂತೆ ಅನಿವಾರ್ಯ ಅಂಶವಾಗಿದೆ. ಆದರೂ ಅದನ್ನು ಮೆಟ್ಟಿ, ಮಿಕ್ಕಿ ನಿಲ್ಲುವ ಸಾಮರ್ಥ್ಯ ಆತನಿಗಿದೆ. ಭೂಮಿ ಆತನಿಗೆ ತಾಯಿಯಂತಿದ್ದರೂ ಅದನ್ನು ಆತ ತನಗೆ ಬೇಕಾದಂತೆ ಬಳಸಬಲ್ಲ, ರೂಪಾಂತರಿಸಬಲ್ಲ. ಹೀಗೆ ಪೃಥ್ವಿ ಆತನಿಗೆ ಭೂದೇವಿಯಾಗಿದ್ದರೂ, ಆತ ಆಕೆಗೆ ಭೂಪತಿಯೂ ಹೌದು, ಜ್ಯೇಷ್ಠಪುತ್ರನೂ ಹೌದು. ಈ ಸಂದರ್ಭದಲ್ಲಿ ಈಜಿಪ್ಟಿನ ಈಸಿಸ್ (ISIS) ದೇವತೆಯ ನೆನಪಾಗುವುದು ಸಹಜ.

ಭಾರತೀಯ ಅವಲೋಕನದಲ್ಲಿ ಭೂಮಿಯನ್ನು ಕುರಿತು ಸೂಕ್ಷ್ಮ ಸಂವೇದನೆಗಳು (Fine sensibilities) ಇರುವುದರಿಂದ ಪ್ರಜ್ಞಾವಂತ ಭಾರತೀಯನಿಗೆ ಭೂದೇವಿಯ ಮೇಲೆ ಅತ್ಯಾಚಾರ ಎಸಗಲು ಮನ ಒಪ್ಪದು. ಆಕೆ ಆತನ ಹುಟ್ಟು ಸಾವುಗಳೆರಡರಲ್ಲಿಯೂ ಪ್ರಮುಖ ಪಾತ್ರವಹಿಸುತ್ತದೆ. ಆತನ ಭೂಮಿ ಪೂಜೆ, ಮೂರ್ತಿಪೂಜೆ (Idolatry) ಅಲ್ಲ; ಲೌಕಿಕದಲ್ಲಿ ಪಾರಮಾರ್ಥಿಕವನ್ನು ಕಾಣುವುದರ ಸಂಕೇತವದು.

ದ್ರವರೂಪದಿಂದ ಬೇರ್ಪಟ್ಟು ಪ್ರಪ್ರಥಮವಾಗಿ ಕಾಣಿಸಿಕೊಂಡ ಘನರೂಪದ ಸೃಷ್ಟಿಯಾದ ಭೂಮಿ (ಶ. ಬ್ರಾ. XIV, ೧,೨,೧೦)ಫಲವತ್ತಾ ದದ್ದು ಹಾಗೂ ಸಂಪದ್ಭರಿತವಾದದ್ದು (ಋ. III, ೫೧, ೫; ಶ.ಬ್ರಾ. XI, ೫,೬). ಭೂಮಿ ಹೊತ್ತುಕೊಂಡಿರುವ ಗಗನಚುಂಬಿ ಪರ್ವತ ಶಿಖರ ಶ್ರೇಣಿಗಳು, ಗಿಡಮರ ಬಳ್ಳಿಗಳಿಂದ ಕೂಡಿದ ದಟ್ಟ ಹಸಿರು ಕಾಡುಗಳು, ಅಲ್ಲಿ ವಾಸಿಸುವ ವಿಪುಲ ವನ್ಯ ಪ್ರಾಣಿಗಳು ಭೂದೇವಿಯ ಅನನ್ಯ ಫಲಶಕ್ತಿಯ ಸಂಕೇತಗಳಾಗಿವೆ.

ಸಂಪದ್ಭರಿತವಾದ ದೈವೀ ದಿನಗಳನ್ನು ಕೃತಜ್ಞತಾ ಭಾವದಿಂದ ಪರಸ್ಪರ ಹಂಚಿಕೊಂಡು ಭೋಗಿಸುವುದು ಮಾನವಧರ್ಮವೇ ಹೊರತು ಭೂಮಿಯ ಮೇಲೆ ಅತ್ಯಾಚಾರಗಳನ್ನು ನಡೆಯಿಸುವುದು ಸರ್ವಥಾ ಅಲ್ಲ. ಋಗ್ವೇದದಲ್ಲಿ ಭೂಮಿಯ ಸ್ತುತಿಗೀತೆಯೊಂದಿದೆ (I, ೧೮೫). ಅದರಲ್ಲಿ ಭೂಮಿಯನ್ನು ಸಕಲ ದೇವತೆಗಳ ಹಾಗೂ ಮಾನವರ ಜನನಿಯೆಂದೂ ಆಕಾಶವನ್ನು ಜನಕನೆಂದೂ ಸಂಬೋಧಿಸಲಾಗಿದೆ. ಇನ್ನೊಂದೆಡೆ ಚರಮಗೀತೆಯೊಂದರಲ್ಲಿ ಸತ್ತ ಮಗನನ್ನು ವಿನಾಶಕ್ಕೊಳಪಡಿಸದೆ ರಕ್ಷಿಸುವ ಕರುಣಾಳು ತಾಯಿಯೆಂದು ಭೂಮಾತೆ ವರ್ಣಿತಳಾಗಿದ್ದಾಳೆ (X, ೧೮, ೧೦-೧೩). ಸಕಲರಿಗೂ ಒಳ್ಳೆಯದನ್ನು ದಯಪಾಲಿಸುವ, ಊರ್ಜಿತಾವಸ್ಥೆಗೆ ಕೊಂಡೊಯ್ಯುವ ವಿಶ್ವಮಾತೆಯೆಂದು ಸಚಿತ್ರ ವಿವರ ಅಲ್ಲಿ ಮೂಡಿದೆ.

ಇಂತಹ ಸೌಭಾಗ್ಯವತಿಯ ತೊಡೆಯ ಮೇಲೆ ಮಾನವರು ಸಂತಸದಿಂದ ಬಾಳುತ್ತಾರೆ. ಅವರ ಮಾತು ಹಲವು ಭಾಷೆಗಳಾಗಿ ರೂಪಾಂತರ ಹೊಂದುತ್ತದೆ. ಅವರ ಕಲ್ಪನೆಗಳಿಂದ ಹಲವಾರು ಕಲ್ಪಾರಿಗಳು ರೂಪಿತಗೊಳ್ಳುತ್ತವೆ. ಅಲ್ಲಿಯ ಹೆದ್ದಾರಿಗಳಲ್ಲಿ ಅವರ ರಥಗಳು ಓಡಾಡುತ್ತವೆ.

ದೇವತೆಗಳು ಸ್ವತಃ ಈ ಭೂಮಿಯನ್ನು ಕಾಪಾಡುತ್ತವೆ. ಅದಕ್ಕಾಗಿಯೇ ಅಲ್ಲಿ ಸದಾ ಯಜ್ಞ ನಡೆಯುತ್ತದೆ; ಪುರೋಹಿತರು ವೇದಮಂತ್ರಗಳನ್ನು ಪಠಿಸುತ್ತಾರೆ ವೇದಿಕೆಯ ಮೇಲೆ ಪೂಜೆ ಸಲ್ಲಿಸುತ್ತಾರೆ. ಒಟ್ಟಿನಲ್ಲಿ ಪೃಥ್ವಿ, ಕೇವಲ ಒಂದು

ಲೌಕಿಕ ವಸ್ತುವಾಗಿ ಉಳಿಯದೆ ಪಾರಮಾರ್ಥಿಕದ ಕಡೆಗೆ ಬೆರಳೆತ್ತಿ ತೋರಿಸುವ ಬಿಂದು ಸಂಕೇತವಾಗಿರುತ್ತದೆ. ಕಾರಣ, ಭೂಮಿಯನ್ನು ವಿಶ್ವಜನನಿ, ವಿಶ್ವಚೇತಸಿ, ಸಕಲ ದಾನಗಳನ್ನು ನೀಡುವ, ಸಕಲರನ್ನು ಪೋಷಿಸುವ, ರಕ್ಷಿಸುವ ಮಹಾಮಾತೆ ಯೆಂದು ಭಾರತೀಯ ಸಂಪ್ರದಾಯ ಆಕೆಯನ್ನು ಪೂಜಿಸುತ್ತದೆ. ಈ ಅರ್ಥದಲ್ಲಿ ಪೃಥ್ವಿ ಸರ್ವಾಂತರ್ಯಾಮಿಯಾದ ಪ್ರಜಾಪತಿಗೆ ಸೂಕ್ತ ಪ್ರತೀಕವಾಗಿದೆ.

ನೀರಿನಿಂದ ಹುಟ್ಟಿದ ಭೂಮಿಗೆ –

೧. 'ಕಡಕಡ' ಎಂಬ ಶಬ್ದ
೨. ಗಟ್ಟಿಯಾಗಿರುವ ಸ್ಪರ್ಶ
೩. ಕಪ್ಪು ಮೊದಲಾದ ರೂಪಗಳು
೪. ಸಿಹಿ ಮತ್ತು ಹುಳಿ ಮೊದಲಾದ ರಸಗಳು
೫. ಒಳ್ಳೆಯ ಮತ್ತು ಕೆಟ್ಟ ಗಂಧಗಳು

– ಹೀಗೆ ಐದು ಗುಣಗಳು. ಇವುಗಳಲ್ಲಿ ಗಂಧ, ತನ್ನ ಸ್ವಂತ ಗುಣ; ಉಳಿದವು ಪಿತ್ರಾರ್ಜಿತ. ಹೀಗೆ ಈ ಗುಣವಿಶೇಷಗಳಿಂದ ಪಂಚಭೂತಗಳು ಒಂದಕ್ಕೊಂದು ಬೇರೆಯಾಗಿರುತ್ತವೆ.

೨.೦ ಸಮಾರೋಪ

ಭಾರತೀಯ ಪ್ರಾಚೀನ ಸಂಪ್ರದಾಯದಲ್ಲಿ, ಅಪೌರುಷೇಯವಾದ ಕೃತಿಗಳಲ್ಲಿ ಪಂಚಮಹಾಭೂತಗಳ ಪ್ರಸ್ತಾಪ ಎರಡು ಬಗೆಯಲ್ಲಿ ಕಾಣುತ್ತೇವೆ. ಮೇಲ್ನೋಟಕ್ಕೆ ಭೌತಿಕ ಸೃಷ್ಟಿ ಈ ಪಂಚಕಗಳ ಪಂಚೀಕರಣ ಪ್ರಕ್ರಿಯೆಯಿಂದಾಗಿ (Chinmay-ananda, 108ff) ಸ್ಥೂಲ ಪ್ರಕೃತಿಯಾಗಿ ನಿರ್ಮಾಣಗೊಂಡಿದೆ. ಕಾರಣ ಪಂಚಭೂತಗಳು ಭೌತಿಕ ಸೃಷ್ಟಿಯ ಮೂಲವಸ್ತುಗಳು (Elements). ಬಹಿಃಸ್ತರ ದಲ್ಲಿ ಪ್ರತ್ಯಕ್ಷವಾಗಿ ತೋರುವ ಈ ಅನೇಕತೆ (Dualism)ಯನ್ನು ಅಂತಃ ಸ್ತರದಲ್ಲಿ ಸಮರಸಗೊಳಿಸುವ, ಒಗ್ಗೂಡಿಸುವ ಏಕತೆ (Unity)ಯನ್ನು ಈ ಪಂಚಮಹಾ ಭೂತಗಳು ಸಂಕೇತಿಸುತ್ತವೆಯಾದುದರಿಂದ ಅವು ಇತ್ತ ಕೇವಲ ಭೌತಿಕ (Material)ವೂ ಅಲ್ಲ, ಅತ್ತ ಅಭೌತಿಕ (Non-material)ವೂ ಆಗಿರದೆ ಅವೆರಡರ ಸಂಗಮ ಎಂಬ ಅದ್ವೈತ (Non-dual) ಭಾವವೇ ಭಾರತೀಯ ಅವಲೋಕನ ಎಂಬ ಸತ್ಯ ಇಲ್ಲಿ ಅನಾವರಣಗೊಳ್ಳುತ್ತದೆ (Panikkar, 182). ಈ ಅರ್ಥದಲ್ಲಿ ಪಂಚಭೂತಗಳು ಅಭೌತಿಕವನ್ನು ನಿರ್ದೇಶಿಸುವ ಭೌತಿಕ ಸಂಕೇತಗಳಾಗಿವೆ (Id. 143 f. n. 4)ಎಂಬ ಪಣಿಕ್ಕರನ ಮಾತು ಸತ್ಯವಾಗಿದೆ. ಆ ಅಭೌತಿಕ ಏಕತೆಯನ್ನೇ ವೇದಾಂತದಲ್ಲಿ ಬ್ರಹ್ಮ ಸತ್ಯ ಅಥವಾ ಪ್ರಜ್ಞಾನ ...

ಹೆಸರಿಸಿ ದ್ದಾರೆ (ಐ.ಉ. III, ೩). ಸರ್ವಕ್ಕೂ ಆತನೇ ಮೂಲವಸ್ತು ಹಾಗೂ ಕಾರಣ (ಮುಂ. ಉ. II, ೧, ೩).

ಸರ್ವಾಂತರ್ಯಾಮಿಯಾದ ಈ ಅಂತಃಸ್ತರವನ್ನು ಅನುಭಾವಿಸಿದರೆ ಎಲ್ಲ ನನ್ನು ಅನುಭವಿಸಿದಂತೆ (ಐ.ಉ. VI, 35) ಅನೇಕತೆಯಲ್ಲಿ ಏಕತೆಯನ್ನು ಅನುಭಾವಿಸಿ, ಏಕತೆಯಲ್ಲಿ ಅನೇಕತೆಯನ್ನು ಅನುಭವಿಸುವುದೇ ಭಾರತೀಯ ಸಂಪ್ರದಾಯ ಹಾಗೂ ಪರಂಪರೆ (ಈ. ಉ. ೬).

ವಾಸ್ತವದಲ್ಲಿ, ಈ ಪಂಚಮಹಾಭೂತಗಳ ವ್ಯಾವಹಾರಿಕ ಗುಣಧರ್ಮಗಳನ್ನು ಅವಲಂಬಿಸಿ ಭಾರತೀಯ ಜನಪದರಲ್ಲಿ ಅನೇಕ ನಂಬಿಕೆಗಳು ಹುಟ್ಟುವ ಸಾಧ್ಯತೆ ಇದೆ. ಈ ಕಾರಣದಿಂದಾಗಿ ಅವುಗಳ ವರ್ಗೀಕರಣವನ್ನು ಹಾಗೂ ಅಧ್ಯಯನವನ್ನು ಈ ಪಂಚಭೂತಗಳ ಹಿನ್ನೆಲೆಯಲ್ಲಿ ಮಾಡುವುದು ಅಪೇಕ್ಷಣೀಯ. ಈ ದೃಷ್ಟಿಯಿಂದ ಪ್ರಸ್ತುತದಲ್ಲಿ ಸಮಗ್ರ ಅಧ್ಯಯನಕ್ಕೆ ಪೀಠಿಕೆಯಾಗಿ ಪಂಚಭೂತಗಳ ವಿವರ ನೀಡಲಾಗಿದೆ.

೩.೦ ಸಂಕ್ಷೇಪ ಸೂಚಿ

೩.೧ ಅ. ವೇ. ಅಥರ್ವ ವೇದ

೩.೨ ಐ. ಉ. ಐತ್ತರೇಯ ಉಪನಿಷತ್ತು

೩.೩ ಋ. – ಋಗ್ವೇದ

೩.೪ ಛಾ. ಉ. – ಛಾಂದೋಗ್ಯ ಉಪನಿಷತ್ತು

೩.೫ ಬೃ. ಉ. – ಬೃಹದಾರಣ್ಯಕ ಉಪನಿಷತ್ತು

೩.೬ ಮಾ. ಉ. – ಮಾಂಡೂಕ್ಯ ಉಪನಿಷತ್ತು

೩.೭ ಯಜು. – ಯಜುರ್ವೇದ

೩.೮ ಶ.ಬ್ರಾ. – ಶತಪಥ ಬ್ರಾಹ್ಮಣ

೪.೧ ಆದಿದೇವಾನಂದ(ಸ್ವಾಮಿ) – ಪಂಚದಶೀ. ಮೈಸೂರು : ರಾಮಕೃಷ್ಣಾಶ್ರಮ

೪.೨ ಚಿದಂಬರಯ್ಯ, ಹೊಸಕೆರೆ – ಪಂಚದಶೀತತ್ತ್ವಾರ್ಥ ಬೆಂಗಳೂರು, ಬಸವನಗುಡಿ :

ಎಸ್.ಎಸ್.ಎನ್. ಬುಕ್ ಡಿಪೋ (?)

೪.೩ ಭಟ್ಟ, ಕೃಷ್ಣಮಂಜ – ೧೯೮೦ "ಪಂಚಭೂತಗಳು", – ಕನ್ನಡ ವಿಶ್ವಕೋಶ, ಸಂಪುಟ ಹತ್ತು. – ಮೈಸೂರು : ಕನ್ನಡ ಅಧ್ಯಯನ – ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ

೪.೪ ಮಾಡ್ತ, ವಿಲ್ಯಂ – ೧೯೮೭, ಜನಪದ ಭಾಷಾವಿಜ್ಞಾನ, ಧಾರವಾಡ : ಪ್ರಸಾರಾಂಗ, ಕರ್ನಾಟಕ್ ವಿಶ್ವವಿದ್ಯಾನಿಲಯ

೪.೫ ರುದ್ರಪ್ಪ, ಜೆ. – ೧೯೭೩, ಶೈವದರ್ಶನ, ಮೈಸೂರು: ಪ್ರಸಾರಾಂಗ, ಮೈಸೂರು ವಿ. ವಿ

೪.೬ Brown, Kerry (Ed.) --- 1990 The Essential Teachings of Hinduism, London : Arrow Books

೪.೭ Chinmayananda (Swami) --- 1989 (Rev.Ed.) Talks on Shankara's Vivekachoodamanai Bombay : Central Chinmaya Mission Trust

4.8 Panikkar, Raimundo (Ed.) --- 1977 The Vedic Experience : Mantramanjari. Pondicherry : All India Books.

***

ಜನಪದ ವಾಸ್ತು : ತಾಂತ್ರಿಕತೆ ಮತ್ತು ಅನನ್ಯತೆ

ಡಾ|| ವೀರೇಶ ಬಡಿಗೇರ

ಜನಪದದ ಭೌತಿಕ ಸಂಸ್ಕೃತಿ ನಿರ್ದಿಷ್ಟ ಪ್ರದೇಶ, ಜನಾಂಗ, ಜನಾಂಗದ ಲೋಕದೃಷ್ಟಿಯನ್ನು ಅನುಲಕ್ಷಿಸಿ ನಿರ್ಮಾಣವಾಗುತ್ತಿರುತ್ತದೆ. ಜನಪದರು ವಾಸಿಸುವ ಭೌಗೋಳಿಕ ಪರಿಸರ, ಪ್ರಾದೇಶಿಕತೆ, ಸಸ್ಯವರ್ಗ, ಪ್ರಾಣಿವರ್ಗದ ಪರಿಕರಗಳು ಜನಬದುಕಿನ ಜೀವನಾವರ್ತನ, ವಾರ್ಷಿಕಾವರ್ತನ, ಆಚರಣೆ, ಸಂಪ್ರದಾಯಗಳು ಮತ್ತು ಕೃಷಿ ಉತ್ಪಾದನಾ ಸಂಬಂಧಗಳು, ಕಸುಬು ಇವುಗಳಿಗನುಗುಣವಾಗಿ ಭೌತಿಕ ಸಂಸ್ಕೃತಿಯ ವಾಸ್ತುವಿನ್ಯಾಸಗಳು ರಚನೀಕರಣಗೊಂಡಿರುತ್ತವೆ.

ಬಹುಬಳಕೆಯ ಸಾಧ್ಯತೆಯನ್ನು ಹೊಂದಿರುವ ಜನಪದ ಮನೆಗಳ ರಾಚನಿಕ ಸ್ವರೂಪ ಕೇವಲ ವಾಸಿಸುವ ಜಾಗ ಮಾತ್ರವಾಗಿರದೆ ಬದುಕಿನ ಸಾಂಸ್ಕೃತಿಕ ಸಂಕೀರ್ಣತೆಗಳನ್ನು ಗುಣಾತ್ಮಕವಾಗಿ ಪಡೆದುಕೊಂಡಿರುತ್ತದೆ. ಇಂತಹ ಮನೆಗಳ ವಾಸ್ತು ಅಧ್ಯಯನವೆಂದರೆ ಕೇವಲ ಗೋಡೆ ಬಾಗಿಲುಗಳಂತಹ ಘನ ವಸ್ತುಗಳ ಅಧ್ಯಯನವಲ್ಲ. ಅದು ಅಲ್ಲಿ ಬದುಕುತ್ತಿರುವ, ಬಾಳಿಹೋದ ಜನಸಮುದಾಯಗಳ ಸಾಂಸ್ಕೃತಿಕ ಪಾರಂಪರಿಕ ಅನನ್ಯತೆಯನ್ನು ಅರ್ಥೈಸುವುದಾಗಬೇಕು. ಅಂತಹ ಒಂದು ಪ್ರಯತ್ನವನ್ನು ಈ ಪ್ರಬಂಧ ಮಾಡುತ್ತದೆ.

ವಾಸ್ತುಶಾಸ್ತ್ರ ಕುರಿತು ಹಿಂದಿಗಿಂತ ಇಂದು ಜನರ ಆಸಕ್ತಿ ಅಧಿಕವಾಗಿದೆ. ದುರಂತವೆಂದರೆ ಈ ಅಧಿಕತನ ರೂಪಗೊಂಡಿದ್ದು ಮತ್ತು ರೂಪಗೊಳ್ಳುತ್ತಿರುವುದು ಅರೆಜ್ಞಾನ, ಅಜ್ಞಾನಗಳ ಕಾರಣದಿಂದ. ಜನರಲ್ಲಿರುವ ಭಾವನೆಗಳನ್ನು ನಂಬಿಕೆಗಳನ್ನು ತಮ್ಮ ಸ್ವಂತ ತೆವಲುಗಳಿಗಾಗಿ ವಿಕಾರವಾಗಿ ಬಳಸಿಕೊಳ್ಳುತ್ತಿರುವ ಠಕ್ಕ ವಾಸ್ತು ಪಂಡಿತರು, ವಾಸ್ತುಶಾಸ್ತ್ರಕ್ಕಿರುವ ಬೆಲೆಯನ್ನೇ ಕಳೆದು ಹಾಕುತ್ತಿದ್ದಾರೆ. ಇಂಥವರ ಮಾತಿಗೆ ಮರುಳಾದ ಜನ ಇರುವ ಮನೆಯನ್ನು ಕೆಡವಿ ಹಾಗೂ ಕಳೆದುಕೊಂಡು ಕಂಗಾಲಾಗುತ್ತಿದ್ದಾರೆ. ನಿಜವಾಗಿಯೂ, ವಾಸ್ತುಶಾಸ್ತ್ರ ಬಹುಶಿಸ್ತೀಯ ಅಧ್ಯಯನವಾಗಿದೆ. ಹಸ್ತಸಾಮುದ್ರಿಕೆ, ಜಾತಕ, ಭೂಗೋಳ, ಶಿಲ್ಪಶಾಸ್ತ್ರ, ಜ್ಯೋತಿಷ್ಯದಂತಹ ಹಲವು ಜ್ಞಾನಶಾಖೆಗಳ ಮೇಲೆ ವಾಸ್ತುಶಾಸ್ತ್ರರೂಪಗೊಂಡಿದೆ. ಅದರ ಉಪಯುಕ್ತ ಅಧ್ಯಯನ ಇಂದು ನಡೆಯಬೇಕಿದೆ.

ವಾಸ್ತುವಿನ ಪ್ರಾಚೀನತೆ

'ವಾಸ್ತು' ಅಂದರೆ ಮೊದಲೇ ಹೇಳಿದಂತೆ ವಾಸಿಸುವ ಮನೆಗಳ ಮೊತ್ತ ಅಲ್ಲ. ಅದು ಅಲ್ಲಿ ಬದುಕುತ್ತಿರುವ ಜನಸಮುದಾಯಗಳ ಅಧ್ಯಯನ. 'ವಸ್ ನಿವಸತೆ' ಎಂಬ ಧಾತುವಿನಿಂದ 'ವಾಸ್ತು' ಎಂಬ ಪದ ನಿಷ್ಪನ್ನವಾಗಿದೆ. ಅಂದರೆ ಭೂಮಿಯ ಆಯಸ್ಕಾಂತ ವಲಯಕ್ಕನುಗುಣವಾಗಿ ನಿರ್ಮಾಣವಾದ ಗೃಹ, ಸೌಧ, ಬಾವಿ, ತಟಾಕ, ಮತ್ತು ಅವುಗಳಲ್ಲಿ ಬದುಕುತ್ತಿರುವ ಜನವಸತಿಯ ಒಟ್ಟು ಮೊತ್ತವನ್ನು ವಾಸ್ತು ಎಂದು ಕರೆಯಬಹುದಾಗಿದೆ. ಋಗ್ವೇದ ಮತ್ತು ಮಯ ಮತದಂತಹ ವಾಸ್ತುಶಾಸ್ತ್ರ ಕೃತಿಗಳು ಇದನ್ನೇ ಪ್ರತಿಪಾದಿಸುತ್ತವೆ. ಋಗ್ವೇದವಂತೂ ಮನೆಯ ನಿವೇಶನಕ್ಕಿಂತ ಅದರ ಮೇಲಿನ ಮನೆಗೆ ಪ್ರಾಮುಖ್ಯತೆ ಕೊಡುತ್ತದೆ. ಇಂತದ್ದನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡುವುದೇ ವಾಸ್ತುಶಾಸ್ತ್ರವೆಂದು ಗುರುತಿಸಿಕೊಂಡಿದೆ.

ಹಾಗಿದ್ದರೆ ಈ 'ಶಾಸ್ತ್ರ' ಎಷ್ಟು ಪ್ರಾಚೀನ? ಎಂಬ ಪ್ರಶ್ನೆಯನ್ನು ಕೇಳಿಕೊಂಡರೆ ಮನುಷ್ಯನ ಆರಂಭದಿಂದಲಂತೂ ಅಲ್ಲ ಎನ್ನುವುದು ಖಚಿತ. ಯಾಕೆಂದರೆ ಮಾನವನಿಗೆ ಶಾಸ್ತ್ರಕ್ಕಿಂತ ಸಂರಕ್ಷಣೆ ಬಹಳ ಮುಖ್ಯ. ಅನ್ನ, ಅರಿವೆ, ಗಾಳಿ, ನೀರಿನಷ್ಟೆ ಆತನಿಗೆ ಸಂರಕ್ಷಣೆ ಅಗತ್ಯ. ಈ ಸಂರಕ್ಷಣೆಯ ಬುದ್ಧಿ ಬೆಳೆದಿದ್ದು ಮನುಷ್ಯನಲ್ಲಿ ಉತ್ಪಾದನಾ ಮೂಲಗಳ ಬಗ್ಗೆ ಜಾಗೃತಿ ಮೂಡಿದಾಗ, ಅಲೆಮಾರಿ ಬದುಕಿನಿಂದ ನೆಲೆನಿಲ್ಲುವ ಸಮಯ ಬಂದಾಗ ಕೌಟುಂಬಿಕ ಜಾಗೃತಿ, ಸಂಗ್ರಹ ಮನೋಧರ್ಮ, ಆಸ್ತಿಯ ಕಲ್ಪನೆ ಆತನಲ್ಲಿ ಅವಿರ್ಭವಿಸಿದಂದಿನಿಂದ ಈ ಸಂರಕ್ಷಿತ ಮನೋಧರ್ಮ ಬೆಳೆಯಿತು.

ಗವಿ, ಗಹ್ವರ, ಮರದ ಪೊಟರೆಗಳ ವಾಸದಿಂದ ಗುಡಿಸಲಿನವರೆಗೆ ಬಂದಂತೆ, ನಾಗರಿಕ ಪ್ರಜ್ಞೆ ಜಾಗೃತವಾದಂತೆ ಮಳೆ, ಗಾಳಿ, ಬೆಂಕಿಯಿಂದ ಸಂರಕ್ಷಣೆ ಪಡೆಯಲು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸಲು ದೀರ್ಘ ಕಾಲದ ಮನೆ ನಿರ್ಮಾಣಕ್ಕೆ ಕೈಹಾಕಿದ. ಹೀಗೆ ಅಲೆಮಾರಿ ಬದುಕಿನಿಂದ ನೆಲೆನಿಂತ ದಿನದಿಂದ, ಕೃಷಿ ಉತ್ಪನ್ನಗಳು ಬೆಳೆದಂದಿನಿಂದ ಮನೆ, ಕೇರಿ, ಸಮುದಾಯಗಳು ರೂಪುಗೊಂಡವು.

ಮನೆಯ ಬೆಳವಣಿಗೆಯ ಬಗ್ಗೆ ಒರಿಸ್ಸಾದ ಸೌರರಲ್ಲಿ ರೋಚಕವಾದ ಕಥೆ ಯೊಂದಿದೆ. ಅವರ ಪ್ರಕಾರ ಮೊದಲು ಮಾನವ ಎರಡು ಅಡಿ ಗಿಡ್ಡನಾಗಿದ್ದ. ಮರದ ಕೆಳಗೆ ವಾಸಿಸುತ್ತಿದ್ದ. ಮಳೆಗಾಲ ಬಂದಾಗ ಬಹಳ ಕಷ್ಟನಷ್ಟಗಳನ್ನು ಅನುಭವಿಸುತ್ತಿದ್ದ. ಮಳೆಗಾಲದಲ್ಲಿ ನೆಲದಲ್ಲಿ ಬಿಲತೋಡಿ ಇಲಿ – ಮೊಲಗಳಂತೆ

ಬದುಕುತ್ತಿದ್ದ. ಬಹಳ ಮಳೆಯಿಂದಾಗಿ ಅವುಗಳ ಛಾವಣಿ ಕುಸಿದು ಭೂಗತ ವಾಗುತ್ತಿದ್ದ. ಇದರಿಂದ ಜನಸಂಖ್ಯೆ ಇಳಿಮುಖವಾಗುತ್ತಿತ್ತು.

ಈ ಸಂಗತಿಯಿಂದ ಪಶ್ಚಾತ್ತಾಪಗೊಂಡು 'ಜಂಗುಸಾರನೆಂಬ' ಮನುಷ್ಯ ಮನುಕುಲದ ಉಳಿವಿಗಾಗಿ ಪರಿಹಾರ ಕಂಡುಕೊಳ್ಳುತ್ತಾನೆ. ಈತನಿಗೆ ಮನೆ ನಿರ್ಮಾಣದ ಆಲೋಚನೆ ಮೂಡುತ್ತದೆ. ಒಂಟಿ ಕಂಬದ ಮೇಲೆ ಬಿಚ್ಚಿದ ಕೊಡೆ ಯಂತಹ ವರ್ತುಳಾಕಾರದ ಛಾವಣಿಯುಳ್ಳ ಮನೆಯನ್ನು ಈಚಲು ಗರಿಗಳಿಂದ ಕಟ್ಟಿದ. ಇದಕ್ಕೆ ಗೋಡೆಗಳಿರಲಿಲ್ಲ. ಇಂದಿಗೂ ಸೌರರು ಇದೇ ಕ್ರಮವನ್ನು ಅನುಸರಿಸುತ್ತಾರೆ. ಆಮೇಲೆ ಮರಮುಟ್ಟಿನಿಂದ ಅಥವಾ ಮಣ್ಣಿನಿಂದ ಛಳಿ, ಮಳೆ, ಗಾಳಿಯನ್ನು ತಡೆಯಲು ಬೆಚ್ಚನೆಯ ಮನೆಯನ್ನು ಕಟ್ಟಿಕೊಳ್ಳುತ್ತಾರೆ.

ನಿಸರ್ಗದಿಂದ ಪ್ರೇರಿತನಾದ ಮನುಷ್ಯ ಗೋಡೆಗಳಿಲ್ಲದ ಕೇವಲ ಕೊಡೆ ಗಳಂತಿರುವ ಮನೆಯನ್ನು ನಿರ್ಮಿಸಿಕೊಂಡ. ಬಹುಶಃ 'ಆಕಾಶ' ಮತ್ತು 'ಮರ' ಇದಕ್ಕೆ ಪ್ರೇರಣೆ ಇರಬಹುದು. ನಂತರ ತನಗೆ ಅಪಾಯ ಒದಗುವ ಭಾಗಗಳನ್ನು ಕ್ರಮವಾಗಿ ಮುಚ್ಚುತ್ತಾ ಬಂದು ಅದಕ್ಕೆ ಗುಡಿಸಲಿನ ರೂಪವನ್ನು ತಂದು ಕೊಂಡನೆಂದು ಕಾಣುತ್ತದೆ. ಇಲ್ಲಿ ಬಹಳ ಮುಖ್ಯವಾದ ಸಂಗತಿ ಎಂದರೆ, ಆತನಲ್ಲಿ ಜಾಗೃತವಾದ ಬೌದ್ಧಿಕತೆ. ನಕ್ಷತ್ರವನ್ನೊಳಗೊಂಡ ಗುಮ್ಮಟಾಕಾರದ ಅಂತರಿಕ್ಷ. ಈ ಅಂತರಿಕ್ಷದಲ್ಲಿ ಇಂದ್ರ, ವಾಯು, ಪರ್ಜನ್ಯ, ರುದ್ರ, ಮರುದ್-ದೇವತೆಗಳು ಅಷ್ಟದಿಕ್ಪಾಲಕರು. ಈ ದಿಕ್ಪಾಲಕರಿಗೂ ಮನೆಯನ್ನು ಸಂರಕ್ಷಿಸುವ ಚೇತನಕ್ಕೂ ನಿಕಟ ಸಂಬಂಧ. ಇದು ತತ್ವವಾಸ್ತು ವಿದ್ಯೆಯ ತಳಹದಿಯಿಂದ ಮೂಡಿದ್ದು. ಇದು ನಂತರದ ಶಾಸ್ತ್ರೀಯ ಬೆಳವಣಿಗೆ.

ಮಧ್ಯದ ದಪ್ಪ ಕಂಬ, ಸುತ್ತಲೂ ಇಳಿಜಾರು ಈ ಆಕಾರ ಭೂಮಿಯ ಆಯಸ್ಕಾಂತ ಗುಣಕ್ಕೆ ತಕ್ಕ ವಾಸ್ತು. ಯಾಕೆಂದರೆ ಎಂಟು ದಿಕ್ಕುಗಳಲ್ಲಿರುವ ಚೈತನ್ಯಗಳು, ಅಂದರೆ ಪ್ರಾಣವಾಯುವಿನಂತಹ ಮನುಷ್ಯನ ಜೀವನಾವಶ್ಯಕತೆಗಳು ಈ ಎಂಟು ದಿಕ್ಕಿನಿಂದ ಲಭ್ಯವಾಗುತ್ತವೆ. ಮಧ್ಯದಲ್ಲಿ ಕಂಬದ ಮೇಲೆ ಚೂಪಾಗಿರುವ ಈ ಪಿರಾಮಿಡ್ ಆಕೃತಿ ಭೂಮಿಯ ಆಯಸ್ಕಾಂತ ವಲಯದಿಂದ ಲಭ್ಯವಾಗುವ, ಎಲ್ಲ ಜೀವಾಂಶವನ್ನು ಹಿಡಿದು ಆ ಮೂಲಕ ಮನೆಯ ಒಳಗಡೆ ಸೇರಿಸುತ್ತದೆ. ಇಂದು ಕೂಡ ಗುಡಿಸಲುಗಳನ್ನೇ ಆಧುನೀಕರಣ ಮಾಡಿಕೊಂಡು ಆಧುನಿಕ ವಾಸ್ತು ಎಂದು ಈ ಹಳೇ ತಂತ್ರಜ್ಞಾನವನ್ನೇ ಹೊಸದೆಂಬ ಭ್ರಮೆಯಲ್ಲಿ ಬಳಸುತ್ತಿದ್ದೇವೆ.

ಇದೇ ರೀತಿ ಈಶಾನ್ಯ ಭಾರತದ ಸಿಂಗ್ ಪೋಗಳಲ್ಲಿ ಒಂದು ಕಥೆ ಪ್ರಚಲಿತವಿದೆ. ಗುಹಾಮಾನವನ ಕಾಲದಲ್ಲಿ **ಕಿಂದ್ರು–ಲಲೀಂ** ಮತ್ತು **ಕಿಂಚಲ**

ಲಿದಾಂ ಎನ್ನುವ ಗೆಳೆಯರು ಮನೆಕಟ್ಟಲು ಉತ್ಸುಕರಾಗುತ್ತಾರೆ. ಆದರೆ ಅವರಿಗೆ ಹೇಗೆ ಕಟ್ಟಬೇಕೆನ್ನುವುದೇ ತಿಳಿಯುವುದಿಲ್ಲ. ಪ್ರಾಣಿಗಳ ಸಲಹೆ ಕೇಳಲು ಕಾಡಿಗೆ ಹೊರಡುತ್ತಾರೆ. ದಾರಿಯಲ್ಲಿ ಅವರಿಗೆ ಮೊದಲು ಒಂದು ಆನೆ ಎದುರಾಗುತ್ತದೆ. ಅದಕ್ಕೆ ತಮ್ಮ ಆಸೆಯನ್ನು ಅರಹುತ್ತಾರೆ. ಆನೆ ಹೇಳುತ್ತದೆ. 'ನನ್ನ ಕಾಲುಗಳಂತೆ ಬಲವಾಗಿರುವ ದಪ್ಪ ಕಂಬಗಳನ್ನು ಮಾಡಿಕೊಳ್ಳಿ' ಎಂದು. ಆಮೇಲೆ ಎಂದು ಸ್ನೇಹಿತರಿಬ್ಬರು ಕೇಳಿದಾಗ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತದೆ. ಮುಂದೆ ಪ್ರಯಾಣ ಬೆಳೆಸುತ್ತಾರೆ. ಆಗ ಒಂದು ಹಾವು ಭೇಟಿಯಾಗುತ್ತದೆ. ಅದಕ್ಕೆ ತಮ್ಮ ಅಂಬೋಣವನ್ನು ತಿಳಿಸಲು ಅದು 'ನನ್ನ ತರ ತೆಳುವಾದ ಉದ್ದವಾದ ಕೋಲುಗಳನ್ನು ಮಾಡಿಕೊಳ್ಳಿ' ಎಂದು ಹೇಳುತ್ತದೆ. ಆಮೇಲೆ ಎಂದು ಅವರಿಬ್ಬರು ಕೇಳಿದಾಗ ಹಾವು ಗೊತ್ತಿಲ್ಲ ಎಂದು ಹೇಳುತ್ತದೆ. ಹಾಗೆ ಮುಂದುವರೆದ ಸ್ನೇಹಿತರಿಬ್ಬರೂ ಒಂದು ಎಮ್ಮೆಯನ್ನು ನೋಡುತ್ತಾರೆ. ಆ ಎಮ್ಮೆಯ ಮುಂದೆ ಸತ್ತ ಕೋಣ ಬಿದ್ದಿರುತ್ತದೆ. ಅದನ್ನು ನಾಯಿನರಿಗಳು ಹರಿದು ತಿನ್ನುತ್ತಿರುತ್ತವೆ. ಎಮ್ಮೆಯನ್ನು ಮಾತಾಡಿಸಲಾಗಿ ಅದು ಕೋಣನ ಅಸ್ತಿಪಂಜರವನ್ನು ತೋರಿಸಿ, ಅಡ್ಡಕೋಲುಗಳನ್ನಿಟ್ಟು ಈ ಅಸ್ತಿಪಂಜರದ ಮೂಳೆಗಳಂತಿರುವ ಛಾವಣಿಯನ್ನು ರಚಿಸಿರಿ ಎಂದು ಹೇಳುತ್ತದೆ. ಆಮೇಲೆ ಏನು ಮಾಡಬೇಕು ಎಂದು ಕೇಳಿದಾಗ ಎಮ್ಮೆ ನನಗೆ ಗೊತ್ತಿಲ್ಲ ಎಂದು ಹೇಳುತ್ತದೆ. ಇನ್ನೂ ಮುಂದೆ ಹೋದಾಗ ಮೀನೊಂದು ಸಿಗುತ್ತದೆ. 'ನಾವು ಒಂದು ಮನೆಯನ್ನು ಕಟ್ಟಬೇಕಾಗಿದೆ' ಎಂದು ಹಿಂದೆ ಆನೆ, ಹಾವು, ಎಮ್ಮೆ ಹೇಳಿದ ಸಲಹೆಗಳನ್ನು ಅದಕ್ಕೆ ತಿಳಿಸಿ 'ನಾವು ಮುಂದೇನು ಮಾಡಬೇಕೆಂದು ಕೇಳುತ್ತಾರೆ. ಮೀನು ಹೇಳುತ್ತದೆ, 'ನನ್ನ ಬೆನ್ನ ಮೇಲಿನ ಪೊರೆಗಳನ್ನು ನೋಡಿ, ರಾಶಿಗಟ್ಟಲೆ ಎಲೆಗಳನ್ನು ಛಾವಣಿಯ ಮೇಲೆ ಈ ಪೊರೆಗಳ ಮಾದರಿಯಲ್ಲಿ ಸೇರಿಸಿ' ಇವಿಷ್ಟನ್ನು ಕೇಳಿದ ಗೆಳೆಯರು ತಮ್ಮ ನೆಲೆಗೆ ಹಿಂತಿರುಗಿ ಮೊತ್ತಮೊದಲ ಮನೆಯನ್ನು ಕಟ್ಟುತ್ತಾರೆ.

ಇಡೀ ಕಥೆ ಸಂಘ ಜೀವನವನ್ನು ಸೂಚಿಸುವುದರೊಂದಿಗೆ ಪ್ರಕೃತಿ ಪ್ರಾಣಿಪಕ್ಷಿಗಳಿಂದ ಪ್ರೇರಿತನಾಗಿ ಮನುಷ್ಯ ಮನೆಕಟ್ಟಲು ಮುಂದಾದನು ಎಂಬುದನ್ನು ಹೇಳುತ್ತದೆ. ಗುಬ್ಬಿ ಕಾಗೆಗಳ ಗೂಡಾಗಲೀ ಹಾವಿನ ಹುತ್ತಗಳಾಗಲೀ ಹವಾ ಮಾನದ ಹಿನ್ನೆಲೆಯಲ್ಲಿಯೇ ನಿರ್ಮಿತವಾಗಿರುತ್ತವೆ. ಗುಬ್ಬಿಯ ಮನೆಯಂತೂ ತುಂಬ ವಿಶಿಷ್ಟವಾದದ್ದು. ಹಾವಿನ ಹುತ್ತ ಇಂದಿನ ಎ.ಸಿ. ಮನೆಗಳಿಗೆ ಮಾದರಿ ಯಾಗಿದೆ.

ಹಿಂದೆ ಸೂಚಿಸಿದಂತೆ ವಾಸ್ತುಶಾಸ್ತ್ರ ಕೇವಲ ರೇಖಾತ್ಮಕವಾದ ಒಂದೇ ಶಾಸ್ತ್ರವಲ್ಲ, ಅದು ಬಹು ಶಿಸ್ತೀಯ ಅಧ್ಯಯನ ಎನ್ನುವ ಮಾತನ್ನು ಕಥೆ ಸಮರ್ಥಿಸುತ್ತದೆ. ಆನೆ, ಹಾವು, ಎಮ್ಮೆ, ಮೀನು ಮತ್ತು ಗೆಳೆಯರು ಐದು

ರೀತಿಯ ತಾಂತ್ರಿಕ ಪರಿಣತಿಯನ್ನು ಪ್ರತಿನಿಧಿಸುತ್ತಾರೆ. ಮನೆಯ ಒಂದೊಂದು ಭಾಗವನ್ನು ಒಬ್ಬೊಬ್ಬರು ನಿರ್ಮಿಸುವ, ಇವರೆಲ್ಲರ ಸಹಾಯದಿಂದ ಅದೊಂದು ಪರಿಪೂರ್ಣ ಆಲಯವಾಗಿ ರೂಪಗೊಳ್ಳುವ ನೆಲೆ ತುಂಬ ಅರ್ಥಪೂರ್ಣವಾದದ್ದು. ಬಹುಶಃ ಇಲ್ಲಿಂದಲೇ ನಾವು ವಾಸ್ತುಶಾಸ್ತ್ರದ ಬೆಳವಣಿಗೆಯನ್ನು ಗುರುತಿಸಬಹುದಾಗಿದೆ.

ಮನೆ ಮತ್ತು ಕೌಟುಂಬಿಕ ಜವಾಬ್ದಾರಿ

ಹಿಂದೆ ಗಮನಿಸಿದಂತೆ ಮಾನವನ ವಾಸದ ಮನೆಗಳು ಹುಲ್ಲು, ಮಣ್ಣು, ಚಪ್ಪರಗಳಿಂದ ಕೂಡಿದ್ದವು. ಹೀಗಾಗಿ ಪ್ರಾಚೀನ ಸ್ಮಾರಕಗಳಾಗಿ ಈ ಮಾನವನ ವಾಸದ ಮನೆಗಳು ನಮಗೆ ದಕ್ಕಿಲ್ಲ. ಶಿಲೆ, ಶಿಲ್ಪ, ಶೃಂಗಾರಗಳು, ಒಂದು ಕಾಲದಲ್ಲಿ ದೇವಾಲಯಕ್ಕೆ ಮಾತ್ರ ಸೀಮಿತವಾಗಿದ್ದವು. ತಾವು ಎಂಥ ಚಿಂತಾಜನಕ ಸ್ಥಿತಿಯಲ್ಲಿ ಬದುಕುತ್ತಿದ್ದರೂ ಈ ಭಕ್ತಜನ ತಮ್ಮ ದೇವರಿಗೆ ಆ ಕೊರತೆಯ ಬಿಸಿಯನ್ನು ತಾಕಿಸುತ್ತಿರಲಿಲ್ಲ. ದೇವರು ಸತ್ಯ, ಮನುಷ್ಯನ ಬದುಕು ಕ್ಷಣಿಕ ಎನ್ನುವ ಕಲ್ಪನೆ ಅವರಲ್ಲಿ ಬೇರೂರಿತ್ತು. ಇಂದೂ ಕೂಡ ಸ್ಲಂಗಳಲ್ಲಿ, ಹಳ್ಳಿಗಳಲ್ಲಿ ತಾವೆಲ್ಲ ಚಪ್ಪರದ ಮನೆಗಳಲ್ಲಿದ್ದು ಅನ್ನ ನೀರಿಗೆ ಪರದಾಡುತ್ತಿದ್ದರೂ ತಮ್ಮ ಕೇರಿಯಲ್ಲಿರುವ ದೇವರನ್ನು ದೇವರ ಗುಡಿಯನ್ನು ಕಲ್ಲು, ಸಿಮೆಂಟುಗಳಂತಹ ಘನವಸ್ತುಗಳಿಂದ ಕಟ್ಟಿಸುತ್ತಾರೆ. ಈ ಮಾತಿಗೆ ಪೂರಕವಾಗಿ ವಿಷ್ಣುಧರ್ಮೋತ್ತರ ಪುರಾಣದಲ್ಲಿ ಉಲ್ಲೇಖ ಸಿಗುತ್ತದೆ. ಸುಧಾ (ಅಮೃತ ಮಕರಂದ) ಮತ್ತು ಶೈಲ (ಸುಣ್ಣ) (Sudha and Shilas) ದೇವರ ನಿವಾಸಕ್ಕೆ ಮಾತ್ರ ಬಳಕೆಯಾಗುತ್ತಿದ್ದವು. ಆದಿಮಾನವನು (Primitive man) ಮರದಿಂದ ತನ್ನ ವಾಸದ ಮನೆಯನ್ನು ಕಟ್ಟಿಕೊಳ್ಳುತ್ತಿದ್ದ ಎಂದು ಮತ್ಸ್ಯಪುರಾಣ (VI–೮–೧೨೦)ದಲ್ಲಿ ಉಲ್ಲೇಖ ದೊರೆಯುತ್ತದೆ.

ದೇವರ ಬಗ್ಗೆ ಜನ ಬದುಕಲ್ಲಿದ್ದ ಈ ಭಾವನಾತ್ಮಕ ಅತಿರೇಖಗಳು ಕಲ್ಲಿಂದ ಕಟ್ಟಿದ ದೇವಸ್ಥಾನಗಳು ಅವಶೇಷಗಳಾಗಿ ಉಳಿದಿದ್ದು ಮರಮಟ್ಟುಗಳಿಂದ ಕಟ್ಟಿದ ಮಾನವ ನಿವಾಸಗಳು ನಾಶಹೊಂದಿರುವಂತೆ ಮಾಡಿವೆ. ಒಟ್ಟನಲ್ಲಿ ತಮ್ಮ ಶಕ್ತಿಸಂಪನ್ಮೂಲವನ್ನೆಲ್ಲ ದೇವಾಲಯ ನಿರ್ಮಾಣಕ್ಕೆ ಧಾರೆ ಎರೆದದ್ದು ಗ್ರಹಿತವಾಗುತ್ತದೆ,

ಇಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕು. ಜನಪದರ ದೇವರು ಮತ್ತು ಅವರ ಗುಡಿಗಳು ಬಹಳ ಪ್ರಮುಖವಾಗಿ ಮರಮುಟ್ಟುಗಳಿಂದಲೇ ನಿರ್ಮಿತವಾದಂತವು. ತಮ್ಮ ಇರುವಿಕೆಯಂತೆಯೇ ತಮ್ಮ ದೇವರನ್ನು ಇಟ್ಟುಕೊಂಡವರು.

ಧರ್ಮನಿಷ್ಠೆ ಜನಪದ ಬದುಕಿನ ನಿಯಂತ್ರಣ ಶಕ್ತಿಯಾಗಿದೆ. ಈ ಶ್ರದ್ಧೆನಿಷ್ಠೆಗಳೇ ಅವರ ಲೌಕಿಕ ಮತ್ತು ಪಾರಲೌಕಿಕದ ಮೆಟ್ಟಿಲುಗಳು. ಮೇಲೆ ಹೇಳಿದಂತೆ ಶಿಷ್ಟ ದೇವಾನುದೇವತೆಗಳಿಗೆ ಮಾತ್ರ ವೈಭೋಗದ ಗುಡಿಗುಂಡಾರ ಪರಿವಾರದ ಅಗತ್ಯ ಇತ್ತು ಎಂಬುದು ಸ್ಪಷ್ಟವಾಗುತ್ತದೆ. ಮತ್ಸ್ಯ ಪುರಾಣದಲ್ಲಿ ದೊರೆಯುವಂತೆ ಜನಪದ ಬದುಕಿಗೂ, ಅವರ ದೇವತೆಗಳಿಗೂ ಮರಮುಟ್ಟು ಪ್ರಮುಖ ಮಾಧ್ಯಮ ವಾಗಿದ್ದುದು ತಿಳಿದುಬರುತ್ತದೆ.

ಮನೆಯಲ್ಲಿ ಜಗತ್ತನ್ನು ಕಾಣುವುದು ಜನಪದರ ಮನೋಭಾವ (World in the house) ಅದೊಂದು ಮಿನಿ ಪ್ರಪಂಚ. ವಿವಿಧ ದೇವಾನುದೇವತೆಗಳ ಪಟಗಳಿಂದ ಹಿಡಿದು ದಿನಬಳಕೆಯ ಮತ್ತು ಜೀವನಾವಶ್ಯಕತೆಯ ಎಲ್ಲ ಸಾಮಗ್ರಿ ಗಳು ಅಲ್ಲಿರುತ್ತವೆ. ಅಲ್ಲದೆ ವಿವಿಧ ಆಚರಣೆ, ಆರಾಧನೆ, ಸಂಪ್ರದಾಯಗಳು ಇದರಲ್ಲಿ ಸೇರಿಕೊಳ್ಳುತ್ತವೆ. ಈ ಅಂಶಗಳು ಮನೆಯನ್ನು ಬೇರೆಬೇರೆಯಾಗಿ ವಿಂಗಡಿಸುತ್ತವೆ. ಅವಶ್ಯಕ ಮತ್ತು ರಕ್ಷಣಾ ಸ್ಥಳವಾಗಿದ್ದ ಮನೆ ಸಂತಾನ ಸಮೃದ್ಧಿ ಮತ್ತು ಉತ್ಪಾದನಾ ವಿಧಾನದಿಂದಾಗಿ ಮತ್ತಷ್ಟು ಶಾಖೆಗಳಾಗುತ್ತದೆ. ದೇವರ ಮನೆ, ಅಡಿಗೆಮನೆ, ನಡುಮನೆ, ಪಡಸಾಲೆ, ದಂದಕ್ಕಿ, ಒಳಟ್ಟ, ಸಂಗ್ರಹ ಕೋಣೆ, ಬಳತ, ಇವೇ ಆ ಮುಖ್ಯ ಶಾಖೆಗಳು.

ಒಂದೊಂದು ಭಾಗಗಳ ಹಿಂದೆ ಒಂದೊಂದು ತರ್ಕ ಇದೆ. ಸಾಮಾಜಿಕ ಸಂಬಂಧಗಳನ್ನು ಬಲಪಡಿಸಲು ವ್ಯವಹರಿಸಲು ಅಂಗಳ, ಜಗಲಿ, ಪಡಸಾಲೆಗಳು ರೂಪಗೊಂಡರೆ, ಧರ್ಮಕಾರ್ಯಗಳನ್ನು ಮಾಡಲು ಧರ್ಮಗುರುಗಳನ್ನು ಸಂತೈ ಸಲು ದೇವರ ಮನೆ ಹುಟ್ಟಿಕೊಂಡಿತು. ಕೌಟುಂಬಿಕ ಸಂಬಂಧಗಳನ್ನು ಹಿಡಿದಿಡಲು ಅಡಿಗೆಮನೆ, ನಡುಮನೆ, ಒಳಟ್ಟ ರೂಪಪಡೆದವು. ಧಾನ್ಯ ಸಂಗ್ರಹಕ್ಕಾಗಿ ಬಳತ, ಹಗೆ, ಅಡಕಲ ಜನ್ಮ ತಳೆದವು. ಕೃಷಿ ಉಪಕರಣಗಳನ್ನು ಸಂರಕ್ಷಿಸಲು, ದನಗಳನ್ನು ಕಾಪಾಡಲು ದಂದಕ್ಕಿ ಹುಟ್ಟಿತು.

ಹಾಗೆ ಉಳಿದ ವೃತ್ತಿಗಳೂ ಕೂಡ ಈ ಮನೆಯ ರಚನೆಯನ್ನು ನಿರ್ಧರಿಸು ತ್ತವೆ. ಆಯಾ ಕಸುಬುಗಳಿಗೆ ಅನುಗುಣವಾಗಿ ಅವರವರ ಮನೆಗಳಿರುತ್ತವೆ. ಇಲ್ಲಿ ಶಾಸ್ತ್ರಕ್ಕಿಂತ ಅವಶ್ಯಕತೆ ಬಹಳ ಪ್ರಮುಖವಾಗುತ್ತದೆ. ಬೇಟೆಗಾರರ ಮನೆ ಬೇಟೆ ಆಯುಧಗಳನ್ನು ರಕ್ಷಿಸುವ ದೃಷ್ಟಿಯಿಂದ ಮುಖ್ಯವಾದರೆ ಬಡಿಗ ಕಂಬಾರರ ಮನೆ ವೃತ್ತಿಯನ್ನು ಸಾಗಿಸುವ ಹಿನ್ನೆಲೆಯಲ್ಲಿ ಪರಸ್ಪರ ಭಿನ್ನವಾಗಿ ನಿಲ್ಲುತ್ತವೆ. ಹಾಗೆ ನೇಕಾರ, ಚಮ್ಮಾರ, ಕುಂಬಾರ ಮುಂತಾದ ವೃತ್ತಿಗಳವರ ಮನೆಯೂ ಅವರ ಕಸುಬುಗಳಿಗೆ ಪೂರಕವಾಗಿರುವಂತೆ ವಿನ್ಯಾಸಗೊಂಡಿರುತ್ತವೆ.

ಆದರೆ ಕಸುಬಿಗೂ ವಸತಿಗೂ ಕಂದಕ ಹುಟ್ಟಿರುವ ಇಂದಿನ ದಿನಗಳಲ್ಲಿ ಮನೆಯ ಉತ್ಪಾದನಾ ಘಟಕವಾಗಿದ್ದ ಕಸುಬು ಕಾರ್ಖಾನೆಗೆ ಸ್ಥಳಾಂತರಿಸಿದೆ. ಇದರಿಂದ ಎಷ್ಟೋ ಆಚರಣಾತ್ಮಕ ಸಂಬಂಧಗಳು ಕಲಾತ್ಮಕ ಸೂಕ್ಷ್ಮಗಳು ಕಲಾವಿದನ ಕೌಟುಂಬಿಕ ಬಿತ್ತಿಯಿಂದ ಕಳಚಿ ಕೇವಲ ವಾಣಿಜ್ಯೀಕೃತ ಸರಕಾಗಿ ಮಾತ್ರ ಉಳಿದುಬಿಟ್ಟಿವೆ. ಇದರಿಂದ ಕಸುಬು ಮತ್ತು ಕಸುಬುದಾರನ ಮನೆಗೂ ಸಾಕಷ್ಟು ಅಂತರವೇರ್ಪಟ್ಟಿದೆ. ಇಲ್ಲಿ ಕಸುಬು ಕೌಟುಂಬಿಕ ಘಟಕವಾಗಿ ಉಳಿದಿಲ್ಲ.

ಆದೇ ರೀತಿ ಜನಪದರ ಜೀವನಾವರ್ತನದ ಮತ್ತು ವಾರ್ಷಿಕಾವರ್ತನದ ರೀತಿಗಳು ಮನೆಯನ್ನು ಖಚಿತ ಸೀಮಾರೇಖೆಗಳಲ್ಲಿ ಗುರುತಿಸುತ್ತವೆ. ಜನನ - ಮರಣ, ಮದುವೆ-ಮುಂಜಿವೆ, ಸೋಬನ - ನಾಮಕರಣ, ಮುಟ್ಟು, ಇವು ಪ್ರತಿಯೊಂದು ತನ್ನ ಅವಶ್ಯಕತೆಗೆ ತಕ್ಕಂತೆ ಮನೆ ಮತ್ತು ಮನೆಯ ಆವರಣದಲ್ಲಿ ನಡೆದು ಹೋಗುತ್ತವೆ. ಸಾಮಾನ್ಯವಾಗಿ ಮದುವೆ, ಮುಂಜಿವೆ, ನಾಮಕರಣ, ಇವು ನಡುಮನೆಯಲ್ಲಿ ನಡೆದರೆ, ಮರಣದ ಹೊಲಿ ಮತ್ತು ಸ್ತ್ರೀ ಋತುಸ್ರಾವದ ಹೊಲಿ ಮನೆಯ ಮತ್ತೊಂದು ಭಾಗಕ್ಕೆ ಹೊಂದಿಕೊಳ್ಳುತ್ತವೆ. ಸೋಬನ ದೇವರಮನೆ ಅಥವಾ ಮಲಗುವ ಮನೆಯನ್ನು ಬಳಸಿಕೊಳ್ಳುತ್ತದೆ. ಒಂದು ವೇಳೆ ಇವೆಲ್ಲ ಸೌಲಭ್ಯಗಳಿಲ್ಲದಿದ್ದರೂ ಇರುವ ಜಾಗದಲ್ಲಿಯೇ ಇಂತಹ ಕಾರ್ಯಗಳು ಅಡಿಗೆ ಮಾಡುವ ಜಾಗವನ್ನು ಹೊರತುಪಡಿಸಿ ನಡೆಯುತ್ತವೆ. ಇಂತಲ್ಲಿ ತುಂಬಾ ಸೂಕ್ಷ್ಮವಾಗಿ ಈ ವ್ಯತ್ಯಾಸಗಳನ್ನು ಗುರುತಿಸಬಹುದಾಗಿದೆ.

ಮನೆ ನಿರ್ಮಾಣದ ಸಂಪನ್ಮೂಲಗಳು

ಮಾಳಿಗೆ ಮನೆ, ಗುಡಿಸಲು ಮನೆ, ಚಪ್ಪರದ ಮನೆ, ಕುದರಿ ಮನೆಗಳು ಆಯಾ ಭೌಗೋಳಿಕ ಲಕ್ಷಣದ ಹಿನ್ನೆಲೆಯಲ್ಲಿ ಸ್ಥಳೀಯ ಉಪಭೋಗಕ್ಕೆ ತಕ್ಕಂತೆ ರಚನೆಗೊಂಡಿರುತ್ತವೆ. ಒಂದು ಪ್ರದೇಶದ ರಚನಾ ವಿನ್ಯಾಸ ಇನ್ನೊಂದು ಪ್ರದೇಶಕ್ಕೆ ಸರಿಹೊಂದದು. ಅಗ್ನಿಪುರಾಣದಲ್ಲಿ ಈ ಕುರಿತ ಉಲ್ಲೇಖ ಸಿಗುತ್ತದೆ. ತೋಟದ ಮನೆ, ನದಿತಟಾಕದ ಮನೆ, ಹಳ್ಳಿಮನೆ, ಗುಡ್ಡದ ಮನೆ ಒಂದಕ್ಕೊಂದು ಭಿನ್ನಶೈಲಿಯಲ್ಲಿರಬೇಕೆಂದು ಹೇಳುತ್ತದೆ. ಪರಿಸರವನ್ನು ಹಾಳುಗೆಡವಿ ಮನೆಕಟ್ಟು ವುದನ್ನು ಸಾಮಾನ್ಯವಾಗಿ ಎಲ್ಲ ಶಾಸ್ತ್ರಗ್ರಂಥಗಳೂ ವಿರೋಧಿಸುತ್ತವೆ. ಪ್ರಕೃತಿ ಮತ್ತು ಅಲ್ಲಿನ ಸಂಪನ್ಮೂಲ ಹವಾಗುಣಕ್ಕೆ ಹೊಂದುವ ಶೈಲಿಯ ಮನೆಗಳು ಹುಟ್ಟಿದರೆ ಅದು ಅಲ್ಲಿನ ಪ್ರಕೃತಿ ಶಕ್ತಿಗಳನ್ನು ಬಳಸಿಕೊಂಡು ಬೆಳೆದ ಜೀವಂತ ಮನೆ ಎನಿಸಿಕೊಳ್ಳುತ್ತದೆ. ಇದು ಜನಪದ ಬದುಕಿನ ವಿಶಿಷ್ಟ ತಂತ್ರವಾಗಿದೆ.

ಬುಡಕಟ್ಟು ಜನರಲ್ಲಿ ಕಾಣುವ ಗುಡಿಸಲುಗಳ ಮಾದರಿಗಳು ಜೀವೋ ತ್ಪತ್ತಿಯ ನೆಲೆಗಳಾಗಿ ಕಂಗೊಳಿಸುತ್ತವೆ. ಕಾರಣ ಸ್ವಂತ ಮತ್ತು ಸ್ಥಳೀಯ

ಅನುಕೂಲಗಳಿಗನುಗುಣವಾಗಿ ಅಲ್ಲಿನ ಕಚ್ಚಾವಸ್ತುಗಳ ಮೂಲಕ ನಿರ್ಮಿತಿ ಹೊಂದುತ್ತವೆ. ಇಲ್ಲಿ ತಮಗೆ ತಕ್ಕ ಹಾಗೆ ಗಾಳಿ ಬೆಳಕಿನ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಾರೆ. ಚಿಕ್ಕ ಕಿಟಕಿ, ಚಿಕ್ಕ ಬಾಗಿಲು ಗಾಳಿ ಬೆಳಕಿನ ಸುಗಮ ಸಂಚಾರವನ್ನು ನಿಯಂತ್ರಿಸುತ್ತವೆ. ಭೂಮಿಯ ಆಯಸ್ಕಾಂತ ವಲಯವನ್ನು ಗುಡಿಸಲಿನ ನೆತ್ತಿನ ಮೇಲಿನ ಮೊನಚಿ ನಿಯಂತ್ರಿಸುತ್ತವೆ. ವಾಸ್ತುಶಾಸ್ತ್ರವನ್ನು ಮುಂದಿಟ್ಟುಕೊಂಡು ಗಾಳಿ-ಬೆಳಕು ಆಯಸ್ಕಾಂತ ವಲಯಗಳ ಬಗ್ಗೆ ಮಾತಾಡುವ ಬುದ್ಧಿಜೀವಿಗಳು. ಠಕ್ಕ ಶಾಸ್ತ್ರಕಾರರು ಇಂತಹ ಅದ್ಭುತ ಮತ್ತು ಸಹಜ ವಾಸ್ತುತಂತ್ರವನ್ನು ಗಮನಿಸಬೇಕಾಗಿದೆ. ಶಾಸ್ತ್ರದ ಹೆಸರಲ್ಲಿ ಪಾರಂಪರಿಕವಾದ ಇಂತಹ ದೇಶಿ ತಿಳುವಳಿಕೆಯನ್ನು ಹೀಗಳೆಯುವ ಪ್ರವೃತ್ತಿಯನ್ನು ನಿಲ್ಲಿಸಿ ಪಾರಂಪರಿಕ ಸತ್ಯವನ್ನು ಅರಿತುಕೊಳ್ಳಬೇಕಿದೆ. ಈ ನೆಲಕ್ಕೆ ಸಲ್ಲದ ವಿದೇಶಿ ಮಾದರಿಗಳ ಮೂಲಕ ಪ್ರಕೃತಿಗೆ ವಿರುದ್ಧವಾಗಿ ನಡೆದುಕೊಳ್ಳುವ ಸಾಹಸವನ್ನು ಪರಿಶೀಲಿಸಿಕೊಳ್ಳಬೇಕಾದ ಜರೂರು ಇದೆ.

ಜನಪದರ ಮನೆಯ ಪ್ರಮುಖ ಲಕ್ಷಣಗಳು

ಗಾಳಿ ಬೆಳಕಿನ ವ್ಯವಸ್ಥೆಗಾಗಿ ಬಿಟ್ಟುಕೊಳ್ಳುವ ಪಾಯ, ಗೋಡೆ, ಕಿಟಕಿ, ಬೆಳಕಿಂಡಿ, ಹೊಗೆಗಿಂಡಿಗಳಂತಹ ತೀರ ಪ್ರಮುಖವಾದವುಗಳನ್ನು ಮಾತ್ರ ಇಲ್ಲಿ ನಿರ್ವಚಿಸಲಾಗಿದೆ. ಈ ಭೌತಿಕಪರಿಕರಗಳೇ ಇಂದು ವಾಸ್ತುಶಾಸ್ತ್ರದ ಪರಮೋಚ್ಚ ಧ್ಯೇಯಗಳೋಪಾದಿಯಲ್ಲಿ ವ್ಯವಹರಿಸುತ್ತಿವೆ. ಸಂಸ್ಕೃತಿಯ ಕರುಳ ಬಳ್ಳಿ ಸಂಬಂಧ ದಿಂದ ಪ್ರತ್ಯೇಕಿಸುವ ಈ ರೀತಿಯ ಅಧ್ಯಯನ ಮಾದರಿಗಳನ್ನು ಪ್ರಶ್ನಿಸಬೇಕಾದ ಮತ್ತು ಸೈದ್ಧಾಂತಿಕವಾಗಿ ವಿಶ್ಲೇಷಣೆಗೆ ಒಳಪಡಿಸುವ ಅಗತ್ಯ ಇದೆ.

೧. ನಿವೇಶನದ ಆಯ್ಕೆ – ಪಾಯ

ಶಿಷ್ಟ ವಾಸ್ತುಶಾಸ್ತ್ರ ನಿವೇಶನದ ಆಯ್ಕೆಗೆ ಬಹಳ ಮಹತ್ವ ಕೊಡುತ್ತದೆ. ಮಾನಸಾರವು ಮನೆಗಿಂತ ನಿವೇಶನದ ಆಯ್ಕೆ ಮತ್ತು ಅಡಿಪಾಯಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತದೆ. ಋಗ್ವೇದವು ನಿವೇಶನಕ್ಕಿಂತ ಅದರ ಮೇಲಿನ ಮನೆಗೆ ಪ್ರಾಮುಖ್ಯತೆ ಕೊಡಬೇಕೆಂದು ಹೇಳುತ್ತದೆ. ಈ ಗ್ರಂಥಗಳು ಹೇಳುವ ಬಹುಳತೆಯೇ ವಾಸ್ತುವಿನ ಹಲವು ಸಾಧ್ಯತೆಗಳನ್ನು ಎತ್ತಿತೋರಿಸುತ್ತದೆ. ಒಂದೇ ತರದ ನಿವೇಶನದ ಆಯ್ಕೆ, ರಚನೆ, ವಿನ್ಯಾಸ ಎಲ್ಲ ಕಡೆಗೂ ಒಪ್ಪದು. ಈ ಮಾತನ್ನು ಅಗ್ನಿಪುರಾಣ ಸಮರ್ಥಿಸುತ್ತದೆ. ಜನಪದರಲ್ಲಿ ಈ ಬಹುಳತೆ ಮತ್ತು ಭಿನ್ನಶೈಲಿ ಅದೊಂದು ಅವಶ್ಯಕ ರಚನೆ. ಶಾಸ್ತ್ರ ಶುದ್ಧತೆ ಅಲ್ಲಿ ನಿಲ್ಲುವುದಿಲ್ಲ. ಸಿಗುವ ಜಾಗವನ್ನು ಅನುಲಕ್ಷಿಸಿ ಅವರು ಇಮಾರತಿ ನಿರ್ಮಿಸುತ್ತಾರೆ. ಹಳ್ಳಿಮನೆ, ತೋಟದ ಮನೆ, ಗುಡ್ಡದ ಮನೆ ಆ ಪರಿಸರದನ್ವಯ ಭಿನ್ನವಾಗಿ ಮೂಡುವುದು

ಸಹಜ. ಒಟ್ಟಿನಲ್ಲಿ ನಿವೇಶನ ಎಂದರೆ ಮನೆಕಟ್ಟಲು ಗೊತ್ತಾದ ಸ್ಥಳ ಎಂದು ಹೇಳಬಹುದು. ಭೂಮಿಯೊಂದಿಗೆ ಸುತ್ತಲಿನ ಪರಿಸರ, ಗುಡ್ಡ, ಬೆಟ್ಟ, ದಿನ್ನೆ, ಕೊಳ್ಳ, ಕೆರೆ ಮುಂತಾದ ನೈಸರ್ಗಿಕ ಮತ್ತು ಭೌಗೋಳಿಕ ಆವರಣವೆಲ್ಲವೂ ಈ ನಿವೇಶನದ ಭಾಗಗಳೇ ಆಗುತ್ತವೆ. ಇದಕ್ಕೆ ಅಳಿದುಳಿದ ವಿಜಯನಗರ ಸಾಮ್ರಾಜ್ಯದ ಗುಡಿಗುಂಡಾರಗಳು, ಅಂತಹ ದೇಶಿ ಮಾದರಿಯೊಂದನ್ನು ಜೀವಂತ ವಾಗುಳಿಸಿಕೊಂಡ ಬೆಳೆಯುತ್ತಿರುವ ಕನ್ನಡ ವಿಶ್ವವಿದ್ಯಾಲಯದ ಆವರಣ ಒಳ್ಳೆ ನಿದರ್ಶನ. ವಾಸ್ತುಶಾಸ್ತ್ರದ ಪ್ರಕಾರ ಚತುರಾಶಾಸ್ತ್ರ ವಾಸ್ತು ಅಥವಾ ಸಮಕೋನ ದೀರ್ಘ, ಆಯತಾಕಾರವಾಗಿರುವ ನಿವೇಶನ ಒಳ್ಳೆಯದು. ಉತ್ತರ ದಕ್ಷಿಣದ ಉದ್ದಕ್ಕಿಂತಲೂ ಪೂರ್ವ ಪಶ್ಚಿಮದ ಉದ್ದ ಜಾಸ್ತಿಯಾಗಿರುವುದು, ಯಾವ ದಿಕ್ಕು ಮುಕ್ಕಾಗದಂತಿರುವುದು ಒಳ್ಳೆ ನಿವೇಶನ ಎನಿಸಿಕೊಳ್ಳುತ್ತದೆ. ವಾಸ್ತುಶಾಸ್ತ್ರ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಇಂತಿಂಥ ನಿವೇಶನಗಳು ಹೀಗೆಯೇ ಇರಬೇಕು ಎನ್ನುವ ಕಟ್ಟುಪಾಡುಗಳನ್ನು ಹೇಳುತ್ತದೆ. ಉದಾಹರಣೆಗೆ ಕಪ್ಪು ಅಥವಾ ಜೇಡಿ ಮಣ್ಣಿನ ನಿವೇಶನ ಒಳ್ಳೆಯದಲ್ಲ, ದೊಡ್ಡ ದೊಡ್ಡ ಮರದಡಿಯ ನಿವೇಶನ ಒಳ್ಳೆಯದಲ್ಲ ಎನ್ನುವುದು. ಇಂತಹ ಅವಕಾಶಗಳನ್ನು ಠಕ್ಕ ವಾಸ್ತು ಪಂಡಿತರು ತಮ್ಮ ಸ್ವಾರ್ಥಕ್ಕಾಗಿ ಏನೆಲ್ಲ ಮಾಡಿ ಹದಗೆಡಿಸಿಬಿಡುತ್ತಾರೆ. ಜನಮನದಲ್ಲಿ ಅದೊಂದು ಅಳಿಸದ ಅಂಧಶ್ರದ್ಧೆಯಾಗಿ ಸ್ಥಾಪಿತವಾಗುತ್ತದೆ.

ಆದರೆ ಸ್ವಲ್ಪ ವಿವೇಚನೆಯಿಂದ ನೋಡಿದಾಗ ಅಂಥಹ ನಿವೇಶನಗಳು ಬೇಡ ಎನ್ನುವುದರ ಹಿಂದಿನ ಅರ್ಥ ಗ್ರಹಿತವಾಗುತ್ತದೆ. ಬಿಳಿ, ಕೆಂಪು, ಹಳದಿ, ಮಿಶ್ರಬಣ್ಣ, ಕಪ್ಪು ಭೂಮಿತಳ ನಿವೇಶನ ಎಂದು ಗುರುತಿಸುವಾಗ ಅದು ಮಣ್ಣಿನ ವಾಸನೆ, ರುಚಿ, ರಚನೆಗೆ ಅನುಗುಣವಾಗಿ ವಿಭಾಗವಾಗುತ್ತದೆ. ಈ ಪ್ರಜ್ಞೆಯನ್ನು ಮಣ್ಣಿನೊಂದಿಗೆ ನಿಕಟ ಸಂಪರ್ಕ ಹೊಂದಿದ ಜನಪದರಲ್ಲಿ ಗುರುತಿಸುವುದು ಸುಲಭ.

ಕಪ್ಪು ಜೇಡಿಮಣ್ಣು ಗುಣದಲ್ಲಿ ತುಂಬ ಪೊಳ್ಳು. ಭಾರ ಹೊರುವ ಶಕ್ತಿ ಇರುವುದಿಲ್ಲ. ಹಾಗಂತ ಎರೆಭೂಮಿಯಲ್ಲಿ ಮನೆಕಟ್ಟಲೇಬಾರದು ಎಂದಲ್ಲ. ಎರೆನಾಡಿನ ಜನ ಮನೆಯಯಿಲ್ಲದೆ ಹಾಗೆ ಇರಬೇಕು ಎಂದು ಹೇಳಿದಂತಾಗುತ್ತದೆ. ಪಾಯ ಹಾಕುವಾಗ ಆಳವಾಗಿ ತೆಳಗೆ ಗಟ್ಟಿದರ ಹತ್ತುವವರೆಗೂ ಹದ್ದ ಬೇಕಾಗುತ್ತದೆ. ಅದು ಒಮ್ಮೊಮ್ಮೆ ಮನೆ ಕಟ್ಟಬೇಕೆನ್ನುವ ಅಳತೆಯ ಎರಡರಷ್ಟು ಆಳಕ್ಕೆ ಇಳಿಯುತ್ತದೆ. ಇಂತಹ ಅನೇಕ ಉದಾಹರಣೆಗಳು ಗ್ರಾಮೀಣ ಪ್ರದೇಶದಲ್ಲಿ ಸಿಗುತ್ತವೆ. ನನ್ನ ಊರಿನ ಹಿರಿಯರ ಒಂದು ಅನುಭವದೊಂದಿಗೆ ಇವನ್ನು ಇನ್ನಷ್ಟು ವಿವರಿಸಬಹುದು. ಬೆಣ್ಣೂರಿನಲ್ಲಿ (ಬಾಗಲಕೋಟೆ ಜಿಲ್ಲೆ) ಲಕ್ಷ್ಮ ವಿ

ಗುಡಿಯೊಂದಿದೆ. ನದಿತೀರಕ್ಕೆ ಹತ್ತಿರ ಇರುವ ಇದು ಕಪ್ಪು ಮಣ್ಣಿನ ಭೂಮಿಯಲ್ಲಿ ನಿರ್ಮಾಣವಾಗಿದೆ. ಸುಮಾರು ನೂರು ವರ್ಷ ಹಳೆಯುದಾದ ಇದನ್ನು ಕಟ್ಟಬೇಕಾದರೆ ಪಾಯುತೋಡುವಾಗ ಗಟ್ಟಿದರ ಹತ್ತುಲಿಲ್ಲವಂತೆ. ತೋಡುತ್ತ ತೋಡುತ್ತ ಗಟ್ಟಿ ಮೂಲವನ್ನು ಶೋಧಿಸಲು ಪ್ರಯತ್ನಿಸಿದಾಗ ಹದಿನಾರು ಹಲ್ಲಿನ ನಿಚ್ಚನಿಕೆಯುನ್ನು ಒಳಗಿಳಿಸುವಷ್ಟು ನೆಲ ತೋಡಿದರಂತೆ (ಅಂದರೆ ಸುಮಾರು ೩೦ ರಿಂದ ೩೫ ಅಡಿ) ಆಮೇಲೆ ಪಾಯ ಹಾಕಿ ಗುಡಿ ಕಟ್ಟಿದರಂತೆ ಇಂದಿಗೂ ಈ ಗುಡಿ ಚೆನ್ನಾಗಿಯೇ ಇದೆ.

ಇನ್ನೊಂದು ಅಂಶ, ದೊಡ್ಡ ದೊಡ್ಡ ಮರಗಳ ಕೆಳಗೆ ಮನೆ ಕಟ್ಟಬಾರದು ದೆವ್ವ, ಪಿಶಾಚಿಗಳಿರುತ್ತವೆ ಎನ್ನುವುದು. ಇಲ್ಲಿ ದೆವ್ವ ಪಿಶಾಚಿಗಳಿಗಿಂತ ಮುಖ್ಯವಾಗಿ ಮರ, ಗಾಳಿ, ಮಳೆಗೆ ಮುರಿದು ಮನೆ ಮೇಲೆ ಬೀಳುವ ಸಾಧ್ಯತೆಗಳಿರುತ್ತವೆ ಅಥವಾ ಬೇರುಗಳು ಮನೆಯ ಗೋಡೆ ಅಥವಾ ಅಡಿಪಾಯದಲ್ಲಿ ಬೆಳೆಯುವುದ ರಿಂದ ಮನೆಗೆ ತೊಂದರೆಯಾಗುತ್ತದೆ. ಮಳೆ ನಿಂತ ಮೇಲೆ ಗಿಡದಿಂದ ಬೀಳುವ ಮಳೆಹನಿಗಳು ಚಪ್ಪರದ ಮತ್ತು ಮಣ್ಣಿನ ಮಾಳಿಗೆ ಇರುವ ಛಾವಣಿಗಳನ್ನು ತೂತು ಕೊರೆಯುತ್ತವೆ. ಗಿಡದ ಗಡಚಿನಿಂದ ಸೂರ್ಯಕಿರಣಗಳ ಪ್ರವೇಶಕ್ಕೆ ತಡೆಯಾಗುತ್ತದೆ. ಸೂರ್ಯಕಿರಣದ ಹಿನ್ನೆಲೆಯಲ್ಲಿ ನಡೆಯುವ ಧೃತಿ ಸಂಶ್ಲೇಷಣೆ ಕ್ರಿಯೆಗೆ ಅಡ್ಡಿಯಾಗುತ್ತದೆ. ಆಗ ಧೃತಿ ಸಂಶ್ಲೇಷಣೆ ಕ್ರಿಯೆಯಿಂದ ಉಂಟಾಗುವ ಪ್ರಾಣವಾಯುವಿನ ಕೊರತೆ ಕಂಡುಬರುತ್ತದೆ. ಕೇವಲ ಇಂಗಾಲದ ಡೈ ಆಕ್ಸೈಡ್ ಇರುವ ಆ ವಾತಾವರಣ ಮನುಷ್ಯನ ಆರೋಗ್ಯದ ಮೇಲೆ ತೀವ್ರ ಪರಿಣಾಮ ವನ್ನುಂಟುಮಾಡುತ್ತದೆ. ಹೀಗಾಗಿ ಬದುಕಲು ಬೇಕಾದ ಪ್ರಾಣವಾಯುವಿನ ಕೊರತೆ ಬೀಳುತ್ತದೆನ್ನುವುದು ಬಹುಮುಖ್ಯ ಕಾರಣವೇ ಹೊರತು ಇನ್ನಾವುದೂ ಇಲ್ಲ.

ಗೋಡೆ – ಮೂಲೆಗಳು

ಮನೆಗೆ ಭದ್ರತೆಯ ದೃಷ್ಟಿಯಿಂದ ಗೋಡೆಗಳು ಪ್ರಧಾನ ಪಾತ್ರವಹಿಸುತ್ತವೆ. ಪ್ರಾದೇಶಿಕ ಹಿನ್ನೆಲೆಯಲ್ಲಿ ಅದರ ಗಾತ್ರ ಪ್ರಮಾಣಗಳು ನಿರ್ಧಾರವಾಗುತ್ತವೆ. ಸಾಮಾನ್ಯವಾಗಿ ಉತ್ತರ ಕರ್ನಾಟಕದ ಬಹುಪಾಲು ಮನೆಗಳ ಹೊರ ಗೋಡೆಗಳು ತುಂಬ ದಪ್ಪವಾಗಿರುತ್ತವೆ. ಸುಮಾರು ೨ ರಿಂದ ೩ ಅಡಿಯವರೆಗೂ ಈ ದಪ್ಪ ಕಾಣಿಸಿಕೊಳ್ಳುತ್ತದೆ. ಮಣ್ಣಿನ ಗೋಡೆಗಳಾಗಿದ್ದರಿಂದ ಇವನ್ನು ದಪ್ಪವಾಗಿಸಿದ ಕಾರಣಗಳನ್ನು ಹಳೆ ತಲೆಮಾರಿನ ಮಂದಿ ವಿವರಿಸುತ್ತಾರೆ. ಇನ್ನೊಂದು ಕಾರಣ ಈ ಪ್ರದೇಶದಲ್ಲಿ ಬಿಸಿಲಿನ ತಾಪ ಜಾಸ್ತಿಯಾಗಿರುವುದರಿಂದ ದಪ್ಪ ಗೋಡೆಗಳೂ (ಅವೂ ಮಣ್ಣಿನ ಗೋಡೆ) ಸೂರ್ಯ ಕಿರಣಗಳನ್ನು ಮನೆಯ ಒಳಕ್ಕೆ ಬೇಗ ಬಿಡುವುದಿಲ್ಲ. ಅದಕ್ಕಾಗಿಯೇ ಹಾಳು ಮಣ್ಣು ಮತ್ತು ಸಗಣಿರಾಡಿಯಿಂದ

ಹೊರಗೋಡೆಯನ್ನು ಸಾರಿಸುತ್ತಾರೆ. ಇಂಥಹ ಮನೆಗಳಿಗೆ ಚಿಕ್ಕ ಕಂಡಿಗಳಿರುತ್ತವೆ. ಅತಿದೊಡ್ಡ ಕಿಟಕಿ ಎಂದರೆ ಒಂದೂವರೆ ಅಡಿ ಎತ್ತರ ಒಂದು ಅಡಿ ಅಗಲ ವಾದದ್ದು. ಹಿತವಾದ ವಾತಾವರಣವನ್ನು ಮುದವಾಗಿ ನೀಡುವ ಉದ್ದೇಶ ಒಂದೆಡೆಯಾದರೆ ಛಾವಣಿಗೆ ಹಾಕುವ ದಪ್ಪದಪ್ಪ ತೊಲೆಗಳು, ಜಂತಿ, ಮೇಲು ಮುದ್ದೆಯು ಭಾರವನ್ನು ಹೊರುವ ಜವಾಬ್ದಾರಿ, ಈ ಗೋಡೆಗಿರುತ್ತದೆ. ಮೇಲು ಮುದ್ದೆಯು ಹಾಳುಮಣ್ಣಿನದಾಗಿದ್ದು ಇದೂ ಕೂಡ ಒಂದರಿಂದ ಒಂದೂವರೆ ಅಡಿ ದಪ್ಪವಾಗಿರುತ್ತದೆ. ಬೆಳಕಿನ ಅವಶ್ಯಕತೆಗನುಗುಣವಾಗಿ ಬೆಳಕಿಂಡಿ ಮತ್ತು ಹೊಗೆ ಗಿಂಡಿಗಳನ್ನು ಬಿಟ್ಟಿರುತ್ತಾರೆ. ಗೋಡೆಕಟ್ಟುವಿಕೆಯಲ್ಲಿ ಶಾಸ್ತ್ರೀಯವಾದ ಕ್ರಮ ಕ್ಕಿಂತಲೂ ರಕ್ಷಣೆ ಮತ್ತು ಸ್ಥಳೀಯ ವಾತಾವರಣದ ಛಾಪು ಜನಪದರಲ್ಲಿ ಎದ್ದುಕಾಣುತ್ತದೆ. ಈ ತರದ ದಪ್ಪಗೋಡೆಯ ಬಳಕೆ ಬಹಳ ಪ್ರಾಚೀನವಾದದ್ದು. ಲೋಥಲ್ ಮತ್ತು ಸಿಂಧು ನಾಗರಿಕತೆಯ ಅವಶೇಷಗಳಲ್ಲಿ ಸಿಕ್ಕ ಹೊರ ಗೋಡೆಗಳು ೧.೦೬ ರಿಂದ ೨.೦೪ ಮೀಟರ ದಪ್ಪವಾಗಿವೆ. ಎತ್ತರ ಕಡಿಮೆ. ಮನೆಯ ಸುತ್ತಲೂ, ಇನ್ನೂ ದಪ್ಪದಾದ ಸುತ್ತು ಗೋಡೆಗಳು ಇದ್ದುದ್ದು ತಿಳಿದು ಬರುತ್ತದೆ. ದುಂಡಾದ ಮೂಲೆಗಳುಳ್ಳ (Rounded angles) ಕಟ್ಟಡ ಇಲ್ಲಿನ ವಿಶೇಷಗಳಾಗಿವೆ.

ಆದರೆ ಗೋಡೆಯ ದಪ್ಪ ಕ್ರಮೇಣವಾಗಿ ಇಂದು ಕಡಿಮೆಯಾಗುತ್ತ ಬಂದಿದೆ. ಆಧುನಿಕ ತಂತ್ರಜ್ಞಾನ, ಹೊಸ ಉತ್ಪನ್ನಗಳು ಗೋಡೆಯ ಪ್ರಮಾಣವನ್ನು ಹೆಚ್ಚೆಂದರೆ ಎಂಟರಿಂದ ಒಂಭತ್ತು ಇಂಚಿನವರೆಗೆ ಸೀಮಿತಗೊಳಿಸಿವೆ. ಮಾಳಿಗೆ ಮೇಲಿನ ಗೋಡೆಗಳು, ಅಡ್ಡಗೋಡೆಗಳು ಒಂದು ಇಟ್ಟಂಗಿ ಗಾತ್ರದಲ್ಲಿಯೇ ಎದ್ದಿರುತ್ತವೆ. ಅಂದರೆ ಸುಮಾರು ಆರರಿಂದ ನಾಲ್ಕು ಅಂಗುಲಕ್ಕೆ ಸೀಮಿತ ಗೊಂಡಿವೆ. ಸಿಮೆಂಟಿನ ಕಲಬೆರಕೆ ಮತ್ತು ಪ್ರಖರವಾದ ಬಿಸಿಲು, ಮಳೆಗೆ ಜೀರ್ಣವಾಗುವ ಈ ಗೋಡೆಗಳು ಬಹಳ ಬೇಗನೆ ಬಿರುಕುಬಿಡುವ, ಕುಸಿದು ಬೀಳುವ ಕಾರ್ಯದಲ್ಲಿ ಮಗ್ನವಾಗಿಬಿಡುತ್ತವೆ.

ಇನ್ನು ಮೂಲೆಗಳು : ಗೋಡೆಯ ಎರಡು ತುದಿಗಳು ಸೇರುವ ಜಾಗಕ್ಕೆ ಮೂಲೆ ಎಂದು ಕರೆಯಲಾಗುತ್ತದೆ. ಮನೆಯಲ್ಲಿ ಮೂಲೆಯ ಪ್ರಾಮುಖ್ಯ ಬಹಳ. ಸರಳವಾಗಿ ಹೇಳಬೇಕೆಂದರೆ ಗೋಡೆಗಳೆರಡು ಸಂಧಿಸುವ ಜಾಗಗಳು ಸರಿಯಾಗಿರ ಬೇಕು. ತಿರಕಾಸಿಯಾಗಬಾರದು. ಇದರಿಂದ ಮನೆಯ ಅಂದ ಕೆಡುತ್ತದೆ. ಅಂಗಣ ಸರಿಯಾಗಿ ಹೊಂದುವುದಿಲ್ಲ. ಒಂದಳತೆಯ ಕಟ್ಟಿಗೆಗಳನ್ನು ಮೊದಲೆ ಕಡಿದು ಹಾಕಿರುವುದರಿಂದ ಪ್ರಮಾಣ ಹೆಚ್ಚು ಕಡಿಮೆಯಾಗುತ್ತದೆ ಎನ್ನುವ ಭಾವನೆ ಅಷ್ಟೇ. ಆದರೆ ಕೆಲವು ವಾಸ್ತುಶಾಸ್ತ್ರಕಾರರು ಅದರ ಸರಳ ಗುಣವನ್ನು ಸಂಕೀರ್ಣ ಗೊಳಿಸಿದ್ದು ಇಂದು ಎದ್ದುಕಾಣುತ್ತದೆ.

ಮೂಲೆಯನ್ನು 'ವಿದಿಕ್ಕು' ಎಂದು ಹೇಳುವ ಮೂಲಕ ಅವ್ಯಕ್ತ [illegible] ಗೊಡವೆಯನ್ನು ತಂದುಹಾಕಿದ್ದಾರೆ. ಇಂತಹ ವಿದಿಕ್ಕುಗಳು ನಿರ್ಮಿತವಾಗುವುದು ಕೆಲಸಗಾರನ ಅಜಾಗರೂಕತೆಯಿಂದ ಸರಿಯಾದ ಪ್ರಮಾಣ ಕೊರತೆಯಿಂದಾಗಿ ಎಂಬುದು ಸತ್ಯ. ಒಟ್ಟನಲ್ಲಿ ತೊಂಭತ್ತು ಕೋನವಿದ್ದು ಪ್ರತಿಮೂಲೆಯೂ ಮಟ್ಟವಿರಬೇಕು. ಇದಕ್ಕಾಗಿಯೇ ಗೋಡೆ ಕಟ್ಟುವವರ ಹತ್ತಿರ ಮೂಲೆ ಮಟ್ಟ, ದಾರ, ಗುಂಡುಗಳಿರುತ್ತವೆ. ಅನುಭವಿ ಕೆಲಸಗಾರ ಇಂತಹ ವಿದಿಕ್ಕುಗಳನ್ನು ಸಹಜವಾಗಿಯೇ ನಿವಾರಿಸಬಲ್ಲವನಾಗಿರುತ್ತಾನೆ. ಜನಪದ ಸಂಸ್ಕೃತಿಯಲ್ಲಿ ಮತ್ತು ಬುಡಕಟ್ಟು ಜನಾಂಗಗಳಲ್ಲಿ, ಲೋಥಲ್‌ದಂತಹ ಪ್ರಾಕ್ ಚಾರಿತ್ರಿಕ ಪಟ್ಟಣಗಳಲ್ಲಿ ಈ 'ವಿದಿಕ್ಕು'ಗಳ ಹಾವಳಿ ಕಂಡುಬರುವುದಿಲ್ಲ. ದುಂಡಾದ ಮೂಲೆಗಳುಳ್ಳ ಇಲ್ಲಿನ ಮನೆಗಳು ಗಾಳಿ ಬೆಳಕಿನ ಪ್ರಖರತೆ ಮತ್ತು ಪ್ರಕೃತಿಯ ವೈಪರೀತ್ಯಗಳನ್ನು ಸಮಾನವಾಗಿ ಎದುರಿಸುವ ಸಾಮರ್ಥ್ಯ ಪಡೆದಿವೆ. ಮೂಲೆ ಮನೆಗಳಂತೆ ಗಾಳಿಯನ್ನು ತಡೆಯುವುದಿಲ್ಲ, ಜಾರಿಸಿಬಿಡುತ್ತವೆ. ಸಮಭಾರ ಒಟ್ಟು ರಚನೆಯ ಹಿಂದಿನ ತರ್ಕವಾಗಿರುತ್ತದೆ.

ಬಾಗಿಲು– ಕಿಟಕಿಗಳು

ಪ್ರತಿ ಮನೆಗೂ ಬಾಗಿಲು ಪ್ರಮುಖವಾಗಿದ್ದು ಜನಪದರಲ್ಲಿ ಈ ಬಾಗಿಲು ಅವರ ಬದುಕಿನ ಅವಿಭಾಜ್ಯ ಅಂಗವಾಗಿ ಕಾರ್ಯನಿರ್ವಹಿಸುತ್ತದೆ. ಒಳ್ಳೆಯ – ಕೆಟ್ಟ ಎಲ್ಲ ಶುಭಾಶುಭಗಳಿಗೂ ಇದು ಮಾಧ್ಯಮವಾಗುತ್ತದೆ. ಅವರ ಮನೆಯಲ್ಲಿ ಏನೇ ಆಚರಣೆಗಳು ನಡೆದರೂ ಮನೆಯ ಭಾಗಗಳಲ್ಲಿ ಮೊದಲು ಶೃಂಗಾರ ಗೊಳ್ಳುವುದು ಬಾಗಿಲು. ಸಿಂಹದ್ವಾರದಿಂದ ಹಿಡಿದು ಉಳಿದೆಲ್ಲ ಬಾಗಿಲುಗಳು ಈ ಆಚರಣೆಯ ಭಾಗಗಳಾಗುತ್ತವೆ. ಒಂದು ವೇಳೆ ಒಳಬಾಗಿಲುಗಳು ಶೃಂಗಾರ ಗೊಳ್ಳದಿದ್ದರೂ ತಲೆಬಾಗಿಲಂತೂ ಶೃಂಗಾರಗೊಳ್ಳುತ್ತದೆ.

ಸಾಮಾನ್ಯವಾಗಿ ಹಳ್ಳಿಮನೆಗಳ ಸಿಂಹದ್ವಾರಗಳು ಪೂರ್ವ ಮತ್ತು ಉತ್ತರಕ್ಕೆ ಹೆಚ್ಚಾಗಿರುತ್ತವೆ. ತೀರ ಅನಿವಾರ್ಯಬಿದ್ದರೆ ಪಶ್ಚಿಮ ಮತ್ತು ದಕ್ಷಿಣಗಳು ಈ ಸ್ಥಾನವನ್ನು ಪಡೆದುಕೊಳ್ಳುತ್ತವೆ. ಏನೇ ಕಾರ್ಯ ಮಾಡಬೇಕಾದರೂ, 'ಗಳೆ' ನಿಲ್ಲಿಸಬೇಕಾದರೂ ತೊಲೆ ಹೇರಬೇಕಾದರೂ, ಮಲಗಬೇಕಾದರೂ ಉತ್ತರ ಮತ್ತು ಪೂರ್ವಗಳನ್ನು ಜನಪದರು ಪ್ರಮುಖವಾಗಿ ಪರಿಗಣಿಸುತ್ತಾರೆ. ಸೂರ್ಯ ಜನಪದ ಬದುಕಿನ ಕ್ರಿಯಾಶೀಲ ಗ್ರಹ. ಆತನ ಚಲನವಲನದಂತೆಯೆ ಜನಪದ ಬದುಕಿನ ಜೀವನಾವರ್ತನ ಮತ್ತು ವಾರ್ಷಿಕಾವರ್ತನದ ಕ್ರಿಯೆಗಳು ಜರಗುತ್ತವೆ.

ಜನಪದ ಮನೆಗಳ ಬಾಗಿಲುಗಳು ಮೂಲೆಗೆ ಹೊಂದಿ ಕೊಂಡಂತಿರುವುದು ಬಹಳ ಕಡಿಮೆ. ಮೂಲೆಯಿಂದ ಒಂದಡಿ ಮುಂದೆ ಇರುತ್ತವೆ. ಅಥವಾ

ಮಧ್ಯಗೋಡೆಗಳಿಗಿರುತ್ತವೆ. ದೊಡ್ಡ ಮನೆ ಇದ್ದರೆ ಮಧ್ಯಭಾಗಕ್ಕೆ ಬಾಗಿಲು ಇಟ್ಟಾಗ ಎರಡು ಪಕ್ಕದಲ್ಲಿ ಕಿಟಕಿ ಬಿಡುತ್ತಾರೆ. ಈ ಕಿಟಕಿ ಸುಮಾರು ಎರಡು ಫೂಟು ಎತ್ತರ ಒಂದುವರೆ ಫೂಟು ಅಗಲವಿರುತ್ತದೆ. ಅನುಕೂಲತೆ ಇಲ್ಲಿ ಎದ್ದು ಕಾಣುತ್ತದೆ. ವಾಸ್ತುಶಾಸ್ತ್ರ ನಿಯಮಗಳು ಇದೇ ಮಾದರಿಯನ್ನೇ ಸಮರ್ಥಿಸುತ್ತವೆ.

ಶಿಲ್ಪಶಾಸ್ತ್ರ ಗ್ರಂಥದ ಮೂವತ್ತೊಂಬತ್ತನೆಯ ಅಧ್ಯಾಯದ ಶ್ಲೋಕವು 'ಪೂರ್ವದ್ವಾರಂತು ಮಹೇಂದ್ರಂಪ್ರಶಸ್ತ ಸರ್ವಕಾಮದಂಭಲ್ಲಾಟ ಮುತ್ತರೆದ್ವಾರಂ' ಎಂದು ಹೇಳುತ್ತದೆ. ಅಂದರೆ ಪೂರ್ವ ಮತ್ತು ಉತ್ತರ ಒಳ್ಳೆಯದು, ದಕ್ಷಿಣ ಮತ್ತು ಪಶ್ಚಿಮ ಅಶುಭ ಎಂದು ಇದರ ಅರ್ಥ.

ಬಾಗಿಲಿನ ಅಳತೆ

ಜನಪದರ ಮನೆ ಬಾಗಿಲು ಹೆಚ್ಚೆಂದರೆ ಐದು ಅಡಿ ಇರುತ್ತವೆ. ಸಾಮಾನ್ಯವಾಗಿ ಚಿಕ್ಕ ಮನೆಗಳೇ ಅತಿ ಹೆಚ್ಚು ಕಂಡುಬರುವುದರಿಂದ ಮನೆಗಿಂತ ಬಾಗಿಲನ್ನೇ ಭಯಂಕರವಾಗಿಸುವುದಿಲ್ಲ. ಒಂದು ವೇಳೆ ಹಾಗೆ ಮಾಡಿದರೆ ವಿಪರೀತ ಗಾಳಿ ಮಳೆ ಪ್ರವೇಶದಿಂದ ವಾಸಮಾಡಲು ಸಾಧ್ಯವಾಗುವುದಿಲ್ಲ. ಕಾರಣ ಮನೆ ಬೆಚ್ಚಗಿರಲು ಈ ಕ್ರಮ ಅನುಸರಿಸುತ್ತಾರೆ.

ರೈಲು ಬೋಗಿಯಂತೆ ಒಂದೇ ರೇಖೆಯಲ್ಲಿ ಮೂರು ಬಾಗಿಲಿರುವುದನ್ನು ಜನಪದ ವಾಸ್ತು ನಿಷೇಧಿಸುತ್ತದೆ. ಅವೇ ಬೇರೆ ಬೇರೆ ಆಯಾಮದಲ್ಲಿದ್ದರೆ ಒಪ್ಪಿಕೊಳ್ಳುತ್ತದೆ. ನೇರ ಬಾಗಿಲಿದ್ದಾಗ ಮನೆಗೆ ಕಡಿಮೆ ರಕ್ಷಣೆ ಒದಗುತ್ತದೆ. ಇಡೀ ಮನೆ ತೆರೆದು ಕಾಣುತ್ತದೆ. ಕಾಳುಕಡಿ ರಕ್ಷಣೆ, ಮನೆ ಹೆಣ್ಣುಗಳ ರಕ್ಷಣೆ ಮತ್ತು ಮರ್ಯಾದೆ ಇದರ ಹಿಂದಿರುವ ಉದ್ದೇಶ ಅಷ್ಟೆ.

ಮಯಮತದಂತಹ ಹಲವು ಶಾಸ್ತ್ರ ಗ್ರಂಥಗಳು ಬಾಗಿಲಿನ ಶಾಸ್ತ್ರೀಯ ಕ್ರಮ ಕುರಿತು ಸಾಕಷ್ಟು ಮಾಹಿತಿಕೊಡುತ್ತವೆ. ಈ ಮಾಹಿತಿಗಳಲ್ಲಿ ಬದುಕಿಗೆ ಅನುಕೂಲವಾಗುವ ಜೀವಪರ ಕ್ರಮಕ್ಕಿಂತ ಶಾಸ್ತ್ರಬದ್ಧವಾದ ಕಟ್ಟುಕಟ್ಟಳೆಗಳೇ ಪ್ರಧಾನವಾದ, ಜೀವ ವಿರೋಧಿ ನೆಲೆಗಳನ್ನು, ಶ್ರೇಣಿಕೃತ ಸಮಾಜದ ಛಾಪುಗಳನ್ನು ಪುರಸ್ಕರಿಸುತ್ತವೆ. 'ಜಾತಿಶ್ರೇಣಿಯಂತೆಯೇ ಇಲ್ಲಿನ ಬಾಗಿಲುಗಳ ಶ್ರೇಣಿಯೂ ಬದಲಾಗುತ್ತ ಹೋಗುತ್ತದೆ. ಹಾಗೆಯೇ ಅಳತೆ, ಅಂದ, ಅಲಂಕಾರ ಮತ್ತು ವೈವಿಧ್ಯತೆ ಕೂಡ ಭಿನ್ನವಾಗುತ್ತದೆ.' (ಮಯಮತ ೧೯೮೫; ೨೮೪).

ಬಾಗಿಲಿನ ಅಳತೆ ಕಡಿಮೆ ಎಂದರೆ ಮೂರು ಗೇಣು ಅಗಲದಿಂದ ಏಳು ಗೇಣು ಎತ್ತರದವರೆಗೆ ಇರುತ್ತವೆ. ಅಂದರೆ ಮನೆಯ ವಿನ್ಯಾಸಕ್ಕೆ ತಕ್ಕಂತೆ

ಪ್ರಮಾಣವನ್ನು ಒಡಯಿಸುವುದುಂಟು. ಯಾವಾಗಲೂ ಬಾಗಿಲಿನ ಅಗಲ ಎತ್ತರದ ಅರ್ಧದಷ್ಟಿದ್ದರೆ ಮನೆಗೆ ಶೋಭೆಯೆನಿಸುತ್ತದೆ. ಈ ಕ್ರಮ ತಪ್ಪಿದರೆ ಮನೆಯ ಸೌಂದರ್ಯ ವಿಕಾರವೆನಿಸುತ್ತದೆ. ಲೋಥಲ್ ಸಂಸ್ಕೃತಿಯಲ್ಲಿ ಈ ಬಾಗಿಲಿನ ಅಳತೆ ೦.೯೨ ರಿಂದ ೧.೨೩ ಮೀಟರ್ ಅಗಲವಾಗಿದ್ದುದು ಮತ್ತು ಕಮಾನಿನಾಕರವಾಗಿದ್ದುದು ತಿಳಿಯುತ್ತದೆ. ಚೌಕ ಬಾಗಿಲಿಗಿಂತ ಈ ಕಮಾನು ಬಾಗಿಲು ಕಿಟಕಿಗಳು ಭಾರಹೊರುವಲ್ಲಿ ಗಟ್ಟಿಯಾಗಿರುತ್ತವೆ ಮತ್ತು ಅಪಾಯಕಾರಿಯಲ್ಲ. ದುಂಡಾದ ಹಣೆಪಟ್ಟಿಗಳು ತನ್ನ ಮೇಲಿನ ಭಾರವನ್ನು ಇಡಿಯಾಗಿ ಹೊರುತ್ತವೆ. ಚೌಕ ಬಾಗಿಲುಗಳು ಭಾರವನ್ನು ನೇರವಾಗಿ ಹೊರುವುದರಿಂದ ಮುರಿಯುವ ಸಾಧ್ಯತೆಗಳು ಬಹಳ.

ಹಣೆಪಟ್ಟಿ

ಇದಕ್ಕೆ ಉತ್ತರಾಣಿ ಎಂದೂ ಕರೆಯುವರು. ಬಾಗಿಲಿನ ಮೇಲ್ಭಾಗವೇ ಇದು. ಚಿಕ್ಕ ಚಿಕ್ಕ ನಕ್ಷೆಗಳಿಂದ ಕೂಡಿರುತ್ತದೆ. ಕನಿಷ್ಠ ಪಕ್ಷ ಏನೂ ಇರದಿದ್ದರು ಸಾಂಕೇತಿಕವಾಗಿ ಒಂದು ರೇಖೆಯಾದರೂ ಇಲ್ಲಿರುತ್ತದೆ. ಶಾಸ್ತ್ರ ಗ್ರಂಥಗಳು ದೇವರ ವಿಗ್ರಹಗಳು, ನಕ್ಷೆಗಳು ಇರದ ಉತ್ತರಾಣಿಗಳನ್ನು ನಿಷೇಧಿಸುತ್ತವೆ. ಇದು ತಳಿರುತೋರಣ, ಅರಿಶಿನ ಕುಂಕುಮಗಳಿಂದ ಅಲಂಕಾರಗೊಂಡಿರುತ್ತದೆ. ತಳಿರು ತೋರಣದ ವಾಸನೆಗೆ ಕ್ರಿಮಿ ಕೀಟಗಳು ಮನೆಯೊಳಗೆ ಪ್ರವೇಶಿಸುವುದಿಲ್ಲ. ಆಧುನಿಕ ಬದುಕಲ್ಲಿ ಈ ಹಣೆಪಟ್ಟಿ ಇಲ್ಲದ ಮನೆಗಳನ್ನು ಕಾಣಬಹುದು.

ಹೊಸ್ತಿಲು

ಜನಪದರಲ್ಲಿ ಹೊಸ್ತಿಲು ಮನೆಯ ಪ್ರಮುಖ ಅಂಗವಾಗಿದೆ. ಆಚರಣ ಬದ್ಧವಾದ ಕ್ರಿಯೆಗಳಿಗೆ ಅತ್ಯವಶ್ಯವಾದಂತೆ ಮನೆಯ ಭದ್ರತೆಯ ದೃಷ್ಟಿಯಿಂದಲೂ ಅಷ್ಟೇ ಪ್ರಮುಖವಾಗಿದೆ. ಇಡೀ ಮನೆಗೆ ಅಂದವನ್ನು ತಂದುಕೊಡುವುದರ ಜೊತೆಗೆ ಮನೆ ಗೋಡೆಯ ಭಾರ ಹೊರುವಲ್ಲಿ, ಬಾಗಿಲನ್ನು ಮೂರು ಕಡೆಯಿಂದ ಬಂಧಿಸಿ ಭದ್ರವಾಗಿ ಹಿಡಿದಿಟ್ಟುಕೊಳ್ಳುವಲ್ಲಿ ಹೊಸ್ತಿಲಿನ ಪಾತ್ರ ತುಂಬ ಮಹತ್ವದ್ದು. ಕೌಟುಂಬಿಕವಾಗಿ, ಧಾರ್ಮಿಕವಾಗಿ, ಸಾಮೂಹಿಕವಾಗಿ ಇದರ ಅಗತ್ಯತೆ ಬಹಳ. ಪ್ರತಿದಿನ ದೇವರಂತೆ ಪೂಜೆಗೊಳ್ಳುತ್ತದೆ. ಅರಿಶಿನ ಕುಂಕುಮ, ರಂಗೋಲಿಗಳಿಂದ ಅಂದವಾಗಿ ಕಾಣುತ್ತದೆ. ಇವುಗಳಲ್ಲಿನ ಆ್ಯಂಟಿ ಬಯೋಟಿಕ್ ಗುಣ ಕ್ರಿಮಿನಾಶಕ ಪ್ರವೃತ್ತಿಯನ್ನು ಹೊಂದಿರುತ್ತದೆ. ವಿಶೇಷವಾಗಿ ಜನಪದರು ಶಗಣಿರಾಡಿ ಮತ್ತು ಕೆಮ್ಮಣ್ಣಿನಿಂದ ಹೊಸ್ತಿಲು ಬಾಗಿಲು ಮತ್ತು ಇಡೀ ಮನೆಯನ್ನು ಸಾರಿಸುತ್ತಾರೆ. ಶಗಣಿರಾಡಿ ಮತ್ತು ಕೆಮ್ಮಣ್ಣು ರೋಗನಿವಾರಕ ಶಕ್ತಿಯನ್ನು ಪಡೆದಿವೆ. ದನಗಳಿಗೆ

ಚರ್ಮವ್ಯಾಧಿ ಬರದಂತೆ ಕಟ್ಟಿಗೆಗೆ ಸುರುಗು ಆಡದಂತೆ ನೀರು ಹತ್ತಿ ಲಡ್ಡುಹಾಯದಂತೆ ಇವು ತಡೆಯುತ್ತವೆ.

ಹೊಸ್ತಿಲು ಮನೆಯ ಸರಹದ್ದು ಇದ್ದಂತೆ. ಇದರಾಚೆ ಮತ್ತು ಈಚೆ ನಡೆಯುವ ಕ್ರಿಯೆಗಳು ಕುತೂಹಲಭರಿತವಾದಂತಹವು. ಹೊಸ ಸೊಸೆಯನ್ನು ಮನೆ ತುಂಬಿಸಿಕೊಳ್ಳುವಾಗ ಸೇರು ಅಕ್ಕಿಯನ್ನು ತುಂಬಿ ಅದರಲ್ಲಿ ಬೆಲ್ಲ ಇಟ್ಟು ಬಲಗಾಲಿನಿಂದ ಒದೆಸುತ್ತಾರೆ. ಇದು ಸೊಸೆಯಾದವಳು ಸಂತಾನ, ಸಮೃದ್ಧಿ, ಸಂತೋಷದ ಕೌಟುಂಬಿಕ ವಾತಾವರಣವನ್ನು ತಾನು ಕಾಲಿಟ್ಟ ಮನೆಗೆ ತರಲೆಂಬ ಮಹದಾಸೆಯನ್ನು ಹೊಂದಿದೆ. ಇದರಿಂದಲೇ 'ಕಾಲ್ಗುಣ' ಎಂಬ ಪರಿಕಲ್ಪನೆ ಜನಪದರಲ್ಲಿದೆ. ಅವಳು ಕಾಲಿಟ್ಟ ಘಳಿಗೆ ಚೆನ್ನಾಗಿಲ್ಲ ಎನ್ನುವ ಮಾತುಗಳು ಸೊಸೆ ಬಂದ ಮೇಲೆ ಆ ಮನೆಯ ವಾತಾವರಣದಲ್ಲಿ ನಡೆಯುವ ಘಟನೆಗಳ ಮೇಲೆ ನಿರ್ಧರಿತವಾಗುತ್ತದೆ. ಇದು ಕಾಕತಾಳೀಯ ಘಟನೆ ಮಾತ್ರ. ಆದರೆ ಅದು ಕೌಟುಂಬಿಕ ಬದುಕಲ್ಲಿ ನಿರ್ವಹಿಸುವ ಪಾತ್ರ ಮಹತ್ವದ್ದು.

ಹೊಸ್ತಿಲಿಗೆ ಮೊಳೆ ನಾಲು ಹೊಡೆಯುವುದು

ದುಷ್ಟ ಶಕ್ತಿಗಳು, ಸಿಡಿಲು – ಗುಡುಗುಗಳು, ಹುಳಹುಪ್ಪಟಿ ಮನೆಯೊಳಗೆ ಪ್ರವೇಶಮಾಡದಿರಲಿ ಎನ್ನುವ ತತ್ವ ಇದರ ಹಿಂದಿದೆ. ಆದರೆ ಅದು ಕೌಟುಂಬಿಕ ಚೌಕಟ್ಟಿನಲ್ಲಿ ಇನ್ನೊಂದು ಅರ್ಥವನ್ನು ಪಡೆದುಕೊಂಡಿದೆ. ಮನೆಯೊಳಗೆ ಕಾಲಿಟ್ಟ ಸೊಸೆ ತಿರುಗಿ ಮನೆಯಿಂದ ಹೊರಹೋಗದಿರಲಿ, ಕೌಟುಂಬಿಕ ವಾತಾವರಣವನ್ನು ಕಲುಷಿತಗೊಳಿಸದಿರಲಿ ಎನ್ನುವ ಉದ್ದೇಶದಿಂದ ಮೊಳೆ ಮತ್ತು ನಾಲು ಹೊಡೆಯುತ್ತಾರೆ. ಕುದುರೆ ನಾಲು ಬಡಿಯುವ ರೀತಿಯೇ ಇದನ್ನು ಸ್ಪಷ್ಟ ಪಡಿಸುತ್ತದೆ. (U) ಇದನ್ನು ಒಳಹೋಗುವ ರೀತಿಯಲ್ಲಿ (∩) ಬಡೆದಿರುತ್ತಾರೆ. ಹೆಜ್ಜೆ ಹಿಂದೆ ಕಿತ್ತದಿರಲಿ ಎನ್ನುವುದೇ ಇದರ ಉದ್ದೇಶವಾಗಿದೆ. 'ಹೆಜ್ಜಾಗ ಗೂಟಾ ಬಡಿರಿ' ಎನ್ನುವ ಬೈಗುಳ, ಇದೇ ಹಿನ್ನೆಲೆಯಲ್ಲೇ ಜನಪದರಲ್ಲಿ ಹುಟ್ಟಿಕೊಂಡಿದೆ. ಗಟ್ಟಿಯಾಗಿ ಮನೆಯಲ್ಲಿ ಕಾಲೂರಲಿ, ಸಂಪತ್ತು ನಿಲ್ಲಲಿ, ಮನೆ ಮರ್ಯಾದೆ ಹೊರಹೋಗದಿರಲಿ ಎನ್ನುವ ಗೂಢಾರ್ಥ ಇದರ ಹಿನ್ನೆಲೆಯಾಗಿದೆ. ಹೀಗೆ ಸಾಂಸ್ಕೃತಿಕವಾಗಿ ಹೊಸ್ತಿಲಿನ ಪಾತ್ರ ಅತ್ಯಂತ ಗುರುತರವಾಗಿ ಬೆಳೆದುಕೊಂಡು ಬಂದಿದೆ.

ಬೆಳಕಿನ ವ್ಯವಸ್ಥೆ

ಸಾಮಾನ್ಯವಾಗಿ ಕಿಟಕಿಗಿಂತ ಬೆಳಕಿಂಡಿ ಜನಪದ ವಾಸ್ತುವಿನಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಇಲ್ಲಿನ ಕಿಟಕಿ ಮತ್ತು ಬೆಳಕಿಂಡಿಗಳು ವೈಜ್ಞಾನಿಕ ಉದ್ದೇಶವುಳ್ಳವುಗಳೇ ಆಗಿವೆ. ಇಂದಿನ ಎಷ್ಟೋ ಆಧುನಿಕ ಕಟ್ಟಡಗಳಿಗೆ ಇವು

ಮಾದರಿಗಳೂ ಆಗಿವೆ. ಮೊಹೆಂಜೋದಾರೋದಲ್ಲಿನ ಬೆಳಕಿನ ವ್ಯವಸ್ಥೆ ತುಂಬ ಅಪರೂಪವಾದದ್ದು. ಅಲ್ಲಿ ಬೆಳಕಿಗಾಗಿ ಹಾಲುಗಲ್ಲಿನ ಚಿಕ್ಕ ಚಿಕ್ಕ ಜಾಲಂದರಗಳು ಹಾಗೂ ಸುಟ್ಟ ಜೇಡಿಯ ತ್ರಿಕೋಣಾಕಾರದ ಬಿಲ್ಲೆಗಳೂ (Cakes) ಬಳಕೆಯಲ್ಲಿದ್ದುದು ತಿಳಿಯುತ್ತದೆ. ಈ ಮಾದರಿಯ ಬೆಳಕಿನ ವ್ಯವಸ್ಥೆ ನಮ್ಮ ಜನಪದ ಬದುಕಲ್ಲೂ ಕಾಣಸಿಗುತ್ತದೆ.

ಕಿಟಕಿಗಳು ಬಹಳ ಚಿಕ್ಕದಾಗಿ ಅಂದರೆ ೬ ಅಂಗುಲ ಇರುತ್ತವೆ. ಮನೆಯ ಗಾತ್ರದ ಮೇಲೆ ಇದು ಬದಲಾಗುತ್ತ ಹೋಗುತ್ತದೆ. ಛಾವಣಿಯಿಂದ ಸುಮಾರು ಎರಡು ಅಡಿ ಕೆಳಗೆ ಮಾತ್ರ ಇರುತ್ತವೆ. ಈಗಿನ ಮನೆಗಳಂತೆ ವಿಶಾಲವಾದ ಮತ್ತು ಮಧ್ಯಗೋಡೆಗೆ ಬರುವ ಕಿಟಕಿಗಳಿರುವುದಿಲ್ಲ.

ಇನ್ನು ಬೆಳಕಿಂಡಿಗಳು ಮೆಲ್ಛಾವಣಿಯಲ್ಲಿರುತ್ತದೆ. ಇದು ತುಂಬ ವೈಜ್ಞಾನಿಕ ರೀತಿಯದ್ದಾಗಿರುತ್ತದೆ. ರಭಸವಾಗಿ ಬರುವ ಗಾಳಿ, ಮಳೆ, ಬೆಳಕನ್ನು ತಡೆ ಹಿಡಿದು, ಬೆಳಕಾಗುವಷ್ಟು ಮಾತ್ರ ಒಳಗೆ ಬಿಡುವ ವ್ಯವಸ್ಥೆ ಇಲ್ಲಿರುತ್ತದೆ. ಏಕೆಂದರೆ ಮೇಲ್ಮುಖ ಚಿಕ್ಕದಾಗಿದ್ದು, ಒಳಸರಿದಂತೆ ಅಗಲವಾಗುತ್ತ ಹೋಗುತ್ತದೆ. ಇದನ್ನು ಮಣ್ಣಿನ ಹರವಿ, ಗಡಿಗಿ, ಬಿಂದಿಗಿಯ ಕಂಠದಿಂದ ಸಜ್ಜುಗೊಳಿಸುತ್ತಾರೆ. ಕ್ರಮವಾಗಿ ಅಗಲವಾದ ಹರವಿಯ ಬಾಯಿ ನಂತರ ಗಡಿಗಿಯ ಬಾಯಿ ಕೊನೆಗೆ ತೀರ ಚಿಕ್ಕವ್ಯಾಸವುಳ್ಳ (೮ ಇಂಚು) ಬಿಂದಿಗೆಯ ಬಾಯಿಂದ ಪೇರಿಸುತ್ತಾರೆ. ಬರುವ ಗಾಳಿಯ ರಭಸವನ್ನು ಈ ಚಿಕ್ಕಬಾಯಿಯ ಬಿಂದಿಗಿಯ ಚಿಕ್ಕ ಕಂಠ ತಡೆಹಿಡಿದು ತನ್ನ ಶಕ್ತಿಗೆ ಸಾಧ್ಯವಿರುವಷ್ಟನ್ನು ಮಾತ್ರ ಮನೆಯೊಳಗೆ ಸೇರಿಸುತ್ತದೆ. ಮನೆಯೊಳಗೆ ಹೋದಂತೆ ಅದು ಹರಡುತ್ತಾ ಹೋಗುತ್ತದೆ. ಅಂದರೆ ಸಿನೆಮಾ ಪರದೆಯ ಮೇಲೆ ಬಿಡುವ ಬೆಳಕಿನೋಪಾದಿಯಲ್ಲಿ ಇದರ ವ್ಯವಸ್ಥೆ ಇರುತ್ತದೆ. ಇದರಿಂದ ಮನೆ ಆಯಾ ಋತುಮಾನಕ್ಕೆ ತಕ್ಕಂತೆ ವಾಸಯೋಗ್ಯವಾಗಿಳಿಯುತ್ತದೆ.

ಇನ್ನು ಹೊಗೆ ಗಿಂಡಿಗಳು

ಬೆಳಕಿಗಿಂತ ಪ್ರಮುಖವಾಗಿ ಒಳ್ಳೆಯ ಕಾರ್ಬನ್‌ಅನ್ನು ಮನೆಯಿಂದ ಹೊರಕ್ಕೆ ಹಾಕುವ ಕೆಲಸ ಮಾಡುತ್ತವೆ. ಇದರಿಂದ ಮನೆ ತುಂಬ ಹೊಗೆ ತುಂಬಿ ಮನೆ ಕಪ್ಪಾಗುವ, ಮನೆಯವರಿಗೆ ಹೊಗೆಯಿಂದ ತೊಂದರೆಯಾಗುವುದು ತಪ್ಪುತ್ತದೆ. ಒಲೆಗಳ ಸಂಖ್ಯೆಯ ಮೇಲೆ ಈ ಹೊಗೆ ಕಮಾನುಗಳು ರಚನೆಗೊಳ್ಳುತ್ತವೆ. ಒಲೆಯ ಮುಖ ಪಶ್ಚಿಮಾಭಿಮುಖವೂ ಅಡಿಗೆ ಮಾಡುವವರ ಮುಖ ಪೂರ್ವಾಭಿಮುಖವೂ ಆಗಿರುವಂತೆ ಅಥವಾ ದಕ್ಷಿಣಕ್ಕೆ ಒಲೆಯಿದ್ದು ಉತ್ತರಕ್ಕೆ ಮುಖಮಾಡಿ ಅಡುಗೆ ಮಾಡುವಂತೆ ಒಲೆಯ ರಚನೆಯಿರುತ್ತದೆ. ಈ ಕ್ರಮವನ್ನು ಶಾಸ್ತ್ರ ಗ್ರಂಥಗಳೂ ಅಳವಡಿಸಿಕೊಂಡಿವೆ.

ಸಾಮಾನ್ಯವಾಗಿ ನೆಲಕ್ಕೆ ಹೊಂದಿಕೊಂಡಂತೆ ಒಲೆಯಿರುವುದು ಜಾಸ್ತಿ. ಉಳಿದ ಮನೆಯ ನೆಲಮಟ್ಟದಿಂದ ಅಡುಗೆ ಜಾಗವನ್ನು ಪ್ರತ್ಯೇಕಿಸುವ ಸಲುವಾಗಿ ಮನೆಯ ವಿಸ್ತಾರಕ್ಕನುಗುಣವಾಗಿ ಒಂದರಿಂದ ಒಂದೂವರೆ ಅಡಿ ತಗ್ಗಾಗಿ ನೆಲಮಟ್ಟದಲ್ಲಿ ಈ ಒಲೆ ರಚನೆಯನ್ನು ಮಾಡಿಸುತ್ತಾರೆ. ಇದಕ್ಕೆ 'ಒಲಿತೆಗ್ಗು' ಎಂದು ಕರೆಯುತ್ತಾರೆ. ಆಧುನಿಕ ಮನೆಗಳಲ್ಲಿ ನೆಲಮಟ್ಟದಿಂದ ಒಂದರಿಂದ ಒಂದೂವರೆ ಮೀಟರ್ ಎತ್ತರವಾಗಿದ್ದುದು ಕಂಡುಬರುತ್ತದೆ. ಇಂತು ಅಡುಗೆ ಮಾಡುವುದಕ್ಕೆ ಇಂಥ ಒಲೆ ಸಹಕಾರಿ. ಮಡಿಮೈಲಿಗೆಯನ್ನು ನಿಯಂತ್ರಿಸುವ ಸಲುವಾಗಿ ಈ ಅಗ್ನಿ ಇರುವ ಭಾಗವನ್ನು ಬೇರ್ಪಡಿಸುತ್ತಾರೆ. ಅಂದರೆ ಪ್ರಧಾನ ಮನೆಗೂ ಅಡುಗೆ ಮನೆಗೂ ಅಂತರವನ್ನು ಕಲ್ಪಿಸುವ ರೀತಿ ಇದು. ಒಲೆಯ ಮೇಲ್ಭಾಗದಲ್ಲಿಯೇ ಅಡಿಗೆ ಸಾಮಾನು ಇಡಲು ಬರುವಂತೆ ಅಟ್ಟ ಮಾಡಿರುತ್ತಾರೆ. ಹಾಗೆ ಒಲೆಗೆ ಸಮೀಪದಂತೆ ಬಲಭಾಗದಲ್ಲಿ ನೀರಿನ ಮೂಲವಿರುತ್ತದೆ. ಅಗ್ನಿ ಮತ್ತು ನೀರು ಜನಪದ ಬದುಕಲ್ಲಿ ತುಂಬ ಸಾಮರಸ್ಯವನ್ನು ಪೂಜ್ಯನೀಯ ಸ್ಥಾನವನ್ನು ಪಡೆದುಕೊಂಡು ಬಂದಿವೆ. ಅವು ಎರಡು ತಮ್ಮ ವ್ಯಗ್ರಗುಣದಿಂದ ಹೊರತಾಗಿ ಜೀವೋತ್ಪತ್ತಿಯ ಮತ್ತು ಜೀವರಕ್ಷಕ ಕ್ರಿಯೆಯ ಜಾಗೃತ ಪರಿಕರಗಳಾಗಿ ಅನ್ಯೋನ್ಯ ನೆಲೆಯಲ್ಲಿ ಬಳಕೆಯಾಗಿವೆ.

ಈ ತರದ ಒಲೆಯ ವ್ಯವಸ್ಥೆ ಲೋಥಲ್ ಮತ್ತು ಸಿಂಧೂ ನಾಗರಿಕತೆಗಳಲ್ಲಿ ದೊರಕಿವೆ. ಒಲೆ ಇಲ್ಲಿ ಸಾಮಾನ್ಯವಾಗಿ ಆಗ್ನೇಯಕ್ಕೆ ಬರುತ್ತದೆ. ೧.೧೨ ಮೀಟರ್ ವ್ಯಾಸದ ೦.೯೨ ಮೀಟರ್ ಎತ್ತರದ ರೊಟ್ಟಿಯ ಒಲೆಯೊಂದು ಲೋಥಲ್ ನಿವೇಶನದಲ್ಲಿ ದೊರೆತಿವೆ (Brea-Oven). ಇದು ಮಧ್ಯಪ್ರಾಚ್ಯ ಹಾಗೂ ಭಾರತ ದೇಶಗಳಲ್ಲಿಯ ರೊಟ್ಟಿ ಬೇಯಿಸುವ ಒಲೆಗಳ ಪ್ರಾಚೀನ ಮಾದರಿಯನ್ನು ಗ್ರಹಿಕೆಗೆ ತರುತ್ತವೆಂದು ವಿದ್ವಾಂಸರು ಗುರುತಿಸುತ್ತಾರೆ. ಮುಖ್ಯ ಮನೆಯಿಂದ ಒಲೆಯನ್ನು ಬೇರ್ಪಡಿಸುವ ಉದಾಹರಣೆಗಳು ಇಲ್ಲಿ ಬೇಕಾದಷ್ಟು ದೊರೆತಿವೆ. ತಗ್ಗಾದ ನೆಲ ಅಥವಾ ಗೋಡೆಗಳಲ್ಲಿ ಒಲೆ ನಿರ್ಮಿಸುತ್ತಿದುದು ಇಲ್ಲಿನ ವಿಶೇಷ. ಅದು ಆ ಸಂದರ್ಭದಲ್ಲಿ ಬದುಕಿದ ಲೋಥಲ್ ಸಂಸ್ಕೃತಿಯ 'ರಘುಕಾರ' ನಿವಾಸಿ ಸಂಸ್ಕೃತಿಯ ವಿಶೇಷವಾಗಿ ಈ ಒಲೆಯ ಮಾದರಿಗಳು ಕಂಡುಬರುತ್ತವೆ.

ಈ ತರದ ರಚನೆಗೆ ಶಾಸ್ತ್ರ ಬದ್ಧತೆಗಿಂತ ಹೆಚ್ಚಾಗಿ ಸುರಕ್ಷತಾ ಕ್ರಮವೇ ಪ್ರಮಾಣವಾಗುತ್ತದೆ. ಭಾರತದಲ್ಲಿ ಈಶಾನ್ಯ ಮತ್ತು ನೈರುತ್ಯ ಮಾನ್ಸೂನ್‌ಗಳ ಹಾವಳಿ ಬಹಳವಾದದ್ದು. ಈ ಮಾನ್ಸೂನ್‌ಗಳ ನೇರ ಬೀಸಿನಿಂದ ಒಲೆಯ ಬೆಂಕಿ ಮನೆಯೊಳಗಡೆ ಹರಡಿ ಇಡೀ ಮನೆಗೆ ಅಪಾಯ ತರುವ ಸಾಧ್ಯತೆಗಳು ಬಹಳ. ಈ ಕಾರಣಕ್ಕಾಗಿ ಒಲೆಯನ್ನು ಮಾನ್ಸೂನ್‌ಗಳಿಂದ ಸುರಕ್ಷಿತ ಎನಿಸುವ ಅಗ್ನಿ

ಮೂಲೆಗೆ ಸೀಮಿತಗೊಳಿಸಲಾಯಿತು ಮತ್ತು ಅದನ್ನು ಇನ್ನೂ ಸುರಕ್ಷಿತ ಎನ್ನುವಂತೆ ತಗ್ಗಾದ ಅಂದರೆ ಇಡೀ ಮನೆಯಿಂದ ಬೇರ್ಪಡಿಸುವ ಹಂತಕ್ಕೆ ಸೀಮಿತಮಾಡ ಲಾಗಿದೆ. ಒಂದು ವೇಳೆ ಅಪಾಯ ಸಂಭವಿಸಿದಾಗ ಬೆಂಕಿ ನಿಗದಿತ ತಗ್ಗು ಪ್ರದೇಶದಿಂದ ಮೇಲೆ ಬರುವುದರೊಳಗೆ ಸುರಕ್ಷಿತ ಕ್ರಮ ಅನುಸರಿಸಿ ಬೆಂಕಿಯನ್ನು ಹತೋಟಿಗೆ ತರುವ ಅನುಕೂಲಕರ ಕ್ರಮ ಈ ರೀತಿಯ ರಚನೆಯ ಹಿಂದಿನ ತಂತ್ರವಷ್ಟೆ ಹೊರತು ಠಕ್ಕ ವಾಸ್ತುಶಾಸ್ತ್ರಜ್ಞರು ಭಯಪಡಿಸುವ ರೀತಿಯಲ್ಲಿ ಅಲ್ಲ. ಒಟ್ಟನಲ್ಲಿ ಈ ಬುಡಕಟ್ಟು ಮತ್ತು ಜನಪದ ವಾಸ್ತು ರಚನಾಕ್ರಮದಲ್ಲಿ ಸುರಕ್ಷತೆ ಮತ್ತು ಆರೋಗ್ಯ ರಕ್ಷಣೆ, ಎದ್ದು ಕಾಣುತ್ತದೆ. ಪ್ರಕೃತಿಯ ವಿಚಿತ್ರ ವಿಕೋಪ ಗಳನ್ನು ಎದುರಿಸಿ ಸಂರಕ್ಷಣೆ ನೀಡುವ, ಸ್ಥಳೀಯ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಳ್ಳುವ ತನ್ನದೇ ಆದ ವಿಶಿಷ್ಟ ತಂತ್ರಜ್ಞಾನವನ್ನು ಬೆಳಸಿ ಕೊಂಡು ಬಂದ ಈ ವಾಸ್ತು ಪದ್ಧತಿ ಎಲ್ಲ ಶಾಸ್ತ್ರೀಯ ಸಿದ್ಧಾಂತಗಳಿಗೂ ಜನನಿ ಯಾಗಿದೆ. ಇದು ಇಂದು ನಿನ್ನೆಯದಲ್ಲ. ಶಾಸ್ತ್ರ ಸಿದ್ಧಾಂತಗಳು ರೂಪಗೊಳ್ಳುವ ಮೊದಲೇ ಹುಟ್ಟಿ ಬೆಳೆದು ಬಂದದ್ದು, ನಿಸರ್ಗ ಸಹಜವಾದದ್ದು. ಲೋಥಲ್ ಸಂಸ್ಕೃತಿಯ ಝುಕಾರ್ ನಿವಾಸಿಗಳು ಬಳಸಿಕೊಂಡ ಸಾದಾಗೋಡೆ ಮತ್ತು ಕಡಿಮೆ ಎತ್ತರ, ಚಾಪೆ ಗೋಡೆ, ನೆರಕಿ, ಹುಲ್ಲು – ತೊಪ್ಪಲುಗಳ ಮೇಲ್ಛಾವಣೆ ಮರದ ತೊಲೆ (ತೀರುಗಳು) ಗಳ ಬಳಕೆ, ಚಾಚುಕಮಾನು (Corbelled arch) ಕಮಾನು–ಛಾವಣಿ(Vaulted roof) ಇವೆಲ್ಲ ಸಹಜ ಮತ್ತು ಸರಳ, ಅವಶ್ಯಕತೆ, ಸಂರಕ್ಷಣೆ, ಬಾಳಿಕೆಯ ನೆಲೆಯಲ್ಲಿ ನಿಸರ್ಗಕ್ಕನುಗುಣವಾಗಿ ಹುಟ್ಟಿದ ವಾಸ್ತು ಪ್ರಜ್ಞೆಗಳಾಗಿವೆ. ಇಂದು ಆಧುನೀಕರಣ ಸಂದರ್ಭದಲ್ಲಿ ಇದೇ ತರದ ಹಗುರ ವಸ್ತುಗಳನ್ನು ಬಳಸಿ ಕಡಿಮೆ ಖರ್ಚಿನಲ್ಲಿ ಮನೆಕಟ್ಟಿಸುವ ಪರಿಕ್ರಮ ಬೆಳೆಯುತ್ತಿದೆ. ಹಾಗಂತ ಕಳಪೆ ಕಾಮಗಾರಿ, ಅಗ್ಗದ ಮಾಲು ಎನ್ನುವ ಮಾತು ಸಲ್ಲದು.

ಹಳ್ಳಿಗಳ ವಸತಿ ಸಮಸ್ಯೆ ನೀಗಿಸಲು ಸರಕಾರ ಕೈಗೊಂಡ ಜನತಾಗೃಹ, ಇಂದಿರಾ ಅವಾಸ್, ಆಶ್ರಯ ಮನೆಗಳು ದೇಶಾದ್ಯಂತ ಜನಪ್ರಿಯ. ಆದರೆ ಕಟ್ಟಡದ ಸಂದರ್ಭದಲ್ಲಿ ಗುತ್ತಿಗೆದಾರರು ಮಾಡುವ ಕಳಪೆ ಕಮಗಾರಿ ಇಂಥ ಮನೆಗಳ ಮೇಲಿನ ವಿಶ್ವಾಸವನ್ನೇ ಕಡಿದುಹಾಕಿದೆ. ಇಂತಹ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿ ಅಗ್ಗದ ಖರ್ಚಿನಲ್ಲಿ ಒಗ್ಗುವ ಮನೆ ನಿರ್ಮಿಸಲು ಪ್ರಯತ್ನಿಸುತ್ತಿ ರುವ ವಾಸ್ತುತಜ್ಞರಲ್ಲಿ ನವದೆಹಲಿಯ ದೋಷಿ, ಕೇರಳದ ಲಾರಿ ಬೇಕರ್, ಕರ್ನಾಟಕದ ಕಾವಡೆ ಸೋದರರು ಪ್ರಮುಖರು.

ಇವರಿಗಿಂತ ಮೊದಲು ಬಾಪೂಜಿ ಭಾರತೀಯ ಅರ್ಥವ್ಯವಸ್ಥೆಯ ಬಗ್ಗೆ ಮ[illegible]ಗ ಸ್ಥಳೀಯ ಸಾಮಗ್ರಿಯಿಂದ ಮನೆಕಟ್ಟಿಕೊಳ್ಳಲು ಹೇಳಿ ಅದನ್ನು

ಸಬರಮತಿ ಆಶ್ರಮದಲ್ಲಿ ಜಾರಿಗೆ ತಂದರು. ಸಿಮೆಂಟ್ - ಉಕ್ಕು, ಗಾಜು, ಬಣ್ಣಗಳಿಂದ ಮಾತ್ರ ವಾಸಯೋಗ್ಯ ಮನೆಕಟ್ಟಲು ಸಾಧ್ಯ ಎನ್ನುವ ಬ್ರಿಟಿಷ್ ಪರಿಕಲ್ಪನೆ ಭಾರತಕ್ಕೆ ಹೊಂದದು. ಯಾಕೆಂದರೆ ವಿಚಿತ್ರ ವಿನ್ಯಾಸಗಳು, ವಿನ್ಯಾಸ ದೋಷದಿಂದ ಸ್ಥಳ ವ್ಯರ್ಥ, ಅಗತ್ಯ ಮೀರಿ ಸಾಮಗ್ರಿ ವ್ಯಯ, ಅಧಿಕ ವೆಚ್ಚ, ವಿಚಿತ್ರ ನಂಬಿಕೆಗಳು ಮುಂತಾದ ಅನಾನುಕೂಲಗಳೇ ಎದ್ದು ಕಾಣತೊಡಗುತ್ತವೆ. ಸ್ಥಳೀಯ ಸಾಮಗ್ರಿ ದೃಷ್ಟಿಯಲ್ಲಿಟ್ಟ ರಚನಾಕ್ರಮಗಳಿಂದ ತಾಳಿಕೆ ಬಾಳಿಕೆ ಉಳಿತಾಯ ಎರಡೂ ಸಾಧ್ಯವಾಗುತ್ತವೆ.

ಕಟ್ಟಡದ ವಸ್ತುಗಳ ಬೆಲೆ ಏರುತ್ತಿದ್ದರೂ, ಬೇಕಾದಷ್ಟು ಪರ್ಯಾಯ ಸರಕುಗಳ ಹುಟ್ಟುವಳಿ ನಡೆಯುತ್ತಿದೆ. ಸುಟ್ಟ ಇಟ್ಟಿಗೆ ಬದಲು ಹಾಲೋಬ್ಲಾಕ್ ಬಂದಿದೆ. ಗೋಡೆ, ತಾರಸಿ, ಬಾಗಿಲು, ಕಿಟಕಿಗಳಂತ ಪೂರ್ವಸಿದ್ಧತಾ ರಚನೆಗಳು ಹುಟ್ಟಿಕೊಂಡಿವೆ. ಆರ್‌ಸಿಸಿಗಿಂತ ಗಟ್ಟಿಯಾದ ಮತ್ತು ಬಾಳಿಕೆಯುಳ್ಳ ಫ್ಲಶ್ ತಾರಸಿ ಬಂದಿದೆ. ಹೀಗೆ ಕಟ್ಟಡ ಸಾಮಗ್ರಿಯಿಂದ ಹಿಡಿದು ವಿನ್ಯಾಸ ತಂತ್ರದಲ್ಲೂ ಮಿತವ್ಯಯ, ಆಕರ್ಷಕ, ಸಮರ್ಥಗುಣಗಳನ್ನೊಳಗೊಂಡ ಆಧುನಿಕ ಸೌಲಭ್ಯವು ಸರಳ ಸುಂದರ ಮತ್ತು ಹವಾಗುಣಕ್ಕೊಪ್ಪುವ ಮನೆಗಳ ನಿರ್ಮಾಣ ಇಂದು ಹೆಚ್ಚು ಸಾಧ್ಯವಾಗುತ್ತಿದೆ. ಆದರೆ ಇದರಲ್ಲಿ ಒಂದು ಅಪಾಯ ಕಾಣುತ್ತದೆ. ಇಂಥ ಮನೆಗಳು ವಾಸಯೋಗ್ಯ ಅನಿಸದೆ ಅಂತಸ್ತಿನ ಕುರುಹುಗಳಾಗಿ ಮುಂದುವರಿದ ಜನರ ಆಡಂಬರದ ಸೋಗುಲಾಡಿತನಗಳಾಗಿ, ಪಾಶ್ಚಾತ್ಯರು ಬಂದು ವಾಸಿಸುವ ಪ್ರೀತಿಯ ಸ್ಥಳಗಳಾಗಿ ಮೈ ಎತ್ತುತ್ತಿವೆ. ಜನಸಾಮಾನ್ಯರೆಲ್ಲರೂ ಇಂಥ ಹೊಸ ತನದ ಅಂಶಗಳನ್ನು ಮೈಗೂಡಿಸಿಕೊಳ್ಳಬೇಕಾದರೆ ಅವು ಅಂತಸ್ತಿನ, ಆಡಂಬರದ ನೆಲೆಗಳಿಂದ ಕೆಳಗಿಳಿದು ಬರಬೇಕು. ವಾಸ್ತುತಜ್ಞರು ಅವರಲ್ಲಿ ವಿಶ್ವಾಸ ಹುಟ್ಟಿಸುವಂತೆ ಮಾಡಬೇಕು ಅಂದಾಗ ಪರಂಪರೆಯ ಛಾಪಿನಲ್ಲಿ ಆಧುನಿಕತೆಯ ಅವಶ್ಯಕತೆಗಳನ್ನು ಅಂತಃಸತ್ವಗಳನ್ನು ಮೈಗೂಡಿಸಿಕೊಳ್ಳುವ ಮೂಲಕ ಸಶಕ್ತ ದೇಶೀಯ ಮಾದರಿಯ ವಿನ್ಯಾಸವೊಂದನ್ನು ಉಳಿಸಿ ಬೆಳಸಿದಂತಾಗುತ್ತದೆ.

***

ಕರಗ ಆಚರಣೆ : ಒಂದು ವಿಶ್ಲೇಷಣೆ

ಡಾ|| ಕೆ. ಕೃಷ್ಣಪ್ಪ

ಕರಗ ಒಂದು ಜಾನಪದ ಕುಣಿತ ಹೇಗೋ ಹಾಗೆಯೇ ಒಂದು ಜನಾಂಗದ ಸಾಂಸ್ಕೃತಿಕ ಮತ್ತು ಧಾರ್ಮಿಕ ಆಚರಣೆಯೂ ಹೌದು. ಕರಗ ಎಂದರೆ ಅದೊಂದು ಶೃಂಗರಿಸಿದ ಕಳಶ. ಈ ಕಲಶವನ್ನು ತಲೆಯ ಮೇಲಿಟ್ಟುಕೊಂಡು, ತಮಟೆ, ಢೋಲು ಮುಂತಾದ ಚರ್ಮ ವಾದ್ಯಗಳ ತಾಳಕ್ಕನುಗುಣವಾಗಿ ಲಯಬದ್ಧವಾಗಿ ಹೆಜ್ಜೆಹಾಕುತ್ತಾ ಕುಣಿಯುವ ಆಟವಾಗಿದೆ. ಈ ಆಟದಲ್ಲಿ ಅನೇಕ ರೀತಿಯ ಕರಗದ ಆಟಗಳನ್ನು ನೋಡಬಹುದು. ವೃತ್ತಾಕಾರದಲ್ಲಿ ಅಲಂಕರಿಸಲ್ಪಟ್ಟ ಚಕ್ರದ ಕರಗ, ಗೋಪುರಾಕೃತಿಯಲ್ಲಿನ ಚಿತ್ರಗೋಪುರ ಕರಗ, ಅನೇಕ ಕಳಶಗಳನ್ನು ಒಂದರ ಮೇಲೊಂದು ಜೋಡಿಸಿ ತಲೆಯ ಮೇಲೆ ಹೊತ್ತು ಕುಣಿಯುವ ಕರಗ, ಒನಕೆ ಕರಗ ಮುಂತಾದ ವೈವಿಧ್ಯಮಯ ಕರಗ ಕುಣಿತದ ಪ್ರಕಾರಗಳಿವೆ. ಕರಗವನ್ನು ಹೊತ್ತು ಕುಣಿಯುವ ವ್ಯಕ್ತಿ ಅದನ್ನು ಕೆಳಗೆ ಬೀಳಿಸದೆ ಚಮತ್ಕಾರ ಪೂರ್ಣವಾಗಿ ವಿವಿಧ ಭಂಗಿಗಳಲ್ಲಿ ಕುಣಿಯುತ್ತ ನೆಲದ ಮೇಲಿನ ಸೂಜಿಯನ್ನು ಕಣ್ಣಿನ ರೆಪ್ಪೆಯಲ್ಲಿ ಎತ್ತುವುದು ಮುಂತಾದ ಸಾಹಸಗಳನ್ನು ಮಾಡುತ್ತ ಪ್ರೇಕ್ಷಕರನ್ನು ರಂಜಿಸುವುದು ಕರಗ ಕುಣಿತದ ಉದ್ದೇಶವಾಗಿದೆ. ತಮಿಳುನಾಡಿನ ಭಾಗಗಳಲ್ಲಿಯೂ ಈ ಕರಗ ಕುಣಿತದ ಆಟವಿದ್ದು, ಅದನ್ನು 'ಕರಗಾಟ್ಟಂ' ಎಂದು ಕರೆಯುತ್ತಾರೆ. ಇಂತಹ ಆಟಗಳನ್ನು ಹಬ್ಬ – ಹರಿದಿನ, ದೇವರ ಉತ್ಸವಗಳು, ಜಾತ್ರೆ ಮುಂತಾದ ಸಮಯಗಳಲ್ಲಿ ಆಡಲಾಗುತ್ತದೆ. ಹೀಗೆ ಕರಗ ಒಂದು ಮನರಂಜನಾತ್ಮಕ ಜಾನಪದ ಆಟವಾಗಿ ಪ್ರಚಲಿತವಾಗಿದ್ದರೆ, ಕರ್ನಾಟಕದ ತಮಿಳುನಾಡಿನ ಗಡಿ ಭಾಗಗಳಾದ ಕೋಲಾರ, ಬೆಂಗಳೂರು, ಮೈಸೂರು ಜಿಲ್ಲೆಗಳ ಕೆಲವು ಭಾಗಗಳಲ್ಲಿ ಒಂದು ಜನಾಂಗದವರು ತುಂಬಾ ಶ್ರದ್ಧಾ ಭಕ್ತಿ ಯಿಂದ ನಿರ್ಧಿಷ್ಟವಾದ ದಿನಗಳಂದು ನಿಯಮಬದ್ಧವಾಗಿ ನಡೆಸುವ ಆಚರಣೆ ಯಾಗಿಯೂ ಕರಗ ಪ್ರದರ್ಶನವಾಗುತ್ತದೆ.

ಈ ಕರಗದ ಆಚರಣೆಯನ್ನು ಮಾಡುವವರು ತಿಗಳ ಜನಾಂಗದವರಾಗಿದ್ದು, ಇವರು ತಮ್ಮನ್ನು ವಹ್ನಿಕುಲ ಕ್ಷತ್ರಿಯರು ಎಂದು ಕರೆದುಕೊಳ್ಳುತ್ತಾರೆ. ವೀರಕ್ಷತ್ರಿಯ ರಾದ ಪಾಂಡವರ ವಂಶಕ್ಕೆ ಸೇರಿದವರು ನಾವು. ಅದಕ್ಕೆ ಧರ್ಮರಾಜನ ವಕ್ಕಲಿನವರು ಎಂದು. ಕ್ಷತ್ರಿಯ ಕುಲದವರೆಂದು ಗುರುತಿಸಿಕೊಳ್ಳುತ್ತಾರೆ. ಈ ಕುಲದ ಮೂಲಪುರುಷ 'ಅಗ್ನಿಬನ್ನಿರಾಯ'. ಇವನು ವಹ್ನಿಯಿಂದ ಜನಿಸಿದವನೆಂದು

ಹೇಳುತ್ತಾರೆ. ಹಾಗೆಯೇ ಪಾಂಡವರ ಪತ್ನಿಯಾದ ದ್ರೌಪದಿಯೂ ಸಹ ಅಗ್ನಿಸಂಭವೆಯಾದುದರಿಂದ ದ್ರೌಪದಿ ನಮ್ಮ ಕುಲದೇವತೆ. ಈ ಕುಲದೇವತೆಯ ಆರಾಧನೆಯ ಆಚರಣೆ ಕರಗ ಎಂದು ಹೇಳುತ್ತಾರೆ. ಕರಗವು ಈ ಜನಾಂಗದ ಮುಖ್ಯಸ್ಥರಾದ ಗೌಡ, ಗಣಾಚಾರಿ, ಯಜಮಾನ ಕುಲಪುರೋಹಿತ (ಬ್ರಾಹ್ಮಣ) ದುರ್ಗಾಪೂಜಾರಿ ಅಥವಾ ಭರತ ಪೂಜಾರಿಯ ನೇತೃತ್ವದಲ್ಲಿ ವಿವಿಧ ಹಂತಗಳಲ್ಲಿ ಐದು ದಿನಗಳ ಅವಧಿಯಲ್ಲಿ ನಡೆಯುತ್ತದೆ. ಈ ಆಚರಣೆ ಕ್ರಮವಾಗಿ ಅಂಕುರಾರ್ಪಣೆ, ಹಸಿಕರಗ, ವೀರಕುಮಾರರ ದೀಕ್ಷೆ, ದೀಪಗಳಾರತಿ, ಹೂವಿನ ಕರಗ, ವಸಂತೋತ್ಸವ, ಭಾರತ ಕಥಾ ನಿರ್ವಚನೆ, ಗಾವುಶಾಸ್ತ್ರ ಎಂದು ನಿಯಮಬದ್ಧವಾಗಿ ನಡೆಯುವುದು. ಕರಗದ ಆಚರಣೆಗಳನ್ನು ಮಾರ್ಚ್ ಅಥವ ಏಪ್ರಿಲ್ ತಿಂಗಳ ಹುಣ್ಣಿಮೆ ದಿನಗಳಂದು ಮಾತ್ರ ನಡೆಸುತ್ತಾರೆ. ಆಚರಣೆಯ ದಿನವನ್ನು ಮಹಾಭಾರತದ ಯುದ್ಧ ಮುಕ್ತಾಯವಾದ ವಿಜಯೋತ್ಸವದ ದಿನವೆಂದು ಪುರಾಣಕ್ಕೆ ಸಮೀಕರಿಸಲಾಗುತ್ತದೆ. ಕರಗ ನಡೆಸುವ ದಿನವನ್ನು ನಿರ್ದಿಷ್ಟಪಡಿಸಿ ಒಂದು ವಾರ ಮುಂಚಿತವಾಗಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳುವುದಕ್ಕೆ ನಾಂದಿಯನ್ನು ಹೇಳುವ ಆಚರಣೆಗೆ ಅಂಕುರಾರ್ಪಣೆಯೆಂದು ಕರೆಯುತ್ತಾರೆ. ಇದರಲ್ಲಿ ತಮ್ಮ ಕುಲದ ಪ್ರಮುಖರಾದ ಗಣಾಚಾರಿ, ಗೌಡ ಮುಂತಾದವರೆಲ್ಲ ಮಡಿವಂತಿಕೆಯಿಂದ ಕರಗಕ್ಕೆ ತಯಾರಿ ನಡೆಸುತ್ತಾರೆ. ಅಂಕುರಾರ್ಪಣೆಯ ದಿನದಿಂದ ಗಾವುಶಾಸ್ತ್ರ ಮುಕ್ತಾಯದ ವರೆಗೆ ಮಾಂಸಾಹಾರವನ್ನು ಜನಾಂಗದವರೆಲ್ಲ ಕಡ್ಡಾಯವಾಗಿ ನಿಷೇಧಿಸುತ್ತಾರೆ.

ಹಸಿ ಕರಗವು ಕುಲಪುರೋಹಿತನಾದ ಬ್ರಾಹ್ಮಣ ಪೂಜಾರಿಯಿಂದ ಕುಲ ಪ್ರಮುಖರ ನೇತೃತ್ವದಲ್ಲಿ ದ್ರೌಪದಿ/ಧರ್ಮರಾಯ ದೇವಾಲಯದಲ್ಲಿ ಆರಂಭವಾಗುತ್ತದೆ. ಇಲ್ಲಿ ಕರಗ ಹೊರುವ ಪೂಜಾರಿಗೆ ಜನಿವಾರ ಧಾರಣೆ ಮಾಡಿ, ಕಂಕಣ ಕಟ್ಟಿ ಅಗ್ನಿಕುಂಡಕ್ಕೆ ಪೂಜೆ ಮಾಡಿ, ಪೋತರಾಜ, ವೀರಕುಮಾರರು, ಭರತ ಪೂಜಾರಿ ಮುಂತಾದವರೆಲ್ಲ ಧ್ವಜದೊಂದಿಗೆ ವಾದ್ಯಸಮೇತ ಕೆರೆಯಂಗಳಕ್ಕೆ ಹೋಗುತ್ತಾರೆ. ಕೆರೆಯಂಗಳದಲ್ಲಿ ಮೊದಲೇ ತಯಾರಿಸಿದ ಹಸಿಕರಗವನ್ನು ಗೌಪ್ಯವಾಗಿ ತಂದು ಅದಕ್ಕೆ ಮಲ್ಲಿಗೆ ಹೂವಿಂದ ಶೃಂಗರಿಸುತ್ತಾರೆ. ವೀರಕುಮಾರರಿಗೆ ಜನಿವಾರ ಮತ್ತು ಕಂಕಣಗಳನ್ನು ತೊಡಿಸಿ ಪೋತರಾಜನಿಗೆ ಶಕ್ತಿಯನ್ನು ಆವಾಹನೆ ಮಾಡಿ ಸರ್ಪಸಂಕೇತವಾದ ಚಾಟಿಯಿಂದ ಹೊಡೆದು ಶಾಂತವಾಗಿಸುತ್ತಾರೆ. ವೀರಕುಮಾರರೆಲ್ಲ ಕರಗ ಹೊರುವ ಪೂಜಾರಿ ಭರತಪೂಜಾರಿ, ಗಣಾಚಾರಿ ಇವರುಗಳ ಪಾದಕ್ಕೆ ನಮಸ್ಕರಿಸಿ ಕತ್ತಿಯಿಂದ ಎದೆಯ ಭಾಗ ಮತ್ತು ಉದರ ಭಾಗಗಳಿಗೆ ಗೋವಿಂದಾ ಧೀ.. ಧಿಕ್.. ಧೀ.. ಎಂದು ಹೊಡೆದುಕೊಳ್ಳುತ್ತಾ ಅಲಗುಸೇವೆಯನ್ನು ಮಾಡುತ್ತಾರೆ. ಆನಂತರ ಕರಗ ಹೊರುವ ಪೂಜಾರಿಯ ಸೊಂಟದ ಮೇಲೆ ಹೂವಿನಿಂದ ಶೃಂಗರಿಸಿದ ಹಸಿ ಕರಗವನ್ನು

ಇಟ್ಟುಕೊಂಡು ಲಯಬದ್ಧವಾಗಿ ಹೆಜ್ಜೆಹಾಕುತ್ತಾ ದ್ರೌಪದಿ/ಧರ್ಮರಾಯ ದೇವಾಲಯವನ್ನು ಪ್ರವೇಶಿಸುತ್ತಾರೆ. ಅಲ್ಲಿ ಹಸಿ ಕರಗವನ್ನು ಗರ್ಭಗುಡಿಯಲ್ಲಿಟ್ಟು ಪೂಜಾವಿಧಿಗಳನ್ನು ಮುಗಿಸುತ್ತಾರೆ.

ವೀರಕುಮಾರರಿಗೆ ದೀಕ್ಷಾಬೋಧನೆಯ ಆಚರಣೆಯಲ್ಲಿ ನಿರ್ದಿಷ್ಟಪಡಿಸಿದಂತೆ ಪೂಜಾಸಲಕರಣೆಗಳನ್ನು ಸ್ವೀಕರಿಸಿ ಹೊಸದಾಗಿ ವೀರಕುಮಾರರಾಗುವವರಿಗೆ ದುರ್ಗಾ ಪೂಜಾರಿ ಗಣಾಚಾರಿಯ ಸಮ್ಮುಖದಲ್ಲಿ ಶಕ್ತಿಯನ್ನು ಆವಾಹನೆ ಮಾಡಿಸಿ ನಿಯಮಬದ್ಧವಾಗಿ ನಡೆದುಕೊಳ್ಳುವಂತೆ ಬೋಧನೆ ನೀಡುತ್ತಾನೆ. ಇಲ್ಲಿ ಬ್ರಾಹ್ಮಣ ಪೂಜಾರಿ ಇರುವುದಿಲ್ಲ. ದೀಪದಾರತಿ ಉತ್ಸವದಲ್ಲಿ ಹೆಣ್ಣುಮಕ್ಕಳು ತಂಬಿಟ್ಟಿನ ದೀಪಗಳನ್ನು ಹೊತ್ತು ಮೆರವಣಿಗೆ ಮುಗಿಸಿ ದ್ರೌಪದಿ/ಧರ್ಮರಾಯ ದೇವಾಲಯದ ಬಳಿ ಕರಗ ಹೊರುವ ಪೂಜಾರಿಯಿಂದ ಬೆಂಕಿಯ ಕೊಂಡ ಹಾಯುವ ಕ್ರಿಯೆ ಮುಗಿದ ಬಳಿಕ ದೀಪಗಳನ್ನು ಹೊತ್ತವರು ಕೊಂಡ ತುಳಿದು ಪೂಜೆ ಸಲ್ಲಿಸುತ್ತಾರೆ.

ಹೂವಿನ ಕರಗ ಪ್ರಧಾನವಾಗಿದ್ದು, ಇದು ಹುಣ್ಣಿಮೆಯ ದಿನ ನಡೆಯುವ ಆಚರಣೆಯಾಗಿದೆ. ಹೊಸಕೋಟೆಯಲ್ಲಿ ಬುದ್ಧಪೂರ್ಣಿಮೆಯಂದು ಈ ಆಚರಣೆ ನಡೆಯುವುದು. ಹಸಿಕರಗದ ದಿನ ಹೊರಟಂತೆ ಕೆರೆಯಂಗಳಕ್ಕೆ ಹೊರಟು ಅಲ್ಲಿ ಕರಗ ಹೊರುವ ಪೂಜಾರಿಗೆ ಅರಿಶಿನ ಸೀರೆ ಉಡಿಸಿ, ಬಳೆತೊಡಿಸಿ, ತೋಳುಗಳಿಗೆ ತೋಳುಪಟ್ಟಿಯನ್ನು ಕಟ್ಟುತ್ತಾರೆ. ಮೀಸೆಯಿದ್ದರೆ ಮೊದಲೇ ತೆಗೆಯಲಾಗಿರುತ್ತದೆ. ಗೌಪ್ಯವಾಗಿ ಜನಾಂಗದ ಮುಖ್ಯಸ್ಥರಿಂದ ಮಲ್ಲಿಗೆ ಹೂವಿನಿಂದ ಅಲಂಕರಿಸಲ್ಪಟ್ಟ ಕರಗವನ್ನು ಶೃಂಗಾರಗೊಂಡ ಪೂಜಾರಿಯ ತಲೆಯ ಮೇಲಿಟ್ಟು, ಒಂದು ಕೈಗೆ ಕರವಾಳ ಮತ್ತೊಂದು ಕೈಗೆ ಕಾಲದಂಡವನ್ನು ಕೊಡುತ್ತಾರೆ. ಆಗ ವೀರಕುಮಾರರೆಲ್ಲ ಗೋವಿಂದನ ನಾಮಸ್ಮರಣೆ ಮಾಡುತ್ತಾ ಅಲಗುಸೇವೆ ಮಾಡಿದ ಬಳಿಕ ಬೆಂಕಿಯ ಕೊಂಡವನ್ನು ತುಳಿದುಕೊಂಡು ಬಂದು ದೇವಾಲಯ ಸೇರುತ್ತಾರೆ. ಈ ಆಚರಣೆಯನ್ನು ಬ್ರಾಹ್ಮಣ ಪೂಜಾರಿಯಿಂದ ನಡೆಸುತ್ತಾರೆ. ಭರತ ಪೂಜಾರಿ ದ್ರೌಪದಿಯನ್ನು ಆಹ್ವಾನಿಸುವ ಗೀತೆಯನ್ನು ಢಕ್ಕೆ ಬಾರಿಸಿಕೊಂಡು ಹಾಡುತ್ತಾನೆ. ದೇವಾಲಯದಲ್ಲಿ ಗುಪ್ತವಾಗಿ ಸಿದ್ಧಗೊಂಡ ಕರಗ ರಾತ್ರಿ ಸುಮಾರು ಒಂದು ಗಂಟೆ ಸಮಯಕ್ಕೆ ಹೊರಬಂದು ವೀರಕುಮಾರರ ರಕ್ಷಣೆಯಲ್ಲಿ ಬೀದಿಗಳಲ್ಲಿ ಕುಣಿಯುತ್ತಾ ಬಂದು, ಭಕ್ತರಿಂದ ಪೂಜೆಯನ್ನು ಸ್ವೀಕರಿಸಿ, ಬೆಳಗಾದ ಮೇಲೆ ಪುನಃ ದೇವಾಲಯ ಸೇರಿದ ಮೇಲೆ ಅಂದಿನ ಆಚರಣೆ ಮುಕ್ತಾಯವಾಗುತ್ತದೆ.

ವಸಂತೋತ್ಸವ ಸಾಹಸಮಯವಾದ ಮನರಂಜನೆಯಾಗಿರುತ್ತದೆ. ತೆಂಗಿನ ಕಾಯನ್ನು ಹುಣಸೆ ಬರಲು ಮತ್ತು ಸೊಪ್ಪಿನಿಂದ ಮುಚ್ಚಿಟ್ಟು ಸುರುಳಿಯಾಕಾರದಲ್ಲಿ ದೊಡ್ಡದಾಗಿ ಕಟ್ಟಿ ಎರಡೂ ತುದಿಗಳಲ್ಲಿ ಹಗ್ಗದ ಸಹಾಯದಿಂದ ಒಂದೇ

ಕಡೆ ನಿಲ್ಲದಂತೆ ಉರುಳಾಡಿಸುತ್ತಾರೆ. ದೊಣ್ಣೆ ಹಿಡಿದ ಯುವಕರು ತೆಂಗಿನಕಾಯನ್ನು ಹೊಡೆಯುವ ಸಂದರ್ಭಕ್ಕೆ ಅರಿಶಿನ ನೀರನ್ನು ಅವರ ಮುಖಕ್ಕೆ ಎರಚಲಾಗುತ್ತದೆ. ಈ ರೀತಿ ಓಕುಳಿಯಾಟ ಆಡುತ್ತಾ ತೆಂಗನ್ನು ಒಡೆಯುವ ಸಾಹಸ ಕ್ರೀಡೆ ಇದಾಗಿರುತ್ತದೆ. ಜನಾಂಗದಲ್ಲಿನ ಯುವಕರು ಉತ್ಸಾಹದಿಂದ ಪಾಲ್ಗೊಂಡು ಸಾಹಸವನ್ನು ತೋರುತ್ತಾರೆ.

ಕರಗದ ಆಚರಣೆಯ ಕೊನೆಯ ಘಟ್ಟ ಭಾರತ ಪುರಾಣ ನಿರ್ವಚನೆ ಮತ್ತು ಗಾವುಶಾಸ್ತ್ರ. ಇದು ಇಡೀ ಆಚರಣೆಯಲ್ಲಿ ಅತ್ಯಂತ ಮುಖ್ಯವಾದ ಭಾಗ. ಈ ದಿನದಂದು ಪೋತರಾಜನಿಗೆ ಶಕ್ತಿಯನ್ನು ಆವಾಹನೆ ಮಾಡಿಸಿ ಪೋತರಾಜನ ಪ್ರತಿಮೆಯನ್ನು ಅವನ ಭುಜದ ಮೇಲಿರಿಸಿಕೊಂಡು ಬಂದು ದ್ರೌಪದಿ/ಧರ್ಮರಾಯ ದೇವಸ್ಥಾನದ ಮುಂದುಗಡೆ ಪೋತರಾಜನ ಪ್ರತಿಮೆಯನ್ನಿರಿಸಿ ಅದರ ಮುಂದೆ ಅನ್ನದ ರಾಶಿಯನ್ನು ಹಾಕಿ ದುರ್ಗಾ ಪೂಜಾರಿ ಪೂಜೆಯನ್ನು ಮಾಡುತ್ತಾನೆ. ಇಲ್ಲಿ ಬ್ರಾಹ್ಮಣ ಪೂಜಾರಿಯಿರುವುದಿಲ್ಲ. ಮುಂದೆ ಒಬ್ಬ ಸಹಾಯಕನ ಜೊತೆ ದ್ರೌಪದೀ ಆರಾಧನೆಯ ಗೀತೆಯನ್ನು ಹಾಡಿ ತೆಲುಗು ಭಾಷೆಯಲ್ಲಿ ಭಾರತ ಪುರಾಣವನ್ನು ನಿರ್ವಚಿಸುತ್ತಾನೆ. ಆರಂಭದಲ್ಲಿ ನಾರಾಯಣನ ಕತೆಯನ್ನು ನರನು ಕೇಳಿದರೆ ಪಾಪ ಪರಿಹಾರವಾಗುತ್ತದೆ. ಆದುದರಿಂದ ಎಲ್ಲರೂ ಈ ಕತೆಯನ್ನು ಕೇಳಿ ಪಾಪ ಪರಿಹಾರ ಮಾಡಿಕೊಳ್ಳುವುದೆಂದು ಇಬ್ಬರು ರಾಗವಾಗಿ ಹಾಡುತ್ತಾರೆ. ಆನಂತರ ಕತೆಯ ಪ್ರವಚನ ನಡೆಯುತ್ತದೆ.

ಈ ಜನಾಂಗ ಅತ್ಯಂತ ಭಕ್ತಿಯಿಂದ ಕರಗದ ಆಚರಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ನಿಯಮಬದ್ಧವಾದ ಶ್ರದ್ಧೆಯಿಂದ ನಡೆದುಕೊಳ್ಳುವ ರೀತಿ ಮತ್ತು ಭಾರತ ಪುರಾಣದ ಕತೆಗಳ ಸ್ವರೂಪ ಆಶ್ಚರ್ಯವನ್ನುಂಟುಮಾಡುತ್ತವೆ, ಕುತೂಹಲವನ್ನು ಕೆರಳಿಸುತ್ತವೆ. ಹಾಗೆಯೇ ಅನೇಕ ದೃಷ್ಟಿಗಳಿಂದ ಇವುಗಳ ಪರಿಶೀಲನೆ ಮುಖ್ಯವೆನಿಸುತ್ತದೆ. ಇಲ್ಲಿ ನಿರ್ವಚನೆಗೊಳ್ಳುವ ಭಾರತ ಕತೆ ಒಂದು ಜನಪದ ಪುರಾಣವಾಗಿದೆ. ಇದರಲ್ಲಿ ಪಾಂಡವರ ಸತ್ಯನಿಷ್ಠೆ, ಧರ್ಮನಿಷ್ಠೆ ಮತ್ತು ಕೃಷ್ಣಭಕ್ತಿಗಳು ಪ್ರಕಟಗೊಳ್ಳುತ್ತಿದ್ದರೂ ವ್ಯಾಸಭಾರತ ಅಥವಾ ಮಹಾಭಾರತದ ಕತೆಗಳಾಗಿರುವುದಿಲ್ಲ. ಆದರೂ ಮಹಾಭಾರತದ ಪಾತ್ರಗಳು ಮತ್ತು ಸನ್ನಿವೇಶಗಳು ಭಾರತಕತೆಯನ್ನು ನೆನಪಿಸುತ್ತವೆ.

ಮಹಾಭಾರತದಲ್ಲಿಯಂತೆ ಇಲ್ಲಿನ ಪಾಂಡವರು ಕೃಷ್ಣನ ಭಕ್ತರು. ಆದರೆ ಕೃಷ್ಣನ ಭಕ್ತಿ ಪ್ರಕಟಗೊಳ್ಳುವ ರೀತಿ ಬೇರೆಯದಾಗಿರುತ್ತದೆ. ಇಲ್ಲಿನ ಕತೆಗಳಲ್ಲಿ ಪಾಂಡವರನ್ನು ಬಾಲ್ಯದಿಂದಲೂ ಶ್ರೀಕೃಷ್ಣ ಆಶೀರ್ವದಿಸಿ ಕಾಯುತ್ತಾನೆ. ಅಪಾಯಗಳಿದ್ದಾಗ ಎಚ್ಚರಿಕೆ ನೀಡುತ್ತಾನೆ. ತೊಂದರೆಗಳಿದ್ದಾಗ ಪರಿಹರಿಸುತ್ತಾನೆ.

ಪಾಂಡವರ ಅಭ್ಯುದಯಕ್ಕೆ ಶ್ರೀಕೃಷ್ಣ ಸಿದ್ಧನಾಗಿ ಕಾದಿರುತ್ತಾನೆ. ಇಲ್ಲಿನ ದ್ರೌಪದಿಯು ಸಹ ನೇರವಾಗಿ ದ್ರುಪದನ ಮಗಳಾಗಿರುವುದಿಲ್ಲ. ಜನ್ಮಾಂತರದಲ್ಲಿ ಮುತ್ತೈದೆ ತನಕ್ಕಾಗಿ ಶ್ರೀಕೃಷ್ಣನ ಆಶೀರ್ವಾದದಿಂದ ಪಾಂಡವರ ಮಡದಿಯಾಗುವ ರೀತಿ ಪುರಾಣವನ್ನು ಸೃಷ್ಟಿಸಲಾಗಿದೆ. (ಈ ಕತೆಗಳು ತೆಲುಗಿನಲ್ಲಿದ್ದು, ಬಹಳ ದೀರ್ಘವಾದುವುಗಳಾಗಿ ರುವುದರಿಂದ ಅವುಗಳನ್ನು ಅನುಬಂಧದಲ್ಲಿ ಸಂಕ್ಷಿಪ್ತವಾಗಿ ಕೊಡಲಾಗಿದೆ). ಶ್ರೀಕೃಷ್ಣನನ್ನು ಸ್ಮರಿಸಿದರೆ ಸಾಕು, ಎಂತಹ ಕಷ್ಟಗಳಿದ್ದರೂ ಪರಿಹಾರವಾಗುತ್ತದೆ. ಧರ್ಮರಾಯನಂತೂ ಕೃಷ್ಣನನ್ನು ಸ್ಮರಿಸದೆ ಯಾವ ಕೆಲಸ ವನ್ನೂ ಮಾಡುವುದಿಲ್ಲ. ಊಟವನ್ನೂ ಸಹ, ಅದಕ್ಕಾಗಿಯೇ ಧರ್ಮರಾಯ ತನ್ನ ವೀರತ್ವಕ್ಕಿಂತ ಹೆಚ್ಚು ಗುಣವಂತನಾಗಿ ಶ್ರೇಷ್ಠನಾಗಿ ಕಾಣುತ್ತಾನೆ. ಧರ್ಮರಾಯನ ಮಾತನ್ನು ಮೀರಿ ಅವನನ್ನು ಹಿಂಬಾಲಿಸದೆ ಹೋದಾಗಲೆಲ್ಲ ಶೂರನಾಗಿದ್ದ ಭೀಮನಂತಹವನು ತೊಂದರೆಯಲ್ಲಿ ಸಿಕ್ಕಿಬೀಳುತ್ತಾನೆ. ನರಕಕ್ಕೆ ಹೋಗುತ್ತಾನೆ. ಇನ್ನೊಂದು ವಿಶೇಷವೇನೆಂದರೆ ಈ ಕತೆಗಳಲ್ಲಿ ಶಿವನು ಒಂದು ಪಾತ್ರವಾಗಿ ಕಾಣಿಸಿಕೊಳ್ಳುವುದು ಅಷ್ಟೇ ಏಕೆ ಇಲ್ಲಿನ ಪೋತರಾಜ ಮತ್ತು ದ್ರೌಪದಿ (ಮುದ್ದಮ್ಮ) ಶಿವನ ಮಕ್ಕಳೇ ಆಗಿರುತ್ತಾರೆ. ಇಲ್ಲಿ ಬರುವ ಶಿವನು ಬಹಳ ದುರ್ಬಲನಾಗಿದ್ದು ತನ್ನ ಶಕ್ತಿ ಸಾಮರ್ಥ್ಯಗಳನ್ನು ಸ್ಥಾಪಿಸುವಲ್ಲಿ, ಭಕ್ತರನ್ನು ಕಾಯುವಲ್ಲಿ ವಿಫಲನಾಗುತ್ತಾನೆ. ಬದಲಾಗಿ ತಾನೇ ಸಮಸ್ಯೆಗಳಲ್ಲಿ ಸಿಕ್ಕಿಕೊಂಡು ಅನ್ಯರ ಸಹಾಯ ಬೇಡುತ್ತಾನೆ ಮತ್ತು ಅಪಾಯಗಳು ಬಂದಾಗ ತಲೆ ತಪ್ಪಿಸಿ ಕೊಂಡು ಪಲಾಯನವಾಗುತ್ತಾನೆ. ಇಲ್ಲಿನ ಶಿವ ದೈಹಿಕವಾದ ದೌರ್ಬಲ್ಯಗಳನ್ನು ಮೀರಿದ ದೇವರಾಗಿ ತೋರುವುದಿಲ್ಲ. ಮೋಹಗೊಂಡು ಅಸಹಜ ಕಾಮಕ್ಕೆ ಹಂಬಲಿಸುವ ಕಾಮಾಂಧನಾಗಿ ಚಿತ್ರಿತನಾಗುತ್ತಾನೆ. ಪೋತರಾಜನ ಕತೆಯಲ್ಲಿ, ಪಾರ್ವತಿಯ ಜೊತೆ ವನವಿಹಾರಕ್ಕೆ ಹೊರಟ ಸಮಯದಲ್ಲಿ ಸರಸವಾಡುತ್ತಿದ್ದ ಜಿಂಕೆಗಳನ್ನು ಕಂಡು ಶಿವನು ಪ್ರಾಣಿ ಸ್ವರೂಪದಲ್ಲಿ ಸರಸವಾಡಲು ಆಸೆಪಟ್ಟು, ಇಷ್ಟವಿಲ್ಲದಿದ್ದರೂ ಪಾರ್ವತಿಯನ್ನು ಒತ್ತಾಯಪಡಿಸಿ, ಶಿವಪಾರ್ವತಿಯರು ಸಿಂಹ ಸ್ವರೂಪದಲ್ಲಿ ಸರಸವಾಡುತ್ತಾರೆ. ಈ ಸಮಯದಲ್ಲಿ ಸಂಯಮ ಕಳೆದುಕೊಂಡ ಶಿವ ಕಾಮಾತುರನಾಗಿ ಅಸಹಜ ರೀತಿಯ ವೀರ್ಯಸ್ಖಲನದಿಂದ ಪೋತರಾಜನ ಜನನವಾಗುತ್ತದೆ, ಆ ಮಗು ಸಿಂಹದ ರೂಪದಲ್ಲಿರುತ್ತದೆ. ಇಂತಹ ಸಂತಾನ ವನ್ನು ತನ್ನ ಭಕ್ತನಾದ ಶಿವಲಿಂಗ ರಾಜನಿಗೆ ಕೊಡುತ್ತಾನೆ. ಶಿವಲಿಂಗ ರಾಜನ ಹೆಂಡತಿಯ ಕೋರಿಕೆಯನ್ನು ಮನ್ನಿಸಿ, ಪಾರ್ವತಿ ಒಂದು ಹೆಣ್ಣುಮಗುವನ್ನು ದಯಪಾಲಿಸುತ್ತಾಳೆ. ಅವಳೇ ದ್ರೌಪದಿಯಾಗಿರುತ್ತಾಳೆ. ಹೀಗೆ ಪೋತರಾಜ ಮತ್ತು ಮುದ್ದಮ್ಮ (ದ್ರೌಪದಿ) ಶಿವನ ಮಕ್ಕಳಾಗಿ ರುತ್ತಾರೆ. ಆದರೆ ಶಿವನ ಮಗನಾದ ಪೋತರಾಜನಿಗೆ ಏಳು ಸುತ್ತಿನ ಕಂಚು ಕೋಟೆಯಿದೆ. ೭೦ ಸಿಂಹಗಳ ಬಲವಿದ್ದು,

ಕೊಡಲಿಯನ್ನು ಆಯುಧವಾಗಿ ಹೊಂದಿದ್ದರೂ, ಇವನ ವೀರತನ ವ್ಯರ್ಥವಾಗು ತ್ತದೆ. ಭೀಮನ ಸೌದೆ ಹೊರೆಯ ಸೋಂಕಿಗೆ ಇವನ ಕೋಟೆ ಒಡೆದು ಹೋಗುತ್ತದೆ. ಕೃಷ್ಣಭಕ್ತರಾದ ಪಾಂಡವರ ಮುಂದೆ ಅಸಹಾಯಕನಾಗುತ್ತಾನೆ. ಬುದ್ಧಿವಿಹೀನನಾಗಿ ಬಳಲುತ್ತಾನೆ. ಕಾಮಾಂಧನಾಗಿ ಶಕ್ತಿರಹಿತನಾಗುತ್ತಾನೆ. ಶಿವಭಕ್ತ ನಾಗಿ ಹರನನ್ನಲ್ಲದೆ ಹರಿಯನ್ನು ಸ್ಮರಿಸ ಬಾರದಾಗಿ ತನ್ನ ರಾಜ್ಯದಲ್ಲಿ ನಾರಾಯಣನ ನಾಮಸ್ಮರಣೆ ಮಾಡಿದವರನಾಲಿಗೆ ಕತ್ತರಿಸುವುದಾಗಿ ಎಚ್ಚರಿಸುತ್ತಾನೆ. ನಾರದನ ಬಾಯಲ್ಲೂ ಶಿವನಾಮಸ್ಮರಣೆಯನ್ನು ಕೇಳಿ ತನ್ನ ಶಕ್ತಿಗೆ ತಾನೇ ಹೆಮ್ಮೆ ಪಡುತ್ತಾನೆ. ತನ್ನ ತಂದೆಯ ಶಿವಪೂಜಾ ಪೆಟ್ಟಿಗೆಯನ್ನೇ ಹೊಡೆದು ಶೂರತ್ವವನ್ನು ತೋರಿಸಿದರೂ ಏನನ್ನೂ ಸಾಧಿಸಲಾಗದ ಅಸಹಾಯಕ ನಾಗುತ್ತಾನೆ. ಶಿವನಿಂದ ಕಾಪಾಡಲಾಗದೆ ನಾಗಸರ್ಪ ಪ್ರಾಣಬಿಟ್ಟು ಮರುಹುಟ್ಟನ್ನು ಪಡೆದ ನಾರಾಯಣ ಸ್ವರೂಪಿ ನಾಗಸರ್ಪದ ಸ್ಪರ್ಶದಿಂದ ಶಾಂತನಾಗುವ ಸ್ಥಿತಿ ಬರುತ್ತದೆ. ಶಿವಭಕ್ತನಾಗಿದ್ದು ಹೋತವನ್ನು ಆವೇಶದಿಂದ ಬಾಯಲ್ಲಿ ಕಚ್ಚಿ ರಕ್ತ ಕುಡಿದು ರಾಕ್ಷಸತ್ವವನ್ನು ತೋರಿದ ತಪ್ಪಿಗಾಗಿ ದಿಕ್ಕು ಗಾಣದಂತಿರಬೇಕಾದ ಸಂದರ್ಭದಲ್ಲಿ ಕೃಷ್ಣನ ಸಲಹೆಯಂತೆ ಶಿವಲಿಂಗರಾಜ ಪಟ್ಟಣವನ್ನು ತೊರೆದು ಪಾಂಡವರ ಬಂಧುವಾಗಿ ಉಳಿಯುತ್ತಾನೆ (ಗಾವುಶಾಸ್ತ್ರದಲ್ಲಿ ಈ ಸಂದರ್ಭದ ಯಥಾವತ್ತಾದ ಆಚರಣೆಯ ಅಭಿನಯ ನಡೆಯುತ್ತದೆ). ಕೊನೆಗೆ ಪೋತರಾಜ ಪಾಂಡವರ ಸಹೋದರಿಯನ್ನು ವಿವಾಹವಾಗಿ ಸಂತೃಪ್ತ ಜೀವನವನ್ನು ನಡೆಸುತ್ತಾನೆ ಇನ್ನು ಶಿವಪುತ್ರಿಯಾದ ದ್ರೌಪದಿ ಶಿವಭಕ್ತನಲ್ಲಿರುವ ತನಕ ಅವಳ ವ್ಯಕ್ತಿತ್ವ ಅನಾವರಣ ವಾಗುವುದಿಲ್ಲ. ಧರ್ಮರಾಯನನ್ನು ವಿವಾಹವಾದ ಮೇಲೆ ಅವಳಲ್ಲಿ ಶಕ್ತಿ ಸಾಮರ್ಥ್ಯಗಳು ಪವಾಡಸದೃಶವಾಗಿ ಹೊರಟಿಮ್ಮುತ್ತವೆ. ತನ್ನಣ್ಣನಾದ ಪೋತರಾಜ ಶಿವಲಿಂಗರಾಜ ಪಟ್ಟಣಕ್ಕೆ ಕರೆದಾಗ ನಿರಾಕರಿಸುತ್ತಾಳೆ. ಹೀ ಶಿವಭಕ್ತರಾಗಿದ್ದವರು ವೈಷ್ಣವಭಕ್ತರಾಗಿ ಅಥವಾ ವೈಷ್ಣವ ಅನುಯಾಯಿಗಳಾ ಪರಿವರ್ತಿತರಾಗುವರು. ಶೈವಮಾರ್ಗದ ನಿರಾಕರಣೆಯನ್ನು ಪ್ರಕಟಪಡಿಸುತ್ತಾ ಇದೇ ರೀತಿಯ ಮತ್ತೆರಡು ಕತೆಗಳನ್ನು ಅವಲೋಕಿಸಬಹುದು.

೧. 'ಪದ್ಮಾವತಿ ಎಂಬ ವೇಶ್ಯೆ' ಎಂಬ ಕತೆಯಲ್ಲಿ ಮಹಾ ಪತಿವ್ರತೆಯಾ ಹೆಣ್ಣೊಬ್ಬಳು ತನ್ನ ಗಂಡ ಕುಷ್ಟರೋಗಿಯಾಗಿದ್ದರೂ ಅವನ ಇಚ್ಛೆಯನರಿ ನಡೆಯುವ ಸತಿಯಾಗಿರುತ್ತಾಳೆ. ಒಮ್ಮೆ ತನ್ನ ಗಂಡ ವೇಶ್ಯೆಯ ಸಹವಾಸ ಹಂಬಲಿಸುತ್ತಾನೆ. ಗಂಡನ ಆಸೆಯನ್ನು ಪೂರೈಸುವ ಸತೀ ಧರ್ಮ ಒಲಿದು ಕುಷ್ಟರೋಗಿ ಗಂಡನನ್ನು ತಲೆಯ ಮೇಲೆ ಹೊತ್ತುಕೊಂ ವೇಶ್ಯೆಯ ಮನೆಗೆ ಹೊರಡುತ್ತಾಳೆ. ಮಾರ್ಗದಲ್ಲಿ ಶಿವನ ಶಾ ಗುರಿಯಾಗಿ ಗಂಡನನ್ನು ಕಳೆದುಕೊಂಡು ವಿಧವೆಯಾಗುತ್ತಾಳೆ. ತ

ಮುತ್ತೈದೆತನಕ್ಕಾಗಿ ೧೨ ವರ್ಷ ಕೈಲಾಸದಲ್ಲಿ ಶಿವನ ಸೇವೆ ಮಾಡಿದರೂ, ಕೊನೆಗೆ ಶಿವನಿಂದ ಮುತ್ತೈದೆ ತನವನ್ನು ಕೊಡಲಾಗುವುದಿಲ್ಲ. ಪತಿವ್ರತೆಯಾಗಿದ್ದ ವಿಧವೆ ತನ್ನ ಹಟವನ್ನು ಬಿಡುವುದಿಲ್ಲ. ಕೊನೆಗೆ ಏನು ಮಾಡಬೇಕೆಂದು ತಿಳಿಯದೆ ಕೃಷ್ಣನ ಸಲಹೆಯನ್ನು ಕೇಳುತ್ತಾನೆ ಶಿವ. ಆಗ ಶ್ರೀಕೃಷ್ಣ ಮಂದ ಸ್ಮಿತನಾಗಿ ಆ ಪತಿವ್ರತೆಗೆ ಮರುಜನ್ಮದಲ್ಲಿ ಐದು ಜನ ಗಂಡಂದಿರನ್ನು ಪಡೆದು ಮುತ್ತೈದೆ ಭಾಗ್ಯವನ್ನು ಹೊಂದುವಂತೆ ಆಶೀರ್ವಾದಿಸುತ್ತಾನೆ. ಮುಂದೆ ಪಾಂಡವರ ಮಡದಿಯಾಗಿ ಮುತ್ತೈದೆತನವನ್ನು ಪಡೆಯುತ್ತಾಳೆ. ಅವಳೇ ದ್ರೌಪದಿ.

೨. 'ವಿರಾಟ ಪರ್ವ'ದ ಮತ್ತೊಂದು ಕತೆಯಲ್ಲಿ ವನವಾಸವನ್ನು ಮುಗಿಸಿ ಅಜ್ಞಾತವಾಸಕ್ಕಾಗಿ ವೇಷಮರೆಸಿಕೊಂಡು ಪಾಂಡವರು ವಿರಾಟನಲ್ಲಿ ಆಶ್ರಯವನ್ನು ಪಡೆಯುತ್ತಾರೆ. ಕಂಕಭಟ್ಟನಾಗಿ ವೇಷಮರೆಸಿಕೊಂಡಿದ್ದ ಧರ್ಮರಾಯ ವಿರಾಟನ ಆಸ್ಥಾನವನ್ನು ಹೊಕ್ಕ ಮೇಲೆ ಮೊದಲಿದ್ದ ಬ್ರಾಹ್ಮಣರ ಸ್ಥಾನಮಾನಗಳಿಗೆ ಧಕ್ಕೆಯಾಗುತ್ತದೆ. ಇದನ್ನು ಸಹಿಸಲಾಗದ ಬ್ರಾಹ್ಮಣರು ವಿರಾಟನಲ್ಲಿಗೆ ಅಹವಾಲನ್ನು ಕೊಂಡೊಯ್ಯುತ್ತಾರೆ. ಬ್ರಾಹ್ಮಣರಲ್ಲಿ ಕರಿಬ್ರಾಹ್ಮಣ–ಬಿಳಿಬ್ರಾಹ್ಮಣ ಎಂದು ವ್ಯತ್ಯಾಸವೇನಾದರೂ ಇದೆಯೆ? ನೆನ್ನೆ–ಮೊನ್ನೆ ಬಂದಿರುವ ಕಂಕಭಟ್ಟರಿಗೆ ಸಿಂಹಾಸನವನ್ನು ನೀಡಿ ಪ್ರಥಮ ಪ್ರಾಶಸ್ತ್ಯವನ್ನು ಕೊಟ್ಟು, ಒಂದಿನಿಂದಲೂ ಸೇವೆಮಾಡಿಕೊಂಡು ಬಂದ ನಮ್ಮನ್ನು ಸ್ಥಾನಭ್ರಷ್ಟಗೊಳಿಸಿ ಅಪಮಾನ ಮಾಡಲಾಗಿದೆಯೆಂದು ದೂರುತ್ತಾರೆ. ಆದಕ್ಕೆ ವಿರಾಟರಾಜ ಪಾಂಡವರ ಆಸ್ಥಾನ ಬ್ರಾಹ್ಮಣನಾದ್ದರಿಂದ ಅರ್ಹತೆ ಮತ್ತು ಅಭಿಮಾನ ಕಾರಣದಿಂದ ಗೌರವಯುತ ಸ್ಥಾನಮಾನಗಳನ್ನು ನೀಡಲಾಗಿದೆಯೆಂದು ಸಮರ್ಥಿಸುತ್ತಾನೆ. ಈ ರೀತಿಯ ಉತ್ತರದಿಂದ ಸಮಾಧಾನಹೊಂದದ ಬ್ರಾಹ್ಮಣರು ಸಾಮರ್ಥ್ಯ ಪರೀಕ್ಷೆಗೆ ಬರಗಾಲದಲ್ಲಿ ಒಂದು ವಾರದ ಅವಧಿಯಲ್ಲಿ ಮಳೆ ಬರಿಸುವ ಸಾಹಸಕ್ಕೆ ಮುಂದಾಗುತ್ತಾರೆ. ಅಂತಿಮವಾಗಿ ಮಳೆ ಬರಿಸುವಲ್ಲಿ ವಿಫಲರಾಗಿ ಹಿಂಸಾ ಮಾರ್ಗವನ್ನು ತುಳಿದು ಶಿವನ ಗಮನವನ್ನು ಸೆಳೆಯಲಾಗದೆ ಬಹುಪಾಲು ಬ್ರಾಹ್ಮಣರು ಪ್ರಾಣ ಕಳೆದುಕೊಳ್ಳುತ್ತಾರೆ. ಶಿವಭಕ್ತನಾಗಿದ್ದು ಮಳೆತರಿಸಲಾಗದೆ ಸೋಲನ್ನೊಪ್ಪಿಕೊಳ್ಳಬೇಕಾಗುತ್ತದೆ. ಇದಕ್ಕೆ ಪ್ರತಿಯಾಗಿ ಕಂಕಭಟ್ಟನಾದ ಬ್ರಾಹ್ಮಣ ಎರಡೇ ದಿನಗಳಲ್ಲಿ ವಿರಾಟನಿಗೂ ಆಶ್ಚರ್ಯವಾಗುವ ರೀತಿಯಲ್ಲಿ ಮಳೆ ತರಿಸಿ ಸಫಲನಾಗುತ್ತಾನೆ. ಅದೇ ರೀತಿ ಕೌರವನು ಸಹ ಮತ್ತೊಂದು ಅವಧಿಗೆ ಪಾಂಡವರನ್ನು ಕಾಡಿಗೆ ಕಳುಹಿಸಬೇಕು ಎಂಬ ಪ್ರಯತ್ನದಲ್ಲಿ ವಿಫಲನಾಗುತ್ತಾನೆ. ದುರ್ಯೋಧನನೂ ಸಹ ಕೃಷ್ಣನನ್ನು

ವಿರೋಧಿಸಿ ಯಶಸ್ಸನ್ನು ಗಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇಲ್ಲಿ ಬರುವ ಎಲ್ಲ ಕತೆಗಳಲ್ಲಿ ಶಿವಭಕ್ತರ ದಡ್ಡತನ, ಅಸಮರ್ಥತೆ, ಅಸಹಾಯಕತೆಗಳ ಸರಣಿಯನ್ನೇ ನೋಡುತ್ತೇವೆ. ಅಲ್ಲದೆ ಸ್ವತಃ ಶಿವನೂ ಸಹ ತನ್ನ ಭಕ್ತರನ್ನು ಕಾಪಾಡುವಲ್ಲಿ ವಿಫಲನಾಗಿ ತೀರಾ ದುರ್ಬಲನಾಗಿ ಕಂಡು ಬರುವ ಸನ್ನಿವೇಶಗಳು ಯಥೇಚ್ಛವಾಗಿವೆ. ಅಂತಿಮವಾಗಿ ಶಿವಪರವಾದ ನಿಲುವುಗಳಿಗೆ ನೆಲೆಯಿಲ್ಲದಾಗಿ ವಿಷ್ಣುಪರವಾದ ನಂಬಿಕೆಯಲ್ಲಿ ಅಪಾರವಾದ ಯಶಸ್ಸು, ಸುಖ, ಶಾಂತಿ, ನೆಮ್ಮದಿಗಳು ದೊರಕುವ ರೀತಿಯಲ್ಲಿ ಇಲ್ಲಿನ ಪುರಾಣಕತೆಗಳು ಅನಾವರಣಗೊಳ್ಳುತ್ತವೆ.

ಕರಗದ ಆಚರಣೆಯಲ್ಲಿಯೂ ಸಹ ಮಾತೃದೇವತಾ ಸ್ವರೂಪಿಯಾದ, ಶಕ್ತಿ ದೇವತೆಯಾದ ದ್ರೌಪದಿಯ ಆಚರಣೆಯಂತೆ ಮೂಡಿಬಂದರೂ, ಮಾತೃಶಕ್ತಿಯನ್ನು ನಿರಾಕರಿಸದೆ ಅದಕ್ಕೆ ಕೃಷ್ಣನ ರಕ್ಷಣೆಯುನ್ನೊದಗಿಸಿ ಪುರುಷ ಪರಾಕ್ರಮವನ್ನು ತೋರುವ ವೀರಕುಮಾರರು, ಪ್ರತಿಕ್ಷಣಕ್ಕೂ ಗೋವಿಂದನನ್ನೇ ನೆನೆಯುತ್ತಾರೆ. ಕರಗ ಹೊರುವ ವ್ಯಕ್ತಿಯೂ ಸಹ ಹೆಣ್ಣುರೂಪದ ಗಂಡು ಎಂಬುದನ್ನು ನೆನಪಿಡಬೇಕು. ಅಲ್ಲದೆ ಕರಗದ ಆಚರಣೆಯನ್ನು ಮಾಡುವ ತಿಗಳ ಜನಾಂಗದವರು ಯಲ್ಲಮ್ಮ ಕನ್ನೂರಮ್ಮ, ಮದ್ದೂರಮ್ಮ ಮುಂತಾದ ಮಾತೃದೇವತೆಗಳನ್ನು ಪೂಜಿಸುತ್ತಾರೆ. ಕರಗದ ಆಚರಣೆಯ ರೀತಿಯಲ್ಲಿ ಈ ದೇವಿಯರ ಆಚರಣೆಯನ್ನು ಮಾಡುವು ದಿಲ್ಲ. ಹೊಸಕೋಟೆಯಲ್ಲಿರುವುದು ದ್ರೌಪದಿ ದೇವಾಲಯ ಹಾಗೆಯೇ ಇಲ್ಲಿ ನಡೆಯುವುದು ದ್ರೌಪದಿ ಕರಗ. ಆದರೆ ದೇವಾಲಯವನ್ನು ಧರ್ಮರಾಯ ದ್ರೌಪದಿ ದೇವಸ್ಥಾನ ವೆಂತಲೂ ತಮ್ಮನ್ನು ಧರ್ಮರಾಯನ ವಕ್ಕಲಿನವರೆಂದೂ ಕರೆದುಕೊಳ್ಳು ತ್ತಾರೆ. ಇನ್ನುಳಿದ ಕಡೆ ಧರ್ಮರಾಜನ ಕರಗವನ್ನೇ ದ್ರೌಪದೀ ಆರಾಧನೆಯೆಂದು ನಡೆಸುತ್ತಾರೆ.

ಈ ಎಲ್ಲ ವಿವರಗಳಿಂದ ಸ್ಪಷ್ಟವಾಗುವುದೇನೆಂದರೆ ಸ್ತ್ರೀಶಕ್ತಿಯಾದ ದ್ರೌಪದಿ ಸತ್ಯನಿಷ್ಠನಾದ ಧರ್ಮರಾಜನ ಪತ್ನಿ ಎಂಬ ಮಹಾಭಾರತದ ಪುರಾಣ ಕತೆಯನ್ನು ಧಾರ್ಮಿಕವಾಗಿ ವೈಷ್ಣವ ಪಂಥದ ಮೇಲ್ಮೆಯನ್ನು ಸಮರ್ಥಿಸುವುದಕ್ಕೆ, ಮಾತೃ ಪ್ರಾಧಾನ್ಯತೆಯಿಂದ ಪುರುಷ ಪ್ರಾಧಾನ್ಯತೆಯನ್ನು ಸ್ಥಾಪಿಸುವ ನೆಲೆಯಲ್ಲಿ ಕರಗ ದಂತಹ ಆಚರಣೆಗಳನ್ನು ಅನುಷ್ಠಾನಗೊಳಿಸಿರಬೇಕೆಂದು ತೋರುತ್ತದೆ. ಇದಕ್ಕೆ ಪೂರಕವಾಗಿ ದ್ರಾವಿಡಮೂಲವಾದ ಬುಡಕಟ್ಟು ಜನಾಂಗಗಳಲ್ಲಿನ ಶಿವತತ್ತ್ವದ ಸ್ಥಾನದಲ್ಲಿ ವೈಷ್ಣವ ತತ್ವವನ್ನು ಪ್ರಚುರಪಡಿಸಿ ಧಾರ್ಮಿಕವಾಗಿ ಮತ್ತು ಸಾಮಾಜಿಕ ವಾಗಿ ಸಂಸ್ಕೃತೀಕರಣಗೊಳ್ಳುತ್ತಿದ್ದ ಸ್ಥಿತ್ಯಂತರದ ಸಂದರ್ಭಗಳಲ್ಲಿ ಈ ರೀತಿಯ ಪುರಾಣಗಳನ್ನು ಸೃಷ್ಟಿಸಿ ಬದಲಾದ ಸ್ವರೂಪದಲ್ಲಿ ಅಭಿಮಾನ ಮತ್ತು ನೆಮ್

ಯನ್ನು ತಾಳುವ ರೀತಿ ಕರಗದ ಆಚರಣೆ ಮತ್ತು ಅನುಸರಣೆಗಳು ಕಂಡು ಬರುತ್ತವೆ. ಏಕೆಂದರೆ ತಮಿಳುನಾಡಿನ ತಿಗಳರಲ್ಲಿ ಕರಗವು ಒಂದು ಧಾರ್ಮಿಕ ಆಚರಣೆಯಾಗಿ ಆಚರಣೆಯಾಗುವುದಿಲ್ಲ. ಕೇವಲ ಒಂದು ಜಾನಪದ ಕುಣಿತವಾಗಿ ಮಾತ್ರ ಕಂಡುಬರುತ್ತದೆ.

ಕರ್ನಾಟಕದ ತಿಗಳರು ಮೂಲತಃ ತಮಿಳುನಾಡಿನವರಾಗಿದ್ದು, ಚರಿತ್ರೆಯ ಬೇರೆ-ಬೇರೆ ಕಾಲಘಟ್ಟಗಳಲ್ಲಿ ಇಲ್ಲಿನ ಪ್ರದೇಶಗಳಲ್ಲಿ ಬಂದು ನೆಲಸಿದ ಜನಾಂಗವೆಂದು ಅನಂತ ಕೃಷ್ಣಯ್ಯರ್ ಬರೆದಿರುವ 'The Mysore Tribes and Castes' ಎಂಬ ಗ್ರಂಥಗಳಿಂದಲೂ ಮತ್ತು ಥರ್ಸ್ಟನ್ ಬರೆದಿರುವ ದಕ್ಷಿಣ ಭಾರತದ ಜಾತಿಗಳು ಮತ್ತು ಬುಡಕಟ್ಟುಗಳು ಎಂಬ ಗ್ರಂಥಗಳಿಂದ ತಿಳಿದುಬರುತ್ತದೆ. ಹಾಗೆಯೇ ಇತಿಹಾಸದಲ್ಲಿ ಮೂರನೇ ಕುಲೋತ್ತುಂಗ ಚೋಳನ ಕಾಲಘಟ್ಟದಲ್ಲಿ ತಮಿಳುನಾಡಿನಿಂದ ವೈಷ್ಣವರನ್ನು ಕರ್ನಾಟಕದ ಪ್ರಾಂತಗಳಿಗೆ ಪಲ್ಲಟಗೊಳಿಸಿದ ಚಾರಿತ್ರಿಕ ವಿವರಗಳೂ ದೊರೆಯುತ್ತವೆ. ಇಂತಹ ಸಂದರ್ಭದಲ್ಲಿ ಹೊಯ್ಸಳ ದೊರೆಗಳು ರಾಮಾನುಜಾಚಾರ್ಯರಿಗೆ ಆಶ್ರಯವನ್ನು ನೀಡಿ ವಿಷ್ಣುವರ್ಧನನಾಗಿ ಮಾರ್ಪಟ್ಟ ಬಿಟ್ಟಿದೇವನ ವಿಷಯವೂ ಇತಿಹಾಸ ದರ್ಶನದಿಂದ ಗೋಚರವಾಗುತ್ತದೆ. ಇಂತಹ ಸಂದರ್ಭದಲ್ಲಿ ಅನೇಕ ಕೆಳಜಾತಿಗಳು ವೈಷ್ಣವ ಧರ್ಮಾನುಯಾಯಿಗಳಾಗಿ ಮುಂದೆ ಬ್ರಾಹ್ಮಣರ ಮಡಿವಂತಿಕೆಯ ಕಾರಣ ತಮ್ಮ ತಮ್ಮ ಜಾತಿಗಳಲ್ಲಿಯೇ ಒಳಪಂಗಡಗಳಾಗಿ ಉಳಿದುದರ ಪರಿಣಾಮ ಇಂದು ಅನೇಕ ಕೆಳಜಾತಿಗಳಲ್ಲಿ ವಿಭೂತಿಯವರು ಮತ್ತು ನಾಮದವರು ಎಂದು ಪ್ರತ್ಯೇಕ ಗುಂಪುಗಳನ್ನು ಕಾಣುತ್ತೇವೆ. ಬಹುಶಃ ಈ ರೀತಿ ವಿಭಜನೆಗೊಳ್ಳಲು ಮತ ಪರಿವರ್ತನೆಯೇ ಕಾರಣವಾಗಿರಬೇಕು. ತಿಗಳ ಜನಾಂಗದಲ್ಲಿಯೂ ವಿಭೂತಿದಾರರು ಮತ್ತು ನಾಮಧಾರರೆಂದು ಎರಡು ಪಂಗಡಗಳಿವೆ.

ಕರಗದ ಆಚರಣೆಯಲ್ಲಿ ಕರಗ ಹೊರುವ ವ್ಯಕ್ತಿ ನಾಮದವರ ಗುಂಪು ಅಥವಾ ವೈಷ್ಣವರಾಗಿದ್ದರೆ ಇಲ್ಲಿನ ಪೋತರಾಜ ಮತ್ತು ವೀರಕುಮಾರರೆಲ್ಲ ವಿಭೂತಿದಾರರಾಗಿರುತ್ತಾರೆಂದು ಸಂದರ್ಶನದ ಸಂದರ್ಭದಲ್ಲಿ ವಕ್ತೃಗಳಿಂದ ತಿಳಿದುಬಂತು. ಅಂದರೆ ಕರಗದ ಆಚರಣೆ ಮತ್ತು ಅನುಸರಣೆಯನ್ನು ವೈಷ್ಣವರಾಗಿ ಪರಿವರ್ತಿತರಾದ ವರ್ಗವೊಂದು ತಮ್ಮನ್ನು ಸಂಸ್ಕೃತೀಕರಣಗೊಳಿಸಿಕೊಂಡ ಸಂಕ್ರಮಣಾವಸ್ಥೆಯಲ್ಲಿ ಅನುಷ್ಠಾನಗೊಳಿಸಿಕೊಂಡಿರಬೇಕು ಎಂಬ ವಿಷಯಕ್ಕೆ ಪುಷ್ಟಿಯನ್ನು ನೀಡುತ್ತದೆ. ಈ ರೀತಿಯಲ್ಲಿ ಒಂದು ಸಂಸ್ಕೃತಿಯಿಂದ ಮತ್ತೊಂದು ಸಂಸ್ಕೃತಿಗೆ ರೂಪಾಂತರಗೊಳ್ಳುವ ಹಂತದಲ್ಲಿ ಪುರಾಣಗಳನ್ನು ಸೃಷ್ಟಿ ಮಾಡಿ ಜನಪದರಲ್ಲಿ ಬಿತ್ತಿರುವ ಸಾಧ್ಯತೆಯಿದೆ. ಇಂತಹ ಆಚರಣೆಗಳನ್ನು ನಡೆಸುವ

ಜನಾಂಗ ತಮ್ಮ ಸ್ಥಳನೆಲೆಗಳನ್ನು ಮರೆಮಾಚಿ ಪುರಾಣ ನೆಲೆಗಳಲ್ಲಿ ತಮ್ಮನ್ನು
ಗುರುತಿಸಿಕೊಳ್ಳುತ್ತ, ತಮ್ಮ ಕುಲದ ಬಗ್ಗೆ ಹೆಮ್ಮೆ ತಾಳುವುದನ್ನು ಕಾಣುತ್ತೇವೆ
ಬಹುಶಃ ಈ ಕಾರಣದಿಂದಾಗಿ ತಿಗಳರು ತಮ್ಮನ್ನು ಪಾಂಡವ ವಂಶಸ್ಥರೆಂತಲೂ
ಕ್ಷತ್ರಿಯ ಕುಲದವರೆಂತಲೂ ಕರೆದುಕೊಳ್ಳುತ್ತಾರೆ. ಹೀಗೆ ಕರಗದ ಆಚರಣೆಯು
ಪುರಾಣ ಮೂಲ ಸಿದ್ಧಾಂತದ ಪರಿಧಿಯಲ್ಲಿ ವಿಶ್ಲೇಷಣೆಗೆ ಒಳಪಡುವ
ಅಂಶಗಳನ್ನು ಹೊರಚೆಲ್ಲುತ್ತದೆ. ಇದರ ಜೊತೆಗೆ ಸಾಂಸ್ಕೃತಿಕವಾಗಿ ಮತ್ತು
ಧಾರ್ಮಿಕವಾಗಿ ಪರಿವರ್ತನೆಗೊಳಪಡುವ ಜನಾಂಗಿಕ ನೆಲೆಯಲ್ಲಿಯೂ ಕರಗ
ಆಚರಣೆ ಪ್ರಮುಖವಾದ ಅಧ್ಯಯನಕ್ಕೊಳಗಾಗುತ್ತದೆ.

(ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ಕರಗವನ್ನು ಪರಿಶೀಲನೆಗಾಗಿ
ಬಳಸಿಕೊಳ್ಳಲಾಗಿದೆ).

ಅನುಬಂಧ

೧. ಪೋತರಾಜನ ಕಥೆ : ಶಿವಲಿಂಗರಾಜ ಮತ್ತು ಕಲ್ಯಾಣದೇವಿ ದಂಪತಿಗ
ಮಕ್ಕಳಿಲ್ಲದ ಕಾರಣ ಕೈಲಾಸಕ್ಕೆ ಬಂದು ಶಿವನನ್ನು ಪ್ರಾರ್ಥಿಸುತ್ತಾ
ಕೈಲಾಸದಲ್ಲಿ ವನವಿಹಾರಕ್ಕೆ ಹೊರಟಿದ್ದ ಈಶ್ವರ ಮತ್ತು ಪಾರ್ವತಿಯ
ಕಾಡಿನಲ್ಲಿ ಸಿಂಹಗಳು ಸರಸವಾಡುವುದನ್ನು ನೋಡಿ ಪರಮೇಶ್ವರ ತಾ
ಸಿಂಹರೂಪದಲ್ಲಿ ಸರಸವಾಡಲು ಬಯಸುತ್ತಾನೆ. ಪಾರ್ವತಿಗೆ ಇಷ್ಟವಿ
ದಿದ್ದರೂ ಒತ್ತಾಯಿಸಿ ಸರಸಕ್ಕೆ ಒಪ್ಪಿಸುತ್ತಾನೆ. ಹೆಣ್ಣುಸಿಂಹ ರೂಪ
ಪಾರ್ವತಿ ಸರಸವಾಡುವಾಗ ಪರಮೇಶ್ವರನಿಗೆ ಸಿಕ್ಕದೆ ತಪ್ಪಿಸಿಕೊಂ
ತಿರುಗುತ್ತಿರುವಾಗ ಮೋಹಿತನಾದ ಈಶ್ವರ ಕಾಮಾತುರನಾಗಿ ವೀರ್ಯ
ಶಿಲಾದ ಮೇಲೆ ಬೀಳಿಸುತ್ತಾನೆ ಅಲ್ಲಿಯೇ ಗಂಡುಮಗುವಿನ ಸೃಷ್ಟಿಯಾ
ತ್ತದೆ. ಈ ವಿಷಯ ತಿಳಿದ ಪಾರ್ವತಿ ಗಾಬರಿಯಾಗುತ್ತಾಳೆ. ಮುಂದೆ ಆ
ಮಗುವನ್ನು ರಾಜದಂಪತಿಗಳಾದ ಶಿವಲಿಂಗರಾಜ ಮತ್ತು ಕಲ್ಯಾ
ದೇವಿಯರಿಗೆ ಕೊಡುತ್ತಾರೆ. ಜೊತೆಗೆ ಕಲ್ಯಾಣದೇವಿ ಅಪೇಕ್ಷೆಯ
ಹೆಣ್ಣುಮಗುವನ್ನು ಸೃಷ್ಟಿಸಿಕೊಡುತ್ತಾರೆ. ಮುಂದೆ ಬೆಳೆದು ದೊಡ್ಡವ
ಈ ಮಕ್ಕಳಿಗೆ ಗಂಡುಮಗು ಸಿಂಹಸ್ವರೂಪದಲ್ಲಿದ್ದು ಮೇಕೆಗಳ ಜೊ
ತೋರುತ್ತಿದ್ದರೇನಾದರೆ ಮೇಕೆಗಳ ರಾಜನಂತೆ ಕಂಡುಬಂದಿದ್ದರಿಂದ 'ಪೋ
ರಾಜ'ನೆಂದು, ಹೆಣ್ಣುಮಗು ಸುಂದರವಾಗಿದ್ದರಿಂದ 'ಮುದ್ದಮ್ಮ'ನೆಂ
ನಾಮಕರಣ ಮಾಡುತ್ತಾರೆ.

ಪ್ರೌಢಾವಸ್ಥೆಗೆ ಬಂದ ಮಗನಿಗೆ ಶಿವಲಿಂಗರಾಜ ಅವನ ಅಪೇಕ್ಷೆ
ವಾಸಿಸುತ್ತಿದ್ದ ಕಂಚುಕೋಟೆಯನ್ನು ನಿರ್ಮಿಸುತ್ತಾನೆ. ಈ ಕೋಟೆಯು

ಪೋತರಾಜ ಮಹಾನ್ ಸರ್ವಾಧಿಕಾರಿಯಾಗಿ ರಾಜ್ಯವಾಳುತ್ತಾನೆ. ತನ್ನ ರಾಜ್ಯದಲ್ಲಿ ಸಮಸ್ತರೂ ಅವನ ವಂಶವನ್ನೇ ಹೊಗಳಬೇಕು, ಹರ-ಹರಾ, ಶಿವ-ಶಿವಾ ಎನ್ನಬೇಕು. ಇದಕ್ಕೆ ತಪ್ಪಿ ನಾರಾಯಣನ ನಾಮಸ್ಮರಣೆ ಮಾಡಿದರೆ ನಾಲಿಗೆಯನ್ನು ಕೊಯ್ಯಲಾಗುತ್ತದೆಯೆಂದು ಕಟ್ಟಾಜ್ಞೆ ಮಾಡುತ್ತಾನೆ. ಈ ಮಧ್ಯೆ ಪೋತರಾಜನಿಗೆ ತಿಳಿಸದೆ [illegible] ಮೇಲೆ ಶಿವಪಾರ್ವತಿಯರು ವನವಿಹಾರ [illegible] ಸುಸ್ತಿಯಾಗಿ [illegible] ತಿರದ ಪೋತರಾಜ [illegible] ಸಮೇತ ಕೈಲಾಸಕ್ಕೆ ಬರುತ್ತಾನೆ [illegible] ಶಿಕ್ಷಿಸಲು ಪೋತರಾಜ [illegible] ಶಿವ ಪಾರ್ವತಿಯರು ಮಾಯವಾಗಿ ತಪ್ಪಿಸಿಕೊಳ್ಳುತ್ತಾರೆ.

ಆಗ ಪೋತರಾಜ ಶಿವಪೂಜೆಯ ಪೆಟ್ಟಿಗೆಯನ್ನು ತೆಗೆದುಕೊಳ್ಳಲು ಅದರ ಮೇಲಿದ್ದ ಸರ್ಪವನ್ನು ತೆಗೆದೆಸೆಯಲು ಹೋದಾಗ ನಾಗಸರ್ಪ ಪ್ರತಿಭಟಿಸುತ್ತದೆ. ಪೋತರಾಜ ತನ್ನ ಆಯುಧವಾದ ಕೊಡಲಿಯಿಂದ ಅದನ್ನು ಎರಡು ಭಾಗಗಿಸುತ್ತಾನೆ. ರುಂಡ - ಮುಂಡಗಳು ಬೇರೆ ಬೇರೆಯಾದ ಸರ್ಪ ಕಳ್ಳತನ ಮತ್ತೆ ರುಂಡ-ಮುಂಡಗಳನ್ನು ಸೇರಿಸಿ ಬದುಕಿಸಿದರೆ ನಿನಗೆ ಸಹಾಯಕನಾಗುತ್ತೇನೆಂದು ಕೇಳಿಕೊಂಡಿದ್ದರಿಂದ ಮತ್ತು ನಾನು ಶಿವನ ಸೇವೆ ಮಾಡಿಕೊಂಡಿದ್ದೇನೆ ನನ್ನನ್ನು ಕಾಪಾಡದ ಶಿವನ ಸಹವಾಸವನ್ನು ತೊರೆಯುತ್ತೇನೆಂದು ಹೇಳಿದ್ದರಿಂದ ಸರ್ಪದ ರುಂಡ-ಮುಂಡಗಳನ್ನು ಸೇರಿಸುತ್ತಾನೆ. ಆಗ ಸರ್ಪ ಬದುಕಿಕೊಳ್ಳುತ್ತದೆ. ಪೋತರಾಜ ಸರ್ಪದ ತಲೆಯನ್ನು ಹಿಡಿದು ಭುಜದ ಮೇಲೆ ಹಾಕಿಕೊಂಡಾಗ ಸರ್ಪದ ಬಾಲ ಪಾದಗಳವರೆಗೆ ಸ್ಪರ್ಶಿಸುತ್ತಾ ಸೇರಿದಾಗ ಪೋತರಾಜನ ಸಿಟ್ಟು ಮಾಯವಾಗಿ ಶಾಂತನಾಗುತ್ತಾನೆ. ಇದರಿಂದ ಅವನಿಗೆ ಆನಂದವಾಗುತ್ತದೆ. ಮುಂದೆ ನನಗೆ ಕೋಪ ಬಂದಾಗ ನನ್ನ ಸಹಾಯಕ್ಕಿರುವಂತೆ ತನ್ನ ಜೊತೆಯಲ್ಲಿಯೇ ಸರ್ಪವನ್ನು ಇಟ್ಟುಕೊಳ್ಳುತ್ತಾನೆ. ಶಿವಪೂಜಾ ಪೆಟ್ಟಿಗೆಯನ್ನು ಭೂಲೋಕಕ್ಕೆ ತಂದು ಪೂಜಾವಿಧಿಗಳನ್ನು ನಡೆಸುತ್ತಾನೆ.

ಈ ಕಡೆ ಕೈಲಾಸದಲ್ಲಿ ಶಿವನಿಗೆ ಮೂರು ದಿನಗಳಿಂದ ಸ್ನಾನವಿಲ್ಲದೆ, ಪೂಜೆಯಿಲ್ಲದೆ ದಿಕ್ಕು ಕಾಣದವನಂತಾಗಿ ನಾರದನ ಸಹಾಯವನ್ನು ಯಾಚಿಸುತ್ತಾನೆ. ನನ್ನ ಮಗ ಶಿವಪೂಜಾ ಪೆಟ್ಟಿಗೆಯನ್ನು ಕೊಂಡೊಯ್ದಿದ್ದಾನೆ, ದಯಮಾಡಿ ದೊರಕಿಸಿಕೊಡು ಎಂದು. ನಾರಾಯಣನ ಸ್ಮರಣೆ ಮಾಡಿದರೆ ನಾಲಿಗೆ ಕೊಯ್ಯುವ ಪೋತರಾಜನಲ್ಲಿಗೆ ನಾನೇಗೆ ಹೋಗಲಿ? ನನ್ನ ನಾಲಿಗೆಯಿಂದ ನಾರಾಯಣ ಎಂಬ ನಾಮವನ್ನು ಬಿಟ್ಟರೆ ಏನೂ ಬರುವುದಿಲ್ಲವೆಂದು ಕೊನೆಗೆ ಆಲೋಚಿಸಿ ಕೃಷ್ಣನ ತಂತ್ರದಿಂದ ನಾರದ 'ನಾರಾಯಣ' ಎಂದರೆ ಪೋತರಾಜನಿಗೆ 'ಹರ-ಹರಾ, ಶಿವ-ಶಿವಾ' ಎಂದು ಕೇಳಿಸುವಂತೆ ವ್ಯವಸ್ಥೆ ಮಾಡಿ

ಶಿವಲಿಂಗರಾಜ ಪಟ್ಟಣಕ್ಕೆ ಬರುತ್ತಾನೆ. ನಾರದನ ಬಾಯಿಂದ ಶಿವನಾಮಸ್ಮರಣೆ
ಯನ್ನು ಕೇಳಿದ ಪೋತರಾಜ ಸಂತೋಷಪಟ್ಟು ಶಿವಪೂಜಾ ಪೆಟ್ಟಿಗೆಯ ಅರ್ಧ
ಭಾಗವನ್ನು ಮಾತ್ರ ಕೊಡುತ್ತಾನೆ. ಇದನ್ನು ನಾರದ ಕೈಲಾಸಕ್ಕೆ ತಂದು ಶಿವನಿಗೆ
ಒಪ್ಪಿಸುತ್ತಾನೆ. ಏಕೆ ಅರ್ಧ ಪೆಟ್ಟಿಗೆ ತಂದಿರುವೆಯೆಂದು ಕೇಳಿದ್ದಕ್ಕೆ ನಿನ್ನ ಮಗನಾದ
ಪೋತರಾಜ ಪೆಟ್ಟಿಗೆಯಲ್ಲಿ ತಾನು ಅರ್ಧ ಭಾಗವನ್ನಿಟ್ಟುಕೊಂಡು ನಿನಗೆ ಅರ್ಧ
ಭಾಗವನ್ನು ಕೊಟ್ಟಿರುವನೆಂಬುದಾಗಿ ತಿಳಿಸುತ್ತಾನೆ.

ದಕ್ಷಿಣ ಅರಣ್ಯದಲ್ಲಿ ವನವಾಸಮಾಡುತ್ತಿದ್ದ ಪಾಂಡವರ ಬಳಿ ಕೃಷ್ಣ ಬಂದು
ಪಕ್ಕದ ಶಿವಲಿಂಗ ಪಟ್ಟಣದಲ್ಲಿ ಪೋತಾರಾಜನೆಂಬ ಮಹಾ ಶಕ್ತಿಶಾಲಿ ಒಂ
ಸಿಂಹಗಳ ಬಲವುಳ್ಳವನು ಅವನ ರಾಜ್ಯಕ್ಕೆ ಯಾರೂ ಪ್ರವೇಶಿಸಬೇಡಿ ಎಂದು
ಎಚ್ಚರಿಕೆ ಕೊಟ್ಟಿದ್ದರೂ ಭೀಮ ತನಗಿಂತಲೂ ಶಕ್ತಿಶಾಲಿಯಾಗಿರುವ ಪೋತರಾಜ
ನನ್ನು ನೋಡಿಬರಲು ಧರ್ಮರಾಜನ ಅನುಮತಿ ಪಡೆದು ಸೌದೆ ಮಾರುವ ವ್ಯಕ್ತಿಯ
ವೇಷದಲ್ಲಿ ಶಿವಲಿಂಗರಾಜಪಟ್ಟಣಕ್ಕೆ ಹೋಗುತ್ತಾನೆ ಕಂಚುಕೋಟೆಯನ್ನೆಲ್ಲ ಸುತ್ತಿ
ಆಯಾಸವಾಗಿ ಸೌದೆ ಹೊರೆಯಿಂದ ಕೋಟೆಗೆ ತಾಗಿಸಿದಾಗ ಕೋಟೆಯು ಸೀಳು
ತ್ತದೆ. ಇದನ್ನು ನೋಡಿದ ಭಟರು ರಾಜನಿಗೆ ತಿಳಿಸಿ ವೇಷಧಾರಿಯಾಗಿದ್ದ
ಭೀಮನನ್ನು ಬಂಧಿಸಿ ಸೆರೆಯಲ್ಲಿಡುತ್ತಾರೆ. ಕೃಷ್ಣನ ಎಚ್ಚರಿಕೆಯನ್ನು ಲೆಕ್ಕಿಸ
ಹೋದ ಭೀಮ ಬಾರದ ಕಾರಣ ಧರ್ಮರಾಯ ಶ್ರೀಕೃಷ್ಣನನ್ನು ಸ್ಮರಿಸಿ ವಿಷಯ
ತಿಳಿಸುತ್ತಾನೆ. ಕೃಷ್ಣ ಆ ಕ್ಷಣದಲ್ಲಿ ಅಸಮಾಧಾನಪಟ್ಟರೂ ಮರುಕ್ಷಣದಲ್ಲಿಯೆ
ಭೀಮನನ್ನು ಬಿಡಿಸಿಕೊಂಡು ಬರಲು ಅರ್ಜುನನ ಜೊತೆ ಅತ್ತೆ-ಸೊಸೆಯರಾ
ದೊಂಬರ ವೇಷ ಧರಿಸಿ ಪೋತರಾಜನ ಪಟ್ಟಣಕ್ಕೆ ಬಂದು ಭೀಮನನ್ನು ಪ
ಮಾಡುತ್ತಾನೆ. ಸುಂದರವಾದ ಹೆಣ್ಣನ್ನು ನೋಡಿ ಮೋಹಿತನಾಗುವ, ಕಾಮಾಂ
ನಾಗುವ ಪೋತರಾಜನ ದೌರ್ಬಲ್ಯದಿಂದಾಗಿ ಅವನನ್ನು ಎರಡು ಬಾರಿ ಹೆಣ್
ವೇಷ ಧರಿಸಿದ್ದ ಅರ್ಜುನ ಕಾಡಿಗೆ ಕರೆದು ಶಿಕ್ಷಿಸುತ್ತಾನೆ. ಮೋಹಿತನಾ
ಪೋತರಾಜ ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತಾನೆ. ದೊಂಬರ (ಕೃಷ್ಣ ಮತ
ಅರ್ಜುನ) ಮೋಸಕ್ಕೆ ಗುರಿಯಾದ ಪೋತರಾಜ ದೊಂಬರಿಗೆ ತನ್ನ ರಾಜ್ಯದ
ಪ್ರವೇಶ ಇಲ್ಲವೆಂದು ರಾಜಾಜ್ಞೆ ಮಾಡುತ್ತಾನೆ.

ಭೀಮನನ್ನು ಬಿಡಿಸುವ ಕೊನೆಯ ಪ್ರಯತ್ನದಲ್ಲಿ ಕೃಷ್ಣ - ಅರ್ಜು
ನಕುಲ, ಸಹದೇವರು ದೇವಲೋಕದ ದೊಂಬರ ವೇಷ ತಾಳಿ ಊರ ಹೊ
ಬಿಡಾರ ಹಾಕಿ, ಪೋತರಾಜನನ್ನು ನಂಬಿಸಿ ದೊಂಬರ ಆಟವಾಡಲು ಅನುಮ
ಪಡೆದು, ಶಿವಲಿಂಗರಾಜ ಪಟ್ಟಣದಲ್ಲಿ ದೊಂಬರಾಟವಾಡುವ ನೆಪದಲ್ಲಿ ಮಂ
ಊದಿ ಎರಚಿ ಪ್ರಜ್ಞೆತಪ್ಪಿಸಿ, ಉಪಾಯದಿಂದ ಭೀಮನನ್ನು ಬಿಡಿಸಿಕೊಂ

ಪೋತರಾಜನ ತಂಗಿ ಮುದ್ದಮ್ಮನನ್ನು ಹೊತ್ತುಕೊಂಡು ಕಾಡಿಗೆ ಬರುತ್ತಾರೆ. ವಿಷಯ ತಿಳಿದ ಧರ್ಮರಾಯ ಆಕ್ಷೇಪಿಸುತ್ತಾನೆ. ಆದರೂ ಕೃಷ್ಣ ಉಪಾಯದಿಂದ ಮುದ್ದಮ್ಮ ನನ್ನು ಧರ್ಮರಾಜನಿಗೆ ಮದುವೆ ಮಾಡಿಸುತ್ತಾನೆ. ಈ ಕಡೆ ಎಚ್ಚರವಾದ ಪೋತರಾಜ ಮನೆಯಲ್ಲಿ ತಂಗಿಯಿಲ್ಲದ್ದನ್ನು ಕಂಡು ಮೂರು ಲೋಕಗಳಲ್ಲಿ ಎಲ್ಲಿದ್ದರೂ ಕರೆತರುವೆನೆಂದು ಹೊರಡುತ್ತಾನೆ. ಮಾರ್ಗ ಮಧ್ಯದಲ್ಲಿ ನಾರದನು ಎದುರಾಗುತ್ತಾನೆ. ಲೋಕದ ವಿಷಯವೆಲ್ಲ ನಾರದನಿಗೆ ತಿಳಿದಿರುತ್ತದೆಂದು ತನ್ನ ತಂಗಿಯನ್ನು ಯಾರೋ ಕದ್ದೊಯ್ದಿರುವ ವಿಷಯವನ್ನು ತಿಳಿಸಿ ನಿನಗೇನಾದರೂ ಗೊತ್ತೆ ಎಂದು ಕೇಳುತ್ತಾನೆ. ಅದಕ್ಕೆ ನಾರದ ನಿನ್ನ ತಂಗಿ ಯಾರೆಂಬುದೇ ನನಗೆ ತಿಳಿದಿಲ್ಲ. ಆದರೆ ಈ ಅರಣ್ಯದಲ್ಲಿ ಧರ್ಮರಾಜನೆಂಬುವನಿಗೆ ಈ ದಿನ ಮದುವೆ ಯಾಯಿತು. ನಾನು ಅಲ್ಲಿಂದಲೇ ಊಟ ಮುಗಿಸಿ ಬರುತ್ತಿದ್ದೇನೆ. ಆ ಹುಡುಗಿ ನಿನ್ನ ತಂಗಿಯೋ ಏನೋ ತಿಳಿಯದೆಂದು ಹೇಳಿ ಮುಂದೆ ಹೋಗುತ್ತಾನೆ. ಪೋತರಾಜ ನಾರದನ ಮಾತಿನಲ್ಲಿ ಸಂಶಯ ತಾಳಿ ಅರಣ್ಯದ ಕಡೆ ಬಂದು ಅಲ್ಲೊಂದು ಅಶ್ವತ್ಥವೃಕ್ಷದ ಕೆಳಗೆ ಕೂರುತ್ತಾನೆ. ಮದುವೆ ಮಾಡಿಕೊಂಡಿದ್ದ ಧರ್ಮರಾಯ ಎಲ್ಲರಿಗೂ ದಾನಧರ್ಮಗಳನ್ನು ಮಾಡುತ್ತಿದ್ದ. ದೂರದಲ್ಲಿ ಅರಳೀ ಮರದ ಕೆಳಗಡೆ ಕುಳಿತಿದ್ದ ವ್ಯಕ್ತಿಯನ್ನು ಕರೆಯಲು ಭೀಮನಿಗೆ ಸೂಚಿಸುತ್ತಾನೆ. ಭೀಮ ದೂರದಿಂದ ಪೋತರಾಜನನ್ನು ಕಂಡು ಹೆದರಿ ವಾಪಸ್ಸಾದಾಗ ಸ್ವತಃ ಕೃಷ್ಣ ವೇಷಧಾರಿಯಾಗಿ ಪೋತರಾಜನನ್ನು ಧರ್ಮರಾಜನ ಧರ್ಮ ಸ್ವೀಕರಿಸಲು ಒಪ್ಪಿಸಿ ಕರೆತರುತ್ತಾನೆ. ಧರ್ಮರಾಯ ಏನು ಬೇಕಾದರೂ ದಾನ ಕೊಡುವನೆಂಬ ಸೂಕ್ಷ್ಮವನ್ನು ತಿಳಿದ ಪೋತರಾಜ ನಾನು ಕೇಳಿದ್ದನ್ನು ಕೊಡುವಂತೆ ಬೇಡಿಕೆ ಯನ್ನಿಡುತ್ತಾನೆ. ಪೋತರಾಜನ ಕೋರಿಕೆಯೇನು ಎಂದು ತಿಳಿಯಲು ಪೋತ ರಾಜನನ್ನು ಕೇಳಿದಾಗ ಳಿಳಿ ಕಾಲಿನ ಪ್ರಾಣಿಯನ್ನು ಕೊಡುವಂತೆ ಕೇಳುತ್ತಾನೆ. (ತೆಲುಗಿನಲ್ಲಿ ನಲಪೈನಾಲ್ಗು ಎಂದರೆ ಳಿಳಿ, ಆದರೆ ಅದನ್ನೆ ಪದವಿಭಾಗ ಮಾಡಿದರೆ ನಲುಪು - ಎಂದರೆ ಕರಿಬಣ್ಣ, ನಾಲ್ಕು ಎಂದರೆ ನಾಲ್ಕು). ಈ ಒಗಟನ್ನು ತಿಳಿಯಲಾಗದ ಧರ್ಮರಾಜ ಕೃಷ್ಣನನ್ನು ಸ್ಮರಿಸಿದಾಗ ಒಗಟಿನ ಅರ್ಥ ತಿಳಿಯುತ್ತದೆ. ನಾಲ್ಕು ಕಾಲಿನ ಕರಿ ಹೋತವು ಬಲಿಚಕ್ರವರ್ತಿ ಪಟ್ಟಣದಲ್ಲಿದೆ. ಅದನ್ನು ತರುವಂತೆ ಭೀಮನಿಗೆ ತಿಳಿಸೆಂದು ಕೃಷ್ಣ ಸೂಚಿಸುತ್ತಾನೆ. ಅದರಂತೆ ಭೀಮನು ಕರಿಯ ಬಣ್ಣದ ಹೋತವನ್ನು ತರುತ್ತಾನೆ. ಅದನ್ನು ಮತ್ತು ಅನ್ನದ ರಾಶಿಯನ್ನು ತಿನ್ನಲು ಧರ್ಮರಾಯ ಪೋತರಾಜನಿಗೆ ತಿಳಿಸುತ್ತಾನೆ. ಬದುಕಿರುವ ಮೇಕೆಯನ್ನು ಯಾರು ತಿನ್ನುವರು? ಅದು ಸತ್ತರೆ ತಿನ್ನುತ್ತೇನೆ, ಎನ್ನುವನು. ಅದಕ್ಕೆ ಧರ್ಮರಾಜ ಭೀಮನಿಗೆ ತಿಳಿಸುತ್ತಾನೆ. ಅದನ್ನು ಕತ್ತಿಯಿಂದ ಕತ್ತರಿಸಿ ಸಾಯಿಸಿ ಬಿಡೆಂದು ಸೂಚಿಸುತ್ತಾನೆ, ಆದರೆ ಪೋತರಾಜ ಅವಕೆನ್ನುವ

ವಿಲ್ಲ. ಮೇಕೆಯು ಹೇಗಿದೆಯೋ ಹಾಗೆಯೇ ಸಾಯಬೇಕು. ಅದನ್ನು ಕತ್ತರಿಸಬಾರದು ಎಂದು ತಿಳಿಸುತ್ತಾನೆ. ಧರ್ಮರಾಯನಿಗೆ ಕಿಸಿವಿಸಿಯಾಗಿ ಒಳಗಿದ್ದ ಮುದ್ದಮ್ಮ (ದ್ರೌಪದಿ) ನಿಂದ ತೀರ್ಥವನ್ನು ತಂದು ಮೇಕೆ ಮೇಲೆ ಚಿಮುಕಿಸುತ್ತಾನೆ. ಮೇಕವು ಸಾಯುತ್ತದೆ. ಆಗ ಧರ್ಮರಾಯ ತೆಗೆದುಕೋ ಈಗ ಊಟ ಮಾಡು ಎಂದು ಪೋತರಾಜನಿಗೆ ತಿಳಿಸುತ್ತಾನೆ. ಅದಕ್ಕವನು ಸತ್ತ ಹೋತವನ್ನು ಯಾರು ತಿನ್ನುವರು, ಅದು ಬದುಕಿದರೆ ತಿನ್ನುವೆನೆಂದು ಹೇಳುವನು. ಧರ್ಮರಾಯ ಮತ್ತೊಮ್ಮೆ ಕಸಿವಿಸಿಗೊಳಗಾಗುತ್ತಾನೆ. ಸತ್ತ ಹೋತ ವನ್ನು ಹೇಗೆ ಬದುಕಿಸುವುದು ಎಂದು ಮತ್ತೊಮ್ಮೆ ಒಳಗಿದ್ದ ಮುದ್ದಮ್ಮನಿಂದ ತೀರ್ಥವನ್ನು ತಂದು ಹೋತದ ಮೇಲೆ ಚಿಮುಕಿಸಿದಾಗ ಹೋತ ಬದುಕುವುದು. ಇದರಿಂದ ಪೋತರಾಜ ತನ್ನ ತಂಗಿ ಇವರ ಮನೆಯಲ್ಲಿಯೇ ಇರುವಳೆಂದು ಕೋಪದಿಂದ ಹೋತದ ಕುತ್ತಿಗೆಯನ್ನು ಕಚ್ಚಿ ರಕ್ತವನ್ನು ಹೀರಿ ಕುಡಿದು ಅನ್ನದ ಮುದ್ದೆಗಳನ್ನು ರಾಕ್ಷಸನ ರೀತಿ ತಿನ್ನುವನು. ತನ್ನ ತಂಗಿಯನ್ನು ತೋರಿಸಿ ಎಂದು ಕಿರುಚುವನು. ಆಗ ಕೃಷ್ಣ ದ್ರೌಪದಿ (ಮುದ್ದಮ್ಮ)ಯ ಕೊರಳಲ್ಲಿದ್ದ ತಾಳಿಯನ್ನು ಹೊರಸೂಸುವಂತೆ ಮಾಡಿ ಪೋತರಾಜನನ್ನು ಎದುರುಗೊಳ್ಳುವಂತೆ ಮಾಡುತ್ತಾನೆ. ತಾಳಿಯನ್ನು ನೋಡಿದ ಪೋತರಾಜ ಇವರು ನಿನ್ನನ್ನು ಕದ್ದುತಂದು ಮದುವೆ ಮಾಡಿಕೊಂಡಿದ್ದಾರೆ. ತಾಳಿಯನ್ನು ಕಿತ್ತೆಸೆದು ಬಾ, ಹೋಗೋಣ ಶಿವಲಿಂಗರಾಜ ಪಟ್ಟಣಕ್ಕೆ ಎಂದು ಕರೆಯುತ್ತಾನೆ. ಅದಕ್ಕೆ ಮುದ್ದಮ್ಮ ನೀನು ಶಿವಭಕ್ತನಾಗಿದ್ದು ಈ ರೀತಿ ರಕ್ತಮಾಂಸಗಳನ್ನು ಮೈಮೇಲೆಲ್ಲ ಎರಚಿಕೊಂಡು ಮಲಿನವಾಗಿರುವೆ. ನಿನ್ನ ಶಿವಾಚಾರವೇನಾಯಿತು. ನೀನು ಈ ರೀತಿ ಮಾಡುವುದು ಸರಿಯೆ? ಎಂದು ಪ್ರಶ್ನಿಸಿ ತಾನು ಬರುವುದಿಲ್ಲವೆಂದು ನಿರಾಕರಿಸುತ್ತಾಳೆ. ಆಗ ಪೋತರಾಜ ತನ್ನ ಶಿವಾಚಾರ ಹೋದುದಕ್ಕಾಗಿ ಪಶ್ಚಾತ್ತಾಪಪಡುತ್ತಾನೆ. ಕೃಷ್ಣ ಮುಂದೆ ಬಂದು ಇನ್ನು ನೀನು ಶಿವಲಿಂಗಪಟ್ಟಣಕ್ಕೆ ಹೋಗುವುದು ಸಾಧ್ಯವಿಲ್ಲ. ಇಲ್ಲಿಯೇ ಇದ್ದುಬಿಡೆಂದು ಸೂಚಿಸುವನು. ಅದಕ್ಕೆ ಪೋತರಾಜ ಇಲ್ಲಿಂದ ನನ್ನ ಪಟ್ಟಣಕ್ಕೆ ಬರುತ್ತಿದ್ದ ದೊಂಬರ ಹುಡುಗಿಯನ್ನು ಕೊಟ್ಟು ಮದುವೆ ಮಾಡಿದರೆ ನಾನು ಇಲ್ಲಿಯೇ ಇರಲು ಸಿದ್ಧನಿದ್ದೇನೆಂದು ತಿಳಿಸುವನು. ವಿಷಯ ತಿಳಿಯದ ಧರ್ಮರಾಯ ಕೃಷ್ಣನನ್ನು ಕೇಳಲು ಕೃಷ್ಣ ಸಮುದ್ರದಲ್ಲಿದ್ದ 'ಸಂಗೋಪಮ್ಮ' ಎಂಬ ಹುಡುಗಿಯನ್ನು ತಂದು ಮದುವೆ ಮಾಡಿಸುವಂತೆ ಹೇಳುವನು. ಈ ಹುಡುಗಿ ಬಗ್ಗೆ ತಿಳಿಯದ ಧರ್ಮರಾಯ ಕೃಷ್ಣನನ್ನು ಕೇಳುತ್ತಾನೆ. ಅದಕ್ಕೆ ಕೃಷ್ಣ ಇವಳು ನಿನ್ನ ತಂಗಿ. ನಿನಗೆ ತಂದೆಯಾಗಿದ್ದ ಪಾಂಡುರಾಜ ಮತ್ತು ತಾಯಿ ಮಾದ್ರಿಯರು ಕಾಡಿನಲ್ಲಿ ಸರಸವಾಡುತ್ತಿದ್ದ ಜಿಂಕೆಗಳಲ್ಲಿ ಗಂಡು ಜಿಂಕೆಯನ್ನು ಕೊಂದಿದ್ದ ಕಾರಣ ಹೆಣ್ಣುಜಿಂಕೆಯ ಶಾಪದ ಕಾರಣ ನಿನ್ನ ತಂದೆ–ತಾಯಿಯರು ಸರಸವಾಡುವಾಗ ಪಾಂಡುರಾಜ ಸಾಯುತ್ತಾನೆ.

ಗರ್ಭಿಣಿಯಾದ ಮಾದ್ರಿ ಅಗ್ನಿಪ್ರವೇಶ ಮಾಡುವ ವೇಳೆಯಲ್ಲಿ ೫ ತಿಂಗಳ ಮಗುವು ಅವಳ ಹೊಟ್ಟೆಯಲ್ಲಿದೆ ಅದನ್ನು ಉಳಿಸುವಂತೆ ಅಗ್ನಿಭವಾನಿಯನ್ನು ಕೇಳಿಕೊಂಡಿದ್ದರಿಂದ ಮಾದ್ರಿಯ ಗರ್ಭದಿಂದ ಶಂಖದ ಸಹಾಯದಿಂದ ಹೆಣ್ಣು ಪಿಂಡವನ್ನು ಯಥಾವತ್ತಾಗಿ ತೆಗೆದುಕೊಂಡು ಸಮುದ್ರದಲ್ಲಿ ಬೆಳೆಸಿದೆನು. ಆದುದರಿಂದ ಅವಳು ಸಂಗೋಪಮ್ಮ ನಿನ್ನ ತಂಗಿಯಾಗಿರುವಳೆಂದು ತಿಳಿಸುತ್ತಾನೆ. ಆಗ ಧರ್ಮರಾಯ ನನ್ನ ತಂಗಿಯನ್ನು ಈ ರಾಕ್ಷಸನಿಗೆ ಕೊಡಲಾರೆನೆಂದು ತಿಳಿಸುವನು. ಆದಕ್ಕೆ ಶ್ರೀ ಕೃಷ್ಣ ಅವನ ತಂಗಿಯನ್ನು ನೀನು ಮದುವೆಯಾಗಿರುವೆ, ನಿನ್ನ ತಂಗಿಯನ್ನು ಅವನಿಗೆ ಕೊಟ್ಟು ಮದುವೆ ಮಾಡಿದರೆ ಏನಾಗುತ್ತದೆ ಹೇಳು, ಎಂದು ಧರ್ಮರಾಜನಿಗೆ ಒಪ್ಪಿಸಿ ಪೋತರಾಜನೊಂದಿಗೆ ಸಂಗೋಪಮ್ಮನ ಮದುವೆ ಮಾಡಿಸಿ ಅವನಿಗೆ ಒಂದು ರಾಜ್ಯವನ್ನು ಕೊಟ್ಟು ಸುಖವಾಗಿ ಸಂಸಾರ ಮಾಡುವಂತೆ ಏರ್ಪಾಟು ಮಾಡುತ್ತಾನೆ.

***

ಕ್ರೀಡೆ, ಸಂಸ್ಕೃತಿ ಮತ್ತು ಸಮಾಜ

ಡಾ|| ಸುಂದರರಾವ ಅ

ಕ್ರೀಡೆ ಇಲ್ಲದ ಯಾವುದೇ ಭೂಪ್ರದೇಶವಾಗಲಿ, ಜನಾಂಗವಾಗಲಿ ನ
ಕಾಣಲು ಸಾಧ್ಯವಿಲ್ಲ. ಕಾರಣ, ಕ್ರೀಡೆ ಬರೀ ಆಟೋಟಗಳನ್ನೊಳಗೊಂಡ ಕ್ರಿ
ಯಂತೆ ಕಾಣುವುದಾದರೂ ಅದೊಂದು ಸಂಸ್ಕೃತಿ. ಮಾನವೀಯ ಸಂಬಂಧಗಳ
ಬಲಪಡಿಸುವ ಮತ್ತು ನಮ್ಮ ಮನೋಪ್ರವೃತ್ತಿಗೆ ನೀಡುವಂತಹ ಪ್ರಕ್ರಿಯೆ.
ಒಬ್ಬ ವ್ಯಕ್ತಿಯು ಭಾಗವಹಿಸುವುದರ ಮೂಲಕ ಪಡೆಯಬಹುದಾಗಿದೆ.

ಅಲೆಮಾರಿ ಮಾನವನ ಬದುಕಿನ ಒಂದು ಅವಿಭಾಜ್ಯ ಅಂಗವಾಗಿದ್ದ ಕ್ರೀ
ಮಾನವನ ಹುಟ್ಟು ಪ್ರವೃತ್ತಿಯೂ ಹೌದು. ಆಹಾರದ ಪೂರೈಕೆಗಾಗಿ ತನ್ನ
ಸಾಮರ್ಥ್ಯದೊಂದಿಗೆ ಆಕ್ರಮಣಕಾರಿ ಪ್ರವೃತ್ತಿಯನ್ನು ತನ್ನೊಳಗೆ ರೂಢಿಸಿಕೊಳ್ಳು
ರೊಂದಿಗೆ ಕ್ರೂರ ಮೃಗಗಳಿಂದ ತನ್ನನ್ನು ರಕ್ಷಿಸಿಕೊಂಡು, ಆಹಾರ ಸಂಪಾದನೆ
ಬೇಟೆಯಾಡುವುದನ್ನು ರೂಢಿಸಿಕೊಂಡ ಇವನು ನಂತರದ ದಿನಗಳಲ್ಲಿ ಸುಧ
ಬೇಟೆಯ ಆವಿಷ್ಕಾರವಾಗಿ ಈಟಿ, ಭರ್ಜಿ ಇವುಗಳ ಬಳಕೆಯಾದವು.
ಇಂದು ಸಾಂಘಿಕ ಕ್ರೀಡೆಗಳಾಗಿ ಮಾರ್ಪಾಟಾದವು. ಈ ಬೆಳವಣಿಗೆಯೇ ಮ
ಸಾಂಸ್ಕೃತಿಕ ನೆಲೆಯುಲ್ಲಿ ಕ್ರೀಡೆಗಳನ್ನು ಮನರಂಜನೆಗಾಗಿ, ಬಿಡುವಿನ ಸಮಯ
ಕಳೆಯಲು ಬಳಸುವ ಸಾಧನವಾಯಿತು. ಅನಿವಾರ್ಯವಾಗಿ ಮತ್ತು ಬ
ಕ್ರಿಯೆಯಾಗಿ ಮೂಡಿಬಂದ ಓಟ, ಜಿಗಿತ, ನೆಗೆತ, ಈಜು, ಕುಸ್ತಿ, ಭರ್ಜಿ
ಗುಂಡು ಎಸೆತ, ಬಿಲ್ಲುಗಾರಿಕೆಯ ತಂತ್ರಗಳ ವ್ಯವಸ್ಥಿತವಾದ ಕ್ರೀಡೆಗ
ಮಾರ್ಪಟ್ಟವು.

ಮನುಷ್ಯ ತನ್ನ ಅಲೆಮಾರಿತನವನ್ನು ತೊರೆದು ಒಂದೆಡೆ ನಿಲ್ಲುವಂತ
ಕೃಷಿ ಮತ್ತು ತೋಟಗಾರಿಕೆಯ ಆವಿಷ್ಕಾರಗಳಾದವು. ನಂತರದ ದಿನ
ಕ್ರೀಡೆಯನ್ನು ಬೇರೆ ನೆಲೆಯಲ್ಲಿ ಕಾಣುವಂತಾಯಿತು. ಹಬ್ಬ, ಜಾತ್ರೆ ಮು
ಸಂಭ್ರಮಗಳಲ್ಲಿ ಬಳಸುವ ಮತ್ತು ಬೆಳೆಸುವ ಅನಿವಾರ್ಯತೆಯು ತಲೆ
ಇದು ಭೂಮಿಯೊಡೆಯನ ಸೊತ್ತಾಗಿ ಖಾಸಗೀಕರಣಗೊಂಡಂತಾದವು.
ಮಹಾರಾಜರ, ಪಾಳೇಗಾರರ ಆಶ್ರಯಗಳಲ್ಲಿ ನಡೆಸುವಂತಾದ ಆಟೋ
ಸಮುದಾಯದ ಬೇಡಿಕೆಗಳಾದವು.

ನಂತರದ ಆಧುನಿಕ ಕ್ರೀಡಾಕೂಟಗಳ ಪುನರುತ್ಥಾನವೇ ಎರಡನೆಯ ಮಹಾಯುದ್ಧ. ಫ್ರಾನ್ಸ್‌ನ ಕುಬರಟಿನ್‌ರವರು ಎರಡನೆಯ ಮಹಾಯುದ್ಧದ ನಂತರದ ತಮ್ಮ ಸೋಲು-ಗೆಲುವುಗಳನ್ನು ಜನರ ಶಕ್ತಿ ಸಾಮರ್ಥ್ಯದ ಪ್ರತೀಕವೆಂದು ಪರಿಗಣಿಸಿ, ಕ್ರೀಡೆಗಳನ್ನು, ಕ್ರೀಡಾ ಸಂಸ್ಕೃತಿಯನ್ನು ಜನ ಸಮುದಾಯದಲ್ಲಿ ಒಂದು ನೆಲೆಯನ್ನಾಗಿಸಲು ಪ್ರಯತ್ನಿಸಿದರು. ಇದರ ಫಲವೇ ನಮ್ಮ ಒಲಿಂಪಿಕ್ ಆಟೋಟಗಳು. ಇವು ಹಲವಾರು ಶತಮಾನಗಳಿಂದ ಉಳಿದಿದ್ದ ಕಟ್ಟುಪಾಡುಗಳಿಗೆ, ಸಂಪ್ರದಾಯಗಳಿಗೆ ಮತ್ತು ಅಸಮಾನತೆಗೆ ನ್ಯಾಯ ದೊರಕಿಸುವ ಒಂದು ಪರಿಣಾಮಕಾರಿ ಸಾಧನವಾದವು.

ಈ ಎಲ್ಲದರ ಹಿನ್ನೆಲೆಯಲ್ಲಿ ಭಾರತವು ತನ್ನ ಸಮಾಜದ ಬಹುಜನಗಳ ಬೇಡಿಕೆಯನ್ನು ಸ್ವಾಗತಿಸುವುದರ ಮೂಲಕವೇ ಕ್ರೀಡೆಗಳಿಗೆ ಪ್ರೋತ್ಸಾಹ ನೀಡುವುದರೊಂದಿಗೆ ಏಶಿಯನ್ ಕ್ರೀಡಾಕೂಟದ ಆರಂಭವಾಯಿತು. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ಬ್ರಿಟೀಷರ ಪ್ರಭಾವ ಅಪಾರವಾಗಿತ್ತು. ಇದು ಕಲೋನಿಯಲ್ ಆಟಗಳಿಗೆ ಕಾರಣವಾಯಿತು. ಕ್ರಿಕೆಟ್, ಶಟಲ್, ಟೆನ್ನಿಸ್, ಗಾಲ್ಫ್, ಪೋಲೋ, ಟೇಬಲ್ ಟೆನ್ನಿಸ್‌ನಂತ ಆಟಗಳು, ದೇಶೀಯ ಆಟಗಳಾದ ಕಬ್ಬಡ್ಡಿ, ಖೋ-ಖೋ, ಅಟ್ಯಪಾಟ್ಯ, ಮಲ್ಲಕಂಬ, ಕುಸ್ತಿ, ಯೋಗ ಇವುಗಳ ಮೇಲೆ ತಮ್ಮ ಪ್ರಭಾವಗಳನ್ನು ಬೀರುತ್ತಲೇ ಅವುಗಳನ್ನು ಮೂಲೆಗೆ ದೂಡಿದವು.

ಹಳ್ಳಿಗಾಡಿನ ಮರಕೋತಿ, ಕುಂಟಾಟ, ಕುಂಟೋಬಿಲ್ಲೆ, ಹಳಗುಳಿಮನೆ, ಹುಲಿ ಆಡು ಆಟ, ಚೌಕಾಬಾರ, ಕೋಲಾಟ, ಪಗಡೆ ಇನ್ನೂ ನೂರಾರು ಆಟಗಳು ನಮ್ಮ ಹಳ್ಳಿಯಲ್ಲೇ ಉಳಿಯುವಂತೆ ಮಾಡಿತಲ್ಲದೆ, ಸ್ಥಳೀಯ ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಹಾಗೂ ಮುಂದುವರೆಸುವ ರೀತಿಯನ್ನು ಕಂಬಳ, ಉತ್ತರಿ, ಹೋರಿ ಹಬ್ಬದ ಆಚರಣೆಯಲ್ಲಿ ಮಾತ್ರ ಕಾಣಬಹುದಾಗಿದೆ.

ಕ್ರೀಡೆಯ ಸಾಂಸ್ಕೃತಿಕ ನೆಲೆಗಟ್ಟು

ಕ್ರೀಡೆಗಳು ಮನೋದೈಹಿಕ (Psycho-physical) ಮಾತ್ರವಲ್ಲದೆ, ಸಾಮಾಜಿಕ ಚೌಕಟ್ಟಿನಲ್ಲಿ ನಡೆಯಬಹುದಾದ ಒಂದು ಕ್ರಿಯೆ, ದೈಹಿಕ ಮತ್ತು ಮಾನಸಿಕ ಸಂಬಂಧವನ್ನು ಬೆಸೆಯುವ ಹಾಗೂ ಇವುಗಳ ಮುಖೇನ ಆರೋಗ್ಯಪೂರ್ಣವಾದ ಚಿಂತನೆಗೆ ಮಾನವನನ್ನು ದೂಡುವ ಪ್ರಯತ್ನ ಕ್ರೀಡೆಗಳಿಂದ ಸಾಧ್ಯ. ಇಷ್ಟಲ್ಲದೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಗ್ರತೆಯನ್ನು ತರುವ, ಬೆಳೆಸುವ ಪ್ರಯತ್ನ ಇದರದು. ಮಾನಸಿಕ ಸಿದ್ಧತೆಗೆ ಬದ್ಧವಾಗಿರುವ ಕ್ರೀಡೆ, ಮನುಷ್ಯನಲ್ಲಿರುವ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಭಿನ್ನತೆಗಳಲ್ಲಿ ಏಕತೆಯನ್ನು ತರುವ ಪ್ರಕ್ರಿಯೆಯೂ ಹಾಗೂ ಸಾಮಾಜೀಕರಣದ ರೂವಾರಿಯೂ ಆಗಿದೆ.

ಸೀಟ್‌ವಾರವರು ಹೇಳಿರುವಂತೆ 'ಕ್ರೀಡೆಗಳಲ್ಲಿ ವ್ಯಕ್ತಿಗಳು ಪ್ರಜಾಪ್ರಭುತ್ವದ ಲಕ್ಷಣಗಳನ್ನು ಕಲಿಯಲು ಬಹಳಷ್ಟು ವಿಶಾಲವಾದ ವ್ಯಾಪ್ತಿಯಿದೆ. ಜೀವನಕ್ಕೆ ಅವಶ್ಯಕವೆನಿಸಿದ ಕೆಲವಾರು ಲಕ್ಷಣಗಳನ್ನು ತನ್ನಲ್ಲಿ ರೂಡಿಸಿಕೊಳ್ಳುವುದರ ಮೂಲಕವೇ ಪ್ರಜಾಪ್ರಭುತ್ವದ ಸಮಾಜದಲ್ಲಿ ಜೀವನವನ್ನು ಯಶಸ್ವಿಯಾಗಿ ಕಳೆಯುವಂತಾಗಲು, ಉತ್ತಮವಾದ ಮನೋಭಾವನೆಗಳು ನಿಷ್ಠೆಯುಳ್ಳ ಒಳ್ಳೆಯ ಅಭ್ಯಾಸಗಳು, ಸಹಕಾರ, ಅಭಿಕ್ಷಮತೆ, ಆತ್ಮನಿಯಂತ್ರಣ ಇವೇ ಮುಂತಾದ ಗುಣ ಲಕ್ಷಣಗಳು ಕ್ರೀಡೆಯಲ್ಲಿ ಪಾಲ್ಗೊಳ್ಳುವುದರ ಮೂಲಕ ವ್ಯಕ್ತಿಯಲ್ಲಿ ತಂತಾನೆ ಮೈಗೂಡಿಸಿಕೊಳ್ಳುತ್ತವೆ. ಇಷ್ಟಲ್ಲದೆ. ಕ್ರೀಡೆಗಳು ಸಂದರ್ಭಗಳಿಗನುಸಾರವಾಗಿ ಹೊಂದಿಕೊಳ್ಳುವ ಮನಸ್ಸು, ಸಮಾಜದಲ್ಲಿನ ಬದಲಾವಣೆಗಳಿಗೆ ಪೂರಕವಾದ ಬದುಕಿಗೆ ಆತನನ್ನು ಸರಿಹೊಂದಿಸುತ್ತದೆ' ಎಂದಿದ್ದಾರೆ.

ಕ್ರೀಡೆಗಳು ಸಮೂಹ ಕಾರ್ಯ ಮತ್ತು ಸಮಾನತೆಗಳನ್ನು ಅವಲಂಬಿಸಿವೆ. ಗುಂಪು ಆಟಗಳು, ವ್ಯಕ್ತಿಗಳಲ್ಲಿರಬಹುದಾದ ಆರ್ಥಿಕ, ಸಾಮಾಜಿಕ ಅಸಮಾನತೆಯನ್ನು ಕಿತ್ತೊಗೆದು ಅವರಲ್ಲಿ ಸಮಾನತೆಯು ವೃದ್ಧಿಯಾಗಲು ಸಹಕರಿಸುತ್ತದೆ. ಆಟಗಾರರಲ್ಲಿ ತ್ಯಾಗ ಮನೋಭಾವನೆಯನ್ನು, ಸಂವೇದನಾಶೀಲತೆಯನ್ನು ಕಾಯ್ದುಕೊಳ್ಳುವಂತೆ ಮಾಡುತ್ತದೆ.

ಕ್ರೀಡಾ ಮನೋಭಾವನೆಯ ಅವಶ್ಯಕತೆ

ಕ್ರೀಡಾ ಮನೋಭಾವನೆಗಳಿಗೆ ಹೆಸರಾದ ಕರ್ನಾಟಕ, ಕ್ರೀಡಾ ಸಂಸ್ಕೃತಿಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ರಾಷ್ಟ್ರದ ಯಾವುದೇ ಭಾಗದ ಜನ ಸಮುದಾಯವು ಹೆಮ್ಮೆಯಿಂದ. ಬರುವ ಮತ್ತು ಇಷ್ಟಪಡುವಂತಹ ಪ್ರದೇಶವಿದು. ಇದಕ್ಕೆ ಕಾರಣ ಕ್ರೀಡೆಗಳು ಜನಸಾಮಾನ್ಯರಲ್ಲೂ, ಕ್ರೀಡಾ ಮನೋಭಾವನೆಯನ್ನು ಬೆಳೆಸಿರುವುದು. ಇಂದು ಯಾವುದೇ ರೀತಿಯ ಗಲಭೆಗಳಿಗೆ, ಆಸ್ಪದವಾಗಿರುವುದು. ಇವುಗಳನ್ನು ನಾವು ಸೂಕ್ಷ್ಮ ಪಂದ್ಯಾಟಗಳಲ್ಲೂ ನೋಡುವಂತಾಗಿದೆ ಮತ್ತು ಎಲ್ಲ ಕ್ರೀಡಾಪಟುಗಳು ಮೆಚ್ಚುವಂತೆ ವರ್ತಿಸಿರುವುದೇ ಕಾರಣ.

ಪ್ರಜಾಸತ್ತಾತ್ಮಕ ಬದುಕಿಗೆ ಸ್ಪಷ್ಟ ರೂಪವನ್ನು ತಂದುಕೊಡುವ ಕಾರ್ಯ ಕ್ರೀಡೆಗಳಲ್ಲಿ ಕಾಣಬಹುದಾಗಿದೆ. ಭಾರತದಂತಹ ಜಾತ್ಯಾತೀತ ರಾಷ್ಟ್ರಗಳಲ್ಲಿರ ಬೇಕಾದ ಸಾಮಾಜಿಕ ಅಸಮಾನತೆಗೆ ಮೂಕಸಾಕ್ಷಿಯಾಗಿರುವ ನಮ್ಮ ಬದುಕುಗಳಿಗೆ ಕಿಂಚಿತ್ತು ಮನೋಸ್ಥೈರ್ಯ ಹಾಗೂ ಶಕ್ತಿ ಸಾಮರ್ಥ್ಯಗಳನ್ನೊದಗಿಸುವ ಕ್ರಿಯೆ ಇದು. ಬದುಕಿನ ಜಂಜಾಟಕ್ಕೆ ಮನರಂಜನೆಯೂ ಹೌದು.

ಇಂದಿನ ನಮ್ಮ ಬದುಕು, ಮಾನಸಿಕ ಮತ್ತು ದೈಹಿಕ ಪರಿಶ್ರಮಗಳಿಂದ ಕೂಡಿದ್ದಾಗಿದ್ದು, ಇದಕ್ಕೆ ಪೂರ್ವಸಿದ್ಧತೆ ಎಂಬಂತೆ ಬಾಲ್ಯದಿಂದಲೂ ಆಟಗಳು, ಮಕ್ಕಳ ಮಾನಸಿಕ ಮತ್ತು ದೈಹಿಕ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಮತ್ತು ಆರೋಗ್ಯಕರ ಸಮಾಜದ ಸೃಷ್ಟಿಗೆ ಕಾರಣವಾಗುತ್ತದೆ. ಬಾಲ್ಯದಲ್ಲಿನ ಆಟಗಳು ಮಕ್ಕಳ ಭಾವ ಶುದ್ಧೀಕರಣಗಳಾಗಿ ಪರಿಣಮಿಸುವ ಒಂದು ಕ್ರಮ. ಆದ್ದರಿಂದ ಆಟಕ್ಕೆ ಮನಃಶಾಸ್ತ್ರದಲ್ಲಿ ಮಹತ್ವದ ಸ್ಥಾನವಿದೆ. ಇದು ಅರಿಸ್ಟಾಟಲ್‌ರವರ ವಾದ. ಮನಸ್ಸಿನ ವ್ಯಾಕುಲತೆಗಳಿಗೆ ಮದ್ದಾಗಿ, ಔಷಧಿಯ ರೂಪದಲ್ಲಿ ನಮ್ಮ ಮಾನಸಿಕ ಸಮತೋಲನವನ್ನು ಕಾಯ್ದುಕೊಳ್ಳುವ ಕಾರಣದಿಂದಲೇ ಕ್ರೀಡಾಪಟುವು ಇತರರಿಗಿಂತ ಭಿನ್ನವಾಗಿ ಕಾಣುತ್ತಾನೆ. ಆತನಲ್ಲಿ ಸೋಲು ಮತ್ತು ಗೆಲುವಿಗೆ ಸಮಾನ ಅವಕಾಶ ಮತ್ತು ಅವನ್ನು ಸ್ವೀಕರಿಸುವ ಮನಸ್ಸಿನೊಂದಿಗೆ ತನ್ನ ಸೋಲಿನ ಮೂಲಕವೇ ಗೆಲುವನ್ನು ಸಾಧಿಸುತ್ತಾನೆ. ಸಮಾಜದ ಮೌಲ್ಯಗಳಿಗೆ ಸ್ಪಂದಿಸುವ ಹಾಗೂ ನಿಯಮಗಳಿಗೆ ಬದ್ಧವಾಗುವ ತರಬೇತಿ ಕ್ರೀಡೆಯಿಂದ ಲಭ್ಯವಾಗುತ್ತದೆ. ಈ ಕಾರಣಗಳಿಂದಲೇ ಕ್ರೀಡಾಪಟುವಿನ ನಡತೆ, ಆರೋಗ್ಯಪೂರ್ಣವಾಗಿರಲು ಸಾಧ್ಯ. ಇದು ಕಾಲೆಳೆಯುವ ಸಂಸ್ಕೃತಿಗೆ ವಿರುದ್ಧವಾದದ್ದು. ಮನೋಸ್ಥಿರತೆಯನ್ನು ತಂದೊಡ್ಡುವ ಮೂಲಕವೇ, ಉತ್ತಮ ಸಂಸ್ಕೃತಿಗೆ ಕಾರಣವಾಗುತ್ತದೆ. ಇದನ್ನೇ ನಾವು 'ಕ್ರೀಡಾ ಮನೋದೃಷ್ಟಿ' ಎಂತಲೂ 'ಕ್ರೀಡಾ ಮನೋಭಾವ' ಎಂದು ಗುರುತಿಸುತ್ತೇವೆ. ಇದು ಬರೀ ಕ್ರೀಡಾಪಟುಗಳಿಗೆ ಮಾತ್ರ ಸೀಮಿತವಾದದ್ದೇನಲ್ಲ, ಕ್ರೀಡಾ ಪ್ರೇಮಿಗಳಿಗೂ ಇದರ ವ್ಯಾಪ್ತಿ ಹಬ್ಬುತ್ತದೆ. ಆತನಿಗೆ ಅರಿವಿಲ್ಲದೆಯೇ ಮೆಚ್ಚುವ, ಪ್ರೋತ್ಸಾಹ ನೀಡುವ ಮನಸ್ಸು ಅವನಲ್ಲಿ ಉಂಟಾಗುತ್ತದೆ. ಕ್ರೀಡೆಯ ಮೂಲ ಉದ್ದೇಶವೇ ತನ್ನನ್ನು ತಾನು ಅರಿತುಕೊಳ್ಳುವ ಮತ್ತು ಇತರರ ಶಕ್ತಿ ಸಾಮರ್ಥ್ಯವನ್ನು ತಿಳಿಯುವ ಹಾಗೂ ಅವರಲ್ಲಿನ ಕೌಶಲ್ಯಗಳಿಗೆ ಸಾಮರ್ಥ್ಯಕ್ಕೆ ಸೂಕ್ತವಾದ ಮನ್ನಣೆಯನ್ನು ನೀಡಿ ಗೌರವಿಸುವ ಮನಸ್ಸನ್ನು ಸೃಷ್ಟಿಸುವುದೇ ಆಗಿದೆ. ಇದು ಆರೋಗ್ಯಕರ ಸಮಾಜಕ್ಕೆ ಬಹಳ ಮುಖ್ಯವಾದ ಅಂಶ. ಇದನ್ನು ಪ್ರತಿಯೊಬ್ಬ ನಾಗರೀಕನಲ್ಲೂ ಕಾಣಬೇಕಾದದ್ದು ಬಹಳ ಅವಶ್ಯಕ.

ದೈಹಿಕವಾಗಿ ಮತ್ತು ಮಾನಸಿಕವಾಗಿ ಕ್ರಿಯಾಶೀಲಗೊಳ್ಳುವ ಮನಸ್ಸುಗಳು ಎಲ್ಲಾ ರೀತಿಯ ವೈರುಧ್ಯತೆಗಳನ್ನು ಮೀರಿ ನಿಲ್ಲುತ್ತದೆ. ದುಶ್ಚಟಗಳಿಗೆ ವಿರುದ್ಧ ದಿಕ್ಕಿನಲ್ಲಿ ಸಾಗುವುದಲ್ಲದೆ, ಆರೋಗ್ಯಕರವಾದ ಅಭ್ಯಾಸಗಳನ್ನು ಜೀವನದಲ್ಲಿ ರೂಢಿಸುವಲ್ಲಿ ಯಶಸ್ವಿಯಾಗುತ್ತದೆ. ಸಮಾಜದ ನ್ಯೂನತೆಗಳಿಗೆ ಸ್ಪಂದಿಸುವ ಸಂವೇದನಾಶೀಲ ಮನಸ್ಸು ಹಾಗೂ ಎಲ್ಲಾ ಜಾತಿ, ಧರ್ಮ, ಮತ, ವರ್ಗ, ಪಂಗಡಗಳನ್ನು ಮೀರಿ ನಿಲ್ಲುವ ಒಂದು ಸಂಸ್ಕೃತಿಯಾಗಿ ಕಂಡುಬರುತ್ತದೆ.

ಸಹಬಾಳ್ವೆ, ಸಹಕಾರಗಳಿಂದ ಕೂಡಿದ ಆರೋಗ್ಯಪೂರ್ಣವಾದ ಸ್ಪರ್ಧೆಯು ಆತನ ಅಭಿವ್ಯಕ್ತಿಗೆ ನೀಡುವ ಸದವಕಾಶ. ಇದರಿಂದ ಅವನು ಸಮಾಜದ ಮನ್ನಣೆಗೆ ಪಾತ್ರನಾಗುವುದಷ್ಟೇ ಅಲ್ಲದೆ, ಆತನ ಜವಾಬ್ದಾರಿಯು ಹೆಚ್ಚುತ್ತದೆ. ಸಮಾಜಬಾಹಿರ ಚಟುವಟಿಕೆಗಳಿಗಾಗಲಿ, ದುಶ್ಚಟಗಳಿಗಾಗಲಿ ಬಲಿಯಾಗದೆ ಉಳಿಯುತ್ತಾನೆ. ಇದಕ್ಕಾಗಿ ಆತನು ತನ್ನ ಸಮಯ, ಶ್ರಮ ಮತ್ತು ತ್ಯಾಗ ಮನೋಭಾವನೆಗಳನ್ನೂ ಹಾಗೂ ದೇಹ ಮನಸ್ಸುಗಳ ಸಮತೋಲನವನ್ನು ಕಾಯ್ದು ಕೊಳ್ಳಬೇಕಾಗುತ್ತದೆ.

ಕ್ರೀಡೆಯ ಮನೋಸ್ಥೈರ್ಯ

ಮಾನಸಿಕ ಸ್ಥೈರ್ಯ ಬದುಕಿಗೆ ಅನಿವಾರ್ಯ. ನಮ್ಮಲ್ಲಿನ ಸಾಮಾಜಿಕ, ಆರ್ಥಿಕ ವ್ಯವಸ್ಥೆಗಳಲ್ಲಿರುವ ಅಸಮತೋಲನದಿಂದ ಕುಂದುವ ಮನಸ್ಸುಗಳಿಗೆ ಸ್ಥೈರ್ಯ ತರುವ ಅವಶ್ಯಕತೆ ಹಿಂದೆಂದಿಗಿಂತಲೂ ಇಂದು ಪ್ರಸ್ತುತವಾಗಿವೆ. ಬದುಕಿನಲ್ಲಿ ಬರಬಹುದಾದ ಸಂಕಷ್ಟಗಳನ್ನು ಮೆಟ್ಟಿ ನಿಲ್ಲುವ, ಎದುರಿಸುವ, ಶಕ್ತಿ ಸಾಮರ್ಥ್ಯಗಳ ಅವಶ್ಯಕತೆಯನ್ನು ಅರಿತು ಕ್ರೀಡೆಗಳಿಗೆ ನಾವು ಪ್ರೋತ್ಸಾಹಿಸ ಬೇಕಾಗಿದೆ.

ಕಷ್ಟ–ಸಂಕಷ್ಟಗಳ ನಿವಾರಣೆಗಾಗಿ ಅಲ್ಲದಿದ್ದರೂ ಮರೆಯುವ ಪ್ರವೃತ್ತಿಯನ್ನು ಹಾಗೂ ಮನಸ್ಸಿಗೂ ಮುದ ನೀಡುವ ಅವಕಾಶಗಳು ಆಟಗಳಲ್ಲಿ ಇರುವ ಕಾರಣ ಕ್ಕಾಗಿಯೇ ನಾವಿಂದು ಆಟಗಳಿಗೆ ಶರಣಾಗುವ ಮತ್ತು ಹೆಚ್ಚು ಹೆಚ್ಚು ಪ್ರೀತಿಸುವ ವಸ್ತುವನ್ನಾಗಿಸಿಕೊಂಡಿದ್ದೇವೆ. ವ್ಯಕ್ತಿಗಳಲ್ಲಿನ ಸಮಸ್ಯೆಗಳಿಗೆ, ಸ್ಪಂದಿಸುವ ಹಾಗೂ ಪೂರಕವಾದ ಶಕ್ತಿ ಮತ್ತು ಸಾಮರ್ಥ್ಯಗಳನ್ನು ಮೈಗೂಡಿಸಿಕೊಳ್ಳಲು ಸಹಕಾರಿ ಯಾಗುತ್ತವೆ.

ಶ್ರಮದಿಂದಲೇ ತನ್ನ ಶಕ್ತಿಯನ್ನು ದ್ವಿಗುಣಗೊಳಿಸುವ ಸಾಧನವಾಗಿ ಕ್ರೀಡೆ ಗಳು ನಮಗೆ ನಮ್ಮ ಬದುಕಿಗೆ ಅನಿವಾರ್ಯವಾಗಿವೆ. ಇವು ವ್ಯಕ್ತಿಯ ವೇಗ, ನರಸ್ನಾಯುಗಳ ಸಂಯೋಜನೆಯನ್ನು ಉತ್ತಮಗೊಳಿಸುವುದರ ಜೊತೆಗೆ, ನೋವು, ಸಂಕಷ್ಟಗಳ ಅನಿವಾರ್ಯತೆಯನ್ನು ನನಗೆ ತಿಳಿಸುತ್ತವೆ. ಈ ಸಂಬಂಧ ವ್ಯಕ್ತಿಯು ಮಾನಸಿಕವಾಗಿ ಸದೃಢನಾಗುತ್ತಾನೆ. ಇವು ಅವನ ಸಂವೇದನೆಗೆ ಸ್ಪಂದಿಸುತ್ತವೆ. ಅವನಲ್ಲಿನ ಆಕ್ರೋಶಗಳಿಗೆ, ಆಕ್ರಮಣಕಾರಿ ಪ್ರವೃತ್ತಿಗಳಿಗೆ ಸೂಕ್ತವಾದ ನೆಲೆಯಾಗಿ ಆತನನ್ನು ಇತರ ಸಾಮಾಜಿಕ ಸಮಸ್ಯೆಗಳಿಗೊಳಪಡದಂತೆ ರಕ್ಷಿಸುತ್ತದೆ.

ಮನೋಸ್ಥೈರ್ಯವನ್ನು ಕಳೆದುಕೊಂಡ ಎಷ್ಟೋ ಮಂದಿ ತಮ್ಮ ಬದುಕನ್ನು ಆತ್ಮಹತ್ಯೆಯ ಮುಖಾಂತರವಾಗಿ ಮೌನಗೊಳಿಸಿದ ಉದಾಹರಣೆಗಳು ನಮ್ಮಲ್ಲಿ

ವಿರಳವೇನಲ್ಲ. ಆದರೆ ಕ್ರೀಡಾಪಟುಗಳು ಇವರಿಗೆ ವಿಭಿನ್ನ. ಅವುಗಳ ಆಸೆ, ಆಕಾಂಕ್ಷೆಗಳನ್ನು, ಭಾವನೆಗಳನ್ನು ಬಹಳಷ್ಟು ಸಂದರ್ಭಗಳಲ್ಲಿ ಆಟಗಳ ಮುಖಾಂತರವಾಗಿ ಕೊಂದು ತಮ್ಮನ್ನು ತಾವು ರಕ್ಷಿಸಿಕೊಳ್ಳುತ್ತಾರೆ. ಇದೇ ಅವರ ಆತ್ಮಸ್ಥೈರ್ಯಕ್ಕೊಂದು ನಿದರ್ಶನ.

ಮಕ್ಕಳಲ್ಲಿ ಬಾಲ್ಯಾವಸ್ಥೆಯಿಂದಲೂ ಶಕ್ತಿ ಸಾಮರ್ಥ್ಯಕ್ಕನುಗುಣವಾಗಿ ಕ್ರೀಡೆಗಳು ರೂಪುಗೊಳ್ಳುತ್ತವೆ ಮತ್ತು ಪೂರಕವಾದ ಸಾಹಸ ಪ್ರವೃತ್ತಿಗೆ ನಾಂದಿಯಾಗುತ್ತವೆ. ಬಾಲ್ಯದ ಮರಕೋತಿ ಆಟ, ಮರ ಹತ್ತುವ ಧೈರ್ಯವನ್ನು ಆದರಿಂದ ಜಗಿಯುವ ಕೌಶಲ್ಯಗಳು ನೈಸರ್ಗಿಕವಾಗಿ ಮೇಳೈಸುತ್ತವೆ. ಈಜು, ಕುಸ್ತಿ, ಕಸರತ್ತು ಇವುಗಳು ಅವರಲ್ಲಿನ ಅಧಿಕವಾದ ಶಕ್ತಿ ಮತ್ತು ಸ್ಫೂರ್ತಿಗೆ ಚಿಲುಮೆಗಳಾಗುತ್ತವೆ.

ಲಿಂಗ ವಯೋಮಾನಗಳ ತಾರತಮ್ಯವಿಲ್ಲದೆ ನಡೆಯುವ ಈ ಕ್ರಿಯೆ ಮುಂದಿನ ಬದುಕಿನ ಮಾರ್ಗಸೂಚಿಯಾಗುತ್ತವೆ. ಇವುಗಳು ಪ್ರಕೃತಿ ಮತ್ತು ಅವುಗಳ ಸಂಬಂಧದಿಂದಲೇ ಉಂಟಾದವು. ಆದ್ದರಿಂದಲೇ ಇಂದಿಗೂ ನಿಸರ್ಗದತ್ತವಾದ ಪ್ರಕೃತಿಯ ಸಂಬಂಧಗಳು ಕ್ರೀಡೆಗಳನ್ನೇ ಪುಷ್ಟಿಯೊದಗಿಸುವುದು ಇವು ಅಂದಿನ ಕಾಲದಿಂದಲೂ ಕಂಡುಬರುವ ಸತ್ಯ ನಿದರ್ಶನಗಳು.

ಆರ್ಥಿಕ ಮತ್ತು ಸಾಮಾಜಿಕ ನೆಲೆಗಟ್ಟುಗಳ ಮತ್ತು ಅವಶ್ಯಕತೆಗನುಗುಣವಾದ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ತನ್ನದೇ ಆದ ಆಟೋಟಗಳ ಉಗಮ ಮತ್ತು ಅವುಗಳ ಉಪಯೋಗ ನಮ್ಮ ಬುಡಕಟ್ಟುಗಳ ಗ್ರಾಮೀಣ ಹಾಗೂ ನಗರ ಪಟ್ಟಣಗಳ ಬದುಕಿನ ಅವಸ್ಥೆಗಳಿಗೆ ಹೊಂದಿಕೊಂಡು ಮುಂದುವರಿಯುವಂತಹವು. ಇದು ಸರ್ವಕಾಲಕ್ಕೂ ನಮ್ಮೊಂದಿಗೆ ನಡೆದು ಬಂದ ಸಾಮಾಜಿಕ ಪರಂಪರೆಯಾಗಿದೆ.

ಕ್ರೀಡಾ ಸಂಸ್ಕೃತಿ

ಬಹುಮುಖೀ ಸಂಸ್ಕೃತಿಯ ಸಮಾಜದಲ್ಲಿ ಕ್ರೀಡೆಯು ತನ್ನದೇ ಆದ ವೈಶಿಷ್ಟ್ಯಮಯ ಸಂಸ್ಕೃತಿಯನ್ನು ಹೊಂದಿದೆ. ಇದು ಮತ, ಭೇದ, ಲಿಂಗ ವಯೋಮಿತಿಗಳನ್ನು ಮೀರಿದಂತಹುದು. ಸಾಮಾನ್ಯವಾಗಿ ಹೆಣ್ಣಿನ ಸ್ಥಾನಮಾನಗಳಿಗೆ ಸೂಕ್ತ ನೆಲೆಗಟ್ಟಾದ ಕ್ರೀಡೆ, ಅವಳ ಭವಿಷ್ಯಕ್ಕೆ ಭದ್ರ ಬುನಾದಿಯೂ ಹೌದು.

ಸಮಾಜದ ಹಲವಾರು ನ್ಯೂನತೆಗಳಲ್ಲಿ ಒಂದಾದ ಅಸಮಾನತೆ, ಅಶಿಸ್ತು, ಸಾಮಾಜಿಕ ಸಮಸ್ಯೆಗಳಿಗೆ ಕ್ರೀಡೆಯು ಒಂದು ಉತ್ತಮವಾದ ಮದ್ದು. ಇವುಗಳೆಲ್ಲ

ದರ ಗಡಿಯನ್ನು ಮೀರಿ ಮನುಷ್ಯ ಸಂಬಂಧವನ್ನು ವೈಭವೀಕರಿಸುವ ಏಕೈಕ
ಸಾಧನ. ವರ್ಣಭೇದದಂಥ ಸಮಸ್ಯೆಯನ್ನು ಕ್ರೀಡೆಗಳ ಮುಖಾಂತರವೇ ತೊಡೆದು
ಬಿಳಿಯರಿಗೆ ಸವಾಲಾಗಿ ನಿಂತ ಕರಿಯ ಗುಲಾಮರಿಂದ ಅಮೇರಿಕದ ಸಾಂಸ್ಕೃತಿ
ಲೋಕದ ದಿಗ್ಗಜರು. ಇವರು, ತಮ್ಮೆಲ್ಲರ ಅಸಮಾಧಾನವನ್ನು ಹೋರಾಟದ
ಪ್ರತೀಕವೆಂಬಂತೆ ಕ್ರೀಡೆಗಳಿಂದಲೇ ಅವರನ್ನು ಬಗ್ಗುಬಡಿದದ್ದು ಹಿಟ್ಲರನ
ಕಾಲದಿಂದಲೂ ನಾವು ಕಂಡುಕೊಂಡ ಸತ್ಯ. ಉದಾಹರಣೆಗೆ ಜಸ್ಸಿ ಓವನ್.

ಕರಿಯರ ಈ ಸಾಧನೆಯು ಪ್ರಪಂಚದ ಸರ್ವಶ್ರೇಷ್ಠರನ್ನಾಗಿಸಿದ್ದು, ಅವ
ಪರಿಶ್ರಮ. ಸದೃಢ ಮನಸ್ಸು, ಏಕಾಗ್ರತೆಗಳು ಇದರ ಫಲವಾಗಿ ಅವರಿಂದ ಇಡಿ
ವಿಶ್ವಕ್ಕೆ ಸವಾಲಾದರು. ಕ್ರೀಡೆಯು ಸಾಂಸ್ಕೃತಿಕ ಜಗತ್ತನ್ನು ಪ್ರವೇಶಿಸಿ ಸುಮಾರ
ಸಾವಿರಾರು ವರ್ಷಗಳು ಕಳೆದ ಸಂದರ್ಭದಲ್ಲಿ ನಾವಿಂದು ಕ್ರೀಡೆಯನ
ಸಮಾಜದ ಬೇಡಿಕೆ ಎಂತಲೇ ಪರಿಗಣಿಸಿದ್ದೇವೆ.

ಸಂಸ್ಕೃತಿಯ ನಾಶದಂಚಿನಲ್ಲಿ ಗ್ರೀಕ್ ದೇವತೆಯ ಉವಾಚವು ಇದ
ಆಗಿದ್ದು, ಅಂದಿನಿಂದಲೇ ಒಲಿಂಪಿಕ್ ಉಗಮ ತಾಳಿತು. ಅದರ ಪರಿಣಾಮ
ಹೊಸ ಕ್ರಾಂತಿಗೆ ನಾಂದಿ, ಮನುಷ್ಯನ ಭಾವನೆಗಳಿಗೆ ಸೂಕ್ತ ಹೋರಾಟದ ನೆ
ಈ ಕ್ರೀಡೆ, ಬಹುಶಃ ಈ ಅರ್ಥದಲ್ಲಿಯೇ.

ಮಾನವ ಬರೀ ಸಂಘ ಜೀವಿಯಷ್ಟೇ ಅಲ್ಲ, ಜಗಳಗಂಟನೂ ಹೌದ
ಸಮಾಜದ ಹೊರಗಡೆ ಬದುಕಲಾರ. ಆದರೆ ಸಮಾಜದಲ್ಲಿನ ಇತರರೊಂದಿ
ಬಾಳಲಾರ. ಈತನಲ್ಲಿರುವ ಹುಟ್ಟು ಪ್ರವೃತ್ತಿಗಳಿಗೆ ಸೂಕ್ತ ಪರಿಹಾರ ಕ್ರೀ
ಆದಕಾರಣ ಅವನ ಬಹಳಷ್ಟು ಬಯಕೆ ಮತ್ತು ಬೇಡಿಕೆಗಳು ಆತನ
ನೆಲೆಯೂರಲು ಹಾಗೂ ಸಂತೃಪ್ತಿ ಹೊಂದಲು ಕಾರಣವಾದವು. ನಂತರ
ಜಾಗತೀಕರಣದ ಸವಾಲುಗಳು ಕ್ರೀಡೆಗಳನ್ನೂ ಆಧುನಿಕ ಜಗತ್ತಿನ ಯುದ್ಧಗಳನ
ಗಿಸಿ ದವು. ತಮ್ಮ ಜನಾಂಗದ, ರಾಷ್ಟ್ರಗಳ ಪ್ರತಿಷ್ಠೆಗಳನ್ನು ಎತ್ತಿ ಹಿಡಿಯ
ನಡೆಸುವ ಹೋರಾಟಕ್ಕೆ ಒಂದು ಅಖಾಡವಾಯಿತು. ಇದರ ಪ್ರಭಾವವು ಜಾಗತಿ
ಸಂಸ್ಕೃತಿಯ ಮೇಲೆ ಪರಿಣಾಮಗಳನ್ನೂ ಬೀರುವಂತಾಯಿತು.

ಬರೀ 'ಆಲಿಯೋ' ಎಲೆಗಳ ಪವಿತ್ರ ಕಿರೀಟಧಾರಣೆಯಲ್ಲಿ ಸಂತೃ
ಗೊಳ್ಳುತ್ತಿದ್ದ ಮನಸ್ಸುಗಳಿಗೆ ಹಣ, ಅಂತಸ್ತುಗಳ ಆಮಿಷಗಳ ಮಹಾಪೂರ
ಈಗ ಬಂದೆರಗಿದೆ. ಇದರ ಫಲವಾಗಿ ನಿಜವಾದ ಕ್ರೀಡಾ ಸಂಸ್ಕೃತಿ
ಧಕ್ಕೆಯುಂಟಾಗಿದೆ. ಪದಕಗಳಿಗಾಗಿ ಹೇಗಾದರೂ ಸರಿ, ಸವಾಲಾಗಿ ಸ್ವೀಕ
ಪಡೆಯಬೇಕೆಂಬ ಹಂಬಲ, ಛಲ, ಕ್ರೀಡಾಪಟುಗಳನ್ನು ದಾರಿ ತಪ್ಪಿಸಿವೆ. ಇ

ಕ್ರೀಡೆಗಳನ್ನು ವ್ಯಾಪಾರಿ ಮನೋದೃಷ್ಟಿಯಿಂದ ನೋಡುವ ಮನಸ್ಸುಗಳನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಗಿವೆ.

ಪ್ರತಿ ಒಲಿಂಪಿಕ್ ಬಂತೆಂದರೆ ಪದಕಗಳಿಗಾಗಿ ನಡೆಸುವ ಹುನ್ನಾರಗಳನ್ನು ಬಯಲಿಗೆಳೆಯುವ ತಪಾಸಣೆ ಮತ್ತು ತಪಾಸಣೆಗೂ ಸಿಗದೆ ಕಣ್ಣಿಗೆ ಮಣ್ಣೆರಚುವ ಹಾಗೂ ಇದಕ್ಕೆ ಸಂಶೋಧನೆಗಳನ್ನು ನಡೆಸುತ್ತಿರುವ ಅಭಿವೃದ್ಧಿಶೀಲ ರಾಷ್ಟ್ರಗಳು, ಉದ್ಯಮಿಗಳು ಕ್ರೀಡಾ ಸಾಂಸ್ಕೃತಿಕ ಜಗತ್ತಿಗೆ ಒಡ್ಡಿರುವ ಸವಾಲುಗಳೇ ಅಶಿಸ್ತು. ಮಾದಕ ದ್ರವ್ಯಗಳ ರೂಪದಲ್ಲಿ ನಮ್ಮನ್ನು ಕಾಡುತ್ತಿವೆ.

ಕ್ರೀಡೆಗಳು ಸಮೂಹ ಕಾರ್ಯ ಮತ್ತು ಸಮಾನತೆಗಳನ್ನು ಅವಲಂಬಿಸಿವೆ. ಇವುಗಳನ್ನು ಒಬ್ಬ ಆಟಗಾರನು ಅತ್ಯಂತ ಸಮರ್ಪಕವಾಗಿ ಕಲಿಯುತ್ತಾನೆ. ಆಟಗಾರರು ಕಷ್ಟಪಟ್ಟು ಕಾರ್ಯನಿರ್ವಹಿಸುವ ಮತ್ತು ಸಮೂಹದ ಒಳಿತಿಗಾಗಿ ಮತ್ತು ದುಡಿಯುವ, ಮನೋವೃತ್ತಿಯನ್ನು ಬೆಳೆಸಿಕೊಳ್ಳುವುದರೊಂದಿಗೆ ಉತ್ತಮವಾದ ನಾಯಕತ್ವ ಲಕ್ಷಣಗಳು ಅವರಲ್ಲಿ ಕಂಡುಬರುತ್ತವೆ. ಇವುಗಳೆಲ್ಲ ಗುಂಪಿನ ಆದರ್ಶಗಳಿಗೆ ಪೂರಕವಾದ ಮತ್ತು ಸಹಕಾರ ಮನೋಭಾವಗಳೇ ಮೊದಲಾದ ವಾಸ್ತವಾಂಶಗಳನ್ನೂ ಒಳಗೊಂಡಿರುತ್ತದೆ. ಇದರಿಂದ ವ್ಯಕ್ತಿಗಳಲ್ಲಿ ಸ್ಫೈರಣೆಯುಳ್ಳ ಮನಸ್ಥೈರ್ಯ ಹಾಗೂ ಇತರರೊಂದಿಗಿನ ಉತ್ಸಾಹಗಳೊಂದಿಗೆ ತಮ್ಮನ್ನೂ ತಾವು ಅರ್ಪಿಸಿಕೊಳ್ಳುತ್ತಾರೆ. ಇದು ಅವರ ಬದುಕಿನ ಒಂದು ಸುಸಂಸ್ಕೃತಿಯ ಹಾಡು.

ಕ್ರೀಡೆ ಒಂದು ಸಾಮಾಜಿಕ ಸಂಸ್ಥೆಯಾಗಿ ರೂಪುಗೊಂಡಿರುವ ಹಿನ್ನೆಲೆಯಾಗಿ ಸಾಮಾಜಿಕ ಮೌಲ್ಯಗಳನ್ನೂ ವ್ಯಕ್ತಿ ವ್ಯಕ್ತಿಗಳಲ್ಲಿ ಸಮೂಹ, ಸಮೂಹಗಳಲ್ಲಿ ಬಿತ್ತರಿಸುವ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಈ ಕಾರಣದಿಂದಲೇ ಕೆಲವು ಸಮಯದ ಬಳಿಕ ದೃಢವಾದ ವರ್ತನೆಗಳಲ್ಲಿನ ಬದಲಾವಣೆಯನ್ನು ನಾವು ಕಾಣಬಹುದು. ವೈವಿಧ್ಯಮಯ ಗುಂಪುಗಳಿಂದ ಕೂಡಿದ ಈ ಸಮಾಜದಲ್ಲಿ ಸಮೂಹ ಒಪ್ಪಿದ ಚಟುವಟಿಕೆಗಳಿಗೆ, ಉತ್ತೇಜನ ದೊರೆಯುವ ಕಾರಣವೇ ಇಂದು ಕ್ರೀಡೆಗೆ ದೊರೆತಂಥ ಮನ್ನಣೆ. ಇದು ನಮ್ಮ ಮುಂದಿನ ಪೀಳಿಗೆಗೂ ಲಭಿಸುವಂತಾಗಲಿ. ಸಮಾಜದಲ್ಲಿ ಉತ್ತಮವಾದ ನಾಗರೀಕರನ್ನು ಹೊಂದುವಂತಾಗುತ್ತದೆ.

ಕ್ರೀಡೆ ಮತ್ತು ವ್ಯಕ್ತಿತ್ವ

ಮನೋವಿಜ್ಞಾನಿಗಳ ಪ್ರಕಾರ ಕ್ರೀಡೆಗಳು ಹಲವಾರು ಮಾನಸಿಕ ಕ್ಷೋಭೆಗಳಿಗೆ ಚಿಕಿತ್ಸಾ ಕ್ರಮವಾಗಿ ಕಾರ್ಯನಿರ್ವಹಿಸುತ್ತವೆ. ಕ್ರೀಡೆಗಳಿಂದ ವ್ಯಕ್ತಿಯು ತನ್ನ

ವ್ಯಕ್ತಿತ್ವವನ್ನು ಉತ್ತಮವಾಗಿ ರೂಢಿಸಿಕೊಳ್ಳಲು ಸಹಕಾರಿಯಾಗಿರುವ ಕಾರಣ ದಿಂದಲೇ ಕ್ರೀಡೆಗೆ ಉತ್ತಮವಾದ ಸ್ಥಾನ ಲಭ್ಯವಾಗಿದೆ. ಸಾಮಾನ್ಯವಾಗಿ ಒತ್ತಡ ಗಳಿಗೆ ಸಿಲುಕಿದ ಮನುಷ್ಯ ತನ್ನ ನಡವಳಿಕೆಗಳಲ್ಲಿ ಬದಲಾವಣೆಗೊಳಗಾಗುವುದು ಸಾಧ್ಯ. ಇಂತಹ ಒತ್ತಡಗಳನ್ನು ಅನುಭವಿಸುವ ಅನುಭವಗಳನ್ನು ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ಪಡೆಯಲು ಸಾಧ್ಯವಾಗುತ್ತದೆ. ಅಲ್ಲಿ ಸೋಲು, ಗೆಲುವು, ಅಪಮಾನ, ಅವಮಾನಗಳಷ್ಟೇ ಅಲ್ಲದೆ, ನಿಷ್ಠುರತೆ, ಕಠಿಣತೆಗಳಂತಹ ಸ್ವಭಾವವು ಅವನನ್ನು ಹಲವಾರು ಸಂದರ್ಭಗಳಲ್ಲಿ ಅನುಭವಕ್ಕೆ ಬರುವುದರಿಂದಲೇ ವರ್ತನೆಗಳ ಪ್ರವೃತ್ತಿಗಳಲ್ಲಿ ಉತ್ತಮವಾದ ಮಾರ್ಪಾಡು ಸಾಧ್ಯವಾಗುತ್ತದೆ.

ವ್ಯಕ್ತಿತ್ವವು ಒಟ್ಟಾರೆ ಒಬ್ಬ ವ್ಯಕ್ತಿಯ ನಡತೆಗಳ ಗುಣಧರ್ಮವನ್ನು ಅವಲಂಬಿತವಾಗಿದೆ. ಇವುಗಳನ್ನು ಆತನ ಮನೋಭಾವನೆಗಳ, ನಟನೆಗಳ, ಆಸಕ್ತಿ ಗಳ, ಉತ್ಕಾಂಕ್ಷೆಗಳ ಮತ್ತು ವೈಯಕ್ತಿಕ ಜೀವನದರ್ಶನಗಳಿಂದ ಸಂಪೂರ್ಣವಾಗಿ ಅವನ ಅಂತರಂಗವನ್ನು ತಿಳಿಸುವಂತಹದು. ಮನುಷ್ಯನ ವ್ಯಕ್ತಿತ್ವವು ಕೆಲವಾರು ಸಂದರ್ಭಗಳಲ್ಲಿ ಮಹತ್ತರವಾದ ಭಾವಗ್ರಂಥಿಯಿಂದ ಕೂಡಿರುವಂತಹದ್ದು. ಇವು ಆತನ ವರ್ತನೆ ಆಸಕ್ತಿ, ನಡವಳಿಕೆ, ನಂಬಿಕೆ, ಮೌಲ್ಯ, ಸಾಮರ್ಥ್ಯ ಮುಂತಾದವು ಗಳನ್ನು ಒಳಗೊಂಡಿದ್ದು, ಇವು ಒತ್ತಡಗಳಿಗನುಸಾರವಾಗಿ ಅಭಿವ್ಯಕ್ತಿಯನ್ನು ಹೊಂದುತ್ತವೆ. ಈ ಸಂಬಂಧ ಕ್ರೀಡೆಯು ಚಿಕಿತ್ಸಾಕ್ರಮವಾಗಿ ಆತನ ಅಭಿವ್ಯಕ್ತಿಗೆ ಸಹಕಾರಿಯಾಗಿ ನಿಲ್ಲುತ್ತದೆ. ಕ್ರೀಡೆಗಳಲ್ಲಿ ಭಾಗವಹಿಸುವುದರ ಮೂಲಕ ಬರಬಹು ದಾದ ಗುಣಾತ್ಮಕ ಅಂಶಗಳು ಆತನನ್ನು ಉತ್ತಮವಾದ ವ್ಯಕ್ತಿತ್ವದೊಂದಿಗೆ ಕೊಂಡೊಯ್ಯುತ್ತವೆ.

ದೇಹ ಮತ್ತು ಮನಸ್ಸುಗಳ ಸಂಬಂಧ ಇವೆಲ್ಲಕ್ಕೂ ಕಾರಣವಾಗುತ್ತದೆ. ಉತ್ತಮವಾದ ಆರೋಗ್ಯಕರ ದೇಹದಲ್ಲಿ ಆರೋಗ್ಯಕರವಾದ ಚಿಂತನೆಗಳು ಮೂಡುವಂತಾಗುತ್ತವೆ. ಆಟೋಟಗಳಲ್ಲಿ ಭಾಗವಹಿಸುವ ವ್ಯಕ್ತಿಗಳಲ್ಲಿ ಸಂವೇದನಾ ಶೀಲತೆಗೆ ಅನುಗುಣವಾದ ನಡವಳಿಕೆಗಳು ಮತ್ತು ಉತ್ತಮ ಗುಣಲಕ್ಷಣಗಳು ಕಂಡುಬರುವ ಸಾಧ್ಯತೆಗಳೇ ಹೆಚ್ಚು. ಈ ನಿಟ್ಟಿನಲ್ಲಿ ತನ್ನದೇ ಆದ ವ್ಯಕ್ತಿತ್ವ, ಸಂಸ್ಕೃತಿಯನ್ನು ಕ್ರೀಡಾಪಟುಗಳಲ್ಲಿ ಕಾಣಬಹುದು.

ಪ್ರಸ್ತುತ ಕ್ರೀಡೆಗಳನ್ನು ನೋಡಬೇಕಾದ ಮನೋಧರ್ಮ

ಕ್ರೀಡೆಗಳನ್ನು ಸಂಸ್ಕೃತಿಯ ಭಾಗವಾಗಿ ನೋಡುವ ಮನಸ್ಸು ನಮ್ಮದಾಗ ಬೇಕು. ಕ್ರೀಡೆಗಳನ್ನು ಮತ್ತು ಅವುಗಳ ಆಚರಣೆಗಳನ್ನು ಗಂಭೀರವಾಗಿ ಪರಿಗಣಿಸ ಬೇಕಾಗಿದೆ.

ಇತ್ತೀಚಿನ ಕಂಪ್ಯೂಟರ್ ಯುಗವು ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯ ಮೇಲೆ ಅಗಾಧವಾದ ಪರಿಣಾಮವನ್ನು ಉಂಟುಮಾಡುತ್ತಿವೆ. ಗಣಕ ಯಂತ್ರದ ಮೂಲಕವೇ ಆಟದ ಸ್ವರೂಪ ಹಾಗೂ ಆಟಗಳಲ್ಲಿ ಭಾಗವಹಿಸುವ ಕ್ರಿಯೆ ಅವರನ್ನು ಮನುಷ್ಯ ಸಂಬಂಧದಿಂದ ದೂರ ಕೊಂಡೊಯ್ಯುತ್ತಿದೆ. ಇದು ಹೀಗೆಯೇ ಮುಂದುವರೆದಲ್ಲಿ ಮುಂಬರುವ ದಿನಗಳಲ್ಲಿ ದೈಹಿಕ ಸದೃಢತೆಯಿಲ್ಲದ ಮಕ್ಕಳ ಬೆಳವಣಿಗೆಯನ್ನು ನಾವು ನೋಡಬೇಕಾದೀತು. ಮೂಲತಃ ಮಾನವನ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ಪೂರಕವಾದ ಆಟೋಟಗಳು ಎಲ್ಲರಿಗೂ ದಕ್ಕುವಂತಾಗಬೇಕು. ಬರೀ ಪದಕಗಳಿಗಾಗಿ, ಪ್ರತಿಷ್ಠೆಗಳಿಗಾಗಿ ಸ್ಪರ್ಧಿಸುವ ಮನಸ್ಸುಗಳನ್ನು ಪರಿವರ್ತಿಸಿ, ಕ್ರೀಡಾ ಸಂಸ್ಕೃತಿಯನ್ನು ಬೆಳೆಸುವ, ಪ್ರೋತ್ಸಾಹಿಸುವ ಗಂಭೀರವಾದ ಪ್ರಯತ್ನ ನಮ್ಮದಾಗದ ಹೊರತು, ಅನಾದಿ ಕಾಲದಿಂದಲೂ ಮಾನವನ ಹುಟ್ಟು ಪ್ರವೃತ್ತಿಯ ಅವಶ್ಯಕತೆಗಳನ್ನು ಪೂರೈಸಲು ಮತ್ತು ಆತನ ಬದುಕಿಗೆ ಒಂದು ಅರ್ಥವನ್ನು ಕಲ್ಪಿಸ ಹೊರಟ ಕ್ರೀಡೆ ನಮ್ಮಿಂದ ದೂರ ಸರಿಯುವುದರಲ್ಲಿ ಸಂದೇಹವಿಲ್ಲ.

ಅಶಿಸ್ತು, ಹಿಂಸೆ, ಪ್ರಚೋದನೆ ಹಾಗೂ ಮಾದಕ ವಸ್ತುಗಳಿಗೆ ಬಲಿಯಾಗುವ ಮುನ್ನ ಕ್ರೀಡೆಗಳನ್ನು ರಕ್ಷಿಸುವ ಕಾರ್ಯ ಸಮಾಜದಿಂದ ಆಗಬೇಕಿದೆ. 'ಕ್ರೀಡೆಯ ಉಳಿವು ಸಂಸ್ಕೃತಿಯ ಉಳಿವು' ಎಂಬ ಘೋಷಣೆಯೊಂದಿಗೆ ನಾವು ಕಾರ್ಯ ಪ್ರವೃತ್ತರಾಗಬೇಕಾಗಿದೆ.

ಭಾಷೆ ಮತ್ತು ಸಂಸ್ಕೃತಿ

ಕನ್ನಡ ಮತ್ತು ಕಂಪ್ಯೂಟರ್

ಡಾ|| ಕೆ. ನರ್ಮದಾಂಬ

ಇಪ್ಪತ್ತನೆಯ ಶತಮಾನವನ್ನು ಮಾಹಿತಿ ತಂತ್ರಜ್ಞಾನಯುಗ ಎಂದು ಕರೆಯಲಾಗುತ್ತದೆ. ಕಂಪ್ಯೂಟರಿನಲ್ಲಿ ಮೊದಲಿಗೆ ಇಂಗ್ಲೀಷನ್ನು ಮಾತ್ರ ಬಳಸಲಾಗುತ್ತಿತ್ತು. ಆದರೆ ಡಿಜಿಟಲ್ ಯಂತ್ರ ಕಂಪ್ಯೂಟರಿಂಗ್ ಭಾಷೆಯ ಪ್ರತಿಬಂಧಕವಿಲ್ಲವೆಂದು ತಿಳಿದು ವಿಶ್ವದಾದ್ಯಂತ ಈಗ ಕಂಪ್ಯೂಟರಿನ ಬಳಕೆಯನ್ನು ಎಲ್ಲಾ ಭಾಷೆಗಳಿಗೂ ತಂದಿರುವುದು ಭಾಷಾತಾಂತ್ರಿಕತೆಯನ್ನು ಉತ್ಪಾದಿಸುತ್ತಿರುವುದು ಭಾಷಾಕ್ಷೇತ್ರದಲ್ಲಿನ ಒಂದು ಕ್ರಾಂತಿಯೆಂದರೂ ತಪ್ಪಾಗಲಾರದು.

ಕಂಪ್ಯೂಟರ್ ಒಂದು ಗಣಕ ಯಂತ್ರ. ಅದರ ಉಪಯೋಗ ಕೇವಲ ಸಾಫ್ಟ್‌ವೇರ್‌ಗಳನ್ನು ಬಳಸಲು ಮತ್ತು ಉತ್ಪಾದಿಸಲು ಹಾಗೂ ಪ್ರೋಗ್ರಾಮುಗಳನ್ನು ಬರೆಯಲು ಮಾತ್ರವೇ ಎಂಬ ಕಾಲ ಹೋಗಿ ಈಗ ಮಾನವ ತನ್ನ ಉಪಯೋಗಕ್ಕಾಗಿ ಸೃಷ್ಟಿಸಿಕೊಂಡ ಈ ಗಣಕಯಂತ್ರದಿಂದ ತನ್ನ ಭಾವನೆಗಳನ್ನು ಹಂಚಿಕೊಳ್ಳಲು, ಕಷ್ಟಸಾಧ್ಯ ಕೆಲಸಗಳಾದ ಬರವಣಿಗೆ ಹಾಗೂ ವಾಕ್ ಸಂಶ್ಲೇಷಣೆವರೆಗೂ ಬಂದು. ಬಹುಮಾಧ್ಯಮದ ಅಳವಡಿಕೆಯಿಂದ ಭಾಷೆಯಲ್ಲಿ ಆಕರ್ಷಣೆ ಹಾಗೂ ಉಲ್ಲಾಸವನ್ನು ತರುವ ಕಾರ್ಯ ನಡೆಸುವವರೆಗೂ ಕಂಪ್ಯೂಟರಿನಲ್ಲಿ ವಿಶ್ವದ ಎಲ್ಲ ಭಾಷೆಗಳನ್ನೂ ಬಳಸಿ ಪ್ರಯೋಗಿಸಲಾಗಿದೆ.

ಕನ್ನಡ ಮತ್ತು ಕಂಪ್ಯೂಟರ್

ಕನ್ನಡಕ್ಕೂ ಕಂಪ್ಯೂಟರಿಗೂ, ಇಮಾಂ ಸಾಬಿಗೂ ಗೋಕುಲಾಷ್ಟಮಿಗೂ ಇರುವಷ್ಟೇ ನಂಟು. ನಮಗ್ಯಾಕೆ ಕಂಪ್ಯೂಟರಿನ ಗೊಡವೆ ಎಂದು ಮೂಗೆಳೆ ವಿದ್ವಾಂಸರೂ ಇಲ್ಲದಿಲ್ಲ. ನೀವು ಏನೇ ಹೇಳಿ ಕಂಪ್ಯೂಟರ್ ನಮ್ಮ ಸ ನಿಖರವಾಗಿ ಬರೆಯುತ್ತದೆಯೇ? ಎಂದು ಪ್ರಶ್ನಿಸಿದ ವಿದ್ವಾಂಸರೂ ಬೇಕಾದಷ್ಟು ಮಂದಿ ಇದ್ದಾರೆ. ಕನ್ನಡದ ಕೆಲಸ ಒಂದು ಯಂತ್ರ ಮಾಡುತ್ತದೆಯೇ ಎಂದು ಮೂಗಿನ ಮೇಲೆ ಬೆರಳಿಟ್ಟವರೂ ಇದ್ದಾರೆ. ಹಾಗಾದರೆ ಕನ್ನಡವನ್ನು ಕಂಪ್ಯೂಟರಿನಲ್ಲಿ ಕಾಣಬಹುದೇ! ಎಂದು ಆಶ್ಚರ್ಯಚಕಿತರಾಗಿ ಕೇಳಿದವರೂ ಉಂಟು.

ಕಂಪ್ಯೂಟರಿನ ಭಾಷೆಗಳು ಬಂದ ನಂತರ ಭಾಷೆಯನ್ನು ಹ್ಯೂಮನ್ ಲಾಂಗ್ವೇಜಸ್ (ಮಾನವ ಭಾಷೆಗಳು) ಮತ್ತು ಮೆಷಿನ್ ಲಾಂಗ್ವೇಜಸ್ (ಯಂತ್ರ ಭಾಷೆ) ಎಂದು ಎರಡು ಬಗೆಯಾಗಿ ವಿಂಗಡಿಸಿಕೊಳ್ಳಲಾಗಿದೆ. ಮಾನವರಾಡುವ ಭಾಷೆಯನ್ನು ಮಾನವ ಭಾಷೆಗಳು ಎಂತಲೂ ಕಂಪ್ಯೂಟರ್ ಅರ್ಥಮಾಡಿಕೊಂಡು ಕೆಲಸಗಳನ್ನು ನಡೆಸುವ ಭಾಷೆಗಳನ್ನು ಯಾಂತ್ರಿಕ ಭಾಷೆಯೆಂದೂ ಕರೆಯಲಾಗುತ್ತದೆ. ಮಾನವ ಭಾಷೆಗಳನ್ನು ನ್ಯಾಚುರಲ್ ಲ್ಯಾಂಗ್ವೇಜಸ್ (ಸ್ವಾಭಾವಿಕ ಭಾಷೆಗಳು) ಎಂತಲೂ ಕರೆಯಲಾಗುತ್ತದೆ. ಪ್ರಪಂಚದ ಸ್ವಾಭಾವಿಕ ಭಾಷೆಗಳ ಅಧ್ಯಯನವನ್ನು ನಾವು ಭಾಷಾವಿಜ್ಞಾನವೆಂದು ಕರೆಯುತ್ತೇವೆ. ಕಂಪ್ಯೂಟರಿನ ಭಾಷೆಗಳು ಸಿ, ಸಿ++, ಜಾವ ಹಾಗೂ ಮುಂತಾದವು. ಈ ಭಾಷೆಯ ಗಡಿ ಒಂದು ಮತ್ತು ಶೂನ್ಯ. ಅಂದರೆ ೧ ಮತ್ತು ೦. ಅನೇಕ ಸೂತ್ರಗಳ ಪ್ರಕಾರ ಈ ಒಂದು ಮತ್ತು ಶೂನ್ಯದ ನಡುವಣ ಸಂಬಂಧಗಳ ಮೇಲೆ ವಿಶ್ವದ ಯಾವುದೇ ಭಾಷೆಯನ್ನೂ ಸಹ ಕಂಪ್ಯೂಟರಿನಲ್ಲಿ ಮೂಡಿಸಬಹುದಾಗಿದೆ.

ಕನ್ನಡ ಭಾಷೆಯ ಪ್ರಯೋಗ ಇಸ್ಕಿ, ಆಸ್ಕಿ ಮತ್ತು ಯೂನಿಕೋಡುಗಳಲ್ಲಿ ನಡೆಯುತ್ತದೆ. ಆಯಾಯ ಕೋಡಿನಲ್ಲಿನ ಅಂಕಿ ಅಂಶಗಳ ಆಧಾರದ ಮೇಲೆ ಭಾಷಾ ವ್ಯಾಪಾರ ಮುಂದುವರೆಯುತ್ತದೆ.

ಇಂಗ್ಲೀಷ್ ಭಾಷೆಗೆ ಬಳಸುವ ಅದೇ ಕಂಪ್ಯೂಟರ್, ಅದೇ ಮಾನಿಟರ್, ಅದೇ ಹಾರ್ಡ್ ಡಿಸ್ಕಿನೊಂದಿಗೆ ಏನೆಲ್ಲಾ ಮಾಡಬಹುದೆಂಬುದನ್ನು ನೋಡೋಣ:

೧. **ಕನ್ನಡ ಮತ್ತು ಆಫೀಸ್ ಆಟೋಮೇಷನ್** : ಕಂಪ್ಯೂಟರ್‌ನ ಆಪರೇಟಿಂಗ್ ಸಿಸ್ಟಂ (ವಿಂಡೋಸ್, ಲೈನಕ್ಸ್ ಮುಂತಾದವು) ಯಾವುದೇ ಇರಲಿ ಕನ್ನಡ ಭಾಷೆಯನ್ನು ಕಂಪ್ಯೂಟರಿನ ಪರದೆಯ ಮೇಲೆ ಮೂಡಿಸಬಹುದು. ಇದಕ್ಕೆ ಬೇಕಾದುದೆಲ್ಲಾ ಇಷ್ಟೇ-ಒಂದು ಎಡಿಟರ್. ಆ ಎಡಿಟರ್ ಸಹ ಒಂದು ಸಾಫ್ಟ್‌ವೇರೇ. ಈ ಎಡಿಟರನ್ನು ಪ್ರಯೋಗಿಸಿ, ಇಂಗ್ಲೀಷ್‌ನ ಕೀ ಬೋರ್ಡನ್ನೇ ಆಧಾರವಾಗಿಟ್ಟುಕೊಂಡು ಅಕ್ಷರ (ಗ್ಲಿಫ್ ಕೋಡ್) ಗಳನ್ನು ಮಾಡಿರಲಾಗುತ್ತದೆ. ಕೀಬೋರ್ಡಿನ ಇಂಗ್ಲೀಷಿನ ಅಕ್ಷರದ ಮುಖಾಂತರವೇ ಕನ್ನಡವನ್ನೂ ಬರೆಯಬಹುದಾಗಿದೆ. ಇಂಗ್ಲೀಷ್ ಅಕ್ಷರಗಳ ಮೇಲೆ ಬೇಕಾದರೆ ಕನ್ನಡದ ಅಕ್ಷರಗಳನ್ನು ಅಂಟಿಸಿಯೂ ಕನ್ನಡವನ್ನು ಅಚ್ಚು ಮಾಡಬಹುದಾಗಿದೆ. ಹೀಗೆ ಕನ್ನಡವನ್ನು ಅಚ್ಚು ಮಾಡಲು ಸಾಧ್ಯವಾಗಿಸುವಂತಹ ಕೆಲವು ಕನ್ನಡದ ಸಾಫ್ಟ್‌ವೇರ್‌ಗಳು ಕೆಳಕಂಡಂತೆ ಇವೆ :

ನುಡಿ ತತ್ರಾಂಶ (ಸಾಫ್ಟ್ ವೇರ್)
ಬರಹ
ಶ್ರೀಲಿಪಿ
ಐಲೀಪ್
ಆಕೃತಿ
ಕೈರಾಲಿ
ಪ್ರಕಾಶಕ್
ವಿಂಡೋಸ್ ಎಕ್ಸ್ ಪಿ
ಬ್ರಾಹ್ಮಿ (ಭಾರತಿಯ ವಿಜ್ಞಾನ ಸಂಸ್ಥೆಯಿಂದ ನಿರ್ಮಿತ)

ಮೇಲಿನವುಗಳ ಪೈಕಿ ವಿಂಡೋಸ್ ಎಕ್ಸ್‌ಪಿ ಮತ್ತು ಬ್ರಾಹ್ಮಿ ಎರಡೂ ಯೂನಿಕೋಡಿನಲ್ಲಿ ಕೆಲಸ ನಿರ್ವಹಿಸುವಂತಹವು. ಬ್ರಾಹ್ಮಿ ವಿಂಡೋಸ್ ಮತ್ತು ಲೈನಕ್ಸ್ ಎಲ್ಲಾ ಆಪರೇಟಿಂಗ್ ಸಿಸ್ಟಂಗಳಲ್ಲೂ ಕಾರ್ಯ ನಿರ್ವಹಿಸುತ್ತದೆ.

ಕಂಪ್ಯೂಟರಿನ ಕೀಬೋರ್ಡ್‌ನ್ನು ಉಪಯೋಗಿಸಿಕೊಂಡು ಕನ್ನಡ ಅಕ್ಷರಗಳನ್ನು ಅಚ್ಚು ಮಾಡಬಹುದು. ಅಚ್ಚು ಮಾಡಿದ ಅಕ್ಷರಗಳನ್ನು ಪರದೆಯ ಮೇಲೆ ನೋಡಿದರೆ ಸಾಲದು ಅದನ್ನು ಒಂದೆಡೆ ಶೇಖರಿಸಿಯೂ ಸಹ ಇಡಬಹುದು. ಈ ಎಲ್ಲಾ ವ್ಯವಸ್ಥೆಯನ್ನೂ ವರ್ಡ್ ಪ್ರೋಸೆಸ್ಸರ್ (ಮೈಕ್ರೋಸಾಫ್ಟ್‌ನ ವರ್ಡ್ ಮತ್ತು ನೋಟ್ ಪ್ಯಾಡ್)ನ ಮುಖಾಂತರ ಮಾಡಬಹುದು. ವರ್ಡ್ ಪ್ರೊಸೆಸ್ಸರ್ ಎಂದರೆ ಕಂಪ್ಯೂಟರಿನ ಮೇಲ್ಭಾಗದಲ್ಲಿ ಅನೇಕ ರೀತಿಯ ಸೌಲಭ್ಯಗಳ ಸರಣಿಯಿರುತ್ತದೆ. ಉದಾಹರಣೆಗೆ, ಕಡತ, ಮುಚ್ಚು, ತೆಗೆ, ಉಳಿಸು, ಸಂಪಾದಿಸು, ವೀಕ್ಷಣೆ, ಸಲಕರಣೆ ಇನ್ನೂ ಮುಂತಾದವು ಇರುತ್ತವೆ. ಮೌಸನ್ನು ಆಯಾಯ ಕಡೆ ತೆಗೆದುಕೊಂಡು ಹೋಗಿ ಕ್ಲಿಕ್ಕಿಸಿದಾಗ ಆಯಾಯಾ ಕ್ರಿಯೆ ನಡೆಯುತ್ತದೆ. ನಾವು ಅಚ್ಚು ಮಾಡಿದುದನ್ನು ಧಾರಾಳವಾಗಿ ಉಳಿಸಿಕೊಳ್ಳಬಹುದು. ಆ ಕಡತವನ್ನು ಬೇಕೆಂದಾಗ ತೆರೆಯಬಹುದು, ಅಂತೆಯೇ ಮುಚ್ಚಬಹುದು. ಹೀಗೆ ಕಛೇರಿ ಅಥವಾ ಮನೆಯಲ್ಲಿನ ಕಡತಗಳನ್ನು ಅಚ್ಚಿಸಿ, ಉಳಿಸಿ ಬಳಸಬಹುದು. ಅಚ್ಚು ಮಾಡುವಾಗ ತಪ್ಪಾದರೆ ಟೈಪ್ ರೈಟರ್‌ನಂತೆ ಮತ್ತೊಮ್ಮೆ ಮಗದೊಮ್ಮೆ ಕಾಗದವನ್ನು ಹಾಳು ಮಾಡಬೇಕಾಗಿಲ್ಲ. ಕಂಪ್ಯೂಟರಿನ ಹಾಳೆಯಲ್ಲಿ ಅಳಿಸಿ, ಅದೇ ಜಾಗದಲ್ಲಿ ಮತ್ತೆ ಮತ್ತೆ ಅಂಟಿಸಿ ಸಂಸ್ಕರಣಗೊಳಿಸಬಹುದು. ಕಾಗದದ ಅನಿವಾರ್ಯತೆಯನ್ನು ಕಂಪ್ಯೂಟರ್ ನೀಗಿಹಾಕುತ್ತದೆ. ಬೇಕಾದಾಗ ಬೇಕಾದ ಕಡತವನ್ನು ಕಂಪ್ಯೂಟರಿಗೆ ಹೊಂದಿಸಿಟ್ಟುಕೊಂಡಿರುವ ಅಚ್ಚುಯಂತ್ರ (ಪ್ರಿಂಟರ್) ದಿಂದ ಪ್ರಿಂಟ್ ಮಾಡಬಹುದು. ಎಡಿಟ್‌ಗಳ ಮುಖಾಂತರ ಇ–ಮೈಲನ್ನು ಕಳುಹಿಸುವ ಸೌಲಭ್ಯವೂ ಲಭ್ಯವಿದೆ.

ಇದು ವರ್ಡ್ ಪ್ರೊಸೆಸ್ಸರ್ ಬಗೆಗಿನ ಸ್ಥೂಲ ಪರಿಚಯ

ಬರೆಯುವಾಗ ಅಂದರೆ ಅಚ್ಚು ಮಾಡುವಾಗ ಇಂಗ್ಲೀಷ್‌ನಲ್ಲಿಯಾದರೆ ಸ್ಖಾಲಿತ್ಯಗಳು ತಲೆದೋರಿದರೆ ಅದನ್ನು ಕಂಪ್ಯೂಟರಿನ ಒಳಗಿರುವ ಸ್ಪೆಲ್‌ಚೆಕ್‌ನಿಂದ ಸರಿಪಡಿಸಬಹುದು. ಆದರೆ ಕನ್ನಡದಲ್ಲಿ ಇನ್ನೂ ಈ ಪದಪರೀಕ್ಷಕ ಹಾಗೂ ವಾಕ್ಯ ಪರೀಕ್ಷಕಗಳ ನಿರ್ಮಾಣ ಆಗಬೇಕಾಗಿದೆ.

ಕನ್ನಡದಲ್ಲಿ ಈಗಾಗಲೇ ಅನೇಕ ಸಾಫ್ಟ್‌ವೇರ್‌ಗಳು ಲಭ್ಯವಿದ್ದು, ಒಂದು ಸಾಫ್ಟ್‌ವೇರಿನಲ್ಲಿ ಅಚ್ಚು ಮಾಡಿದ ಕಡತ ಮತ್ತೊಂದರಲ್ಲಿ ತೆರೆದುಕೊಳ್ಳುವುದಿಲ್ಲ. ಒಂದು ರೀತಿಯ ಅಕ್ಷರಶೈಲಿಯಲ್ಲಿ ಅಚ್ಚಾದ ಕಡತವು ಮತ್ತೊಂದು ಶೈಲಿಯ ಅಕ್ಷರದಲ್ಲಿ ತೆರೆದುಕೊಳ್ಳುವುದಿಲ್ಲ. ಈಗ ಈ ಎಲ್ಲಾ ಗೊಂದಲಗಳನ್ನೂ ನಿವಾರಿಸಲು ಅಕ್ಷರ ಪರಿವರ್ತಕಗಳು (ಫಾಂಟ್ ಕನ್ವರ್ಟರ್) ಮತ್ತು ಸಾಫ್ಟ್‌ವೇರ್ ಕನ್ವರ್ಟರ್‌ಗಳ ನಿರ್ಮಾಣ ಮಾಡುತ್ತಿದ್ದಾರೆ.

ಇದೇ ರೀತಿಯಲ್ಲಿ ಲೆಕ್ಕಗಳನ್ನು ಎಕ್ಸೆಲ್‌ನಲ್ಲಿ ಮಾಡಬಹುದು. ಕೂಡಿ, ಕಳೆದು, ಗುಣಿಸಿ, ಭಾಗಿಸುವ ಕೆಲಸ ಕಂಪ್ಯೂಟರ್ ಕ್ಷಣ ಮಾತ್ರದಲ್ಲಿ ಮಾಡಿ ಬಿಡುತ್ತದೆ. ಇದಕ್ಕೆ ಮಾಡಬೇಕಾದುದೆಲ್ಲಾ ಇಷ್ಟೇ. ಎಕ್ಸೆಲ್ ಶೀಟನ್ನು ತೆಗದಿರಿಸಿ ಕೊಂಡು ಅವರಲ್ಲಿರುವ ಮನೆಗಳಲ್ಲಿ ಬೇಕಾದ ವಿವರಗಳನ್ನು ತುಂಬಿ ಮೇಲಿರುವ ಸಿಗ್ಮ ಚಿಹ್ನೆಯನ್ನು ಉಪಯೋಗಿಸಿಕೊಳ್ಳುವುದು. ಕೂಡಿ, ಕಳೆದು, ಗುಣಿಸಿ, ಭಾಗಿಸುವುದು. ಕ್ಷಣ ಮಾತ್ರದಲ್ಲಿ ನಿಖರವಾದ ಲೆಕ್ಕಗಳು ನಿಮ್ಮ ಮುಂದೆ! ಇದೂ ಅಷ್ಟೆ ಎಕ್ಸೆಲ್‌ನ ಬಳಕೆಯ ಬಗೆಗಿನ ಪಕ್ಷಿನೋಟ.

ಕಂಪ್ಯೂಟರಿನ ಮೇಲೆ ಕನ್ನಡವಲ್ಲಿ ಹೀಗೆ ಅಚ್ಚು ಮಾಡುವ, ಲೆಕ್ಕಗಳನ್ನು ಬರೆದಿಡುವ ಕೆಲಸವಷ್ಟಕ್ಕೇ ಸೀಮಿತವಲ್ಲದ ಇನ್ನೂ ಅನೇಕ ಕಾರ್ಯಗಳು ನಡೆಯುತ್ತದೆ. ಅವುಗಳ ಬಗೆಗಿನ ಸ್ಥೂಲ ಪರಿಚಯ ಮಾಡಿಕೊಳ್ಳೋಣ:

೧. **ಕನ್ನಡ ಮತ್ತು ಒಸಿಆರ್ (ಆಪ್ಟಿಕಲ್ ಕ್ಯಾರೆಕ್ಟರ್ ರೆಕಗ್ನಿಷನ್) (ಚಾಕ್ಷುಷ ಅಕ್ಷರ ಗುರ್ತಿಸುವಿಕೆ)** : ಅಚ್ಚಾದ ಅಕ್ಷರಗಳು ನಮಗೆ ಕಂಪ್ಯೂಟರಿನ ಪರದೆಯ ಮೇಲೆ ಕಂಡರೂ ಒಂದೆ ಅದನ್ನು ಮೂಡಿಸುವ ತಾಂತ್ರಿಕತೆಯಲ್ಲಿ ಬರೀ ಸಂಖ್ಯೆಗಳೇ ಇವೆ ಎನ್ನುವುದನ್ನು ಮರೆಯಬಾರದು.

ಬರೆದಿರುವ ಅಥವಾ ಅಚ್ಚು ಮಾಡಿರುವ ಒಂದು ಹಾಳೆಯನ್ನು ನಾವು ಸ್ಕ್ಯಾನ್ ಮಾಡಬಹುದು. ಸ್ಕ್ಯಾನ್ ಮಾಡಲು ಒಂದು ಸ್ಕ್ಯಾನರ್ ಅವಶ್ಯಕ. ಸ್ಕ್ಯಾನರ್‌ನಲ್ಲಿ ಬರೆದ ಅಥವಾ ಅಚ್ಚು ಮಾಡಿದ ಹಾಳೆಯನ್ನಿರಿಸಿ, ಅದಕ್ಕೆ ಸ್ಕ್ಯಾನ್

ಮಾಡುವ ಆದೇಶ ನೀಡಿದಾಗ, ಆ ಹಾಳೆಯಲ್ಲಿರುವ ವಿಷಯ ಕಂಪ್ಯೂಟರಿನ ಪರದೆಯ ಮೇಲೆ ಮೂಡಿಬರುತ್ತದೆ. ಆದರೆ, ಅದನ್ನು ನಾವು ಓದಬಹುದೇ ವಿನಃ ಅದನ್ನು ಯಾವುದೇ ರೀತಿಯ ಮಾರ್ಪಾಡಿಗೆ ಒಳಪಡಿಸಲು ಆಗುವುದಿಲ್ಲ. ಇದಕ್ಕಾಗಿ ಕಂಪ್ಯೂಟರ್ ವಿಜ್ಞಾನಿಗಳು ಆಪ್ಟಿಕಲ್ ಕ್ಯಾರೆಕ್ಟರ್ ರೆಕಗ್ನಿಷನ್ (ಒಸಿಆರ್) ಎನ್ನುವ ಒಂದು ಸಾಫ್ಟ್‌ವೇರನ್ನು ಉತ್ಪದಿಸುತ್ತಿದ್ದಾರೆ. ಕಂಪ್ಯೂಟರಿನ ಪರದೆಯ ಮೇಲೆ ಮೂಡುವ ಅಕ್ಷರಗಳು ಪ್ರತಿಬಿಂಬಗಳಾಗಿರುತ್ತದೆ. ಈ ಪ್ರತಿಬಿಂಬಗಳನ್ನು ಒಸಿಆರ್ ಅಕ್ಷರಗಳನ್ನಾಗಿ ಗುರ್ತಿಸುವ ಪ್ರಕ್ರಿಯೆ ಕಂಪ್ಯೂಟರಿಗೆ ತರುತ್ತದೆ. ಆಗ ಪ್ರತಿಬಿಂಬಗಳು ಅಕ್ಷರಗಳಾಗಿ ಮೂಡಿ, ನಮ್ಮ ಹಿಡಿತಕ್ಕೆ ಸಿಗುತ್ತವೆ ಮತ್ತು ಅದನ್ನು ಅಕಸ್ಮಾತ್ ಬೇಕಾದರೆ ಹಲಕೆಲವು ಮಾರ್ಪಾಡುಗಳಿಗೂ ಒಳಪಡಿಸಬಹುದಾಗುತ್ತದೆ. ಉದಾಹರಣೆಗೆ, ಕಂಪ್ಯೂಟರ್ ಪರದೆಯ ಮೇಲಿನ ಅಕ್ಷರಗಳು ಚಿಕ್ಕವಾಗಿದ್ದರೆ ಅದನ್ನು ದೊಡ್ಡದನ್ನಾಗಿ ಮಾಡಬಹುದು (ಫಾಂಟ್‌ಗಳ ಆಕಾರ ಹೆಚ್ಚು, ಕಡಿಮೆ ಮಾಡಿಕೊಳ್ಳಬಹುದು). ಏನಾದರು ತಪ್ಪುಗಳಿದ್ದಲ್ಲಿ ತಿದ್ದಿಕೊಳ್ಳಬಹುದು. ಅನೇಕ ಪುಸ್ತಕಗಳ ಮರುಮುದ್ರಣ ಕಾರ್ಯದಲ್ಲಿ ಆ ಪುಸ್ತಕಗಳನ್ನು ಸ್ಕ್ಯಾನ್(ನಿಮಿಷಕ್ಕೆ ೫೦ ಪುಟ ಸ್ಕ್ಯಾನ್ ಮಾಡುವ ಸ್ಕ್ಯಾನರ್‌ಗಳು ಈಗ ಲಭ್ಯವಿದೆ) ಮಾಡಿ, ನಂತರ ಒಸಿಆರ್‌ನ ಮುಖಾಂತರ ಓಡಿಸಿದಾಗ, ಪುಸ್ತಕದ ಮತ್ತೊಂದು ಎಲೆಕ್ಟ್ರಾನಿಕ್ ಪ್ರತಿ (ವಿದ್ಯುದ್ಪ್ರತಿ) ಕ್ಷಣಮಾತ್ರದಲ್ಲಿ ಸಿದ್ಧವಾಗುತ್ತದೆ. ಅದರ ಪಾಸಿಟಿವ್ ಮಾಡಿ ಎಷ್ಟು ಪ್ರತಿಗಳನ್ನು ಬೇಕಾದರೂ ಮುದ್ರಿಸಬಹುದು.

ಈ ಒಸಿಆರ್, ಮುದ್ರಿಸಿದ ಪತ್ಯಕ್ಕಷ್ಟೇ ಮೀಸಲಲ್ಲ. ಅದನ್ನು ಹಸ್ತಪ್ರತಿಗಳನ್ನು ಗುರ್ತಿಸಲೂ ಸಹ ಬಳಸಬಹುದು. ಆಗ ಅದನ್ನು ಹ್ಯಾಂಡ್ ರಿಟನ್ ಕ್ಯಾರೆಕ್ಟರ್ ರೆಕಗ್ನಿಷನ್ (ಕೈ ಬರಹದ ಅಕ್ಷರ ಗುರ್ತಿಸುವಿಕೆ) ಎಂದು ಕರೆಯಲಾಗುತ್ತದೆ. ಈ ಕಾರ್ಯ ಇನ್ನೂ ಕನ್ನಡದಲ್ಲಿ ಮಾಡಬೇಕಾಗಿದೆ. ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಕನ್ನಡ ಒಸಿಆರ್ ಈಗಾಗಲೇ ಲಭ್ಯವಿದೆ.

ಒಂದು ಲೇಖನಿಯಂತಹ ಸಾಧನವನ್ನು ಬರವಣಿಗೆಯ ಮೇಲೆ ಹಾಯಿಸಿದಾಗ ಅದರ ಪತ್ಯ ಆ ಸಾಧನದ ಮೇಲೆ ಮೂಡಿಬರುತ್ತದೆ. ಅಮೆರಿಕದಲ್ಲಿ ಈ ಸಾಧನ ಲಭ್ಯವಿದೆ. ಈ ಸಾಧನ ಇಂಗ್ಲೀಷಿಗೆ ಮಾತ್ರ ಸೀಮಿತವಾದುದಾಗಿದೆ. ಇದರಲ್ಲಿ ವಾಕ್ ಸಂಶ್ಲೇಷಣೆಯನ್ನೂ ಜೋಡಿಸಿ, ಮುದ್ರಿತ ಪತ್ಯ ಓದಲೊಂದೇ ಅಲ್ಲ, ಕೇಳಲೂ ಸಹ ಸಾಧ್ಯವಾಗುವಂತೆ ಮಾಡಲಾಗುತ್ತಿದೆ. ಈ ಸಂಶೋಧನೆ ಶೀಘ್ರದಲ್ಲೇ ಫಲಕಾರಿಯಾಗುವ ಸೂಚನೆಗಳಿವೆ. ಇಂಗ್ಲೀಷ್‌ನಲ್ಲಿ ಬಂದದ್ದು ಕನ್ನಡದಲ್ಲಿ ಮಾಡಲು ಸ್ವಲ್ಪವೇ ಕಾಲ ಸಾಕಾಗುವುದರಿಂದ ನಾವು ಕನ್ನಡದಲ್ಲೂ ಇಂಥದ್ದೊಂದು ಸಾಧನವನ್ನು ಆದಷ್ಟು ಬೇಗ ನಿರೀಕ್ಷಿಸಬಹುದಾಗಿದೆ.

೩. ಕನ್ನಡ ಮತ್ತು ವಾಕ್ ಸಂಶ್ಲೇಷಣೆ

ವಾಕ್‌ನಿಂದ ಪಠ್ಯ

ಧ್ವನಿ ತರಂಗಗಳನ್ನು ಕಂಪ್ಯೂಟರಿನಲ್ಲಿ ಶೇಖರಿಸಿಕೊಂಡು ಅನಂತರ ಆ ಧ್ವನಿ ತರಂಗಗಳನ್ನು ಹೊಂದಿಸಿ ಮೂಡಿಸಲು 'ಅಲ್ಗಾರಿದಂ'ಗಳನ್ನು ಬರೆದು ಅದರ ಅನುಸಾರ ಧ್ವನಿ ತರಂಗಗಳನ್ನು ವ್ಯವಸ್ಥೆಗೊಳಿಸುವುದು ಕಂಪ್ಯೂಟರ್‌ನ ಮೂಲಕವೇ ನಡೆಸಬಹುದಾದ ಕ್ರಿಯೆ. ಇದಕ್ಕೆ ವಾಕ್ ಸಂಶ್ಲೇಷಣೆ ಎಂದು ಹೇಳುತ್ತಾರೆ. ಕನ್ನಡ ಭಾಷೆಯಲ್ಲಿನ ಧ್ವನಿಮಾಗಳನ್ನು ಭಾಷಾವಿಜ್ಞಾನದ ನಿಯಮಾನುಸಾರ ಕೂಡಿಸಿ ಅಲ್ಗಾರಿದಂಗಳನ್ನು ಬರೆಯಲಾಗುತ್ತದೆ. ಹೀಗೆ ಬರೆದ ಅಲ್ಗಾರಿದಂಗಳ ಜೋಡಣೆ ಮಾಡಲಾಗಿರುತ್ತದೆ. ನಾವು ಪದಗಳನ್ನು ಅಚ್ಚು ಮಾಡಿದಾಗ ಅದು ವಾಕ್‌ಗೂ ಪರಿವರ್ತನೆಯಾಗಿ ನಮಗೆ ಧ್ವನಿ ಕೇಳಲ್ಪಡುತ್ತದೆ. ಇದನ್ನು ವಾಕ್ ಸಂಶ್ಲೇಷಣೆ ಎಂದು ಕರೆಯುತ್ತಾರೆ. ಇಲ್ಲಿ ಪಠ್ಯದಿಂದ ವಾಕ್ ಅನ್ನು ಪಡೆಯುವ ಅವಕಾಶ ಲಭ್ಯವಿದೆ.

ಇದರ ಪ್ರಯೋಜನಗಳು

ಕಣ್ಣಿಲ್ಲದವರಿಗೆ ಇದರ ಉಪಯೋಗ ಬಹಳ. ಅವರು ಪಠ್ಯವನ್ನು ಕೇಳಿ ತಿಳಿದುಕೊಳ್ಳಬಹುದು.

ವಾಕ್‌ನಿಂದ ಪಠ್ಯ

ಇದೇ ರೀತಿ ವಾಕ್‌ನಿಂದ ಪಠ್ಯವನ್ನು ಪಡೆಯಬಹುದು. ಇಲ್ಲಿ ಕಂಪ್ಯೂಟರಿಗೆ ಹೊಂದಿಸಿದ ಮೈಕ್‌ನಿಂದ ಮಾತನಾಡಿದಾಗ ಧ್ವನಿ ತರಂಗಗಳು ಧ್ವನಿಮಾಗಳಾಗಿ ಪರಿವರ್ತಿಸಲ್ಪಟ್ಟು ಪರದೆಯ ಮೇಲೆ ಅಕ್ಷರಗಳಾಗಿ ಮೂಡಿಬರುತ್ತದೆ. ಈ ವ್ಯವಸ್ಥೆಗೆ ಸ್ಪಿಚ್ ರೆಕಗ್ನಿಷನ್ (ವಾಕ್ ಗುರುತಿಸುವಿಕೆ) ಎನ್ನುತ್ತಾರೆ. ಅಥವಾ ಸ್ಪೀಚ್ ಟು ಟೆಕ್ಸ್ಟ್ ಎನ್ನುತ್ತಾರೆ (ವಾಕ್‌ನಿಂದ ಪಠ್ಯ). ಇದರ ಬಗ್ಗೆ ಸಂಶೋಧನೆ ನಡೆಯುತ್ತಿದೆ.

ವಾಕ್‌ನಿಂದ ಪಠ್ಯದ ಉಪಯುಕ್ತತೆ ಅನೇಕ. ಬರವಣಿಗೆಯಲ್ಲಿ ತೊಡಗಲಾಗದ ವೃದ್ಧರು ಬಾಯಿಯಲ್ಲಿ ವಿಷಯವನ್ನು ಹೇಳಿದಾಗ ಕಂಪ್ಯೂಟರ್ ಅದನ್ನು ಬರೆದುಕೊಳ್ಳುತ್ತಾ ಹೋಗುತ್ತದೆ. ನಂತರ ಅದು ಮುದ್ರಣಕ್ಕೂ ಆಗುತ್ತದೆ.

ಈಗಾಗಲೇ ಈ ಸಾಫ್ಟ್‌ವೇರ್‌ಅನ್ನು ರೈಲ್ವೆನಿಲ್ದಾಣದಲ್ಲಿ ರೈಲುಗಳ ಆಗಮನ-ನಿರ್ಗಮನಗಳ ಬಗ್ಗೆ ಮಾಹಿತಿ ನೀಡುವುದಕ್ಕೆ ಉಪಯೋಗಿಸಲಾಗುತ್ತಿದೆ.

೪. **ಕನ್ನಡ ಮತ್ತು ಯಂತ್ರ ಭಾಷಾಂತರ :** ಭಾಷಾಂತರ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ವಿಷಯವನ್ನು ತರ್ಜುಮೆ ಮಾಡುವಂತಹ ಕಲೆ. ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಅನುವಾದ ಮಾಡುವಾಗ ಆ ಅನುವಾದಕನಿಗೆ ಎರಡೂ ಭಾಷೆಯ ಸಂಪೂರ್ಣ ಜ್ಞಾನ ಇರಬೇಕಾದುದು ಅತ್ಯವಶ್ಯಕ. ಅದೇ ಕೆಲಸವನ್ನು ಒಂದು ಯಂತ್ರದ (ಕಂಪ್ಯೂಟರಿನ) ಮುಖಾಂತರ ಮಾಡಿಸಿದಾಗ ಅದು ಯಂತ್ರ ಭಾಷಾಂತರವೆನ್ನಿಸಿ ಕೊಳ್ಳುತ್ತದೆ. ಯಂತ್ರ ಭಾಷಾಂತರ ಈಗ ವಿಶ್ವದಾದ್ಯಂತ ಕೇಂದ್ರೀಕೃತಗೊಂಡ ವಿಷಯವಾಗಿದೆ. ಈಗ ವಿಶ್ವದಾದ್ಯಂತ ಈ ಕಾರ್ಯದ ಮೇಲೆ ಗಮನಹರಿಸಲಾಗುತ್ತಿದೆ. ಭಾರತವೂ ಇದಕ್ಕೆ ಹೊರತಾಗಿಲ್ಲ. ಜಾಗತೀಕರಣದ ಈ ಸಂದರ್ಭದಲ್ಲಿ ಯಂತ್ರ ಭಾಷಾಂತರದ ಅನಿವಾರ್ಯತೆ ಬಹಳವಿದ್ದು ವಿಜ್ಞಾನಿಗಳೆಲ್ಲರೂ ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೆ ಮೆಷಿನ್ ಟ್ರಾನ್ಸ್‌ಲೇಷನ್ ಎಂದು ಕರೆಯುತ್ತಾರೆ. ಇಲ್ಲಿ ಅರ್ಥವಿಜ್ಞಾನ ಮತ್ತು ವಾಕ್ಯ ವಿಜ್ಞಾನದ ಬಗೆಗೂ ಮತ್ತು ಭಾಷಾವಿಜ್ಞಾನದ ತತ್ತ್ವಗಳು, ಭಾಷಾವಿಜ್ಞಾನದ ಮೂಲ ಸಿದ್ಧಾಂತಗಳೂ ಹಾಗೂ ಭಾಷಾವಿಜ್ಞಾನದ ನಿಯಮಗಳ ಅನುಸರಣೆ ಮಾಡಬೇಕಾಗುತ್ತದೆ. ಈಗ ಭಾಷಾ ನಿಪುಣರೂ, ಭಾಷಾವಿಜ್ಞಾನಿಗಳೂ ಮತ್ತು ಕಂಪ್ಯೂಟರ್ ವಿಜ್ಞಾನಿಗಳೂ ಸಮರಸ ದಿಂದ ಕೂಡಿ ಕೆಲಸ ಮಾಡಬೇಕಾಗಿದೆ. ಭಾಷೆಯಿಲ್ಲದೆ ಸಾಮಗ್ರಿ ಇರದು, ಭಾಷಾ ವಿಜ್ಞಾನಿಗಳಿಲ್ಲದೆ ಭಾಷಾ ನಿಯಮಗಳನ್ನು ಬಳಸಲಾಗದು ಮತ್ತು ಕಂಪ್ಯೂಟರ್ ವಿಜ್ಞಾನಿಗಳಿಲ್ಲದೆ ಕಂಪ್ಯೂಟರ್‌ನಲ್ಲಿ ಯಾವ ಕಾರ್ಯವೂ ಮಾಡ ಲಾಗದು. ಈಗ ಈ ಮೂರೂ ವಿಷಯಗಳಲ್ಲಿ ಪರಿಣತಿ ಇರುವವರು ಇಲ್ಲವಾದ್ದ ರಿಂದ ಮೂರೂ ವಿಷಯಗಳಲ್ಲಿನ ಸಮಾನಮನಸ್ಕರು ಒಟ್ಟಿಗೆ ಸೇರಿ ಕೆಲಸ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಬಹುಶಃ ಕಾಲು ಶತಮಾನದಿಂದಲೂ ಕೆಲಸ ನಡೆಯುತ್ತಿದ್ದರೂ ಇನ್ನೂ ಸ್ವಲ್ಪಮಟ್ಟಿಗಷ್ಟೇ ಸಾಧಿಸಲಾಗಿರುವುದು ವಿಷಾದನೀಯ ಸಂಗತಿ. ಈಗ ಭಾರತೀಯ ಭಾಷೆಗಳ ಒಳಗೆ ಅಂದರೆ ಹಿಂದಿಯನ್ನು ಮೂಲ ವಾಗಿಟ್ಟುಕೊಂಡು ಹಿಂದಿಯಿಂದ ಇನ್ನಿತರ ಭಾರತೀಯ ಭಾಷೆಗಳಿಗೂ ಹಾಗೂ ಇತರ ಭಾರತೀಯ ಭಾಷೆಗಳಿಂದ ಹಿಂದಿ ಭಾಷೆಗೂ, ಹಿಂದಿಯಿಂದ ಇಂಗ್ಲೀಷಿಗೂ, ಇಂಗ್ಲೀಷಿನಿಂದ ಹಿಂದಿಗೂ ಭಾಷಾಂತರಗಳನ್ನು ಮಾಡುವ ಪ್ರಯತ್ನದಲ್ಲಿದ್ದಾರೆ. ಈ ಭಾಷಾಂತರವನ್ನು ಸ್ವಲ್ಪ ಮಟ್ಟಿಗೆ ಸೆಲ್ ಫೋನುಗಳಲ್ಲೂ ಹಾಗೂ ಕಂಪ್ಯೂಟರಿನಲ್ಲೂ ಅಳವಡಿಸಲಾಗಿದೆ.

ಯಂತ್ರ ಭಾಷಾಂತರಕ್ಕಾಗಿ ಅನೇಕ ಸಲಕರಣೆಗಳನ್ನೂ ನಿರ್ಮಾಣ ಮಾಡಬೇಕಾಗಿದೆ. ಕಂಪ್ಯೂಟರಿಗೆ ಒಂದು ಪದದ ಅರ್ಥ ಅನೇಕವಿದ್ದಾಗ ಅರ್ಥ ಸ್ಪಷ್ಟನೆಯಿಲ್ಲದೆ ಸಂದಿಗ್ಧತೆಗೆ ಗುರಿಯಾಗುತ್ತದೆ. ಈ ಸಂದಿಗ್ಧತೆಯನ್ನು ತಪ್ಪಿಸಲು ಅನೇಕ ಪದಕೋಶಗಳ ನಿರ್ಮಾಣವಾಗಿ ಪ್ರತಿ ಪದದ ಅರ್ಥವ್ಯಾಪ್ತಿಯನ್ನೂ ನೀಡಬೇಕಾಗುತ್ತದೆ. ಇದನ್ನು ಯಂತ್ರ ಮುಖೇನ ಮಾಡಿದಾಗ ಪದಜಾಲ (ವರ್ಡ್ ನೆಟ್) ಆಗುತ್ತದೆ. ಪದಜಾಲ ಎಂದರೆ ಒಂದು ಪದದ ಎಲ್ಲಾ ಸಂಭವನೀಯ ಅರ್ಥಗಳ ಪಟ್ಟಿಕೆ. ಒಂದು ಪದದ ಎಲ್ಲಾ ರೂಪಗಳ ಬಳಕೆಯ ಸಾಂದರ್ಭಿಕ ವಿವರಣಾತ್ಮಕ ಪಟ್ಟಿಕೆ. ನಮ್ಮಲ್ಲಿ ಈಗ ಹಲಕೆಲವು ನಿಘಂಟುಗಳು ಲಭ್ಯವಿದೆ. ಆದರೆ ಇಂಗ್ಲೀಷಿನಲ್ಲಿ ಥಿಸಾರಸ್ ಇರುವಂತೆ ಕನ್ನಡದಲ್ಲಿ ಲಭ್ಯವಿಲ್ಲ. ಕೆಲವು ಸಮಾನಾರ್ಥ ಕೋಶಗಳು, ವಿರುದ್ಧಾರ್ಥ ಕೋಶಗಳು ಲಭ್ಯವಿದ್ದರೂ ಇವೆಲ್ಲಕ್ಕೂ ಮಿಕ್ಕುದಾದ ಕೋಶ ಪದಜಾಲವಾಗುವುದರಲ್ಲಿ ಸಂದೇಹವಿಲ್ಲ. ಪದಜಾಲದಲ್ಲಿ ಆಯಾಯಾ ಪದದ ಸಮಾನಾರ್ಥ (ಸಿನಾನಿಮ್), ನಾನಾರ್ಥ(ಹೆಟೆರೊನಿಮ್), ಸಂವೃತಾರ್ಥ (ಹೈಪೆರ್ನಿಮ್), ಸಮಗ್ರಾರ್ಥ (ಹೊಲೊನಿಮ್), ವಿರುದ್ಧಾರ್ಥ (ಆಂಟಾನಿಮ್), ಆಂಶಿಕಾರ್ಥ (ಮಿರೊನಿಮ್), ಅನ್ವಯಾಗತಾರ್ಥ (ಎನ್ಟೈಲ್ ಮೆಂಟ್ ಮತ್ತು ಟೊಪೊನೊಮಿ), ಅವಸ್ಥಾ ಹಂತ ಪ್ರಯೋಗ (ಗ್ರೆಡೇಷನ್) ಒಳಗೊಂಡಿರುತ್ತದೆ. (ವಿವರಗಳಿಗೆ ಪದಜಾಲದ ಬಗ್ಗೆ ಮತ್ತೊಂದು ಬೇರೆಯದೇ ಆದ ನನ್ನ ಲೇಖನವನ್ನು ನೋಡಿ). ಹೀಗೆ ಪದಜಾಲದ ನಿರ್ಮಾಣವನ್ನು ಮಾಡಿಕೊಂಡು ಅದನ್ನು ಯಂತ್ರ ಭಾಷಾಂತರಕ್ಕೆ ಉಪಯೋಗಿಸಿಕೊಳ್ಳಬೇಕಾಗಿದೆ. ಈ ರೀತಿ ಮಾನವ ಭಾಷೆಗಳನ್ನು ಕಂಪ್ಯೂಟರಿಗೆ ಅರ್ಥಮಾಡಿಸುವ ವ್ಯವಸ್ಥೆಗೆ ನ್ಯಾಚುರಲ್ ಲ್ಯಾಂಗ್ವೇಜ್ ಪ್ರೊಸೆಸ್ಸಿಂಗ್ (ಸ್ವಾಭಾವಿಕ ಭಾಷಾ ಪ್ರಯೋಗ) ಎನ್ನುತ್ತಾರೆ. ದೇಶದ ಬಹುಭಾಗದಲ್ಲಿ ಈ ಕೆಲಸ ನಡೆಯುತ್ತಿದೆ. ಕನ್ನಡದ ಕೆಲಸ ನಡೆಸಲು ಭಾರತ ಸರ್ಕಾರವು ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಒಂದು ಕನ್ನಡದ ಸಂಪನ್ಮೂಲ ಕೇಂದ್ರವನ್ನು ಪ್ರತಿಷ್ಠಾಪಿಸಿ, ಕನ್ನಡದಲ್ಲಿ ಕಂಪ್ಯೂಟರಿನ ಮೇಲೆ ಕಾರ್ಯ ನಡೆಸುತ್ತಿರುವುದು ಹರ್ಷದಾಯಕ ಸಂಗತಿಯಾಗಿದೆ.

ಯಂತ್ರ ಭಾಷಾಂತರಕ್ಕೆ ಬೇಕಾದ ಮತ್ತೊಂದು ಸಲಕರಣೆಯೆಂದರೆ ಟ್ಯಾಗಿಂಗ್. ಮಾಹಿತಿಯ ಬಗ್ಗೆ ಇನ್ನಷ್ಟು ಮಾಹಿತಿಯನ್ನು ಕಂಪ್ಯೂಟರಿಗೆ ಒದಗಿಸಿ ಕೊಡುವುದೇ ಟ್ಯಾಗಿಂಗ್.

ಅನುಸಾರಕ ಎನ್ನುವ ತಂತ್ರಾಂಶ ಸ್ವಲ್ಪಮಟ್ಟಿಗೆ ಜನಪ್ರಿಯವಾಗಿರುವ ಅನುವಾದಕ ತಂತ್ರಾಂಶ.

ನಾವು ಯಂತ್ರ ಭಾಷಾಂತರವನ್ನು ಸಾಧಿಸಿದ್ದೇ ಆದರೆ ಭಾಷೆಯೆಂಬುದು ಒಂದು ಪ್ರತಿಬಂಧಕವಾಗದೇ ವಿಶ್ವದಾದ್ಯಂತ ಎಲ್ಲರನ್ನೂ ಮತ್ತಷ್ಟು ಹತ್ತಿರಕ್ಕೆ ತರಬಹುದಾಗಿದೆ.

ಈ ಯಂತ್ರ ಭಾಷಾಂತರ ಬರಿಯ ಬರವಣಿಗೆಗೆ ಮಾತ್ರ ಸೀಮಿತವಲ್ಲ. ಇದನ್ನು ವಾಕ್‌ಗೂ ಸಹ ಅನ್ವಯಿಸಬಹುದಾಗಿದೆ. ಒಂದು ಮೂಲಭಾಷೆಯಿಂದ ವಾಕ್ ಗುರ್ತಿಸುವಿಕೆಯನ್ನುಂಟುಮಾಡಿ ಅದನ್ನು ಕಂಪ್ಯೂಟರಿನ ಮೇಲೆ ಮುದ್ರಿತ ಪಠ್ಯವನ್ನಾಗಿ ಪರಿವರ್ತಿಸಿದ ನಂತರ ಯಂತ್ರ ಭಾಷಾಂತರದ ಮುಖಾಂತರ ಆ ಮುದ್ರಿತ ಪಠ್ಯವು ನಮಗೆ ಬೇಕಾದ ಭಾಷೆಗೆ ವಾಕ್ ಸಂಶ್ಲೇಷಣೆಗೊಂಡು ಆ ನಂತರ ಬೇಕಾದ ಭಾಷೆಯಲ್ಲಿ ತರ್ಜುಮೆಯಾದ ಮಾತು (ವಾಕ್) ಕೇಳಿಬರುತ್ತದೆ. ಇದನ್ನು ಸ್ಪೀಚ್ ಟು ಸ್ಪೀಚ್ ಟ್ರಾನ್ಸ್‌ಲೇಷನ್ ಎಂದು ಕರೆಯುತ್ತಾರೆ. (ವಾಕ್‌ನಿಂದ ವಾಕ್ ಅನುವಾದ).

ಈ ವಾಕ್‌ನಿಂದ ವಾಕ್ ಅನುವಾದದ ಬಗೆಗಿನ ಸಂಶೋಧನೆ ಫಲಕಾರಿಯಾಗಿಬಿಟ್ಟರೆ ಪ್ರಪಂಚದ ಎಲ್ಲ ಜನರ ಭಾಷೆಗಳು ಒಂದಕ್ಕೊಂದು ಪೂರಕವಾಗಿ ಬಿಡುತ್ತದೆ ಮತ್ತು ಭಾಷಾ ಪ್ರತಿಬಂಧಕಗಳು ತೊಲಗಿಬಿಡುತ್ತವೆ. ಭಾಷೆ ಮತ್ತು ಸಂಸ್ಕೃತಿಯ ಸಂವಹನೆಗೆ ನಾಂದಿಯಾಗುತ್ತದೆ.

೫. ಕನ್ನಡ ಮತ್ತು ಮಾಹಿತಿ ತಂತ್ರಜ್ಞಾನ : ಕನ್ನಡಕ್ಕೂ ಮಾಹಿತಿ ತಂತ್ರಜ್ಞಾನಕ್ಕೂ ಎಲ್ಲಿನ ಸಂಬಂಧವೆಂದು ಅನೇಕರು ಮೂಗುಮುರಿದಿದ್ದರು. ಆದರೆ ಮಾಹಿತಿಯನ್ನು ಒಂದೆಡೆಗೆ ಸಂಗ್ರಹಿಸಿ, ಅದರ ಉಪಯುಕ್ತತೆಯನ್ನು ಕಾಲ ನಿರ್ಬಂಧವಿಲ್ಲದೆ, ಸ್ಥಳನಿರ್ಬಂಧವಿಲ್ಲದೆ ಎಲ್ಲರೂ ಪಡೆಯುವಂತೆ ಮಾಡುವಲ್ಲಿ ಮಾಹಿತಿ ತಂತ್ರಜ್ಞಾನ ಕನ್ನಡಕ್ಕೂ ವ್ಯಾಪಿಸಿದೆ. ಇಂದು ಅನೇಕ ವೃತ್ತಪತ್ರಿಕೆಗಳು, ಮ್ಯಾಗಜ್ಹೈನುಗಳು, ಜಾಲತಾಣಗಳು ಮುಂತಾದವುಗಳು ಎಲ್ಲಾ ಕನ್ನಡದಲ್ಲಿ ಲಭ್ಯವಿದೆ. ಎಲ್ಲ ಕನ್ನಡ ವೃತ್ತಪತ್ರಿಕೆಯ ಆವೃತ್ತಿ ಗಳೂ, ವಾರಪತ್ರಿಕೆಗಳೂ, ಪಾಕ್ಷಿಕಗಳೂ, ಮಾಸಪತ್ರಿಕೆಗಳೂ, ಸಿನೆಮಾ ಪತ್ರಿಕೆಗಳೂ ಕನ್ನಡದಲ್ಲಿ ಅಂತರ್ಜಾಲದಲ್ಲಿ ಲಭ್ಯವಿದೆ. ಕೆಲವು ಅತ್ಯಂತ ಉಪಯುಕ್ತ ವಿಷಯಗಳ ಮಾಹಿತಿಯನ್ನೊದಗಿಸುವ ಕನ್ನುಡಿಯಂತಹ ಜಾಲತಾಣಗಳು ಲಭ್ಯ ವಿದೆ. ಇವೆಲ್ಲ ಕನ್ನಡಕ್ಕೆ ಮಾಹಿತಿತಂತ್ರಜ್ಞಾನ ಸಾಧನಗಳನ್ನಳವಡಿಸಿ ನಿರ್ಮಿಸಿದ ಜಾಲತಾಣಗಳಾಗಿವೆ. ಮನೆಯಲ್ಲಿ, ಕಛೇರಿಯಲ್ಲಿ, ಬ್ರೌಸಿಂಗ್ ಕೇಂದ್ರಗಳಲ್ಲಿ ಎಲ್ಲೆಂದರಲ್ಲಿ ಈ ಸೌಲಭ್ಯ ಕಾಲದ ನಿರ್ಬಂಧವಿಲ್ಲದೆ ಎಲ್ಲರಿಗೂ ಏಕ ಕಾಲದಲ್ಲಿಯಾಗಲೀ ಲಭ್ಯ.

೬. **ಕನ್ನಡ ಮತ್ತು ಇ-ಕಲಿಕೆ :** ಕನ್ನಡ ಮತ್ತು ಕಂಪ್ಯೂಟರ್‌ಈ ಸೌಲಭ್ಯವನ್ನು ಉಪಯೋಗಿಸಿಕೊಂಡು ಇ-ಕಲಿಕೆಯನ್ನು ಪ್ರಾರಂಭಿಸ ಲಾಗಿದೆ. ಇ-ಕಲಿಕೆ ಯಾವುದೇ ವಿಷಯದಲ್ಲಿಯಾಗಲೀ ಉಂಟುಮಾಡಬಹುದು. ಒಂದು ಭಾಷೆಯನ್ನು ಕಲಿಸುವುದರಿಂದ ಹಿಡಿದು ತರಬೇತಿ ಕಾರ್ಯಕ್ರಮಗಳು, ಟೂಲ್ ಡಿಸೈನಿಂಗ್‌ವರೆಗೂ ಅಂತರ್ಜಾಲದ ಮುಖಾಂತರ ಬೋಧಿಸ ಬಹುದು. ಹೀಗೆ ಅಂತರ್ಜಾಲ ಬೋಧನೆಯಲ್ಲಿ ಕನ್ನಡವನ್ನೂ ಸಹ ಬೋಧಿಸಬಹುದು. ಯಾವುದೇ ವಿಷಯುವನ್ನಾಗಲೀ ಕನ್ನಡದಲ್ಲೂ ಬೋಧಿಸಬಹುದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಅಂತರ್ಜಾಲ ಬೋಧನಾ ಪದ್ಧತಿಯ ಮೂಲಕ ಕಲಿಯಬಹುದು, ಕಲಿಸಬಹುದು. ಕನ್ನಡವನ್ನು ವಿಶ್ವದಾದ್ಯಂತ ಬೋಧಿಸುವ, ಕಲಿಯುವ ಸದವಕಾಶವನ್ನು ಪಡೆಯಬಹುದು.

೭. **ಕನ್ನಡ ಮತ್ತು ಇ-ಅಂಚೆ :** ಬೇರೆ ಬೇರೆ ದೇಶಗಳಿಗೆ ಕನ್ನಡದಲ್ಲಿ ಈಗ ಅಂಚೆಯನ್ನು ಕ್ಷಣಮಾತ್ರದಲ್ಲಿ ಕಳುಹಿಸಬಹುದು. ಅದನ್ನು ವಿದ್ಯುದಂಚೆ ಎಂದು ಹೇಳಲಾಗುತ್ತದೆ. ಇ-ಮೈಲ್ ಎಂದು ಎಲ್ಲರಿಗೂ ಚಿರಪರಿಚಿತವಾದ ವಿದ್ಯುದಂಚೆ ಕನ್ನಡದಲ್ಲಿ ಮಾಡಲು ಸಾಧ್ಯ ವಾದುದು ಕನ್ನಡ ಮಾತ್ರವೇ ಅಲ್ಲವರಿಗಂತೂ ವರದಾನ! ತಮ್ಮ ಭಾವನೆಗಳನ್ನು ತಮ್ಮ ಮಾತೃಭಾಷೆಯಾದ ಕನ್ನಡದಲ್ಲಿ ಹಂಚಿಕೊಳ್ಳುವುದು ಕೆಲವರಿಗೆ ಹೆಮ್ಮೆಯ ಮತ್ತು ಸಂತಸದ ಸಂಗತಿ! ಕಂಪ್ಯೂಟರ್‌ನೊಂದಿಗೆ ಇಂಟರ್‌ನೆಟ್ (ಅಂತರ್ಜಾಲ) ಇರಲೇಬೇಕೆಂಬುದನ್ನು ಇಲ್ಲಿ ಮರೆಯ ಬಹುದು. ಕನ್ನಡವನ್ನು ಕಂಪ್ಯೂಟರಿನಲ್ಲಿ ಬಳಸುವಲ್ಲಿ ಇದೂ ಒಂದು ಪ್ರಭಾವಶಾಲಿ ಮಾಧ್ಯಮವಾಗಿದೆ.

೮. **ಕನ್ನಡ ಮತ್ತು ಬಹುಮಾಧ್ಯಮ :** ಕನ್ನಡಕ್ಕೆ ಬಹುಮಾಧ್ಯಮವನ್ನು ಬಳಸುವುದೂ ಈಗ ಸಾಧ್ಯ. ಒಂದೆಡೆ ಯಾವುದೇ ಭಾಷೆಗೆ ಬಹುಮಾಧ್ಯಮದ ಬಳಕೆ ಅಸಾಧ್ಯ ಎನ್ನುವುದು ಅನೇಕರ ಅಭಿಪ್ರಾಯ. ಆದರೆ ಬಹು ಮಾಧ್ಯಮಗಳಾದ ದೃಶ್ಯ, ಶ್ರವಣ ಮಾಧ್ಯಮಗಳನ್ನು ಬಳಸಿ ಭಾಷೆಯನ್ನು ಆಕರ್ಷಕವಾಗೂ, ಜೀವಂತವಾಗೂ ಮಾಡಲು ಸಾಧ್ಯವಿದೆ. ಇದಕ್ಕೆ ಉದಾಹರಣೆಯಾಗಿ ಇತ್ತೀಚೆಗೆ ನಾವು ಬಿಡುಗಡೆ ಮಾಡಿರುವ ಕನ್ನಡ "**ಬೋಧನಾ ಭಾರತಿ**"ಯನ್ನು ನೋಡಬಹುದು. "**ಬೋಧನಾ ಭಾರತಿ**"ಯಲ್ಲಿ ಪದ್ಯಗಳನ್ನು ಶಾಸ್ತ್ರೀಯ ಸಂಗೀತ, ಸುಗಮಸಂಗೀತ, ಜಾನಪದ, ಕಾವ್ಯವಾಚನ ಶೈಲಿಗಳಲ್ಲಿ ಹಾಡಿಸಿ ಅದನ್ನು ಅಳವಡಿಸಲಾಗಿದೆ.

ಕಂಪ್ಯೂಟರಿನ ಪರದೆಯ ಮೇಲೆ ಪಠ್ಯವು ಮೂಡಿಬರುತ್ತದೆ. ಅದರ ಹಿನ್ನೆಲೆಯಲ್ಲಿ ಆ ಪದ್ಯದ ಸುಶ್ರಾವ್ಯ ಗಾನ ಮೂಡಿಬರುತ್ತದೆ. ವಿದ್ಯಾರ್ಥಿಗಳಿಗೂ, ಶಿಕ್ಷಕರಿಗೂ ಅನುಕೂಲವಾಗುವಂತೆ ಪದ್ಯದ ಕರ್ತೃವಿನ ಛಾಯಾಚಿತ್ರವನ್ನು ನೀಡಿ, ಅವರ ಹುಟ್ಟೂರನ್ನು ಕರ್ನಾಟಕದ ನಕ್ಷೆಯಲ್ಲಿ ತೋರಿಸಲಾಗಿದೆ. ಪಠ್ಯದ ಸಾರಾಂಶವು ಕಂಪ್ಯೂಟರಿನ ಪರದೆಯ ಮೇಲೆ ಮೂಡಿಬಂದರೆ ಹಿನ್ನೆಲೆಯಾಗಿ ಅದರ ಧ್ವನಿಮುದ್ರಣ ಬಿತ್ತರಗೊಳ್ಳುತ್ತದೆ. ಇದೇ ರೀತಿ ಮುಖ್ಯಾಂಶಗಳು, ಪಠ್ಯದ ವಿಶೇಷ ಅಂಶಗಳೂ ಧ್ವನಿಯುಕ್ತವಾಗಿದ್ದು, ವಿಶೇಷ ಅಂಶಗಳನ್ನು ಪುಷ್ಟೀಕರಿಸಲು ಅನೇಕ ಛಾಯಾಚಿತ್ರಗಳನ್ನು ಹೀಗೆ ಮಾಡುವುದರಿಂದ, ವಿದ್ಯಾರ್ಥಿಗಳಿಗೆ ಪಠ್ಯದ ಪೂರ್ಣ ಅರಿವು ಉಂಟಾಗುತ್ತದೆ. ಒಮ್ಮೆ ಅವರು ಪಠ್ಯವನ್ನು ನೋಡಿದರೆ, ಅದನ್ನೇ ಕೇಳುತ್ತಾರೆ ಹಾಗೂ ಸುಲಭವಾಗಿ ಜ್ಞಾಪಕವಿಟ್ಟು ಕೊಳ್ಳಲು ಛಾಯಾಚಿತ್ರಗಳು ಸಹಾಯ ಮಾಡುತ್ತವೆ. ಕಲಿಯಲು ಆಸಕ್ತಿಯಿಲ್ಲದ ಮಕ್ಕಳನ್ನೂ ಸಹ ಶ್ರವ್ಯ ಹಾಗೂ ದೃಶ್ಯ ಮಾಧ್ಯಮಗಳು ತಮ್ಮೆಡೆ ಸೆಳೆದು ಕಲಿಕೆಯನ್ನು ಮೂಡಿಸುವಲ್ಲಿ ಯಶಸ್ವಿಯಾಗುತ್ತವೆ. ಸಂಧಿ ಹಾಗೂ ಸಮಾಸಗಳನ್ನು ವಿವರಿಸುವಾಗ ಅನಿಮೇಷನ್ ನೀಡಿ, ಅದು ಮಕ್ಕಳ ಮನಸ್ಸಿನಲ್ಲಿ ಅಚ್ಚೊತ್ತಿದ ಹಾಗೆ ಮಾಡುತ್ತವೆ. ಈ ರೀತಿಯ ಮೊತ್ತ ಮೊದಲ ಕನ್ನಡ ಬಹುಮಾಧ್ಯಮ ಸಿ ಡಿ 'ಬೋಧನಾ ಭಾರತಿ' ಯನ್ನು ಶಾಲೆಗಳಲ್ಲಿ ಪ್ರಯೋಗಿಸಿದಾಗ ಬಹಳ ಒಳ್ಳೆಯ ಫಲಿತಾಂಶ (ಕನಿಷ್ಠ ೭೦% ಅಂಕಗಳು) ತಂದದ್ದು ಹರ್ಷ ದಾಯಕವಾದದ್ದು. ಪದ್ಯಗಳನ್ನು ಗದ್ಯದಂತೆಯೇ ಬೋಧಿಸುತ್ತಿರುವ ಈ ಸಂದರ್ಭದಲ್ಲಿ ಯಾವ ಯಾವ ಪದ್ಯಗಳನ್ನು ಯಾವ ಯಾವ ಶೈಲಿಯಲ್ಲಿ ಹಾಡಬೇಕೋ ಹಾಡಿಸಿ ಅದನ್ನು ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ತಲುಪಿಸುವಲ್ಲಿ ಈ ಬಹು ಮಾಧ್ಯಮ ಸಿ ಡಿ ಯಶಸ್ವಿಯಾಗಿದೆ. ಹೊಸ ಪದಗಳ ಅರ್ಥವನ್ನು ಉಚ್ಚಾರಣೆ ಯೊಂದಿಗೆ ನೀಡಿರುವುದು ವಿದ್ಯಾರ್ಥಿಗಳಿಗೆ ಪದಗಳ ಉಚ್ಚಾರಣೆ ಸರಿಯಾಗಿ ಮಾಡುವಲ್ಲಿ ಮಾರ್ಗದರ್ಶನ ನೀಡುತ್ತದೆ. ಹೀಗೆ ಬಹೂಪಯೋಗೀ ಬಹು ಮಾಧ್ಯಮವನ್ನು ಕನ್ನಡದಲ್ಲಿ ಸಿ ಏನೆಲ್ಲಾ ಮಾಡಲು ಸಾಧ್ಯವಿದೆ!

ಬಹುಮಾಧ್ಯಮವನ್ನು ಕನ್ನಡಕ್ಕೂ ಬಳಸಿ ಕನ್ನಡ ಕ್ಷೇತ್ರವನ್ನು ಶ್ರೀಮಂತ ಗೊಳಿಸಬಹುದಾಗಿದೆ. ಆದರೆ ಇದು ಕಂಪ್ಯೂಟರ್ ಇಲ್ಲದೆ ಸಾಧ್ಯವಾಗದು. ಕನ್ನಡಕ್ಕೂ ಕಂಪ್ಯೂಟರ್ ಬೇಕೇ ಬೇಕು!

ಹೀಗೆ ನಾನಾ ರೀತಿಯಲ್ಲಿ ಕನ್ನಡವನ್ನು ಕಂಪ್ಯೂಟರಿನಲ್ಲಿ ಮೆರೆಸಬಹುದು. ನ್ನಡಕ್ಕೆ ಹೇಗೆ ಕಂಠ್ಯ ಮತ್ತು ತಾಳೆಗರಿಯ, ಹಲಗೆ ಬಳಪದ, ಕಪ್ಪು ಹಲಗೆ ಮೆಸುಣ್ಣದ, ಕಾಗದ ಲೇಖನಿಯ ಅವಶ್ಯಕತೆಯಿದೆಯೋ ಹಾಗೆಯೇ ಕಂಪ್ಯೂಟರಿನ ವಶ್ಯಕತೆಯೂ ಇದೆ.

ಈಗ ಚಾಲನೆಗೆ ಬರುತ್ತಿರುವ ಇ-ಭೂಮಿ, ಇ-ಬ್ಯಾಂಕಿಂಗ್, ಇ-ಮೈಲ್ ಗೇ ಅಲ್ಲದೆ ಅಂಗಡಿಯ ಬಿಲ್ಲು, ಸರಕು ಪಟ್ಟಿ, ದರ್ಜಿಯ ಬಳಿ ಅಳತೆ, ದ್ಯರ ಬಳಿಯಲ್ಲಿನ ನಮ್ಮ ರೋಗ ತಪಾಸಣೆ ವಿವರಗಳು, ವಿದ್ಯುಚ್ಛಕ್ತಿ ಬಿಲ್ಲು ವತಿ, ನೀರಿನ ಬಿಲ್ಲು ಪಾವತಿ, ದೂರವಾಣಿಯ ಬಿಲ್ಲಿನ ಪಾವತಿ ಎಲ್ಲಕ್ಕೂ ವು ಕಂಪ್ಯೂಟರನ್ನೇ ಅವಲಂಬಿಸಬೇಕಾಗಿದೆ. ಎಲ್ಲಾ ಬಿಲ್ಲುಗಳನ್ನೂ ಒಂದೇ ಡೆ ಪಾವತಿಸುವ ಸೌಲಭ್ಯ ನಮಗೆ ಬರಲಿದೆ. ಇದರಿಂದ ಸಮಯದ ಳಿತಾಯ ಸಾಧ್ಯವಾಗುತ್ತದೆ. ಅದು ಎಲ್ಲವೂ ಕನ್ನಡದಲ್ಲಿ ಲಭ್ಯವಿದೆ.

ಕನ್ನಡ ಮತ್ತು ಕಂಪ್ಯೂಟರ್ ಎರಡಕ್ಕೂ ಇರುವ ಅವಿನಾಭಾವ ಸಂಬಂಧ ನ್ನು ನಾವು ಕಾಣಬಹುದಾಗಿದೆ.

***

ಕೆ. ವಿ. ನಾರಾಯಣ ಅವರ
"ಧ್ವನ್ಯಾಲೋಕ, ಒಂದು ಅಧ್ಯಯನ"ದ ಅವಲೋಕನ

ಶ್ರೀ ಆರ್. ಲಕ್ಷ್ಮೀನಾರಾಯಣ

"ಧ್ವನ್ಯಾಲೋಕ-ಒಂದು ಅಧ್ಯಯನ" ಎಂಬ ಡಾ|| ಕೆ. ವಿ. ಎನ್ ಅವರ ಮಹಾಪ್ರಬಂಧ ಮೊದಲ ಬಾರಿಗೆ ಕನ್ನಡದಲ್ಲಿ ಕಾವ್ಯತತ್ತ್ವ ವಿಷಯಕವಾದ ವಿಚಾರಗಳನ್ನು ಸಂಸ್ಕೃತ ಕಾವ್ಯ ಮೀಮಾಂಸೆಯಲ್ಲಿ ಒಂದು ಮೈಲಿಗಲ್ಲೆನಿಸಿದ "ಧ್ವನ್ಯಾಲೋಕ"ದ ವಿಸ್ತೃತ ಅಧ್ಯಯನದ ಹಿನ್ನೆಲೆಯಲ್ಲಿ ಮತ್ತು ಅದರ ಅಂಗವಾಗಿ ವಿವರವಾದ ಚರ್ಚೆಗೆ ಒಳಗುಮಾಡುವ ಮಹತ್ವಾಕಾಂಕ್ಷೆಯ ಗ್ರಂಥವಾಗಿದೆ. ಇದರಲ್ಲಿ ನಾರಾಯಣ ಅವರದು ವಿವರಣೆಗಿಂತ ವಿಶ್ಲೇಷಣೆಯ ಕಡೆಗೆ ಒಲಿದ ಅಧ್ಯಯನ ಕ್ರಮವಾಗಿದೆ.

ಸಾಮಗ್ರಿ ಸಂಗ್ರಹಣೆ ಮತ್ತು ವಿಶ್ಲೇಷಣೆಯಲ್ಲಿ ಅವರು ಅನುಸರಿಸಿರುವ ಮಾರ್ಗ ತೌಲನಿಕ ಮಾರ್ಗ. ಇದಕ್ಕಾಗಿ ಅವರು ಸಂಸ್ಕೃತದ, ಇಂಗ್ಲೀಷಿನ ಮತ್ತು ಹಿಂದಿಯ ಕಾವ್ಯತತ್ತ್ವ ವಿಷಯದ ಗ್ರಂಥಗಳನ್ನು ಅಧ್ಯಯನ ಮಾಡಿ, ತಮ್ಮ ಧ್ವನ್ಯಾಲೋಕದ ಚರ್ಚೆಗೆ ಆ ಅಧ್ಯಯನದ ಫಲಗಳನ್ನು ಸಾರ್ಥಕವಾಗಿ ಬಳಸಿ ಕೊಂಡಿದ್ದಾರೆ.

ಧ್ವನ್ಯಾಲೋಕದ ಅಧ್ಯಯನದ ಸ್ವರೂಪ ಹೀಗಿದೆ : ಒಟ್ಟಾರೆ ಮೂರು ಭಾಗಗಳು. ಪ್ರಾರಂಭದ 'ಪ್ರವೇಶ'ದಲ್ಲಿ ತಮ್ಮ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪವನ್ನು ಹೇಳಿದ್ದಾರೆ. ಅನಂತರದ ಮೊದಲ ಭಾಗದಲ್ಲಿ (ಧ್ವನ್ಯಾಲೋಕ ಪೂರ್ವ ಕಾವ್ಯ ಮೀಮಾಂಸೆ ಪರಿಕಲ್ಪನೆಗಳು ವಿಕಾಸ) ಹಿನ್ನೆಲೆ, ಧ್ವನ್ಯಾಲೋಕದಲ್ಲಿ ಚರ್ಚಿತವಾಗಿರುವ ವಿಚಾರಗಳ ನಿರೂಪಣೆ ಮತ್ತು ಧ್ವನಿ ತತ್ತ್ವದ ವಿಶ್ಲೇಷಣೆ ಎಂದು ಮೂರು ಭಾಗಗಳಾಗಿ ಮಾಡಿಕೊಳ್ಳಲಾಗಿದೆ.

ಮೊದಲ ಭಾಗವಾದ ಹಿನ್ನೆಲೆಯಲ್ಲಿ, ಧ್ವನ್ಯಾಲೋಕದ ಹಿಂದಿನ ಕಾಲಾವಧಿಯ ಕಾವ್ಯಮೀಮಾಂಸೆಯ ಚರ್ಚೆಗಳನ್ನು ಸಂಗ್ರಹಿಸಲಾಗಿದೆ. ಇವರಲ್ಲಿ ಪ್ರಮುಖವಾಗಿ ಅಲಂಕಾರ ಮತ್ತು ರೀತಿ ಪ್ರಸ್ಥಾನಗಳು ಮತ್ತು ಈ ಕಾಲಾವಧಿಯ ಪ್ರಮುಖ ಆಲಂಕಾರಿಕರಾದ ಭಾಮಹ, ದಂಡಿ, ವಾಮನ, ಉದ್ಭಟ ಮತ್ತು ರುದ್ರಟ ಇವರ ಗ್ರಂಥಗಳು ಒಳಗೊಳ್ಳುವ ವಿಚಾರಗಳನ್ನು ಸಂಕ್ಷೇಪವಾಗಿ

ಪ್ರಸ್ತಾಪಿಸಲಾಗಿದೆ.

ಭಾಷಿಕ ರಚನೆಯಾದ ಕಾವ್ಯದ ಭಾಷಾ ವೈಶಿಷ್ಟ್ಯಗಳನ್ನು ವಿವರಿಸುವ ಕಡೆಗಿನ ಪ್ರಾಚೀನರ ಆಸಕ್ತಿ, ಅದರಲ್ಲಿ ಸ್ವಭಾವೋಕ್ತಿ - ವಕ್ರೋಕ್ತಿ ಎಂಬ ಪರಿಕಲ್ಪನೆಗಳ ವಿಸ್ತೃತವಾದ ಚರ್ಚೆ.

ಮುಂದೆ ಅಲಂಕಾರ ಮತ್ತು ಗುಣಗಳನ್ನು ಬೇರೆ ಬೇರೆ ಮಾಡಿಕೊಂಡ ಕ್ರಮ ಮತ್ತು ತತ್ಪರಿಣಾಮವಾಗಿ ಗಳದ ಸಾಧನೆಗಳ ಚರ್ಚೆ ಇದೆ.

ಅಲಂಕಾರಗಳಲ್ಲಿ ಶಬ್ದಾಲಂಕಾರ - ಅರ್ಥಾಲಂಕಾರಗಳನ್ನು ಕುರಿತ ಚರ್ಚೆ, ಇವರಲ್ಲಿ ಅಲಂಕಾರದ ಪರಿಕಲ್ಪನೆ ಬೆಳೆದು ಬಂದ ಬಗೆ, ಭಾಮಹ, ರುದ್ರಟ, ವಾಮನ, ಇದರ ವಿಚಾರಗಳು. ಅನಂತರ ಗುಣಗಳು, ಮಾರ್ಗಗಳನ್ನು ಕುರಿತಾದ ಚರ್ಚೆ - ಭಾಮಹ, ವಾಮನ ದಂಡಿ ಇವರ ವಿಚಾರ - ಗುಣ ವಿಶ್ಲೇಷಣೆ ಯಲ್ಲೇ ದೋಷದ ಬಗೆಗಿನ ಇದರ ವಿಚಾರಗಳು - ಹೀಗೆ ಧ್ವನ್ಯಾಲೋಕದ ರಚನಾ ಕಾಲಕ್ಕಿಂತ ಹಿಂದಿನ ಭಾರತೀಯ ಕಾವ್ಯ ಮೀಮಾಂಸಾ ವಿಚಾರಗಳನ್ನು ಚರ್ಚಿಸಿ - ಒಟ್ಟಾರೆ ಈ ಅವಧಿ ಕಾವ್ಯ ಮತ್ತು ಕಾವ್ಯ ಮೀಮಾಂಸೆಗಳೆರಡೂ ಕವಿಯ ಉಕ್ತಿಯಿಂದ ಸಹೃದಯನ ಅನುಭವದ ಕಡೆಗೆ ತಮ್ಮ ಶೋಧನೆಯ ಅವಧಾರಣೆಯನ್ನು ಬದಲಿಸುತ್ತಾ ಬಂದ ಅವಧಿ ಎಂದು ತೀರ್ಮಾನಿಸುತ್ತಾರೆ.

ಎರಡನೇ ಭಾಗದಲ್ಲಿ ಒಟ್ಟು ಎಂಟು ಅಧ್ಯಾಯಗಳಿವೆ. ಧ್ವನ್ಯಾಲೋಕದ ಕೃತಿ, ಕರ್ತೃ ವಿಚಾರಗಳನ್ನು ಕುರಿತ ಚರ್ಚೆ ಮೊದಲ ಅಧ್ಯಾಯದಲ್ಲಿದೆ.

ಕೃತಿಯ ಹೆಸರಿನ ಬಗೆಗಿನ ಚರ್ಚೆ, ಆನಂದವರ್ಧನನ ಕಾಲ, ಅವನ ಇತರ ಕೃತಿಗಳು ಹಾಗೂ ಧ್ವನ್ಯಾಲೋಕದ ಸ್ವರೂಪ ಇವುಗಳನ್ನು ಕುರಿತ ವಿವರ ಗಳಿವೆ. ಕೃತಿ ಸ್ವರೂಪದಲ್ಲಿ ಕಾಲಿಕೆಗಳು ಮತ್ತು ವೃತ್ತಿ ಇವುಗಳನ್ನು ಬೇರೆ ಬೇರೆ ವ್ಯಕ್ತಿಗಳು ಬರೆದರೆ - ಎಂಬ ಚರ್ಚೆ ಮಾಡಿ ತಮ್ಮ ಪ್ರಬಂಧದಲ್ಲಿ ವಾದದ ಸಾಧುತ್ವದ ದೃಷ್ಟಿಯಿಂದ ಏಕ ಕರ್ತೃತ್ವ ವಾದವನ್ನು ಒಪ್ಪಿರುವುದಾಗಿ ಹೇಳಿದ್ದಾರೆ.

ಕೃತಿಯ ಸ್ವರೂಪವನ್ನು ಹೇಳುವಾಗ ಧ್ವನಿಯನ್ನು ಕುರಿತ ವಿರೋಧಗಳ ಮಂಡನೆ - ಧ್ವನಿಯ ಅಸ್ತಿತ್ವದ ಸ್ಥಾಪನೆ, ಧ್ವನಿಯ ಪ್ರಭೇದ ಕುರಿತ ವಿವರಗಳು, (೨೮೩) ವ್ಯಂಜನಾ ಸಾಮಗ್ರಿ ಧ್ವನಿ ಪ್ರಯೋಜನ (೪ನೇ ಉದ್ಯೋತದ ವಿಷಯ).

ಅಲ್ಲದೆ ಧ್ವನ್ಯಾಲೋಕವು ಸಂಸ್ಕೃತದ ವ್ಯಾಸ, ವಾಲ್ಮೀಕಿ, ಕಾಳಿದಾಸ, ಬಾಣ, ಮಾಘ, ಅಮರು, ಭಟ್ಟ ನಾರಾಯಣ, ಪ್ರಾಕೃತ ಕವಿಗಳು-ಇವರುಗಳಿಂದ

ವಿಪುಲವಾಗಿ ಲಕ್ಷ್ಯ ಪದ್ಯಗಳನ್ನು ಆಯ್ದು ನೀಡಿರುವುದನ್ನು ಹೇಳಲಾಗಿದೆ. ಧ್ವನ್ಯಾಲೋಕದ ವ್ಯಾಖ್ಯಾನಗಳ ಬಗೆಗೆ ಹೇಳಲಾಗಿದೆ.

ಮುಂದಿನ ಅಧ್ಯಾಯಗಳಲ್ಲಿ ಧ್ವನಿ ತತ್ತ್ವಕ್ಕೆ ಹಿನ್ನೆಲೆಯಾದ ಸ್ಫೋಟದ ವಿಚಾರ, ಧ್ವನಿತತ್ತ್ವದ ಸ್ವರೂಪ – ಅದರ ವಿಸ್ತೃತ ವಿವರಣೆ, ವ್ಯಂಗ್ಯ, ಅಭಿಧಾ, ಲಕ್ಷಣಾ, ವ್ಯಂಜನಾ ವ್ಯಾಪಾರಗಳು, ಪ್ರತೀಯ ಮಾನದ ವಿಚಾರ, ವಾಚ್ಯ, ವ್ಯಂಗ್ಯ, ತಾತ್ಪರ್ಯ ವೃತ್ತಿಗಳ – ಇದರಲ್ಲಿ ಆನಂದ ವರ್ಧನನ ವಿಚಾರ ಮಂಡನೆಯ ರೀತಿ, ಧ್ವನಿಯ ಅರ್ಥ ಮತ್ತು ವ್ಯಾಪ್ತಿ, ಧ್ವನಿ ಪ್ರಭೇದಗಳು – ಇಲ್ಲೆಲ್ಲಾ ವಿಷಯ ಸಂಗ್ರಹವನ್ನು ನೀಡಲಾಗಿದೆ ಎಂದು ಹೇಳಿದ್ದರೂ ವಿಶ್ಲೇಷಣ ಪೂರ್ವಕವಾಗಿ ಮಂಡಿಸಿರುವ ಕ್ರಮ ಸೊಗಸಾಗಿದೆ.

ಮುಂದೆ ಧ್ವನಿ ವಿರೋಧಿಗಳ ವಾದದ ಚರ್ಚೆ; ಆನಂದ ವರ್ಧನ ತನ್ನ ಗ್ರಂಥದಲ್ಲಿ ನಿರೂಪಿಸಿರುವ ವಾದಗಳ ವಿವರಣೆ ಇದೆ.

ಇದರಲ್ಲಿ ಅಂತರ್ಭಾವ ವಾದಿಗಳು, ವಿರೋಧಿಗಳು ಎಂದು ವಿಭಾಗ ಮಾಡಿಕೊಂಡು, ಭಟ್ಟ ನಾಯಕ, ಮಹಿಮ ಭಟ್ಟ, ಕುಂತಕ ಧನಿಕ, ಧನಂಜಯ ಇವರ ವಿಚಾರಗಳ ಸ್ಥೂಲ ಪರಿಚಯ ಮಾಡಿಕೊಡಲಾಗಿದೆ. ಅನಂತರ ಧ್ವನಿ ಸಮರ್ಥಕರಾದ ಅಭಿನವಗುಪ್ತ ಮತ್ತು ಮಮ್ಮಟ ಇವರ ವಿಚಾರಗಳ ಮಂಡನೆ ಇದೆ.

ಮೂರನೇ ಭಾಗದಲ್ಲಿ ಮೂರು ಅಧ್ಯಾಯಗಳಿವೆ. ಮೊದಲ ಅಧ್ಯಾಯದಲ್ಲಿ ಧ್ವನ್ಯಾಲೋಕದಲ್ಲಿ ಮಂಡಿತವಾದ ಕಾವ್ಯತತ್ತ್ವಗಳ ವಿವರವಾದ ವಿಶ್ಲೇಷಣೆ ಇದೆ, ವಿವಿಧ ನೆಲೆಗಳಿಂದ.

ಕೃತಿಯೊಡನೆ ಓದುಗ, ಕವಿ ಮತ್ತು ಲೋಕ – ಇವು ಹೊಂದಿರುವ ಸಂಬಂಧಗಳ ಚರ್ಚೆ ಇದೆ. ಕಾವ್ಯತತ್ತ್ವದ ಕೇಂದ್ರ ಅದರ ವ್ಯಾಪ್ತಿ ಕುರಿತ ಚರ್ಚೆ ಇದೆ.

ಎರಡನೇ ಅಧ್ಯಾಯವಾದ "ಆನಂದ ವರ್ಧನನ ದೃಷ್ಟಿ ಹಾಗೂ ವೈಶಿಷ್ಟ್ಯ"ದಲ್ಲಿ ಆನಂದವರ್ಧನನ ಸಾಧನೆಗಳನ್ನು ತುಂಬ ಸಮರ್ಪಕವಾಗಿ ವಿಶ್ಲೇಷಿಸಲಾಗಿದೆ. ಕಾವ್ಯಾನುಭವದ ನೆಲೆಯನ್ನು ಆನಂದವರ್ಧನ ಬಳಸುವ ರೀತಿ, ಅದರಿಂದ ಕಾವ್ಯದ ವ್ಯಾಖ್ಯೆ ಬದಲಾದ್ದು, ವ್ಯಂಜಕ ಸಾಮಗ್ರಿ ಆಧರಿಸಿ ವ್ಯಂಗ್ಯಾರ್ಥವು ಪ್ರತೀಯಮಾನವಾಗುವುದು. ಕವಿಗಳಿಗೆ ಧ್ವನ್ಯಾಲೋಕ ನೀಡುವ ಸೂಚನೆಗಳು ಇವನ್ನೆಲ್ಲಾ ತುಂಬ ಸಮರ್ಥವಾಗಿ ಮಂಡಿಸಲಾಗಿದೆ. ಆನಂದ

ವರ್ಧನನ ವಿಮರ್ಶಕ ದೃಷ್ಟಿಕೋನ ವಿಶ್ಲೇಷಣೆ ಇದೆ. ಸಮಕಾಲೀನ ಚಿಂತನೆಗಳ ಹಿನ್ನೆಲೆಯಲ್ಲಿ ಆನಂದ ವರ್ಧನನ ಕಾವ್ಯತತ್ತ್ವದ ವೈಶಿಷ್ಟ್ಯಗಳನ್ನು, ಸಮಸ್ಯೆಗಳನ್ನು ಚರ್ಚಿಸಲಾಗಿದೆ.

ಇಲ್ಲೆಲ್ಲಾ ಇದುವರೆಗೆ ಹೇಳದಿರುವ ಹೊಸ ವಿಚಾರಗಳ ಮಂಡನೆ ಇದೆ. ಲಕ್ಷ್ಯ ಪದ್ಯಗಳು ಹೇಗೆ ಅವನೊಬ್ಬ Practical critic (ಪ್ರಾಯೋಗಿಕ ವಿಮರ್ಶಕ) ಎನ್ನುವುದನ್ನು ಎತ್ತಿ ತೋರಲಾಗಿದೆ. ಮುಂದಿನ ಅಧ್ಯಾಯದಲ್ಲಿ ಆಧುನಿಕ ಚಿಂತನೆಗಳ ಹಿನ್ನೆಲೆಯಲ್ಲಿ ಧ್ವನ್ಯಾಲೋಕದ ವಿಚಾರಗಳನ್ನು ವಿವೇಚಿಸುವ ಹಾಗೂ ಧ್ವನ್ಯಾಲೋಕದ ವಿಚಾರಗಳ ನೆರವಿನಿಂದ ಆಧುನಿಕ ಕಾವ್ಯಚಿಂತನೆಗಳನ್ನು ಗ್ರಹಿಸುವ ತೌಲನಿಕ ಅಧ್ಯಯನವಿದೆ.

I. A. Richards, Empson, Agden ಇವರ ವಿಚಾರಗಳ ಚರ್ಚೆ ಮತ್ತು ಶೈಲಿ ವಿಜ್ಞಾನದ ವಿಚಾರಗಳನ್ನು ಬಳಸಿಕೊಂಡು ವಿಶ್ಲೇಷಣೆ ನಡೆಸಿರುವುದು ಇದೆ.

ನಾರಾಯಣ ಅವರ ಮಹಾ ಪ್ರಬಂಧದ ನಿಜವಾದ ವಿದಗ್ಧತೆ ಮತ್ತು ವೈಶಿಷ್ಟ್ಯ ಇರುವುದೇ ಕೊನೆಯ ಭಾಗದಲ್ಲಿ. ಇದರಲ್ಲಿ ಅವರು ಆನಂದವರ್ಧನನ ಸಾಧನೆಯನ್ನು ತುಂಬ ಸಮರ್ಥವಾಗಿ ವಿಶ್ಲೇಷಿಸಿರುವುದು. ಅದಕ್ಕಿಂತ ಹೆಚ್ಚಾಗಿ ಪಾಶ್ಚಾತ್ಯ ಕಾವ್ಯ ಚಿಂತಕರ ಅನೇಕ ಚಿಂತನೆಗಳಿಗೂ ಆನಂದವರ್ಧನನ ಚಿಂತನೆಗಳಿಗೂ ಹೇಗೆ ಸಾಮ್ಯವಿದೆ ಎಂಬುದನ್ನು ತೋರಿಸಿಕೊಟ್ಟಿರುವುದು. ಇದರಲ್ಲಿ ಅವರ ಅಪಾರವಾದ ಓದು, ಪ್ರಖರವಾದ ವಿಶ್ಲೇಷಣೆ ಎರಡೂ ಶ್ರೇಷ್ಠ ಮಟ್ಟದವು.

ಟಿಪ್ಪಣಿಗಳನ್ನು ನೀಡುವ ಕ್ರಮ

ಪ್ರತಿ ಅಧ್ಯಾಯದ ಕೊನೆಯಲ್ಲಿ ವಿವರವಾದ ಟಿಪ್ಪಣಿಗಳನ್ನು ನೀಡಿದ್ದಾರೆ. ಸಾಮಾನ್ಯವಾಗಿ ಟಿಪ್ಪಣಿಗಳಲ್ಲಿ [ನಾವು ನೋಡುವುದು] ಸಂಬಂಧಿಸಿದ 'ಉದ್ಧರಣೆ' ಇರುವ ಗ್ರಂಥದ ಹೆಸರು, ಗ್ರಂಥ ಕರ್ತೃ, ಮುದ್ರಣವಾದ ವರ್ಷ, ಪುಟ ಸಂಖ್ಯೆ- ಇವುಗಳನ್ನು ಮಾತ್ರ ಉಲ್ಲೇಖಿಸಿರುತ್ತಾರೆ ಆದರೆ ಇಲ್ಲಿ ಅವೆಲ್ಲವನ್ನೂ ನೀಡುವದರ ಜೊತೆಗೆ, ವಿವರಗಳನ್ನು, ವ್ಯಾಖ್ಯಾನಗಳನ್ನು ನೀಡುತ್ತಾರೆ. ಇದು ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ. ಹೆಚ್ಚು ಅಧಿ. ತತೆ ತಂದುಕೊಟ್ಟಿದೆ.

ಕೆಲವು ಅಧ್ಯಾಯಗಳ ಕೊನೆಯಲ್ಲಿ ಟಿಪ್ಪಣಿ 'ಂದು ಹೇಳಿ ಇನ್ನು ಕೆಲವು ಕಡೆ ಅಡಿ ಟಿಪ್ಪಣಿಗಳೆಂದು ಹೇಳಲಾಗಿದೆ. ಇದು ಉದ್ದೇಶಪೂರ್ವಕವೋ, ಆಕಸ್ಮಿಕವೋ ಅಥವಾ ಮುದ್ರಕರ ಅಚಾತುರ್ಯವೋ ಥಟ್ಟನೆ ಗೊತ್ತಾಗುವುದಿಲ್ಲ-

ಅವು ಪುಟದ ಅಡಿಯಲ್ಲಿಯೇ ಬರಬೇಕಾಗಿದ್ದ ಅಡಿ ಟಿಪ್ಪಣಿಗಳಾಗಿದ್ದರೂ ಅಧ್ಯಾಯದ ಕೊನೆಯಲ್ಲಿ ಹೇಳಲಾವುದರಿಂದ, ಎಲ್ಲದಕ್ಕೂ ಸಾರ್ವತ್ರಿಕವಾಗಿ ಟಿಪ್ಪಣಿಗಳೆಂದೇ ಹೇಳುವುದು ಸೂಕ್ತವಾಗುತ್ತಿತ್ತು.

ಟಿಪ್ಪಣಿ ನೀಡುವಾಗ ಏಕರೂಪತೆ ಇಲ್ಲ. ಕಾರಣ ಪುಟ ಪುಟದಲ್ಲೂ ಸಂಬಂಧಪಟ್ಟ ಉಲ್ಲೇಖಗಳನ್ನು, ಉದ್ಧರಣೆಗಳನ್ನು ಮಾಡಿದಾಗ ಎಲ್ಲಿಂದ ಎಂಬುದನ್ನು ಅಲ್ಲಲ್ಲೇ ಕಂಸಗಳಲ್ಲಿ ಸೂಚಿಸಿದ್ದಾರೆ. ಇದು ಒಂದು ದೃಷ್ಟಿಯಿಂದ ಅನುಕೂಲ ಎನ್ನಿಸಿದರೂ, ಅಷ್ಟು ಸರಿಯಲ್ಲ. ಇವನ್ನೂ ಪುಟದ ಅಡಿಯಲ್ಲೋ ಇಲ್ಲ ಅಧ್ಯಾಯದ ಕೊನೆಯಲ್ಲೋ ನೀಡಬೇಕಾಗಿತ್ತು. ಆದರೆ ಎಲ್ಲವನ್ನೂ ಆಧಾರಗಳ ಬೆಂಬಲದಿಂದ ಅಚ್ಚುಕಟ್ಟಾಗಿ ನಿರೂಪಿಸುವ ಪ್ರಧಾನ ಮೆಚ್ಚುವಂಥದು.

ಕಾವ್ಯಮೀಮಾಂಸೆಯಂಥ ತಾತ್ವಿಕ ವಿಚಾರಗಳನ್ನು ಮಂಡಿಸುವಲ್ಲಿ ಪರಸ್ಪರ ವಿರುದ್ಧವಾದ ವಿಮರ್ಶನ, ತತ್ತ್ವಗಳ ನಡುವಿನಿಂದ ಸಮಸ್ಯೆಯನ್ನು ಬಿಡಿಸಿಕೊಂಡು ಹೋಗಬೇಕಾಗುತ್ತದೆ. ಅದು ಅಪಾರವಾದ ವಿಶ್ಲೇಷಣಾ ಸಾಮರ್ಥ್ಯವನ್ನು ಬೇಡುತ್ತದೆ. ಅದು ಸಾಕಷ್ಟು ಪ್ರಮಾಣದಲ್ಲಿದೆ ಎಂದೇ "ಧ್ವನ್ಯಾಲೋಕ -ಒಂದು ಅಧ್ಯಯನ" Challenging ಆದ ಕೃತಿ ಎನ್ನಬಹುದು.

ನಾರಾಯಣ ಅವರ ಮಹಾ ಪ್ರಬಂಧದ ಭಾಷೆಯ ಬಗ್ಗೆ

"ಸಂಶೋಧನ ಪ್ರಬಂಧದ ಭಾಷೆ ಸರಳವಾಗಿರಬೇಕು. ವಾಕ್ಯಗಳು ಚಿಕ್ಕ ಚಿಕ್ಕವಾಗಿದ್ದು, ಲೇಖನ ಅಭಿಪ್ರಾಯ ಸ್ಪಷ್ಟವಾಗಿ ಮೂಡಿಬರಬೇಕು". ('ಸಂಶೋಧನ'- ಡಾ|| ಎಂ.ಚಿ. ಮೂರ್ತಿ, ಪುಟ ೨೮) ಎಂಬ ಅಭಿಪ್ರಾಯವಿದೆ. ಆದರೆ ನಾರಾಯಣ ಅವರ ಪ್ರಬಂಧದ ಭಾಷೆ ಸರಳವೆಂದು ಹೇಳುವುದಂತೂ ಸಾಧ್ಯವಿಲ್ಲ. ಹೇಳಬೇಕಾದ ವಿಷಯವೇ ಗಹನವಾಗಿ, ಪಾರಿಭಾಷಿಕ ಪದಗಳ ಬಾಹುಳ್ಯವೂ ಹೆಚ್ಚಾಗಿರುವುದರಿಂದ, ಭಾಷೆ ಅಷ್ಟು ಸಲೀಸಾಗಿಲ್ಲ. ಆದರೆ ಅದು ಆಲಂಕಾರಿಕವಂತೂ ಅಲ್ಲ. ಮಾತುಗಳ ದುಂದುಗಾರಿಕೆ ಇಲ್ಲ. ಅಸ್ಪಷ್ಟತೆ, ಅನಿರ್ದಿಷ್ಟತೆ, ಸಂದಿಗ್ಧತೆಗಳಿಂದ ಮುಕ್ತವಾಗಿ ಹರಳುಗಟ್ಟಿಸಿದಂಥ ವಾಕ್ಯರಚನೆ ಇದಾಗಿರುವುದರಿಂದ ಭಾಷೆ ಕೆಲವೊಮ್ಮೆ ಕ್ಲಿಷ್ಟವೆನಿಸಿದರೂ ವಿಚಾರ ಗಹನತೆಯಿಂದಾಗಿ ಪ್ರಬಂಧದ ಓದು ಸಾರ್ಥಕವೆನಿಸುತ್ತದೆ.

ಕೊನೆಯಲ್ಲಿ ಕೊಟ್ಟಿರುವ ಆಕರಸೂಚಿ ಅಂತ್ಯ ಗ್ರಂಥಋಣ(Bibliography)ಗಳು ಲೇಖಕರ ಅಪಾರವಾದ ಓದಿಗೆ ಸಾಕ್ಷಿಯಾಗಿವೆ. ಸಂಸ್ಕೃತ, ಇಂಗ್ಲಿಷ್, ಕನ್ನಡ ಮತ್ತು ಹಿಂದಿ ಹೀಗೆ ಬಹುಭಾಷಾ ಗ್ರಂಥಗಳ ಅಧ್ಯಯನದಿಂದ ಪರಿಪುಷ್ಟಗೊಂಡಿರುವ ಸಂಪನ್ಮೂಲಗಳು, ವಿಷಯ ಸಂಗ್ರಹಣೆ ಮತ್ತು ವಿಷಯ

ವಿಶ್ಲೇಷಣೆಗೆ ವಿಪುಲ ಸಾಮಗ್ರಿಯನ್ನು ಒದಗಿಸಿವೆ.

ಇನ್ನು ಇದು ಅನ್ಯ ಜ್ಞಾನ ಶಿಸ್ತುಗಳಾದ ತತ್ತ್ವಶಾಸ್ತ್ರ, ವಿಮರ್ಶೆ, ಭಾಷಾ ವಿಜ್ಞಾನ ಇವುಗಳನ್ನು ಸಾರ್ಥಕವಾಗಿ ಬಳಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನದಿಂದಾಗಿ ಹೆಚ್ಚಿನ ಮೆರುಗು ಬಂದಿದೆ. ಒಟ್ಟಾರೆ ಕಾವ್ಯಮೀಮಾಂಸೆಯ ಕ್ಷೇತ್ರದಲ್ಲಿ ಮೈಲುಗಲ್ಲೆನಿಸಿದ ಗ್ರಂಥದ ಸಮಗ್ರ ಅಧ್ಯಯನವೆಂಬ ಕಾರಣಕ್ಕೆ ಎಲ್ಲರ ಮೆಚ್ಚುಗೆ ಪಡೆಯುತ್ತದೆ.

ಇನ್ನು ವಿಷಯವನ್ನು ಮಂಡಿಸುವ ಕ್ರಮದಲ್ಲಿಯೂ ಅತ್ಯಂತ ವಿಚಕ್ಷಣತೆಯನ್ನು ತೋರಲಾಗಿದೆ. ಉದಾಹರಣೆಗೆ, ಮೊದಲ ಭಾಗದಲ್ಲಿ ಧ್ವನ್ಯಾಲೋಕ ಪೂರ್ವದ ಕಾವ್ಯಮೀಮಾಂಸೆಯಲ್ಲಿ ಒಬ್ಬೊಬ್ಬ ಆಲಂಕಾರಿಕನ ವಿಚಾರಗಳನ್ನು ವಿಸ್ತಾರವಾಗಿ ಚರ್ಚಿಸಬಹುದಿತ್ತು. ಆದರೆ ಆ ಗೊಡವೆಗೆ ಹೋಗದೆ, ಅದುವರೆಗೆ ಮಂಡಿತವಾಗಿದ್ದ ಪರಿಕಲ್ಪನೆಯ ನೆಲೆಗಳನ್ನು ಆಧಾರವಾಗಿಟ್ಟುಕೊಂಡು ವಿಷಯ ವಿಶ್ಲೇಷಿಸಿರುವುದರಿಂದ, ಅಧ್ಯಾಯಕ್ಕೆ ಒಂದು ಒಳ್ಳೆಯ ಬಂಧ ಪ್ರಾಪ್ತವಾಗಿದೆ.

ಅಧ್ಯಯನದ ಸ್ವರೂಪ ಕುರಿತಾದ ಬರಹದಲ್ಲಿ ಗ್ರಂಥ ಕರ್ತೃವೇ ಎಲ್ಲೆಲ್ಲಿ ವಿಷಯ, ಚಿಂತನ ಸಂಗ್ರಹಿಸಿದೆ ಎಂಬುದನ್ನು ಅತ್ಯಂತ ಪ್ರಾಂಜಲವಾಗಿ ಹೇಳಿಬಿಟ್ಟಿದ್ದಾರೆ. ಇದು ಸಂಶೋಧಕನ ಪ್ರಾಮಾಣಿಕತೆಗೆ ಜ್ವಲಂತ ನಿದರ್ಶನವಾಗಿದೆ.

***

ತಮಿಳು – ಕನ್ನಡ : ಭಾಷಾ ಬಾಂಧವ್ಯ

ತಮಿಳ್ ಸೆಲ್ವಿ

ಬಹಳ ವರ್ಷಗಳವರೆಗೆ ಕನ್ನಡ ಭಾಷೆ ಸಂಸ್ಕೃತದಿಂದ ಜನಿಸಿದ್ದು ಎಂಬ ಅಭಿಪ್ರಾಯ ವಿದ್ವಾಂಸರಲ್ಲಿತ್ತು. ಸಂಸ್ಕೃತ ಶಬ್ದಗಳು ಕನ್ನಡದಲ್ಲಿ ಹೇರಳವಾಗಿ ಬಳಕೆಯಲ್ಲಿರುವುದೇ ಇದಕ್ಕೆ ಮೂಲ ಕಾರಣ. ಜೊತೆಗೆ, ಭರತಖಂಡದಲ್ಲಿ ಬಳಕೆಯಲ್ಲಿರುವ ಭಾಷೆಗಳೆಲ್ಲ ಸಂಸ್ಕೃತದಿಂದಲೇ ಜನಿಸಿದುವೆಂದೂ, ಅವು ಆರ್ಯನ್ ಭಾಷಾವರ್ಗಕ್ಕೆ ಸೇರಿದುವೆಂದೂ ಅಭಿಪ್ರಾಯವಿತ್ತು. ಕಾಲಕ್ರಮೇಣ ಸೂಕ್ಷ್ಮ ಪರಿಶೀಲನೆ ಹಾಗೂ ಆಳವಾದ ಅಧ್ಯಯನದ, ಫಲವಾಗಿ ಈ ಅಭಿಪ್ರಾಯಗಳು ಬದಲಾದವು. ಉತ್ತಾರಭಾರತದ ಭಾಷೆಗಳು ಸಂಸ್ಕೃತ ಜನ್ಯವೆಂದೂ, ದಕ್ಷಿಣ ಭಾರತದ ಭಾಷೆಗಳು ದ್ರಾವಿಡಜನ್ಯವೆಂದೂ ಸ್ಥಿರವಾಯಿತು. ಆರಂಭದಲ್ಲಿ ಭಾರತದಾದ್ಯಂತ ದ್ರಾವಿಡರೇ ಆವರಿಸಿಕೊಂಡಿದ್ದು, ಆರ್ಯರು ದಾಳಿಯಿಟ್ಟ ಮೇಲೆ ದಕ್ಷಿಣದತ್ತ ಸರಿಯುತ್ತಾ ಬಂದು ಇಲ್ಲಿಯೇ ಸ್ಥಿರವಾಗಿ ನೆಲೆನಿಂತರೆಂದು ಇತಿಹಾಸತಜ್ಞರು ಹೇಳುತ್ತಾರೆ.

ಆ ದ್ರಾವಿಡ ಭಾಷೆಯೇ ದಕ್ಷಿಣ ಭಾರತದ ಭಾಷೆಗಳ ಮೂಲತಾಯಿ. ಕ್ರಮೇಣ ದ್ರಾವಿಡಭಾಷೆ ಉಪಭಾಷೆಗಳಾಗಿ ಕವಲೊಡೆಯುತ್ತಾ ಹೋಗಿ ಪ್ರತ್ಯೇಕ ಭಾಷೆಗಳು ರೂಪುಗೊಂಡವು. ಈ ಕ್ರಿಯೆ ಯಾವ ಕಾಲದಲ್ಲಿ ನಡೆಯಿತೆಂಬುದನ್ನು ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವಿಲ್ಲ. ಹೀಗೆ ಪ್ರತ್ಯೇಕಗೊಂಡ ಭಾಷೆಗಳಲ್ಲಿ ಗ್ರಂಥಸ್ಥವಾದವು ನಾಲ್ಕು ಭಾಷೆಗಳು ಮಾತ್ರ. ಅವುಗಳು ತಮಿಳು, ಕನ್ನಡ, ತೆಲುಗು ಹಾಗೂ ಮಲಯಾಳಂ.

ಲಭ್ಯ ಮಾಹಿತಿಗಳ ಪ್ರಕಾರ ದ್ರಾವಿಡ ಭಾಷೆಗಳಲ್ಲೆಲ್ಲಾ ಲಿಖಿತ ಸಾಹಿತ್ಯ ಪಡೆದಿರುವ ಭಾಷೆಗಳಲ್ಲಿ ತಮಿಳು ಪ್ರಾಚೀನವಾದದ್ದು. ಇದರ ಸಾಹಿತ್ಯ ಚರಿತ್ರೆಯನ್ನು ಕ್ರಿ.ಶ. ೧–೨ನೇ ಶತಮಾನದಿಂದಲೇ ಗುರುತಿಸಬಹುದು. (ಕ್ರಿ.ಪೂ. ೨ರಿಂದ ೫ನೇ ಶತಮಾನದ ಹಿಂದೆಯೇ ತಮಿಳು ಸಾಹಿತ್ಯ ಚರಿತ್ರೆ ಆರಂಭವಾಗುತ್ತದೆನ್ನುವ ಅಭಿಪ್ರಾಯವೂ ಉಂಟು. ಆದರೆ ಈ ಬಗ್ಗೆ ಒಮ್ಮತವಿಲ್ಲ). ಆ ಕಾಲದ ತಮಿಳು ಸಾಹಿತ್ಯವನ್ನು ಸಂಗಂ ಸಾಹಿತ್ಯ ಎನ್ನುತ್ತಾರೆ. ಇದು ವೈದಿಕ ಸಾಹಿತ್ಯಕ್ಕಿಂತ ಭಿನ್ನವಾದದ್ದು. ಅದರ ಆಶೋತ್ತರ ಜನಜೀವನಕ್ಕೆ ಸಮೀಪವಾಗಿರುವುದೇ ಅದರ ವೈಶಿಷ್ಟ್ಯ.

ತಮಿಳು, ಅನೇಕ ಕಡೆ ಮೂಲ ದ್ರಾವಿಡ ರೂಪಗಳನ್ನು ಉಳಿಸಿಕೊಂಡಿರುವುದರಿಂದ ಕನ್ನಡಕ್ಕಿಂತ ಹಿಂದಿನದು ಎಂಬ ಭ್ರಾಂತಿಯನ್ನುಂಟು ಮಾಡಿದ್ದೂ ಉಂಟು. ಅಷ್ಟೇ ಅಲ್ಲದೆ, ತಮಿಳಿನಿಂದಲೇ ಕನ್ನಡ ಜನಿಸಿದೆ ಎಂಬ ಅಭಿಪ್ರಾಯಕ್ಕೂ ಎಡೆ ನೀಡಿತ್ತು. ಮೂಲದ್ರಾವಿಡದಿಂದ ಕವಲೊಡೆದಿರುವ ಈ ಎರಡೂ ಭಾಷೆಗಳ ಧಮನಿಗಳಲ್ಲಿ ಸಂಚರಿಸುತ್ತಿರುವ ರಕ್ತ ಒಂದೇ ಆಗಿರುವುದರಿಂದ ಇವುಗಳ ಭಾಷಿಕ ಸಂಬಂಧಗಳು .ಇಂದಿಗೂ ನಿಚ್ಚಳವಾಗಿ ಗೋಚರಿಸುತ್ತವೆ.

ಸಂಸ್ಕೃತ ಸಾಹಿತ್ಯದ ಪ್ರಭಾವದಿಂದಾಗಿ ಕನ್ನಡ-ತೆಲುಗು-ಮಲಯಾಳಂಗಳ ಸಾಹಿತ್ಯ ಒಂದು ರೀತಿಯಾದರೆ, ತಮಿಳು ಇವೆಲ್ಲವುಗಳಿಗಿಂತ ಪ್ರತ್ಯೇಕವಾಗಿ ನಿಲ್ಲುತ್ತದೆ. ಅಕ್ಷರಮಾಲೆ, ವ್ಯಾಕರಣ, ಛಂದಸ್ಸು, ಧ್ವನಿವ್ಯವಸ್ಥೆ, ಉಚ್ಚಾರಣಾ ವಿಧಾನ ಎಲ್ಲವುಗಳಲ್ಲೂ ದ್ರಾವಿಡ ಲಕ್ಷಣಗಳನ್ನೇ ಉಳಿಸಿಕೊಂಡಿರುವ ಭಾಷೆಯಿದು. ಇಲ್ಲಿ ಸಂಸ್ಕೃತದ ಪ್ರಭಾವ ಹೆಚ್ಚಾಗಿಲ್ಲ. ಸಂಸ್ಕೃತದ ಪ್ರಭಾವಕ್ಕೊಳಗಾಗಬಾರದೆಂದು ಉದ್ದೇಶಪೂರ್ವಕವಾಗಿಯೇ ನಡೆದಿರುವ ಪ್ರಯತ್ನವಿದು. ಸಂಸ್ಕೃತವನ್ನು 'ವಡಮೊಳಿ' ಎಂದರೆ 'ಉತ್ತರದ ಭಾಷೆ'ಯೆಂದು ಕರೆದು ಅಂತರವನ್ನು ಕಾಪಾಡಿಕೊಂಡಿದ್ದಾರೆ. ಹ್ರಸ್ವಸ್ವರ, ಮಹಾಪ್ರಾಣಾಕ್ಷರಗಳು ತಮಿಳಿನ ವರ್ಣಮಾಲೆಯಲ್ಲೇ ಇಲ್ಲ. ಕಾರಣ ಇವು ಸಂಸ್ಕೃತ ವರ್ಣಮಾಲೆಯ ಕೊಡುಗೆಯಾಗಿರುವುದು. ಸಂಸ್ಕೃತವನ್ನು ಬಳಸಿಕೊಳ್ಳಲೇಬೇಕಾಗಿ ಬಂದ ಕಡೆ ರೂಪಾಂತರ ಮಾಡಿಕೊಂಡಿದ್ದಾರೆ. ಒಟ್ಟಿನಲ್ಲಿ, ೨೦೦೦ ವರ್ಷಗಳ ಇತಿಹಾಸದಲ್ಲಿ ತಮಿಳು ಭಾಷೆಯ ಸ್ವರೂಪದಲ್ಲಿ ಹೆಚ್ಚು ಬದಲಾವಣೆಯಾಗಿಲ್ಲ. ಈ ಕಾರಣದಿಂದಲೇ ಕನ್ನಡ-ತಮಿಳಿನಿಂದ ಜನಿಸಿದ್ದು ಎಂಬ ಅಭಿಪ್ರಾಯ ಮೂಡಿದ್ದಿರಲೂಬಹುದು.

ತಮಿಳಿನಲ್ಲಿ ದೇಶ್ಯ ಪದಗಳ ಸಂಪತ್ತು ಹೇರಳವಾಗಿದ್ದರೂ ಅಲ್ಲಿನ ಪದ ಸಂಪತ್ತು ಕಡಿಮೆ. ವರ್ಣಮಾಲೆಯಲ್ಲಿ ದೇಶೀಯ ಅಕ್ಷರಗಳಷ್ಟೇ ಇರುವುದರಿಂದ ಅಕ್ಷರಗಳ ಸಂಖ್ಯೆ, ತನ್ಮೂಲಕ ಪದಗಳ ಸಂಖ್ಯೆಯೂ ಕಡಿಮೆ. ಕನ್ನಡದ ವರ್ಗೀಯ ವ್ಯಂಜನಗಳಲ್ಲಿನ ನಾಲ್ಕು ಅಕ್ಷರಗಳಿಗೆ ಬದಲಾಗಿ ತಮಿಳಿನಲ್ಲಿ ಒಂದೇ ಅಕ್ಷರವನ್ನು ಉಪಯೋಗಿಸುತ್ತಾರೆ. ಎಂದರೆ, ಕ,ಖ,ಗ,ಘ - ಈ ನಾಲ್ಕು ಅಕ್ಷರಗಳನ್ನು 'ಕ' ಒಂದೇ ಪ್ರತಿನಿಧಿಸುತ್ತದೆ. ಉಳಿದ ವರ್ಗಗಳಿಗೆ ಸಂಬಂಧಿಸಿದಂತೆಯೂ ಈ ಮಾತು ಅನ್ವಯಿಸುತ್ತದೆ. ಅಂದರೆ, ವರ್ಗದ ಮೊದಲ ಅಕ್ಷರವೇ ಉಳಿದ ಮೂರು ಅಕ್ಷರಗಳಿಗೂ ಬಳಕೆಯಾಗುತ್ತದೆ. ಇದರಿಂದಾಗಿ ಸಹಜವಾಗಿಯೇ ತಮಿಳಿನ ಪದಗಳ ಸಂಖ್ಯೆಯೂ ಕಡಿಮೆಯಾಗುತ್ತದೆ. ಉದಾಹರಣೆಗೆ,

ಕಾಂತಿ - ಗಾಂಧಿ

ಪಾಲು - ಬಾಲು

ತಾತಾ - ದಾದಾ

ಕತೆ - ಗದೆ - ಹೀಗೆ ಈ ಎರಡೂ ಪದಗಳಿಗೂ ಒಂದೇ ರೀತಿಯ ಅಕ್ಷರಗಳನ್ನು ಬಳಸುವುದುಂಟು.

ಸಂಸ್ಕೃತವನ್ನು ದೂರತಳ್ಳಿದರೂ, ತಮಿಳಿನಲ್ಲಿ ಸಂಸ್ಕೃತದ ಪ್ರಭಾವ ಕಿಂಚಿತ್ತೂ ಇಲ್ಲ ಎಂದು ಹೇಳಲಾಗದು. ಹಾಗೆಯೇ ಇತರ ಭಾಷೆಗಳ ಪ್ರಭಾವ ದಿಂದಲೂ ತಪ್ಪಿಸಿಕೊಳ್ಳಲು ಅದಕ್ಕೆ ಸಾಧ್ಯವಾಗಿಲ್ಲ. ಹಿಂದೂಸ್ತಾನಿ ಹಾಗೂ ಇತರೇ ಭಾಷೆಗಳ ಪದಗಳು ತಮಿಳಿನಲ್ಲಿ ತತ್ಸಮ ಅಥವಾ ತದ್ಭವಗಳ ರೂಪದಲ್ಲಿ ಬಳಕೆಯಲ್ಲಿವೆ,

ಉದಾ:ಗೆ, (ಹಿಂ) ತಕರಾರ್ > (ತ) ತಗರಾರ್

ಖಾಲಿ > ಕಾಲಿ

ಬದಲ್ > ಬದಿಲ್

ಚಂದಾ > ಸಂದಾ ... ಇತ್ಯಾದಿ

ಕನ್ನಡ ಹಾಗೂ ಉಳಿದ ಇತರ ದ್ರಾವಿಡ ಭಾಷೆಗಳು ಸಂಸ್ಕೃತವನ್ನು ಧಾರಾಳವಾಗಿ ಸ್ವೀಕರಿಸಿವೆ. ವರ್ಣಮಾಲೆಯಿಂದಾರಂಭಿಸಿ ಹಲವಾರು ಪದಗಳು ಸಂಸ್ಕೃತದಿಂದಲೇ ಪ್ರಭಾವಿತವಾಗಿವೆ. ಕನ್ನಡದಲ್ಲಿ ಮಹಾಪ್ರಾಣಾಕ್ಷರವಿರುವ ಪದ ಗಳೆಲ್ಲವೂ ಸಂಸ್ಕೃತ ಮೂಲದವೇ ಆಗಿವೆ. ಇದರಿಂದ ಕನ್ನಡದ ಪದ ಸಂಪತ್ತು ಶ್ರೀಮಂತಗೊಂಡಿದೆ. ಕೆಲವೊಮ್ಮೆ ಅತಿಯೆನಿಸಿದ್ದೂ ಉಂಟು. ಅದನ್ನು ಸಹಿಸಲಾರದ ಕವಿಯೊಬ್ಬ 'ಕನ್ನಡ-ಸಂಸ್ಕೃತ' ಪದಗಳ ಬೆರಸುವಿಕೆಯನ್ನು 'ಮುತ್ತುಂ ಮೆಳಸುಂ ಕೋದಂತೆ' ಎನ್ನುತ್ತಾನೆ. ತೆಲುಗಿನಲ್ಲೂ ಸಂಸ್ಕೃತದ ಗಾಢ ಪ್ರಭಾವವನ್ನು ಗುರುತಿಸಬಹುದು. ಮಲಯಾಳಂನಲ್ಲಿ ಸಂಸ್ಕೃತ ಮಿಶ್ರಿತ ಕಾವ್ಯ ಶೈಲಿಯನ್ನು 'ಮಣಿಪ್ರವಾಳ ಶೈಲಿ' ಎಂದೇ ಕರೆಯುತ್ತಿದ್ದರು. ದ್ರಾವಿಡ ಭಾಷೆಗಳಲ್ಲಿ ತಮಿಳು ಹಾಗೂ ಮಲಯಾಳಂಗಳ ನಡುವೆ ಇಂದಿಗೂ ನಿಕಟವಾದ ಸಂಬಂಧವಿದೆ. ಒಂದೇ ಭಾಷೆಯ ಎರಡು ಶಾಖೆಗಳೆಂಬುದು ನಿಚ್ಚಳವಾಗಿ ಕಂಡುಬರುತ್ತದೆ.

ಕನ್ನಡ ಭಾಷೆಯ ಜೊತೆಗೂ ತಮಿಳಿನ ಬಾಂಧವ್ಯ ಸಾಮೀಪ್ಯವಾದುದೇ ಆಗಿದೆ. ಈ ಎರಡೂ ಭಾಷೆಗಳಲ್ಲಿ ಉಪಯೋಗಿಸುವ ಹಲವಾರು ಪದಗಳು ಈಗಲೂ ಒಂದೇ ಆಗಿವೆ. ಉದಾ:ಗೆ, ಕಣ್, ಕೈ, ಅರಿವು, ಮರ, ಸಂಚಲನ, ಸಂಬಂಧ, ಆರು, ನಾನ್-ನೀನ್, ಅವರ್... ಇತ್ಯಾದಿ ಪದಗಳನ್ನು ಗಮನಿಸ ಬಹುದು. ಇನ್ನು ಕೆಲವು ಪದಗಳು ಕೊಂಚಮಟ್ಟಿನ ಬದಲಾವಣೆಗೊಳಗಾಗಿದ್ದರೂ, ಒಂದೇ ಮೂಲ ಪದದ ಭಿನ್ನ ಉಚ್ಚಾರಗಳೆಂಬುದು ಥಟ್ಟನೆ ಗೋಚರವಾಗುತ್ತವೆ. ಇದಕ್ಕೆ ಉದಾಹರಣೆಯಾಗಿ ಕೆಳಗಿನ ಪದಗಳನ್ನು ನೋಡಬಹುದು.

ಏರಾಳಂ > ಹೇರಳ

ಇನಿ > ಇನ್ನುಂ

ಚೆಡಿ > ಗಿಡ

ವಂಡಿ > ಬಂಡಿ... ಇತ್ಯಾದಿ

ಹಳಗನ್ನಡಕ್ಕೂ ತಮಿಳಿಗೂ ಇನ್ನೂ ನಿಕಟವಾದ ನಂಟು. ಪೂರ್ವದ ಹಳಗನ್ನಡ ಹಾಗೂ ತಮಿಳು ಎರಡನ್ನೂ ಗಮನಿಸಿದಾಗ ಇವೆರಡರ ನಡುವೆ ಅಂತಹ ವ್ಯಾತ್ಯಾಸಗಳೇನೂ ಕಂಡುಬರುವುದಿಲ್ಲ. ಪೂರ್ವದ ಹಳಗನ್ನಡ ದ್ರಾವಿಡ ರೂಪಗಳನ್ನು ಇನ್ನೂ ಉಳಿಸಿಕೊಂಡಿದ್ದುದೇ ಅದಕ್ಕೆ ಕಾರಣ. ಕನ್ನಡದ ಪ್ರಾಚೀನ ಶಾಸನವೆನಿಸಿರುವ ಹಲ್ಮಿಡಿ ಶಾಸನ ಹಾಗೂ ಶ್ರವಣ ಬೆಳಗೊಳದ ಕೆಲವು ಹಳೆಯ ಶಾಸನಗಳಲ್ಲಿರುವ ಪದ ಪ್ರಯೋಗವನ್ನು ಗವನಿಸಿದಾಗ ಈ ಮಾತು ಇನ್ನಷ್ಟು ಸ್ಪಷ್ಟವಾಗುತ್ತದೆ.

ಪಲ್ಮಿಡಿಉಂ ಮೂಳವಳ್ಳಿಉಂ ಪಿಟ್ಟಾರ್,

ಪೆತ್ತಜಯನಾ, ಇದಾನ್, ನಾಡುಳ್ ... ಇತ್ಯಾದಿ (ಹಲ್ಮಿಡಿ ಶಾಸನ)

ತಮಿಳಿನಲ್ಲಿ 'ಉಂ' ಸಮುಚ್ಚಯಾವ್ಯಯ ಈಗಲೂ ಬಳಕೆಯಲ್ಲಿದೆ. ಉದಾಹರಣೆಗೆ :

'ಅವನುಂ ನಾನುಂ ಪೋಗುಂ ಪೋದು'.

ಹಾಗೆಯೇ ಉಳ್, ಅರ್, ಅನ್ ಇತ್ಯಾದಿ ಪ್ರಯೋಗಗಳನ್ನೂ ಗಮನಿಸಬಹುದು.

'ಕಟ್ವಪ್ಪಿನಾ ವೆಟ್ಟದುಳ್ ಅವರ್ ಸ್ವರ್ಗಾಗ್ರಮನೇಱದಾರ್',

'ಸಿದ್ಧ ಸಮಯಂ ತಪ್ಪಾದೆ ನೋನ್ತಿನ್ತಿನನ್ ಮುನಿವರನ್

ದೇವಲೋಕಕ್ಕೆ ಸಂದಾನ್,

'ವೆಳೆಯಾದೆ',

'ಪಞ್ಚಮಹಾಪಾತಕ ಸಂಯುಕ್ತರಪ್ಪಾರ್...' ಇತ್ಯಾದಿ ಪ್ರಯೋಗಗಳು ಶಾಸನಗಳಲ್ಲಿ ದೊರಕುತ್ತವೆ. ತಮಿಳಿನಲ್ಲಿ ಈ ರೂಪಗಳು ಇಂದಿಗೂ ಇವೆ.

ಉದಾ : ಗೆ, ಉಳ್ :	ಅನ್	ಅರ್
ವೀಟ್ಟುಕ್ಕುಳ್	ವಂದಾನ್	ಪರಿದಾರ್
ತಣ್ಣಿಕ್ಕುಳ್	ಪೋನಾನ್	ವಂದಾರ್
ಎನಕ್ಕುಳ್	ಮಾಟ್ಟಾನ್	ಸೇಂದಾರ್... ಇತ್ಯಾದಿ

ಇವು ದ್ರಾವಿಡ ರೂಪಗಳು. ಆದ್ದರಿಂದಲೇ ಪೂರ್ವದ ಹಳಗನ್ನಡದಲ್ಲೂ ಹಾಗೆಯೇ ಬಳಕೆಯಾಗಿವೆ. ಕಾಲಕ್ರಮೇಣ ಕನ್ನಡ ಭಾಷೆಯು ಸ್ವರೂಪ ಬದಲಾಗುತ್ತಾ ಬಂದು ಈಗ ಈ ಪ್ರಯೋಗಗಳು ಕಂಡುಬರುತ್ತಿಲ್ಲ. 'ವಡ್ಡಾರಾಧನೆ'ಯಲ್ಲಿ ತಮಿಳಿಗೆ ಹತ್ತಿರವಾದ ಪದ ಪ್ರಯೋಗಗಳು ಹೇರಳವಾಗಿವೆ. ಹಳಗನ್ನಡದಲ್ಲೂ ಇಂತಹ ಸಮೀಪ ಸಂಬಂಧ ರೂಪಗಳನ್ನು

ಗುರುತಿಸಬಹುದು. ನಾನು ಮನೆಯಲ್ಲಿ ಹಳಗನ್ನಡ ಕಾವ್ಯವನ್ನು ಓದುವಾಗ, 'ಏನು? ತಮಿಳು ಓದುತ್ತಿದ್ದೀಯಾ?!' ಎಂದು ಪ್ರಶ್ನಿಸಿದ್ದಾರೆ. ಇವೆರಡರಲ್ಲೂ ಹೆಚ್ಚಿನ ವ್ಯತ್ಯಾಸವೇನಿಲ್ಲ ಎಂಬುದನ್ನು ಸಾಬೀತು ಪಡಿಸಲು ಬಿ.ಎಂ.ಶ್ರೀ.ಯವರು ನೀಡುವ ಉದಾಹರಣೆ ಇದು :

ಕುಟಲಿನಿದು ಯಾಟ*ನಿದೆನ್ಬಾರ್ ತಮ್ಮಕ್ಕಳ್
ಮಟಲೈ ಚ್ಚೊಲ್ ಕೇಳಾದವರ್ (ತಿರುಕ್ಕುರಳ್)

ಕೊಳಲಿನಿದು ಯಾಟನಿದೆನ್ಬರ್ ತಮ್ಮಕ್ಕಳ್
ತೊದಲ್ ಸೊಲ್ ಕೇಳದವರ್ (ಅನು : ಬಿ. ಎಂ. ಶ್ರೀ.)

ಇವೆರಡೂ ಭಾಷೆಗಳಲ್ಲಿ ಕೆಲವು ಪದಗಳ ಮೂಲ ಅರ್ಥ ಬದಲಾಗಿದೆ. ಕೆಲವೊಮ್ಮೆ ಆ ಪದಗಳ ಸರಿಯಾದ ಅರ್ಥ ತಿಳಿಯದೆಯೂ ಹೋಗಬಹುದು. ಅಂತಹ ಸಂದರ್ಭದಲ್ಲಿ ಪರಸ್ಪರ ಈ ಎರಡೂ ಭಾಷೆಗಳು ನೆರವಾಗುತ್ತವೆ. ಎಂದರೆ, ತಮಿಳಿನ ಕೆಲವು ಪ್ರಾಚೀನ ಪದಗಳನ್ನು ಅರ್ಥ ಮಾಡಿಕೊಳ್ಳಲು ಕನ್ನಡ ನೆರವಾದರೆ, ಕನ್ನಡದ ಪ್ರಾಚೀನ ಪದ ಪ್ರಯೋಗವನ್ನು ಅರ್ಥ ಮಾಡಿಕೊಳ್ಳಲು ತಮಿಳು ನೆರವಾಗುವುದೂ ಉಂಟು.

'ಕಂಬ ರಾಮಾಯಣ' ದಲ್ಲಿ 'ಇಳಿಂದನನ್' ಎನ್ನುವ ಒಂದು ಪದ ಪ್ರಯೋಗವಾಗಿದೆ. ಈಗ ತಮಿಳು ಭಾಷೆಯಲ್ಲಿ ಆ ರೂಪ ಬಳಕೆಯಲ್ಲಿತ್ತು. ಆದುದರಿಂದ ಅದು ಅರ್ಥವಾಗುವುದು ಕೊಂಚ ಕಷ್ಟವೇ ಸರಿ. ಆದರೆ ಕನ್ನಡದಲ್ಲಿ ಇಳಿ/ಇಳಿಯಿರಿ ರೂಪ ಈಗಲೂ ಇದೆ. ಇದರ ಸಾಮ್ಯದಿಂದ ಅದನ್ನು ಅರ್ಥ ಮಾಡಿಕೊಳ್ಳುವುದು ಸುಲಭವಾಗುತ್ತದೆ.

ತಮಿಳಿನ ಪ್ರಸಿದ್ಧ ಕಾವ್ಯ 'ಮಣಿಮೇಖಲೈ'ನಲ್ಲಿ 'ಕುಳಿಂದನನ್' ಎಂಬ ಪದವಿದೆ. ಈಗ ಆ ಪದಬಳಕೆಯಲ್ಲಿಲ್ಲದಿರುವುದರಿಂದ ಕನ್ನಡಕ್ಕೇ ಮೊರೆಹೋಗ ಬೇಕು, ಅದನ್ನು ಅರ್ಥಮಾಡಿಕೊಳ್ಳಲು ಕುಳಿತುಕೊಳ್ಳಿ/ಕುಳಿತುಕೋ/ಕುಳಿತುಕೊಂಡ – ಈ ಎಲ್ಲ ರೂಪಗಳೂ ಕನ್ನಡದಲ್ಲುಂಟು.

'ತಿರುಕ್ಕುರಳ್'ನ ಒಂದು ಅಧ್ಯಾಯದ ಹೆಸರು 'ಮನೆ ಮಾಟ್ಚಿ'.* ಇಂದಿನ ತಮಿಳಿನಲ್ಲಿ 'ಮನೆ' ಎಂಬ ಪದಕ್ಕೆ plot ಎಂಬ ಅರ್ಥವಷ್ಟೇ ಇದೆ. ಆದರೆ ಅಲ್ಲಿ ಕನ್ನಡದ 'ಮನೆ'ಯ ಅರ್ಥದಲ್ಲೇ ಪ್ರಯೋಗವಾಗಿದೆ. 'ಮನೆ' ಎಂಬುದಕ್ಕೆ ತಮಿಳಿನಲ್ಲಿ ಈಗ 'ವೀಡು' ಎಂಬ ರೂಪವನ್ನು ಬಳಸುತ್ತಿರುವುದರಿಂದ 'ಮನೆ' ಪ್ರಯೋಗ plot ಗಷ್ಟೇ ಸೀಮಿತವಾಗಿದೆ.

* ವೀಣೆಮಂತಹ ಒಂದು ವಾದ್ಯ

* ಮನೆ ಮಾತು

ಹಾಗೆಯೇ ಸಂಗಂ ಸಾಹಿತ್ಯದ 'ಸಿಱುಪಾಣಾಱ್ಱು ಪಡೈ'ನಲ್ಲಿ 'ಕಾಂಬು ಸೊಲಿತ್ತನ್ನ' ಎಂಬ ಮಾತೊಂದಿದೆ. ಸೊಲಿ-ಎಂದರೆ, (ಸಿಪ್ಪೆ) ಸುಲಿಯುವುದು ಎಂದರ್ಥ. ಈಗ ತಮಿಳಿನಲ್ಲಿ ಸೊಲಿ ಎಂಬ ಪದವೇ ಇಲ್ಲ.

ಹೀಗೆ ಹಲವಾರು ಪ್ರಾಚೀನ ರೂಪಗಳು ಕನ್ನಡದಲ್ಲಿ ಈಗಲೂ ಹಾಗೇ ಬಳಕೆಯಲ್ಲಿವೆ. ತಮಿಳಿನ ತುಂಬ ಪ್ರಾಚೀನ ಕೃತಿಗಳನ್ನು ಅರ್ಥಮಾಡಿಕೊಳ್ಳುವಾಗ ಇವು ನೆರವಾಗುತ್ತವೆ. ಅದರಂತೆಯೇ ಕೆಲವೊಮ್ಮೆ ಕನ್ನಡ ಕಾವ್ಯಗಳನ್ನು ಓದುವಾಗಲೂ ತಮಿಳಿನ ರೂಪಗಳು ನಮಗೆ ನೆರವಾಗಿವೆ. ಉದಾ:ಗೆ,

'ಪಂಪ ಭಾರತದ ಒಂದು ಪ್ರಸಂಗ. ಅರ್ಜುನ ದ್ವಾರಕೆಗೆ ಬಂದ ಸಂದರ್ಭದಲ್ಲಿ 'ಸೆಱಪುಗೆಯ್ದನನಂತರಂ' ಎಂಬ ಮಾತು ಬರುತ್ತದೆ. ಇಲ್ಲಿನ 'ಸೆಱಪು' ಕನ್ನಡದ ವಿಕೃತ ಪ್ರಯೋಗ. ನಿಘಂಟು, ಕಾವ್ಯಗಳಲ್ಲಿ ಇದಕ್ಕೆ ಅರ್ಥ ಹುಡುಕಲಾಗದು. ಜನಬಳಕೆಯ ಮಾತಿನಲ್ಲಿ 'ಚೆಱಪು' ಎನ್ನುವ ಪದ ಪ್ರಸಾದ, ತಿಂದಿ ಹಂಚುವುದು ಎಂಬ ರೂಪದಲ್ಲಿ ಪ್ರಯೋಗದಲ್ಲಿದೆಯಾದರೂ ಈ ಅರ್ಥ ಮೇಲಿನ ಸಂದರ್ಭಕ್ಕೆ ಅನ್ವಯಿಸುವುದಿಲ್ಲ. ಇಂತಹ ಸಂದರ್ಭದಲ್ಲಿ ತಮಿಳಿನ ರೂಪ ನಮಗೆ ನೆರವಾಗುತ್ತದೆ. ತಮಿಳಿನಲ್ಲಿ 'ಶಿರಪ್ಪು'ಎಂದರೆ, 'ಉತ್ಸವ' ಎಂದರ್ಥ. ಅರ್ಜುನ ಶ್ರೀಕೃಷ್ಣನ ಗೆಳೆಯನೂ ಹೌದು. ತನ್ನ ಗೆಳೆಯ ಬಂದ ಸಂತೋಷಕ್ಕೆ ಕೃಷ್ಣ ಉತ್ಸವ ಮಾಡಿದನು ಎಂಬುದೇ ಸರಿಯಾದ ಅರ್ಥ.

'ನಾಳ್'- ಎಂಬ ಪದದ ಮೂಲಾರ್ಥ 'ದಿನ'. ಆದರಿದು ಕನ್ನಡದಲ್ಲಿ 'ನಾಳೆ' ಎಂಬರ್ಥಕ್ಕೆ ಸೀಮಿತವಾಯಿತು. ತಮಿಳಿನಲ್ಲಿ ಈಗಲೂ ದಿನ ಎಂಬ ರೂಪದಲ್ಲಿಯೇ ಬಳಕೆಯಲ್ಲಿದೆ.

'ಶಿಲಪ್ಪದಿಕಾರಂ'ನಲ್ಲಿ ಕೋವಲನನ್ನು ಕಳ್ಳನೆಂದು ನಿರ್ಧರಿಸಿದ ಅರಸ ನನ್ನು ಕೊಲ್ಲಿಸುತ್ತಾನೆ. ಆ ವಿಷಯ ಮತ್ತೊಬ್ಬರಿಂದ ಕಣ್ಣಗಿಗೆ ತಿಳಿಯುತ್ತೆ. ಗ ಕವಿ 'ಇಳಂಗೋ ಅಡಿಗಳ್' ಹೇಳುತ್ತಾರೆ : 'ಸೊಲ್ಲಾಡಾ ನಿನ್‍ರಾಳ್', ತಾಡದೆ ನಿಂತಳು ಎಂದು. ಈ 'ಸೊಲ್' ಶಬ್ದ ಕನ್ನಡ ತಮಿಳುಗಳೆರಡರಲ್ಲೂ ದೇ ರೀತಿ ಪ್ರಯೋಗದಲ್ಲಿದೆ.

ಕನ್ನಡದಲ್ಲಿ ಈಗಿಲ್ಲದ ಮತ್ತೊಂದು ಪದ 'ಅಱ'. ದ್ರೌಪದಿ ಧರ್ಮರಾಯನನ್ನು ಬೈಯುತ್ತಾ 'ಅಱಗುಲಿ' ಎಂಬ ಪದವನ್ನು ಉಪಯೋಗಿಸುತ್ತಾಳೆ ಕುಮಾರವ್ಯಾಸ ಭಾರತದಲ್ಲಿ. 'ಅಱ' ಎಂದರೆ, ಧರ್ಮ. ಧರ್ಮದ ಕೊಲೆಗಾರ ನೀನು ಎಂಬುದು ಅವಳ ಮಾತಿನ ಅರ್ಥ.

ಪೂರ್ವದ ಹಳಗನ್ನಡದಿಂದ ಬಂದ ಕೆಲವು ಸಮಾಸ ಪದಗಳನ್ನೂ ನಾವು ಸರಿಯಾಗಿ ಬಿಡಿಸುತ್ತಿಲ್ಲ. ಕೇಶಿರಾಜ ಕೂಡ ಈ ದಿಕ್ಕಿನಲ್ಲಿ ತಪ್ಪು ಹೆಜ್ಜೆಹಾಕಿದ್ದಾನೆ ಎನ್ನುತ್ತಾರೆ, ಬಿ.ಎಂ.ಶ್ರೀ.ಯವರು. ಉದಾ : ಗೆ,

'ಅಂಗೈ', 'ಅಂಗಾಲ್' ಎನ್ನುವ ಸಮಾಸವನ್ನು ನಾವು ಬಿಡಿಸುವುದು ಹೀಗೆ :
ಕಯ್ + ಅಡಿ = ಅಂಗೈ, ಕಾಲ್ + ಅಡಿ = ಅಂಗಾಲ್
ಆದರೆ ಈ ಪದಗಳನ್ನು ಬಿಡಿಸಬೇಕಾದ ಸರಿಯಾದ ರೂಪ :
ಅಗಂ + ಕಯ್, ಅಗಂ + ಕಾಲ್

'ಅಗಂ' ಎಂಬ ದ್ರಾವಿಡ ಪದದ ಮೂಲಾರ್ಥ ಒಳಗೆ/ಒಳಪಟ್ಟದ್ದು ಎಂದು, ತಮಿಳಿನಲ್ಲಿ ಅಗಪಟ್ಟಾನ್, ತಮಿಳಗಂ ಎಂಬ ಪದಗಳಿವೆ. ಕ್ರಮವಾಗಿ ಇವುಗಳ ಅರ್ಥ ಒಳಪಟ್ಟನು, ತಮಿಳುನಾಡಿಗೆ ಒಳಪಟ್ಟಿದ್ದು ಎಂದು. ಕರ್ನಾಟಕ ಎಂಬ ಪದದ ನಿಷ್ಪತ್ತಿಯಾದುದೂ ಈ ಅರ್ಥದಲ್ಲಿಯೇ.

ಕರುನಾಡು + ಅಗಂ = ಕರ್ನಾಟಗಂ > ಕರ್ನಾಟಕಂ > ಕರ್ನಾಟಕ ರೂಪ ಸಿದ್ಧಿಸಿದೆ. ಇದರಲ್ಲಿ ಅಡಕವಾಗಿರುವ 'ಅಗಂ' ತಮಿಳಿನಲ್ಲಿ ಪ್ರಯೋಗದಲ್ಲಿ ಇರುವ ಅರ್ಥವನ್ನೇ ಒಳಗೊಂಡಿದೆ. ಕರುನಾಡು ಎಂಬುದಕ್ಕೆ ವಿದ್ವಾಂಸರು ಬೇರೆ ಬೇರೆ ಅರ್ಥಗಳನ್ನು ಹೇಳಬಹುದು. ಆದರೆ, 'ಅಗಂ' ಮಾತ್ರ 'ಒಳಪಟ್ಟದ್ದ'ನ್ನೇ ಸೂಚಿಸುತ್ತದೆ.

ಅದರಂತೆಯೇ ಕೈಯ ಒಳಭಾಗವನ್ನು 'ಅಂಗೈ' ಪದವೂ ಕಾಲಿನ ಒಳ ಭಾಗವನ್ನು ಅಂಗಾಲ್ ಪದವೂ ಪ್ರತಿನಿಧಿಸುತ್ತದೆ. ಆದ್ದರಿಂದಲೇ ಇವುಗಳನ್ನು ಬಿಡಿಸುವಾಗ ಅಗಂ+ಕಯ್, ಅಗಂ+ಕಾಲ್ ಎನ್ನುವುದು ಸರಿಯಾಗುತ್ತದೆ.

ವಾನಗಂ, ಕಾನಗಂ... ಮೊದಲಾದ ಪದಗಳೂ ತಮಿಳಿನಲ್ಲಿವೆ.

ನಾವು ಮರೆತು ಹೋಗಿರುವ ಮತ್ತೊಂದು ವಿಷಯ'ಱ','ೞ'ಗಳ ಪ್ರಯೋಗ. ಕೇಶಿರಾಜ, ಹರಿಹರರ ಕಾಲಕ್ಕಾಗಲೇ ಇದು ಮಾಯವಾಗಲು ಆರಂಭಿಸಿತ್ತು. ಈಗ ಅವುಗಳ ಸ್ಥಳದಲ್ಲಿ 'ರ','ಳ'ಗಳದೇ ಕಾರುಬಾರು. ಆದರೆ ತಮಿಳಿನಲ್ಲಿ ಇಂದಿಗೂ ಅವುಗಳನ್ನು ಜಾಗರೂಕತೆಯಿಂದ ಬಳಸುತ್ತಾರೆ. ಯಾವುದನ್ನು ಯಾವಾಗ ಬಳಸಬೇಕೆಂಬುದು ಅವರಿಗೆ ಸ್ಪಷ್ಟವಾಗಿ ಗೊತ್ತು. ಪ್ರಾಥಮಿಕ ಶಿಕ್ಷಣದ ಅವಧಿಯಲ್ಲೇ, ಅಕ್ಷರಾಭ್ಯಾಸದ ಜೊತೆಯಲ್ಲೇ ಇದನ್ನೂ ಹೇಳಿಕೊಡುತ್ತಾರೆ. ನಾವು ಮಾತ್ರ ಱ-ರ, ಳ-ೞ-ಗಳಲ್ಲಿ ವ್ಯತ್ಯಾಸವಿಲ್ಲದಂತೆ ಬಳಸುತ್ತಿದ್ದೇವೆ. ಅಮ್ಮ-ಹಮ್ಮ, ಅಂದ-ಹಂದ, ಕತೆ-ಖಥೆ, ದೇವರು-ಧೇವರು.. ಈ ರೂಪಗಳಿಗಿರುವಷ್ಟೇ

ಅರ್ಥ ವ್ಯತ್ಯಾಸ ಱ-ರ, ೞ-ಳಗಳಿಗೆ ಸಂಬಂಧಿಸಿದಂತೆ ತಮಿಳಿನಲ್ಲುಂಟು. ಕನ್ನಡದಲ್ಲೂ ಈ ಅಕ್ಷರಗಳನ್ನು ಎಲ್ಲಿ ಬಳಸಬೇಕೆಂಬುದೆರತ್ತ ತಮಿಳು ಮಾರ್ಗದರ್ಶನ ನೀಯಬಲ್ಲುದು.

ತಮಿಳು ಸಂಗಂ ಕಾಲದಿಂದಲೂ ಕನ್ನಡ-ತಮಿಳಿನ ನಡುವೆ ಪರಸ್ಪರ ನಿಕಟ ಸಂಬಂಧವಿದೆ. ನೆರೆರಾಜ್ಯಗಳಾಗಿರುವುದರಿಂದ ಪರಸ್ಪರ ಸಂಬಂಧವಿದ್ದುದರಲ್ಲೇನೂ ಆಶ್ಚರ್ಯವಿಲ್ಲ. ಸಾಹಿತ್ಯ, ಸಂಸ್ಕೃತಿ, ರಾಜಕೀಯ ಸಂಬಂಧಗಳನ್ನು ಎರಡೂ ಭಾಷೆಯ ಕೃತಿಗಳೂ ನಮಗೆ ತಿಳಿಸುತ್ತವೆ. ಕ್ರಿ.ಶ. ಆರಂಭ ಕಾಲದ ಸಂಗಂ ಸಾಹಿತ್ಯದಲ್ಲಿ ಕರ್ನಾಟಕವನ್ನು ಎರುಮೈನಾಡು (ಮಹಿಸೂರು=ಮೈಸೂರು), ಕರುನಾಡು, ಮೊಳಿಪೆಯರ್‌ತೆಯಂ (ನುಡಿ ಬದಲಾವಣೆಯ ಪ್ರದೇಶ) ಎಂದೆಲ್ಲಾ ಕರ್ನಾಟಕವನ್ನು ಕರೆಯಲಾಗಿದೆ. ಅದೇ ಕಾಲದ ನಕ್ಕೀರನ್ ಕವಿಯ ಪ್ರಣಯ ಕವಿತೆಗಳ ಸಂಕಲನವಾದ 'ಅಗನಾನೂರು' ಕಾವ್ಯದಲ್ಲಿ 'ನೀಲಗಿರಿಯ ವಡಗರು ಎರುಮೈನಾಡು ಅರಸನ ಸಂಬಂಧಿ'ಗಳೆಂಬ ಉಲ್ಲೇಖವಿದೆ.

ಕ್ರಿ.ಶ.೨ ರಿಂದ ೪ನೇ ಶತಮಾನದಲ್ಲಿ ರಚಿತವಾಗಿರಬಹುದಾದ 'ಶಿಲಪ್ಪದಿಕಾರಂ'ನಲ್ಲಿ ಚೇರರಾಜನಾದ ಸೇಂಗುಟ್ಟುವನ್ ಉತ್ತರದ ಕಡೆ ದಿಗ್ವಿಜಯಕ್ಕೆ ಹೊರಡುವ ಮುನ್ನ, ನೀಲಗಿರಿಯಲ್ಲಿ 'ಕರುನಾಡರ್' ಎಂದರೆ ಕರ್ನಾಟಕದವರು ಗೀತ-ನೃತ್ಯ ಮೊದಲಾದ ಉತ್ಸವಗಳನ್ನು ಮಾಡಿ ರಾಜನನ್ನು ಸ್ವಾಗತಿಸಿದರು ಎಂಬ ಮಾತಿದೆ.

ಕ್ರಿ.ಶ. ೭೭೦ರಲ್ಲಿ ಕಳಭ್ರರೆನ್ನುವ ಕರ್ನಾಟಕದ ಅರಸರು ಪಾಂಡ್ಯದೇಶವನ್ನು ವಶಪಡಿಸಿಕೊಂಡ ಉಲ್ಲೇಖ ಪಾಂಡ್ಯ ಅರಸ ಪರಾಂತಕನ ವೇಳ್ವಿಕುಡಿ ಶಾಸನದಲ್ಲಿದೆ.

ಕ್ರಿ.ಶ. ೧೦-೧೧ನೇ ಶತಮಾನದಲ್ಲಿ ರಚಿತವಾದ ಅಮಿತಸಾಗರನ 'ಯಾಪ್ಪರುಂಗಲಕ್ಕಾರಿಕ್ಕೈ' ಎಂಬ ಛಂದೋಗ್ರಂಥಕ್ಕೆ ವ್ಯಾಖ್ಯಾನ ರಚಿಸಿರುವ ಗುಣಸಾಗರನು (೧೧ನೇ ಶ.) 'ಗುಣಗಾಂಕಿಯಂ ಎನ್ನುಂ ಕರುನಾಡಗಚ್ಚಂದಮೇ ಪೋಲ'-ಎಂಬನೆ, 'ಗುಣಗಾಂಕಿಯಂ ಎನ್ನುವ ಕರುನಾಡಿನ ಛಂದಸ್ಸಿನಂತೆ ಸ್ತ್ರೀಯ ರನ್ನುದ್ದೇಶಿಸಿ ಬೋಧಿಸುತ್ತೇನೆ' ಎನ್ನುತ್ತಾನೆ. ೧೦-೧೧ನೇ ಶತಮಾನಕ್ಕಿಂತಲೂ ಮೊದಲೇ ಕನ್ನಡದಲ್ಲೊಂದು ಛಂದೋಗ್ರಂಥ ರಚಿತವಾಗಿತ್ತೆಂದೂ, ಅದರ ಪರಿಚಯ ತಮಿಳಿಗೂ ಇತ್ತೆಂದೂ ಇದರಿಂದ ನಮಗೆ ತಿಳಿದು ಬರುತ್ತದೆ. ಇದರಂತೆಯೇ ವೀರಶೋಳೀಯಂ, ಕಂಬ ರಾಮಾಯಣ, ಪೇರಗತ್ತಿಯಂ, ಕಲಿಂಗತ್ತು ಭರಣಿ ಮೊದಲಾದ ಕಾವ್ಯಗಳಲ್ಲೂ ಕನ್ನಡ ಭಾಷೆ, ಜನರ ಬಗ್ಗೆ ಉಲ್ಲೇಖಗಳಿವೆ.

ಕನ್ನಡ ನಾಡು, ಭಾಷೆ, ಸಾಹಿತ್ಯಗಳ ಪ್ರಾಚೀನತೆಯನ್ನು ಗುರುತಿಸುವಲ್ಲಿ ಇವು ನೆರವಾಗುತ್ತವೆ.

ಕಾಂಚಿಯ ಕೈಲಾಸನಾಥ ದೇವಾಲಯದ ೮ನೇ ಶ.ದ ಶಾಸನವೊಂದು ೨ನೇ ವಿಕ್ರಮಾದಿತ್ಯನು ಕಾಂಚೀಪುರವನ್ನು ಜಯಿಸಿ, ಅವರಿಂದ ಕಪ್ಪ ಕಾಣಿಕೆ ಪಡೆದು ಅದೇ ಗುಡಿಗೆ ದತ್ತಿ ನೀಡಿದ ವಿವರವನ್ನೊಳಗೊಂಡಿದೆ. ೧೨ನೇ ಶ.ದ ಶ್ರವಣಬೆಳಗೊಳದ ಶಾಸನವೊಂದರಲ್ಲಿ ತಮಿಳಿನ ಪ್ರಾಚೀನ ಕಾವ್ಯಗಳಾದ ಚಿಂತಾಮಣಿ ಮತ್ತು ಶೂಳಾಮಣಿ ಕಾವ್ಯಗಳನ್ನು ಕುರಿತ ಉಲ್ಲೇಖವಿದೆ. ೧೪ನೇ ಶತಮಾನದ ಕರ್ನಾಟಕದ ಮತ್ತೊಂದು ಶಾಸನದಲ್ಲಿ, ಕಂಬ ರಾಮಾಯಣವನ್ನು ಓದುತ್ತಿದ್ದ ರಾಮಪ್ಪ ಎಂಬುವವನಿಗೆ ದತ್ತಿ ನೀಡಿದ ಉಲ್ಲೇಖವಿರುವುದನ್ನು ಹಾವನೂರು ಶ್ರೀನಿವಾಸರಾಯರು ತಿಳಿಸುತ್ತಾರೆ. ೧೭ನೇ ಶ.ದ ವಿಲ್ಲಿಪುತ್ತೂರ್ ಆಳ್ವಾರರ 'ಮಹಾಭಾರತ'ದಲ್ಲಿ ಒಂದು ಕುತೂಹಲದ ಅಂಶವಿದೆ. ಆ ಊರಿನ ಅರಸ ಕನ್ನಡ ಭಾರತಗಳ ದಾಳಿಯನ್ನು ಕಡಿಮೆ ಮಾಡಲು ತಮಿಳಿನಲ್ಲಿ ಮಹಾ ಭಾರತ ಅಚಿಸಲು ಆದೇಶಿಸಿದನಂತೆ. ಇದೇ ತಮಿಳಿನಲ್ಲಿ ಬಂದ ಮೊದಲ ಮಹಾ ಭಾರತವೆಂದು ಖ್ಯಾತಿ ಗಳಿಸಿದೆ.

ಕನ್ನಡ ಮತ್ತು ತಮಿಳುನಾಡು ಅರಸರ ನಡುವೆ ಹೋರಾಟದ ಜೊತೆ ಜೊತೆಗೇ ವೈವಾಹಿಕ ಸಂಬಂಧಗಳೂ ಇದ್ದವು. ಇದಕ್ಕೆ ಸಂಬಂಧಿಸಿದ ಒಂದು ಕುತೂಹಲಕಾರಿಯಾದ ಸಂಗತಿಯೊಂದು ೧೯೨೮ರಲ್ಲಿ ಪ್ರಕಟವಾದ ಲಾವಣಿ ಯೊಂದರಲ್ಲಿದ್ದುದನ್ನು ಕಳೆದ ೧೦ ವರ್ಷಗಳ ಮೊದಲು ಪ್ರೊ. ವಾನಮಾಮಲೈ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ. ಈ ಲಾವಣಿ 'ಕದೈಪಾಡು' ಎಂದು ಪ್ರಚಾರದಲ್ಲಿದೆ. ಅದರ ಹೆಸರು 'ಐವರ್ ರಾಜಾಕ್ಕಳ್ ಕದೈ'. "ಆ ಐಯ್ವರಲ್ಲಿ ಕುಲ ಶೇಖರನ್ ಒಬ್ಬ. ಒಬ್ಬ ಕನ್ನಡಿಗ ಅರಸ ಕುಲಶೇಖರನ್‌ನನ್ನು ತನ್ನ ಮಗಳನ್ನು ಮದುವೆಯಾಗುವಂತೆ ಕೇಳಿಕೊಂಡ. ಇವನು ಒಪ್ಪಲಿಲ್ಲ. ಆಗ ಕನ್ನಡಿಯನ್ (ಕನ್ನಡಿಗ ಅರಸ) ಕುಲಶೇಖರನ್ ಮೇಲೆ ದಂಡೆತ್ತಿ ಬಂದು ವಳ್ಳಿಯೂರಿನ ಬಳಿ ಯುದ್ಧ ಮಾಡುತ್ತಾನೆ. ಯುದ್ಧದಲ್ಲಿ ಕನ್ನಡಿಗ ಅರಸನಿಗೇ ಜಯ. ಕುಲಶೇಖರ್ ಬಂಧಿತನಾದ. ಅವನನ್ನು ಬಂಧಿಸಿ ಪಲ್ಲಕ್ಕಿಯ ಮೇಲೆ ಕೂರಿಸಿಕೊಂಡು ತನ್ನ ಮಗಳೊಂದಿಗೆ ಮದುವೆ ಮಾಡಲು ಕರೆತರುತ್ತಾನೆ. ಅವನಾದರೋ, 'ನಾನು ಸತ್ತರೂ ಸರಿ. ಕನ್ನಡಿಯನ್ನನ ಮಗಳನ್ನು ಮದುವೆಯಾಗಲಾರೆ'ಎಂದು ಘೋಷಿಸಿ, ವಜ್ರ ತಿಂದು ಪ್ರಾಣ ಬಿಡುತ್ತಾನೆ. ಆಗ ಆ 'ಕನ್ನಡಿ ಇಳವೆರಸಿ ಅವನಯೇ ನಿನೈತ್ತು, ಮಾಲೆಯಿಟ್ಟು ಕಟ್ಟೆಯೇರಿನಾಳ್' ಅವನ ಮೇಲಿನ ಪ್ರೇಮದಿಂದ ರಾಜ ಕುಮಾರಿಯೂ ಚಿತೆಯೇರಿದಳಂತೆ!".

ಇಲ್ಲಿ ಪಾಂಡ್ಯ ಅರಸರಿಗೂ - ಕನ್ನಡ ಅರಸರಿಗೂ ನಡೆದ ಯುದ್ಧದ ವಿವರವಿದೆ ಮತ್ತು ಈ ಯುದ್ಧ ನಡೆದುದನ್ನು ಇತಿಹಾಸಜ್ಞರು ಶಾಸನಾಧಾರಗಳಿಂದಲೂ ಗುರುತಿಸುತ್ತಾರೆ. ೧೫೪೪ರಲ್ಲಿ ನಡೆದ ಈ ಯುದ್ಧ ಕನ್ಯಾಕುಮಾರಿಯಿಂದ ೫೦ ಕಿ.ಮೀ. ದೂರದಲ್ಲಿರುವ ತಿರುನಲ್ವೇಲಿಯ ಬಳಿ ನಡೆಯಿತು. ಈ ಪ್ರದೇಶದಲ್ಲಿ ತಾಮ್ರಪರ್ಣಿ ಎನ್ನುವ ನದಿಯೊಂದು ಹರಿಯುತ್ತದೆ. ಅದರ ಒಂದು ಕಾಲುವೆಯ ಹೆಸರು 'ಕನ್ನಡಿಯನ್ ಕಾಲುವೆ'. ಪಳ್ಳಿಯೂರಿಗೆ ಕೊಂಚ ದೂರದಲ್ಲಿ ಇರುವ ಕಾಲುವೆಯಿದು. ಆ ಜಾಗದಲ್ಲೇ ಕುಲಶೇಖರನಿಗೂ ಕನ್ನಡಿಗ ಅರಸನಿಗೂ ಯುದ್ಧ ನಡೆದಿರಬೇಕು. ಆ ಯುದ್ಧದಲ್ಲಿ ಕನ್ನಡ ಅರಸನಿಗೇ ಜಯವಾದುದರಿಂದ ಆ ಕಾಲುವೆಗೆ ಈ ಹೆಸರು ಬಂದಿರಬಹುದು. ತಮಿಳು-ಕನ್ನಡಿಗರ ನಡುವೆ ನಡೆಯುತ್ತಿದ್ದ ಘರ್ಷಣೆಯನ್ನಿದು ತಿಳಿಸುತ್ತದೆ.

ಈ ಎರಡೂ ರಾಜ್ಯಗಳ ನಡುವೆ ವೈವಾಹಿಕ ಸಂಬಂಧಗಳು ಬಹಳ ಪ್ರಾಚೀನ ಕಾಲದಿಂದಲೂ ಇದ್ದವು. ರಾಷ್ಟ್ರಕೂಟರ ಅಮೋಘವರ್ಷ ನೃಪತುಂಗನು ತನ್ನ ಮಗಳನ್ನು ಪಲ್ಲವ ಅರಸ ಕಳರಸಿಂಹನಿಗೆ ವಿವಾಹ ಮಾಡಿಕೊಟ್ಟಿದ್ದನು. ಹೊಯ್ಸಳರು ತಮಿಳುನಾಡಿನಲ್ಲೂ ರಾಜ್ಯ ವಿಸ್ತರಿಸಿ ಅಲ್ಲಿನ ಶ್ರೀರಂಗದ ಸಮೀಪದ ಕಣ್ಣಾನೂರನ್ನು ತಮ್ಮ ತಾತ್ಕಾಲಿಕ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ವಿಜಯನಗರದ ಅರಸರು ತಮಿಳುನಾಡಿನ ಹಲವೆಡೆ ತಮ್ಮ ಆಳ್ವಿಕೆಯ ಕುರುಹಾಗಿ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಅಲ್ಲಿನ ಹಲವಾರು ದೇವಾಲಯಗಳಿಗೆ ದಾನ-ದತ್ತಿಗಳನ್ನು ನೀಡಿದ್ದಾರೆ. ಹಾಗೆಯೇ ತಮಿಳಿನ ಅರಸರಾದ ಚೋಳ, ಪಾಂಡ್ಯರ ದೇವಾಲಯಗಳು ಬೆಂಗಳೂರು, ಮಂಡ್ಯ, ಮೊದಲಾದೆಡೆಗಳಲ್ಲಿವೆ. ಮಧುರೈ, ತೇನ್ಯ ಮೊದಲಾದ ಕಡೆಗಳಲ್ಲಿರುವ ಜಮೀನುದಾರರು ವಿಜಯ ನಗರದ ಪಾಳೆಯಗಾರರ ಮನೆತನದವರಾಗಿದ್ದು, ವಿಜಯನಗರ ಸಾಮ್ರಾಜ್ಯದ ಕಾಲದಿಂದಲೂ ಅಲ್ಲಿಯೇ ಇದ್ದಾರೆ.

ರಾಮಾನುಜಾಚಾರ್ಯರು ತಮಿಳುನಾಡಿನವರಾಗಿದ್ದು, ಅಲ್ಲಿಂದ ಧಾರ್ಮಿಕ ಸಂಘರ್ಷದ ಕಾಲದಲ್ಲಿ ಇಲ್ಲಿಗೆ ಬಂದು ನೆಲೆಸಿ, ವೈಷ್ಣವ ಧರ್ಮವನ್ನು ಪ್ರಚಾರ ಮಾಡಿದ್ದಾರೆ. ಮೇಲುಕೋಟೆ ಅವರ ಕಾರ್ಯಕ್ಷೇತ್ರ. ಅವರು ಮಾಡಿದ ಸಾಮಾಜಿಕ ಕ್ರಾಂತಿಯೆಂದರೆ, ಹರಿಜನರಿಗೆ ಜನಿವಾರ ತೊಡಿಸಿ, ವೈಷ್ಣವರನ್ನಾಗಿ ಪರಿವರ್ತಿಸಿ, ಅವರನ್ನು 'ತಿರುಕುಲತ್ತಾರ್' (ಪವಿತ್ರ ಕುಲದವರು) ಎಂದು ಕರೆದರು. ಬಹುಶಃ ೧೨ನೇ ಶತಮಾನದಲ್ಲಿ ಬಸವಣ್ಣನವರು ಲಿಂಗದೀಕ್ಷೆ ನೀಡಿ ಶರಣರನ್ನಾಗಿ ಪರಿವರ್ತಿಸಿದುದರ ಪ್ರಭಾವ ಇವರ ಮೇಲಾಗಿರಬಹುದು. ಮೇಲುಕೋಟೆಯಲ್ಲಿ ನಡೆಯುವ ವೈರಮುಡಿ ಉತ್ಸವ ಇವರ ಕಾಲದಲ್ಲೇ ಆರಂಭವಾದದ್ದು.

ಇಂಥದ್ದೇ ಮತ್ತೊಂದು ಧಾರ್ಮಿಕ ಸಂಘರ್ಷ ಪಾಂಡ್ಯ ಅರಸ ನೆಡುಮಾರನ್ನನ ಕಾಲದಲ್ಲೂ ನಡೆದಿದೆ. ಮೊದಲು ಜೈನನಾಗಿದ್ದ ಈತ ನಂತರ ಶೈವ ಧರ್ಮವನ್ನು ಸ್ವೀಕರಿಸುತ್ತಾನೆ. ವಾದದಲ್ಲಿ ಸೋತ ೮,೦೦೦ ಜೈನರನ್ನು ಶೂಲಕ್ಕೇರಿ ಸುತ್ತಾನೆ. ಉಳಿದವರು ಜೀವಭಯದಿಂದ ಕನ್ನಡ ನಾಡಿಗೆ ಬಂದು ನೆಲೆನಿಂತರೆಂದು ಇತಿಹಾಸ ತಿಳಿಸುತ್ತದೆ.

ಕರ್ನಾಟಕದಲ್ಲಿ ಪ್ರಸಿದ್ಧವಾಗಿರುವ ವೀರಶೈವ ಧರ್ಮದ ಮೂಲ ತಮಿಳು ನಾಡಿನಲ್ಲಿದ್ದ ಶೈವಧರ್ಮ. ತಮಿಳು ಶೈವ ಸಾಹಿತ್ಯದಲ್ಲಿ ಬರುವ ೬೩ ಜನ ಪುರಾತನರನ್ನು ಬಸವಣ್ಣನೇ ಮೊದಲಾದ ವಚನಕಾರರೆಲ್ಲರೂ 'ಪುರಾತನರು', 'ಆದ್ಯರು' ಎಂದು ಕರೆದು ಗೌರವಿಸುತ್ತಾರೆ. ಅವರು ರಚಿಸಿರುವ 'ತೇವಾರಂ'ಗಳು ವಚನ ಸಾಹಿತ್ಯಕ್ಕೆ ಪ್ರೇರಣೆಯನ್ನೊದಗಿಸಿವೆ. ಸಾಮಾಜಿಕ ಅಸಮಾನತೆ, ಜಾತೀಯತೆ, ಸ್ತ್ರೀ–ಪುರುಷರ ತಾರತಮ್ಯ– ಇವೆಲ್ಲವುಗಳ ವಿರುದ್ಧದ ಹೋರಾಟಕ್ಕೆ ಶಿವಶರಣ ರಿಗೆ ತೇವಾರಂಗಳು ಸ್ಫೂರ್ತಿಯಾಗಿವೆ. ೬೩ ಪುರಾತನರ ಚರಿತ್ರೆ ನಮ್ಮ ಹಲವಾರು ವೀರಶೈವ ಕವಿಗಳಿಗೆ ಆಕರಗಳಾಗಿವೆ. ಲಕ್ಕಣ್ಣ ದಂಡೇಶ, ಗುಬ್ಬಿಯ ಮಲ್ಲಣಾರ್ಯ, ಮೊದಲಾದ ವೀರಶೈವ ಕವಿಗಳು ಇವರ ಚರಿತ್ರೆಯನ್ನು ತಮ್ಮ ಕಾವ್ಯದ ವಸ್ತುವನ್ನಾಗಿ ಮಾಡಿಕೊಂಡಿದ್ದಾರೆ. ಹರಿಹರನಂತೂ ೬೩ ಪುರಾತನರನ್ನು ಕನ್ನಡಕ್ಕೆ ತಂದು ಎರಡೂ ಭಾಷೆಗಳ ನಡುವೆ ಮಧುರ ಬಾಂಧವ್ಯ ಬೆಸೆದಿದ್ದಾನೆ. ಆತ ಅದಕ್ಕಾಗಿ ಬಳಸಿಕೊಂಡಿರುವ 'ರಗಳೆ'ಯೂ ತಮಿಳಿನ 'ಅಹವರ್ಪಾ' ರೀತಿಯಿಂದಲೇ ಪ್ರೇರಿತವಾಗಿದೆ. ಬೇಡರ ಕಣ್ಣಪ್ಪ, ಭಕ್ತ ಸಿರಿಯಾಳ, ನಂಬಿಯಣ್ಣ ಮೊದಲಾದವರು ೬೩ ಪುರಾತನರಾಗಿದ್ದಾರೆ.

ತಮಿಳು ಮತ್ತು ಕನ್ನಡ ಸಾಹಿತ್ಯದ ನಡುವೆ ಇರುವ ಇಂತಹ ಸಾಮ್ಯ ದಕ್ಷಿಣ ಭಾರತದ ಬೇರೆ ಯಾವ ಭಾಷೆಗಳಲ್ಲೂ ಇಲ್ಲ. ವೀರಶೈವಧರ್ಮ ಕನ್ನಡ ಸಂಸ್ಕೃತಿಯ ಒಂದು ಮುಖ್ಯ ಭಾಗವಾಗಿದೆ.

ಕರ್ನಾಟಕಕ್ಕೆ ಬಂದ ಶೈವ ಧರ್ಮ ಪುನಃ ಇಲ್ಲಿಂದ ಅಲ್ಲಿಗೆ ಮತ್ತೊಂದು ರೂಪದಲ್ಲಿ ಪ್ರವೇಶಿಸಿದೆ. ಮುಂದೆ ವೀರಶೈವ ಧರ್ಮ ಅಲ್ಲೂ ಹೆಚ್ಚು ಪ್ರಚಾರ ವಾಯಿತು. ವೀರಶೈವ ಮಠಗಳು ಸ್ಥಾಪನೆಯಾದವು. ಕೊಯಮತ್ತೂರು, ಕುಂಭಕೋಣಂ, ತಿರುವಣ್ಣಾಮಲೈ ಮೊದಲಾದೆಡೆಗಳಲ್ಲಿ ಈಗಲೂ ವೀರಶೈವ ಮಠ ಗಳಿವೆ.

ವಚನಕಾರ ಮಾದಾರ ಚನ್ನಯ್ಯ ತಮಿಳುನಾಡಿಗೆ ಸೇರಿದವನೆಂಬ ಅಭಿಪ್ರಾಯ ವಿದ್ವಾಂಸರಲ್ಲಿದೆ. ಮಂತ್ರಾಲಯದ ರಾಘವೇಂದ್ರರಾಯರು ಮೂಲತಃ ಕುಂಭಕೋಣದವರು. ಈ ಕಾರಣದಿಂದಾಗಿಯೇ ಹಲವಾರು ಮಾಧ್ವ ಮಠಗಳು

ಇಂದಿಗೂ ತಮಿಳುನಾಡಿನಲ್ಲಿವೆ. ಚಿಕ್ಕದೇವರಾಯನ ಕಾಲದಲ್ಲಿ ರಚಿತವಾದ 'ದಿವ್ಯ ಸೂರಿ ಚರಿತೆ'ದಲ್ಲಿ ಹನ್ನೆರಡು ಜನ ಆಳ್ವಾರರ ಚರಿತ್ರೆಯಿದೆ.

೧೬ನೆಯ ಶತಮಾನದ, ಕನ್ನಡದವರಾದ 'ಶಿವ ಪ್ರಕಾಶಸ್ವಾಮಿ'ಗಳೆನ್ನುವವರು ಪಾಂಡಿಚೇರಿಯ ಬಳಿ ವೀರಶೈವ ಮಠವೊಂದನ್ನು ಸ್ಥಾಪಿಸಿರುವುದಲ್ಲದೆ ಚಾಮರಸನ ಪ್ರಭುಲಿಂಗಲೀಲೆಯನ್ನು ತಮಿಳಿಗೆ ಅನುವಾದಿಸಿದ್ದಾರೆ. ಭೀಮಕವಿಯ 'ಬಸವ ಪುರಾಣ'ವು ತಮಿಳಿನಲ್ಲಿ 'ಬಸವ ಪುರಾಣಂ' ಎಂದು ಅನುವಾದ ಗೊಂಡಿದೆ. ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ವು 'ಹರಿಶ್ಚಂದ್ರ ಚರಿತ್ರಮ್' ಎಂದೂ; ಜನ್ನನ 'ಯಶೋಧರ ಚರಿತೆ', 'ಯಶೋಧರ ಕಾವ್ಯಂ' ಎಂದೂ ಅನುವಾದಗೊಂಡಿವೆ. ಹಾಗೆಯೇ, 'ಜೀವಂಧರ ಚರಿತೆ' ಹಾಗೂ 'ನಾಗಕುಮಾರ ಚರಿತೆ'ಗಳೂ ತಮಿಳಿಗೆ ಭಾಷಾಂತರವಾಗಿವೆ. ಶಿಲಪ್ಪದಿಕಾರಂನಲ್ಲಿರುವ ಒಂದು ಸಣ್ಣಕತೆಯನ್ನು ಆಧರಿಸಿ ಗುಬ್ಬಿಯ ಮಲ್ಲಣಾರ್ಯ 'ಭಾವಚಿಂತಾರತ್ನ'ವನ್ನು ರಚಿಸಿದ್ದಾನೆ. ಆ ಕತೆಯನ್ನೇ ಷಡಕ್ಷರ 'ರಾಜಶೇಖರ ವಿಳಾಸ'ದಲ್ಲಿ ವಿಸ್ತರಿಸುತ್ತಾನೆ.

ಜೈನಮುನಿಗಳಾದ ಕುಂದಕುಂದಾಚಾರ್ಯ, ಸಮಂತಭದ್ರ, ಪೂಜ್ಯಪದ, ಕವಿ ಪರಮೇಷ್ಠಿ–ಮೊದಲಾದವರು ಎರಡೂ ಕಡೆ ಪೂಜನೀಯರಾಗಿದ್ದಾರೆ.

ಕಡೆಯದಾಗಿ ಕಾವೇರಿ ನದಿಗೆ ಸಂಬಂಧಿಸಿದ ವಿಷಯವನ್ನು ಹೇಳಲೇಬೇಕು. ಏಕೆಂದರೆ, ಈ ನದಿ ಎರಡೂ ನಾಡಿನ ನಡುವೆ ಭಾವನಾತ್ಮಕ ಸಂಬಂಧವನ್ನು ಹೊಂದಿದೆ. ಕನ್ನಡ ಸಾಹಿತ್ಯದಲ್ಲಿ ಬಳಕೆಯಾಗಿರುವಂತೆಯೇ, ತಮಿಳು ಸಾಹಿತ್ಯ ದಲ್ಲೂ ಈ ನದಿಯ ಹೆಸರು ಹಲವೆಡೆ ಪ್ರಸ್ತಾಪವಾಗಿದೆ. ತಮಿಳಿನ ಪ್ರಾಚೀನ ಸಾಹಿತ್ಯವಾದ 'ಶಿಲಪ್ಪದಿಗಾರಂ' ಕಾವ್ಯದ ಮುನ್ನಡೆಗೆ ಕಾವೇರಿ ನದಿಯೇ ಕಾರಣ! ಈ ಕಾವ್ಯದ ನಾಯಕ ಕೋವಲನ್–ಮಾಧವಿಯೊಂದಿಗೆ ಕಾವೇರಿ ತೀರದಲ್ಲಿ ವಿಹರಿಸುತ್ತಾನೆ. ಒಮ್ಮೆ ಆಕೆ, ಯಾಳ (ವೀಣೆಯಂತಹ ವಾದ್ಯ)ನ್ನು ನುಡಿಸುತ್ತಾ, ಕಾವೇರಿಯನ್ನು ತನ್ನ ಪ್ರೇಮಿಯಂತೆ ಕಲ್ಪಿಸಿಕೊಂಡು ಹಾಡುತ್ತಾಳೆ. ಅದನ್ನು ತಪ್ಪಾಗಿ ಅರ್ಥ ಮಾಡಿಕೊಂಡ ಕೋವಲನ್ ಮಾಧವಿಯನ್ನು ತೊರೆದು ಹೋಗುತ್ತಾನೆ!

ಇಂದಿಗೂ ಮಾಸ್ತಿ, ಗೊರೂರು, ಜಿ.ಪಿ. ರಾಜರತ್ನಂ, ಬಿ.ಜಿ.ಎಲ್. ಸ್ವಾಮಿ, ಮೊದಲಾದವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧರಾಗಿರುವಂತೆಯೇ, ತಮಿಳು ನಾಡಿಗೆ ಹೋಗಿ ನೆಲೆಸಿರುವ ಕನ್ನಡಿಗರೂ ತಮಿಳಿನ ಸೇವೆ ಸಲ್ಲಿಸುತ್ತಿದ್ದಾರೆ. ಅವರಲ್ಲಿ 'ಜ್ಞಾನಕೂತ್ತನ್' ಹೆಸರಾಂತರು. ಡಾ||ಸಿ. ರಾಮಸ್ವಾಮಿ, ಡಾ. ಪಾ.ಶ. ಶ್ರೀನಿವಾಸ್, ಡಾ|| ಪಿ.ವಿ. ಕುಲಕರ್ಣಿ, ಡಾ|| ಹರಿಕೃಷ್ಣ ಭರಣ್ಯ ಮೊದಲಾದ ವಿದ್ವಾಂಸರೂ ಉಂಟು.

ಒಟ್ಟಿನಲ್ಲಿ, ಕನ್ನಡ ಮತ್ತು ತಮಿಳು ಭಾಷೆಗಳು ಒಂದೇ ಕುಟುಂಬದಿಂದ ಬಂದವಾಗಿದ್ದು, ಇವೆರಡೂ ಭಾಷೆಗಳ ನಡುವೆ ಸಂಸ್ಕೃತಿ, ಸಾಹಿತ್ಯಗಳಲ್ಲಿ 'ಏರಳ ಮಾನ' ಹೋಲಿಕೆಗಳಿವೆ. ಅಲ್ಲದೆ, ಎರಡೂ ನೆರೆಯ ಪ್ರಾಂತ್ಯಗಳಾದ್ದರಿಂದ ಭೌಗೋಳಿಕ ಸಂಪರ್ಕದ ಜೊತೆಗೆ, ರಾಜಕೀಯ ಸಂಪರ್ಕದ ಕಾರಣದಿಂದಲೂ ಇವೆರಡೂ ಸಂಸ್ಕೃತಿಗಳ ನಡುವೆ ನಿಕಟತೆಯಿದೆ. ಆದರೆ, ತೆಲುಗಿಗೂ–ಕನ್ನಡಕ್ಕೂ ಭಾಷಿಕವಾಗಿ ಇಷ್ಟೊಂದು ಹೋಲಿಕೆಯಿಲ್ಲ. ಅಷ್ಟಕ್ಕೂ ವಿಜಯನಗರದ ಅರಸರ ಕಾಲದವರೆಗೂ ಕನ್ನಡಕ್ಕೂ –ತೆಲುಗಿಗೂ ಒಂದೇ ಲಿಪಿಯಿತ್ತು. ಈಗಲೂ ಕೂಡ ಕನ್ನಡ–ತೆಲುಗು ಲಿಪಿಗಳಲ್ಲಿ ಅಂತಹ ಹೇಳಿಕೊಳ್ಳುವಂತಹ ವ್ಯತ್ಯಾಸವೇನಿಲ್ಲ.

* ಈ ಲೇಖನ ರಚಿಸುವಾಗ ಹಲವಾರು ಮಾಹಿತಿಗಳನ್ನು ನೀಡಿದ ಡಾ॥ ಎಸ್. ಕಾರ್ಲೋಸ್ ಹಾಗೂ ಡಾ॥ ಲಿಂಡಾ ಕ್ರಿಸ್ಟಿಯವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಈ ಸಂಚಿಕೆಯ ಲೇಖಕರು

೧. ಪ್ರೊ. ನಾಗಭೂಷಣ ಸ್ವಾಮಿ — ೧೧೫, 'ಅಭ್ಯುದಯ'
೧೩ನೇ ಕ್ರಾಸ್, ವಿಲ್ಸನ್ ಗಾರ್ಡನ್
ಬೆಂಗಳೂರು

೨. ಡಾ॥ ವಿ. ನಾಗೇಶ್ — ನೃತ್ಯ, ನಾಟಕ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ,
ಜ್ಞಾನಭಾರತಿ
ಬೆಂಗಳೂರು ೫೬೦ ೦೫೬

೩. ಡಾ॥ ವಿಜಯಕುಮಾರ ಮಹಾನುಭಾವಿಗಳು — ಪ್ರಭು ಆಶ್ರಮ
ಜೋಗ್ ಫಾಲ್ಸ್
ಶಿವಮೊಗ್ಗ

೪. ಡಾ॥ ಜಿ. ಎನ್. ಉಪಾಧ್ಯ — ಉಪನ್ಯಾಸಕರು
ಕನ್ನಡ ವಿಭಾಗ
ಮುಂಬೈ ವಿಶ್ವವಿದ್ಯಾಲಯ
ವಿದ್ಯಾನಗರಿ, ಸಾಂಟಾಕ್ರರುಝ್
ಮುಂಬೈ ೪೦೦ ೦೯೮

೫. ಶ್ರೀ ನಾರಾಯಣ ಮೂರ್ತಿ ಕೆ. — ಮುಂಬೈ

೬. ಡಾ॥ಟಿ.ಜಿ. ಪ್ರಭಾಶಂಕರ ಪ್ರೇಮಿ — ಪ್ರಾಧ್ಯಾಪಕರು
'ಪ್ರಭುಪ್ರಿಯ', ೩೯೧
೩ನೇ ಬ್ಲಾಕ್, ೩ನೇ ಹಂತ
ಬಸವೇಶ್ವರನಗರ
ಬೆಂಗಳೂರು ೫೬೦ ೦೭೯

೭.	ಡಾ॥ ಜಿ. ಎನ್. ಉಪಾಧ್ಯ	ಉಪನ್ಯಾಸಕರು ಕನ್ನಡ ವಿಭಾಗ ಮುಂಬೈ ವಿಶ್ವವಿದ್ಯಾಲಯ ವಿದ್ಯಾನಗರಿ, ಸಾಂಟಾಕ್ರಝ್ ಮುಂಬೈ ೪೦೦ ೦೯೮
೮.	ಡಾ॥ಚಂದ್ರಮೌಳಿ ಎಸ್.ನಾಯ್ಕರ	ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು ಸಂಸ್ಕೃತ, ಪ್ರಾಕೃತ ಹಾಗೂ ಯೋಗ ಅಧ್ಯಯನ ವಿಭಾಗ ಕರ್ನಾಟಕ ಕಲಾ ಮಹಾವಿದ್ಯಾಲಯ ಧಾರವಾಡ
೯.	ಡಾ॥ ಸುಧೀರ್ ಕಾಕರ್	ಖ್ಯಾತ ಮನೋವಿಜ್ಞಾನಿಗಳು ಟ್ರಸ್ಟಿ, ವಿಕ್ರಮ್ ಸಾರಾಭಾಯ್ ಸಂಸ್ಥೆ ನವದೆಹಲಿ
೧೦.	ಶ್ರೀ ಬಿ. ಸಿ. ರಾಜಕುಮಾರ್	ಕನ್ನಡ ಉಪನ್ಯಾಸಕರು ಸುರಾನ ಕಾಲೇಜು ನಿಟ್ಟೂರು ಶ್ರೀನಿವಾಸ ರಾವ್ ರಸ್ತೆ ಬೆಂಗಳೂರು
೧೧.	ಡಾ॥ ಜಿ. ರಾಮಣ್ಣ	ಅಧ್ಯಾಪಕರು ರಾಜ್ಯಶಾಸ್ತ್ರ ವಿಭಾಗ ಜ್ಞಾನಭಾರತಿ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು ೫೬೦ ೦೫೬
೧೨.	ಡಾ॥ ಸಿ.ಆರ್. ಗೋವಿಂದರಾಜು	ಪ್ರಾಧ್ಯಾಪಕರು ಇತಿಹಾಸ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ಹೊಸಪೇಟೆ

೧೩. ಡಾ|| ಎಂ. ಜಿ. ಮಂಜುನಾಥ
ಉಪನ್ಯಾಸಕರು
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು ೫೬೦ ೦೫೬

೧೪. ಡಾ|| ಸಿ. ನಾಗಭೂಷಣ
ಅಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ
ಗು. ವಿ. ಸ್ನಾತಕೋತ್ತರ ಕೇಂದ್ರ
ಯರಗೇರ
ರಾಯಚೂರು ೫೮೪ ೧೩೩

೧೫. ಪ್ರೊ. ಹಿ. ಶಿ. ರಾಮಚಂದ್ರೇಗೌಡ
ಅಧ್ಯಕ್ಷರು
ಜಾನಪದ ಅಕಾಡೆಮಿ 'ಕನ್ನಡ ಭವನ'
ರವೀಂದ್ರಕಲಾ ಕ್ಷೇತ್ರ ಆವರಣ
ಜೆ. ಸಿ. ರಸ್ತೆ
ಬೆಂಗಳೂರು

೧೬. ಪ್ರೊ. ವಿಲ್ಯಂ ಮಾಡ್ತ
ಭಾಷಾ ವಿಜ್ಞಾನ ಪ್ರಾಧ್ಯಾಪಕ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ ೫೮೦ ೦೦೩

೧೭. ಡಾ|| ವೀರೇಶ ಬಡಿಗೇರ
ಪ್ರವಾಚಕ, ಕನ್ನಡ ವಿಶ್ವವಿದ್ಯಾಲಯ
ಹಂಪಿ
ವಿದ್ಯಾರಣ್ಯ ೫೮೩ ೨೭೧

೧೮. ಡಾ|| ಕೆ. ಕೃಷ್ಣಪ್ಪ
ನಂ. ೧೭, ಶರಾವತಿ ಬ್ಲಾಕ್
ಬಿ೩, ರಾಷ್ಟ್ರೀಯ ಕ್ರೀಡಾ ಗ್ರಾಮ
ಕೋರಮಂಗಲ
ಬೆಂಗಳೂರು ೫೬೦ ೦೪೭

೧೯. ಡಾ|| ಸುಂದರರಾಜ ಅರಸ್ — ಅಧ್ಯಾಪಕರು
ವಿಶ್ವವಿದ್ಯಾಲಯ ದೈಹಿಕ ಶಿಕ್ಷಣ
ಕಾಲೇಜು
ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು ೫೬೦ ೦೫೬

೨೦. ಡಾ|| ಕೆ. ನರ್ಮದಾಂಬ — ಪ್ರಾಜೆಕ್ಟ್ ಅಸೋಸಿಯೇಟ್ಸ್
ಭಾರತೀಯ ಭಾಷಾ ತಾಂತ್ರಿಕ
ಪರಿಹಾರ ಯೋಜನೆ
ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗ
ಭಾರತೀಯ ವಿಜ್ಞಾನ ಸಂಸ್ಥೆ
ಬೆಂಗಳೂರು ೫೬೦ ೦೧೨

೨೧. ಪ್ರೊ. ಆರ್. ಲಕ್ಷ್ಮೀನಾರಾಯಣ — ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಸಂಖ್ಯೆ ೫, ೩ನೇ ಮುಖ್ಯ ರಸ್ತೆ
೭ನೇ ಅಡ್ಡರಸ್ತೆ
ಆರ್. ಪಿ. ಸಿ. ಬಡಾವಣೆ
ವಿಜಯನಗರ
ಬೆಂಗಳೂರು ೫೬೦ ೦೪೦

೨೨. ಡಾ|| ತಮಿಳ್ ಸೆಲ್ವಿ — ನಂ.೮೨, ನವರಂಗ್ ಬಾರ್ ಎದುರು
ಡಾ||ರಾಜ್‌ಕುಮಾರ್ ರಸ್ತೆ,
೨ನೇ ಮುಖ್ಯ ರಸ್ತೆ, ಪ್ರಕಾಶನಗರ,
ಬೆಂಗಳೂರು ೫೬೦ ೦೨೧

* * *

ವಿವರಗಳಿಗೆ ವ್ಯವಹರಿಸಿ :
ನಿರ್ದೇಶಕರು
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು - 560 056

8477 ಬೆಂ. ವಿ. ಮು - 500 - ಆಗಸ್ಟ್ 2003